ಕರ್ನಾಟಕದ ರತ್ನಗಳು

ಡಾ. ಬಿ. ಪಾಂಡುಕುಮಾರ್

ಭಾಗ 1

ಕರ್ನಾಟಕದ ರತ್ನಗಳು

ಲೇಖಕರು :
ಡಾ. ಬಿ. ಪಾಂಡುಕುಮಾರ್

ವೇದಾವತಿ ಪ್ರಕಾಶನ
1539, ಮಂಡ್ಯ ಹೌಸ್, 1ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ,
ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ ಅಂಚೆ, ಬೆಂಗಳೂರು-560 065

Karnatakada Rathnagalu : A Portrait of Great Persons Written by : Dr. B. Pandukumar, Associate Prof. of History, Vivekananda Degree College, Rajajinagar 2nd Stage, Bangalore-560 055. Published by : Vedavathi Prakashana, 1539, Mandya House, 1st Main Road,6th Cross, Judicial Layout, G.K.V.K. Post. Bangalore-560-065 Mob : 98804 10304

ಮುದ್ರಣ : 2014

© ಹಕ್ಕುಗಳು : ಲೇಖಕರದು

ಪುಟಗಳು : x+8+262

ಬೆಲೆ : **₹ 150/-**

ಮುಖಪುಟ ವಿನ್ಯಾಸ : **ಯಶಸ್ ಮತ್ತು ಶ್ರೇಯಸ್**

ಪ್ರತಿಗಳು : 1000

ಮುದ್ರಣ :

ಸತ್ಯಶ್ರೀ ಪ್ರಿಂಟರ್ಸ್ ಪ್ರೈವೇಟ್ ಲಿ.
16/1, 3ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ,
ಕಸ್ತೂರಿಬಾ ನಗರ, ಮೈಸೂರು ರಸ್ತೆ,
ಬೆಂಗಳೂರು-560 026
ದೂರವಾಣಿ : 080-2674 8811
E-mail : satyasriprn@gmail.com

ಅರ್ಪಣೆ

ಜನತಾ ಶಿಕ್ಷಣ ಸಂಸ್ಥೆ (ರಿ.)

ವಿವೇಕಾನಂದ ಪದವಿ ಕಾಲೇಜು

ಡಾ. ರಾಜಕುಮಾರ್ ರಸ್ತೆ, ರಾಜಾಜಿನಗರ 2ನೇ ಹಂತ

ಬೆಂಗಳೂರು–560 055

ಚೆನ್ನುಡಿ

ನಮ್ಮ ರಾಜ್ಯದಲ್ಲಿ ಕಲೆ, ಸಾಹಿತ್ಯ, ನೃತ್ಯ, ನಾಟಕ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಇವೇ ಮುಂತಾದ ಕ್ಷೇತ್ರಗಳಲ್ಲಿ ದುಡಿದಿರುವ ಹಾಗೂ ದುಡಿಯುತ್ತಿರುವ ನೂರಾರು, ಸಾವಿರಾರು ಜನರಿದ್ದಾರೆ. ಇವರೆಲ್ಲರನ್ನೂ ಒಂದೇ ಕೃತಿ ಇಲ್ಲವೆ ಗ್ರಂಥದಲ್ಲಿ ತರುವುದು ಕಷ್ಟದ ಕೆಲಸ. ಕ್ರಿ.ಶ. ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಇಲ್ಲಿಯತನಕ ಸಾಧನೆ ಮಾಡಿದ ಹಾಗೂ ಮಾಡುತ್ತಿರುವ ಮಹಾನ್ ವ್ಯಕ್ತಿಗಳ 'ವ್ಯಕ್ತಿಚಿತ್ರ'ವನ್ನು ಸಂಪುಟಗಳ ರೂಪದಲ್ಲಿ ತರುವ ಉದ್ದೇಶ ನನ್ನದಾಗಿದೆ.

ಎಂಬತ್ತರ ದಶಕದಿಂದೀಚೆಗೆ ವ್ಯಕ್ತಿಚಿತ್ರ ಗಮನಾರ್ಹ ಸಾಹಿತ್ಯ ಪ್ರಕಾರವಾಗಿ ಬೆಳೆಯುತ್ತಿದೆ. ಅಂಕಣ ಬರಹಗಳಲ್ಲಿ, ಅಭಿನಂದನ ಗ್ರಂಥಗಳಲ್ಲಿ, ಸಂಸ್ಮರಣ ಸಂಪುಟಗಳಲ್ಲಿ ವ್ಯಕ್ತಿಚಿತ್ರಗಳು ಪ್ರವೇಶ ಪಡೆಯುತ್ತಿವೆ. ಇವುಗಳು ಸಂಕ್ಷಿಪ್ತ ಜೀವನ ಚರಿತ್ರೆಗಳೇ ಆಗಿರುತ್ತವೆ. ವಿಶಿಷ್ಠ ಸಾಧನೆ ಮಾಡಿದ ವ್ಯಕ್ತಿಯ ಬದುಕಿನ ಒಳನೋಟಗಳನ್ನು ತಿಳಿಯಲು ಇವು ನೆರವಾಗುತ್ತದೆ. ಕೆಲವು ರೋಚಕವಾಗಿರುತ್ತವೆ, ಮತ್ತೆ ಕೆಲವು ಕುತೂಹಲಕಾರಿಯಾಗಿರುತ್ತದೆ. ಒಟ್ಟಾರೆ ಹೇಳಬೇಕೆಂದರೆ ಸಾಧಕನ ಸಾಧನೆಯ ಊರಣವೇ ವ್ಯಕ್ತಿಚಿತ್ರಗಳು.

ಡಿ.ವಿ.ಜಿ.ಯವರು ತಮ್ಮ 'ಜ್ಞಾಪಕ ಚಿತ್ರಶಾಲೆ' ಕೃತಿಯಲ್ಲಿ 'ದೇಶ ಚರಿತ್ರೆಯು ಹೀಗೆ ಸಮಗ್ರ ಜನಜೀವನದ ಪ್ರತಿಬಿಂಬವಾದರೆ ವ್ಯಕ್ತಿ ಚರಿತ್ರೆಯು ಜನ ಜೀವನದ ಮೂಲಾಂಕುರಪ್ರಾಯಗಳಾದ ಮಹಾಪುರುಷರ ಪ್ರತಿಬಿಂಬ. ಅಲ್ಲದೆ ಜೀವನ ಚರಿತ್ರೆಯನ್ನು ದೇಶಚರಿತ್ರೆಯ ಅಂತರಂಗವೆಂದು ಭಾವಿಸುವುದು ಯುಕ್ತವಾಗುತ್ತದೆ' ಎಂದು ಉಲ್ಲೇಖಿಸಿದ್ದಾರೆ.

ವಿದ್ವಾಂಸರುಗಳಾದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಉದಾರ ಚರಿತರು ಉದಾತ್ತಪ್ರಸಂಗಗಳು ಮತ್ತು ಸಾಹಿತ್ಯ ಶಿಲ್ಪಿಗಳು, ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆ, ಡಾ॥ ಪ್ರಭುಶಂಕರರವರ ಜನ-ಮನ ಇವೇ ಮುಂತಾದವು ಜನಪ್ರಿಯ ವ್ಯಕ್ತಿಚಿತ್ರ ಕೃತಿಗಳಾಗಿವೆ.

ನಿಮ್ಮ ಕೈಯಲ್ಲಿರುವ ಕರ್ನಾಟಕದ ರತ್ನಗಳು ಭಾಗ–1 ಕೃತಿಯಲ್ಲಿ ಮೊದಲು ಹದಿನಾಲ್ಕು ಜನ ಮಹನೀಯರ ವ್ಯಕ್ತಿಚಿತ್ರಣವನ್ನು ಕಟ್ಟಿಕೊಟ್ಟಿದ್ದೇನೆ. ಇಂತಹ ನೂರಾರು ವ್ಯಕ್ತಿಗಳು ಜನಮಾನಸದಲ್ಲಿದ್ದಾರೆ. ಉದಾ: ಆಲೂರು ವೆಂಕಟರಾಯ, ಡೆಪ್ಯುಟಿ ಚನ್ನಬಸಪ್ಪ, ಗುಬ್ಬಿವೀರಣ್ಣ, ಪುಟ್ಟರಾಜ ಗವಾಯಿ, ಹೆಚ್.ವಿ. ನಂಜುಂಡಯ್ಯ, ಹೊನ್ನಪ್ಪ ಭಾಗವತರ್, ಹೆಚ್.ಕೆ. ವೀರಣ್ಣಗೌಡ, ಕೆಂಗಲ್ ಹನುಮಂತಯ್ಯ, ಡಾ॥ ಎಂ.ಸಿ. ಮೋದಿ, ಯು.ಆರ್. ರಾವ್, ಎಸ್.ಆರ್. ರಾವ್, ಸಿ.ಎನ್.ಆರ್. ರಾವ್ ಇನ್ನೂ ಮುಂತಾದವರು. ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರ ವ್ಯಕ್ತಿಚಿತ್ರಣವನ್ನು ಮುಂದಿನ ಸಂಪುಟಗಳಲ್ಲಿ ರಚಿಸುವ ಉದ್ದೇಶವಿದೆ.

2007ರಲ್ಲಿ ನಾನು ಬರೆದ 1600 ವರ್ಷಗಳ ಒಕ್ಕಲಿಗರ ಇತಿಹಾಸ ಎಂಬ ಗ್ರಂಥವು ಸಹೃದಯ ಓದುಗರಿಂದಾಗಿ ಇದುವರೆವಿಗೂ ಐದು ಮರು ಮುದ್ರಣಗಳನ್ನು ಕಂಡು ಒಟ್ಟು 12,000 ಪ್ರತಿಗಳು ಮಾರಾಟವಾಗಿ ಭಾರಿ ಯಶಸ್ಸು ಮತ್ತು ಕೀರ್ತಿ ತಂದು ಕೊಟ್ಟಿತು. ಉದಾ:– ಕೃತಿಯನ್ನು ಓದಿದ ಪ್ರೊ. ಶ್ಯಾಮಸುಂದರ್‌ರಾವ್ "ಒಕ್ಕಲಿಗರು ಇರುವ ತನಕ ಈ ಕೃತಿ ಇರುತ್ತದೆ" ಎಂದು ಹೇಳಿದ್ದು ನನ್ನ ಬದುಕು ಸಾರ್ಥಕವಾಯಿತೆಂದು ಭಾವಿಸಿದ್ದೇನೆ. ಇದರ ಹಿಂದೆ ಸಾಕಷ್ಟು ಜನ ನನ್ನ ಸ್ನೇಹಿತರ ಶ್ರಮವಿದೆ. ಅವರನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳುವುದು ನನ್ನ ಆದ್ಯ ಕರ್ತವ್ಯವಾಗಿದೆ. ಹಿರಿಯರಾದ ಪ್ರೊ. ಟಿ. ಶಿವಣ್ಣ, ಬಿ.ಎಲ್. ಲಕ್ಕೇಗೌಡ, ಜಿ. ನಾರಾಯಣ, ಡಾ॥ ಹೇಮಚಂದ್ರಸಾಗರ್, ಗಾಳಿಸ್ವಾಮಿ, ಡಾ॥ ಎಂ.ಕೆ. ಪುರುಷೋತ್ತಮ, ಆಶಾ ಪುರುಷೋತ್ತಮ್, ಹೆಚ್.ವಿ. ಸುಬ್ರಮಣ್ಯ, ಮರಿಮಲ್ಲಯ್ಯ, ರಮೇಶ್, ಟಿ. ಕೃಷ್ಣ, ಚಂದ್ರಹಾಸ ರೈ ಇನ್ನೂ ಮುಂತಾದವರು ಗ್ರಂಥಲೋಕಾರ್ಪಣ ಸಮಿತಿಯನ್ನು ರಚಿಸಿಕೊಂಡರು. ಅಕ್ಟೋಬರ್ 2007ರಂದು ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ಎಸ್.ಎಂ. ಕೃಷ್ಣರವರು ಗ್ರಂಥಲೋಕಾರ್ಪಣೆ ಮಾಡಿದರು. ಓದುಗರು ಪುಸ್ತಕದ ಬೆಲೆಯನ್ನು ಕಂಡು ಹೌಹಾರಿದರು. ನನ್ನ ಸ್ನೇಹಿತರಾದ ರಂಗನರಸಿಂಹಯ್ಯ ನವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ರಾಮಚಂದ್ರಗೌಡರವರಿಗೆ ನನ್ನ ಕೃತಿಯನ್ನು ನೀಡಿದರು. ಕೃತಿಯನ್ನು ಓದಿದ ಗೌಡರು ಸಾರ್ವಜನಿಕ

ಗ್ರಂಥಾಲಯವು ಆರು ಸಾವಿರ ಕೃತಿಗಳನ್ನು ಕೊಂಡುಕೊಳ್ಳುವಂತೆ ಮಾಡಿದರು. ನಂತರ 400 ರೂ. ಬೆಲೆಯ ಕೃತಿಯನ್ನು 250 ರೂ.ಗೆ ಇಳಿಸಿದೆ. ನನ್ನ ಕೃತಿ ಯಶಸ್ವಿಯಾಗಲು ಕಾರಣರಾದ ಈ ಮೇಲ್ಕಂಡ ಎಲ್ಲಾ ಮಹನೀಯರುಗಳೇ ಅಲ್ಲದೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ದುಡಿದ ಎಲ್ಲರಿಗೂ ನನ್ನ ಧನ್ಯವಾದಗಳು.

ವಿಚಾರ ಸಂಕಿರಣ ಒಂದರಲ್ಲಿ ಸಂಪ್ರಬಂಧ ಮಂಡಿಸಲು 2012ರಲ್ಲಿ ದೆಹಲಿಗೆ ತೆರಳಿದ್ದಾಗ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಡಾ॥ ಚಿದಾನಂದ ಮೂರ್ತಿ, ಪಿ.ಸಿ. ಶ್ರೀನಿವಾಸ್, ಸಿ.ಎಂ. ನಾಗರಾಜ್, ಪ್ರೊ. ಪುರುಷೋತ್ತಮ ಬಿಳಿಮಲೆಯವರ ಕೋರಿಕೆಯ ಮೇರೆಗೆ 500ನೇ ವರ್ಷದ ಕೆಂಪೇಗೌಡ ಜನ್ಮದಿನಾಚರಣೆಗಾಗಿ 'ಬೆಂಗಳೂರು ನಿರ್ಮಾಪಕ ಕೆಂಪೇಗೌಡ' ಎಂಬ ಕಿರುಹೊತ್ತಿಗೆಯನ್ನು ರಚಿಸಿಕೊಟ್ಟೆ. ಇದನ್ನು ಆದಿಚುಂಚನಗಿರಿ ಮಠಾಧೀಶರಾದ ನಿರ್ಮಲಾನಂದನಾಥ ಸ್ವಾಮಿಗಳು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಬಿಡುಗಡೆ ಮಾಡಿದರು. ಅಂತಹ ಅವಕಾಶ ನೀಡಿದ ನನ್ನ ಎಲ್ಲಾ ಸ್ನೇಹಿತರಿಗೂ, ಹಿರಿಯರಿಗೂ ವಂದನೆಗಳು.

ಸ್ನೇಹಿತರಾದ ಟಿ.ಎನ್. ರಾಧಾಕೃಷ್ಣರವರು 'ಒಕ್ಕಲಿಗರ ಸಂಘ'ದ ಬಗ್ಗೆ ಕಿರುಹೊತ್ತಿಗೆ ರಚಿಸಿಕೊಡುವಂತೆ ಕೇಳಿಕೊಂಡರು. ಈಗಾಗಲೇ ಯು.ಜಿ.ಸಿ. ಪ್ರಾಜೆಕ್ಟ್‌ಗಾಗಿ ರಚಿಸಿದ್ದ ಪ್ರೌಢಪ್ರಬಂಧವನ್ನು ಅಲ್ಪಸ್ವಲ್ಪ ಬದಲಾವಣೆ ಮಾಡಿ ಕಿರುಹೊತ್ತಿಗೆ ಸಿದ್ಧಪಡಿಸಿದೆ. 10,000 ಪ್ರತಿಗಳನ್ನು ಅಚ್ಚು ಹಾಕಿಸಿ ಹಂಚಿದರು. ರಾಧಾಕೃಷ್ಣರವರಿಗೆ ನನ್ನ ವಂದನೆಗಳು.

ದಿನಾಂಕ 22-12-2014 ರಂದು ನನ್ನ 60ನೇ ವರ್ಷದ ಹುಟ್ಟು ಹಬ್ಬದ ಸವಿ ನೆನಪಿಗಾಗಿ ಪುಸ್ತಕ ಬಿಡುಗಡೆ ಮಾಡವು ಉದ್ದೇಶ ನನದಾಗಿದೆ ಎಂದು ನನ್ನ ಸ್ನೇಹಿತರಾದ ಶ್ರಿ ರಂಗನರಸಿಂಹಯ್ಯನವರಿಗೆ ತಿಳಿಸಿದೆ. ಆ ಕೂಡಲೆ ಅವರು ಶ್ರೀಯುತರುಗಳಾದ ಮರಿಮಲ್ಲಯ್ಯ, ರಮೇಶ, ವಿ. ಶ್ರೀನಿವಾಸ್, ಡಾ. ಎಂ.ಕೆ. ಪುರುಷೋತ್ತಮ ಹಾಗೂ ವಿದ್ಯಾರ್ಥಿ ಮಿತ್ರರುಗಳಾದ ವೆಂಕಟನಾರಾಯಣ, ಡಾ. ವಿ. ನಾಗಪ್ಪ, ಡಾ. ದೇವಿಕ, ಭರತ್, ಕೆ.ಎನ್. ಮಧು, ಕೆ.ಪಿ. ಮನು ಹೀಗೆ ನನ್ನ

ಸ್ನೇಹಿತರು ಹಾಗೂ ವಿದ್ಯಾರ್ಥಿ ಮಿತ್ರರನ್ನು ಕಲೆಹಾಕಿ ಅಭಿನಂದನೆ ಹಾಗೂ ಗ್ರಂಥಲೋಕಾರ್ಪಣ ಸಮಾರಂಭ ಎಂದು ಆಚರಿಸಲು ತೀರ್ಮಾನಿಸಿದರು. ಈ ಎಲ್ಲಾ ಮಹನೀಯರಿಗೂ ನಾನು ಆಭಾರಿಯಾಗಿದ್ದೇನೆ.

ಈ ಕೃತಿ ಬಿಡುಗಡೆಗೆ ನೆರವಾದ ಪಿ.ಎಂ. ಬೋರಯ್ಯನವರಿಗೆ, ನಿಧಾನವಾದರೂ ಅಂದವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್‌ರವರಿಗೆ, ಡಿ.ಟಿ.ಪಿ. ಮಾಡಿಕೊಟ್ಟ ರಂಗಪ್ಪನವರಿಗೆ ಧನ್ಯವಾದಗಳು. ಸದಾ ನನ್ನ ಶ್ರೇಯಸ್ಸನ್ನು ಬಯಸುವ ನನ್ನ ನೆರೆಹೊರೆಯವರಾದ ಶ್ರೀ ರಮೇಶ್ ನಾಯಕ್, ತಿಪ್ಪಣ್ಣ, ವಾಸು, ಮುರಳಿ, ಎನ್. ಕೃಷ್ಣಪ್ಪ ಹೆಚ್.ವಿ. ಸುಬ್ರಮಣ್ಯ, ಎನ್.ಸಿ. ಪುಟ್ಟರಾಮು, ಗೋವಿಂದರಾಜು, ಹೆಚ್.ಎಂ. ವೆಂಕಟೇಶ್, ಕೆಂಪಣ್ಣ, ಎಂ.ಬಿ. ಸೀನು, ನಾಗರಾಜು ರವರಿಗೆ ಧನ್ಯವಾದಗಳು.

ಕರಡು ಪ್ರತಿಯನ್ನು ತಿದ್ದಿಕೊಟ್ಟು ಸಹಾಯ ಮಾಡಿದ ಒಕ್ಕಲಿಗರ ಪತ್ರಿಕೆಯ ಸಹ ಸಂಪಾದಕರಾದ ವೆಂಕಟರಾಮಯ್ಯನವರಿಗೆ ಹಾಗೂ ನನ್ನ ಸಹೋದ್ಯೋಗಿ ಮಿತ್ರರಾದ ಮುನಿಕೆಂಪಣ್ಣನವರಿಗೆ (ವಿಶ್ರಾಂತ ಪ್ರಾಂಶುಪಾಲರು, ಜೆ.ಓ.ಸಿ.) ಮತ್ತು ನಿದಾನವಾದರೂ ಅಂದವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್‌ನ ಮಾಲೀಕರು ಮತ್ತು ಸಿಬ್ಬಂಧಿವರ್ಗಕ್ಕೆ ನನ್ನ ಧನ್ಯವಾದಗಳು ಸಲ್ಲುತ್ತವೆ. ಇವರಿಗೆ ಆಭಾರಿಯಾಗಿದ್ದೇನೆ. ನನ್ನ ಸಹೋದರರಾದ ಬಿ. ನಾಗೇಶ್, ಬಿ. ನಂಜಪ್ಪ ಇವರಿಗೆ ನನ್ನ ಧನ್ಯವಾದಗಳು. ನನ್ನ ಓದಿಗೆ, ಬರವಣಿಗೆಗೆ ಭಂಗ ಬಾರದಂತೆ ಸಹಕರಿಸಿದ ನನ್ನ ಪತ್ನಿ ಎಸ್.ಡಿ. ವೇದಾವತಿ, ಮಕ್ಕಳಾದ ಎಂ.ಪಿ. ಯಶಸ್ ಮತ್ತು ಎಂ.ಪಿ. ಶ್ರೇಯಸ್ ಇವರಿಗೆ ಧನ್ಯವಾದಗಳು.

22–12–2014 **ಡಾ. ಬಿ. ಪಾಂಡುಕುಮಾರ್**

ಚಿ॥ ಎಂ.ಪಿ. ಶ್ರೇಯಸ್, ಶ್ರೀಮತಿ ಎಸ್.ಡಿ. ವೇದಾವತಿ
ಡಾ॥ ಬಿ. ಪಾಂಡುಕುಮಾರ್, ಚಿ॥ ಎಂ.ಪಿ. ಯಶಸ್

1600 ವರ್ಷಗಳ ಒಕ್ಕಲಿಗರ ಇತಿಹಾಸ 'ಗ್ರಂಥ ಬಿಡುಗಡೆ' ಸಮಾರಂಭ
ಮಹಾರಾಷ್ಟ್ರದ ಮಾಜಿ ರಾಜ್ಯಪಾಲರಾದ ಎಸ್.ಎಂ. ಕೃಷ್ಣರವರಿಂದ.

ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಲೇಖಕರಿಗೆ ಅಭಿನಂದನೆ.

ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೃತಿ ಬಿಡುಗಡೆ ದೆಹಲಿ ಕರ್ನಾಟಕ ಸಂಘ ನವದೆಹಲಿಯಲ್ಲಿ ನಿರ್ಮಲಾನಂದ ಸ್ವಾಮೀಜಿಗಳಿಂದ.

ಯು.ಜಿ.ಸಿ. ಪ್ರಾಯೋಜಿತ ಸಂಶೋಧನಾ ಪ್ರೌಢ ಪ್ರಬಂಧ ಬಿಡುಗಡೆ ಸಮಾರಂಭ ಡಾ॥ ರಘುರಾಮ್ ಜನತಾ ಶಿಕ್ಷಣ ಸಂಸ್ಥೆ ಅಧ್ಯಕ್ಷರಿಂದ. ಜೊತೆಯಲ್ಲಿ ಡಾ॥ ಸಿ. ವಿಠಲ್ ಒಕ್ಕಲಿಗರ ಸಂಘದ ಅಧ್ಯಕ್ಷರು ಹಾಗೂ ಡಾ॥ ಮಂಜುಸಿಂಗ್, ಯು.ಜಿ.ಸಿ. ನಿರ್ದೇಶಕರು.

ಪೆಸೆಟ್ಸ್ ಆಫ್ ಅರ್ಬನೈಸೇನ್ ಸಂಶೋಧನ ಪ್ರಬಂಧಗಳ ಕೃತಿ ಬಿಡುಗಡೆ.
ಪ್ರೊ. ತಿಮ್ಮೇಗೌಡ ಕುಲಪತಿಗಳು ಬೆಂಗಳೂರು ವಿಶ್ವವಿದ್ಯಾಲಯ ಅವರಿಂದ.

ಪೆಸೆಟ್ಸ್ ಆಫ್ ಅರ್ಬನೈಸೇನ್ ಸಂಶೋಧನ ಪ್ರಬಂಧಗಳ
ಕೃತಿಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಮರ್ಪಣೆ.

ಪರಿವಿಡಿ

1.	ನಾಲ್ವಡಿ ಕೃಷ್ಣರಾಜ ಒಡೆಯರ್	1
2.	ಸರ್.ಎಂ. ವಿಶ್ವೇಶ್ವರಯ್ಯ	25
3.	ಕುವೆಂಪು	63
4.	ದ.ರಾ. ಬೇಂದ್ರೆ	82
5.	ಮಾಸ್ತಿ ವೆಂಕಟೇಶ ಅಯ್ಯಂಗಾರ್	95
6.	ಡಿ.ವಿ.ಜಿ.	111
7.	ಶಿವರಾಮ ಕಾರಂತ	134
8.	ಎ.ವಿ. ವರದಾಚಾರ್ಯ	150
9.	ಟಿ. ಚೌಡಯ್ಯ	159
10.	ಪಂಡಿತ್ ಭೀಮಸೇನ ಜೋಶಿ	174
11.	ಗಂಗೂಬಾಯಿ ಹಾನಗಲ್	193
12.	ಟಿ. ಸಿದ್ದಲಿಂಗಯ್ಯ	215
13.	ಯಶೋಧರ ದಾಸಪ್ಪ	229
14.	ಬಳ್ಳಾರಿ ಸಿದ್ದಮ್ಮ	251
	ಗ್ರಂಥ ಋಣ	261

ನಾಲ್ವಡಿ ಕೃಷ್ಣರಾಜ ಒಡೆಯರ್

ದೇಶಕಂಡ ಶ್ರೇಷ್ಠ ಆಳರಸರು ನಾಲ್ವಡಿ ಕೃಷ್ಣರಾಜ ಒಡೆಯರು. ಮಹಾತ್ಮ ಗಾಂಧೀಜಿಯವರ ಪ್ರಕಾರ 'ರಾಜಋಷಿ', ರಾಜ್ಯದ ಜನಗಳ ಪಾಲಿಗೆ 'ದೈವಾಂಶ ಸಂಭೂತ', ಬೆಂಗಳೂರಿಗರು ಹೇಳಿದ್ದು 'ಮನೆಮನೆಗೆ ದೀಪ ಕೃಷ್ಣರಾಜ ಭೂಪ', ಇತಿಹಾಸಕಾರರ ಪ್ರಕಾರ ಮಾದರಿ ರಾಜ್ಯ ನಿರ್ಮಾಪಕ ಇತ್ಯಾದಿ. 1902ರಿಂದ 1940ರ ತನಕ ಅಂದರೆ 38 ವರ್ಷಗಳ ಕಾಲ ರಾಜ್ಯವನ್ನು ಇಡೀ ಭಾರತದಲ್ಲೇ ಮಾದರಿ ರಾಜ್ಯವನ್ನಾಗಿ ಮಾಡಿದ ಕೀರ್ತಿಗೆ ಭಾಜನರಾಗಿದ್ದಾರೆ. ರಾಜ್ಯವನ್ನು ಶಿಕ್ಷಣ, ಕೈಗಾರಿಕರಣ, ಕೃಷಿ, ನೀರಾವರಿ, ಪುರೋಭಿವೃದ್ಧಿ ಮಾಡಿ ಕನ್ನಡಿಗರ ಪಾಲಿಗೆ ಪ್ರಾತಃ ಸ್ಮರಣೀಯರಾಗಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ ಕ್ರಿ.ಶ. ಹದಿನಾಲ್ಕನೆಯ ಶತಮಾನವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದುದೇ ಸರಿ. ಕಾರಣವೇನೆಂದರೆ ಕರ್ನಾಟಕದ ಉತ್ತರ ಭಾಗದಲ್ಲಿ 1336ರಲ್ಲಿ ಹಕ್ಕಬುಕ್ಕರಿಂದ ವಿಜಯನಗರ ಸ್ಥಾಪನೆಯಾದರೆ ದಕ್ಷಿಣ ಭಾಗದಲ್ಲಿ ಅಂದರೆ ಇಂದಿನ ಮೈಸೂರು ಭಾಗದಲ್ಲಿ ಯದುರಾಯ ಹಾಗೂ ಕೃಷ್ಣರಾಯ ಎಂಬ ಇಬ್ಬರು ಸಹೋದರರಿಂದ ಮೈಸೂರು ಸಂಸ್ಥಾನ ಸ್ಥಾಪನೆಯಾಯಿತು. ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಮೈಸೂರು ಇಂದಿನಂತಿರಲಿಲ್ಲ. ಕೆಲವೇ ಕೆಲವು ಹಳ್ಳಿಗಳಿಂದ ಕೂಡಿದ್ದಿತು. ಅಲ್ಲಿ ಚಾಮರಾಜನೆಂಬ ಪಾಳೆಯಗಾರನು ಪಾಳೆಯ ಪಟ್ಟವನ್ನು ಕಟ್ಟಿಕೊಂಡು ಆಳ್ವಿಕೆ ಮಾಡುತ್ತಿದ್ದನು. ಕಾಲಾಂತರದಲ್ಲಿ ಆತ ಅಸುನೀಗಲಾಗಿ ಹತ್ತಿರದ ಹಳ್ಳಿಯಲ್ಲಿದ್ದ ಕಾರುಗಳ್ಳಿಯ ಮಾರನಾಯಕನು ಗತಿಸಿದ ಚಾಮರಾಜನ ಮಗಳಾದ

ದೇವಾಜಮ್ಮಣ್ಣಿಯನ್ನು ತನಗೆ ಕೊಟ್ಟು ವಿವಾಹ ಮಾಡಬೇಕೆಂದು ಚಾಮರಾಜನ ವಿಧವೆ ಪತ್ನಿಗೆ ಕಿರುಕುಳ ಕೊಡುತ್ತಿದ್ದನು. ಆಗ ತಾನೆ ಅಲ್ಲಿಗೆ ಬಂದು ನೆಲೆಸಿದ್ದ ಯದುರಾಯ ಮತ್ತು ಕೃಷ್ಣರಾಯರಿಗೆ ಈ ವಿಷಯ ತಿಳಿದು ಕಾರುಗಳ್ಳಿಯ ಮಾರನಾಯಕನನ್ನು ಅಲ್ಲಿಂದ ಓಡಿಸಿ ಚಾಮರಾಜನ ಕುಟುಂಬವನ್ನು ರಕ್ಷಿಸಲಾಗಿ ಅವರು 'ಒಡೆಯರು' ಎಂಬ ಬಿರುದು ನೀಡಿದರು. ಮುಂದೆ ಇವರ ವಂಶವು ಯದುವಂಶವೆಂತಲೂ ಇತಿಹಾಸದಲ್ಲಿ ಮೈಸೂರು ಒಡೆಯರೆಂತಲೂ ಶಾಶ್ವತವಾಗಿ ಉಳಿದಿದ್ದಾರೆ.

1399ರಲ್ಲಿ ಕೇವಲ 23 ಹಳ್ಳಿಗಳಿಂದ ಕೂಡಿದ ಪಾಳೆಯ ಪಟ್ಟಾಗಿದ್ದ ಮೈಸೂರು 1578ರಲ್ಲಿ 33 ಹಳ್ಳಿಗಳಿದ್ದ ಒಂದು ದೊಡ್ಡ ಪಾಳೆಯ ಪಟ್ಟಾಗಿ ಬೆಳೆಯಿತು. ಅವರಲ್ಲಿದ್ದ ಸೈನ್ಯದ ಸಂಖ್ಯೆ ಕೇವಲ 300. ವಾರ್ಷಿಕ ವರಮಾನ 25,000 ವರಹಗಳು. ಕ್ರಿ.ಶ. 1616ರ ತನಕ ವಿಜಯನಗರದವರಿಗೂ ನಂತರ ದೆಹಲಿ ಬಾದಷಹರಿಗೆ ವಿಧೇಯರಾಗಿದ್ದು ಕಪ್ಪಕಾಣಿಕೆ ಕೊಡುತ್ತಿದ್ದರು. (ಮೈಸೂರು ನೂರಿನ್ನೂರು ವರ್ಷಗಳ ಹಿಂದೆ –ವಿ.ವಿ. ನಂಜರಾಜ ಅರಸು ಪುಟ–5)

1399ರಿಂದ 1947ರವರೆಗೆ (ಸ್ವಾತಂತ್ರ್ಯ ಪ್ರಾಪ್ತಿಯವರೆಗೆ) ಸರಿ ಸುಮಾರು ಇಪ್ಪತ್ತೈದು ಜನ ದೊರೆಗಳು ರಾಜ್ಯವಾಳಿದರು. ಅವರು ಈ ಕೆಳಕಂಡಂತಿದ್ದಾರೆ:

1. ಯದುರಾಯ – (1399–1423)
2. 1ನೇ ಹಿರಿಯ ಬೆಟ್ಟದ ಚಾಮರಾಜ – (1423–1459)
3. ತಿಮ್ಮರಾಜ – (1459–1478)
4. 2ನೇ ಹಿರಿಯ ಚಾಮರಾಜ – (1478–1513)
5. 3ನೇ ಹಿರಿಯ ಬೆಟ್ಟದ ಚಾಮರಾಜ – (1513–1553)
6. ಎರಡನೇ ತಿಮ್ಮರಾಜ – (1553–1572)
7. ನಾಲ್ಕನೇ ಚೋಳಚಾಮರಾಜ – (1572–1576)
8. ಐದನೇ ಬೆಟ್ಟದ ಚಾಮರಾಜ – (1576–1578)
9. ಒಂದನೇ ರಾಜ ಒಡೆಯರು – (1578–1617)
10. ಆರನೆಯ ಚಾಮರಾಜ – (1617–1637)
11. ಇಮ್ಮಡಿ ರಾಜ ಒಡೆಯರು – (1637–1638)
12. ರಣಧೀರ ಕಂಠೀರವ – (1638–1659)
13. ದೊಡ್ಡ ದೇವರಾಜ – (1659–1672)
14. ಚಿಕ್ಕ ದೇವರಾಯ – (1672–1704)

15. ಕಂಠೀರವ ಒಡೆಯರು – (1704–1714)
16. ದೊಡ್ಡ ಕೃಷ್ಣರಾಜ (1714–1732)
17. ಏಳನೆಯ ಚಾಮರಾಜ – (1732–1734)
18. ಇಮ್ಮಡಿ ಕೃಷ್ಣರಾಜ – (1734–1766)
19. ನಂಜರಾಜ – (1766–1770)
20. ಎಂಟನೆ ಬೆಟ್ಟದ ಚಾಮರಾಜ (1770–1776)
21. ಖಾಸಾ ಒಂಬತ್ತನೇ ಚಾಮರಾಜ – (1776–1796)
22. ಮುಮ್ಮಡಿ ಕೃಷ್ಣರಾಜ – (1799–1868)
23. ಹತ್ತನೇ ಚಾಮರಾಜ – (1868–1881–1894)
24. ನಾಲ್ವಡಿ ಕೃಷ್ಣರಾಜ – (1894–1902–1940)
25. ಜಯಚಾಮರಾಜೇಂದ್ರ – (1940–1947)

ಹತ್ತನೇ ಚಾಮರಾಜ ಒಡೆಯರು ಮತ್ತು ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಪುತ್ರರೇ ನಾಲ್ವಡಿ ಕೃಷ್ಣರಾಜ ಒಡೆಯರು. ನಾಲ್ವಡಿ ಕೃಷ್ಣರಾಜರಿಗೆ ಜಯಲಕ್ಷ್ಮಮ್ಮಣ್ಣಿ ಮತ್ತು ಕೃಷ್ಣಾಜಮ್ಮಣ್ಣಿ ಎಂಬ ಇಬ್ಬರು ಅಕ್ಕಂದಿರು, ಚೆಲುವಾಜಮ್ಮಣ್ಣಿ ಎಂಬ ತಂಗಿಯೂ ಕಂಠೀರವ ನರಸಿಂಹರಾಜ ಒಡೆಯರೆಂಬ ಕಿರಿಯ ಸಹೋದರ ಇದ್ದರು. ರಾಜಋಷಿ ನಾಲ್ವಡಿ ಕೃಷ್ಣರಾಜರು 4 ಜೂನ್ 1884ರ ತಾರಣನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಏಕಾದಶಿಯಂದು ಮೈಸೂರಿನಲ್ಲಿ ಜನಿಸಿದರು.

ಕೃಷ್ಣರಾಜರು ಬಾಲ್ಯದಲ್ಲಿ ಕೃಷದೇಹಿಗಳಾಗಿದ್ದರೂ ಕುಶಾಗ್ರಮತಿಗಳಾಗಿದ್ದರು. ರಾಜಮಾತೆ ಕೆಂಪನಂಜಮ್ಮಣ್ಣಿಯವರು ತಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣದ ವ್ಯವಸ್ಥೆ ಮಾಡಿದರು. 'ರಾಯಲ್‌ಸ್ಕೂಲ್' ಎಂಬ ರಾಜಮನೆತನಕ್ಕೆ ಮೀಸಲಾದ ಶಾಲೆಯಲ್ಲಿ ಅಕ್ಷರಾಭ್ಯಾಸ ಪ್ರಾರಂಭವಾಯಿತು. ಶ್ರೀಯುತರುಗಳಾದ ಮಿರ್ಜಾ ಇಸ್ಮಾಯಿಲ್, ಟಿ. ಗುಂಡಪ್ಪ, ಲಕ್ಷ್ಮೀಕಾಂತರಾಜ ಅರಸು ಇವರೇ ಮುಂತಾದವರು ಕೃಷ್ಣರಾಜರ ಸಹಪಾಠಿಗಳಾಗಿದ್ದರು. ಅರಮನೆ ವಿದ್ವಾಂಸರುಗಳಾದ ಪೂರ್ಣ ರಾಘವೇಂದ್ರರಾಯರು, ಸೋಸಲೆ ಅಯ್ಯಾ ಶಾಸ್ತ್ರಿಗಳು, ಆಂಗ್ಲ ವಿದ್ವಾಂಸರಾದ ಜೆ.ಜೆ. ವಿಟ್ಲೆ ಇವರೇ ಮುಂತಾದವರು ಕೃಷ್ಣರಾಜರಿಗೆ ಕನ್ನಡ, ಸಂಸ್ಕೃತ, ಇಂಗ್ಲೀಷ್, ಹಿಂದಿ ಭಾಷೆಗಳೇ ಅಲ್ಲದೆ ಅರ್ಥಶಾಸ್ತ್ರ, ಗಣಿತಶಾಸ್ತ್ರ, ವಿಜ್ಞಾನ ವಿಷಯಗಳನ್ನು ಕಲಿಸುತ್ತಿದ್ದರು. ಕೃಷ್ಣರಾಜರಿಗೆ ಹತ್ತುವರ್ಷ ತುಂಬುವಷ್ಟರಲ್ಲಿ ಅವರ ತಂದೆಯವರಾದ ಶ್ರೀ ಚಾಮರಾಜೇಂದ್ರ ಒಡೆಯರು 1894 ಡಿಸೆಂಬರ್ 28ನೇ ತಾರೀಖು ಕಲ್ಕತ್ತಾ ಪ್ರವಾಸದಲ್ಲಿದ್ದಾಗ ಅಸುನೀಗಿದರು.

ಕೃಷ್ಣರಾಜರಿಗೆ ಪಟ್ಟಾಭಿಷೇಕ

ಶ್ರೀ ಚಾಮರಾಜ ಒಡೆಯರು ವಿಧಿವಶರಾಗಲು ಇಡೀ ಮೈಸೂರು ಶೋಕಸಾಗರದಲ್ಲಿ ಮುಳುಗಿತು. ಯಥಾ ವಿಧಿಯನ್ವಯ 1895 ಫೆಬ್ರವರಿ 1ನೇ ತಾರೀಖು ಜ್ಯೇಷ್ಠಪುತ್ರರಾದ ಕೃಷ್ಣರಾಜ ಒಡೆಯರಿಗೆ ಅಂದು ಕರ್ನಲ್ ರಾಬರ್ಟ್‌ಸನ್‌ರವರು ರೆಸಿಡೆಂಟರಾದರು. ಶ್ರೀಕಂಠೀರವರು ಯುವರಾಜರಾಗಿ ಅಣ್ಣನಿಗೆ ಸಾತ್ ನೀಡಿದರು. 1896ರಲ್ಲಿ ಕಂಪನಿ ಸರ್ಕಾರದವರು ಸ್ಟೂವರ್ಟ್ ಫ್ರೇಸರ್‌ರವರನ್ನು ಉನ್ನತ ಶಿಕ್ಷಣ ನೀಡಲು ನೇಮಿಸಿದರು. ತಮಗೆ ವಿದ್ಯಾದಾನ ಮಾಡಿದ ಹಾಗೂ ತಮ್ಮನ್ನು ಆಡಳಿತ ವಿಚಕ್ಷಣ ಮತಿಯನ್ನಾಗಿ ಮಾಡಿದ ಫ್ರೆಸರ್‌ರವರ ಸವಿನೆನಪಿಗಾಗಿ ಬೆಂಗಳೂರಿನ ದಂಡುಪ್ರದೇಶದಲ್ಲಿ 'ಫ್ರೇಸರ್‌ಟೌನ್' ಎಂಬ ಬಡಾವಣೆಯನ್ನು ನಿರ್ಮಿಸಿದರು. ಕೃಷ್ಣರಾಜರು ಇನ್ನೂ ಬಾಲಕರಾಗಿದ್ದ ಕಾರಣ 1895ರಿಂದ 1902ರ ತನಕ ಮೈಸೂರು ಸಂಸ್ಥಾನದ ಆಡಳಿತವನ್ನು ರಾಜಮಾತೆಯವರಾದ 'ಶ್ರೀಮತಿ ಕೆಂಪನಂಜಮ್ಮಣ್ಣಿ'ಯವರು ರಾಜಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಕೃಷ್ಣರಾಜರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಅಂದರೆ ಜೂನ್ 6, 1900ರಲ್ಲಿ ಗುಜರಾತಿನ ಕಾಥೇವಾಡದ ದೊರೆ ರಾಣಾವಿನಯಸಿಂಹರ ದ್ವಿತೀಯ ಪುತ್ರಿಯಾದ ಪ್ರತಾಪ ಕುಮಾರಿ ದೇವಿಯವ ರೊಂದಿಗೆ ಜಗನ್ಮೋಹನ ಅರಮನೆಯಲ್ಲಿ ವಿವಾಹವು ನೆರವೇರಿತು. ಮುಂದೆ ಪ್ರತಾಪಕುಮಾರಿಯವರು ಶ್ರೀಲಕ್ಷ್ಮೀವಿಲಾಸ ಸನ್ನಿದಾನ ಎಂಬ ಹೆಸರಿನಲ್ಲಿ ರಾಜಕುಮಾರಿಯಾದರು.

ಸಿಂಹಾಸನಾರೋಹಣ

ನಾಲ್ವಡಿ ಕೃಷ್ಣರಾಜರು ಹದಿನೆಂಟು ವರ್ಷ ವಯಸ್ಸಿಗೆ ಬರುತ್ತಲೆ ಅವರಿಗೆ ಅಧಿಕಾರ ಹಸ್ತಾಂತರ ಮಾಡಿ ಸಿಂಹಾಸನದಲ್ಲಿ ಕೂರಿಸಲು ರಾಜಮಾತೆಯವರು ಎಲ್ಲಾ ವ್ಯವಸ್ಥೆಯನ್ನು ಮಾಡಿದರು. ಅಷ್ಟರಲ್ಲಾಗಲೇ ಕೃಷ್ಣರಾಜರು ಸಕಲ ವಿದ್ಯಾಪಾರಾಂಗತರಾಗಿದ್ದರು. ತತ್ವಜ್ಞಾನಿಯಾದ ಅರಸನು ಜಗತ್ತನ್ನು ಉಳಿಸಬಲ್ಲನು. ಆದುದರಿಂದ ಆಳುವ ಅರಸನು ತತ್ವಜ್ಞಾನಿಯು, ವಿವೇಕಿಯು, ಮೇದಾವಿಯು, ತಾಳ್ಮೆಯುಳ್ಳವನು, ದೂರದರ್ಶಿಯೂ ಆಗಿರಬೇಕೆಂದು ಗ್ರೀಸ್‌ನ ತತ್ವಜ್ಞಾನಿ ಪ್ಲೇಟೋ ಹೇಳಿದ್ದಾನೆ. ಅಂತಹ ರಾಜಕುಮಾರನೇ ಕೃಷ್ಣರಾಜ ಒಡೆಯರು ಎಂದರೆ ತಪ್ಪಾಗಲಾರದು. ಕೃಷ್ಣರಾಜರು 1902 ಆಗಸ್ಟ್ 4ರಂದು ಹೆಸರಾಂತ ಮೈಸೂರು ಸಂಸ್ಥಾನದ ಸಿಂಹಾಸನಾರೋಹಣ ಮಾಡಿದರು. ಪಟ್ಟಾಭಿಷೇಕ ಮಹೋತ್ಸವವನ್ನು ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಲಾಗಿತ್ತು. ಈ ಐತಿಹಾಸಿಕ ಘಟನೆಗೆ

ಸಾಕ್ಷಿಯಾಗಿ ಭಾರತದ ವೈಸರಾಯರಾಗಿದ್ದ 'ಲಾರ್ಡ್ ಕರ್ಜನ್'ರವರು ಆಗಮಿಸಿದ್ದರು. ಲಾರ್ಡ್ ಕರ್ಜನ್‌ರು ಬಂದದ್ದು ಸಾಮಾನ್ಯವಾದ ವಿಷಯವಲ್ಲ. ಕಾರಣವೇನೆಂದರೆ ಅಂದು ಭಾರತದಲ್ಲಿ 560ಕ್ಕೂ ಹೆಚ್ಚು ಸಂಸ್ಥಾನಗಳಿದ್ದವು. ಅವುಗಳಲ್ಲಿ ಬಹುತೇಕ ಸಂಸ್ಥಾನಗಳು ಕಂಪನಿಯ 'ಆಣತಿಯಂತೆ' ನಡೆದುಕೊಳ್ಳುತ್ತಿದ್ದವು. ಹೀಗಾಗಿ ವೈಸ್ರಾಯ್‌ರವರು ಮೈಸೂರಿಗೆ ಬರಬೇಕಾದರೆ ಮೈಸೂರು ಒಡೆಯರು ಕಂಪನಿ ಸರ್ಕಾರದ ವಿಶ್ವಾಸವನ್ನು ಉಳಿಸಿಕೊಂಡಿದ್ದರು. ಕೃಷ್ಣರಾಜರಿಗೆ ವಿದ್ಯಾದಾನ ಮಾಡಿದ ಎಸ್.ಎಂ. ಫ್ರೇಜರ್‌ರವರು ಇಂಗ್ಲೆಂಡಿಗೆ ವಾಪಸಾದರು. ಒಡೆಯರ ಆಡಳಿತಕ್ಕೆ ನೆರವಾಗಲೆಂದು ಬ್ರಿಟಿಷರು ಇ. ಮೆಕಾನಕಿ ಎಂಬ ಅಧಿಕಾರಿಯನ್ನು ನೇಮಿಸಿದರು. ಅಲ್ಲಿಯತನಕ ಶ್ರೀ ಕೆ. ಶೇಷಾದ್ರಿ ಅಯ್ಯರ್‌ರವರು ದಿವಾನರಾಗಿ ಸೇವೆ ಸಲ್ಲಿಸಿ 1901ರಲ್ಲಿ ನಿವೃತ್ತರಾದರು. ಇವರ ನಂತರ ಶ್ರೀ ತಂಬುಚೆಟ್ಟಿಯವರು 1901ರಿಂದ 1902ರ ತನಕ ದಿವಾನರಾಗಿದ್ದರು. ಕೃಷ್ಣರಾಜರು ಪಟ್ಟಾಭಿಷೇಕದ ಸಂದರ್ಭದಲ್ಲಿ ಶ್ರೀ ಪಿ.ಎನ್. ಕೃಷ್ಣಮೂರ್ತಿಯವರು ದಿವಾನರಾಗಿದ್ದರು. ಪಟ್ಟಾಭಿಷೇಕ ಮಹೋತ್ಸವ, ಅಧಿಕಾರದ ಹಸ್ತಾಂತರ, ಇವೇ ಮುಂತಾದ ವಿಧಿವಿಧಾನಗಳು ವ್ಯವಸ್ಥಿತವಾಗಿರುವಂತೆ ನೋಡಿಕೊಂಡ ಕೀರ್ತಿ ದಿವಾನ್ ಕೃಷ್ಣಮೂರ್ತಿಯವರಿಗೆ ಸಲ್ಲುತ್ತದೆ.

ಆಡಳಿತ

ನಾಲ್ವಡಿ ಕೃಷ್ಣರಾಜ ಒಡೆಯರು 1902ರಿಂದ 1940ರ ತನಕ ಅಂದರೆ 38 ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಆಗ ಅವರಿಗೆ ಕೇವಲ 18 ವರ್ಷ ವಯಸ್ಸಾಗಿತ್ತು. ಅಷ್ಟರಲ್ಲಾಗಲೆ ಭಾಷೆಗಳ ಮೇಲಿನ ಹಿಡಿತ, ಆಡಳಿತ, ನ್ಯಾಯಾಲಯದ ಕಾರ್ಯಕಲಾಪಗಳು, ಸರ್ಕಾರಿ ಆದೇಶ ಹೊರಡಿಸುವ ವೈಖರಿ, ಷರ ಬರೆಯುವ ಕ್ರಮ, ಆಡಳಿತ ಮತ್ತು ಸಿಬ್ಬಂದಿ ನಿರ್ವಹಣೆ ಒಂದು ಸಂಸ್ಥಾನದ ರಾಜನಿಗಿರುವ ಅಧಿಕಾರ, ಭೂಕಂದಾಯ ಶೇಖರಿಸುವುದು, ಲೆಕ್ಕಪತ್ರ ದಾಖಲೆಗಳನ್ನು ಇಡುವುದು, ಗುಮಾಸ್ತರಿಂದ ಹಿಡಿದು, ಜಿಲ್ಲಾಧಿಕಾರಿ, ದಿವಾನರ ತನಕ ಇರುವ ಅಧಿಕಾರಿಗಳ ಸ್ಥರಗಳು, ಯೂರೋಪಿನಲ್ಲಿರುವ ಆಡಳಿತಕ್ರಮ, ಭಾರತದಲ್ಲಿರುವ ಆಡಳಿತ ಕ್ರಮ ಇವೇ ಮುಂತಾದವುಗಳನ್ನು ಓದಿ ಇಲ್ಲವೆ ಅಧಿಕಾರಿಗಳಿಂದ ತಿಳಿದುಕೊಂಡರು. ಚಾಣಾಕ್ಷಮತಿಯಾಗಿದ್ದ ಕೃಷ್ಣರಾಜರು ಕೆಲವೇ ಕಾಲದಲ್ಲಿ ನುರಿತ ಆಡಳಿತಗಾರರಾದರು. ಕೃಷ್ಣರಾಜರು ಆಳ್ವಿಕೆ ಮಾಡಿದ ಕಾಲದಲ್ಲಿ (1902–1940) ಅವರಿಗೆ ನೆರವಾದ ಏಳು ಜನ ದಿವಾನರುಗಳು ಹಾಗೂ ಅವರ ಅಧಿಕಾರಾವಧಿಯನ್ನು ಈ ಕೆಳಗೆ ನೀಡಲಾಗಿದೆ.

1. ಶ್ರೀ ಪಿ.ಎನ್. ಕೃಷ್ಣಮೂರ್ತಿ – 1902–1906
2. ಶ್ರೀ ವಿ.ಪಿ. ಮಾಧವರಾವ್ – 1906–1909
3. ಶ್ರೀ ಟಿ. ಆನಂದರಾವ್ – 1909–1912
4. ಸರ್. ಎಂ. ವಿಶ್ವೇಶ್ವರಯ್ಯ – 1912–1918
5. ಶ್ರೀ ಕಾಂತರಾಜ ಅರಸ್ – 1918–1922
6. ಸರ್. ಆಲ್ಬಿಯನ್ ಬ್ಯಾನರ್ಜಿ – 1922–1926
7. ಸರ್. ಮಿರ್ಜಾ ಇಸ್ಮಾಯಿಲ್ – 1926–1941

ಕೃಷ್ಣರಾಜರು ಆಡಳಿತಕ್ಕೆ ಬಂದ ಕೆಲವೇ ಕಾಲದಲ್ಲಿ ಇಡೀ ದಕ್ಷಿಣ ಭಾರತದಲ್ಲಿ ಜನಪ್ರಿಯ ಮಹಾರಾಜರೆನಿಸಿಕೊಂಡರು. 1903ರಲ್ಲಿ ಮದ್ರಾಸ್ (ಚೆನ್ನೈ)ನಲ್ಲಿ ನಡೆದ ದಕ್ಷಿಣ ಭಾರತದ ಕೈಗಾರಿಕಾ ಮೇಳವನ್ನು ಉದ್ಘಾಟಿಸಿ ಕೈಗಾರಿಕೀಕರಣದ ಮಹತ್ವವನ್ನು ಕುರಿತು ಭಾಷಣ ಮಾಡಿದ್ದು ಅಮೋಘವಾದುದು. ಗೃಹ ಕೈಗಾರಿಕೆಗಳ ಅವನತಿಗೆ ಕಾರಣಗಳು, ವಿಜ್ಞಾನ ತಂತ್ರಜ್ಞಾನದ ಪಾತ್ರ, ಹೊಸ ತಂತ್ರಜ್ಞಾನದ ಕೈಗಾರಿಕೆಗಳ ಮಹತ್ವ, ರೈತರ ಸ್ಥಿತಿಗಳು, ಕೃಷಿ ಮತ್ತು ನೀರಾವರಿಯ ಪಾತ್ರ ಇವೇ ಮುಂತಾದ ವಿಷಯಗಳ ಬಗ್ಗೆ ಮಾತನಾಡಿದ್ದು ಅಂದು ಮಾತ್ರವಲ್ಲ ಎಂದೆಂದಿಗೂ ಪ್ರಸ್ತುತವಾದುದು.

ಕೃಷ್ಣರಾಜ ಭೂಪ ಮನೆಮನೆಯ ದೀಪ

ಕೃಷ್ಣರಾಜರು ಪಟ್ಟಾಭಿಷೇಕಗೊಂಡ ಕೆಲವೇ ಸಮಯದಲ್ಲಿ ಒಂದು ಸಮಸ್ಯೆ ಎದುರಾಯಿತು. ಅದೇನೆಂದರೆ ಇಂಗ್ಲೆಂಡಿನ ಜಾನ್‌ಟೇಲರ್ ಕಂಪನಿಯವರು ಈಗಾಗಲೇ ಕೋಲಾರದಲ್ಲಿ ಚಿನ್ನದ ಗಣಿಯನ್ನು ನಡೆಸುತ್ತಿದ್ದರು. ಗಣಿಗೆ ವಿದ್ಯುತ್ ಅಗತ್ಯತೆ ಕಂಡುಬಂತು. ಗಣಿಗೆ ಅವಶ್ಯವಾದ ವಿದ್ಯುತನ್ನು ಪೂರೈಸಬೇಕೆಂತಲೂ ಇಲ್ಲವಾದರೆ ಗಣಿಯಿಂದ ಬರುತ್ತಿರುವ ಆದಾಯ ತೆರಿಗೆಯಲ್ಲಿ ಕಡಿತ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿತು. ಮೈಸೂರು ಒಡೆಯರಿಗೆ ಅದು ನುಂಗಲಾರದ ತುಪ್ಪವಾಯಿತು. ಮಂಡ್ಯ ಜಿಲ್ಲೆ ಮಳವಳ್ಳಿಯ ಬಳಿ ಕಾವೇರಿನದಿ ಹರಿಯುತ್ತಿದ್ದು ಅಲ್ಲಿ ಜಲವಿದ್ಯುತ್ ಯೋಜನೆ ಹಮ್ಮಿಕೊಳ್ಳಲಾಯಿತು. ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಿ ಮುಂದೊಂದು ದಿನ ಗಣಿ ಮುಚ್ಚಿದರೆ ಏನು ಮಾಡಬೇಕು? ಎಂದೆಲ್ಲ ಸಮಸ್ಯೆಗಳು ತಲೆ ಎತ್ತಿದವು. ಗಣಿ ಮುಚ್ಚಿದರೆ ಇಲ್ಲವೇ ಅಗತ್ಯಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದನೆಯಾದರೆ ಅದನ್ನು ಬೆಂಗಳೂರು ನಗರ ವಾಸಿಗಳಿಗೆ ವಿದ್ಯುತ್ ಪೂರೈಕೆ ಮಾಡಿ ಹಣವನ್ನು ಗಳಿಸಬಹುದೆಂದು ತೀರ್ಮಾನ ಕೈಗೊಂಡರು. ವಿದ್ಯುತ್ ಸ್ಥಾವರ ಸ್ಥಾಪಿಸಲು ತೀರ್ಮಾನಿಸಿದರು. ಆಗ ಮೈಸೂರು

ರಾಜ್ಯದ ವಾರ್ಷಿಕ ಆದಾಯ ಕೇವಲ ಒಂದೂವರೆ ಕೋಟಿ. ವಿದ್ಯುತ್ ಉತ್ಪಾದಿಸಲು ತಗಲುವ ಖರ್ಚು ಹದಿಮೂರು ಲಕ್ಷ ರೂಪಾಯಿಗಳು.

ಬ್ರಿಟಿಷ್ ಅಧಿಕಾರಿ ಶ್ರೀ ಎ.ಸಿ.ಜೆ. ಲಾಬಿನೀರ್‌ರವರು ಆಗಿನ ಕಾಲದಲ್ಲಿ ಗ್ಲೋಬಲ್ ಟೆಂಡರ್ ಕರೆದರು. ಅಂದಿನ ಕಾಲದಲ್ಲಿ ವಿಶ್ವಮಾನ್ಯ ಗಳಿಸಿದ್ದ ದಿ ಜನರಲ್ ಎಲೆಕ್ಟ್ರಿಕಲ್ ಕಂಪನಿ ಬ್ರಿಟನ್ (ಜಿ.ಇ.)ನಂತಹ ಕೆಲವಾರು ಕಂಪನಿಗಳು ಮುಂದೆ ಬಂದವು. ಟೆಂಡರನ್ನು ಒಪ್ಪಿಕೊಂಡ ಇಪ್ಪತ್ತು ತಿಂಗಳಲ್ಲಿ ಸ್ಥಾವರದ ಯಂತ್ರೋಪಕರಣಗಳ ಸರಬರಾಜು ಮಾಡಿ, ಸ್ಥಾಪಿಸಿ, ವಿದ್ಯುತ್ ಉತ್ಪಾದಿಸಬೇಕೆಂಬ ಕರಾರನ್ನು ಹಾಕಲಾಯ್ತು. ಹೈಡ್ರಾಲಿಕ್ ಉಪಕರಣಗಳ ಗುತ್ತಿಗೆಯನ್ನು ಜೂರಿಚಿನ ಎಶ್ಚರೈವೈಸ್ ಕಂಪನಿಗೆ ವಹಿಸಲಾಯ್ತು. ಎಶ್ಚರು ಕಂಪನಿಯ ಟೆಂಡರಿನ ಮೊಬಲಗು 25785 ಪೌಂಡ್‌ಗಳಾಗಿತ್ತು. ಮೈಸೂರು ಸರ್ಕಾರದ ಪರವಾಗಿ ಸರ್. ಶೇಷಾದ್ರಿ ಅಯ್ಯರ್‌ರವರು ಹಗಲಿರುಳು ಶ್ರಮಿಸಿದರು. 30.06.1902ರಂದು ಭಾರತದ ವಿದ್ಯುತ್ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಅಂದು ಮೈಸೂರು ದರ್ಬಾರಿನಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದ ಜನರಲ್ ಡೊನಾಲ್ಡ್ ರಾಬರ್ಟ್‌ಸನ್‌ರವರು ಶಿವನಸಮುದ್ರಕ್ಕೆ ಭೇಟಿ ನೀಡಿ ಪ್ರಾರಂಭೋತ್ಸವ ನೆರವೇರಿಸಿದರು. ಕಾವೇರಿ ಯೋಜನೆಯ ವಿಸ್ತರಣೆಯ ಎರಡನೆಯ ಹಂತಕ್ಕೆ ಮೈಸೂರು ಮಹಾರಾಜರ ಒಪ್ಪಿಗೆಯ 10 ನವೆಂಬರ್ 1903ರಂದು ದೊರೆಯಿತು. 6000 ಹೆಚ್.ಪಿ. ಒದಗಿಸಲು ನಿಶ್ಚಯಿಸಲಾಯಿತು. ಎರಡನೇ ಹಂತದ ವಿಸ್ತರಣೆಯಿಂದ ಕೆ.ಜಿ.ಎಫ್.ಗೆ ಅಗತ್ಯಕ್ಕಿಂತ ಹೆಚ್ಚು ವಿದ್ಯುತ್ ಪೂರೈಸಲು ಸಾಧ್ಯವಾಯಿತು. ಹೆಚ್ಚುವರಿ ವಿದ್ಯುತ್ತನ್ನು ಬೆಂಗಳೂರು ನಗರಕ್ಕೆ ಒದಗಿಸುವ ಪ್ರಸ್ತಾಪ ಮಾಡಲಾಯಿತು.

ಬೆಂಗಳೂರು ಪಟ್ಟಣಕ್ಕೆ ವಿದ್ಯುತ್

1905 ಆಗಸ್ಟ್ 5ನೇ ತಾರೀಖು ಬೆಂಗಳೂರಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನವಾಗಿದೆ. ಬ್ರಿಟಿಷ್ ಅಧಿಕಾರಿಯಾಗಿದ್ದ ಸರ್ ಜಾನ್ ಹೆವಟ್ಟರು ಹಾಗೂ ಮೈಸೂರು ಒಡೆಯರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಅಂದಿನ ಸಿದ್ದಿಕಟ್ಟೆ ಅಥವಾ ಇಂದಿನ ಸಿಟಿ ಮಾರ್ಕೆಟ್‌ನಲ್ಲಿ ಸಮಾರಂಭ ಏರ್ಪಡಿಸಲಾಯ್ತು. ಅದರೊಂದಿಗೆ ಭಾರತದಲ್ಲಿಯೇ ಜಲವಿದ್ಯುತ್ ಪಡೆದ ಪ್ರಮುಖ ನಗರಗಳಲ್ಲಿ ಬೆಂಗಳೂರು ಮೊದಲನೆಯದಾಯಿತು. ಬೆಂಗಳೂರಿಗೆ ವಿದ್ಯುತ್ ಒದಗಿಸಿದ ಮೊದಲ ವರ್ಷ ಬಂದ ಗಳಿಕೆ ರೂ. 36,476 ಏಳು ಪೈಸೆ. (ಬೆಳಕಾಯಿತು ಕರ್ನಾಟಕ–ಗಜಾನನಶರ್ಮ ಪುಟ: 43–44) ಕಾಲಕ್ರಮೇಣ ಹಂತ ಹಂತವಾಗಿ ರಾಜ್ಯದ ನಾನಾ ನಗರ, ಪಟ್ಟಣಗಳಿಗೆ ವಿದ್ಯುತ್ ಒದಗಿಸಲಾಯ್ತು. ಮೈಸೂರು ರಾಜ್ಯದ ಜನ 'ಮನೆಮನೆಯ ದೀಪ

ಕೃಷ್ಣರಾಜ ಭೂಪ' ಎಂದು ಮೆಚ್ಚುಗೆ ಸೂಚಿಸಿದ್ದು ನಿತ್ಯಸತ್ಯ ಹಾಗೂ ಕೃಷ್ಣರಾಜರ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ.

ಶಿಕ್ಷಣಕ್ಕೆ ಕೊಟ್ಟ ಕೊಡುಗೆ

ಮೈಸೂರು ಒಡೆಯರು ಹಿಂದಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಪುರಸ್ಕಾರವನ್ನು ನೀಡಿದ್ದು ಇಡೀ ದೇಶಕ್ಕೆ ಮಾದರಿಯಾಗಿದೆ. 1831ರಿಂದ 1881ರವರೆಗೆ ಆಳರಸರ ಅಧಿಕಾರವನ್ನು ಬ್ರಿಟಿಷರು ಕಿತ್ತುಕೊಂಡಿದ್ದು ಸರಿಯಷ್ಟೆ. 1881ರಲ್ಲಿ ಒಡೆಯರಿಗೆ ಬ್ರಿಟಿಷರು ಅಧಿಕಾರ ಹಸ್ತಾಂತರಿಸಿದರು. ಹತ್ತನೇ ಚಾಮರಾಜ ಒಡೆಯರು ಅಧಿಕಾರ ಸ್ವೀಕರಿಸಿದರು. ಅದರ ನೆನಪಿನ ಕುರುಹಾಗಿ 1881ರಲ್ಲಿ ಮಹಾರಾಣಿಯವರ ಹೆಸರಿನಲ್ಲಿ ಬಾಲಕಿಯರಿಗಾಗಿ ಪಾಠಶಾಲೆಯನ್ನು ಪ್ರಾರಂಭಿಸಿದರು. ಅದೇ 1901ರಲ್ಲಿ ಮಹಾರಾಣಿಯವರ ಕಾಲೇಜಾಯಿತು. ಈ ಕಾಲೇಜು ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಒಳಪಟ್ಟಿತ್ತು. 1833ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು 'ರಾಜ ಪ್ರೀ ಸ್ಕೂಲ್'ನ ಆಡಳಿತವನ್ನು 1863ರಲ್ಲಿ ಸರ್ಕಾರ ವಹಿಸಿಕೊಂಡಿತು. 1894ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತನೆಯಾಗಿ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರಿತು. ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲ್ 1875ರಲ್ಲಿ ಸೆಂಟ್ರಲ್ ಕಾಲೇಜಾಗಿ ಪರಿವರ್ತನೆಗೊಂಡು ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರಿತು. ಮದ್ರಾಸ್ ವಿಶ್ವವಿದ್ಯಾಲಯದ ಸಂಯೋಜನೆ (Affiliated)ಗೊಂಡ ಕಾಲೇಜುಗಳೆಂದರೆ; 1) ಮಹಾರಾಜ ಕಾಲೇಜ್–ಮೈಸೂರು, 2) ಮಹಾರಾಣಿ ಕಾಲೇಜ್–ಮೈಸೂರು, 3) ಸೆಂಟ್ರಲ್ ಕಾಲೇಜ್–ಬೆಂಗಳೂರು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೇಶವೇ ಮೆಚ್ಚುವಂತೆ ಮಾಡಿದ ಕೆಲಸವೆಂದರೆ 1905–06ನೇ ಸಾಲಿನಲ್ಲಿ 'ಕಡ್ಡಾಯ ಶಿಕ್ಷಣ'ವನ್ನು ಜಾರಿಗೆ ತಂದ ಎರಡನೆಯ ಸಂಸ್ಥಾನವಾಗಿ ಹೊರಹೊಮ್ಮಿತು. ಮೊದಲನೆಯದು ಬರೋಡ ಸಂಸ್ಥಾನ. ಇಷ್ಟೇ ಅಲ್ಲದೆ ಪ್ರಾಥಮಿಕ ಶಿಕ್ಷಣವನ್ನು 'ಉಚಿತ ಶಿಕ್ಷಣ'ವನ್ನಾಗಿ ಪರಿವರ್ತಿಸಿದ್ದು ಕೂಡ ಸಾಧನೆಯೇ ಸರಿ. ರಾಜ್ಯದಾದ್ಯಂತ ಸಾವಿರಾರು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಶಿಕ್ಷಣ ದಾಸೋಹ ಮಾಡಿದ ಕೀರ್ತಿಗೆ ಕೃಷ್ಣರಾಜರು ಬಾಜನರಾಗುತ್ತಾರೆ. ಇಡೀ ದೇಶದಲ್ಲೇ ಶಿಕ್ಷಣಕ್ಕೆ ಆದ್ಯತೆ ನೀಡಿದ ಪ್ರಮುಖ ಸಂಸ್ಥಾನಗಳಲ್ಲಿ ಪ್ರಥಮ ಸ್ಥಾನ ಪಡೆಯಿತು.

ಶಿಕ್ಷಣ ವರದಿ

ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ (ಬ್ರಾಹ್ಮಣರು ಸೇರಿದಂತೆ ಹಿಂದುಳಿದ ವರ್ಗಗಳಿಗೂ ಸೇರಿದಂತೆ) ಉದ್ದೇಶದಿಂದ ಎಂ. ಶಾಮರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಪ್ರಾಥಮಿಕ ಮತ್ತು ಕಡ್ಡಾಯ

ಶಿಕ್ಷಣದ ಬಗ್ಗೆ 1912ರಲ್ಲಿ ಅತ್ಯುತ್ತಮವಾದ ವರದಿಯನ್ನು ನೀಡಿತು. ಈ ಸಮಿತಿಯಲ್ಲಿ ಹೆಚ್.ವಿ. ನಂಜುಂಡಯ್ಯ, ಸರ್.ಎಂ. ವಿಶ್ವೇಶ್ವರಯ್ಯನವರಿದ್ದರು. ಈ ಸಮಿತಿಯು ಈ ಕೆಳಕಂಡ ಶಿಫಾರಸುಗಳನ್ನು ಮಾಡಿತು.

1. ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವುದು.
2. ಕಡ್ಡಾಯ ಶಿಕ್ಷಣವನ್ನು ಜಾರಿ ಮಾಡುವುದು.
3. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪ್ರಾರಂಭಿಸುವುದು.
4. ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದು.
5. ಸ್ಥಳೀಯವಾಗಿ ವಿಶ್ವವಿದ್ಯಾಲಯ ಸ್ಥಾಪಿಸುವುದು.
6. ಶೈಕ್ಷಣಿಕ ಪ್ರಗತಿಗೆ ಖಾಸಗಿ ವ್ಯಕ್ತಿಗಳ, ಸಂಘ ಸಂಸ್ಥೆಗಳಿಂದ ಸಹಕಾರ ಪಡೆಯುವುದು.

ಒಡೆಯರು ತಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಕಾಲೇಜುಗಳನ್ನು ಸ್ಥಾಪಿಸಿ ಹರಿಜನ, ಗಿರಿಜನರಿಗೆ, ಮಹಿಳೆಯರಿಗೆ, ಮಕ್ಕಳಿಗೆ, ವಯಸ್ಕರಿಗೆ ಶಿಕ್ಷಣ ನೀಡುವುದರ ಜೊತೆಗೆ ಶಿಕ್ಷಕರ ತರಪೇತಿ ಶಾಲೆಗಳನ್ನು ಸ್ಥಾಪಿಸುವ ಮೂಲಕ ಉತ್ತಮ ಶಿಕ್ಷಕರನ್ನು ತಯಾರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಟಾಟಾ ಇನ್ಸಿಟ್ಯೂಟ್

1911ರಲ್ಲಿ ಭಾರತದ ಸರ್ವಶ್ರೇಷ್ಠ ಕೈಗಾರಿಕೋದ್ಯಮಿಯಾದ ಜೆ.ಎನ್. ಟಾಟಾರವರು ಬೆಂಗಳೂರಿನಲ್ಲಿ ಉತ್ತಮವಾದ ಸ್ಥಳ ಕೊಡುವುದಾದರೆ ವಿಜ್ಞಾನ ಸಂಶೋಧನಾಲಯವನ್ನು ಪ್ರಾರಂಭಿಸಲು ಒಪ್ಪಿದರು. ಒಡೆಯರು 372 ಎಕರೆ ಪ್ರದೇಶವನ್ನು ನೀಡಿದುದೇ ಅಲ್ಲದೆ ಪ್ರತಿ ವರ್ಷ ಐವತ್ತು ಸಾವಿರ ರೂಪಾಯಿ ಸಹಾಯಧನ ನೀಡಲು ಒಪ್ಪಿದರು. ಮುಂದೆ ಇದೇ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ಅಥವಾ 'ಟಾಟಾ ಇನ್‌ಸ್ಟಿಟ್ಯೂಟ್' ಆಯಿತು. ಇದು ಕೆಲವೇ ವರ್ಷಗಳಲ್ಲಿ ವಿಶ್ವವಿಖ್ಯಾತಿ ಪಡೆಯಿತು. ಇಷ್ಟೇ ಅಲ್ಲದೆ ದತ್ತಿ ಸಂಸ್ಥೆಗಳು, ಖಾಸಗಿ ವ್ಯಕ್ತಿಗಳು, ಸಂಘಸಂಸ್ಥೆಗಳು ಖಾಸಗಿ ಶಾಲಾ ಕಾಲೇಜುಗಳನ್ನು ನಡೆಸಲಾಗದೆ ಮುಚ್ಚುವ ಸ್ಥಿತಿ ಬಂತೆಂದರೆ ಅವುಗಳನ್ನು ಸರ್ಕಾರವೇ ವಹಿಸಿಕೊಳ್ಳುತ್ತಿತ್ತು. ಚನ್ನಪಟ್ಟಣ, ಸಾಗರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರುಗಳಲ್ಲಿ ಕೈಗಾರಿಕಾ ತರಬೇತಿ ಶಾಲೆಗಳ ಸ್ಥಾಪನೆ ಮಾಡಲಾಯಿತು. ಇದರಿಂದಾಗಿ ಕೈಗಾರಿಕಾ ಕುಶಲ ಕರ್ಮಿಗಳಿಗೆ ಉದ್ಯೋಗ ಸಿಗುತ್ತಿತ್ತು.

ಕಾಶಿವಿದ್ಯಾಪೀಠದ ಕುಲಪತಿಗಳಾಗಿ ಕೃಷ್ಣರಾಜರು

1915ರಲ್ಲಿ ಮೇಧಾವಿಯಾದ ಮದನಮೋಹನ ಮಾಳವೀಯರವರು ಕಾಶಿಯಲ್ಲಿ ಕಾಶಿ ವಿದ್ಯಾಪೀಠವನ್ನು ಸ್ಥಾಪನೆ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರನ್ನು ಅದರ ಕುಲಪತಿಗಳಾಗಿ ಪೀಠವನ್ನು ಅಲಂಕರಿಸಬೇಕೆಂದು ಕೇಳಿಕೊಂಡರು. ಅದಕ್ಕೊಪ್ಪಿದ ಕೃಷ್ಣರಾಜರು ಕಾಶಿ ವಿದ್ಯಾಲಯದ ಪ್ರಪ್ರಥಮ ಕುಲಪತಿಗಳೆಂಬ ಕೀರ್ತಿಗೆ ಬಾಜನರಾದರು. ಭಾರತದಲ್ಲಿ ಅಂದು 550ಕ್ಕೂ ಹೆಚ್ಚು ರಾಜ ಮಹಾರಾಜರಿದ್ದರು. ಅವರಲ್ಲಿ ಕೃಷ್ಣರಾಜರಿಗೆ ಅಂತಹ ಸ್ಥಾನ ಸಿಗಲು ಕಾರಣವೇನೆಂದರೆ ಶಿಕ್ಷಣದಲ್ಲಿ ಅವರಿಗಿದ್ದ ಅಭಿರುಚಿ. ಶಿಕ್ಷಣವನ್ನು ಕಡ್ಡಾಯಗೊಳಿಸಿದ್ದು, ಉಚಿತ ಶಿಕ್ಷಣ ನೀಡಿದ್ದಲ್ಲದೆ ದಲಿತರಿಗೂ ಶಿಕ್ಷಣ ನೀಡಲು ಮುಂದಾಗಿದ್ದು.

ಜಯಲಕ್ಷ್ಮಿ ವಿಲಾಸ್ ಅರಮನೆ

ರಾಜ್ಯದಾದ್ಯಂತ ಶಾಲಾ ಕಾಲೇಜುಗಳು, ಶಿಕ್ಷಕರ ತರಪೇತಿ ಶಾಲೆಗಳು, ಮಾಧ್ಯಮಿಕ ಶಾಲೆಯಲ್ಲಿ ಓದುವ ಮಕ್ಕಳಿಗೆ ಶಿಕ್ಷಣ ಶುಲ್ಕದ ರದ್ದತಿ, 1912ರಲ್ಲಿ ವಯಸ್ಕರ ಶಿಕ್ಷಣ, ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದುದೇ ಅಲ್ಲದೇ– 1911ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಪ್ರಾರಂಭವಾದವು. 1923ರಲ್ಲಿ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳು, ರೋಗಪೀಡಿತ ಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡು ಶಾಲಾ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದ್ದು, ತಾಂತ್ರಿಕ ಕಾಲೇಜುಗಳ ಸ್ಥಾಪನೆ, ಚನ್ನಪಟ್ಟಣ, ಶಿವಮೊಗ್ಗದ ಸಾಗರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರುಗಳಲ್ಲಿ ಕೈಗಾರಿಕಾ ತರಬೇತಿ ಶಾಲೆಗಳ ಸ್ಥಾಪನೆಯಾದವು.

ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ

1916ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾದದ್ದು ಕೃಷ್ಣರಾಜ ಒಡೆಯರ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ. ಇಡೀ ರಾಜ್ಯದಲ್ಲಿ ಪ್ರಥಮ ವಿಶ್ವವಿದ್ಯಾಲಯ ಸ್ಥಾಪನೆ ಮಾಡಬೇಕಾದ ಸಂದರ್ಭದಲ್ಲಿ ಸಾಕಷ್ಟು ಕಟ್ಟಡಗಳು, ವಿಶಾಲವಾದ ಜಾಗ ನುರಿತ ಹಾಗೂ ದಕ್ಷ ಶಿಕ್ಷಕರ ಅಗತ್ಯವಿದ್ದಿತು. ಇಂತಹ ಸಮಯದಲ್ಲಿ ಕೃಷ್ಣರಾಜರು ತಮ್ಮ ಖಾಸಗಿ ಸ್ವತ್ತಾದ ಜಯಲಕ್ಷ್ಮಿ ವಿಲಾಸ್ ಅರಮನೆ ಸೇರಿದಂತೆ ಹಲವಾರು ಕಟ್ಟಡಗಳನ್ನು ವಿಶ್ವವಿದ್ಯಾಲಯ ಸ್ಥಾಪನೆಗೆ ನೀಡಿದರು. ಇದು ಕರ್ನಾಟಕ ರಾಜ್ಯದ ಪ್ರಪ್ರಥಮ ವಿಶ್ವವಿದ್ಯಾಲಯವಾಗಿ ಇತಿಹಾಸದಲ್ಲಿ ದಾಖಲಾಗಿದೆ. ಇದರ ಪ್ರಥಮ ಕುಲಪತಿಗಳನ್ನಾಗಿ ಹೆಚ್.ವಿ. ನಂಜುಂಡಯ್ಯ

ನವರನ್ನು ನೇಮಿಸಲಾಯ್ತು. ಸರ್ ಎಂ. ವಿಶ್ವೇಶ್ವರಯ್ಯನವರು ಇದಕ್ಕಾಗಿ ಶ್ರಮಿಸಿದರು. ಶಾಲಾ ಕಾಲೇಜುಗಳಲ್ಲಿ ದಲಿತರಿಗೆ ಶುಲ್ಕರಹಿತ ಶಿಕ್ಷಣ ನೀಡಲು ಅವಕಾಶ ನೀಡಲಾಯಿತು. ವಿಶ್ವವಿದ್ಯಾಲಯ ಸ್ಥಾಪನೆಯಿಂದಾಗಿ ಮೈಸೂರು ಸಂಸ್ಥಾನದವರಿಗೆ ಕಾಲೇಜು ಹಾಗೂ ವಿಶ್ವವಿದ್ಯಾಲಯ ಶಿಕ್ಷಣ ಪಡೆಯಲು ಇದರಿಂದ ಸಹಾಯವಾಯಿತು. ಕೆ.ಡಿ. ರುಕ್ಮಿಣಿಯಮ್ಮ, ಶ್ರೀರಂಗಮ್ಮ ಮತ್ತು ಸುಬ್ಬಮ್ಮ ಎಂಬ ಮಹಿಳಾ ಮಣಿಯರು ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದರು. ಇಂದಿಗೂ ಮೈಸೂರು ವಿಶ್ವವಿದ್ಯಾಲಯವು ರಾಷ್ಟ್ರದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲೊಂದಾಗಿದೆ.

ಮೆಕಾಲೆ ವರದಿಯಂತೆ ಖಾಸಗಿ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಅಂದಿನ ಕಾಲದಲ್ಲಿ ಅಂತಹ ವಿದ್ಯಾರ್ಹತೆ ಹೊಂದಿದ ಸುಶೀಕ್ಷಿತರಲ್ಲಿ ಬಹುತೇಕರಿಗೆ ಶಾಲಾ ಶಿಕ್ಷಕರ ಹುದ್ದೆ ಸುಲಭವಾಗಿ ಸಿಗುತ್ತಿತ್ತು. ಸರ್ಕಾರವು ಶಾಲಾ ಶಿಕ್ಷಕರಿಗೆ ನಾಲ್ಕು ರೂಪಾಯಿ ಸಂಬಳ ನೀಡುತ್ತಿತ್ತು. ನಂತರದ ದಿನಗಳಲ್ಲಿ ಏಳರಿಂದ ಹತ್ತು ರೂಪಾಯಿ ಸಂಬಳ ನೀಡುತ್ತಿದ್ದರು. ನಂತರದ ದಿನಗಳಲ್ಲಿ ಅನುದಾನಿತ ಶಾಲೆಗಳ ನಿರ್ವಹಣೆ ಹೊಣೆಯು ಆಯಾ ಶಾಲಾ ಸಮಿತಿಗಳದಾಗಿತ್ತು. 1914ರಲ್ಲಿ ಒಟ್ಟು ಒಂದು ಸಾವಿರ ಶಾಲೆಗಳ ಸ್ಥಾಪನೆಗೆ ಅವಕಾಶ ಮಾಡಿಕೊಡಲಾಯ್ತು. 1917–18ರಷ್ಟರಲ್ಲಿ ರಾಜ್ಯದಾದ್ಯಂತ 2,150 ಶಾಲೆಗಳು ಪ್ರಾರಂಭವಾದವು. 1911ರಲ್ಲಿ ಶಾಲೆಗಳಿಗೆ ಹೋಗುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 1 ಲಕ್ಷದ 38 ಸಾವಿರ ಇದ್ದ ಸಂಖ್ಯೆ 1917–18ರಲ್ಲಿ 3 ಲಕ್ಷದ 66 ಸಾವಿರ ವಿದ್ಯಾರ್ಥಿಗಳಿಗೆ ಏರಿಕೆಯಾಯಿತು. ವಿದ್ಯಾರ್ಥಿಗಳ ಸಂಖ್ಯೆ ಶೇಕಡವಾರು 6.4ರಿಂದ ಶೇ. 14.2ರಷ್ಟು ಏರಿಕೆಯಾಯಿತು. ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡುಬಂತು. ಕೆಲವು ಪ್ರದೇಶಗಳಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಿದರು. ಖಾಸಗಿಯಾಗಿ ಸ್ಥಾಪನೆ ಮಾಡಲು ಮುಂದೆ ಬಂದರೆ ಅವರಿಗೆ ಉತ್ತೇಜನ ನೀಡಲಾಗುತ್ತಿತ್ತು. ಸರ್ಕಾರದ ಅನುದಾನ ಭಾರಿ ಪ್ರಮಾಣದ ಪ್ರಭಾವ ಬೀರಿತು.

ಚಾಮರಾಜೇಂದ್ರ ತಾಂತ್ರಿಕ ಶಾಲೆ ಎಂಬ ವಿಶೇಷ ಕಲಾಶಾಲೆಯ ತರಬೇತಿ ನೀಡುವ ಶಾಲೆಯನ್ನು ಪ್ರಾರಂಭಿಸಲಾಯ್ತು. 1903ರಲ್ಲಿ ಇದನ್ನು ಕೇಂದ್ರೀಯ ಕಲಾ ಶಾಲೆಯನ್ನಾಗಿ ಮಾರ್ಪಡಿಸಲಾಯ್ತಿತು. 1906ರಲ್ಲಿ ಇಂಗ್ಲೆಂಡಿನ ರಾಜಕುಮಾರ ಜಾರ್ಜ್‌ರವರು ಕಲಾಶಾಲೆಯ ಶಿಲಾನ್ಯಾಸ ನೆರವೇರಿಸಿದರು. ಇದರ ನಿರ್ಮಾಣ ಕಾರ್ಯ 1913ರಲ್ಲಿ ಮುಗಿಯಿತು. ಇದರಲ್ಲಿ ಶಿಕ್ಷಣ ತರಬೇತಿ

ಪಡೆದವರಲ್ಲಿ ಸಾಕಷ್ಟು ಜನ ಉದ್ಯೋಗ ಪಡೆದುಕೊಂಡರು. 1930ರಲ್ಲಿ ಬೆಂಗಳೂರಿನಲ್ಲಿದ್ದ ಮೈಸೂರು ಮೆಡಿಕಲ್ ಕಾಲೇಜನ್ನು ಮೈಸೂರಿಗೆ ಸ್ಥಳಾಂತರಿಸಿ ಮೈಸೂರು ವಿಶ್ವವಿದ್ಯಾಲಯದ ಅಂಗಸಂಸ್ಥೆಯನ್ನಾಗಿಸಿದರು. ಮೈಸೂರು ಮತ್ತು ಬೆಂಗಳೂರಿನಲ್ಲಿ ಸಂಸ್ಕೃತ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದರು. ಹರಿಜನ, ಗಿರಿಜನರಿಗೆ ಉಚಿತ ಶಿಕ್ಷಣದ ವ್ಯವಸ್ಥೆ ಮಾಡಿದರು. ಹರಿಜನರು ಅರಮನೆ, ದೇವಸ್ಥಾನಗಳಿಗೆ ಪ್ರವೇಶ ಮಾಡಲು ಅವಕಾಶ ಮಾಡಿಕೊಟ್ಟರು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ

ಕೃಷ್ಣರಾಜರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡುವ ವೇಳೆಗಾಗಲೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಸೇರಿದಂತೆ ಎಲ್ಲೆಡೆ 'ಕರ್ನಾಟಕ ಏಕೀಕರಣ' ಆಂದೋಲನ ನಡೆಯುತ್ತಿದ್ದ ಕಾಲವದು. ಅಂತಹ ಸಂದರ್ಭದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಪ್ರದೇಶವಾದ ಚಾಮರಾಜಪೇಟೆಯಲ್ಲಿ ಒಂದು ಅತ್ಯುತ್ತಮವಾದ ಕಟ್ಟಡವನ್ನು ಕಟ್ಟಿಸಿ (ಕೃಷ್ಣರಾಜ ಪರಿಷನ್ಮಂದಿರ) 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಇದು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ನೀಡಿದ ಅತ್ಯುತ್ತಮವಾದ ಕೊಡುಗೆ ಎಂದು ಹೇಳಬಹುದು.

ಕೈಗಾರಿಕೆಗಳ ಸ್ಥಾಪನೆ

ಈಗಾಗಲೆ ತಿಳಿಸಿರುವಂತೆ ಕೃಷ್ಣರಾಜರು ಅಧಿಕಾರ ಸ್ವೀಕರಿಸಿದ ಮಾರನೆಯ ವರ್ಷ ಅಂದರೆ 1903ರಲ್ಲಿ ಮದ್ರಾಸ್‌ನಲ್ಲಿ ನಡೆದ ಕೈಗಾರಿಕಾ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಬಂದಿದ್ದರು. ತಮ್ಮ ರಾಜ್ಯದಲ್ಲೂ ಕೈಗಾರಿಕೆಗಳನ್ನು ಸ್ಥಾಪಿಸಿ ಮೈಸೂರು ರಾಜ್ಯವನ್ನು ಅಭಿವೃದ್ಧಿ ಪತದತ್ತ ಕೊಂಡೊಯ್ಯಬೇಕೆಂಬ ಹಂಬಲವಿದ್ದಿತು. ದಕ್ಷ ದಿವಾನರಾದ ಸರ್ ಎಂ.ವಿ.ರವರ ಸಹಾಯದಿಂದ ಭದ್ರಾವತಿಯಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ ಬೆಂಗಳೂರಿನಲ್ಲಿ ಮೈಸೂರು ಸಾಬೂನು ಹಾಗೂ ಮಾರ್ಜಕ ಕಾರ್ಖಾನೆ, ರೇಷ್ಮೆ ಕೈಗಾರಿಕೆ, ಸಿಮೆಂಟ್ ಕಾರ್ಖಾನೆ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಹತ್ತು ರೇಷ್ಮೆ ಕೈಗಾರಿಕಾ ಶಾಲೆಗಳನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಹತ್ತಿ ಹಾಗೂ ರೇಷ್ಮೆ ಕೈಮಗ್ಗಗಳಿಗೆ ಉತ್ತೇಜಿಸಿದರು. ಕಾರಣವೇನೆಂದರೆ ಟಿಪ್ಪುಸುಲ್ತಾನನ ಕಾಲದಲ್ಲಿ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಲಕ್ಷಾಂತರ ಕೈಮಗ್ಗಗಳಿದ್ದು 1799ರಲ್ಲಿ ನಡೆದ ನಾಲ್ಕನೆ ಮೈಸೂರು ಯುದ್ಧದಿಂದಾಗಿ ಗೃಹ ಕೈಗಾರಿಕೆಗಳಿಗೆ ಹಿನ್ನಡೆಯಾಯಿತು. ಮೈಸೂರು

ರೇಷ್ಮೆ ಸೀರೆ ಇಂದಿಗೂ ವಿಶ್ವದಾದ್ಯಂತ ಪ್ರಸಿದ್ಧಿಯಾಗಿದೆ. ಬೆಂಗಳೂರಿನಲ್ಲಿ ಬಿನ್ನಿಮಿಲ್ ಕರ್ನಾಟಕ ವಿದ್ಯುತ್ ಕೈಗಾರಿಕೆ (ಕ.ವಿ.ಇ.), ಪಿಂಗಾಣಿ ಕಾರ್ಖಾನೆ, ಮೈಸೂರ್ ಲ್ಯಾಂಪ್ ಕಾರ್ಖಾನೆ, ವಿಮಾನ ಕಾರ್ಖಾನೆ, ಮೈಸೂರು ಹಾಗೂ ಸುತ್ತಮುತ್ತ ಹೊಗೇಸೊಪ್ಪು ಶುದ್ಧೀಕರಣ ಕಾರ್ಖಾನೆ, ರಸಗೊಬ್ಬರ ಕಾರ್ಖಾನೆ, ಬಣ್ಣ ಮತ್ತು ಅರಗಿನ ಕಾರ್ಖಾನೆ, ಕಾಗದದ ಕಾರ್ಖಾನೆ, ರೈಲ್ವೆ ಬಿಡಿ ಭಾಗಗಳ ಕಾರ್ಖಾನೆಗಳು ಸ್ಥಾಪನೆಯಾಗುವ ಮೂಲಕ ಕೈಗಾರಿಕಾ ಕ್ರಾಂತಿಯಾಯಿತೆಂದರೆ ತಪ್ಪಾಗಲಾರದು.

ನೀರಾವರಿ ಮತ್ತು ರೈಲ್ವೆ ವ್ಯವಸ್ಥೆ

ರೈತರಿಗೆ ಅನುಕೂಲವಾಗುವಂತೆ ನೀರಾವರಿ ವ್ಯವಸ್ಥೆಯನ್ನು ಮಾಡಲಾಯ್ತು. ಕನ್ನಂಬಾಡಿ ಕಟ್ಟೆ, ಮಾರ್ಕೊನಹಳ್ಳಿ, ಕುಮುದ್ವತಿ, ಲಕ್ಕವಳ್ಳಿ, ಅಂಜನಾಪುರ, ವಾಣಿವಿಲಾಸ ಸಾಗರ ಇವೇ ಮುಂತಾದವು ಕೃಷ್ಣರಾಜರ ಕೊಡುಗೆಗಳು. ಕೃಷ್ಣರಾಜರು ಕಾವೇರಿ ಮತ್ತು ಹೇಮಾವತಿ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟೆ ಕಟ್ಟಿಸಿದರು. ಅವುಗಳೆಂದರೆ. ವಿರಿಜಾನಾಲ, ರಾಮಸ್ವಾಮಿನಾಲಾ, ಚಾಮರಾಜನಾಲಾ, ಅತ್ತಿಕಟ್ಟಿನಾಲಾ, ಮಾಧವಮಂತ್ರಿ ನಾಲಾ, ರಾಜಪರಮೇಶ್ವರಿನಾಲಾ, ಮಂದಗೆರೆ ನಾಲಾ ಇವೇ ಮುಂತಾದವು. ಇದರಿಂದಾಗಿ ಲಕ್ಷಾಂತರ ಎಕರೆ ಒಣಭೂಮಿಗೆ ನೀರುಣಿಸಲಾಯ್ತು. ಕೃಷ್ಣರಾಜರು ನೀರಾವರಿ ಹಾಗೂ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಟ್ಟರು. ಇಟಲಿ ಮತ್ತು ಜರ್ಮನಿಗಳಿಂದ ರೇಷ್ಮೆ ತಜ್ಞರನ್ನು ಕರೆಸಿ ಚನ್ನಪಟ್ಟಣದಲ್ಲಿ ರೇಷ್ಮೆ ಕೃಷಿಯನ್ನು ಪ್ರಾರಂಭಿಸಿದರು. ಕೈಗಾರಿಕಾ ವಸ್ತುಪ್ರದರ್ಶನ ಏರ್ಪಡಿಸುತ್ತಿದ್ದರು. ನಂತರ ಕೃಷಿ ಇಲಾಖೆಯನ್ನು ಸ್ಥಾಪಿಸಿದರು. ಕೈಗಾರಿಕೆಗಳನ್ನು ಉತ್ತೇಜಿಸುವುದರ ಜೊತೆಗೆ ರೈಲ್ವೆಯನ್ನು ಅಭಿವೃದ್ಧಿಪಡಿಸಿದರು. ಮೈಸೂರು-ಅರಸೀಕೆರೆ, ನಂಜನಗೂಡು, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಜಾಜೂರು, ಬೆಂಗಳೂರು, ಕೋಲಾರ ಹೀಗೆ ನಾನಾ ಕಡೆಗೆ ರೈಲ್ವೆ ಸಂಪರ್ಕ ಕಲ್ಪಿಸಿದರು. ಹಿಂದೆ ಇದನ್ನು ಮೈಸೂರು ಸ್ಟೇಟ್ ರೈಲ್ವೆ ಎಂದೇ ಕರೆಯುತ್ತಿದ್ದರು. 732 ಮೈಲಿ ಉದ್ದದ ರೈಲ್ವೆ ಹಳಿಯನ್ನು ಹಾಕಿಸಲಾಯ್ತು.

ರಸ್ತೆ ಮತ್ತು ಸೇತುವೆಗಳ ನಿರ್ಮಾಣ

ಮೈಸೂರನ್ನು ಕೇಂದ್ರವಾಗಿರಿಸಿಕೊಂಡು ಮೈಸೂರು ಬೆಂಗಳೂರು ರಸ್ತೆ, ಮೈಸೂರು ಗುಂಡ್ಲುಪೇಟೆ, ಮೈಸೂರು ನಂಜನಗೂಡು, ಮೈಸೂರು ಊಟಿ, ಮೈಸೂರು ತುಮಕೂರು, ಮೈಸೂರು-ಹಾಸನ, ಮೈಸೂರು-ಮಡಿಕೇರಿ ರಸ್ತೆಗಳನ್ನು

ನಿರ್ಮಿಸಿದರು. ಉದ್ದಗಲದ ಸುರಕ್ಷಿತ ರಸ್ತೆಗಳನ್ನು ನಿರ್ಮಿಸಿದರು. ಅಗತ್ಯಬಿದ್ದ ಕಡೆ ಸಿಮೆಂಟ್ ರಸ್ತೆಗಳನ್ನು ನಿರ್ಮಿಸಿದರು. ತೀರ ದೊಡ್ಡದಾದ ಹಳ್ಳ, ತೊರೆ, ನದಿ, ಕಾಲುವೆಗಳು ಅಡ್ಡ ಬಂದಂತಹ ಕಡೆ ಸುಭದ್ರವಾದ ಸೇತುವೆಗಳನ್ನು ನಿರ್ಮಿಸಿದರು.

ಅಕ್ಕಿಹೆಬ್ಬಾಳು ಪ್ರದೇಶದಲ್ಲಿರುವ ಹೇಮಾವತಿ ನದಿ, ದೂರನಹಳ್ಳಿಯ ಹತ್ತಿರದ ಲಕ್ಷ್ಮಣತೀರ್ಥ ನದಿ, ಟಿ. ನರಸೀಪುರದ ಹತ್ತಿರ ಕಾವೇರಿ, ಕಬಿನಿ ನದಿ, ರಾಮನಾಥಪುರದ ಬಳಿ ಕಾವೇರಿ ನದಿಗೆ ಸೇತುವೆಗಳನ್ನು ಕಟ್ಟಿಸಿ ಮಾರ್ಗ ಸೌಕರ್ಯವನ್ನು ಹೆಚ್ಚಿಸಿದರು. ಇಂತಹ ಸೇತುವೆಗಳ ನಿರ್ಮಾಣ ಅಂದಿನ ಕಾಲದಲ್ಲಿ ಸರ್ಕಾರಕ್ಕೆ ಹೆಚ್ಚಿನ ಹೊರೆ ಬೀಳುತ್ತಿತ್ತು. ಆದರೆ ಅದರಿಂದ ಲಾಭವಿರಲಿಲ್ಲ. ಆದರೂ ಅದನ್ನು ತಮ್ಮ ಕರ್ತವ್ಯವೆಂದು ಭಾವಿಸಿದ್ದರು.

ಕನ್ನಂಬಾಡಿ ಕಟ್ಟೆಯ ನಿರ್ಮಾಣ

ನಾಲ್ವಡಿ ಕೃಷ್ಣರಾಜರ ಹೆಸರು ಅಜರಾಮರವಾಗಿ ಉಳಿಯಲು ಕಾರಣವಾದ ಕೆಲಸವೆಂದರೆ ಕನ್ನಂಬಾಡಿಕಟ್ಟೆ (ಕೆ.ಆರ್.ಎಸ್.). ಇದು ಲಕ್ಷಾಂತರ ಜನರ ಅನ್ನಭಾಗ್ಯಕ್ಕೆ ದಾರಿಯಾದ, ಮಂಡ್ಯ ಜಿಲ್ಲೆಯ ಜನಗಳ ಪಾಲಿಗೆ ಜೀವನದಿಯಾದರೆ, ಬೆಂಗಳೂರು ನಗರವಾಸಿಗಳ ಪಾಲಿಗೆ ಜೀವನಾಡಿ ಬೆಂಗಳೂರು ನಗರ ನಿಂತಿರುವುದೇ ಕಾವೇರಿ ನೀರಿನಿಂದ ಈ ಎಲ್ಲಾ ಉಪಮೆಗಳ ಹಿನ್ನೆಲೆಯೇ ನಾಲ್ವಡಿ ಕೃಷ್ಣರಾಜ ಒಡೆಯರು.

ಕನ್ನಂಬಾಡಿ ಕಟ್ಟೆಯ ನಿರ್ಮಾಣವು ರೋಚಕ ಹಿನ್ನೆಲೆಯನ್ನು ಹೊಂದಿದೆ. ಕನ್ನಂಬಾಡಿಯ ಪೂರ್ವದ ಹೆಸರು 'ಕಣ್ವಪುರಿ'. ಹಿಂದೆ ದೊಡ್ಡಹಳ್ಳಿ ಇಲ್ಲವೇ ಗ್ರಾಮವಾಗಿತ್ತು. ಇಲ್ಲಿ ಕಣ್ವೇಶ್ವರ, ಗೋಪಾಲಕೃಷ್ಣ ಮತ್ತು ಲಕ್ಷ್ಮೀದೇವಿಯರ ದೇವಾಲಯಗಳಿದ್ದವು. ಇವುಗಳಲ್ಲೆಲ್ಲ 'ಕಣ್ವೇಶ್ವರ' ದೇವಾಲಯವು ಪ್ರಾಚೀನ ದೇವಾಲಯ. ಇದನ್ನು ಕ್ರಿ.ಶ. 8ನೆಯ ಶತಮಾನದಲ್ಲಿ ರಾಷ್ಟ್ರಕೂಟ ದೊರೆ ಕೃಷ್ಣ ಎಂಬುವವನು ನಿರ್ಮಿಸಿದನು. ಒಂದು 'ಅಗ್ರಹಾರವು ಇಲ್ಲಿತ್ತು. ಕಾವೇರಿ ನದಿಗೆ ಮೈಸೂರು ಸಂಸ್ಥಾನದಲ್ಲಿ ಕನ್ನಂಬಾಡಿಯಲ್ಲದೆ ವಿವಿಧೆಡೆ ಹನ್ನೊಂದು ಅಣೆಕಟ್ಟುಗಳನ್ನು ನಿರ್ಮಿಸಿದ್ದರು. ಕಂಠೀರವ ನರಸರಾಜ ಒಡೆಯರು ಮುನ್ನೂರು ವರ್ಷಗಳ ಹಿಂದೆ ಶ್ರೀರಂಗಪಟ್ಟಣದ ಉತ್ತರದಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿದ್ದರು. 1595ರಲ್ಲೇ ದಳವಾಯಿ ಕುಮಾರರಾಮ ಎನ್ನುವವನು ಕಾವೇರಿ ನೀರನ್ನು ಅಡ್ಡಗಟ್ಟಿ ನೀರಾವರಿ ಸೌಲಭ್ಯಗಳಿಗೆ ಒಡ್ಡು ಹಾಕಿಸಿದ್ದ. ಚಿಕ್ಕದೇವರಾಜ ಒಡೆಯರು (1673–1704) ಚಿಕ್ಕ ಅಣೆಕಟ್ಟು ನಿರ್ಮಿಸಿದ್ದರು. ಇವುಗಳು ನಿರೀಕ್ಷೆಯಷ್ಟು ಯಶಸ್ಸು

ಕಾಣಲಿಲ್ಲ. ಟಿಪ್ಪುವಿನ ಆಡಳಿತದ ಕಾಲದಲ್ಲಿ ಕಟ್ಟೆ ಕಟ್ಟಲು ಶಂಕುಸ್ಥಾಪನೆ ಮಾಡಿದ್ದು ತಿಳಿದುಬರುತ್ತದೆ.

1870ರಲ್ಲಿ ಕರ್ನಲ್ ಸ್ಯಾಂಕಿ ಒಂದು ವರದಿ ನೀಡಿ ಕೊಡಗಿನ ಗಡಿ ಪ್ರದೇಶದಲ್ಲಿರುವ ರಾಮಸ್ವಾಮಿ ಕಣಿವೆಯಲ್ಲಿ ಕಾವೇರಿ ನದಿಗೆ ಅಡ್ಡವಾಗಿ ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಬಹುದು ಎಂದು ಸಲಹೆ ನೀಡಿದ್ದ (ಮೈಸೂರು 100–200 ವರ್ಷಗಳ ಹಿಂದೆ ಪುಟ: 246, 247, ಪ್ರೊ.: ಪಿ.ವಿ. ನಂಜರಾಜ ಅರಸು)

ನಾಲ್ವಡಿ ಕೃಷ್ಣರಾಜ ಒಡೆಯರು ಸರ್.ಎಂ. ವಿಶ್ವೇಶ್ವರಯ್ಯನವರನ್ನು ಮೈಸೂರಿನ ದಿವಾನ್ ಪದವಿಯನ್ನು ಸ್ವೀಕರಿಸುವಂತೆ ಕೇಳಿಕೊಂಡರು. ಅದಕ್ಕೊಪ್ಪಿ ವಿಶ್ವೇಶ್ವರಯ್ಯನವರು 1912ರಿಂದ 1918ರವರೆಗೆ ಮೈಸೂರಿನ ದಿವಾನರಾಗಿ ದುಡಿದರು. ಕಟ್ಟೆಯ ನಿರ್ಮಾಣಕ್ಕೆ ಈ ಮೊದಲು ಮೈಸೂರು ರಾಜ್ಯದ ಮುಖ್ಯ ಇಂಜಿನಿಯರ್ ಆಗಿದ್ದ ಮೆಶ್‌ಹಚಿನ್ ಮೊದಲ ಪ್ರಯತ್ನ ಮಾಡಿದ, ಆತ ನಿವೃತ್ತನಾದ ಬಳಿಕ ಪ್ರಭಾರ ಮುಖ್ಯ ಇಂಜಿನಿಯರ್ ಆಗಿದ್ದ 'ಕ್ಯಾಪ್ಟನ್ ಬರ್ನಾರ್ಡ್ ಡಾವಸ್' ಸಾಕಷ್ಟು ಪ್ರಯತ್ನಿಸಿದ.

1912ರವರೆಗೂ ಬ್ರಿಟಿಷರ ಆಡಳಿತದಲ್ಲಾಗಲಿ ಅದಕ್ಕೂ ಪೂರ್ವದಲ್ಲಾಗಲಿ ಇಡೀ ಭಾರತದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಜಲಾಶಯ ನಿರ್ಮಾಣವಾಗಿರಲಿಲ್ಲ. ಮದ್ರಾಸ್ ಸರ್ಕಾರವು ಇದಕ್ಕಿಂತ ದೊಡ್ಡದಾದ ಮೆಟ್ಟೂರು ಡ್ಯಾಂ ನಿರ್ಮಾಣ ಮಾಡಿದ್ದು ಕನ್ನಂಬಾಡಿ ಕಟ್ಟೆಯ ನಿರ್ಮಾಣವಾದ 13 ವರ್ಷಗಳ ನಂತರ. (1925) ಕಟ್ಟೆಯು ನಿರ್ಮಾಣವಾದರೆ ಒಂದೂವರೆ ಲಕ್ಷ ಎಕರೆ ಒಣ ಭೂಮಿಗೆ ನೀರು ಒದಗಿಸಬಹುದೆಂಬುದು ವಿಶ್ವೇಶ್ವರಯ್ಯನವರ ಉದ್ದೇಶವಾಗಿತ್ತು (ನನ್ನ ವೃತ್ತಿ ಜೀವನದ ನೆನಪುಗಳು–ಸರ್ ಎಂ. ವಿಶ್ವೇಶ್ವರಯ್ಯ, ಪುಟ: 66–67). ಮದ್ರಾಸ್ ಸರ್ಕಾರವು (ಮದ್ರಾಸ್ ಪ್ರೆಸಿಡೆನ್ಸಿ) ಹಲವಾರು ಷರತ್ತುಗಳನ್ನು ಹಾಕಿತು. ಇದೆಲ್ಲವನ್ನು ಸರ್ ಎಂ.ವಿ.ರವರು ನಿವಾರಿಸಿದರು. ಮತ್ತೊಂದು ದೊಡ್ಡ ಸಮಸ್ಯೆ ಎಂದರೆ ಹಣ ಒದಗಿಸುವುದು. ಅದಕ್ಕಾಗಿ 2 ಕೋಟಿ 53 ಲಕ್ಷ ರೂಪಾಯಿ ಬೇಕಾಗಿತ್ತು. ಅಂದು ಮೈಸೂರು ರಾಜ್ಯದ ವಾರ್ಷಿಕ ವರಮಾನ ಬಹಳ ಕಡಿಮೆ ಇತ್ತು. ಅಂತಹ ಸಂದರ್ಭದಲ್ಲಿ ಒಡೆಯರು ಮೈಸೂರಿನ ಅರಮನೆಯಲ್ಲಿದ್ದ ನಾಲ್ಕು ಗೋಣಿಚೀಲಗಳ ತುಂಬ ಚಿನ್ನ, ವಜ್ರ, ವೈಡೂರ್ಯಗಳನ್ನು ಮುಂಬಯಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಕಟ್ಟೆಯ ನಿರ್ಮಾಣಕ್ಕೆ ಬಳಸಿದರು. ಕನ್ನಂಬಾಡಿ ಕಟ್ಟೆಯ ನಿರ್ಮಾಣ ಕೆಲಸವು 1915ರ ಹೊತ್ತಿಗೆ ಯಶಸ್ವಿಯಾಗಿ ಮುಗಿಯಿತು. ಚಾನಲ್‌ಗಳ ಮೂಲಕ ಒಣಭೂಮಿಗೆ ನೀರು ಹರಿಸಿ ನೀರಾವರಿ ಭೂಮಿಯನ್ನಾಗಿ ಮಾಡಿ ರೈತರ ಬಾಳಿಗೆ ಬೆಳಕಾದರು.

ಹಿಂದುಳಿದ ವರ್ಗಗಳ ಆಯೋಗ ರಚನೆಯ ಚಾಂಪಿಯನ್

ದಕ್ಷಿಣ ಭಾರತದಲ್ಲಿ ಬ್ರಾಹ್ಮಣೇತರ ಚಳುವಳಿಯು ಪ್ರಾರಂಭವಾಯಿತು. ಪೆರಿಯಾರ್ ರಾಮಸ್ವಾಮಿಯವರಿಂದಾಗಿ ಅದು ಮತ್ತಷ್ಟು ಹೆಚ್ಚಾಯಿತು. ಮದ್ರಾಸ್‌ನಲ್ಲಿ 'ಜಸ್ಟೀಸ್ ಪಾರ್ಟಿ' ಎಂಬ ಪಕ್ಷ ತಲೆ ಎತ್ತಿತು. ಮೈಸೂರು ಸಂಸ್ಥಾನದಲ್ಲೂ ಹಿರೇಹಳ್ಳಿ ಚನ್ನಯ್ಯ, ಎಂ. ಬಸವಯ್ಯ, ಗುಲಾಮ್ ಅಹಮ್ಮದ್ ಖಲಾಮಿ ಇವರೇ ಮುಂತಾದವರು ಬ್ರಾಹ್ಮಣೇತರ ಚಳುವಳಿಯನ್ನು ಇಲ್ಲಿ ಪ್ರಾರಂಭಿಸಿದರು. ಇದೇ ಸಮಯಕ್ಕೆ ಅಂದಿನ ದಿವಾನರಾಗಿದ್ದ ಸರ್ ಎಂ.ವಿ.ರವರು ಹತ್ತೊಂಬತ್ತು ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಆಳರಸರಿಗೆ ಪ್ರಸ್ತಾಪ ಸಲ್ಲಿಸಿದರು. ಆದರೆ ಅವರೆಲ್ಲರೂ ಬ್ರಾಹ್ಮಣರಾಗಿದ್ದರು. ಈ ವಿಷಯವನ್ನು ಬ್ರಾಹ್ಮಣೇತರ ಚಳುವಳಿಯ ಮುಖಂಡರು ಕೃಷ್ಣರಾಜ ಒಡೆಯರ ಗಮನಕ್ಕೆ ತಂದರು. ಇದೇ ಸಮಯಕ್ಕೆ ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಸಿ.ಆರ್. ರೆಡ್ಡಿ (ಕಟ್ಟಮಂಚಿ ರಾಮಲಿಂಗಾರೆಡ್ಡಿ)ಯವರು ದೊರೆಗಳ ಹಾಗೂ ಹಿಂದುಳಿದ ವರ್ಗಗಳ ನಾಯಕರ ನಡುವೆ ಉತ್ತಮ ಬಾಂಧವ್ಯ ಬೆಸೆಯಲು ಪ್ರಯತ್ನಿಸಿದರು. ಒಡೆಯರು 'ಜಸ್ಟೀಸ್ ಲೆಸ್ಲೆಮಿಲ್ಲರ್' ಆಯೋಗವನ್ನು 1917–18ರಲ್ಲಿ ನೇಮಕ ಮಾಡಿದರು. ಇದು ಇಡೀ ಭಾರತದಲ್ಲೇ ಪ್ರಪ್ರಥಮ ಹಿಂದುಳಿದ ವರ್ಗಗಳ ಆಯೋಗವೆಂದು ಹೆಸರುವಾಸಿಯಾಗಿದೆ. ವರದಿಯನ್ನು ಅನುಷ್ಠಾನಗೊಳಿಸಿದ ಕೀರ್ತಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ.

ದಲಿತೋದ್ಧಾರಕ ಕೃಷ್ಣರಾಜರು

ಅನಾದಿ ಕಾಲದಿಂದಲೂ ದಲಿತರನ್ನು ಅಸ್ಪೃಶ್ಯರೆಂದು ಹೀಗಳೆಯುತ್ತಾ ಬಂದಿತು. ಆದರೆ ಕೃಷ್ಣರಾಜ ಒಡೆಯರು ದೀನದಲಿತರ ಬಗ್ಗೆ ತುಂಬು ಕಾಳಜಿಯನ್ನು ಹೊಂದಿದ್ದರು. ದಲಿತರಿಗೆ ದೇವಸ್ಥಾನ ಪ್ರವೇಶ ಮಾಡಲು ಅವಕಾಶ ಮಾಡಿಕೊಡಬೇಕೆಂದು ಸುತ್ತೋಲೆ ಹೊರಡಿಸಿದರು. ತಾವು ಇದಕ್ಕೆ ಮಾದರಿ ಎಂಬಂತೆ ದಲಿತರು ಅರಮನೆ ಪ್ರವೇಶಕ್ಕೆ ಅವಕಾಶ ನೀಡಿದರು. 1909ರಲ್ಲಿ ರಾಜ್ಯದಲ್ಲಿ 'ಕಡ್ಡಾಯ ಶಿಕ್ಷಣ' ಜಾರಿಗೆ ತಂದರು. ಈ ಕಾನೂನಿನ ಅಡಿಯಲ್ಲಿ ಪಂಚಮರಿಗೂ ಸಹ ಕಡ್ಡಾಯ ಶಿಕ್ಷಣದ ವ್ಯವಸ್ಥೆ ಜಾರಿಗೆ ತಂದರು. ಅಸ್ಪೃಶ್ಯರು ಸಾರ್ವಜನಿಕ ಶಾಲೆಗಳಿಗೆ ಸೇರಿ ವಿದ್ಯೆ ಕಲಿಯಲು ಅವಕಾಶ ನೀಡಿದರು. ಆದರೆ ಸಾರ್ವಜನಿಕರು ಇದಕ್ಕೆ ವಿರೋಧ ವ್ಯಕ್ತಪಡಿಸಿದಾಗ ಪಂಚಮರಿಗೆ ಪ್ರತ್ಯೇಕ ಶಾಲೆಗಳನ್ನು ಸರ್ಕಾರವೇ ತೆರೆಯಿತು. 'ದಲಿತ ಶಿಕ್ಷಣ ಮಿಷನ್' ಎಂಬ ಸಂಸ್ಥೆ ಸ್ಥಾಪನೆಯಾಯಿತು. ಎನ್. ನರಸಿಂಹ ಅಯ್ಯಂಗಾರ್‌ರವರು ಅಧ್ಯಕ್ಷರಾಗಿದ್ದರು. 1915ರ ಹೊತ್ತಿಗೆ 15 ಶಾಲೆಗಳು ಅಸ್ತಿತ್ವಕ್ಕೆ ಬಂದವು. ಮಹಾರಾಣಿ ವಾಣಿವಿಲಾಸ

ಸನ್ನಿದಾನರವರು ಇದರ ಮಹಾಪೋಷಕರಾಗಿದ್ದರು. ಮೈಸೂರು, ತುಮಕೂರು, ಚಿಕ್ಕಮಗಳೂರು, ಹಾಸನ, ಚಾಮರಾಜನಗರಗಳಲ್ಲಿ ಸಾಕಷ್ಟು ಶಾಲೆಗಳನ್ನು ತೆರೆದರು. 1918–19ರಲ್ಲಿ ಚಿತ್ರದುರ್ಗದ ಆಂಗ್ಲೋವರ್ನಾಕ್ಯೂಲರ್ ಶಾಲೆಗೆ ಎಡಗೈ (ಮಾದಿಗ) ಹುಡುಗನೊಬ್ಬನನ್ನು ಅಲ್ಲಿನ ಮುಖ್ಯೋಪಾಧ್ಯಾಯರು ಸೇರಿಸಿಕೊಂಡಾಗ ಸವರ್ಣೀಯರು ಭಾರಿ ಪ್ರತಿಭಟನೆ ಮಾಡಿದರು. ನಾಲ್ವಡಿ ಕೃಷ್ಣರಾಜರು ಇದಕ್ಕೆ ಹೆದರದೆ ಅಸ್ಪೃಶ್ಯರು ಸಾರ್ವಜನಿಕ ಶಾಲೆಗಳಿಗೆ ಸೇರುವ ಹಕ್ಕನ್ನು ಮಾನ್ಯ ಮಾಡಿದರು. 1915ರಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುವುದಕ್ಕೆ ಯಾವುದೇ ಜಾತಿ ನಿರ್ಬಂಧವಿರಕೂಡದೆಂದು ಸರ್ಕಾರವು ಸುತ್ತೋಲೆ ಹೊರಡಿಸಿತು ಹಾಗೂ ಹೆಚ್ಚು ಹೆಚ್ಚು ಪಂಚಮರ ಶಾಲೆಗಳು ಸ್ಥಾಪನೆಗೊಂಡವು. 1915–16ರಲ್ಲಿ 171 ಸರ್ಕಾರಿ ಶಾಲೆಗಳು, 108 ಅನುದಾನಿತ ಶಾಲೆಗಳು 88 ಅನುದಾನರಹಿತ ಶಾಲೆಗಳು ಅಸ್ತಿತ್ವಕ್ಕೆ ಬಂದವು. ಸವರ್ಣೀಯರಿಂದ ಹಾಗೂ ಶೃಂಗೇರಿಯಲ್ಲಿ ವೈದಿಕರಿಂದ ತೀವ್ರ ಪ್ರತಿಭಟನೆಗಳಾದವು. ಕಾರಣವೇನೆಂದರೆ ಇಂತಹ ಶಾಲೆಗಳಿಗೆ ಶಿಕ್ಷಕರಾಗಿ ಬ್ರಾಹ್ಮಣರನ್ನು ನೇಮಿಸಿಕೊಂಡದ್ದು. 1915ರಲ್ಲಿ ಶಿಕ್ಷಣ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದ ಎಂ. ಶಾಮರಾಯರು ಮತ್ತು 1916ರಲ್ಲಿ ಸಿ.ಆರ್. ರೆಡ್ಡಿಯವರು ಆ ಸ್ಥಾನದಲ್ಲಿರುವ ತನಕ ಪ್ರತಿಭಟನೆಯನ್ನು ಎದುರಿಸಬೇಕಾಯಿತು.

ನಾಲ್ವಡಿ ಕೃಷ್ಣರಾಜರು 1905ರಲ್ಲಿ ಸಹಕಾರಿ ಸಂಘಗಳ ಕಾಯ್ದೆಯನ್ನು ಜಾರಿಗೆ ತಂದರು. 1915ರ ಹೊತ್ತಿಗೆ ಪರಿಶಿಷ್ಟರು ಈ ತೆರನಾದ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಿದರು. ಒಂದೆರಡು ವರ್ಷದಲ್ಲಿ ಆರು ಸಹಕಾರಿ ಪತ್ತಿನ ಸಂಘಗಳು ಸ್ಥಾಪನೆಯಾದವು. ದಲಿತರು ಅಂದಿನ ಸಮಾಜದಲ್ಲಿ ತಲೆ ಎತ್ತಿ ನಡೆಯುವಂತೆ ಮಾಡಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ.

ಸಾರ್ವಜನಿಕ ಆಸ್ಪತ್ರೆಗಳ ನಿರ್ಮಾಣ

ಕೃಷ್ಣರಾಜರು ಆಸ್ಪತ್ರೆ ಸೇರಿದಂತೆ ಸಾರ್ವಜನಿಕ ಸೇವೆಗೆ ಆದ್ಯತೆ ನೀಡಿದರು. ಅಂದಿನ ಕಾಲದಲ್ಲಿ ಖಾಸಗಿ ಆಸ್ಪತ್ರೆಗಳು ಹೆಚ್ಚಾಗಿರಲಿಲ್ಲ. ಸಾರ್ವಜನಿಕರಿಗೆ ಅನುಕೂಲವಾಗಲೆಂದು ಕೃಷ್ಣರಾಜ ಒಡೆಯರು ಆಸ್ಪತ್ರೆಗಳನ್ನು ತೆರೆದರು. ಅರಮನೆಯಲ್ಲಿ ಒಂದು ಅವಘಡ ಸಂಭವಿಸಿತು. ಅದೇನೆಂದರೆ ಕೃಷ್ಣರಾಜರ ಸಹೋದರಿಯಾದ 'ಕೃಷ್ಣರಾಜಮ್ಮಣ್ಣಿ'ಯವರು ನಂತರ ಅವರ ಮಕ್ಕಳಾದ ದೊಡ್ಡರನ್ನ ಬುದ್ಧಿ, ಚಿಕ್ಕರನ್ನ ಬುದ್ಧಿ ಮತ್ತು ಪುಟ್ಟರನ್ನ ಬುದ್ಧಿಯವರು ಒಟ್ಟು ನಾಲ್ಕು ಮಂದಿ ಕ್ಷಯ ರೋಗದಿಂದಾಗಿ ಅಸುನೀಗಿದರು. ಕ್ಷಯರೋಗ ಆಗಿನ ಕಾಲದಲ್ಲಿ ಬಹು ದೊಡ್ಡ ಖಾಯಿಲೆಯಾಗಿದ್ದಿತು. ಸಹೋದರಿಯ ಹೆಸರಿನಲ್ಲಿ

ಮೈಸೂರು ನಗರದ ಹೊರಭಾಗದಲ್ಲಿ 1918ರಲ್ಲಿ ಪಿ.ಕೆ. ಸ್ಯಾನಿಟೋರಿಯಂ (ಪ್ರಿನ್ಸೆಸ್ ಕೃಷ್ಣರಾಜಮ್ಮಣ್ಣಿ ಕ್ಷಯರೋಗ ಆಸ್ಪತ್ರೆ) ಎಂಬ ಆಸ್ಪತ್ರೆಯನ್ನು ಕಟ್ಟಿಸಿ ಸಾರ್ವಜನಿಕರಿಗಾಗಿ ಲೋಕಾರ್ಪಣೆ ಮಾಡಿದರು. ಅದೇರೀತಿ ಮೈಸೂರು ನಗರದಲ್ಲಿ ಕೃಷ್ಣ ರಾಜೇಂದ್ರ ಆಸ್ಪತ್ರೆ (ಕೆ.ಆರ್. ಆಸ್ಪತ್ರೆ) ವಾಣಿ ವಿಲಾಸ ಆಸ್ಪತ್ರೆ, ಬೆಂಗಳೂರಿನಲ್ಲಿ ನರರೋಗದ ಆಸ್ಪತ್ರೆ, 1930ರಲ್ಲಿ ಕೆ.ಆರ್. ಆಸ್ಪತ್ರೆಯಲ್ಲಿ 'ಜನನ ನಿಯಂತ್ರಣ' ವಿಭಾಗ ತೆರೆದರು. ಇದು ರಾಷ್ಟ್ರದಲ್ಲೇ ಪ್ರಪ್ರಥಮ ಪ್ರಯೋಗವೆಂದು ಬಣ್ಣಿಸಲಾಗಿದೆ. ಪ್ರತಿವರ್ಷ ಆರೋಗ್ಯವಂತ ಮಗುವಿನ ಪ್ರದರ್ಶನ ಹಾಗೂ ಅಂತಹ ಮಗುವಿಗೆ ಹಾಗೂ ಪೋಷಕರಿಗೆ ಬಹುಮಾನ ಕೊಡುವುದರ ಮೂಲಕ ಉತ್ತೇಜಿಸಲಾಗುತ್ತಿತ್ತು. ಅಂದಿನ ಕಾಲದಲ್ಲಿ ಸಾಂಕ್ರಾಮಿಕ ರೋಗ ಹರಡುತ್ತಿತ್ತು. ಈ ರೋಗಕ್ಕೆ ಲಕ್ಷಾಂತರ ಜನ ಬಲಿಯಾಗುತ್ತಿದ್ದರು. ಇದನ್ನು ತಪ್ಪಿಸಲು ಆಗಿಂದಾಗ್ಗೆ ಆರೋಗ್ಯ ತಪಾಸಣೆ, ಉಚಿತ ವೈದ್ಯಕೀಯ ಸೌಲಭ್ಯ ಒದಗಿಸುವ ಮೂಲಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಅಂದು ನುರಿತ ವೈದ್ಯರ ಕೊರತೆ ಅತ್ಯಧಿಕವಾಗಿತ್ತು. ಇದನ್ನು ನಿವಾರಿಸಲು ಹೊರ ರಾಜ್ಯಗಳಿಂದ ವೈದ್ಯರನ್ನು ಕರೆಸಿಕೊಂಡು ಅವರಿಂದ ಎರವಲು ಸೇವೆಯನ್ನು ಪಡೆಯಲಾಗುತ್ತಿತ್ತು. ದಿವಾನರಾಗಿದ್ದ ಕಾಂತರಾಜ ಅರಸರು ನಾಲ್ವಡಿ ಕೃಷ್ಣರಾಜ ಒಡೆಯರ ಸೋದರಮಾವನವರಾಗಿದ್ದರು. ಇವರು ದಿವಾನರಾಗಿದ್ದ ವೇಳೆ ಗರ್ಭಿಣಿ ಮತ್ತು ಶಿಶು ಸಂರಕ್ಷಣೆಯ ಅಗತ್ಯವನ್ನು ಅರಿತಿದ್ದರು. ಕಾರಣವೆಂದರೆ ಅಂದಿನ ಕಾಲದಲ್ಲಿ ಸೂಕ್ತ ವೈದ್ಯರ ಉಪಚಾರವಿಲ್ಲದೆ ತಾಯಿ ಇಲ್ಲವೆ ಮಗು ಸಾವನ್ನಪ್ಪುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಇದನ್ನು ತಪ್ಪಿಸಲು 1923ರಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿ ಮಹಾರಾಜರ ಮಾರ್ಗದರ್ಶನದಲ್ಲಿ ಒಂದು ದತ್ತಿ ಸ್ಥಾಪಿಸಿದರು. ಅದರಿಂದ ಬರುವ ಬಡ್ಡಿಯ ಹಣದಲ್ಲಿ ತಾಯಿ ಮತ್ತು ಮಗುವಿನ ರಕ್ಷಣೆಗೆ ಅವಕಾಶ ನೀಡಿದರು. 1924ರಲ್ಲಿ ದೇವರಾಜ ಮಾರುಕಟ್ಟೆಯ ದಕ್ಷಿಣ ಭಾಗದ ಒಂದು ಕಟ್ಟಡದಲ್ಲಿ ಕಾಂತರಾಜ ಅರಸರ ತಾಯಿಯವರಾದ ಶ್ರೀಮತಿ ಗುಣಾಂಬರವರ ನೆನಪಿಗಾಗಿ ಒಂದು ಆಸ್ಪತ್ರೆ ನಿರ್ಮಾಣವಾಯಿತು.

1935ರಲ್ಲಿ ಶ್ರೀ ವಾಣಿವಿಲಾಸ ಹೆರಿಗೆ ಆಸ್ಪತ್ರೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಅಂದು ಭಾರತದ ವೈಸ್‌ರಾಯರಾಗಿದ್ದ ಲಾರ್ಡ್ ಮಿಂಟೋರವರ ಸವಿನೆನಪಿಗಾಗಿ ಬೆಂಗಳೂರಿನಲ್ಲಿ ಮಿಂಟೊ ಕಣ್ಣಿನ ಆಸ್ಪತ್ರೆಯನ್ನೂ ತೆರೆದರು. ಶಿವಮೊಗ್ಗದಲ್ಲಿ ಮೆಗ್ಗನ್‌ರವರ ಹೆಸರಿನಲ್ಲಿ 'ಮೆಗ್ಗನ್ ಆಸ್ಪತ್ರೆ'ಯನ್ನು ನಿರ್ಮಿಸಿದರು. ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಕೆ.ಸಿ. ಜನರಲ್ ಆಸ್ಪತ್ರೆ (ಕೆಂಪುಚಲುವರಾಜಮ್ಮಣ್ಣಿ ಆಸ್ಪತ್ರೆ).

ಮೈಸೂರು ಸೇರಿದಂತೆ ರಾಜ್ಯದ ನಾನಾ ಕಡೆ ಸಾರ್ವಜನಿಕ ಉದ್ಯಾನವನಗಳನ್ನು ನಿರ್ಮಿಸಲಾಯ್ತು. ಮೈಸೂರಿನಲ್ಲಿ ಕರ್ಜನ್ ಪಾರ್ಕ್, ನಿಷದ್‌ಭಾಗ್, ಕೃಷ್ಣರಾಜ ಸಾಗರದಲ್ಲಿ ಬೃಂದಾವನ ನಿರ್ಮಾಣ, ಶ್ರೀರಂಗಪಟ್ಟಣದಲ್ಲಿ ದರಿಯಾ ದೌಲತ್, ಬೆಂಗಳೂರಿನಲ್ಲಿ ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಇವೇ ಮುಂತಾದವು ಕಳೆಕಟ್ಟಿದವು. ಇವುಗಳ ಹಿಂದೆ ಜರ್ಮನಿಯಿಂದ ಮೈಸೂರು ರಾಜ್ಯಕ್ಕೆ ಎರವಲು ಸೇವೆಗೆಂದು ಬಂದಿದ್ದ ಬೆಂಗಳೂರಿನ ಲಾಲ್‌ಬಾಗ್‌ನ ನಿರ್ದೇಶಕರಾಗಿದ್ದ ಶ್ರೀಯುತ ಕ್ರುಂಬಿಗಲ್ ಸಾಹೇಬರು, ಶ್ರೀಯುತ ಹೆಚ್.ಸಿ. ಜವರಾಯರವರ ಸೇವೆಯನ್ನು ಮರೆಯುವಂತಿಲ್ಲ. ಕೃಷ್ಣರಾಜಸಾಗರದ ಆ ಸುಂದರವಾದ ಉದ್ಯಾನವನದ ಅದ್ಭುತವಾದ ಲ್ಯಾಂಡ್‌ಸ್ಕೇಪ್‌ನ ಪರಿಕಲ್ಪನೆ ಶ್ರೀ ಹೆಚ್.ಸಿ. ಜವರಾಯರವರದು. ಕೃಷ್ಣರಾಜಸಾಗರ ಇರುವ ತನಕ ಅಲ್ಲಿನ ಉದ್ಯಾನವನ ಇರುತ್ತದೆ. ಅದು ಅಷ್ಟರಮಟ್ಟಿಗೆ ನಿರ್ಮಾಣಗೊಂಡಿದೆ. ಭಾರತದ ಚಿತ್ರೋದ್ಯಮದಲ್ಲಿ ಕೆ.ಆರ್.ಎಸ್.ನ ಬೃಂದಾವನ ಉದ್ಯಾನ ಹಾಸು ಹೊಕ್ಕಾಗಿದೆ.

ಕೃಷ್ಣರಾಜರ ಕಾಲದ ಲಲಿತಕಲೆಗಳು

ನಾಲ್ವಡಿ ಕೃಷ್ಣರಾಜರನ್ನು ವಿಜಯನಗರದ ಸಾಮ್ರಾಟನಾಗಿದ್ದ ಕೃಷ್ಣದೇವರಾಯನಿಗೆ ಹೋಲಿಸಬಹುದು. ಕೃಷ್ಣರಾಜರಿಗೆ ಕಲೆ, ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಕ್ರೀಡೆ ಇವೇ ಮುಂತಾದವುಗಳಲ್ಲಿ ಆಸಕ್ತಿ ಇದ್ದಿತು. ಇವರು ಕಲಾ ಪೋಷಕರು, ಕಲಾಭಿಮಾನಿಗಳೂ ಆಗಿದ್ದರು. ಕವಿಗಳಿಗೆ, ವಿದ್ವಾಂಸರಿಗೆ ಗೌರವ ಸಲ್ಲಿಸುತ್ತಿದ್ದುದೇ ಅಲ್ಲದೆ ಅವರಿಗೆ ರಾಜಾಶ್ರಯವನ್ನು ನೀಡುತ್ತಿದ್ದರು. 1915ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದುದನ್ನು ನೋಡಿದರೆ ಎಂತಹವರಿಗೂ ಅರ್ಥವಾಗುತ್ತದೆ ಅವರಿಗೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಇದ್ದ ಕಾಳಜಿ.

ಇವರ ಆಸ್ಥಾನದಲ್ಲಿ ಕರಿಬಸವಶಾಸ್ತ್ರಿಗಳು, ಕರಿಗಿರಿರಾಯರು, ವೆಂಕಟರಾಮಾಶಾಸ್ತ್ರಿಗಳು, ಲಿಂಗರಾಜ ಕವಿಗಳು ಆಶ್ರಯ ಪಡೆದಿದ್ದರು. ಇವರು ಹಲವಾರು ಕೃತಿಗಳನ್ನು ರಚಿಸಿದರು. ಅಂದಿನ ಕಾಲದಲ್ಲಿ ಇಂದಿನಂತೆ ಹೇರಳವಾಗಿ ಮನರಂಜನೆ ಇರಲಿಲ್ಲ. ಸಂಗೀತ, ನೃತ್ಯ ಇವೇ ಮುಂತಾದವುಗಳಿಗೆ ಬೇಡಿಕೆ ಇತ್ತು. ವೀಣೆ ಶೇಷಣ್ಣನವರನ್ನು 'ವೈಣಿಕ ಶಿಖಾಮಣಿ' ಎಂದೇ ಕರೆಯಲಾಗುತ್ತಿತ್ತು. ಸುಬ್ಬಣ್ಣನವರು, ಬಿಡಾರದ ಕೃಷ್ಣಪ್ಪನವರು, ಸಂಗೀತರತ್ನಾಕರ ವಾಸುದೇವಾಚಾರ್ಯ, ಮೈಸೂರು ಟಿ. ಚೌಡಯ್ಯ (ಪಿಟೀಲು ಚೌಡಯ್ಯ)

ಚಿತ್ರಕಾರ ವೆಂಕಟಪ್ಪ, ರಾಜಾ ರವಿವರ್ಮ, ಕೇಶವಯ್ಯ ಇವರೇ ಮುಂತಾದವರಿಂದಾಗಿ ಆಸ್ಥಾನಕ್ಕೆ ಒಂದು ರೀತಿಯ ಘನತೆ ಗೌರವ ಕಳೆಕಟ್ಟುತ್ತಿತ್ತು. ಇಂತಹ ಸಾಧಕರಿಗೆ ಅರಸರು ಎಂದಿಗೂ ಕೊರತೆ ಮಾಡುತ್ತಿರಲಿಲ್ಲ. ಅರಮನೆಯಿಂದ ಸಿಗಬಹುದಾದ ಎಲ್ಲಾ ಸವಲತ್ತುಗಳು ದೊರೆಯುತ್ತಿತ್ತು. ಅಂದು ಅರಮನೆಯ ವಿದ್ವಾಂಸರೆಂದರೆ ಸಮಾಜದಲ್ಲಿ ಗೌರವವಾದ ಸ್ಥಾನಮಾನವಿದ್ದಿತು. ವೆಂಕಟಪ್ಪ ಮತ್ತು ರಾಜಾರವಿವರ್ಮರು ಅರಸರ ಮನೆದೇವರಾದ ಚಾಮುಂಡೇಶ್ವರಿ ಸೇರಿದಂತೆ ಹಲವಾರು ಹಿಂದೂ ದೇವತೆಗಳ ಕೃತಿಗಳನ್ನು ರಚಿಸಿದರು. ಮುತ್ತಯ್ಯ ಭಾಗವತರಿಗೆ ಆಸ್ಥಾನದಲ್ಲಿ ಒಳ್ಳೆಯ ಸ್ಥಾನಮಾನವಿದ್ದಿತು. ಮಹಾರಾಜರು ಅವರಿಗೆ 'ಗಾಯಕ ಶಿಖಾಮಣಿ' ಎಂಬ ಬಿರುದನ್ನು ದಯಪಾಲಿಸಿದ್ದರು. ಅದೇರೀತಿ ವೀಣೆ ಶೇಷಣ್ಣನವರು ಸಾಮಾನ್ಯ ವ್ಯಕ್ತಿಯಲ್ಲ. ಅವರ ವೀಣಾನಾದನದಿಂದ ಮೈಸೂರಿನ ಹೆಸರನ್ನು ದಕ್ಷಿಣ ಭಾರತದಾದ್ಯಂತ ಪಸರಿಸುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಪಿಟೀಲು ಚೌಡಯ್ಯನವರು ಏಳು ತಂತಿಗಳನ್ನು ತಮ್ಮ ಪಿಟೀಲಿಗೆ ಅಳವಡಿಸಿಕೊಂಡು ಇಡೀ ಭಾರತದಲ್ಲಿ ಹೊಸ ನಮೂನೆಯ ವಾದ್ಯ ಸಂಗೀತವನ್ನು ತಯಾರಿಸಿದ್ದರು. ಸಂಗೀತ ವಿದ್ವಾಂಸರಾದ ಬಿ. ದೇವೇಂದ್ರಪ್ಪ ಹಿಂದೂಸ್ಥಾನಿ ಗಾಯಕರಲ್ಲಿ ಫಯಾಜ್‌ಖಾನ್, ಉಸ್ತಾದ್ ಅಬ್ದುಲ್ ಕರೀಂಖಾನ್, ಪಟ್ನಂ ಸುಬ್ರಹ್ಮಣ್ಯ ಅಯ್ಯರ್, ಕೃಷ್ಣ ಅಯ್ಯರ್, ಸಾಂಬಯ್ಯ, ಟೈಗರ್ ವರದಾಚಾರ್, ವೀಣಾಧನಮ್ಮಾಳ್, ಅರಿಯಕುಡಿ ರಾಮಾನುಜಯ್ಯಂಗಾರ್, ಕೃಷ್ಣಾಚಾರ್, ಗಾಯಕಿಯರಾದ ಇಂದೂಬಾಲಾ ಮತ್ತು ಗೋಹರ್‌ಜಾನ್ ಇವರೇ ಮುಂತಾದವರು ಒಡೆಯರ ಆಸ್ಥಾನವನಲಂಕರಿಸಿದ್ದರು. ವಿದ್ವಾಂಸರಿಗೆ ಸಂಬಳ, ಸಾರಿಗೆ ಇತರೆ ಸೌಲಭ್ಯಗಳೇ ಅಲ್ಲದೆ ಅವರನ್ನು ಮತ್ತಷ್ಟು ಉತ್ತೇಜಿಸುವ ಉದ್ದೇಶದಿಂದ ಅವರಿಗೆ ಸಂಗೀತ ಕಲಾನಿಧಿ, ವೈಣಿಕ ಶಿಖಾಮಣಿ, ಸಾಹಿತ್ಯರತ್ನ, ವಿದ್ಯಾನಿಧಿ, ಪಂಡಿತರತ್ನ, ಗಾನವಿಶಾರದ, ಗಾನಕೋಗಿಲೆ ಇವೇ ಮುಂತಾದ ಬಿರುದು ಬಾವಲಿಗಳನ್ನು ನೀಡುತ್ತಿದ್ದರು. ಇಂತಹ ಕಲಾವಿದರ ಗಾನವನ್ನು ಸಾರ್ವಜನಿಕರೂ ತಿಳಿಯಬೇಕೆಂಬ ಉದ್ದೇಶ ಕೃಷ್ಣರಾಜರಲ್ಲಿತ್ತು. ಅದಕ್ಕಾಗಿ ಸಂಗೀತಗೋಷ್ಠಿ, ಕವಿಗೋಷ್ಠಿ, ವಾದ್ಯಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. ದಸರಾ ಉತ್ಸವ ಸಮಯದಲ್ಲಂತೂ ಒಂದೂವರೆ ತಿಂಗಳ ಕಾಲ ಸಾರ್ವಜನಿಕರಿಗೆ ಸಂಗೀತದ ರಸದೌತಣವಾಗುತ್ತಿತ್ತು. ಅದನ್ನು ಕಣ್ಣಾರೆ ಕಂಡು ಕೇಳಲು ರಾಜ್ಯದ ನಾನಾ ಭಾಗಗಳೇ ಅಲ್ಲದೆ ಹೊರ ರಾಜ್ಯಗಳಿಂದಲೂ ಬಂದು ನೆರೆಯುತ್ತಿದ್ದರು. (ಈಗಲೂ ದಸರಾ ನೋಡಲು ಹೊರ ರಾಜ್ಯ ಮತ್ತು ಹೊರ ದೇಶಗಳಿಂದ ಬರುತ್ತಾರೆ.) ಇಷ್ಟೇ ಅಲ್ಲದೆ ದೇಶೀಯ ಹಾಗೂ ಇಂಗ್ಲೀಷ್ ಬ್ಯಾಂಡ್ ಬಾರಿಸುವ ತಂಡಗಳಿದ್ದವು. ಇಷ್ಟೇ ಅಲ್ಲದೆ ಅತ್ಯುತ್ತಮ ನಾಟಕಕಾರರ ತಂಡವು 'ಅರಮನೆ

ನಾಟಕ ತಂಡ'ವೆಂಬ ಹೆಸರಿನಲ್ಲಿ ನಾಟಕ ಕಾರ್ಯಕ್ರಮ ನಡೆಸಿಕೊಡುತ್ತಾ ಹೊರ ರಾಜ್ಯ ಮತ್ತು ಹೊರ ದೇಶಗಳಿಂದ ಅರಮನೆಗೆ ಬರುವ ಅತಿಥಿಗಳಿಗೆ ಮನರಂಜನೆ ಒದಗಿಸುತ್ತಿದ್ದರು.

ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಾಗಿ ಮಾಡಿದ ಕಾನೂನು ಕಟ್ಟಳೆಗಳು

ಸಾಮಾಜಿಕ ರೋಗ ರುಜಿನಗಳು ಎಂದು ಕರೆಸಿಕೊಳ್ಳುವ ಬಾಲ್ಯವಿವಾಹ, ಸತಿಪದ್ಧತಿ, ದೇವದಾಸಿ ಪದ್ದತಿ, ವೇಶ್ಯಾವಾಟಿಕೆ, ನರಬಲಿ ಇವೇ ಮುಂತಾದ ಅನಿಷ್ಟ (ಇಷ್ಟವಿಲ್ಲದ್ದು) ಪದ್ದತಿಗಳನ್ನು ನಿರ್ಮೂಲನೆ ಮಾಡಿ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಕೃಷ್ಣರಾಜರು ಅಹರ್ನಿಷಿ ದುಡಿದರು. ಅದಕ್ಕಾಗಿ ಕೆಲವಾರು ಕಾನೂನು ಕಟ್ಟಳೆಗಳನ್ನು ಮಾಡಿದರು. ಎಷ್ಟೇ ಅಡೆತಡೆ, ವಿರೋಧಗಳು ಬಂದರೂ ಲೆಕ್ಕಿಸದೆ ತಮ್ಮ ಗುರಿಯನ್ನು ಮುಟ್ಟಿದರು.

1909ರ ದೇವದಾಸಿ ನಿಷೇಧ ಕಾನೂನು

ದೇವದಾಸಿ ಪದ್ದತಿಯು ನಿಜಕ್ಕೂ ಸುಸಂಸ್ಕೃತ ಸಮಾಜವು ತಲೆ ತಗ್ಗಿಸುವಂತಹ ವಿಷಯವಾಗಿದೆ. ದೇವದಾಸಿ ಪದ್ದತಿ ಎನ್ನುವುದು ಸಾಕ್ಷರರು, ಸಮಾಜದ ಬಲಿಷ್ಠ ಜನ ನಿರಕ್ಷರ ಕುಕ್ಷಿಗಳನ್ನು ಮತ್ತು ದೀನದಲಿತರನ್ನು ಲೈಂಗಿಕವಾಗಿ ಶೋಷಣೆ ಮಾಡಲು ಹಾಕಿಕೊಂಡಿರುವ ಮಾರ್ಗವೇ ದೇವದಾಸಿ ಪದ್ದತಿ. ದೇವದಾಸಿ ಇಲ್ಲವೆ 'ಬಸವಿ' ಬಿಡುವ ಪದ್ಧತಿಯು ಸಮಾಜಕ್ಕೆ ಒಂದು ಕಪ್ಪುಚುಕ್ಕಿ ಎಂದು ತೀರ್ಮಾನಿಸಿದ ಕೃಷ್ಣರಾಜರು ಅದನ್ನು ನಿರ್ಮೂಲನ ಮಾಡಲು 1909ರಲ್ಲಿ ದೇವದಾಸಿ ನಿಷೇಧ ಕಾನೂನನ್ನು ಜಾರಿಗೆ ತಂದು, ದೇವದಾಸಿ ಪದ್ದತಿಯನ್ನು ಪ್ರೋತ್ಸಾಹಿಸುವುದು ಶಿಕ್ಷಾರ್ಹ ಅಪರಾಧವೆಂದು ಘೋಷಿಸಿದರು.

ವೇಶ್ಯಾವೃತ್ತಿ ನಿಷೇಧಾಜ್ಞೆ ಕಾನೂನು

ವೇಶ್ಯಾವೃತ್ತಿ ಎಂಬುದು ಅನಾದಿ ಕಾಲದಿಂದಲೂ ತೆರೆಯ ಮರೆಯಲ್ಲಿ ನಡೆಯುತ್ತಿರುವ ವ್ಯವಹಾರ ಇದಾಗಿದೆ. ರಾಜಮಹಾರಾಜರು, ಮಂತ್ರಿಗಳು, ಪಾಳೆಯಗಾರರು ಕಡೆಗೆ ಸಮಾಜದ ಕೆಳಸ್ತರ ವ್ಯಕ್ತಿಯೂ ತನ್ನ ಕಾಮತೃಷೆಗೆ ಅಬಲೆಯಾದ ಹೆಣ್ಣನ್ನು ಬಳಸಿಕೊಂಡರು. (ಬಡತನ, ನಿರುದ್ಯೋಗ, ವಿದವೆ, ಅಬಲೆಯರನ್ನು ಗುರಿಯಾಗಿಸಿಕೊಂಡು) ಅಂತಹವರನ್ನು ವೇಶ್ಯಾವಾಟಿಕೆಗೆ ತಳ್ಳುತ್ತಿದ್ದರು. ಇದು ಮೈಸೂರು ರಾಜ್ಯದಲ್ಲಿ ಮಾತ್ರವಲ್ಲ ಮುಂಬೈ, ಕಲ್ಕತ್ತಾದಂತಹ ಬೃಹತ್ ಮಹಾನಗರಗಳಲ್ಲೂ ಅವ್ಯಾಹತವಾಗಿ ನಡೆಯುತ್ತಿತ್ತು. ಇದು ಮೈಸೂರು ರಾಜ್ಯಕ್ಕೆ ಕಪ್ಪುಚುಕ್ಕೆಯಾಗಿ ಕಂಡಿತು.

ಕೃಷ್ಣರಾಜರು 1936 ಜುಲೈ 14ರಂದು ವೇಶ್ಯಾವೃತ್ತಿ ತಡೆಯಲು ವೇಶ್ಯಾವೃತ್ತಿ ನಿಷೇಧ ಕಾನೂನನ್ನು (Supperessing Immoral Traffic Act) ಜಾರಿಗೆ ತಂದರು. ವೇಶ್ಯಾವೃತ್ತಿಯನ್ನು ಪ್ರೋತ್ಸಾಹಿಸುವವರಿಗೆ, ಅದರಲ್ಲಿ ತೊಡಗಿರುವವರಿಗೆ ಎರಡು ತಿಂಗಳು ಕಾರಾಗೃಹ ಹಾಗೂ ಇನ್ನೂರು ರೂಪಾಯಿ ದಂಡ ವಿಧಿಸಿದರು.

ಕುಡಿತ ಮತ್ತು ಧೂಮಪಾನ ನಿಷೇಧ ಕಾನೂನು

ನಾಲ್ವಡಿ ಕೃಷ್ಣರಾಜರು ಎಷ್ಟು ದೂರದೃಷ್ಟಿಯುಳ್ಳ ಆಡಳಿತಗಾರರಾಗಿದ್ದರೆಂದರೆ ಸಾರ್ವಜನಿಕ ಆರೋಗ್ಯದ ಬಗ್ಗೆ ತುಂಬು ಕಾಳಜಿ ಹೊಂದಿದ್ದರು. ಬಡವರು ದೀನದಲಿತರು ಇಂತಹ ದುಶ್ಚಟಗಳಿಗೆ ಬಲಿಯಾಗುತ್ತಾರೆ. ಇದರಿಂದಾಗಿ ಬಡವರು ದಿನೇದಿನೆ ಬಡತನದ ರೇಖೆಗಿಂತ ಕೆಳಗಿಳಿಯುತ್ತಾರೆ ಎಂದು ತಿಳಿದು 1911 ಅಕ್ಟೋಬರ್ 19ರಂದು 'ಕುಡಿತ ಮತ್ತು ಧೂಮಪಾನ ನಿಷೇಧ ಕಾಯ್ದೆ'ಯನ್ನು ಜಾರಿಗೆ ತಂದರು. ಇಪ್ಪತ್ತೊಂದನೆಯ ಶತಮಾನದಲ್ಲಿ ಅಂದರೆ ಇತ್ತೀಚಿನ ವರ್ಷಗಳಲ್ಲಿ ಭಾರತ ಸರ್ಕಾರವು ಇಂತಹ ಕಾನೂನನ್ನು ಜಾರಿಗೆ ತಂದಿದೆ. ಆದರೆ ನಮ್ಮ ಮಹಾಪ್ರಭುಗಳು ಎಷ್ಟೋ ದಶಕಗಳ ಹಿಂದೆ ಇಂತಹ ಕಾನೂನನ್ನು ಜಾರಿಗೆ ತಂದು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಯಶಸ್ವಿಯಾದರು.

ಹಿಂದೂ ಸ್ತ್ರೀಯರ ಹಕ್ಕುಗಳ ರಕ್ಷಣಾ ಕಾಯ್ದೆ

ಅನಾದಿ ಕಾಲದಿಂದಲೂ ಪುರುಷ ಪ್ರಧಾನ ಸಮಾಜವಾದ ನಮ್ಮ ಸಮಾಜ ಮಹಿಳೆ ಅಬಲಲು, ಅಶಕ್ತಳು, ಮಕ್ಕಳನ್ನು ಅಡೆಯುವುದೇ ಅವಳ ಧರ್ಮ, ಅಡುಗೆಮನೆಯೇ ಅವಳ ಸಾಮ್ರಾಜ್ಯ ಹೆಣ್ಣು ಮನೆಯಿಂದ ಹೊರಗೆ ಬರಬಾರದು ಇತ್ಯಾದಿ ನಿಯಮಗಳನ್ನು ಹೇರಿ ಆಕೆಯ ಹಕ್ಕುಗಳನ್ನು ನಿರ್ಬಂಧಿಸಿದ್ದರು. ಪಿತ್ರಾರ್ಜಿತ ಆಸ್ತಿಯಲ್ಲಿ ಆಕೆಗೆ ಆಸ್ತಿ ಸಿಗದಂತೆ ಮಾಡಿದ್ದರು. ಆದರೆ ಕೃಷ್ಣರಾಜರು 1933 ಜೂನ್ 29ರಂದು ಹಿಂದೂ ಸ್ತ್ರೀಯರ ಹಕ್ಕುಗಳ ರಕ್ಷಣಾ ಕಾಯ್ದೆಯನ್ನು ಜಾರಿಗೆ ತರುವುದರ ಮೂಲಕ ಸ್ತ್ರೀಯರ ಹಕ್ಕುಗಳನ್ನು ರಕ್ಷಿಸಲು ನೆರವಾದರು. ಕಾಲಾನಂತರ ಪ್ರಜಾಪ್ರಭುತ್ವ ಸರ್ಕಾರಗಳು 1955ರಲ್ಲಿ ಹಾಗೂ ನಂತರದ ವರ್ಷಗಳಲ್ಲಿ ಸ್ತ್ರೀಯರಿಗೂ ಪುರುಷರಷ್ಟೇ ಸಮಾನ ಹಕ್ಕುಗಳನ್ನು ನೀಡುವ ಕಾಯ್ದೆಯನ್ನು ರೂಪಿಸಿತು.

ತೀರ್ಥಯಾತ್ರೆ ಮತ್ತು ವಿದೇಶ ಯಾತ್ರೆ

ಕೃಷ್ಣರಾಜರು ಬಹಳ ಸಂಪ್ರದಾಯಸ್ಥರು ದೇವರಲ್ಲಿ ನಂಬಿಕೆಯಿಟ್ಟಿದ್ದರು. 1931ರ ಸಮಯದಲ್ಲಿ ಕಾಶಿ, ವಾರಣಾಸಿ, ಬನಾರಸ್‌ಗಳಿಗೆ ಭೇಟಿಕೊಟ್ಟು ಅಲ್ಲಿನ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದರು. ಕೈಲಾಸ ಕ್ಷೇತ್ರಕ್ಕೆ ಭೇಟಿ ನೀಡಿ ಹಿಮಚ್ಛಾದಿತ ಪರ್ವತ ಶಿಖರಗಳಿಂದ ಕೂಡಿದ ಪರ್ವತವನ್ನು ನೋಡಿ ಆನಂದಿಸಿದರು.

ಕೃಷ್ಣರಾಜರು ಯೂರೋಪಿಗೆ ಭೇಟಿ ನೀಡುವ ಉದ್ದೇಶದಿಂದ ಪ್ರವಾಸ ಕೈಗೊಂಡರು. ದೂರದ ಇಂಗ್ಲೆಂಡ್, ಫ್ರಾನ್ಸ್, ನೆದರ್‌ಲ್ಯಾಂಡ್‌ಗಳಿಗೆ ಭೇಟಿ ನೀಡಿದರು. ಲಂಡನ್‌ನಲ್ಲಿದ್ದಾಗ ಇಂಗ್ಲೆಂಡಿನ ದೊರೆ ಎಂಟನೇ ಎಡ್ವರ್ಡ್‌ರವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿದರು. ಕೃಷ್ಣರಾಜರಿಗಾಗಿ ಬಕಿಂಗ್ ಹ್ಯಾಮ್ ಪ್ಯಾಲೇಸ್‌ನಲ್ಲಿ ಔತಣಕೂಟವನ್ನು ಎಡ್ವರ್ಡ್‌ರು ಏರ್ಪಡಿಸಿದ್ದರು. ಕೃಷ್ಣರಾಜರು ಹೋದಲೆಲ್ಲಾ ಅಲ್ಲಿನ ಜನ ಗೌರವದಿಂದ ನಡೆಸಿಕೊಂಡರು. ಯೂರೋಪ್ ಪ್ರವಾಸದಿಂದ ಸುರಕ್ಷಿತವಾಗಿ ಹಿಂತಿರುಗಿದರು.

ಒಡೆಯರು ಎಂತಹ ದಯಾಮಯರು ಎಂದರೆ ಲಂಡನ್‌ನಲ್ಲಿದ್ದಾಗ ಕುರುಡರು ಬಳಸುವ ಗಡಿಯಾರವು ಅವರನ್ನು ಆಕರ್ಷಿಸಿತು. ಅದನ್ನು ಕೊಂಡು ತಂದು ಕುರುಡು ಪಿಟೀಲು ವಾದಕ ಶಿವರುದ್ರಪ್ಪ ಎಂಬುವವರಿಗೆ ಅದನ್ನು ದಾನ ಮಾಡಿದರು. ಅದು ಅಂದು ವಿಶೇಷವು ಸೋಜಿಗದ ವಸ್ತುವೂ ಆಗಿದ್ದಿತು. ಶಿವರುದ್ರಪ್ಪನವರು ಸಂತೋಷಭರಿತರಾಗಿ ತಮ್ಮನ್ನೇ ತಾವು ನಂಬದಾದರು.

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಒಡೆಯರ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ನೆಲೆಸಿದ್ದಾರೆ. 1902ರಿಂದ 1940 ಅಂದರೆ 38 ವರ್ಷಗಳ ಕಾಲ ಮೈಸೂರಿನ ಒಡೆಯರಾಗಿ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ದಕ್ಷರಾದ ದಿವಾನರುಗಳನ್ನು ಆಯ್ಕೆ ಮಾಡಿ ಅವರಿಂದ ಉತ್ತಮವಾಗಿ ಕೆಲಸವಾಗುವಂತೆ ನೋಡಿಕೊಂಡರು. ಬಹಳ ಹಿಂದೆ ಶಿವಾಜಿಯ ಮರಣಾನಂತರ ಮರಾಠರು ಅವನತಿಯ ಹಾದಿ ಹಿಡಿದಿದ್ದರು. ಛತ್ರಪತಿ ಸಾಹುವು ದಕ್ಷರಾದ ಬಾಲಾಜಿ ವಿಶ್ವನಾಥ್, ಬಾಜಿರಾವ್ ಹಾಗೂ ಬಾಲಾಜಿ ಬಾಜಿರಾವ್‌ರನ್ನು ನೇಮಿಸಿ ಅವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ಕೊಟ್ಟರಷ್ಟೆ. ಅವರುಗಳಿಂದಾಗಿ ಮರಾಠರು ಇಡೀ ದೇಶವನ್ನೇ ವ್ಯಾಪಿಸಿಕೊಂಡರು. 1761ರಲ್ಲಿ ನಡೆದ ಮೂರನೆ ಪಾಣಿಪತ್ ಕದನದಿಂದಾಗಿ ಅವನತಿ ಹೊಂದಿದರು. ಹಾಗೆ ನಾಲ್ವಡಿ ಕೃಷ್ಣರಾಜ ಒಡೆಯರು ದಕ್ಷರಾದ ದಿವಾನರುಗಳನ್ನು ನೇಮಿಸಿ ಅವರಿಗೆ ಸಲಹೆ ಸಹಕಾರ ನೀಡಿದುದೇ ಅಲ್ಲದೆ ಪ್ರಗತಿಪರ ಕೆಲಸಕ್ಕೆ ಸಾಕಷ್ಟು ಹಣ ಒದಗಿಸುತ್ತಿದ್ದರು. ಆ ಸಂದರ್ಭದಲ್ಲಿ ಭಾರತದಲ್ಲಿ ಐನೂರ ಅರವತ್ತಕ್ಕೂ ಹೆಚ್ಚು ಜನ ದೊರೆಗಳಿದ್ದರು. ಅವರಲ್ಲಿ

ಅನೇಕರು ಸುಖಲೋಲಪರಾಗಿ ಕಾಲಕಳೆದರೆ ಮತ್ತೆ ಕೆಲವರು ಮೋಜಿನ ಜೀವನಕ್ಕೆ ಹಣ ವ್ಯಯ ಮಾಡುತ್ತಿದ್ದರು. ಕೆಲವರಂತೂ ತಮ್ಮ ಮೆಚ್ಚಿನ ನಾಯಿಗಳ ಮದುವೆಗೆ ಹಣ ಖರ್ಚು ಮಾಡಿರುವುದೂ ಉಂಟು. ಆದರೆ ಶ್ರೀಕೃಷ್ಣರಾಜ ಒಡೆಯರು ಮೈಸೂರು ರಾಜ್ಯವನ್ನು ಪ್ರಗತಿಪರ ರಾಜ್ಯವನ್ನಾಗಿಸಿದರು. ಮಹಾತ್ಮ ಗಾಂಧೀಜಿಯವರು ಕೃಷ್ಣರಾಜರನ್ನು **'ರಾಜಋಷಿ'** ಎಂದು ಕರೆದದ್ದು ನಿತ್ಯಸತ್ಯ. ಕಡೆಯದಾಗಿ ಹೇಳುವುದಾದರೆ ಬಹಳಷ್ಟು ಲೇಖಕರು ದಿವಾನರಿಂದಲೇ ಏನೆಲ್ಲ ಸಾಧ್ಯವಾಯಿತು ಎಂದು ವೈಭವೀಕರಿಸಿದರೇ ಪರಂತು ಕೃಷ್ಣರಾಜರಿಂದ ಆದದ್ದು ಎಂದು ವಾಸ್ತವ ಸಂಗತಿಯನ್ನು ತಿಳಿಸಲಿಲ್ಲ. ಜನರು ಹಾಗೂ ಸರ್ಕಾರ ಮಾತ್ರ ಮರೆಯದೇ ಮಂಡ್ಯ ಜಿಲ್ಲೆಯ ಹತ್ತಿಗುಪ್ಪೆಯನ್ನು ಕೃಷ್ಣರಾಜಪೇಟೆ ಕೆ.ಆರ್. ಪೇಟೆ, ಕೆ.ಆರ್. ನಗರ ಕೃಷ್ಣರಾಜ ನಗರ ಕನ್ನಂಬಾಡಿ ಕಟ್ಟೆಗೆ– 'ಕೃಷ್ಣರಾಜ ಸಾಗರ' ಎಂತಲೂ ಕೃಷ್ಣರಾಜ ಒಡೆಯರು ಸಿಂಹಾಸನಕ್ಕೆ ಏರಿದ ಇಪ್ಪತ್ತೈದು ವರ್ಷಗಳ ನೆನಪಿಗಾಗಿ ಬೆಂಗಳೂರಿನ ಕೆ.ಆರ್. ಮಾರ್ಕೆಟ್ ಬಳಿ ಸಿಲ್ವರ್ ಜ್ಯೂಬ್ಲಿ ಪಾರ್ಕ್ ಅನ್ನು ನಿರ್ಮಿಸಿದರು. ಬೆಂಗಳೂರಿನ ಸಿದ್ದಿಕಟ್ಟೆಗೆ 'ಕೆ.ಆರ್. ಮಾರ್ಕೆಟ್' (ಕೃಷ್ಣರಾಜ ಮಾರ್ಕೆಟ್) ಎಂತಲೂ ಕೆ.ಆರ್. ರೋಡ್ (ಕೃಷ್ಣರಾಜ ರಸ್ತೆ) ಎಂತಲೂ ಇಡುವ ಮೂಲಕ ನಾಲ್ವಡಿ ಕೃಷ್ಣರಾಜರ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡಿದ್ದಾರೆ. ರಾಜಋಷಿ ನಾಲ್ವಡಿ ಕೃಷ್ಣರಾಜ ಒಡೆಯರು 1940 ಜುಲೈ 3ರಂದು ವಿಧಿವಶರಾದರು. ಮೈಸೂರು ಸ್ವರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಸರ್. ಎಂ. ವಿಶ್ವೇಶ್ವರಯ್ಯ

ಸರ್ ಎಂ.ವಿಶ್ವೇಶ್ವರಯ್ಯ ದೇಶ ಕಂಡ ಸರ್ವಶ್ರೇಷ್ಠ ತಂತ್ರಜ್ಞರಲ್ಲಿ ಮೊದಲಿಗರು. ತಮ್ಮಲ್ಲಿದ್ದ ಬುದ್ದಿಶಕ್ತಿ, ಮೇಧಾಶಕ್ತಿಯನ್ನು ಈ ನಾಡಿನ ಒಳಿತಿಗಾಗಿ ಧಾರೆ ಎರೆದರು. ಇಂಗ್ಲಿಷ್ ತಂತ್ರಜ್ಞರನ್ನು ಮೀರಿಸಿದ ಬುದ್ದಿಶಕ್ತಿ ಇವರಲ್ಲಿತ್ತು. ಇವರು ಮೂಲತಃ ಇಂಜಿನಿಯರರಾದರೂ ಇವರಲ್ಲಿದ್ದ ಮೇಧಾಶಕ್ತಿ ಕಾರ್ಯತತ್ಪರತೆ ಪ್ರಾಮಾಣಿಕತೆಯನ್ನು ಕಂಡ ಆಳರಸರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಒಲ್ಲೆನೆಂದರೂ ಬಿಡದೆ ಇವರನ್ನು ಮೈಸೂರಿನ ದಿವಾನರನ್ನಾಗಿ ನೇಮಿಸಿದರು. 28 ವರ್ಷಗಳ ಕಾಲ ತಂತ್ರಜ್ಞರಾಗಿ (ಇಂಜಿನಿಯರ್) 6 ವರ್ಷಗಳ ಕಾಲ ಮೈಸೂರಿನ ದಿವಾನರಾಗಿ ಸೇವೆ ಸಲ್ಲಿಸಿದುದೇ ಅಲ್ಲದೆ ದಿವಾನ್ ಪದವಿಯಿಂದ ನಿವೃತ್ತರಾದ ನಂತರವೂ ಸಾಕಷ್ಟು ಶ್ರಮಿಸಿದರು. ರಾಷ್ಟ್ರ ಹಾಗೂ ಹೊರ ರಾಷ್ಟ್ರಗಳು ಸರ್ ಎಂ.ವಿ.ರವರ ಸೇವೆಯನ್ನು ಸಮರ್ಥವಾಗಿ ಬಳಸಿಕೊಂಡವು. ಪ್ರಾಮಾಣಿಕರಲ್ಲಿ ಅತಿ ಪ್ರಾಮಾಣಿಕರಾಗಿ, ಸ್ವಾಮಿನಿಷ್ಠರಾಗಿ, ದೇಶ ಹಾಗೂ ರಾಜ್ಯವನ್ನು ಪ್ರಗತಿ ಪಥದತ್ತ ಕೊಂಡೊಯ್ಯಲು ಶ್ರಮಿಸಿದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಭಾರತಕ್ಕೆ ರತ್ನ ಪ್ರಾಯರಾಗಿದ್ದಾರೆ.

ಮೋಕ್ಷಗುಂಡಂ ಎಂಬುದು ಆಂಧ್ರದ ಕರ್ನೂಲು ಜಿಲ್ಲೆಯ ಗಿಡ್ಡಲೂರು ತಾಲ್ಲೂಕಿನ ಒಂದು ಅಗ್ರಹಾರ ಗ್ರಾಮ. ಇವರ ಪೂರ್ವಿಕರ ಹೆಸರು ಮೋಕ್ಷಗುಂಡಂ ಕೃಷ್ಣಭಟ್ಟರು. ಕಾರಣಾಂತರಗಳಿಂದ ವಿಶ್ವೇಶ್ವರಯ್ಯನವರ ಪೂರ್ವಿಕರು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಗೆ ಬಂದು ನೆಲೆಸಿದರು. ಶ್ರೀನಿವಾಸಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ ದಂಪತಿಗಳಿಗೆ ವೆಂಕಟಶಾಸ್ತ್ರಿ,

ವಿಶ್ವೇಶ್ವರಯ್ಯ, ವೆಂಕಟರಾಮಯ್ಯ, ನಂಜಮ್ಮ, ರಾಮಚಂದ್ರರಾಯ ಮತ್ತು ಮೀನಾಕ್ಷಮ್ಮ ಎಂಬ ಆರು ಜನ ಮಕ್ಕಳು ಇವರಲ್ಲಿ ವಿಶ್ವೇಶ್ವರಯ್ಯನವರು ಎರಡನೇ ಸುಪುತ್ರ.

ಶ್ರೀನಿವಾಸ ಶಾಸ್ತ್ರಿಗಳು ತಮ್ಮ ಪೂರ್ವಿಕರು ಗಳಿಸಿದ ಆಸ್ತಿಯನ್ನು ಉಳಿಸಿಕೊಳ್ಳಲಾಗದೆ ಜೀವನೋಪಾಯಕ್ಕಾಗಿ ವೈದಿಕವನ್ನು ಮಾಡುತ್ತಿದ್ದರು. ಆಗಿಂದಾಗ್ಗೆ ಕಾಶಿ, ರಾಮೇಶ್ವರ ಸೇರಿದಂತೆ ತೀರ್ಥಯಾತ್ರೆ ಮಾಡುತ್ತಿದ್ದರು. ಅವರ ಪತ್ನಿ ವೆಂಕಟಲಕ್ಷ್ಮಮ್ಮನವರಿಗೆ ಸಂಸಾರ ಸಾಕುವ ಜವಾಬ್ದಾರಿ ಬಿದ್ದಿತು. ಬಡತನದಲ್ಲೇ ಸಂಸಾರ ಸಾಗುತ್ತಿತ್ತು. ಈ ದಂಪತಿಗಳ ಎರಡನೆಯ ಪುತ್ರರತ್ನ ವಿಶ್ವೇಶ್ವರಯ್ಯನವರು ರೌದ್ರಿನಾಮ ಸಂವತ್ಸರ ಭಾದ್ರಪದ ಶುದ್ಧ ಏಕಾದಶಿ ಸೋಮವಾರ 27.08.1860ರಂದು ಜನಿಸಿದರು. ಇವರ ತಂದೆ ಶ್ರೀನಿವಾಸ ಶಾಸ್ತ್ರಿಗಳು ಕಾಶಿ ವಿಶ್ವೇಶ್ವರನ ಪರಮ ಭಕ್ತರಾಗಿದ್ದರಿಂದ ಮಗುವಿಗೆ ವಿಶ್ವೇಶ್ವರಯ್ಯ ಎಂದು ನಾಮಕರಣ ಮಾಡಿದರು. ಇಂಜಿನಿಯರುಗಳ ಸಂಘವು 27.08.1861 ಸರ್ ಎಂ.ವಿ.ಯವರ ಹುಟ್ಟುಹಬ್ಬವೆಂದು ಆಚರಿಸುತ್ತಾ ಬಂದ ಪ್ರಯುಕ್ತ ದಾಖಲೆಗಳಲ್ಲಿ ಅದೇ ಉಳಿದು ಬಂದಿದೆ.

ವಿಶ್ವೇಶ್ವರಯ್ಯ/ವಿಶ್ವೇಶ್ವರಾಯ ಹೆಸರಿನ ಜಿಜ್ಞಾಸೆ

ವಿಶ್ವೇಶ್ವರಯ್ಯನವರ ಹೆಸರನ್ನು ಒಮ್ಮೆ ಸಹಕಾರಿ ಪತ್ತಿನ ಬ್ಯಾಂಕಿಗೂ ಮತ್ತಿನ್ನಾವುದೇ ಸಂಘ ಸಂಸ್ಥೆಗಳಿಗೂ ಇಡುವ ಸಂದರ್ಭದಲ್ಲಿ ವಿಶ್ವೇಶ್ವರಯ್ಯ/ ವಿಶ್ವೇಶ್ವರಾಯ ಇದರಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬ ಬಗ್ಗೆ ವಾದ ವಿವಾದ ತಲೆ ಎತ್ತಿತ್ತು. ಬ್ರಿಟಿಷರು ತಮ್ಮ ದಾಖಲೆಗಳಲ್ಲಿ ಇವರ ಹೆಸರನ್ನು (Sir M. Visvesvaraya, K.C.I.E) ಎಂದು ಬರೆಯಲಾಗಿದೆ. ಇದು ಅವರ ಮಟ್ಟಿಗೆ ಸರಿ. ವಾಸ್ತವವಾಗಿ ಇವರ ವಂಶಸ್ತರಲ್ಲಿ ಅನೇಕರು ವೆಂಕಟೇಶಯ್ಯ, ಶ್ರೀನಿವಾಸಯ್ಯ, ವೆಂಕಟಾಚಲಯ್ಯ ಎಂದು ಇಟ್ಟುಕೊಂಡಿದ್ದಾರೆ. ಹೀಗಾಗಿ ವಿಶ್ವೇಶ್ವರಯ್ಯ ಸರಿಯಾದ ಹೆಸರೆ ವಿನಹ ವಿಶ್ವೇಶ್ವರಾಯ ಎಂದು ಕರೆಯುವುದು ತಪ್ಪು.

ಶಿಕ್ಷಣ

ಶ್ರೀನಿವಾಸ ಶಾಸ್ತ್ರಿಗಳ ಎಲ್ಲಾ ಮಕ್ಕಳು ಗ್ರಾಮದಲ್ಲೇ ವಿದ್ಯಾಭ್ಯಾಸ ಮಾಡಿದರು. ವಿಶ್ವೇಶ್ವರಯ್ಯನವರು ಬಾಲ್ಯದಿಂದಲೂ ಚುರುಕಾಗಿದ್ದರು. ಇವರ ಗುರುಗಳಾಗಿದ್ದ ಶ್ರೀ ನಾಥಮುನಿ ನಾಯ್ಡುರವರು ವಿಶ್ವೇಶ್ವರಯ್ಯನವರ ಪ್ರತಿಭೆಯನ್ನು ಗುರ್ತಿಸಿ ಪ್ರೋತ್ಸಾಹಿಸಿದರು. ತಾಯಿ ವೆಂಕಟಾಚಲಮ್ಮನವರ ಸಹೋದರರಾದ

ಶ್ರೀ ರಾಮಯ್ಯನವರು ಸರ್ಕಾರಿ ಉದ್ಯೋಗಿಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದರು. ಬಾಲಕ ವಿಶ್ವೇಶ್ವರಯ್ಯನವರನ್ನು ತಮ್ಮ ಸೋದರನಲ್ಲಿಗೆ ಕರೆತಂದು ಉತ್ತಮ ಶಿಕ್ಷಣ ಕೊಡಿಸುವಂತೆ ಕೇಳಿಕೊಂಡರು. ಅದರಂತೆ ಎಂ.ವಿ.ಯವರು ತಮ್ಮ ಸೋದರಮಾವನ ಮನೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಬಾಲ್ಯದಿಂದಲೂ ಕೃಷದೇಹಿಯಾದ ಎಂ.ವಿ.ಯವರು ಬುದ್ಧಿಶಕ್ತಿಯಲ್ಲಿ ಗಟ್ಟಿಗರಾಗಿದ್ದರು. ಇವರನ್ನು ವೆಸ್ಲಿಯನ್ ಮಿಷನ್ ಪ್ರೌಢಶಾಲೆಗೆ ಸೇರಿಸಿದರು. ತಂದೆಯಿಂದ ಯಾವುದೇ ಸಹಕಾರವಿಲ್ಲ. ತಾಯಿಯೇ ಸರ್ವಸ್ವ, ಮನೆಯಲ್ಲಿ ಕಡುಬಡತನ ಪರೀಕ್ಷೆ ಹಣ ಕಟ್ಟಲೂ ಆಗದ ಪರಿಸ್ಥಿತಿ. ತುಂಬಾ ಕಡು ಕಷ್ಟದ ದಿನಗಳನ್ನು ನಿಭಾಯಿಸಿದರು. ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಮೂಲಕ ಎಲ್ಲರ ಗಮನ ಸೆಳೆದರು.

ಬೀದಿ ದೀಪದ ಕೆಳಗೆ ಓದಿದ್ದು ಇತ್ಯಾದಿ

ವಿಶ್ವೇಶ್ವರಯ್ಯನವರು ಮೆಟ್ರಿಕ್ಯುಲೇಷನ್ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಇಂಟರ್ ಮೀಡಿಯೇಟ್ ಓದಲು ಸೇರಿದರು. ಬಡತನದ ಬೇಗೆಯಲ್ಲಿ ಬೇಯುತ್ತಿದ್ದುದು ಸರಿಯಷ್ಟೆ ಆದರೆ ಹಿಂದೆ ಪ್ರಾಥಮಿಕ ಶಾಲಾ ಪುಸ್ತಕಗಳಲ್ಲಿ ಹಾಗೂ ಕೆಲವು ಕೃತಿಗಳು ವಿಶ್ವೇಶ್ವರಯ್ಯನವರು ರಾತ್ರಿ ವೇಳೆ ಬೀದಿದೀಪದ (Street Light) ಕೆಳಗೆ ಕುಳಿತು ಓದಿದರು ಎಂಬುದಾಗಿ ತಪ್ಪಾಗಿ ಮಾಹಿತಿ ನೀಡಿವೆ. ಬೆಂಗಳೂರಿಗೆ ವಿದ್ಯುತ್ ದೀಪಗಳು ಬಂದದ್ದು 1905ರಲ್ಲಿ. ವಿಶ್ವೇಶ್ವರಯ್ಯನವರು 1883ರಲ್ಲೇ ಇಂಜಿನಿಯರಿಂಗ್ ಪದವೀಧರರಾಗಿದ್ದರು. ತಮ್ಮ ಬಡತನವನ್ನು ನೀಗಿಸಿಕೊಳ್ಳಲು ಬೆಂಗಳೂರಿನಲ್ಲಿದ್ದ ಶ್ರೀಯುತ ಮುದ್ದಯ್ಯ ಎಂಬ ಸಮಾಜದ ಪ್ರತಿಷ್ಠಿತ ವ್ಯಕ್ತಿಯೊಬ್ಬರ ಮನೆಯಲ್ಲಿ ರಾತ್ರಿ ತಂಗಿದ್ದು ಬೆಳಿಗ್ಗೆ ಬೇಗ ಎದ್ದು ಅವರ ಮಕ್ಕಳಿಗೆ ಮನೆಪಾಠ ಹೇಳಿ (ಗಣಿತ ಶಾಸ್ತ್ರದಲ್ಲಿ ಬುದ್ಧಿವಂತರಾಗಿದ್ದರು) ಚಿಕ್ಕಾಸು ಸಂಪಾದಿಸುತ್ತಿದ್ದರು. ನಂತರ ಚಾಮರಾಜಪೇಟೆಯಲ್ಲಿದ್ದ ತಮ್ಮ ಸೋದರಮಾವ ರಾಮಯ್ಯನವರ ಮನೆಗೆ ತೆರಳಿ ಅಲ್ಲಿ ತಿಂಡಿ ಕಾಫಿ ಮುಗಿಸಿ ಪುಸ್ತಕದೊಡನೆ ಇಂದಿನ ಮೈಸೂರು ಬ್ಯಾಂಕ್ ಬಳಿಯಿರುವ ಸೆಂಟ್ರಲ್ ಕಾಲೇಜಿಗೆ ಕಾಲ್ನಡಿಗೆಯಲ್ಲಿ ಹೋಗಿಬರುತ್ತಿದ್ದರು. ಪ್ರತಿದಿನ ಹತ್ತಾರು ಮೈಲಿ ನಡೆದು ಗಳಿಕೆ ಮತ್ತು ಕಲಿಕೆ (Earning and Learning)ಯಿಂದ ತಮ್ಮ ಓದು ಮುಗಿಸಿದರು. ಸೆಂಟ್ರಲ್ ಕಾಲೇಜಿನಲ್ಲಿ ಎರಡು ವರ್ಷಗಳ ಇಂಟರ್ ಮೀಡಿಯಟ್ ಮತ್ತು ಮೂರು ವರ್ಷಗಳ ಬಿ.ಎ., ಪದವಿಯನ್ನು ಗಳಿಸಿದರು. (ಅಂದು ಕಲೆ, ವಿಜ್ಞಾನ ಎಲ್ಲಾ ವಿಷಯಗಳಿಗೂ ಬಿ.ಎ., ಎಂದೇ ಪದವಿ ನೀಡುತ್ತಿದ್ದರು.) ಬಿ.ಎ., ಪದವಿ ಗಳಿಸಿದ ನಂತರ ಪೂನಾದಲ್ಲಿ ಎಂಜಿನಿರಿಂಗ್‌ನಲ್ಲಿ

ಎಲ್.ಸಿ.ಇ. ಎಂಬ ಡಿಪ್ಲೊಮ ಶಿಕ್ಷಣ ಪಡೆಯಲು ತೀರ್ಮಾನಿಸಿದರು. ಆದರೆ ಅದಕ್ಕೆ ಹಣದ ಅಗತ್ಯ ಕಂಡುಬಂತು. ಅಂದು ಸಾಲವನ್ನು ನೀಡಲು ಯಾರೂ ಮುಂದೆ ಬರಲಿಲ್ಲ. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಗತಿಪರ ದೊರೆಗಳೆಂದು ಹೆಸರುವಾಸಿಯಾಗಿದ್ದರು. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು. ಬುದ್ಧಿವಂತ ವಿದ್ಯಾರ್ಥಿಗಳಿಗಾಗಿ 'ವಿದ್ಯಾರ್ಥಿ ವೇತನ' ಸ್ಥಾಪಿಸಿದ್ದರು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ತೀರ್ಮಾನಿಸಿದ ಎಂ.ವಿ. ಯವರು ಅಂದು ದಿವಾನರಾಗಿದ್ದ ಸಿ. ರಂಗಾಚಾರ್ಲುರವರನ್ನು ಕಂಡು ತಮ್ಮ ಪದವಿಪತ್ರ ಇತ್ಯಾದಿಗಳನ್ನು ತೋರಿಸಿ ನಿವೇದನೆ ಮಾಡಿಕೊಂಡ ಮೇಲೆ ದೊರೆಗಳ ಅಪ್ಪಣೆ ಮೇರೆಗೆ ಇವರಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಿದರು. ಪೂನಾಕ್ಕೆ ತೆರಳಿ ವ್ಯಾಸಂಗ ಮಾಡಿ 1883ರಲ್ಲಿ ಪ್ರಥಮ ಸ್ಥಾನ ಪಡೆದರು. ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಇವರಿಗೆ 'ಜೇಮ್ಸ್ ಬರ್ಕ್ಲಿ' ಬಹುಮಾನ ಲಭಿಸಿತು.

ಉದ್ಯೋಗಿಯಾಗಿ ಎಂ.ವಿಶ್ವೇಶ್ವರಯ್ಯ

ಪೂನಾದಲ್ಲಿ ಇಂಜಿನಿಯರಿಂಗ್ ಶಿಕ್ಷಣ ಪೂರೈಸಿದ್ದರಿಂದ ಹಾಗೂ ಬಾಂಬೆ ಪ್ರಾಂತ್ಯವು ಬ್ರಿಟಿಷರ ಪ್ರೆಸಿಡೆನ್ಸಿ (ರಾಜ್ಯಪಾಲರ ಕೇಂದ್ರ ಕಛೇರಿ)ಯಾಗಿದ್ದುದರಿಂದ ಉತ್ತಮ ಶ್ರೇಣಿಯಲ್ಲಿ ಎಂಜಿನಿಯರಿಂಗ್‌ನಲ್ಲಿ ತೇರ್ಗಡೆ ಹೊಂದಿದ ಪದವೀಧರರಿಗೆ ಬಹುಬೇಡಿಕೆ ಇದ್ದಿತು. ಇದರಿಂದಾಗಿ 1884 ಮಾರ್ಚ್ ತಿಂಗಳಿನಲ್ಲಿ ಮುಂಬೈ ಸರ್ಕಾರದ ಸೇವೆಗೆ ಸೇರಿದರು. ಮೊದಲು ನಾಸಿಕ್ ಜಿಲ್ಲೆಗೆ ನೇಮಕಗೊಂಡರು ನಾಸಿಕ್‌ನಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಪೂನಾದಲ್ಲಿ ಜನಾನುರಾಗಿಯಾಗಿದ್ದ ಎಂ.ಜಿ. ರಾನಡೆ (ಮಹಾದೇವ ಗೋವಿಂದ ರಾನಡೆ) ಯವರು ನಾಸಿಕ್ ಜಿಲ್ಲೆಯ ಡೆಪ್ಯುಟಿ ಕಲೆಕ್ಟರ್‌ರವರಿಗೆ ಪರಿಚಯ ಪತ್ರ ನೀಡಿದರು. ಎಂ.ವಿ.ಯವರು ಮೊದಲು ಅಲ್ಲಿ ಸಹಾಯಕ ಇಂಜಿನಿಯರ್ ಆಗಿ ತಮ್ಮ ಉದ್ಯೋಗವನ್ನು ಪ್ರಾರಂಭಿಸಿದರು. ನಂತರ ಖಾನ್‌ದೇಶ ಜಿಲ್ಲೆಗೆ ವರ್ಗವಾಯಿತು. ಅಲ್ಲಿನ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ಒಂದು ತೂಬು ಮೇಲ್ಗಾಲುವೆಯನ್ನು (ಸೈಫನ್) ನಿರ್ಮಿಸಲು ನಿಯೋಜನೆಗೊಂಡರು. ಧೂಲಿಯದಿಂದ 56 ಕಿ.ಮೀ. ದೂರದಲ್ಲಿದ್ದ ದತಾರ್ತಿ ಎಂಬ ಊರಿಗೆ ನೀರು ಒದಗಿಸುವ ಯೋಜನೆ. ಈ ಯೋಜನೆ ಯಶಸ್ವಿಗೊಳಿಸಿದ್ದರಿಂದ ಸಂತೋಷಗೊಂಡ ಊರಿನ ಜನರು ಎಂ.ವಿ.ಯವರನ್ನು ಕರೆಸಿಕೊಂಡು ಹೆಗಲಮೇಲೆ ಮೆರವಣಿಗೆ ಮಾಡಿದರು. ಧೂಲಿಯ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸಲು ಒಂದು ಜಲಾಶಯ ನಿರ್ಮಾಣಕ್ಕೆ ಶಾಶ್ವತ ಯೋಜನೆ ರೂಪಿಸಿಕೊಟ್ಟರು.

ಎಂ.ವಿ.ಯವರು ಸೇವೆಗೆ ಸೇರಿದ ಇಪ್ಪತ್ತು ತಿಂಗಳುಗಳಲ್ಲಿ ಪದೋನ್ನತಿ ಪಡೆದರು. ಇತರರು ಹತ್ತು ವರ್ಷಗಳಲ್ಲಿ ಏರಬಹುದಾದ ಎತ್ತರಕ್ಕೆ ಕೇವಲ ಎರಡು ವರ್ಷಗಳ ಒಳಗಾಗಿ ಏರಿದರು. 1885ರ ಹೊತ್ತಿಗೆ ಎಂ.ವಿ.ರವರಿಗೆ ಮಾಸಿಕ ರೂಪಾಯಿ 500 ಸಂಬಳ ಬರುತ್ತಿತ್ತು. ಇಂದಿಗೆ ನೂರಿಪ್ಪತ್ತು ವರ್ಷಗಳ ಹಿಂದೆ ಅಷ್ಟು ಸಂಬಳ ಸಾರಿಗೆ ಪಡೆಯುತ್ತಿದ್ದ ಸರ್ಕಾರಿ ನೌಕರರಲ್ಲಿ ಅದರಲ್ಲೂ ಕೇವಲ ಇಪ್ಪತ್ತೈದನೆಯ ವಯಸ್ಸಿನಲ್ಲಿ ಅದು ತೀರಾ ಅಪರೂಪ. ಖಾನ್‌ದೇಶ್ ಜಿಲ್ಲೆಯಲ್ಲಿ ಹರಡಿದ್ದ ಮಲೇರಿಯ ಪರಿಸ್ಥಿತಿಯಿಂದಾಗಿ ಎಂ.ವಿ.ಯವರ ಆರೋಗ್ಯ ಹದಗೆಟ್ಟಿತು. ವರ್ಗಾವಣೆಗೆ ವಿನಂತಿಸಿಕೊಳ್ಳಲಾಗಿ ಅವರನ್ನು ಜಿಲ್ಲಾ ರಸ್ತೆ ಮತ್ತು ಕಟ್ಟಡಗಳ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಅಧೀನದಲ್ಲಿ ಕೆಲಸ ಮಾಡಲು ನಿಯೋಜಿಸಿದರು.

ಮದುವೆ, ಎರಡನೆ ಮದುವೆ

ವಿಶ್ವೇಶ್ವರಯ್ಯನವರ ಮೇಧಾಶಕ್ತಿಯನ್ನು ಕಂಡು ಬೆರಗಾದ ನಮ್ಮ ಜನ ಎಂ.ವಿ.ಯವರ ಖಾಸಗಿ ವಿಷಯವನ್ನು ತಿಳಿದುಕೊಳ್ಳಲು ಹೆಚ್ಚು ಆಸಕ್ತರಾಗಿರುವುದು ಕಂಡುಬರುತ್ತದೆ. ಅವರ ಖಾಸಗಿ ವಿಷಯ ಈ ಕೆಳಕಂಡಂತಿದೆ. ಎಂ.ವಿ.ಯವರು ಮೇಧಾವಿಗಳು ಶಿಸ್ತಿನ ಸಿಪಾಯಿಗಳಾಗಿದ್ದರೂ ತಾಯಿಗೆ ತಕ್ಕ ಮಗ. ತಾಯಿಯ ಮಾತು ವೇದವಾಕ್ಯವಾಗಿತ್ತು. ಎಂ.ವಿ.ಯವರ ತಾಯಿಯವರು ಎಂ.ವಿ.ಯವರು ಉದ್ಯೋಗಕ್ಕೆ ಸೇರುವ ಮೊದಲೇ ಚಿಕ್ಕಬಳ್ಳಾಪುರ ಸರ್ಕಾರಿ ಶಾಲೆಯ ಉಪಾಧ್ಯಾಯರಾಗಿದ್ದ ರಾಮಚಂದ್ರಶಾಸ್ತ್ರಿಗಳ ಪುತ್ರಿ 'ಸಾವಿತ್ರಿ' ಎಂಬ ಕನ್ಯೆಯನ್ನು ತಮ್ಮ ಸೊಸೆಯನ್ನಾಗಿಸಿಕೊಂಡಿದ್ದರು. ಎಂ.ವಿ.ಯವರು ತಮ್ಮ ಪತ್ನಿಯನ್ನು ಪೂನಾಕ್ಕೆ ಕರೆಸಿಕೊಂಡು ಕೆಲವುಕಾಲ ಸಂಸಾರ ಸಾಗಿಸಿದರು. 1888ರಲ್ಲಿ ಶ್ರೀಮತಿ ಸಾವಿತ್ರಿಯವರು ಹೆರಿಗೆಯ ಸಂದರ್ಭದಲ್ಲಿ ತಾಯಿ ಮತ್ತು ಮಗು ಅಸುನೀಗಿದರು.

ತಮ್ಮ ಮಗ ದೂರದ ಊರಿನಲ್ಲಿ ಊಟಕ್ಕೆ ತೊಂದರೆ ಪಡಬಾರದೆಂಬ ಉದ್ದೇಶದಿಂದ ಎರಡನೆ ಮದುವೆ ಮಾಡಲು ತೀರ್ಮಾನಿಸಿದರು. 1889ರ ಮಾರ್ಚ್ 20ರಂದು ಎಂ.ವಿ.ಯವರಿಗೆ ಎರಡನೆಯ ಮದುವೆಯನ್ನು ಮಾಡಿದರು. ಎರಡನೆಯ ಹೆಂಡತಿಯೊಂದಿಗೆ ದೂರದೂರಿನಲ್ಲಿ ಸಂಸಾರ ಹೂಡಿದರು. ಅವರ ಎರಡನೆಯ ಪತ್ನಿಯು ಗರ್ಭಿಣಿಯಾಗಿರುವ ಸಂದರ್ಭದಲ್ಲಿ ಸೂಕ್ತ ಚಿಕಿತ್ಸೆ ಕೊಡಿಸಿ ಉಪಚರಿಸಲು ಸಮಯವಿಲ್ಲದ ಕಾರಣ ಆಕೆಯೂ ಹೆರಿಗೆಯ ಸಂದರ್ಭದಲ್ಲಿ ಅಸುನೀಗಿದರು. ಎಂ.ವಿ.ಯವರು ವಿಧಿಯ ಆಟದ ಮುಂದೆ ಕೈಚೆಲ್ಲಿ ಕುಳಿತರು.

ಎಂ.ವಿ.ಯವರಷ್ಟೇ ಅಲ್ಲ ಅವರ ತಾಯಿಗೂ ವಿಧಿಯ ಆಟವನ್ನು ಕಂಡು ಬೇಸರವಾಯಿತು. ಬಡಪಟ್ಟಿಗೆ ಸುಮ್ಮನಿರದ ಎಂ.ವಿ.ಯವರ ತಾಯಿಯವರು ತಮ್ಮ ಮಗನ ಕಷ್ಟವನ್ನು ನೋಡಲಾಗದೆ ಮೂರನೆಯ ಮದುವೆಗೆ ತೀರ್ಮಾನಿಸಿದರು. ಎಂ.ವಿ.ಯವರು ಅಷ್ಟು ಸುಲಭವಾಗಿ ಒಪ್ಪಲಿಲ್ಲ. ಈಗಾಗಲೇ ತಿಳಿಸಿರುವಂತೆ ತಾಯಿಗೆ ತಕ್ಕ ಮಗ ಎಂ.ವಿ.ಯವರು. ಅವರ ತಾಯಿಯವರು ಸೇಲಂ ಜಿಲ್ಲೆಯ ಕುಪ್ಪಂ ಗ್ರಾಮದ ಕನ್ಯೆಯನ್ನು ಎಂ.ವಿ.ರವರ ಮೂರನೆಯ ಪತ್ನಿಯನ್ನಾಗಿ ತಂದುಕೊಂಡರು. ಎಂ.ವಿ.ಯವರಿಗೆ ಈಗಾಗಲೇ ನಲವತ್ತು ವರ್ಷ ಸಂದಿತ್ತು. ದಾಂಪತ್ಯ ಸುಖಮಯವಾಗಿರಲಿಲ್ಲ. ಗಂಡ ಹೆಂಡಿರ ನಡುವೆ ವಯಸ್ಸಿನಲ್ಲಿ ಭಾರೀ ಅಂತರ. ಚಿಕ್ಕವಯಸ್ಸಿನ ಮಡದಿಗೆ ವಯೋ ಸಹಜ ಬಯಕೆಗಳು. ಎಂ.ವಿ.ಯವರು ಅದಕ್ಕೆ ತದ್ವಿರುದ್ಧ. ಕೆಲಸ, ಕೆಲಸ, ಕೆಲಸ, ಪತ್ನಿಯ ಬೇಕು ಬೇಡಗಳನ್ನು ಪೂರೈಸಲು ಎಂ.ವಿ.ಯವರು ವಿಫಲರಾದರು. ಹೆಂಡತಿಯ ವರ್ತನೆಯ ಬಗ್ಗೆ ಸಂಶಯ ಬರತೊಡಗಿದವು. ಪೂನಾದಂತಹ ದೂರದೂರಿನಲ್ಲಿ ಇವರಿಬ್ಬರಿಗೂ ಹಿತವಚನ ಹೇಳಲು ಹಿರಿಯರು, ಬಂಧುಗಳು ಹತ್ತಿರ ಇರಲಿಲ್ಲ. ಈಗಾಗಲೇ ತಿಳಿಸಿರುವಂತೆ ಎಂ.ವಿ.ಯವರಿಗೆ ದಾಂಪತ್ಯ ಸುಖ ಹಾಗೂ ಹಿತಕ್ಕಿಂತಲೂ ನಾಡಿನ ಒಳಿತಿಗಾಗಿ ಶ್ರಮಿಸುವುದೇ ಮುಖ್ಯವಾಗಿತ್ತು. ಹಾಗೂ ಯಶಸ್ಸಿನ ಉತ್ತುಂಗದಲ್ಲಿದ್ದರು. ಎಂ.ವಿ.ಯವರು ವ್ಯವಹಾರ ಚತುರರು ನನ್ನಲ್ಲೇ ನೂರೆಂಟು ತಪ್ಪುಗಳಿರುವಾಗ ಆಕೆಯನ್ನು ತಿದ್ದುವುದು ತರವಲ್ಲವೆಂದು ತಿಳಿದರು. ಇಷ್ಟೇ ಅಲ್ಲದೆ ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸಲು ಆಕೆಯ ಮನವೊಲಿಸಿ ಆಕೆಯನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಬಂದು ಕೈಗೆ ಹಣ ನೀಡಿ ಸುರಕ್ಷಿತವಾಗಿ ಆಕೆಯು ಕೇಳಿದ ಜಾಗಕ್ಕೆ ಕರೆದುಕೊಂಡು ಹೋಗಿ ಬಿಟ್ಟು ಬಂದರು.

ಈಗಾಗಲೇ ತಿಳಿಸಿರುವಂತೆ ಎಂದಿಗೂ ತಮ್ಮ ಪತ್ನಿಯನ್ನು ದೂರಲಿಲ್ಲ ಆದರೆ ಕೊನೆಯತನಕ (ಆಕೆ ಮೃತಳಾಗುವತನಕ) ತಮ್ಮ ಹೃದಯಂತರಾಳದಲ್ಲಿ ಆಕೆಗೆ ಸ್ಥಾನ ನೀಡಿದ್ದರು. ಸರ್ ಎಂ.ವಿ.ಯವರು ಮೈಸೂರಿನ ದಿವಾನರಾಗಿದ್ದಾಗ ಒಮ್ಮೆ ಕುಕ್ಕಾರಹಳ್ಳಿ ಕೆರೆಯ ಏರಿಯ ಮೇಲೆ ವಾಯು ಸಂಚಾರಕ್ಕೆ ಹೋಗುವ ಸಂದರ್ಭದಲ್ಲಿ ಒಬ್ಬ ಮಹಿಳೆ ಬಂದು ಇವರ ಕಾಲಿಗೆರಗಿದಳು. ಆಕೆಯನ್ನು ದಿಟ್ಟಿಸಿ ನೋಡಿ, ವಿಚಲಿತರಾಗದೆ ತಮ್ಮ ಸಹಾಯಕನಿಗೆ ಆಕೆಯ ವಿಳಾಸ ತೆಗೆದುಕೊಳ್ಳುವಂತೆ ತಿಳಿಸಿದರು. ಆ ವಿಳಾಸಕ್ಕೆ ಪ್ರತಿ ತಿಂಗಳೂ ಹಣ ಕಳುಹಿಸುವ ವ್ಯವಸ್ಥೆ ಮಾಡಿದರು.

ಸರ್ ಎಂ.ವಿ.ಯವರ ಬಗ್ಗೆ ಅಗಾಧವಾದ ಸಂಶೋಧನೆ ಮಾಡಿರುವ ಡಾ. ಡಿ.ಎಸ್. ಜಯಪ್ಪಗೌಡರವರು ಸರ್ ಎಂ.ವಿ.ಯವರ ತಮ್ಮನ ಮಗ ಹಾಗೂ

ಅವರ ಕೊನೆಯ ಕಾಲದಲ್ಲಿ ನೋಡಿಕೊಂಡ ಎಂ.ಆರ್. ಕೃಷ್ಣಮೂರ್ತಿಯವರನ್ನು ಸಂದರ್ಶಿಸಿ ಸರ್ ಎಂ.ವಿ.ಯವರ ಖಾಸಗಿ ವಿಚಾರವನ್ನು ಕೇಳಲಾಗಿ ಕೃಷ್ಣಮೂರ್ತಿಯುವರು "ನಮ್ಮ ಅಂಕಲ್‌ಗೆ (ಸರ್ ಎಂ.ವಿ.) ಅವರ ಸಹೋದರರೊಬ್ಬರು 1930ರ ದಶಕದಲ್ಲಿ ನಿಮ್ಮ ಮಾಜಿ ಪತ್ನಿಯವರು ಇಂದು ನಿಧನರಾದರೆಂದು ತಿಳಿಸಿದರಂತೆ. ಆಗ ಸ್ವಲ್ಪ ಯೋಚಿಸಿದ ಅಂಕಲ್ ಸೂಕ್ತವಾಗಿ ಅಂತ್ಯಸಂಸ್ಕಾರ ಮತ್ತು ಉತ್ತರಕ್ರಿಯೆಗಳು ನೆರವೇರಲಿ ಎಂದು ಐದುನೂರು ರೂಪಾಯಿಗಳನ್ನು ಕೊಟ್ಟು ಕಳುಹಿಸಿದರಂತೆ (ಡಾ. ಡಿ.ಎಸ್. ಜಯಪ್ಪಗೌಡ-ಭಾರತರತ್ನ ಸರ್ ಎಂ.ವಿ. ಪುಟ: 36).

ಸರ್ ಎಂ.ವಿ.ಯವರ ಸೇವೆಯ ಬಳಕೆ

ಕರ್ನಾಟಕಕ್ಕಿಂತಲೂ ದೇಶ ವಿದೇಶಗಳು ಸರ್ ಎಂ.ವಿ.ಯವರ ಜಾಣ್ಮೆ, ಕುಶಲತೆ, ತಂತ್ರಜ್ಞತೆಯನ್ನು ಸಮರ್ಥವಾಗಿ ಬಳಸಿಕೊಂಡವು ಎಂದರೆ ತಪ್ಪಾಗಲಾರದು. ಮುಂಬೈ ಪ್ರಾಂತ್ಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದ ಸಿಂಧ್ ಪ್ರಾಂತ್ಯ (ಇಂದು ಪಾಕಿಸ್ತಾನದಲ್ಲಿದೆ) 'ಸುಕ್ಕೂರು' ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆ ಮಾಡುವುದು ತುರ್ತು ಅಗತ್ಯವಿದ್ದಿತು. ಮುಂಬೈ ಸರ್ಕಾರವು ಸರ್ ಎಂ.ವಿ.ಯವರೇ ಇದಕ್ಕೆ ಸೂಕ್ತ ವ್ಯಕ್ತಿ ಎಂದು ತೀರ್ಮಾನಿಸಿ ಅವರನ್ನು ಈ ಕೆಲಸಕ್ಕೆ ನೇಮಿಸಿತು. 1894 ಫೆಬ್ರವರಿಯಲ್ಲಿ ಕರ್ತವ್ಯಕ್ಕೆ ಹಾಜರಾದರು. ಮಣ್ಣಿನಿಂದ ಕೂಡಿದ ಸಿಂಧೂನದಿಯ ನೀರನ್ನು ಶುದ್ಧೀಕರಿಸಿ ಅಲ್ಲಿನ ನಾಗರಿಕರಿಗೆ ಪೂರೈಸಬೇಕಿತ್ತು. ಆ ಸಂದರ್ಭದಲ್ಲಿ ಅವರಿಗೆ ಹೊಳೆದದ್ದು ಬಾವಿಗಳನ್ನು ತೋಡಿ ಆ ಮೂಲಕ ನೀರನ್ನು ಭಟ್ಟಿ ಇಳಿಸಿ ಶುದ್ಧ ನೀರನ್ನು ಒದಗಿಸುವ ಮೂಲಕ ಯಶಸ್ವಿಯಾದರು. 1995ರಲ್ಲಿ ಮುಂಬೈನ ರಾಜ್ಯಪಾಲರಾಗಿದ್ದ ಲಾರ್ಡ್ ಸಾಂಡ್‌ಹರ್ಸ್ಟರವರು ಉದ್ಘಾಟಿಸಿ ಸರ್ ಎಂ.ವಿ.ಯವರ ಕಾರ್ಯದಕ್ಷತೆ ಮತ್ತು ಜಾಣ್ಮೆಯನ್ನು ಕೊಂಡಾಡಿದರು.

ಗುಜರಾತ್‌ನ ಸೂರತ್ ನಗರಕ್ಕೆ ನೀರು ಸರಬರಾಜು ಯೋಜನೆ

ಗುಜರಾತ್‌ನ ಸೂರತ್ ನಗರವು ಬ್ರಿಟಿಷರ ಮೊಟ್ಟಮೊದಲ ಕೈಗಾರಿಕಾ ನಗರವಾಗಿ ಮಾರ್ಪಟ್ಟಿತ್ತು. ಅಷ್ಟೇ ಅಲ್ಲ ಈ ನಗರದೊಂದಿಗೆ ಬ್ರಿಟಿಷರಿಗೆ ಅವಿನಾಭಾವ ಸಂಬಂಧ. ಇದರಿಂದಾಗಿ ಸೂರತ್ ನಗರಕ್ಕೆ ದುಡಿಯುವ ನೀರು ಸರಬರಾಜು ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ ಎಂ.ವಿ.ಯವರನ್ನು ನೇಮಿಸಲಾಯ್ತು. ಸರ್ ಎಂ.ವಿ.ಯವರು ತಮಗೆ ವಹಿಸಿದ ಕೆಲಸವನ್ನು ಶ್ರದ್ಧೆಯಿಂದಲೂ ಜಾಣ್ಮೆಯಿಂದಲೂ ಮಾಡಿ ಮುಗಿಸಿದರು.

1899ರ ಏಪ್ರಿಲ್‌ನಲ್ಲಿ ಪೂನಾ ನಗರದ ನೀರಾವರಿ ಮುಖ್ಯಾಧಿಕಾರಿಯಾಗಿ ವರ್ಗವಾಯಿತು. ಇಂತಹ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಸವಾಲುಗಳು ಎದುರಾದವು. ಅವುಗಳನ್ನು ಸರ್ ಎಂ.ವಿ.ಯವರು ಸಮರ್ಥರಾಗಿ ಎದುರಿಸಿದರು. ಪೂನಾ ನಗರದ ದಕ್ಷಿಣ ಭಾಗದಲ್ಲಿ ಹಾದುಹೋಗಿದ್ದ ಮುಥಾ ಕಾಲುವೆಯಿಂದ ಪೂನಾ ನಗರ ಮತ್ತು ಕಿರ್ಕಿ ಮಿಲಿಟರಿ ನೆಲೆಗಳಿಗೆ ಕುಡಿಯುವ ನೀರಿನ ಸರಬರಾಜಾಗಬೇಕಾಗಿದ್ದಿತು. ಇಷ್ಟೇ ಅಲ್ಲದೆ ಕೃಷಿಭೂಮಿಗೂ ನೀರುಣಿಸಬೇಕಾಗಿದ್ದಿತು. ನೀರಾವರಿಗಾಗಿ ಬಿಡುತ್ತಿದ್ದ ನೀರು ಅನಗತ್ಯವಾಗಿ ಪೋಲಾಗುತ್ತಿದ್ದಿತು. ರೈತರು ವಿನಾ ಕಾರಣ ಗೊಂದಲ ಸೃಷ್ಟಿಸಿ ಅಂದಿನ ಸರ್ಕಾರವನ್ನು ಬಿಕ್ಕಟ್ಟಿಗೆ ಸಿಲುಕಿಸಿದರು. ಅಂದಿನ ಬ್ರಿಟಿಷ್ ಸರ್ಕಾರ ಕೈಕಟ್ಟಿ ಕೂರಲಿಲ್ಲ. ಭಾರತೀಯರೇ ಆದ ಸರ್ ಎಂ.ವಿ.ಯವರನ್ನು ಈ ಕೆಲಸಕ್ಕೆ ನೇಮಿಸಿತು. ಸರ್ ಎಂ.ವಿ.ಯವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಪೂನಾ ನಗರಕ್ಕೆ ಕುಡಿಯುವ ನೀರನ್ನು ಒದಗಿಸಿದುದೇ ಅಲ್ಲದೆ ರೈತರೊಂದಿಗೆ ಮಾತುಕತೆಯನ್ನಾಡಿ ನೀರು ಪೋಲಾಗುವುದನ್ನು ತಡೆದುದೇ ಅಲ್ಲದೆ ಬೆಳೆಗೆ ತಕ್ಕ ನೀರನ್ನು ಪೂರೈಸುವಲ್ಲಿ ಫಲಪ್ರದರಾದರು. ಯಾವ ಯಾವ ರಾಜ್ಯಗಳಲ್ಲಿ ನೀರಾವರಿ ಯೋಜನೆಗಳಲ್ಲಿ ಸಮಸ್ಯೆಗಳು ಕಂಡುಬರುತ್ತವೆಯೋ ಅಲ್ಲಿ ತಾಕು ನೀರಾವರಿ ವ್ಯವಸ್ಥೆ ಅಥವಾ 'ಬ್ಲಾಕ್ ಇರಿಗೇಶನ್ ಸಿಸ್ಟಮ್' ಅನ್ನು ಅಳವಡಿಸಿಕೊಳ್ಳಲು ನೆರವಾಗುವಂತೆ ಆಯಾ ಪ್ರಾಂತ್ಯಗಳಿಗೆ ನೀಲನಕಾಶೆಯನ್ನು ತಯಾರಿಸಿಕೊಡುವುದರ ಮೂಲಕ ಅವರ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿದರು. ಸರ್ ಎಂ.ವಿ.ಯವರ ಕಾರ್ಯವನ್ನು ಭಾರತ ನೀರಾವರಿ ಆಯೋಗವು ತನ್ನ ಮೆಚ್ಚುಗೆ ವ್ಯಕ್ತಪಡಿಸಿತು.

ಖಡಕ್‌ವಾಸ್ಲ ಜಲಾಶಯ ಯೋಜನೆ

ಮಹಾರಾಷ್ಟ್ರದ ಪೂನಾದಲ್ಲಿರುವ ಖಡಕ್‌ವಾಸ್ಲ ಜಲಾಶಯದ ನೀರು ಪೂನಾ ಹಾಗೂ ಅಲ್ಲಿನ ಸೈನಿಕ ನೆಲೆಗೆ (ದಂಡುಪ್ರದೇಶ) ಜೀವಜಲವಾಗಿತ್ತು. ಇಡೀ ಪಟ್ಟಣ ಈ ನೀರನ್ನು ಆಶ್ರಯಿಸಿತ್ತು ನಿಜ. ಆದರೆ ಜಲಾಶಯದ ನೀರಿನ ಮಟ್ಟ ಕುಸಿದಾಗ ಕುಡಿಯುವ ನೀರಿಗಾಗಿ ಆಹಾಕಾರವಾಗುತ್ತಿತ್ತು. ಇದರಿಂದಾಗಿ ಬೇಸಿಗೆಯ ಕಾಲದಲ್ಲಿ ಸರ್ಕಾರಕ್ಕೆ ತಲೆಬಿಸಿಯಾಗುತ್ತಿತ್ತು. ಪೂನಾ ಸರ್ಕಾರವು ನೀರಿನ ಸಮಸ್ಯೆಯನ್ನು ನಿವಾರಿಸಲು ಸರ್ ಎಂ.ವಿ.ಯವರನ್ನು ನೇಮಿಸಿತು. ಪೂನಾಕ್ಕೆ ಬಂದು ನೋಡಲಾಗಿ ಜಲಾಶಯದ ಬಾಗಿಲುಗಳು ಏರಿಗಿಂತ ಸಾಕಷ್ಟು ತಗ್ಗಿನಲ್ಲಿದ್ದು ಜಲಾಶಯ ತುಂಬಿದಾಗ ಕೋಡಿ ಬಿದ್ದು ನೀರು ಪೋಲಾಗುತ್ತಿದ್ದಿತು. ಜಲಾಶಯವನ್ನು ನಿರ್ಮಿಸಿಯೂ ಪ್ರಯೋಜನವಿಲ್ಲದಂತ್ತಿತ್ತು. ಇದನ್ನು ಮನಗಂಡ

ಸರ್ ಎಂ.ವಿ.ಯವರು ಒಂದು ನೀಲಿನಕಾಶೆ ತಯಾರಿಸಿದರು. ಅದೇನೆಂದರೆ ನೀರು ನಿರ್ದಿಷ್ಟ ಮಟ್ಟಕ್ಕೆ ಏರಿದಾಗ ಏರಿಗೆ ಅಪಾಯವಾಗದಂತೆ ಬಾಗಿಲುಗಳು ತಾವಾಗಿಯೇ ತೆರೆದುಕೊಂಡು ಹೆಚ್ಚುವರಿ ನೀರು ಹೊರಹೋಗುವುದು, ಮತ್ತೆ ನೀರು ಕಡಿಮೆಯಾದಾಗ ಬಾಗಿಲುಗಳು ತಾವಾಗಿಯೇ ಮುಚ್ಚಿಕೊಂಡು ಜಲಾಶಯದ ನೀರು ಪೋಲಾಗದಂತೆ ತಡೆಯುವುದು ಅವರ ಯೋಜನೆಯಾಯಿತು. ಜಲಾಶಯ ತುಂಬಿದಾಗ ಬಾಗಿಲುಗಳನ್ನು ತೆರೆಯಲು ವ್ಯಕ್ತಿಗಳನ್ನು ನೇಮಿಸಿದರೆ ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಬಾಗಿಲುಗಳನ್ನು ತೆರೆಯಲು ಸಾಧ್ಯವಾಗದಿರಬಹುದು. ಇವೇ ಮುಂತಾದ ಕಾರಣದಿಂದ 'ಸ್ವಯಂಚಾಲಿತ ಬಾಗಿಲು'ಗಳನ್ನು ನಿರ್ಮಿಸಿದರೆ ಸಮಸ್ಯೆಯನ್ನು ನಿವಾರಿಸಬಹುದೆಂದು ಯೋಜನೆ ಹೊಳೆಯಿತು. ತಾವೇ ಖುದ್ದು ಸ್ವಯಂಚಾಲಿತ ಬಾಗಿಲುಗಳನ್ನು ವಿನ್ಯಾಸ ಮಾಡಿದರು. 1901ರಿಂದ 1903ರ ವೇಳೆಯಲ್ಲಿ ಫೀಫ್ ಸರೋವರದ ಕೋಡಿಗೆ ಅಳವಡಿಸಿದರು. ಇದರಿಂದಾಗಿ ನೀರು ಪೋಲಾಗುವುದನ್ನು ತಡೆದುದೇ ಅಲ್ಲದೆ ಎಂಟರಿಂದ ಹತ್ತು ಅಡಿಗಳಷ್ಟು ಎತ್ತರದವರೆಗೂ ನೀರು ಸಂಗ್ರಹವಾಗಲು ಅವಕಾಶವಾಯಿತು. ಇದೇ ತತ್ವವನ್ನು ಬಳಸಿಕೊಂಡು ಮುಂದೆ 'ತಿಗ ಜಲಾಶಯ', 'ಕೃಷ್ಣರಾಜಸಾಗರ ಜಲಾಶಯ'ಕ್ಕೆ ಅಳವಡಿಸಲಾಯ್ತು. ಪ್ರಪ್ರಥಮ ಬಾರಿಗೆ ಸ್ವಯಂಚಾಲಿತ ಬಾಗಿಲುಗಳನ್ನು ನಿರ್ಮಿಸಿದುದನ್ನು ಕಂಡ ಬ್ರಿಟಿಷ್ ಅಧಿಕಾರಿಗಳು, ತಂತ್ರಜ್ಞರು ಸರ್ ಎಂ.ವಿ.ಯವರ ಜಾಣ್ಮೆಯನ್ನು ನೋಡಿ ಬೆಕ್ಕಸಬೆರಗಾದರು.

ಸೇವಾ ಅವಧಿಯ ಮಹತ್ವದ ಘಟ್ಟ

ಸರ್ ಎಂ.ವಿ.ಯವರು ತಮ್ಮ ಜಾಣ್ಮೆ ಮತ್ತು ಬುದ್ಧಿಶಕ್ತಿಯಿಂದಾಗಿ ಭಾರತದಾದ್ಯಂತ ಹೆಸರಾಂತ ತಂತ್ರಜ್ಞರಾಗಿ ಹೊರಹೊಮ್ಮಿದರು. ಅದು ಬ್ರಿಟಿಷರ ಕಾಲವಾದುದರಿಂದ ಬ್ರಿಟಿಷ್ ಇಂಜಿನಿಯರುಗಳು ಮೂಕವಿಸ್ಮಿತರಾದರು. ಸರ್ಕಾರ ಇವರ ಸೇವೆಯನ್ನು ನಿರಂತರವಾಗಿ ಬಳಸಿಕೊಳ್ಳತೊಡಗಿತು. ಮುಂಬೈ ನಗರವು ಇಂದಿಗೆ ನೂರು ವರ್ಷಗಳ ಹಿಂದೆಯೇ ಜನಭರಿತ ನಗರವಾಗಿ ಹೊರಹೊಮ್ಮಿತು. ವ್ಯಾಪಾರ, ವಾಣಿಜ್ಯ ಬಿರುಸಿನಿಂದ ನಡೆಯುತ್ತಿತ್ತು. ನಗರವು ಓತಪ್ರೋತವಾಗಿ ಬೆಳೆಯತೊಡಗಿತು. ಮಳೆಗಾಲದಲ್ಲಂತೂ ಒಳಚರಂಡಿ ವ್ಯವಸ್ಥೆ ಅದೋಗತಿಗಿಳಿಯುತ್ತಿತ್ತು. ಹೇಳಿಕೇಳಿ ಮುಂಬೈನಗರವು ಬ್ರಿಟಿಷರ ಪ್ರೆಸಿಡೆನ್ಸಿ (ರಾಜ್ಯಪಾಲರ ಕೇಂದ್ರ ಕಛೇರಿ)ಯಾಗಿತ್ತು. ಅಲ್ಲಿನ ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸಲು ಸರ್ ಎಂ.ವಿ.ಯವರೇ ಸೂಕ್ತ ವ್ಯಕ್ತಿ ಎಂದು ಮುಂಬೈ ಸರ್ಕಾರ ತೀರ್ಮಾನಿಸಿತು. 1904ರಲ್ಲಿ ಇಡೀ ಮುಂಬೈ ಪ್ರಾಂತ್ಯದ ನಗರಾಭಿವೃದ್ಧಿಯ ಮುಖ್ಯ

ಇಂಜಿನಿಯರಾಗಿ ನೇಮಿಸಿತು. 1904ರಿಂದ 1908ರವರೆಗೆ ಮುಂಬೈ ಪ್ರಾಂತ್ಯ ಮಾತ್ರವಲ್ಲ ಗುಜರಾತಿನ ಅಹಮದ್‌ನಗರ, ಇಂದಿನ ಪಾಕಿಸ್ತಾನಕ್ಕೆ ಸೇರಿದ ಕರಾಚಿಯವರೆಗೂ ಒಳಚರಂಡಿ ಮತ್ತು ಕುಡಿಯುವ ನೀರು ಯೋಜನೆಯನ್ನು ಯಶಸ್ವಿಗೊಳಿಸಿದರು.

ಏಡನ್ ನಗರಕ್ಕೆ ಸರ್ ಎಂ.ವಿ.

ಸಮಸ್ಯೆಗಳು ಎಂತಹುದೇ ಇರಲಿ ಎಲ್ಲೇ ಇರಲಿ ಅವುಗಳನ್ನು ಪರಿಹರಿಸುವ ಶಕ್ತಿ ಎಂ.ವಿ.ಯವರಲ್ಲಿತ್ತು. ಈಗಾಗಲೇ ತಿಳಿಸಿರುವಂತೆ ರಾಷ್ಟ್ರದಾದ್ಯಂತ ಅವರ ಹೆಸರು ಪ್ರಖ್ಯಾತವಾಗಿತ್ತು. ಬ್ರಿಟಿಷ್ ಇಂಜಿನಿಯರ್‌ಗಳೂ ತಲೆದೂಗುತ್ತಿದ್ದರು. ಏಡನ್ ಬಂದರಿನ ಸೈನಿಕ ನೆಲೆಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ರೂಪಿಸಲು ಮುಂಬೈ ಸರ್ಕಾರವು ಎಂ.ವಿ.ಯವರನ್ನು ನೇಮಿಸಿತು. ದೂರದ ಕೊಲ್ಲಿಗೆ ತೆರಳಿದರು. ಅಲ್ಲಿ ಕಡಿಮೆ ಮಳೆ ಬೀಳುತ್ತಿತ್ತು. ಯಾವುದೇ ಖಾಯಂ ನೀರಿನ ಮೂಲಗಳು ಇರಲಿಲ್ಲ. ಇದೆಲ್ಲವನ್ನು ತಿಳಿದುಕೊಂಡು ಏಡನ್‌ಗೆ ತೊಂಬತ್ತು ಕಿಲೋಮೀಟರ್ ದೂರದ ಸಾಧಾರಣ ಮಳೆ ಬೀಳುವ ಗುಡ್ಡಪ್ರದೇಶವನ್ನು ಆಯ್ದುಕೊಂಡರು. ಬಿದ್ದ ಮಳೆನೀರು 'ಲಹೆಜ್' ಎಂಬ ನದಿಯನ್ನು ಸೇರುತ್ತಿತ್ತು. ಈ ನದಿಯ ನೀರು ಹೆಚ್ಚಿನ ದೂರ ಹರಿಯದೆ ಮಾರ್ಗಮಧ್ಯ ಇಂಗಿಹೋಗುತ್ತಿತ್ತು. ನದಿಯ ನೀರು ಇಂಗಿಹೋಗುವ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ನೆಲಬಾವಿಗಳನ್ನು ಕೊರೆಸಿ ಆ ನೀರನ್ನು ಕೊಳವೆಗಳ ಮೂಲಕ ಏಡನ್ ನಗರಕ್ಕೆ ಸರಬರಾಜಾಗುವ ವ್ಯವಸ್ಥೆ ಮಾಡಿದರು. ಇದರಿಂದ ಏಡನ್ ನಗರದ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಯಿತು. ಒಳಚರಂಡಿ ವ್ಯವಸ್ಥೆಯ ನೀಲಿನಕಾಶೆಯನ್ನು ತಯಾರಿಸಿಕೊಟ್ಟು ಅಲ್ಲಿನ ಜನರ ಸಮಸ್ಯೆಗಳನ್ನು ನಿವಾರಿಸಿದರು.

ಸರ್ ಎಂ.ವಿ.ಯವರು ಒಡೆಯರನ್ನು ಭೇಟಿ ಮಾಡಿದ್ದು

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಆಗಲೇ ರಾಷ್ಟ್ರದಾದ್ಯಂತ ಪುರೋಗಾಮಿ ಅರಸರೆಂದು ಹೆಸರುವಾಸಿಯಾಗಿದ್ದರು. ಸುಮಾರು 1907-08ರ ಸಂದರ್ಭದಲ್ಲಿ ಪ್ರವಾಸಕ್ಕೆಂದು ಮುಂಬೈಗೆ ಬಂದಿಳಿದಿದ್ದರು. ಆಳರಸರು ಮುಂಬೈಗೆ ಬಂದಿರುವ ಸುದ್ದಿ ತಿಳಿಯುತ್ತಲೆ ಸರ್ ಎಂ.ವಿ.ಯವರು ಒಡೆಯರನ್ನು ಭೇಟಿ ಮಾಡಿದರು. ಇಂಜಿನಿಯರ್‌ರಾಗಿದ್ದ ಸರ್ ಎಂ.ವಿ.ಯವರ ಬಗ್ಗೆ ಒಡೆಯರು ತಿಳಿದುಕೊಂಡಿದ್ದರು. ಇಬ್ಬರ ನಡುವೆ ಕುಶಲೋಪರಿ ಮಾತುಕಥೆಯಾದ ಬಳಿಕ ಮುಂಬೈನಗರ, ಮೈಸೂರು ನಗರಗಳ ಬಗ್ಗೆ ಮಾತನಾಡಿದರು. ಎಂ.ವಿ.ಯವರಿಗೆ

ತಮ್ಮ ತೌರು ರಾಜ್ಯ ಮೈಸೂರಿನ ಬಗ್ಗೆ ಇರುವ ಕಾಳಜಿ, ಅವರಲ್ಲಿರುವ ಶ್ರದ್ಧೆ, ಬುದ್ಧಿವಂತಿಕೆಯನ್ನು ಅರಿತುಕೊಂಡರು. ಯುವ ಇಂಜಿನಿಯರ್‌ಗೆ ಅಂದಿನ ಕಾಲದಲ್ಲೆ 500 ರೂಪಾಯಿ ತಿಂಗಳ ಪಗಾರವನ್ನು ನೀಡುತ್ತಿದ್ದ ಸರ್ಕಾರದ ಬಗ್ಗೆ ಕೇಳಿ ಆಶ್ಚರ್ಯವಾಯಿತು. ಅದನ್ನು ಒಡೆಯರು ತೋರಗೊಡಲಿಲ್ಲವಾದರೂ ನಮ್ಮ ಸರ್ಕಾರ ಇಷ್ಟು ಸಂಬಳ ಕೊಡಲು ಸಾಧ್ಯವೆ? ಎಂದು ತಮ್ಮನ್ನು ತಾವು ಪ್ರಶ್ನಿಸಿಕೊಂಡರು. ಮೈಸೂರಿಗೆ ಬಂದಾಗ ತಮ್ಮನ್ನು ಭೇಟಿಯಾಗುವಂತೆ ಒಡೆಯರು ಸರ್ ಎಂ.ವಿ.ಯವರಿಗೆ ಹೇಳುವುದನ್ನು ಮರೆಯಲಿಲ್ಲ.

ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳಿಗೆ ಕಾಯಕಲ್ಪ ಕಲ್ಪಿಸಿದ್ದು

ಆಂಧ್ರಪ್ರದೇಶದ ಜನಭರಿತ ಅವಳಿ ನಗರಗಳಾದ ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳನ್ನು ಈಸಿ ಮತ್ತು ಮೂಸಿ ನದಿಗಳು ಬಳಸಿ ಹರಿಯುತ್ತಿದ್ದವು. ವಿಪರೀತ ಮಳೆ ಇಲ್ಲವೆ ಚಂಡಮಾರುತವಾದರೆ ಆ ಸಂದರ್ಭದಲ್ಲಿ ಈ ಅವಳಿ ನಗರಗಳಲ್ಲಿ ಅಪಾರ ಕಷ್ಟ, ನಷ್ಟ, ಸಾವು ನೋವುಗಳು ಸಂಭವಿಸುತ್ತಿದ್ದಿತು. ಇದನ್ನು ತಪ್ಪಿಸಲು ಅಲ್ಲಿನ ಸರ್ಕಾರವು ಸರ್ ಎಂ.ವಿ.ಯವರನ್ನು ಒಂದು ಯೋಜನೆ ರೂಪಿಸಿಕೊಡುವಂತೆ ಕೇಳಿಕೊಂಡಿತು. ಎಂ.ವಿ.ಯವರು ಸ್ಥಳ ಪರೀಕ್ಷೆ ಮಾಡಿ ಸಿಬ್ಬಂದಿಯೊಂದಿಗೆ ರಂಗಪ್ರವೇಶ ಮಾಡಿಯೇ ಬಿಟ್ಟರು. ಹೈದ್ರಾಬಾದ್ ನಗರಕ್ಕೆ ಹತ್ತು ಹನ್ನೆರಡು ಕಿಲೋಮೀಟರ್ ದೂರದಲ್ಲಿ ಎರಡು ನದಿಗಳಿಗೂ ಪ್ರತ್ಯೇಕವಾದ ಒಂದೊಂದು ಜಲಾಶಯ ನಿರ್ಮಿಸಲು ಯೋಜನೆ ರೂಪಿಸಿದರು. ಕೊಳಚೆನೀರನ್ನು ನದಿಗೆ ಬಿಡುತ್ತಿದ್ದರು. ಬೇಸಿಗೆ ಕಾಲದಲ್ಲಿ ನದಿನೀರು ಕಡಿಮೆಯಾದ ಸಂದರ್ಭದಲ್ಲಿ ಕೊಳಚೆನೀರಿನಿಂದ ವಾಸನೆ ಬರುತ್ತಿದ್ದ ಹಾಗೂ ನಗರದ ಜನ ನದಿ ನೀರನ್ನು ಬಳಸಲು ಅಸಹ್ಯಪಡುತ್ತಿದ್ದರು. ಇದನ್ನರಿತು ಕೊಳಚೆನೀರನ್ನು ಸಿವೇಜ್ ಫಾರಂಗಳಲ್ಲಿ ಇಂಗುವಂತೆ ಮಾಡಿದರು. ಅವಳಿ ನಗರಗಳಿಗೆ ನೀರು ನುಗ್ಗುವುದನ್ನು ತಡೆದುದೇ ಅಲ್ಲದೆ ಕುಡಿಯಲು ಯೋಗ್ಯ ನೀರನ್ನು ಒದಗಿಸಿದಂತೆಯೂ ಆಯಿತು.

ಮೈಸೂರು ಸಂಸ್ಥಾನದ ಮುಖ್ಯ ಅಭಿಯಂತರರಾಗಿ ಎಂ.ವಿ.

ಈಗಾಗಲೆ ತಿಳಿಸಿರುವಂತೆ ನಾಲ್ವಡಿ ಕೃಷ್ಣರಾಜ ಒಡೆಯರು ಇಡೀ ದೇಶದಲ್ಲೇ ಪ್ರಗತಿಪರ ಪ್ರಭುಗಳಾಗಿದ್ದರು. ಒಡೆಯರು ಎಂ.ವಿ.ಯವರನ್ನು ಮುಂಬೈನಲ್ಲಿ ಭೇಟಿಯಾದಾಗಿನಿಂದ ತಮ್ಮ ಮೈಸೂರು ಸರ್ಕಾರಕ್ಕೆ ಎಂ.ವಿ.ಯವರನ್ನೆ ಮುಖ್ಯ ಇಂಜಿನಿಯರನ್ನಾಗಿ ನೇಮಿಸಿಕೊಳ್ಳಬೇಕೆಂಬ

ಹಂಬಲವನ್ನು ತಮ್ಮ ದಿವಾನರಾಗಿದ್ದ ವಿ.ಪಿ. ಮಾಧವರಾವ್ ಅವರಲ್ಲಿ ಹೇಳಿಕೊಂಡಿದ್ದರು. ದಿವಾನರು ಕೂಡ ಉತ್ಸುಕರಾಗಿ ಎಂ.ವಿ.ಯವರಿಗೆ ಪತ್ರ ಬರೆದು ತಾವು ಮೈಸೂರಿಗೆ ಬಂದು ಮುಖ್ಯ ಇಂಜಿನಿಯರ್ ಹುದ್ದೆಯನ್ನು ಸ್ವೀಕರಿಸಿ ತಾಯ್ನಾಡಿಗೆ ತಮ್ಮ ಸೇವೆಯನ್ನು ಮುಡಿಪಾಗಿಡಬೇಕೆಂದು ಕೇಳಿಕೊಂಡರು. ಕಾರಣವೇನೆಂದರೆ 1909 ಜೂನ್ ತಿಂಗಳಿನಲ್ಲಿ ಬ್ರಿಟಿಷ್ ಮುಖ್ಯ ಇಂಜಿನಿಯರ್ ಆಗಿದ್ದ ಎಂ. ಮ್ಯಾಕ್‌ಹಚಿನ್‌ರವರು ನಿವೃತ್ತರಾಗುವವರಿದ್ದರು. ಹೀಗಾಗಿ ಒಂದೆರಡು ವರ್ಷಗಳ ಮೊದಲೆ ಎಂ.ವಿ.ಯವರ ಗಮನಕ್ಕೆ ತರಲಾಯಿತು. ದಿವಾನ್ ಮಾಧವರಾವ್‌ರವರ ನಂತರ ಶ್ರೀ ಆನಂದರಾವ್‌ರವರು ಮೈಸೂರಿನ ದಿವಾನರಾಗಿ ಅಧಿಕಾರ ಸ್ವೀಕರಿಸಿದರು (1909–1912). ಅವರೂ ಕೂಡ ಎಂ.ವಿ.ಯವರನ್ನು ಮುಖ್ಯ ಇಂಜಿನಿಯರನ್ನಾಗಿ ತರಲು ಶ್ರಮಿಸಿದರು. ಉಭಯತ್ರರ ನಡುವೆ ಪತ್ರವ್ಯವಹಾರವಾಗಿ ಎಂ.ವಿ.ಯವರು ಮೈಸೂರಿನ ಮುಖ್ಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಲು ಒಪ್ಪಿಗೆ ನೀಡಿದರು.

ಎಂ.ವಿ.ಯವರು 1909ರ ನವೆಂಬರ್ 15ರಂದು ಮೈಸೂರು ಸಂಸ್ಥಾನದ ಮುಖ್ಯ ಇಂಜಿನಿಯರ್ ಆಗಿ ಸೇವೆಗೆ ಸೇರಿದರು. 1909ರಿಂದ 1912ರವರೆಗೆ ರಾಜ್ಯದ ಮುಖ್ಯ ಇಂಜಿನಿಯರ್ ನೇಮಕಗೊಂಡರು. ಎಂ.ವಿ.ಯವರು ಸೇವೆಗೆ ಸೇರಿದಾಗ ಅವರ ಮುಂದಿದ್ದ ಪ್ರಮುಖ ಕೆಲಸಗಳೆಂದರೆ ರಾಜ್ಯದ ನೀರಾವರಿ ಯೋಜನೆಗಳು, ತಾಂತ್ರಿಕ ಶಿಕ್ಷಣ ಮತ್ತು ಕೈಗಾರಿಕಾಭಿವೃದ್ಧಿಯಂತಹ ಬೃಹತ್ ಯೋಜನೆಗಳನ್ನು ಪೂರೈಸುವುದಾಗಿತ್ತು. ಕನ್ನಂಬಾಡಿ ಬಳಿ ಜಲಾಶಯ ನಿರ್ಮಾಣ, ರೈಲು ಮಾರ್ಗಗಳ ವಿಸ್ತರಣೆ (ಅಂದು ರಾಜ್ಯಗಳೇ ರೈಲ್ವೆ ಖಾತೆಯನ್ನು ಹೊಂದಿದ್ದವು) ಶಿಕ್ಷಣ ಪ್ರಸರಣ, ತಾಂತ್ರಿಕ ಶಿಕ್ಷಣಾಭಿವೃದ್ಧಿ, ಪ್ರಮುಖ ಹುದ್ದೆಗಳ ಭರ್ತಿ, ಮಾರಿಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ ವ್ಯವಸ್ಥೆ ಇವೇ ಮುಂತಾದ ಗುರುತರ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗಿದ್ದಿತು.

ಹೆಸರಿಗೆ ಮಾತ್ರ ಮುಖ್ಯ ಇಂಜಿನಿಯರ್. ಸರ್ಕಾರಿ ಹುದ್ದೆಗಳ ನೇಮಕಾತಿ ವಿಷಯದಲ್ಲಿ ಅರ್ಹತೆಗಿಂತಲೂ ದೊಡ್ಡ ದೊಡ್ಡ ವ್ಯಕ್ತಿಗಳ ಶಿಫಾರಸ್ಸುಗಳ ಆಧಾರದ ಮೇಲೆ ನೇಮಿಸಿಕೊಂಡಿರುವ ಕಹಿ ಪ್ರಸಂಗವನ್ನು ಎಂ.ವಿ.ಯವರೇ ತಮ್ಮ ಕೃತಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. ಪ್ರಾರಂಭದಲ್ಲಿ ಸಿಬ್ಬಂದಿ ನೇಮಕಾತಿ ಸಂದರ್ಭದಲ್ಲಿ ನಾನು ಅಡಚಣೆಗಳನ್ನು ಅನುಭವಿಸಬೇಕಾಯಿತು. ಕಾಮಗಾರಿ ಇಲಾಖೆಯ ಉನ್ನತಾಧಿಕಾರಿಯೊಬ್ಬರು ಹೊಸದಾಗಿ ನೇಮಕ ಮಾಡಿಕೊಳ್ಳಬೇಕಾದ ಅಭ್ಯರ್ಥಿಗಳ ಪಟ್ಟಿಯೊಂದನ್ನು ನನಗೆ ಕಳುಹಿಸಿಕೊಟ್ಟರು. ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವಂತೆ ಪ್ರಭಾವ ಬೀರಿದ ಉನ್ನತ ಅಧಿಕಾರಿಗಳ ಪಟ್ಟಿಯನ್ನು ನನಗೆ

ನೀಡಿದರು. ಅಭ್ಯರ್ಥಿಗಳ ನಿಖರ ತಾಂತ್ರಿಕ ವಿದ್ಯಾರ್ಹತೆಯನ್ನು ಆಧರಿಸಿ ಅರ್ಹತೆಗೆ ಅನುಗುಣವಾಗಿ ಪಟ್ಟಿಮಾಡಿ ಕಳುಹಿಸಬೇಕೆಂದು ಹಿಂತಿರುಗಿಸಬೇಕಾಯಿತು. ಅಂತಿಮವಾಗಿ ಸಂದರ್ಶನ, ವಿಚಾರಣೆ, ಚರ್ಚೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಯಿತು ಮತ್ತು ಸಾಧ್ಯವಾದಷ್ಟು ವಿದ್ಯಾರ್ಹತೆ ಮತ್ತು ಯೋಗ್ಯತೆಗಳನ್ನು ಮಾತ್ರ ಗಮನಿಸಿ ಅವುಗಳಿಗೆ ಆದ್ಯತೆ ನೀಡಿ ಆಯ್ಕೆ ನಡೆಸಲಾಯಿತು. (ನನ್ನ ವೃತ್ತಿ ಜೀವನದ ನೆನಪುಗಳು- ಸರ್ ಎಂ.ವಿಶ್ವೇಶ್ವರಯ್ಯ, ಪುಟ: 57). (ಜನಸಾಮಾನ್ಯರ ನಂಬಿಕೆ ಏನೆಂದರೆ ಹಿಂದಿನ ಕಾಲದಲ್ಲಿ ಜಾತೀಯತೆ, ಶಿಫಾರಸ್ಸು ಸ್ವಜನಪಕ್ಷಪಾತ ಇವೇ ಮುಂತಾದವುಗಳು ಇರಲಿಲ್ಲ. ಶಿಸ್ತಿನಿಂದ ಕೂಡಿತ್ತು ಎಂಬ ಭಾವನೆ ಇದೆ. ಆದರೆ ಅಂದಿನ ಕಾಲದಲ್ಲೂ ಆಡಳಿತದಲ್ಲಿ ದೌರ್ಬಲ್ಯಗಳಿತ್ತು ಎನ್ನುವುದಕ್ಕೆ ಇದು ಉತ್ತಮವಾದ ಉದಾಹರಣೆಯಾಗಿದೆ ಎನ್ನುವುದು ನನ್ನ ಅಭಿಪ್ರಾಯ.)

ಅಂದು ಮೈಸೂರು ಸಂಸ್ಥಾನದಲ್ಲಿ ಅಸಂಖ್ಯಾತ ಪುಟ್ಟ ಪುಟ್ಟ ಜಲಾಶಯ ಮತ್ತು ಕೆರೆಗಳಿದ್ದವು. 'ಮಾರಿಕಣಿವೆ' ಎಂಬಲ್ಲಿ ಒಂದು ಗಾರೆಯಿಂದ ಕಟ್ಟಿದ ವಿಶಾಲವಾದ ದೊಡ್ಡಜಲಾಶಯವು ನೂತನವಾಗಿ ನಿರ್ಮಾಣವಾಗಿತ್ತು. ಅಲ್ಲಿನ ರೈತರು ನೀರನ್ನು ಮಿತವ್ಯಯದಿಂದ ಪ್ರಮಾಣಬದ್ಧವಾಗಿ ಬಳಸದೆ ಪೋಲು ಮಾಡುತ್ತಿದ್ದರು. ತಗ್ಗು ಪ್ರದೇಶದಲ್ಲಿ ನೀರು ನಿಂತು ಇಡೀ ಪ್ರದೇಶ ಮಲೇರಿಯ ರೋಗಕ್ಕೆ ತುತ್ತಾಗಿತ್ತು. ಜಲಾಶಯಕ್ಕೆ ಬ್ಲಾಕ್ ಸಿಸ್ಟಂ ಅಳವಡಿಸಲು ಎಂ.ವಿ.ಯವರು ಯೋಜಿತರಾದರು ಅದಕ್ಕೆ ರೈತರು ಒಪ್ಪದಿದ್ದಾಗ ಅವರನ್ನು ಒಪ್ಪಿಸಿ ಮಿತ ಬಳಕೆಗೆ ಮನಸ್ಸನ್ನು ಬದಲಾಯಿಸಲಾಯಿತು. (ಅಂದು ಎಂ.ವಿ.ಯವರು ರೈತರಿಗೆ ಹೊಸಬರು ಹಾಗೂ ಅವರ ಮಹತ್ವ ತಿಳಿದಿರಲಿಲ್ಲ)

ಕನ್ನಂಬಾಡಿ ಕಟ್ಟೆಯ ನಿರ್ಮಾಣ

ಸರ್ ಎಂ.ವಿ.ಯವರು ಮೈಸೂರಿನ ಮುಖ್ಯ ಇಂಜಿನಿಯರಾಗಿ ಸೇವೆಗೆ ಸೇರಿದಾಗಿನಿಂದ ಅವರ ಮನಸ್ಸಿನಲ್ಲಿದ್ದ ಯೋಜನೆಯೊಂದನ್ನು ಸಾಕಾರಗೊಳಿಸಬೇಕೆಂಬುದಿತ್ತು. ಅದೇ ಕನ್ನಂಬಾಡಿ ಕಟ್ಟೆಯ ನಿರ್ಮಾಣ. ಎಂ.ವಿ.ಯವರು ಸುಮ್ಮನೆ ಕುಳಿತು ಪಗಾರ ಎಣಿಸುವ ಜಾಯಮಾನದವರಲ್ಲ. ತಮ್ಮ ಕಾಲದಲ್ಲಿ ಏನನ್ನಾದರು ಸಾಧಿಸಬೇಕೆಂಬ ಹುಮ್ಮಸ್ಸಿದ್ದಿತು. ಅದಕ್ಕಾಗಿ ಸರ್ಕಾರಕ್ಕೆ ಕಟ್ಟೆಯ ನಿರ್ಮಾಣ ಕಾರ್ಯ ಕೈಗೊಳ್ಳಲು ಮನವರಿಕೆ ಮಾಡಿಕೊಂಡರು. ಎಂ.ವಿ.ಯವರು ಮುಖ್ಯ ಇಂಜಿನಿಯರ್ ಆದ ಎರಡೇ ವರ್ಷಗಳಲ್ಲಿ ನಾಡಿನ ಬೃಹತ್ ಯೋಜನೆ ಕೈಗೆತ್ತಿಕೊಳ್ಳಲು ಸಜ್ಜಾದರು. 1911ರ ಮೇ 5ನೇ ತಾರೀಖು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಕಟ್ಟೆಯ ನಿರ್ಮಾಣದ

ಅಂದಾಜು ವೆಚ್ಚ 253 ಲಕ್ಷ ರೂಪಾಯಿಗಳಾಗಿತ್ತು. ಈ ಪ್ರಸ್ತಾವ ಸರ್ಕಾರಕ್ಕೆ ತಲುಪುತ್ತಲೇ ಹಣಕಾಸು ಇಲಾಖೆಯ ಕಾರ್ಯದರ್ಶಿಯವರು ಮಹಾರಾಜರಿಗೆ ಒಂದು ಟಿಪ್ಪಣಿಯನ್ನು ಸಲ್ಲಿಸಿ ಈ ಕೆಳಕಂಡ ಅಪನಂಬಿಕೆಯನ್ನು ವ್ಯಕ್ತಪಡಿಸಿತು. ಅದೇನೆಂದರೆ ಯೋಜನೆಯ ಅಂದಾಜು ವೆಚ್ಚ ರೂ. 253 ಲಕ್ಷ ರಾಜ್ಯದ ಇಡೀ ವರ್ಷದ ಸಂಪನ್ಮೂಲ ರೂ. 230 ಲಕ್ಷ. ಭಾರಿ ಬಂಡವಾಳವನ್ನು ತೊಡಗಿಸಿದಲ್ಲಿ ಅದರ ಪ್ರತಿಫಲ ಬರುವುದಿಲ್ಲ. ಸರ್ಕಾರಕ್ಕೆ ಭಾರಿ ಹೊರೆ ಬೀಳುತ್ತದೆಯೇ ವಿನಹ ಲಾಭವಿಲ್ಲವೆಂದು ಯೋಜನೆಗೆ ಅಡ್ಡಗಾಲು ಹಾಕಿತು.

ಒಡೆಯರು ತಕ್ಷಣ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲಿಲ್ಲ. ಕಾರಣ ಭಾರಿ ಬಂಡವಾಳ ಬೇಡುವ ಯೋಜನೆ ಅದಾಗಿತ್ತು. ಎಂ.ವಿ.ಯವರು ಸರ್ಕಾರ ಯಾವ ನಿರ್ಧಾರಕ್ಕೂ ಬಾರದ ಕಾರಣ ರಜೆಯ ಮೇಲೆ ಉತ್ತರ ಭಾರತ ಪ್ರವಾಸಕ್ಕೆ ತೆರಳಿದರು. ಅಲ್ಲಿಂದ ವಾಪಸ್ಸು ಬಂದ ಮೇಲೂ ಬದಲಾವಣೆ ಕಾಣಲಿಲ್ಲ. ಇದರಿಂದ ಬೇಸರಗೊಂಡ ಎಂ.ವಿ.ಯವರು ಒಡೆಯರನ್ನು ಭೇಟಿಮಾಡಿ ನಾನು ಇಲ್ಲಿ ಮಾಡುವಂತಹ ಕೆಲಸ ಏನೂ ಇಲ್ಲ. ಆದಕಾರಣ ನನ್ನನ್ನು ಬಿಡುಗಡೆಗೊಳಿಸಿ ಎಂದರು. ವಿಚಲಿತರಾದ ಒಡೆಯರು ಯೋಜನೆಯ ಸಾಧಕ ಬಾಧಕಗಳನ್ನು ಕೇಳಿದರು. ಅದಕ್ಕೆ ಎಂ.ವಿ.ಯವರು ಬೇಸಿಗೆ ಕಾಲದಲ್ಲಿ ಕಾವೇರಿ ನೀರು ಖಾಲಿಯಾಗಿ ವಿದ್ಯುತ್ ಉತ್ಪಾದನೆಯಲ್ಲಿ ವ್ಯತ್ಯಯವಾಗುತ್ತಿದೆ. ಅಣೆಕಟ್ಟು ಕಟ್ಟಿದರೆ ಶಿವನಸಮುದ್ರಕ್ಕೆ ನಿರಂತರವಾಗಿ ನೀರನ್ನು ಸರಬರಾಜು ಮಾಡುವ ಮೂಲಕ ವಿದ್ಯುತ್ತನ್ನು ನಿರಂತರವಾಗಿ ಉತ್ಪಾದಿಸಲು ನೆರವಾಗುತ್ತದೆ. ಇದರಿಂದ ಸಂಸ್ಥಾನಕ್ಕೆ ಆದಾಯ ಬರುತ್ತದೆ. ಒಂದೂವರೆ ಲಕ್ಷ ಎಕರೆ ಭೂಮಿಗೆ ನೀರುಣಿಸಬಹುದು. ಇದರಿಂದಾಗಿ ಆಹಾರ ಉತ್ಪಾದನೆ ದ್ವಿಗುಣಗೊಳ್ಳುತ್ತದೆ. ರಾಜ್ಯದ ಆದಾಯ ಹೆಚ್ಚಾಗುತ್ತದೆ. ವ್ಯವಸಾಯ ಉಪಕರಣ, ಗೊಬ್ಬರ, ಕ್ರಿಮಿನಾಶಕಗಳ ಬೇಡಿಕೆ ಹೆಚ್ಚಾಗಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕೈಗಾರಿಕೆಗಳು, ಗೃಹಕೈಗಾರಿಕೆಗಳು ತಲೆ ಎತ್ತುವಂತಾಗುತ್ತದೆ. ಇದರಿಂದಾಗಿ ಉದ್ಯೋಗ ಸೃಷ್ಟಿಯಾಗುತ್ತದೆ. ತರಿಜಮೀನಿನ ಮೇಲೆ ಹೆಚ್ಚಿನ ತೆರಿಗೆ ವಿಧಿಸಬಹುದು. ಇದರಿಂದಾಗಿ ಭೂಕಂದಾಯ ನಿವ್ವಳವಾಗುತ್ತದೆ ಹಾಗೂ ರಾಜ್ಯದ ಆದಾಯ ಹೆಚ್ಚಾಗುತ್ತದೆ. ಇನ್ನೂ ಹೆಚ್ಚಾಗಿ ರೈತಾಪಿ ಜನ ನಿಮ್ಮನ್ನು ನೆನೆದು ಕೊಳ್ಳುವಂತಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಈ ಯೋಜನೆ ಒಂದೇ ದಿನ ಇಲ್ಲವೆ ಒಂದೇ ವರ್ಷಕ್ಕೆ ಮುಗಿಯುವುದಿಲ್ಲ. ಎರಡು, ಮೂರು ವರ್ಷ ಬೇಕಾಗುತ್ತದೆ. ಹಂತ ಹಂತವಾಗಿ ಹಣ ತೊಡಗಿಸಿದರೆ ಸಾಕು, ಅಲ್ಲದೆ ಈ ನಿಮ್ಮ ಉಪಕಾರಕ್ಕೆ ರೈತರು ನಿಮ್ಮನ್ನು ಶಾಶ್ವತವಾಗಿ ನೆನೆಸಿಕೊಳ್ಳುತ್ತಾರೆ ಎಂದು ಕೃಷ್ಣರಾಜರಿಗೆ ಮನವರಿಕೆ ಮಾಡಿಕೊಟ್ಟರು. ಸಂತೃಪ್ತರಾದ ಒಡೆಯರು ದಿವಾನರು ಮತ್ತು

ಹಣಕಾಸು ಇಲಾಖೆಯೊಂದಿಗೆ ಮಾತುಕತೆ ನಡೆಸಿ ಎಂ.ವಿ.ಯವರನ್ನು ಕರೆಸಿಕೊಂಡು ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಹಸಿರು ನಿಶಾನೆ ತೋರಿಸಿದರು.

ಮದ್ರಾಸ್ ಸರ್ಕಾರದ ತಕರಾರು

ಮೈಸೂರು ಸಂಸ್ಥಾನದಲ್ಲಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟಲು ಸಿದ್ದಮಾಡಿ ಕೊಳ್ಳುತ್ತಿರುವುದನ್ನು ಕಂಡ ಮದ್ರಾಸ್ ಸರ್ಕಾರ ತಗಾದೆ ತೆಗೆಯಿತು. ಇದಕ್ಕೆ ಕೇಂದ್ರಸರ್ಕಾರ ಅನುಮೋದನೆ ನೀಡಬಾರದೆಂದು ಒತ್ತಾಯ ಏರಿತು. ಇಂತಹ ಸಮಯದಲ್ಲಿ ಎಂ.ವಿ.ಯವರ ಬುದ್ಧಿವಂತಿಕೆ ಮೇದಾಶಕ್ತಿಗೆ ಇಡೀ ಭಾರತದಲ್ಲಿ ಯಾರೂ ಸರಿಸಮರಿರಲಿಲ್ಲ. ಎಂ.ವಿ.ಯವರೇ ಹೇಳಿರುವಂತೆ ಮದ್ರಾಸ್ ಸರ್ಕಾರವು ಕಾವೇರಿ ನದಿಗೆ ಅಡ್ಡಲಾಗಿ 'ಮೆಟ್ಟೂರು' ಎಂಬಲ್ಲಿ ಜಲಾಶಯವೊಂದನ್ನು ನಿರ್ಮಿಸುವ ಯೋಜನೆಯನ್ನು ಸಿದ್ದಪಡಿಸಿತ್ತು. ಮೆಟ್ಟೂರು ಕನ್ನಂಬಾಡಿಗಿಂತ ಅರವತ್ತು ಮೈಲುಗಳಷ್ಟು ದೂರದಲ್ಲಿದೆ. ಕನ್ನಂಬಾಡಿ ಜಲಾಶಯದ ಯೋಜನೆಯು ಕಾರ್ಯರೂಪಕ್ಕಿಳಿದರೆ ಅವರು ತಮ್ಮ ಯೋಜನೆಯಲ್ಲಿ ಸಾಕಷ್ಟು ಮಾರ್ಪಾಡು ಮಾಡಿಕೊಳ್ಳಬೇಕಾಗಿ ಬರುತ್ತಿತ್ತು. ಆದರೆ ಅವರು ಹಾಗೆ ಮಾಡಲು ಕೆಲವು ಕಾಲದವರೆಗೂ ಸಿದ್ದರಾಗಲೇ ಇಲ್ಲ. ನಾವು ಈ ಕುರಿತು ಭಾರತ ಸರ್ಕಾರಕ್ಕೆ ಅಹವಾಲು ಸಲ್ಲಿಸಿದೆವು. ನಾವು ಭಾರತದ ವೈಸ್‌ರಾಯ್‌ರಾಗಿದ್ದ ಲಾರ್ಡ್ ಹಾರ್ಡಿಂಜರವರೆದುರು ನಮ್ಮ ಕೋರಿಕೆಯನ್ನು ಮಂಡಿಸಿದೆವು. ಇದರ ಫಲವಾಗಿ ಮಂಜೂರಾತಿ ದೊರೆಯಿತು. ಪ್ರಥಮ ಹಂತದಲ್ಲಿ 80 ಅಡಿಗಳು ಮಾತ್ರ. ಆದರೆ ಕಟ್ಟೆಯ ಬುಡದ ಅಗಲವನ್ನು ನಾವು ಮೊದಲೇ ವಿನ್ಯಾಸಗೊಳಿಸಿದ್ದ 124 ಅಡಿ ಎತ್ತರಕ್ಕೆ ಕಾರ್ಯ ಪ್ರಾರಂಭ ಮಾಡಿದೆವು. ಈ ನಡುವೆ ಕೇಂದ್ರವು 'ಆರ್ಬಿಟ್ರಿಷನ್ ಕಮಿಟಿ' ನೇಮಕ ಮಾಡಿತು. ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್ ಹಾಗೂ ಮೈಸೂರು ಸಂಸ್ಥಾನದ ಬ್ರಿಟಿಷ್ ಸ್ಥಾನಿಕ ಅಧಿಕಾರಿಯಾಗಿದ್ದ ಸರ್ ಹಗ್‌ಡೇಲಿಯವರ ಸಹಾನುಭೂತಿ ಮತ್ತು ಬೆಂಬಲವಿತ್ತು. ನಾವು ಈ ವಿಚಾರದಲ್ಲಿ ನಮಗೆ ಸಹಾಯ ಮಾಡಿದ ಈ ಇಬ್ಬರು ಮಹನೀಯರಿಗೂ ಚಿರಋಣಿಗಳಾಗಿರಬೇಕು.

1. ಈ ಜಲಾಶಯದ ನಿರ್ಮಾಣದ ವರ್ಷದವರೆಗೂ ಅಂದರೆ 1912ರವರೆಗೂ ಬ್ರಿಟಿಷರ ಆಡಳಿತದಲ್ಲಾಗಲಿ ಅದಕ್ಕೆ ಪೂರ್ವದಲ್ಲಾಗಲಿ ಇಡೀ ಭಾರತದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಜಲಾಶಯ ನಿರ್ಮಾಣವಾಗಿಲ್ಲ.

2. ಮದ್ರಾಸ್ ಸರ್ಕಾರ ಇದೇ ನದಿಗೆ ಅಡ್ಡಲಾಗಿ ಕಟ್ಟಲು ಉದ್ದೇಶಿಸಿದ್ದ ಮೆಟ್ಟೂರು ಜಲಾಶಯ ದುಪ್ಪಟ್ಟು ದೊಡ್ಡದಾದರೂ ಕಾರ್ಯಾರಂಭ

ಗೊಂಡಿದ್ದು ಮಾತ್ರ 1925 ಜುಲೈ ತಿಂಗಳಿನಲ್ಲಿ ಅಂದರೆ 13 ತಿಂಗಳ ನಂತರ.

3. ಕಾವೇರಿ ಜಲಾಶಯದ ಎಡದಂಡೆ ಕಾಲುವೆಯನ್ನು ಮುಂದುವರಿಸಲು ಸುಮಾರು ಒಂದು ಮುಕ್ಕಾಲು ಮೈಲಿ ಉದ್ದದ ಸುರಂಗವೊಂದನ್ನು ಗುಡ್ಡವೊಂದರ ಅಡಿಯಲ್ಲಿ ಕೊರೆಯಲಾಯಿತು. ಭಾರತದಲ್ಲಿ ಮೊಟ್ಟಮೊದಲು ಕೊರೆಯಲ್ಪಟ್ಟ ಅತ್ಯಂತ ಉದ್ದದ ಸುರಂಗ. (ನನ್ನ ವೃತ್ತಿ ಜೀವನದ ನೆನಪುಗಳು, ಸರ್ ಎಂ. ವಿಶ್ವೇಶ್ವರಯ್ಯ, ಪುಟ: 67).

ಜಲಾಶಯದ ಸ್ವರೂಪ

ಕನ್ನಂಬಾಡಿ ಕಟ್ಟೆಯನ್ನು ಕಟ್ಟುವ ಸಂದರ್ಭದಲ್ಲಿ ಕನ್ನಂಬಾಡಿ ಎಂಬ ಗ್ರಾಮ ಸೇರಿದಂತೆ ಹಲವಾರು ಹಳ್ಳಿಗಳ ಜನರನ್ನು ಬೇರೆಡೆಗೆ ವರ್ಗಾಯಿಸಲಾಯ್ತು. ಹತ್ತಾರು ಹಳ್ಳಿಗಳು ಮುಳುಗಡೆಯಾದವು. ಈ ಹಳ್ಳಿಯು ಹೊಯ್ಸಳರ ಕಾಲದಲ್ಲೂ ಪ್ರಖ್ಯಾತವಾಗಿತ್ತು. (ಹೊಯ್ಸಳರ ದೇವಾಲಯವಿದೆ) ಈ ಜಲಾಶಯಕ್ಕೆ ಒಡೆಯರು ಧನ ಸಹಾಯ ಮಾಡಿ ತಮ್ಮ ಔದಾರ್ಯ ಮೆರೆದುದರಿಂದ 1917ರಲ್ಲಿ ಇದಕ್ಕೆ ಕೃಷ್ಣರಾಜಸಾಗರ ಎಂದು ನಾಮಕರಣ ಮಾಡಲಾಯ್ತು. ಇದರ ತಳಪಾಯ 111 ಅಡಿ ಅಗಲವಿದ್ದು ನದಿಪಾತ್ರದಲ್ಲಿ 16 ಅಡಿಗಳ ಆಳವಿದೆ. ಕಟ್ಟೆಯ ಮೇಲ್ಭಾಗದ ಅಗಲ 14.25 ಅಡಿ. ಕಟ್ಟೆಯಲ್ಲಿ 48 ಟಿ.ಎಂ.ಸಿ. ನೀರು ಸಂಗ್ರಹಿಸಬಹುದು. 50 ಅಡಿ ಎತ್ತರದಲ್ಲಿ ಮೂರು ಬಾಗಿಲು ಮತ್ತು 40 ಅಡಿಗಳ ಎತ್ತರದಲ್ಲಿ 16 ಬಾಗಿಲುಗಳಿವೆ. 103 ಅಡಿ ಎತ್ತರದಲ್ಲಿ 48 ಬಾಗಿಲುಗಳಿವೆ. ಮೇಲಿನ ಕಂಡಿಗಳಿಗೆ ಎಂ.ವಿ.ಯವರು ರೂಪಿಸಿದ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಲಾಗಿದೆ. ಕಟ್ಟೆಯಲ್ಲಿ 124 ಅಡಿ ನೀರು ನಿಲ್ಲಿಸಬಹುದು. ಪ್ರವಾಹದ ಮುನ್ನೆಚ್ಚರಿಕೆಯಾಗಿ ಅಂದರೆ ಒಳ ಹರಿವು ಹೆಚ್ಚಾಗಿ ಕಟ್ಟೆಗೆ ಅಪಾಯ ಕಂಡುಬಂದರೆ 3ರಿಂದ 5 ಕ್ಯೂಸೆಕ್ಸ್ ನೀರು ಹೊರ ಹೋಗುವಂತೆ ಮಾಡಲಾಗಿದೆ. ಸ್ವಯಂಚಾಲಿತ ಬಾಗಿಲುಗಳು ಕಾರ್ಯನಿರ್ವಹಿಸುವುದರಿಂದ ಕಟ್ಟೆಯ ಕಣ್ಗಾವಲು ಪಡೆಯ ಅವಶ್ಯಕತೆ ಇಲ್ಲ. ಎಂ.ವಿ.ಯವರು ಮುಂದಾಲೋಚನೆಯಿಂದ ಸಣ್ಣಪ್ರಮಾಣದ ವಿದ್ಯುತ್ ಉತ್ಪಾದನೆಗೂ ಅವಕಾಶವಾಗುವಂತೆ ಕೆಲವು ತೂಬುಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದಾರೆ. ಕಟ್ಟೆಯನ್ನು ಯಶಸ್ವಿಗೊಳಿಸಿದರಿಂದಾಗಿ ಶಿವನಸಮುದ್ರಕ್ಕೆ ವರ್ಷದ ಎಲ್ಲಾ ಕಾಲವು ನೀರನ್ನು ಪೂರೈಸುವ ಮೂಲಕ ಜಲವಿದ್ಯುತ್ ತಯಾರಿಕೆಗೆ ಸಹಾಯವಾಗಿದೆ. ಕಟ್ಟೆಯಿಂದಾಗಿ ಸುಮಾರು ಒಂದು ಲಕ್ಷದ ಐವತ್ತು ಸಾವಿರ ಎಕರೆಗೆ ನೀರುಣಿಸಲು ಸಾಧ್ಯವಾಗಿದೆ.

ಕಟ್ಟೆಯನ್ನು ಪೂರ್ತಿ ಮಾಡಿದ ತರುವಾಯ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು ತಮ್ಮ ಅಧಿಕಾರದ ಅವಧಿಯಲ್ಲಿ ಅಲ್ಲೊಂದು ಸುಂದರ ಉದ್ಯಾನವನವನ್ನು ನಿರ್ಮಿಸಲು ಅಂದಿನ ತೋಟಗಾರಿಕಾ ಇಲಾಖೆಯ ನಿರ್ದೇಶಕರಾಗಿದ್ದ ಜರ್ಮನಿಯ ಕ್ರುಂಬಿಗಲ್ ಮತ್ತು ಹೆಚ್.ಸಿ. ಜವರಾಯ (ಪ್ರಥಮ ಭಾರತೀಯ ತೋಟಗಾರಿಕಾ ನಿರ್ದೇಶಕರು)ರವರನ್ನು ನಿಯೋಜಿಸಿದರು. ಇವರೀರ್ವರ ಬುದ್ಧಿಶಕ್ತಿ ಮತ್ತು ಅನುಭವಗಳ ಮೂಸೆಯಿಂದ ಹೊರ ಮೂಡಿದ್ದೇ 'ಬೃಂದಾವನ' ಎಂಬ ಕಾರಂಜಿಗಳನ್ನೊಳಗೊಂಡ ಸಸ್ಯಶಾಮಲೆಯನ್ನು ಕಾಣಬಹುದು. ರಾಷ್ಟ್ರದ ಹಲವಾರು ಭಾಷೆಗಳ ಚಲನಚಿತ್ರಗಳಲ್ಲಿ ಇದರ ಸಿರಿ ಸೊಬಗನ್ನು ಸೆರೆಹಿಡಿಯಲಾಗಿದೆ.

ಕನ್ನಂಬಾಡಿ ಕಟ್ಟೆಯ ನಿರ್ಮಾಣದಿಂದಾಗಿ ಶಿವನಸಮುದ್ರಕ್ಕೆ ನಿರಂತರವಾಗಿ ನೀರನ್ನು ಒದಗಿಸಲು ಸಾಧ್ಯವಾಯಿತೆಂದು ಈಗಾಗಲೆ ತಿಳಿಸಲಾಗಿದೆ. 1918ರ ವೇಳೆಗೆ 25,000 ಅಶ್ವಶಕ್ತಿ ವಿದ್ಯುತ್ ಉತ್ಪಾದಿಸಲು ಸಾಧ್ಯವಾಯಿತು. 1911–12ರಲ್ಲಿ 16.65 ಲಕ್ಷ ರೂ.ಗಳ ಆದಾಯವಿದ್ದದ್ದು 1918ರಲ್ಲಿ 24.2 ಲಕ್ಷ ರೂ.ಗಳ ಆದಾಯ ಬರುವಂತಾಯ್ತು. ಶಿವನಸಮುದ್ರದ ಜಲಪಾತಕ್ಕೆ ಸಮೀಪದ ಶಿಂಷಾದಲ್ಲಿ ವಿದ್ಯುತ್ ಉತ್ಪಾದಿಸಲು ಯೋಜಿಸಲಾಯಿತು. ಶರಾವತಿ ವಿದ್ಯುತ್ ಯೋಜನೆಯ ಬಗ್ಗೆ ಪ್ರಾರಂಭಿಕ ಸಮೀಕ್ಷೆಗಳನ್ನು ನಡೆಸಿದರು. ಲಿಂಗನಮಕ್ಕಿ ಅಣೆಕಟ್ಟೆಯಿಂದ ನೀರು ಪೋಲಾಗುವುದನ್ನು ತಡೆಯಲು ಹೆಚ್ಚು ಹೆಚ್ಚು ವಿದ್ಯುತ್ ಉತ್ಪಾದನೆ ಯೋಜನೆ ರೂಪಿಸಿಕೊಟ್ಟರು.

ದಿವಾನರಾಗಿ ಸರ್ ಎಂ.ವಿ.

ಮೈಸೂರಿನ ಮುಖ್ಯ ಇಂಜಿನಿಯರಾಗಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿಕೊಳ್ಳಬೇಕೆಂಬ ಹಂಬಲ ಕೃಷ್ಣರಾಜರಲ್ಲಿತ್ತು. ಅವರಲ್ಲಿದ್ದ ದಕ್ಷತೆ, ಶಿಸ್ತು, ಅಪಾರ ಜ್ಞಾನ ಎಲ್ಲದಕ್ಕೂ ಮಿಗಿಲಾಗಿ ಇಂಜಿನಿಯರಿಂಗ್ ಕ್ಷೇತ್ರವೇ ಅಲ್ಲದೆ ಎಲ್ಲಾ ವಿಷಯಗಳಲ್ಲೂ ಅವರಿಗಿದ್ದ ಜ್ಞಾನ ಇವೇ ಮುಂತಾದವು ಒಡೆಯರನ್ನು ಆಕರ್ಷಿಸಿತು. ಈ ವೇಳೆಗಾಗಲೆ ಐವರು ದಿವಾನರು ಆಳ್ವಿಕೆ ಮಾಡಿದ್ದರು. ಅವರುಗಳೆಂದರೆ–

1. ದಿವಾನ್ ರಂಗಾಚಾರ್ಲು (1881–1883)
2. ದಿವಾನ್ ಕೆ. ಶೇಷಾದ್ರಿ ಅಯ್ಯರ್ (1883–1901)
3. ದಿವಾನ್ ಪಿ.ಎನ್. ಕೃಷ್ಣಮೂರ್ತಿ (1902–1906)
4. ವಿ.ಪಿ. ಮಾಧವರಾವ್ (1906–1909)

5. ಟಿ. ಆನಂದರಾವ್ (1909-1912)

ಜನಸಾಮಾನ್ಯರು ತಿಳಿದುಕೊಂಡಿರುವಂತೆ ದಿವಾನರು ಸರ್ವತಂತ್ರ ಸ್ವತಂತ್ರರಾಗಿದ್ದು ಮನಬಂದಂತೆ ವರ್ತಿಸಲು ಸಾಧ್ಯವಿರಲಿಲ್ಲ. ಸರ್ ಎಂ.ವಿ.ಯವರ ಕಾಲದಲ್ಲಿ ಒಟ್ಟು 35 ಇಲಾಖೆಗಳಿದ್ದವು. ಅವುಗಳನ್ನು ಏಳು ಸಚಿವಾಲಯಗಳು ನಿಭಾಯಿಸುತ್ತಿದ್ದವು. ಕೌನ್ಸಿಲ್ ಸಭೆಯಲ್ಲಿ ಕೈಗೊಂಡ ನಿರ್ಣಯಗಳಿಗೆ ಬಹುಮತದ ತೀರ್ಮಾನ ಅಗತ್ಯವಿದ್ದಿತು. ಒಮ್ಮತದ ನಿರ್ಣಯಕ್ಕೆ ಬರದಿದ್ದರೆ ಒಡೆಯರು ತೀರ್ಮಾನವನ್ನು ಕೈಗೊಳ್ಳುವ ಅಧಿಕಾರವಿತ್ತು. ಒಡೆಯರ ಕಾರ್ಯದರ್ಶಿಗಳಲ್ಲಿ ಒಬ್ಬರು ಬ್ರಿಟಿಷ್ ಅಧಿಕಾರಿಯಿರುತ್ತಿದ್ದರು. ಮಹಾರಾಜರ ಕುಟುಂಬವರ್ಗ, ಉನ್ನತಾಧಿಕಾರಿಗಳ ವರ್ಗವೇ ಅಲ್ಲದೆ ಆಪ್ತವಲಯದ ಪ್ರಭಾವವೂ ಇದ್ದಿತು. ಇವೆಲ್ಲದರ ನಡುವೆ ಆಡಳಿತ ನಿಭಾಯಿಸ ಬೇಕಾಗಿದ್ದಿತು. ಸಾಮಾನ್ಯವಾಗಿ ದಿವಾನರನ್ನು ನೇಮಕ ಮಾಡುವಾಗ ಕೆಳಹಂತದಿಂದ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಿದ, ಆಡಳಿತಾನುಭವ ಹೊಂದಿದ ವ್ಯಕ್ತಿಗಳನ್ನೇ ದಿವಾನರನ್ನಾಗಿ ಆಯ್ಕೆ ಮಾಡುತ್ತಿದ್ದರು. ಆದರೆ ಸರ್ ಎಂ.ವಿ.ಯವರು ಇಂಜಿನಿಯರಾಗಿ ಅನುಭವ ಉಳ್ಳವರಾಗಿದ್ದರು. ಈಗಾಗಲೇ 3 ವರ್ಷ ದಿವಾನರಾಗಿ ಸೇವೆ ಸಲ್ಲಿಸಿದ್ದ ಶ್ರೀ ಟಿ. ಆನಂದರಾವ್‌ರವರ ತರುವಾಯ ಸರ್ ಎಂ.ವಿ.ಯವರನ್ನೇ ದಿವಾನರನ್ನಾಗಿ ನೇಮಕ ಮಾಡಬೇಕೆಂದು ತೀರ್ಮಾನಿಸಿ ಸರ್ ಎಂ.ವಿ.ಯವರನ್ನು ಒಡೆಯರು ಖುದ್ದಾಗಿ ಕರೆಸಿಕೊಂಡು ಕೇಳಿದರು. ಅದಕ್ಕೆ ಅಷ್ಟು ಸುಲಭವಾಗಿ ಒಪ್ಪದಿದ್ದಾಗ ಇಂತಹ ಜವಾಬ್ದಾರಿ ಹುದ್ದೆಗೆ ನೀವೇ ಸಮರ್ಥರು. ನೀವು ಒಪ್ಪಿಕೊಳ್ಳಬೇಕೆಂದು ಖಚಿತವಾಗಿ ತಿಳಿಸಿದ ಮೇಲೆ ವಿಧಿಯಿಲ್ಲದೆ ಒಪ್ಪಿಕೊಳ್ಳಬೇಕಾಯ್ತು.

1912ರ ನವೆಂಬರ್ 19ರಂದು ಮೈಸೂರು ಸಂಸ್ಥಾನದ ಆರನೆಯ ದಿವಾನರಾಗಿ ಅಧಿಕಾರ ವಹಿಸಿಕೊಂಡರು. ಸರ್ ಎಂ.ವಿ.ಯವರ ಗುರಿ ಶಿಕ್ಷಣ, ಕೈಗಾರಿಕೆ, ನೀರಾವರಿ, ಭೂಕಂದಾಯ, ಹಣಕಾಸು, ಬ್ಯಾಂಕಿಂಗ್, ವ್ಯಾಪಾರ ವಾಣಿಜ್ಯದ ಅಭಿವೃದ್ಧಿ ಸೇರಿದಂತೆ ಸಂಸ್ಥಾನವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವ ಜವಾಬ್ದಾರಿ ಅವರ ಮುಂದಿದ್ದಿತು. ದಿವಾನರಾದಾಗ ಅವರ ಮನಸ್ಸಿನಲ್ಲಿ ಒಂದು ರೀತಿಯ ಸಂಶಯವಿದ್ದಿತು. ಅದೇನೆಂದರೆ ತನ್ನ ತಾಯಿಯಾಗಲಿ (ಆಗ ಅವರ ತಾಯಿಯವರು ಬದುಕಿದ್ದರು) ತನ್ನ ಸಹೋದರರು ಇಲ್ಲವೆ ಸಹೋದರಿಯರು ಅವರ ಮಕ್ಕಳಿಗೆ ತಮ್ಮ ಬಂಧುಗಳಿಗೆ ಉದ್ಯೋಗ, ಶಿಕ್ಷಣ ಇವೇ ಮುಂತಾದ ವಿಷಯಗಳಿಗೆ ಶಿಫಾರಸ್ಸು ಮಾಡಿಸಲು ಬರಬಹುದು. ಇದರಿಂದ ತನ್ನ ಕೆಲಸ ಕಾರ್ಯಗಳಿಗೆ ಹುದ್ದೆಗೆ ತೊಂದರೆಯಾಗಬಹುದೆಂಬ ಕಾರಣದಿಂದ ತನ್ನ ತಾಯಿ ಹಾಗೂ ಸಹೋದರರಿಗೆ ಪತ್ರ ಬರೆದು ಯಾವುದೇ ಕಾರಣದಿಂದ ಅಧಿಕಾರ ದುರುಪಯೋಗಪಡಿಸಿಕೊಳ್ಳುವ ಕೆಲಸವನ್ನು ನನ್ನಿಂದ

ಮಾಡಿಸಬಾರದು. ನನ್ನ ಹೆಸರನ್ನಾಗಲಿ, ನನ್ನ ಶಿಫಾರಸ್ಸನ್ನಾಗಲಿ ಬಳಸಿಕೊಳ್ಳಬಾರದೆಂದು ಕಟ್ಟುನಿಟ್ಟಾಗಿ ಪತ್ರ ಬರೆದು ತಿಳಿಸಿದ್ದರು. ಸರ್ ಎಂ.ವಿ.ಯವರು ದಿವಾನರಾಗಿ ಅಧಿಕಾರ ಸ್ವೀಕರಿಸಿದಾಗ ಒಬ್ಬ ಸಾಮಾನ್ಯ ಇಂಜಿನಿಯರ್ ಇಷ್ಟು ದೊಡ್ಡ ಹುದ್ದೆಯನ್ನು ಹೇಗೆ ನಿಭಾಯಿಸುತ್ತಾರೆ. ಅವರಿಗೆ ಆಡಳಿತದ ಅನುಭವವೇ ಇಲ್ಲ ಎಂಬಿತ್ಯಾದಿಯಾಗಿ ಮಾತನಾಡಿಕೊಳ್ಳುತ್ತಿದ್ದರು.

ಶಿಕ್ಷಣಾಭಿವೃದ್ಧಿ

ಯಾವುದೇ ಸಂಸ್ಥಾನವು ಮುಂದುವರಿಯಬೇಕಾದರೆ ಶಿಕ್ಷಣವನ್ನು ಅಭಿವೃದ್ಧಿಪಡಿಸಬೇಕೆಂಬ ಮುಂದಾಲೋಚನೆ ಹೊಂದಿದ್ದ ಸರ್ ಎಂ.ವಿ.ಯವರು ಶಿಕ್ಷಣದ ಬಗ್ಗೆ ಚಿಂತನ–ಮಂಥನ ನಡೆಸಿದರು. ಅಂದು ಮೈಸೂರು ಸಂಸ್ಥಾನದಲ್ಲಿ ಓದುಬರಹ ಬಲ್ಲವರು ಕೇವಲ ಶೇ. 7ರಷ್ಟಿದ್ದಿತು. ಅದೇ ಮುಂದುವರೆದ ರಾಷ್ಟ್ರಗಳಲ್ಲಿ (ಇಂಗ್ಲೆಂಡ್, ಅಮೆರಿಕ ಇತ್ಯಾದಿ) ವಿದ್ಯಾವಂತರ ಸಂಖ್ಯೆ 85ರಷ್ಟಿದ್ದಿತು. ಇದನ್ನು ಮನಗಂಡು 1911ರಲ್ಲಿ ಶ್ರೀ ಎಂ. ಶಾಮರಾವ್ ಮತ್ತು ಹೆಚ್.ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ರಚಿಸಿ ಅದಕ್ಕೆ ಪ್ರಾಥಮಿಕ ಮತ್ತು ಕಡ್ಡಾಯ ಶಿಕ್ಷಣದ ಬಗ್ಗೆ ಯೋಜನೆ ರೂಪಿಸಿ ವರದಿ ಸಲ್ಲಿಸಲು ಸೂಚಿಸಲಾಯಿತು. ಈ ಯೋಜನೆಯಂತೆ (1) ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವುದು; (2) ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವುದು; (3) ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಾರಂಭಿಸುವುದು; (4) ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದು; (5) ಸ್ಥಳೀಯ ವಿಶ್ವವಿದ್ಯಾಲಯ ಸ್ಥಾಪಿಸುವುದು; (6) ಶೈಕ್ಷಣಿಕ ಪ್ರಗತಿಗಾಗಿ ಖಾಸಗಿ ಸಹಭಾಗಿತ್ವದೊಡನೆ ಕೈಜೋಡಿಸುವುದು.

ಸರ್ ಎಂ.ವಿ.ಯವರು 1913ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಇದು ಮೈಸೂರು ಸಂಸ್ಥಾನದ ಶಿಕ್ಷಣ ಪ್ರಗತಿಯ ಇತಿಹಾಸದಲ್ಲಿ ಮೈಲಿಗಲ್ಲಾಗಿ ಉಳಿದಿದೆ. ಖಾಸಗಿ ವ್ಯಕ್ತಿಗಳು ಸಂಘಸಂಸ್ಥೆಗಳು ಶಿಕ್ಷಣ ಪ್ರಸರಣ ಮಾಡಲು ಮುಂದೆ ಬಂದರೆ ಅಂತಹ ಶಾಲೆಗಳಿಗೆ ಅನುದಾನ ನೀಡಲು ಸರ್ಕಾರ ಮುಂದೆ ಬಂದಿತು. ಇದರ ಫಲವಾಗಿ ಕೆಲವೇ ವರ್ಷಗಳಲ್ಲಿ ಶಿಕ್ಷಣಾಭಿವೃದ್ಧಿಯಾಗ ತೊಡಗಿತು. ಉದಾ:

1911–12 ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ 4568. ವಿದ್ಯಾರ್ಥಿಗಳ ಸಂಖ್ಯೆ 1,38,153.

1917–18 ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳ ಸಂಖ್ಯೆ 11,294 ವಿದ್ಯಾರ್ಥಿಗಳ ಸಂಖ್ಯೆ – 3,66,856

ಶಿಕ್ಷಣಕ್ಕಾಗಿ ಹೆಚ್ಚಿನ ಆದ್ಯತೆ ನೀಡಿದುದರಿಂದಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಯಿತು. ಶಿಕ್ಷಣ ಇಲಾಖೆಯು ಅನುತ್ಪಾದಕವೆಂದು ತಿಳಿದಿದ್ದರೂ ಅದು ಅವಶ್ಯವೆಂದು ತೀರ್ಮಾನಿಸಿ ಜನರು ಉತ್ಸಾಹದಿಂದ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದರು. ಸಂಸ್ಥಾನದಾದ್ಯಂತ ಉತ್ತಮವಾದ ಪ್ರತಿಕ್ರಿಯೆ ಹೊರಹೊಮ್ಮಿತು. ಮಕ್ಕಳನ್ನು ದುಡಿಸಿಕೊಳ್ಳದೇ ಶಾಲೆಗೆ ಕಳುಹಿಸಿಕೊಡಲು ಅನುವಾಗುವಂತೆ ಮಾಡಲಾಯ್ತು.

ಕಡ್ಡಾಯ ಶಿಕ್ಷಣ

ಕಡ್ಡಾಯ ಶಿಕ್ಷಣವನ್ನು 1915ರಲ್ಲಿ ಜಾರಿಗೆ ತಂದರು. ದೂರದ ಬರೋಡದಲ್ಲಿ 1905ರಲ್ಲೇ ಜಾರಿಗೆ ತಂದಿದ್ದರೆಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಮಕ್ಕಳನ್ನು ಏಳು ವರ್ಷದಿಂದ ಹನ್ನೊಂದು ವರ್ಷಗಳ ನಡುವಿನ ವಯಸ್ಸಿನ ಮಕ್ಕಳನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳುವುದು ಅಪರಾಧವೆಂಬ ಕಾನೂನನ್ನು ಜಾರಿಗೆ ತಂದು ಇಡೀ ದೇಶದಲ್ಲೇ ಎರಡನೆಯ ಸಂಸ್ಥಾನವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಪ್ರೌಢಶಿಕ್ಷಣ ಮಂಡಳಿ ಸ್ಥಾಪನೆ

ಪ್ರೌಢಶಿಕ್ಷಣವನ್ನು ಅಂದು ಮೆಟ್ರಿಕ್ಯುಲೇಷನ್ ಎಂದು ಕರೆಯುತ್ತಿದ್ದರು. ಇದು ಮದ್ರಾಸ್ ವಿಶ್ವವಿದ್ಯಾಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದಿತು. ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳು ನೋಂದಾವಣಿ, ಪರೀಕ್ಷೆ, ಫಲಿತಾಂಶ ಇವೇ ಮುಂತಾದವುಗಳಿಗೆ ಮದ್ರಾಸ್ ಅವಲಂಬಿಸಬೇಕಿತ್ತು. ಅದಕ್ಕೆ ಸಮಾನಾಂತರವಾಗಿ ಎಸ್.ಎಸ್.ಎಲ್.ಸಿ. ಮಂಡಳಿಯನ್ನು 1912ರಲ್ಲಿ ಸ್ಥಾಪಿಸಲಾಯ್ತು. ಇದರಿಂದಾಗಿ ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳಿಗೆ ನಿರಾಳವಾಯಿತು.

ರೈಲ್ವೆ ನಿರ್ಮಾಣ

ರೈಲ್ವೆ ಕಾರ್ಯದರ್ಶಿಯಾಗಿಯೂ ಇದ್ದ ಸರ್ ಎಂ.ವಿ.ರವರು ಹೊಸ ರೈಲು ಮಾರ್ಗಗಳ ಒಂದು ಯೋಜನೆಯನ್ನು ಸರ್ಕಾರದ ಮುಂದಿಟ್ಟರು. ಇವರ ಶ್ರಮದಿಂದಾಗಿ ಬೀರೂರು-ಶಿವಮೊಗ್ಗ, ಮೈಸೂರು-ನಂಜನಗೂಡು, ಬೆಂಗಳೂರು-ಮೈಸೂರು ರೈಲ್ವೆ ಸಂಪರ್ಕಗಳಾದವು. ನಂತರ ರೈಲ್ವೆ ಆಡಳಿತವನ್ನು ಮೈಸೂರು ಸರ್ಕಾರಕ್ಕೆ ವರ್ಗಾಯಿಸಲಾಯಿತು.

ಮೈಸೂರಿಗೆ ವೈಸ್‌ರಾಯರ ಭೇಟಿ

ಭಾರತದಲ್ಲಿ 560ಕ್ಕೂ ಹೆಚ್ಚು ಸಂಸ್ಥಾನಗಳಿರುವಾಗ ಮೈಸೂರಿನಂತಹ ಒಂದು ಸಂಸ್ಥಾನಕ್ಕೆ ಭೇಟಿಕೊಡುವುದು ಸಾಮಾನ್ಯ ವಿಷಯವಾಗಿರಲಿಲ್ಲ. ಅಂದಿನ ಭಾರತದ ವೈಸ್‌ರಾಯಿಯಾಗಿದ್ದ ಲಾರ್ಡ್ ಹಾರ್ಡಿಂಜ್ ದಂಪತಿಗಳನ್ನು ಮೈಸೂರಿಗೆ ಬರಮಾಡಿಕೊಂಡು ಆನೆಗಳ ಖೆಡ್ಡಾ ಸೇರಿದಂತೆ ರೋಚಕ ಮನರಂಜನೆಯನ್ನು ಏರ್ಪಡಿಸಿ ಅವರ ಮನಃ ಸಂತೋಷಪಡಿಸಿ ಎಲ್ಲಾ ಕಾರ್ಯಕ್ರಮಗಳ ನಂತರ ದಿವಾನ್ ಸರ್ ಎಂ.ವಿ.ಯವರು ಸಂಸ್ಥಾನಕ್ಕೆ ಆಂತರಿಕ ವಿಷಯಗಳಲ್ಲಿ ಪೂರ್ಣ ಸ್ವಾತಂತ್ರ್ಯದ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಟ್ಟರು. 1881ರಲ್ಲಿ ಮೈಸೂರು ಒಡೆಯರಿಗೆ ಮೈಸೂರು ಸಂಸ್ಥಾನವನ್ನು ಮರಳಿ ಕೊಡುವಾಗ ಬ್ರಿಟಿಷ್ ಸರ್ಕಾರ ಹಾಕಿದ ಷರತ್ತುಗಳ 'ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್ ಆಫ್ ಪವರ್' ಎಂಬ ಒಪ್ಪಂದವನ್ನು ರದ್ದುಗೊಳಿಸಿ ಹೊಸ ಒಪ್ಪಂದವನ್ನು ಜಾರಿಗೆ ತರಲಾಯಿತು. ಇದರ ಕೀರ್ತಿ ಸರ್ ಎಂ.ವಿ.ಯವರಿಗೆ ಸಲ್ಲುತ್ತದೆ.

ವಿಶ್ವವಿದ್ಯಾಲಯ ಸ್ಥಾಪನೆ

ಭಾರತದಲ್ಲಿ 1854ರಲ್ಲೇ ಚಾರ್ಲ್ಸ್‌ವುಡ್ ವರದಿಯನ್ನು ಜಾರಿಗೆ ತಂದಿದ್ದು ಅದರಲ್ಲಿ ಪ್ರತಿಪ್ರಾಂತ್ಯದಲ್ಲಿ ಕನಿಷ್ಠ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಳ್ಳಬಹುದೆಂದು ಶಿಫಾರಸ್ಸು ಮಾಡಿದ್ದರು. ಇದರ ಸಹಾಯದಿಂದ ಅಸ್ತಿತ್ವಕ್ಕೆ ಬಂದ ಮದ್ರಾಸ್ ವಿಶ್ವವಿದ್ಯಾಲಯವು ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲು ಅನುಮತಿ ನೀಡುತ್ತಿರಲಿಲ್ಲ. ಪದವಿ ಪರೀಕ್ಷೆಗಳಿಗೆ ಮದ್ರಾಸ್ ವಿಶ್ವವಿದ್ಯಾಲಯದ ಮನ್ನಣೆ ಅಗತ್ಯವಿದ್ದಿತು. ಅಂದು ಮೈಸೂರು ಸಂಸ್ಥಾನದಲ್ಲಿ ಮಹಾರಾಜ ಕಾಲೇಜು ಮತ್ತು ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜುಗಳು ಮಾತ್ರ ಪದವಿ ಕಾಲೇಜುಗಳಾಗಿದ್ದವು. ಸರ್ ಎಂ.ವಿ.ಯವರು ದಿವಾನರಾಗಿ ಅಧಿಕಾರ ಸ್ವೀಕರಿಸಿದ ದಿನದಿಂದಲೂ ವಿಶ್ವವಿದ್ಯಾಲಯ ಸ್ಥಾಪನೆಗೆ ಪೂರಕವಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಅದಕ್ಕಾಗಿ ಶಿಕ್ಷಣ ತಜ್ಞರಾಗಿದ್ದ ಡಾ. ಸಿ.ಆರ್. ರೆಡ್ಡಿ ಮತ್ತು ಥಾಮಸ್ ಡೆನ್ ಹಾಮ್‌ರವರುಗಳನ್ನು ಇಂಗ್ಲೆಂಡ್, ಜಪಾನ್, ಅಮೆರಿಕ, ಆಸ್ಟ್ರೇಲಿಯಗಳಿಗೆ ಕಳುಹಿಸಿ ವರದಿ ಸಲ್ಲಿಸುವಂತೆ ತಿಳಿಸಿದರು. ಮೈಸೂರು ಸಂಸ್ಥಾನವು ಪ್ರತ್ಯೇಕವಾಗಿ ವಿಶ್ವವಿದ್ಯಾಲಯ ಸ್ಥಾಪಿಸಬಯಸುತ್ತದೆ. "ಬೆಳೆದ ಮಗಳು ತನ್ನ ಸ್ವಂತ ಮನೆ ಮಾಡಿಕೊಳ್ಳುತ್ತಿರುವ ಪ್ರಯತ್ನಕ್ಕೆ ತಾಯಿ ಸ್ವಾಗತಿಸಬೇಕೆಂದು" ಪ್ರತಿಪಾದಿಸಿದರು. ವಿಶ್ವವಿದ್ಯಾಲಯ ಸ್ಥಾಪನೆಯ ಕರಡು ಸಿದ್ಧಪಡಿಸಲು ಶ್ರೀಯುತರುಗಳಾದ

ಹೆಚ್.ವಿ. ನಂಜುಂಡಯ್ಯ, ಇ.ಪಿ. ಮೆಟ್‌ಕಾಫ್, ಥಾಮಸ್ ಡೆನ್‌ಹ್ಯಾಮ್, ಎನ್.ಎಸ್. ಸುಬ್ಬರಾವ್, ಡಾ. ಸಿ.ಆರ್. ರೆಡ್ಡಿಯಂತಹ ಶಿಕ್ಷಣ ತಜ್ಞರನ್ನು ನೇಮಿಸಿದರು. ಎಲ್ಲವೂ ಸಿದ್ದವಾದ ಮೇಲೆ 1916 ಫೆಬ್ರವರಿ ತಿಂಗಳಿನಲ್ಲಿ ಭಾರತ ಸರ್ಕಾರದ ಅವಗಾಹನೆಗೆ ಒಪ್ಪಿಗೆ ಕಳುಹಿಸಲಾಯಿತು.

1916 ಜುಲೈ 1ರಂದು ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಪ್ರಪ್ರಥಮವಾಗಿ (ತಾತ್ಕಾಲಿಕವಾಗಿ) ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೇ ಕೇಂದ್ರ ಕಛೇರಿ ನೆಲಗೊಂಡಿತು. ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವವಿದ್ಯಾಲಯದ ಕುಲಾಧಿಪತಿಗಳಾದರು (ಛಾನ್ಸಲರ್) ಶ್ರೀ ಹೆಚ್.ವಿ. ನಂಜುಂಡಯ್ಯನವರು ಪ್ರಪ್ರಥಮ ಉಪಕುಲಪತಿಗಳಾಗಿ ನೇಮಕಗೊಂಡರು. ಕ್ರಮೇಣ ಒಡೆಯರು ತಮ್ಮ ಆಸ್ತಿಪಾಸ್ತಿಗಳನ್ನು ವಿಶ್ವವಿದ್ಯಾಲಯಕ್ಕಾಗಿ ಬಿಟ್ಟುಕೊಟ್ಟರು. ಭಾರತದಲ್ಲಿ ಸಂಸ್ಥಾನವೊಂದು ಸ್ವತಂತ್ರ ವಿಶ್ವವಿದ್ಯಾಲಯ ಹೊಂದಿದ ಕೀರ್ತಿ ಮೈಸೂರು ಒಡೆಯರಿಗೆ ಸಲ್ಲುತ್ತದೆ. ಇದರ ಫಲವಾಗಿ 1918 ಅಕ್ಟೋಬರ್ 19ರಂದು ಪ್ರಥಮ ಘಟಿಕೋತ್ಸವ ನಡೆಯಿತು. ಅಧ್ಯಕ್ಷತೆಯನ್ನು ಒಡೆಯರು ವಹಿಸಿದ್ದರು.

ಇತರ ಶಾಲಾಕಾಲೇಜುಗಳ ಸ್ಥಾಪನೆ

ಸರ್ ಎಂ.ವಿ.ಯವರು ಮೂಲತಃ ಇಂಜಿನಿಯರ್ ಆಗಿದ್ದರಿಂದ ತಾಂತ್ರಿಕ, ವೈದ್ಯಕೀಯ, ಕರಕುಶಲ, ಕೈಗಾರಿಕಾ ತರಪೇತಿ ಶಾಲೆಗಳನ್ನು ಸ್ಥಾಪಿಸುವ ಮೂಲಕ ಸಂಸ್ಥಾನವನ್ನು ಪ್ರಗತಿಪಥದತ್ತ ಕೊಂಡೊಯ್ಯಬಹುದೆಂದು ನಂಬಿದ್ದರು. 1913ರಲ್ಲಿ ಬೆಂಗಳೂರಿನಲ್ಲಿ ತಾಂತ್ರಿಕಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ, ಬೆಂಗಳೂರಿನಲ್ಲಿ ವಾಣಿಜ್ಯಶಾಲೆ ಸ್ಥಾಪನೆಗೆ ಸರ್ಕಾರವು ಮಂಜೂರಾತಿ ನೀಡಿತು. 1917ರಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು. (ಇಂದು ಯು.ವಿ.ಸಿ.ಇ ಎಂದಾಗಿದೆ) ಮೈಸೂರಿನಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಯಿತು.

ಇಷ್ಟೇ ಅಲ್ಲದೆ ಶಿಕ್ಷಕರ ತರಬೇತಿಗಾಗಿ ನಾರ್ಮಲ್ ಶಾಲೆಗಳನ್ನು ಹೆಚ್ಚು ಹೆಚ್ಚು ತೆರೆಯಲಾಯಿತು. 1914ರಲ್ಲಿ ನಾರ್ಮಲ್ ಶಾಲೆಗಳನ್ನು ಉನ್ನತ ದರ್ಜೆಗೇರಿಸಿ ಕಾಲೇಜುಗಳಾಗಿ ಪರಿವರ್ತಿಸಲಾಯ್ತು. ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ ನೀಡುವ ವ್ಯವಸ್ಥೆ ಮಾಡಲಾಯಿತು. ಮಹಿಳೆಯರಿಗೆ ಶಿಕ್ಷಣ ನೀಡಿದರೆ ಸ್ವಾಸ್ಥ್ಯ ಸಮಾಜವನ್ನು ಸ್ಥಾಪಿಸಬಹುದು ಎಂಬ ಉದ್ದೇಶದಿಂದ ಮಹಿಳೆಯರಿಗೆ ಶಿಕ್ಷಣ ನೀಡಲು ಪ್ರತ್ಯೇಕ ಹೆಣ್ಣುಮಕ್ಕಳ ಶಾಲೆಗಳನ್ನು ತೆರೆಯಲಾಯಿತು. ಇನ್ನೂ ಹೆಚ್ಚಾಗಿ ಪ್ರಥಮ ಬಾರಿಗೆ ವಯಸ್ಕರಿಗೆ ಸಂಜೆ

ಶಾಲೆಗಳನ್ನು ಪ್ರಾರಂಭಿಸಿ ಅವರಿಗೆ ಅಕ್ಷರಾಭ್ಯಾಸ ಮಾಡಿಸಲಾಯ್ತು. ಸಾರ್ವಜನಿಕ ಗ್ರಂಥಾಲಯಗಳನ್ನೂ ತೆರೆಯಲಾಯ್ತು. ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯ ಬಗ್ಗೆ ತುಂಬು ಕಾಳಜಿ ಹೊಂದಿದ್ದ ಸರ್ ಎಂ.ವಿ.ಯವರು 1915ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತ'ನ್ನು ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಸ್ಥಾಪಿಸಿದರು.

ಕೈಗಾರಿಕಾ ಕ್ರಾಂತಿಯ ಹರಿಕಾರ ಸರ್ ಎಂ.ವಿ.

ಕೃಷಿ ಮಾತ್ರವಲ್ಲದೆ ಕೈಗಾರಿಕೆಗಳೂ ಕೂಡ ದೇಶದ 'ಬೆನ್ನೆಲುಬು' ಎಂಬುದನ್ನು ಮನಗಂಡಿದ್ದ ಸರ್ ಎಂ.ವಿ.ಯವರು ಇಡೀ ಸಂಸ್ಥಾನದಾದ್ಯಂತ ಕೈಗಾರಿಕೆಗಳನ್ನು ಸ್ಥಾಪಿಸಲು ತೀರ್ಮಾನಿಸಿದರು. ಕೈಗಾರಿಕೆಗಳ ಬಗ್ಗೆ ಅಗಾಧವಾಗಿ ತಿಳಿದುಕೊಂಡಿದ್ದ ಆಲ್ಫ್ರೆಡ್ ಚಾಟರ್‌ಟನ್‌ರವರನ್ನು ಮೈಸೂರು ಸಂಸ್ಥಾನದ ಸೇವೆಗೆ ಸೇರಿಸಿಕೊಂಡರು ಹಾಗೂ ಅದರ ಬಗ್ಗೆ ವರದಿಯನ್ನು ಕೊಡುವಂತೆ ಕೇಳಿಕೊಂಡರು. ಅವರು ಅತ್ಯುತ್ತಮ ವರದಿಯನ್ನು ನೀಡಿದರು.

ಈಗಾಗಲೆ ಸಂಸ್ಥಾನದಲ್ಲಿ ಸಣ್ಣಪ್ರಮಾಣದ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳು ಇರಲಿಲ್ಲ. ಹೀಗಾಗಿ ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ತೀರ್ಮಾನಿಸಿದರು. ಸಕ್ಕರೆ ಕಾರ್ಖಾನೆ, ಔಷಧ ತಯಾರಿಕಾ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಬೆಂಕಿಕಡ್ಡಿ ಕಾರ್ಖಾನೆ, ಕಾಗದದ ಕಾರ್ಖಾನೆ, ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಇವೇ ಮುಂತಾದವು ತಲೆ ಎತ್ತಿದವು. ನೈಸರ್ಗಿಕವಾಗಿ ಸಿಗುವ ಖನಿಜವನ್ನು ಬಳಸಿಕೊಳ್ಳುವ ಉದ್ದೇಶದಿಂದ ಗಣಿಗಾರಿಕೆಗೆ ಹೆಚ್ಚಿನ ಉತ್ತೇಜನ ಕೊಟ್ಟರು. ಇವರ ಕಾಲದಲ್ಲಿ ಸ್ಥಾಪನೆಯಾದ ಬೃಹತ್ ಕೈಗಾರಿಕೆಗಳೆಂದರೆ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮತ್ತು ಭದ್ರಾವತಿ ಕಾಗದದ ಕಾರ್ಖಾನೆಗಳು.

1916ರಲ್ಲಿ ಬೆಂಗಳೂರಿನಲ್ಲಿ, 1917ರಲ್ಲಿ ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆಯನ್ನು, ಮೈಸೂರಿನಲ್ಲಿ ಕೃಷ್ಣರಾಜೇಂದ್ರ ಬಟ್ಟೆ ಗಿರಣಿ ಎಂಬ ಮಧ್ಯಮ ಗಾತ್ರದ ಕೈಗಾರಿಕೆಯನ್ನು ಸ್ಥಾಪಿಸಲಾಯ್ತು.

ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ

ಈಗಾಗಲೆ ತಿಳಿಸಿರುವಂತೆ ನೈಸರ್ಗಿಕವಾಗಿ ಸಿಗುವ ಖನಿಜ ಸಂಪತ್ತನ್ನು ಬಳಸಿಕೊಳ್ಳಬೇಕೆಂಬ ಆಸೆ ಸರ್ ಎಂ.ವಿ.ಯವರಲ್ಲಿತ್ತು. ಅದಕ್ಕಾಗಿ ಭದ್ರಾವತಿಯಲ್ಲಿ

ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು 1918ರಲ್ಲಿ ಸ್ಥಾಪಿಸಿದರು. ಹತ್ತಿರದ ಕೆಮ್ಮಣ್ಣುಗುಂಡಿಯಲ್ಲಿ ಹೇರಳವಾಗಿ ಕಬ್ಬಿಣದ ಅದಿರು ಸಿಗುತ್ತಿರುವುದನ್ನು ಕಂಡುಕೊಂಡು ಅಲ್ಲಿನ ಅದಿರು ಭದ್ರಾವತಿ ಕಾರ್ಖಾನೆಗೆ ನೇರವಾಗಿ ಬರುವಂತೆ ವ್ಯವಸ್ಥೆ ಮಾಡಿದರು. ಕಾರ್ಖಾನೆಯು ತಯಾರಿಸಿದ ಹೆಚ್ಚುವರಿ ಉಕ್ಕನ್ನು ಹೊರರಾಜ್ಯಗಳಿಗೆ ರಫ್ತು ಮಾಡುವಲ್ಲಿ ಯಶಸ್ವಿಯಾಯಿತು. ಇದಲ್ಲದೆ ಕಾಗದ ಕಾರ್ಖಾನೆ, ಹತ್ತಿ ಕಾರ್ಖಾನೆ ಸ್ಥಾಪನೆಗೂ ಹಣ ಮಂಜೂರು ಮಾಡಿಸಿಕೊಂಡರು. ಇವುಗಳ ನೆರವಿನಿಂದ ಸಣ್ಣ ಪ್ರಮಾಣದ ಹಲವಾರು ಖಾಸಗಿ ಕೈಗಾರಿಕೆಗಳು ತಲೆ ಎತ್ತಿದವು.

ಕೃಷಿ ಮತ್ತು ನೀರಾವರಿಗೆ ಆದ್ಯತೆ

ಸರ್ ಎಂ.ವಿ.ಯವರು ಕೈಗಾರಿಕೆಗಳಿಗೆ ಮಾತ್ರವಲ್ಲ ರೈತರ ಬಗ್ಗೆ ಕಾಳಜಿ ಇದ್ದು ಕೃಷಿ ಮತ್ತು ನೀರಾವರಿಗೂ ಆದ್ಯತೆ ನೀಡಿದರು. 1912ರಲ್ಲಿ ಪ್ರತ್ಯೇಕವಾಗಿ ವ್ಯವಸಾಯ ಇಲಾಖೆಯನ್ನು ಸ್ಥಾಪಿಸಿದರು. 1913ರಲ್ಲಿ 'ಲೆಸ್ಲಿಕೋಲ್‌ಮನ್' ಎಂಬ ಕೃಷಿತಜ್ಞರನ್ನು ವ್ಯವಸಾಯ ಇಲಾಖಾ ನಿರ್ದೇಶಕರನ್ನಾಗಿ ನೇಮಿಸಿದರು. 1913ರಲ್ಲಿ ಹೆಬ್ಬಾಳದಲ್ಲಿ ಒಂದು ವ್ಯವಸಾಯ ಶಾಲೆಯನ್ನು ಪ್ರಾರಂಭಿಸಿದರು. ಮುಂದೆ ಕೃಷಿ ವಿಶ್ವವಿದ್ಯಾಲಯವಾಯಿತು. 1917ರಲ್ಲಿ ಶ್ರೀರಂಗಪಟ್ಟಣದ ಬಳಿ 'ನಾಗೇನಹಳ್ಳಿ' ಫಾರಂ, 1916ರಲ್ಲಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ಬಳಿಯ ಬಬ್ಬೂರಿನಲ್ಲಿ ಒಂದು ಫಾರಂ, 1914ರಲ್ಲಿ ಶಿವಮೊಗ್ಗದಲ್ಲಿ (ಮಾಥೂರ್) ಒಂದು ಫಾರಂ ಅನ್ನು ಸ್ಥಾಪಿಸಿದರು. 1916ರಲ್ಲಿ ಪ್ರತ್ಯೇಕ ರೇಷ್ಮೆ ಇಲಾಖೆಯನ್ನು ಪ್ರಾರಂಭಿಸಿದರು. 1916ರಲ್ಲಿ ಬೆಂಗಳೂರಿನಲ್ಲಿ ಅರಣ್ಯ ಸಂಶೋಧನಾ ವಿಭಾಗ ಮತ್ತು ಅರಣ್ಯ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಲಾಯ್ತು. 1902ರಲ್ಲಿ ಪಶುಸಂಗೋಪನಾ ಇಲಾಖೆ ಸ್ಥಾಪನೆಯಾಗಿದ್ದು 1916ರಲ್ಲಿ ಹೈನುಗಾರಿಕಾ ಫಾರಂ ತೆರೆಯಲಾಯ್ತು. ರಾಜ್ಯದಾದ್ಯಂತ ಪಶುಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಿದರು.

ಮೈಸೂರು ಬ್ಯಾಂಕ್ ಸ್ಥಾಪನೆ

ಕೃಷಿ, ಕೈಗಾರಿಕೆಗಳು ಸ್ಥಾಪನೆಯಾಗಿ ಸಂಸ್ಥಾನದಲ್ಲಿ ವ್ಯಾಪಾರ, ವಾಣಿಜ್ಯ ಹೆಚ್ಚಾದಂತೆಲ್ಲ ಉತ್ತಮವಾದ ಬ್ಯಾಂಕುಗಳು ಅವಶ್ಯಕವಾಗಿದ್ದಿತು. ಅದುವರೆವಿಗೂ ಖಾಸಗಿ ಬ್ಯಾಂಕ್‌ಗಳು ಮತ್ತು ಜಾಯಿಂಟ್ ಸ್ಟಾಕ್ ಕಂಪನಿಗಳು ಮತ್ತು ವ್ಯವಸಾಯ ಬ್ಯಾಂಕ್ (ಕೃಷಿ ಬ್ಯಾಂಕ್)ಗಳು ಸಾರ್ವಜನಿಕ ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದವು. ಸಾರ್ವಜನಿಕರ ಠೇವಣಿ ವಹಿವಾಟಿನ ಸಹಾಯದಿಂದ

ಅಕ್ಟೋಬರ್‌ನಲ್ಲಿ 1913ರಲ್ಲಿ 'ಮೈಸೂರು ಬ್ಯಾಂಕ್' ಎಂಬ ಸರ್ಕಾರಿ ಬ್ಯಾಂಕನ್ನು ಸ್ಥಾಪಿಸಿದರು. 1914 ಜುಲೈ 1ರಲ್ಲಿ ಬ್ಯಾಂಕಿನಲ್ಲಿ 6 ಲಕ್ಷದ 90 ಸಾವಿರ ರೂಪಾಯಿ ಠೇವಣಿ ಇದ್ದರೆ 1915ರ ಜುಲೈ 1ಕ್ಕೆ 20 ಲಕ್ಷದ 32 ಸಾವಿರ ರೂ.ಗಳಿಗೆ ಏರಿತು. ಸಾರ್ವಜನಿಕರು ಲಘುಬಗೆಯಿಂದ ಸ್ಪಂದಿಸಿದರು. ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಕೈಗೊಂಡರು. ಎರಡು, ಮೂರು ತಾಲ್ಲೂಕುಗಳಿಗೆ ಒಂದರಂತೆ ಫೀಡರ್ ಬ್ಯಾಂಕಿಂಗ್ ಯೂನಿಯನ್‌ಗಳು ಎಂಬ ಕೇಂದ್ರಿಯ ಸಂಸ್ಥೆಗಳನ್ನು 1912–13ರಲ್ಲಿ ಸ್ಥಾಪಿಸಿದರು. ಇವು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸಹಕಾರ ಸಂಸ್ಥೆಗಳಿಗೆ ಹಣ ಪೂರೈಕೆ ಮಾಡುವುದಲ್ಲದೆ ಅವುಗಳ ಮೇಲ್ವಿಚಾರಣೆ ಮಾಡುತ್ತಿದ್ದವು. ಈ ಸಾಲಿನಲ್ಲಿ ಕೇವಲ 243 ಸಹಕಾರ ಸಂಘಟಗಳಿದ್ದರೆ 1913–14ರ ಸಾಲಿನಲ್ಲಿ ಅವುಗಳ ಸಂಖ್ಯೆ 530ಕ್ಕೆ ಏರಿದವು.

ಬೆಂಗಳೂರಿನ 'ಕೇಂದ್ರೀಯ ಸಹಕಾರಿ ಬ್ಯಾಂಕ್' (1918) ಸಹಕಾರ ಸಂಘಗಳಿಗೂ ವ್ಯಕ್ತಿಗಳಿಗೂ ಹಣಕಾಸಿನ ಸಾಲ ನೀಡುತ್ತಿತ್ತು. ಈ ಬ್ಯಾಂಕ್ ಎಲ್ಲ ಅಗತ್ಯಗಳನ್ನು ಪೂರೈಸುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಸರ್ಕಾರ 1915ರಲ್ಲಿ ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕನ್ನು ಸ್ಥಾಪಿಸಿತು. ಈ ಬ್ಯಾಂಕಿನ ಮುಖ್ಯ ಕೆಲಸವೆಂದರೆ ರಾಜ್ಯದ ಸಹಕಾರಿ ಸಂಘಗಳಿಗೆ ಹಣ ಪೂರೈಸುವುದು, ಮೈಸೂರಿನಲ್ಲಿ ಸಹಕಾರಿ ಕ್ಷೇತ್ರವನ್ನು ಬಲಪಡಿಸುವುದು, ಸಮ್ಮೇಳನಗಳನ್ನು ನಡೆಸುವುದು ಇತ್ಯಾದಿ. 1905ರ ನಿಬಂಧನೆಯಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಲು 1918ರಲ್ಲಿ ಒಂದು ಸಹಕಾರಿ ನಿಬಂಧನೆಯನ್ನು ರಚಿಸಲಾಯಿತು. ಸರ್ ಎಂ.ವಿ.ಯವರ ಮುಂದಾಲೋಚನೆಯಿಂದ ಸಹಕಾರಿ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಇವೇ ಮುಂತಾದವು ಅಭಿವೃದ್ಧಿ ಹೊಂದಿದವು.

ಮೈಸೂರು, ಬೆಂಗಳೂರು, ಮಲೆನಾಡು ಅಭಿವೃದ್ಧಿ ಯೋಜನೆ

ಮೈಸೂರು ಸಂಸ್ಥಾನವು ಸರ್ ಎಂ.ವಿ.ಯವರಿಂದಾಗಿ ದಿನೇ ದಿನೇ ಅಭಿವೃದ್ಧಿಯ ದಾಪುಗಾಲು ಹಾಕತೊಡಗಿತು. ಮೈಸೂರು, ಬೆಂಗಳೂರು ಹಾಗೂ ಹಿಂದುಳಿದಿದ್ದ ಮಲೆನಾಡನ್ನು ಅಭಿವೃದ್ಧಿಪಡಿಸಬೇಕೆಂದು ತೀರ್ಮಾನಿಸಿದರು. ಮೈಸೂರು ಒಡೆಯರ ರಾಜಧಾನಿಯಾಗಿದ್ದು ಅದು ನಯನಾಜೂಕಿಲ್ಲದ ಒಂದು ಸಾಮಾನ್ಯ ಪಟ್ಟಣದಂತಿತ್ತು. ಈ ನಗರವನ್ನು ಆಧುನಿಕ ನಗರವನ್ನಾಗಿ ನಿರ್ಮಿಸಲು ತೀರ್ಮಾನಿಸಿದರು. 1915ರಲ್ಲಿ ಸುಂದರವಾದ ಪುರಭವನವನ್ನು ನಿರ್ಮಿಸಲಾಯ್ತು. ಅಂದಾಜು ವೆಚ್ಚ ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳು. ಇಂದು

ಇದನ್ನು 'ರಂಗಾಚಾರ್ಲು ಪುರಭವನ' ಎಂದು ಕರೆಯಲಾಗುತ್ತಿದೆ. ಇದೇ ಸಂದರ್ಭದಲ್ಲಿ 'ಮೈಸೂರು ಅರಮನೆಯ ವಿಸ್ತರಣೆ' (1897ರಂದು ಪ್ರಾರಂಭವಾಗಿ 1912ರ ಡಿಸೆಂಬರ್‌ನಲ್ಲಿ ಪೂರ್ಣಗೊಂಡಿತು) 'ಕೃಷ್ಣರಾಜೇಂದ್ರ ಆಸ್ಪತ್ರೆ' ನಿರ್ಮಾಣವಾದವು. ಲಲಿತಮಹಲ್ ಅರಮನೆಯ ನಿರ್ಮಾಣವೂ ಈ ಸಮಯದಲ್ಲೇ ನಡೆಯಿತು. ಮೈಸೂರು ಪಟ್ಟಣದ ಜನಸಂಖ್ಯೆ ಜಾಸ್ತಿಯಾಗಲಾಗಿ 'ಲಕ್ಷ್ಮೀಪುರಂ' ಬಡಾವಣೆ, ಚಟ್ನಳ್ಳಿ ಬಡಾವಣೆ, ಒಂಟಿಕೊಪ್ಪಲ್ ಬಡಾವಣೆ, ಚಾಮರಾಜಪುರಂ ಬಡಾವಣೆ, ಇವೇ ಮುಂತಾದ ಬಡಾವಣೆಗಳು ತಲೆಎತ್ತಿದವು.

ಬೆಂಗಳೂರನ್ನು ಕೆಂಪೇಗೌಡನು ನಿರ್ಮಿಸಿದ ತರುವಾಯ ಹಲವರ ಕೈ ಸೇರಿ ಅತಿ ದೊಡ್ಡ ನಗರ ಮಾತ್ರವಲ್ಲ ವ್ಯಾಪಾರ, ವ್ಯವಹಾರ ಸಂಪತ್ತಿನಿಂದ ಕೂಡಿದ್ದ ನಗರವಾಗಿತ್ತು. ಸರ್ ಎಂ.ವಿ.ಯವರಿಂದಾಗಿ ಕೈಗಾರಿಕಾ ನಗರವಾಯಿತು. ಜನನಿಬಿಡ ಪ್ರದೇಶವಾಯಿತು. ಬೆಂಗಳೂರನ್ನು ಅಭಿವೃದ್ಧಿಪಡಿಸಲು 1913ರಲ್ಲಿ ಕೆ.ಪಿ. ಪುಟ್ಟಣ್ಣಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಅಭಿವೃದ್ಧಿ ಸಮಿತಿ ರಚಿತವಾಯಿತು. ಉದ್ದಗಲದ ರಸ್ತೆಗಳು, ಒಳಚರಂಡಿ ವ್ಯವಸ್ಥೆ, ರಸ್ತೆಗಳಿಗೆ ನವನವೀನ ಬೀದಿದೀಪಗಳನ್ನು ಹಾಕಿಸಿದರು.

ಜನರಿಗೆ ಕಣ್ಣಿನ ಆರೋಗ್ಯ ಮುಖ್ಯವಾದುದು ಎಂದು ತಿಳಿದು 1913 ಜನವರಿ 30ರಂದು 'ಮಿಂಟೋ ಕಣ್ಣಾಸ್ಪತ್ರೆ' ಸ್ಥಾಪನೆಯಾಯಿತು. ಕೆಲವೇ ದಿನಗಳಲ್ಲಿ ಸಂಸ್ಥಾನದ ಒಳ ಹೊರಗಿನ ರೋಗಿಗಳು ಬರತೊಡಗಿದರು. ಸಾಮಾನ್ಯ ಆಸ್ಪತ್ರೆಗಿಂತಲೂ ಇದು ವಿಶೇಷವಾಗಿತ್ತು. ಇಂದಿಗೂ ನಾಡಿನಾದ್ಯಂತ ಹೆಸರುವಾಸಿಯಾದ ಆಸ್ಪತ್ರೆ ಇದಾಗಿದೆ. ಪ್ರತಿ ತಾಲ್ಲೂಕಿನಲ್ಲೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಲು ರೂಪುರೇಷೆಗಳನ್ನು ಹಾಕಿದರು. ಆ ದಿನಗಳಲ್ಲಿ ವೈದ್ಯರ ಹಾಗೂ ವೈದ್ಯಕೀಯ ಕೇಂದ್ರಗಳ ಕೊರತೆಯಿದ್ದಿತು. ಹೊರ ರಾಜ್ಯಗಳಿಂದ ತಜ್ಞ ವೈದ್ಯರನ್ನು ಕರೆತಂದು ಸಾರ್ವಜನಿಕರ ಆರೋಗ್ಯ ತಪಾಸಣೆಗೆ ಅನುಕೂಲ ಮಾಡಿಕೊಟ್ಟರು. ಅಂದು ಸಾಂಕ್ರಾಮಿಕ ರೋಗಗಳಾದ ಕಾಲರ, ಪ್ಲೇಗ್, ಸಿಡುಬು, ಮಲೇರಿಯ ಇವೇ ಮುಂತಾದ ರೋಗಗಳು ಜನರನ್ನು ಕಾಡುತ್ತಿದ್ದವು. ಈ ಮಾರಕ ರೋಗಗಳು ಪ್ರತಿವರ್ಷ ಸಾವಿರಾರು ಜನರನ್ನು ಬಲಿತೆಗೆದುಕೊಳ್ಳುತ್ತಿತ್ತು. ಇದು ಸರ್ಕಾರಕ್ಕೆ ದೊಡ್ಡ ಸವಾಲಾಗಿತ್ತು. ಬೆಂಗಳೂರಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಎಸ್.ವಿ. ಶೆಟ್ಟಿಯವರಂತಹ ಬುದ್ಧಿಜೀವಿಯ ಇಡೀ ಕುಟುಂಬ 1918ರಲ್ಲಿ ಪ್ಲೇಗಿಗೆ ಬಲಿಯಾಯಿತು. ಆದಕಾರಣ ಸಾರ್ವಜನಿಕ ಆರೋಗ್ಯ ಸುಧಾರಣೆ, ಆರೋಗ್ಯ ತಪಾಸಣೆಗೆ ಮಹತ್ವ ನೀಡಿದರು.

ದಿವಾನ್ ಪದವಿಯಿಂದ ಸ್ವಯಂ ನಿವೃತ್ತಿ

ದಿವಾನರಾಗಿ 1912ರಿಂದ 18ರವರೆಗೆ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಇಡೀ ಮೈಸೂರು ಸಂಸ್ಥಾನ ಪ್ರಗತಿಯ ದಾಪುಗಾಲು ಹಾಕುವಂತೆ ಮಾಡಿದ ಕೀರ್ತಿ ಸರ್ ಎಂ.ವಿ.ಯವರಿಗೆ ಸಲ್ಲುತ್ತದೆ. ಸರ್ ಎಂ.ವಿ.ಯವರು ದಿವಾನರಾಗಿದ್ದ ಕಾಲದಲ್ಲಿ ಎಂದಿಗೂ ತಮ್ಮ ಆಡಳಿತಕ್ಕೆ ತಮ್ಮ ಹೆಸರಿಗೆ ಚ್ಯುತಿ ಬರದಂತೆ ನಡೆದುಕೊಂಡರು. ಆದರೆ 1917-18ರ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ತಮಿಳುನಾಡು ಮತ್ತು ಮೈಸೂರು ಪ್ರಾಂತ್ಯದಲ್ಲಿ ಬ್ರಾಹ್ಮಣೇತರ ಚಳುವಳಿ ಪ್ರಾರಂಭವಾಯಿತು. ಮದ್ರಾಸ್‌ನಲ್ಲಿ ಜಸ್ಟೀಸ್ ಪಾರ್ಟಿ ಎಂಬ ಪಕ್ಷ ತಲೆ ಎತ್ತಿತು. ಮೈಸೂರಿನಲ್ಲೂ ಆ ಗಾಳಿಯು ಪ್ರಬಲವಾಗಿ ಬೀಸತೊಡಗಿತು. ನಾಲ್ವಡಿ ಕೃಷ್ಣರಾಜ ಒಡೆಯರ ಸಹೋದರರಾದ ಶ್ರೀ ಕಂಠೀರವ ನರಸರಾಜರು ರಾಜಕೀಯವಾಗಿ ಪ್ರಬಲ ವ್ಯಕ್ತಿಯಾಗಿದ್ದರು. ಅವರು ಬ್ರಾಹ್ಮಣೇತರರ ಪರ ವಾಲಿದರು. 1918ರಲ್ಲಿ ಅರಸರು 'ಜಸ್ಟೀಸ್ ಲೆಸ್ಲೆಮಿಲ್ಲರ್' ಆಯೋಗವನ್ನು ರಚಿಸಿದರು. ಆಯೋಗದ ಪ್ರಕಾರ ಬ್ರಾಹ್ಮಣರು ಸರ್ಕಾರದ ಎಲ್ಲಾ ಆಯಕಟ್ಟಿನ ಜಾಗಗಳಲ್ಲಿ ಉದ್ಯೋಗ ಪಡೆದಿದ್ದಾರೆ ಎಂದು ತಿಳಿಸಿತು. ಅಂದರೆ ಅದು ಸರ್ ಎಂ.ವಿ.ಯವರಿಗೂ ಅನ್ವಯಿಸುತ್ತದೆ ಎಂದಾಯಿತು. ಆದರೆ ಅಷ್ಟರಲ್ಲಾಗಲೆ ಒಂದೊಮ್ಮೆ ಸರ್ ಎಂ.ವಿ.ಯವರು ರಾಜೀನಾಮೆ ನೀಡಿದರೆ ಜನಸಾಮಾನ್ಯರ ಹೃದಯದಲ್ಲಿ ಸರ್ ಎಂ.ವಿ. ಅನ್ನದಾತರಾಗಿದ್ದರು. ಅಪೂರ್ಣಗೊಂಡಿದ್ದ ಬೃಹತ್ ಯೋಜನೆಗಳಾದ ಕನ್ನಂಬಾಡಿಕಟ್ಟೆ ಮತ್ತು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಗತಿ ಏನು? ಎಂಬ ಚಿಂತೆ ನಾಲ್ವಡಿ ಕೃಷ್ಣರಾಜರನ್ನು ಕಾಡುತ್ತಿತ್ತು. ಸರ್ ಎಂ.ವಿ.ಯವರು ನಿವೃತ್ತಿ ಹೊಂದಲು ತೀರ್ಮಾನಿಸಿಯೇ ಬಿಟ್ಟರು. 1918ರಲ್ಲಿ ದಿವಾನ್ ಪದವಿಯಿಂದ ನಿವೃತ್ತಿ ಹೊಂದಿದರು. (1919 ಜೂನ್ 9ರಂದು ಅಧಿಕೃತವಾಗಿ ನಿವೃತ್ತರಾದಾಗ ಈ ವಿಷಯವನ್ನು ವಿಶೇಷ ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡಿತು.)

ನಿವೃತ್ತಿಯ ನಂತರ ಸಾರ್ಥಕ ಸೇವೆ ಸಲ್ಲಿಸಿದ ಸರ್ ಎಂ.ವಿ.

ಮುಂಬೈ ಹಾಗೂ ಮೈಸೂರಿನಲ್ಲಿ ಇಂಜಿನಿಯರ್ ಆಗಿ, ದಿವಾನರಾಗಿ ಬಿಡುವಿಲ್ಲದೆ ಸೇವೆ ಸಲ್ಲಿಸಿದರು. 1919ರಲ್ಲಿ ವಿದೇಶ ಪ್ರವಾಸ ಮಾಡಿ ಭಾರತಕ್ಕೆ ಹಿಂತಿರುಗಿದರು. 1921ರಲ್ಲಿ ಮೈಸೂರು ಪ್ರಾಂತ್ಯದ ತಾಂತ್ರಿಕ ಮತ್ತು ಕೈಗಾರಿಕಾ ಶಿಕ್ಷಣದ ಬಗ್ಗೆ ಸಲಹೆ ನೀಡಲು ಒಂದು ಸಮಿತಿ ರಚಿಸಿ ಅದಕ್ಕೆ ಸರ್ ಎಂ.ವಿ.ಯವರನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸಿದರು.

1922ರಲ್ಲಿ ಹೈದರಾಬಾದ್ ಸರ್ಕಾರದ ಕೋರಿಕೆಯಂತೆ ಅಲ್ಲಿನ ಒಳಚರಂಡಿ ಹಾಗೂ ನಗರ ಯೋಜನೆ ಕುರಿತು 1922ರಲ್ಲಿ ಒಂದು ವರದಿ ಸಿದ್ಧಪಡಿಸಿಕೊಟ್ಟರು.

ಸರ್ ಎಂ.ವಿ.ಯವರ ಬುದ್ಧಿಶಕ್ತಿಯನ್ನು ತಿಳಿದಿದ್ದ ಬ್ರಿಟಿಷರು 1911-12ರಲ್ಲಿ ಹೊಸದೆಹಲಿ ನಿರ್ಮಾಣವು ಕುಂಟುತ್ತಾ ಸಾಗುತ್ತಿದ್ದಿತು. 1923ರಲ್ಲಿ ಸರ್ ಮ್ಯಾಲ್‌ಕಮ್ ಹೈಲಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಗೆ ಸರ್ ಎಂ.ವಿ.ಯವರನ್ನು ಸದಸ್ಯರನ್ನಾಗಿ ನೇಮಿಸಿಕೊಂಡರು. ವೈಸ್‌ರಾಯರ ನಿವಾಸ, ಒಳಚರಂಡಿ ವ್ಯವಸ್ಥೆಯ ಬಗ್ಗೆ ಉತ್ತಮವಾದ ರೂಪುರೇಷೆಗಳನ್ನು ತಯಾರಿಸಿಕೊಟ್ಟರು.

ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಅಧ್ಯಕ್ಷರಾಗಿ

ಇಡೀ ಸಂಸ್ಥಾನದ ಮುಖ್ಯ ಇಂಜಿನಿಯರ್ ಆಗಿ, ದಿವಾನರಾಗಿ ಸೇವೆ ಸಲ್ಲಿಸಿದ ಸರ್ ಎಂ.ವಿ.ಯವರು ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಅಧ್ಯಕ್ಷರಾದದ್ದು ಆಶ್ಚರ್ಯಕರ ಸಂಗತಿ. ಇದರ ಹಿನ್ನೆಲೆ ಏನೆಂದರೆ ತಾವೇ ಹುಟ್ಟುಹಾಕಿದ ಕಾರ್ಖಾನೆಯು ಕೆಲವಾರು ವರ್ಷ ಕಳೆದರೂ ಉಕ್ಕು ತಯಾರಿಕೆಯಲ್ಲಿ ಹಿಂದೆ ಬಿದ್ದಾಗ ಕೃಷ್ಣರಾಜರ ಒತ್ತಾಯಕ್ಕೆ ಮಣಿದು ಅದರ ಅಧ್ಯಕ್ಷರಾದರು. ಕಾರ್ಖಾನೆಯು ಇವರ ಅಧ್ಯಕ್ಷತೆಯಲ್ಲಿ ಪ್ರಗತಿ ಸಾಧಿಸಿತು. ಮಹಾತ್ಮ ಗಾಂಧಿಯವರು 'ಯಂಗ್ ಇಂಡಿಯ' (01-09-1927) ಪತ್ರಿಕೆಯಲ್ಲಿ "ಕೃಷ್ಣರಾಜ ಸಾಗರದಂತೆ ಭದ್ರಾವತಿ ಕಾರ್ಖಾನೆಯು ವಿಶ್ವೇಶ್ವರಯ್ಯನವರ ದೇಶಭಕ್ತಿ ಮತ್ತು ರಚನಾತ್ಮಕ ಪ್ರತಿಭೆಯ ಕೊಡುಗೆ" ಎಂದು ಬಣ್ಣಿಸಿದ್ದಾರೆ.

ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಸಂಸ್ಥೆ

ಸರ್ ಎಂ.ವಿ.ಯವರು ಆರು ವರ್ಷಗಳ ಭದ್ರಾವತಿ ಕಾರ್ಖಾನೆಯ ಅಧ್ಯಕ್ಷರಾಗಿ ದುಡಿದ ಫಲವಾಗಿ ಅವರಿಗೆ ಗೌರವ ಸಂಭಾವನೆಯನ್ನು ನಿಗದಿಪಡಿಸಿದರು. ಆದರೆ ಈ ಹಣವನ್ನು ಪಡೆಯಲೇ ಇಲ್ಲ. ಈ ಮೊತ್ತ ಬೆಳೆದು ರೂ. ಎರಡು ಲಕ್ಷವಾಗಿತ್ತು. 1940ರಲ್ಲಿ ನಾಲ್ವಡಿ ಕೃಷ್ಣರಾಜರು ದೈವಾದೀನರಾದ ಬಳಿಕ ಅವರ ಪುತ್ರ ಜಯಚಾಮರಾಜ ಒಡೆಯರ್ ಅಧಿಕಾರಕ್ಕೆ ಬಂದರು. ಹಣ ಪಡೆಯಲು ಒತ್ತಾಯ ಬಂದ ಕಾರಣ ಆ ಹಣದಿಂದ ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಈಗ ಅದು ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜು ಎಂದು ಹೆಸರಾಗಿದೆ.

ಕಾವೇರಿ ನಾಲಾ ಸಮಿತಿಯ ನೇತೃತ್ವ ವಹಿಸಿಕೊಂಡದ್ದು

ಒಡೆಯರ ಒತ್ತಾಯದ ಮೇರೆಗೆ ಕಾವೇರಿ ನಾಲಾ ಸಮಿತಿಯ ನೇತೃತ್ವವನ್ನು ವಹಿಸಿಕೊಂಡರು. ಪಾಂಡವಪುರ ತಾಲ್ಲೂಕಿನ ಹುಲಿಕಲ್ ಸುರಂಗ ಮಾರ್ಗ ನಿರ್ಮಾಣ (1200 ಮೀಟರ್ ಉದ್ದ) ಮಾಡಲಾಯಿತು. ಭಾರತೀಯ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಇದೊಂದು ಮೈಲಿಗಲ್ಲು. ಅಂದು ಮೈಸೂರಿನ ಮುಖ್ಯ ಇಂಜಿನಿಯರ್ ಆಗಿದ್ದ ಆರ್. ಶೇಷಾಚಾರ್‌ರವರು ಸರ್ ಎಂ.ವಿ.ಯವರ ಸಲಹೆಯಂತೆ ಏತ ನೀರಾವರಿ ಪದ್ಧತಿಯನ್ನು ಜಾರಿಗೆ ತಂದರು. ಈ ಯೋಜನಾ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ತಿಪ್ಪಗೊಂಡನಹಳ್ಳಿ ಜಲಾಶಯ ಯೋಜನೆ

ಬೆಂಗಳೂರು ನಗರ ಬೆಳೆಯುತ್ತಾ ಹೋದಂತೆಲ್ಲ ನೀರಿನ ಬಳಕೆಯೂ ಹೆಚ್ಚುತ್ತಾ ಹೋಯಿತು. ಇದರ ಜೊತೆಗೆ ಹೆಸರಘಟ್ಟ ಜಲಾಶಯವು ನೀರು ಶೇಖರಣೆಯಾಗದೆ ಒಣಗತೊಡಗಿತು. ಹೊಸ ಜಲಾಶಯದ ಅವಶ್ಯಕತೆ ಬಿದ್ದಿತು. ತಜ್ಞ ಇಂಜಿನಿಯರುಗಳ ತಂಡವು 1929ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಸರ್ಕಾರದಿಂದ ಮಂಜೂರು ದೊರೆತ ಕೂಡಲೆ ಕೋಡಿಯನ್ನು ಹೊಸದಾಗಿ ನಿರ್ಮಿಸಿ ದಿನವಹಿ ಹತ್ತು ಮಿಲಿಯನ್ ಗ್ಯಾಲನ್ ಶೋಧಿಸಿದ ನೀರು ಪೂರೈಸುವ ಯೋಜನೆ ಜಾರಿಗೆ ಬಂದಿತು. ಕುಡಿಯುವ ನೀರಿನ ಸಮಸ್ಯೆ ತಪ್ಪಿತು.

ಭಾರತದ ಆರ್ಥಿಕ ಪರಿಶೋಧನಾ ಸಮಿತಿ

'ಮೌಂಟ್ ಪೋರ್ಡ್' ಸುಧಾರಣೆಗಳ ಮೇರೆಗೆ ರಚಿತವಾದ ಕೇಂದ್ರ ಶಾಸನ ಸಭೆಯು ಭಾರತದ ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ಮಾಡಲು 1925ರಲ್ಲಿ ಒಂದು ಸಮಿತಿಯನ್ನು ರಚಿಸಿತು. ಹರಿಕಿಸನ್ ಕೌಲ್, ಬಾರ್ನೆಟ್ ಹರ್ಸ ಇವರೇ ಮುಂತಾದವರ ಸಮಿತಿಯ ಅಧ್ಯಕ್ಷರನ್ನಾಗಿ ಸರ್ ಎಂ.ವಿ.ಯವರನ್ನು ನೇಮಿಸಿದರು. ಈ ಸಮಿತಿಯು ಸರ್ಕಾರಕ್ಕೆ ಉತ್ತಮವಾದ ವರದಿಯನ್ನು ಸಲ್ಲಿಸಿತು.

ನಗರಾಭಿವೃದ್ಧಿ ಕಾರ್ಯಗಳಿಗೆ ಮಾರ್ಗದರ್ಶನ

1922–23ರಲ್ಲಿ ಭಾರತದಲ್ಲಿ ಆರ್ಥಿಕ ಮುಗ್ಗಟ್ಟು ಸಂಭವಿಸಿದ ಕಾರಣ ನಗರ ಸಭೆಗಳು, ನಗರ ಪಾಲಿಕೆಗಳು ವೆಚ್ಚದಲ್ಲಿ ಕಡಿತ ಮಾಡುವ ಯೋಜನೆಯನ್ನು ರೂಪಿಸಿಕೊಡುವಂತೆ ಕೇಳಿಕೊಂಡಿತು. ಇವರು ನಗರಪಾಲಿಕೆಯ ಸಮಗ್ರ ಆರ್ಥಿಕ

ನಿರ್ವಹಣೆಯನ್ನು ಮತ್ತು ಸಿಬ್ಬಂದಿ ಮಾದರಿಯನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಿದರು.

ಮುಂಬೈನ 'ಬ್ಯಾಕ್ ಬೆ', 'ಬ್ಯಾಕ್ ಜೀ' ಸಲಹಾ ಸಮಿತಿಗೆ ಸರ್ ಎಂ.ವಿ.

ಮುಂಬೈ ನಗರಿಯು ವ್ಯಾಪಾರ ವಾಣಿಜ್ಯ ಕೇಂದ್ರವಾಗಿ ಬೆಳೆದಂತೆಲ್ಲಾ ಭೂಮಿಯ ಬೆಲೆ ಗಗನಕ್ಕೇರಿತು. ಅದರಲ್ಲೂ ವಿಶೇಷವಾಗಿ ಸಮುದ್ರ ತಟದಲ್ಲಿ ನಗರ ಬೆಳೆಯಲು ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದರು. ಮುಂಬೈ ಸರ್ಕಾರವು ಅಲಹಬಾದ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ಗ್ರಿಮ್‌ವುಡ್‌ರನ್ನು ಅಧ್ಯಕ್ಷರನ್ನಾಗಿ, ಸಮಿತಿಯ ತಜ್ಞರ ಸಲಹಾ ಮಂಡಳಿಯ ಮುಖ್ಯಸ್ಥರನ್ನಾಗಿ ಸರ್ ಎಂ.ವಿ.ಯವರನ್ನು ನೇಮಿಸಲಾಯ್ತು. ಈ ಸಮಿತಿಯು ಮುಂಬೈ ಸರ್ಕಾರಕ್ಕೆ ಅತ್ಯುತ್ತಮವಾದ ವರದಿ ಸಲ್ಲಿಸಿತು. ಈಗಾಗಲೆ ಮಹಾರಾಷ್ಟ್ರದ ಮುಖ್ಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದ ಸರ್ ಎಂ.ವಿ.ಯವರು ಅಪಾರವಾದ ಅನುಭವಗಳಿಸಿದ್ದರು. ಸಮಿತಿಯ ಅಧ್ಯಕ್ಷರೂ ಸರ್ ಎಂ.ವಿ.ಯವರ ಸಲಹೆ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸಿದರು. ಹಾಗೂ ವರದಿಯಲ್ಲಿ ಅವರ ಸಲಹೆಗಳನ್ನು ಚಾಚೂ ತಪ್ಪದೆ ಯಥಾವತ್ತಾಗಿ ಸೇರಿಸಿದರು.

ಈ ನಡುವೆ ತಾವೇ ಸ್ಥಾಪಿಸಿದ ಭದ್ರಾವತಿ ಕಾರ್ಖಾನೆಯ ಉಕ್ಕು ಕಾರ್ಖಾನೆಯ ಉತ್ಪನ್ನಗಳಿಗೆ ಯೂರೋಪ್ ಮತ್ತು ಅಮೆರಿಕಗಳಲ್ಲಿ ಮಾರುಕಟ್ಟೆ ಹುಡುಕುವ ಪ್ರಯತ್ನ ಮಾಡಿದರು.

ವಾಹನ ತಯಾರಿಕಾ ಕಾರ್ಖಾನೆಗೆ ರೂಪುರೇಷೆ ತಯಾರಿಸಿದ ಸರ್ ಎಂ.ವಿ.

ಭಾರತದಲ್ಲಿ ವ್ಯಾಪಾರೋದ್ಯಮ ದಿನೇ ದಿನೆ ಅಭಿವೃದ್ಧಿ ಹೊಂದ ತೊಡಗಿತು. ವಾಣಿಜ್ಯೋದ್ಯಮಿಗಳು, ಪ್ರತಿಷ್ಠಿತ ಮನೆತನದವರು, ರಾಜಕಾರಣಿಗಳು ಕಾರುಗಳನ್ನು ಬಳಸಲು ಎಡೆತಾಗಿದರು. ಅಂದು ಭಾರತದಲ್ಲಿ ಕಾರು ತಯಾರಿಕಾ ಘಟಕಗಳಿರಲಿಲ್ಲ. ಬೇಡಿಕೆ ಹೆಚ್ಚಿತು. ವಿದೇಶಗಳಿಂದ ಕಾರುಗಳನ್ನು ಆಮದು ಮಾಡಿಕೊಳ್ಳಬೇಕಿತ್ತು. ಮುಂದಾಲೋಚನೆಯುಳ್ಳ ಸರ್ ಎಂ.ವಿ.ರವರು ಭಾರತದಲ್ಲಿ ಮೋಟಾರು ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ಹಂಬಲದಿಂದ ವಿದೇಶಗಳಿಗೆ ತೆರಳಿದರು. ಇಂಗ್ಲೆಂಡಿನ ಕೊವೆಂಟ್ರಿ, ಆಕ್ಸ್‌ಫರ್ಡ್, ಬರ್ಮಿಂಗ್‌ಹ್ಯಾಮ್ ಮೊದಲಾದ ಪ್ರಮುಖ ಸ್ಥಳಗಳಲ್ಲಿ ಸಂಚರಿಸಿ ಮಾಹಿತಿ ಕಲೆಹಾಕಿದರು. 'ಆಸ್ಟಿನ್' ಕಾರು ತಯಾರಿಕಾ ಕಾರ್ಖಾನೆಯು ಆಡಳಿತ

ಮಂಡಳಿಯ ಭೇಟಿ ಮಾಡಿದರು. ನಂತರ ಇಟಲಿ, ಜರ್ಮನಿ ಹಾಗೂ ಫ್ರಾನ್ಸ್‌ಗಳಿಗೆ ತೆರಳಿ ಮಾಹಿತಿ ಕಲೆಹಾಕಿದರು. ಟ್ಯುರಿನ್‌ನ 'ಫೀಯಟ್' ಕಾರು ತಯಾರಿಕಾ ಘಟಕಕ್ಕೆ ಭೇಟಿ ನೀಡಿದರು. ಅಮೆರಿಕಾಗೆ ಹೋಗಿ 'ಫೋರ್ಡ್ ಕಂಪನಿ' ಆಡಳಿತ ಮಂಡಳಿಯಿಂದ ಮಾಹಿತಿ ಪಡೆದು ಭಾರತಕ್ಕೆ ಹಿಂತಿರುಗಿದರು.

ಮುಂಬೈ ವಾಣಿಜ್ಯ ನಗರಿಯಾದುದರಿಂದ ಅಲ್ಲಿ ಕಾರು ತಯಾರಿಕಾ ಕಾರ್ಖಾನೆ ಅಲ್ಲಿನ ಸರ್ಕಾರಕ್ಕೆ ಕೇಳಿಕೊಂಡರೂ ಸ್ಥಾಪಿಸಲು ಒಪ್ಪಲಿಲ್ಲ. ನಂತರ ಬೆಂಗಳೂರಿನಲ್ಲಿ ಕಾರ್ಖಾನೆ ಸ್ಥಾಪಿಸಲು ಒಡೆಯರನ್ನು ಒತ್ತಾಯಿಸಿದರು. ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರು ಒತ್ತಾಸೆಯಾಗಿ ನಿಂತರು. ಆದರೆ ಅದು ಎರಡನೆಯ ವಿಶ್ವಸಮರ ನಡೆಯುತ್ತಿದ್ದ ಕಾಲವದು (1939–1945). ಹೀಗಾಗಿ ಬ್ರಿಟಿಷರ ಸರ್ಕಾರಕ್ಕೆ ಇಚ್ಛೆ ಇರಲಿಲ್ಲ. ಮೈಸೂರಿನಲ್ಲಿ ಬ್ರಿಟಿಷ್ ರೆಸಿಡೆಂಟರು ಇದಕ್ಕೆ ಸಮ್ಮತಿಸಲಿಲ್ಲ. ಬೇಸತ್ತ ಸರ್ ಎಂ.ವಿ.ರವರು ಮುಂಬಯಿಯಲ್ಲಿ ವಾಹನ ಕೈಗಾರಿಕೆ ಇತ್ತೀಚಿನ ಬೆಳವಣಿಗೆಗಳು ಎಂಬ ಅಧ್ಯಯನ ವರದಿಯನ್ನು 1940 ಅಕ್ಟೋಬರ್ 10ರಂದು ಬಿಡುಗಡೆ ಮಾಡಿದರು.

ಬೆಂಗಳೂರಿನಲ್ಲಿ ವಿಮಾನ ತಯಾರಿಕಾ ಕಾರ್ಖಾನೆ

ಬೆಂಗಳೂರಿನಲ್ಲಿ ವಿಮಾನ ತಯಾರಿಕಾ ಕಾರ್ಖಾನೆ ಸ್ಥಾಪಿಸಲು ಮುಂಬೈನ ಉದ್ಯಮಿಗಳಾದ ವಾಲ್‌ಚಂದ್, ಹೀರಾಚಂದ್ ಅಸೋಸಿಯೇಟ್ಸ್ ಕಂಪನಿ ಮುಂದೆ ಬಂದಿತು. ಈ ಉದ್ಯಮಿಗಳು ಸರ್ ಎಂ.ವಿ.ಯವರ ಸಲಹೆ ಸಹಕಾರವನ್ನು ಪಡೆದರು. ಸರ್ ಎಂ.ವಿ.ಯವರು ಉತ್ಸುಕರಾದರು. ತಮ್ಮಿಂದ ಯಾವುದೇ ಸಹಾಯ ಸಹಕಾರ ಬೇಕಿದ್ದರೂ ನೀಡುತ್ತೇನೆ ಎಂದು ಅವರ ಬೆನ್ನು ತಟ್ಟಿದರು. ಸರ್ಕಾರವು ಕೈಗಾರಿಕಾ ಇಲಾಖೆಯ ನಿರ್ದೇಶಕರಾಗಿದ್ದ ಪಿ.ಬಿ. ಅಡ್ವಾನಿಯವರನ್ನು ಕೈಗಾರಿಕಾ ಸ್ಥಾಪನೆಗೆ ನೆರವು ನೀಡಲು ನೇಮಿಸಿತು. ಎಷ್ಟು ವರ್ಷಗಳ ತರುವಾಯ ಬೆಂಗಳೂರಿನಲ್ಲಿ ಕಾರ್ಖಾನೆ ಅಸ್ತಿತ್ವಕ್ಕೆ ಬಂದಿತು.

ಸರ್ ಎಂ.ವಿ.ರವರ ಮೇದಾಶಕ್ತಿಯನ್ನು ರಾಷ್ಟ್ರದ ನಾನಾ ಸಂಸ್ಥೆಗಳು ಬಳಸಿಕೊಳ್ಳಲು ಮುಂದೆ ಬಂದವು. 1949ರಲ್ಲಿ ಗುಜರಾತ್ ರಾಜ್ಯದ ಸೌರಾಷ್ಟ್ರ ಸಂಸ್ಥಾನದ ಮನವಿಯ ಮೇರೆಗೆ ಅಲ್ಲಿ ಜಲಾಶಯಗಳ ನಿರ್ಮಾಣಕ್ಕೆ ಪ್ರದೇಶಗಳನ್ನು ಆಯ್ಕೆ ಮಾಡಿಕೊಟ್ಟರು. ಶಿವಮೊಗ್ಗ ಜಿಲ್ಲೆಯ ಶರಾವತಿ ನೀರು ಬಳಕೆಯಾಗದೆ ಹರಿಯುವುದನ್ನು ತಪ್ಪಿಸಿ ಜಲವಿದ್ಯುತ್ ತಯಾರಿಸಲು ಸರ್ವೆ ಮತ್ತು ಸಮೀಕ್ಷೆ ಕೆಲಸಗಳನ್ನು ಪೂರೈಸಿದರು. ಆದರೆ ಯುದ್ಧದ ಪರಿಸ್ಥಿತಿಯಿಂದ ಉಂಟಾದ ಮಾನವ ಬಲ ಮತ್ತು ಸಂಪನ್ಮೂಲದ ಕೊರತೆಯಿಂದಾಗಿ ಈ ಯೋಜನೆಯು

ಸರ್ ಎಂ.ವಿ.ಯವರ ಕಾಲದಲ್ಲಿ ಆಗಲಿಲ್ಲ. ನಂತರದ ದಿನಗಳಲ್ಲಿ ಪೂರ್ಣಗೊಂಡಿತು. ಮಧ್ಯಪ್ರದೇಶದ ಭೂಪಾಲ್ ನವಾಬರ ಕೋರಿಕೆಯ ಮೇರೆಗೆ ಅಲ್ಲಿನ ನೀರು ಮತ್ತು ವಿದ್ಯುತ್ ಸರಬರಾಜು ಯೋಜನೆಯ ರೂಪುರೇಷೆಗಳನ್ನು ಹಾಕಿಕೊಟ್ಟರು. 1950ರಲ್ಲಿ ಮೈಸೂರು ಸರ್ಕಾರ ರಾಜ್ಯದಲ್ಲಿ ಗ್ರಾಮ ಕೈಗಾರಿಕೆಗಳ ಬಗ್ಗೆ ಸಮೀಕ್ಷೆ ನಡೆಸಿ ಸೂಕ್ತ ಸಲಹೆ ನೀಡಿದರು. 1952ರಲ್ಲಿ ಅಂದಿನ ಪ್ರಧಾನಮಂತ್ರಿ ನೆಹರುರವರ ಕೋರಿಕೆಯ ಮೇರೆಗೆ ಬಿಹಾರ್‌ನಲ್ಲಿ ಗಂಗಾನದಿ ಹರಿಯುವ ಸ್ಥಳದಲ್ಲಿ ರೈಲ್ವೆ ಸೇತುವೆ ನಿರ್ಮಿಸಿಕೊಟ್ಟರು. 1953ರಲ್ಲಿ ಮೈಸೂರಿನ ಗ್ರಾಮೀಣ ಕೈಗಾರಿಕಾ ಯೋಜನೆಯನ್ನು ಪರಿಷ್ಕರಿಸಿ ಪ್ರಕಟಿಸಿದರು. ಹೀಗೆ ತಮ್ಮ ಇಳಿ ವಯಸ್ಸಿನಲ್ಲೂ ಕಾರ್ಯತತ್ಪರರಾಗಿದ್ದರು.

ಸರ್ ಎಂ.ವಿ. ರವರ ವಿಶೇಷಗಳು

ಸಿಬ್ಬಂದಿ ವರ್ಗದಲ್ಲಿ ಶಿಸ್ತು: ದಿವಾನರಾದ ದಿನಗಳಲ್ಲಿ ಸಿಬ್ಬಂದಿ ವರ್ಗವು ವೇಳೆಗೆ ಸರಿಯಾಗಿ ಕಛೇರಿಗೆ ಬರುತ್ತಿರಲಿಲ್ಲ. ಕಡತಗಳನ್ನು ನಿರ್ವಹಣೆ ಮಾಡುತ್ತಿರಲಿಲ್ಲ. ಎಂಟು, ಹತ್ತು ದಿನಗಳಾದರೂ ಕ್ಷೌರ ಮಾಡದೆ ಕಛೇರಿಗಳಿಗೆ ಬರುತ್ತಿದ್ದರು. ಕೆಲಸದಲ್ಲಿ ವಿಳಂಬ, ಬೇಜವಾಬ್ದಾರಿ ಉತ್ತರ, ನಿರ್ಲಕ್ಷ್ಯ, ಸರ್ಕಾರಿ ಅಧಿಕಾರಿಗಳೆಂದರೆ ಸಾಮಾನ್ಯ ಜನರಿಗೆ, ರೈತರಿಗೆ ಭಯ ಇವೇ ಮುಂತಾದವಿದ್ದವು. ಇವುಗಳನ್ನು ಹೋಗಲಾಡಿಸಲು ಪ್ರತಿದಿನ ಕ್ಷೌರ ಮಾಡಿಸಿಕೊಂಡು ಇಲ್ಲವೆ ಮಾಡಿಕೊಂಡು ಬರುವಂತೆ ಮಾಡಿದರು. ಸರ್ಕಾರಿ ಕಛೇರಿಗೆ ಒಂದು ನೀತಿ ಸಂಹಿತೆಯನ್ನು ಜಾರಿಗೆ ತಂದರು.

ಸರ್ ಪ್ರಶಸ್ತಿ ಮತ್ತು ಭಾರತರತ್ನ ಪ್ರಶಸ್ತಿ

ಸರ್ ಎಂ.ವಿ.ಯವರ ಬುದ್ಧಿಶಕ್ತಿಗೆ ತಲೆದೂಗಿದ ಬ್ರಿಟಿಷರು 1915ರಲ್ಲಿ ಸರ್ ಪ್ರಶಸ್ತಿಯನ್ನು ನೀಡಿದರೆ ಸ್ವತಂತ್ರ ಭಾರತವು 1955ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ॥ ರಾಜೇಂದ್ರಬಾಬುರವರು **'ಭಾರತರತ್ನ'** ಪ್ರಶಸ್ತಿ ನೀಡಿ ಗೌರವಿಸಿದರು. ಸ್ವತಂತ್ರ ಭಾರತ ಸರ್ಕಾರವು ಸರ್ ಎಂ.ವಿ.ರವರ ಭಾವಚಿತ್ರವಿರುವ ಅಂಚೆಚೀಟಿಯನ್ನು ಹೊರತಂದಿತು. ದೇಶದ ನಾನಾ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದವು.

ಕ್ಲಬ್ ಮತ್ತು ಹೋಟೆಲ್‌ಗಳ ಸ್ಥಾಪನೆ

ಸರ್ ಎಂ.ವಿ.ಯವರು ಸಂಪ್ರದಾಯಸ್ಥರಾಗಿದ್ದರೂ ಕೆಲವು ವಿಷಯಗಳಲ್ಲಿ ಮುಂದಾಲೋಚನೆ ಮಾಡುವ ಹಾಗೂ ಪ್ರಗತಿಪರ ತತ್ವಗಳನ್ನು ಹೊಂದಿದ್ದರು.

ಈಗಾಗಲೇ ಬ್ರಿಟಿಷರು ತಮ್ಮ ಅಧಿಕಾರಿಗಳಿಗೆ ಮತ್ತು ಕುಲೀನರಿಗಾಗಿ 'ಬೆಂಗಳೂರು ಕ್ಲಬ್' ಎಂಬ ಕ್ಲಬ್ಬನ್ನು ಸ್ಥಾಪಿಸಿದ್ದರು. ಬೆಂಗಳೂರಿನ ಅತ್ಯುತ್ತಮ ಪ್ರದೇಶ ಹಾಗೂ ನಿಸರ್ಗದ ಮಡಿಲಿನಲ್ಲಿರುವ ಕಬ್ಬನ್ ಉದ್ಯಾನದಲ್ಲಿ ನೂರು ಜನ ಸರ್ಕಾರಿ ಉದ್ಯೋಗಿಗಳು ಹಾಗೂ ಪ್ರತಿಷ್ಠಿತರನ್ನು ಸೇರಿಸಿ 'ಸೆಂಚುರಿಕ್ಲಬ್' ಎಂಬ ಕ್ಲಬ್ ಸ್ಥಾಪನೆಗೆ ಕಾರಣಕರ್ತರಾದರು. ಮೈಸೂರಿನಲ್ಲಿ ಮಹಾರಾಜ ಕಾಲೇಜಿನ ಬಳಿ 'ಕಾಸ್ಮೊಪಾಲಿಟನ್ ಕ್ಲಬ್' ಎಂಬ ಕ್ಲಬ್ ಸ್ಥಾಪನೆಯಾಗಲು ಇವರೇ ಕಾರಣಕರ್ತರು. 'ಮಾರ್ಡರನ್ ಕೆಫೆ'ಯಂತಹ ಹೋಟೆಲ್‌ಗಳು ಸ್ಥಾಪನೆಯಾಗಲು ಒತ್ತು ನೀಡಿದರು.

ಮೈಸೂರಿನ ಕೃಷ್ಣರಾಜ ವೃತ್ತದ ಉದ್ಘಾಟನೆ

ಮೈಸೂರಿನ ಪ್ರತಿಷ್ಠಿತ ವೃತ್ತವಾದ ಕೃಷ್ಣರಾಜ ವೃತ್ತ (ಕೆ.ಆರ್. ಸರ್ಕಲ್)ದಲ್ಲಿ ಆಳೆತ್ತರದ ನಾಲ್ವಡಿ ಕೃಷ್ಣರಾಜರ ಮೂರ್ತಿಯನ್ನು ಅಷ್ಟೇ ಎತ್ತರದ ಪೀಠದ ಮೇಲೆ ನಿಲ್ಲಿಸಿ ಒಂದು ಬೃಹತ್ ವೃತ್ತವನ್ನು ನಿರ್ಮಿಸಿರುತ್ತಾರೆ. ಇದು ಇಡೀ ಮೈಸೂರು ನಗರಕ್ಕೆ ಶೋಭೆ ತರುವ ವೃತ್ತವಾಗಿದೆ. ಇಂತಹ ವೃತ್ತಗಳನ್ನು ಯೂರೋಪಿನ ರಾಷ್ಟ್ರಗಳಲ್ಲಿ ಕಾಣಬಹುದು. ಇದನ್ನು ಕೃಷ್ಣರಾಜ ಒಡೆಯರ ಆಪ್ತರು ಅವರ ಕಾಲದಲ್ಲಿ ದಿವಾನರಾಗಿದ್ದ ಹಾಗೂ ರಾಷ್ಟ್ರ ಖ್ಯಾತಿ ಪಡೆದಿದ್ದ ಸರ್ ಎಂ.ವಿ.ಯವರ ಕೈಯಲ್ಲೇ ಉದ್ಘಾಟಿಸಬೇಕೆಂದು ಶ್ರೀ ಶ್ರೀ ಜಯಚಾಮರಾಜೇಂದ್ರ ಒಡೆಯರು ನಿರ್ಧರಿಸಿ ಸರ್ ಎಂ.ವಿ.ಯವರಿಂದ ಉದ್ಘಾಟಿಸಿದರು.

ಶತಮಾನೋತ್ಸವ ಆಚರಣೆ

ಭಾರತದ ಸರ್ವಶ್ರೇಷ್ಠ ತಂತ್ರಜ್ಞರು ಮೇಧಾವಿಯೂ ಆದ ಸರ್ ಎಂ.ವಿ.ಯವರಿಗೆ ನೂರನೇ ವರ್ಷಕ್ಕೆ ಕಾಲಿಡುತ್ತಿದ್ದಂತೆ ಶತಮಾನೋತ್ಸವ ಆಚರಣಾ ಸಮಿತಿಯೊಂದನ್ನು ರಚಿಸಿಕೊಂಡು ಸಂಭ್ರಮ ಮತ್ತು ಸಡಗರದಲ್ಲಿ ಆಚರಿಸಲು ತೀರ್ಮಾನಿಸಲಾಯ್ತು. ನಾಡಿನ ನಾಲ್ಕೂ ಮೂಲೆಗಳಿಂದ ಜನ ಬರುತ್ತಾರೆಂದು ತಿಳಿದು ಲಾಲ್‌ಬಾಗಿನ ಗಾಜಿನಮನೆಯಲ್ಲಿ ಸಮಾರಂಭವನ್ನು ಏರ್ಪಡಿಸಲಾಯ್ತು. ಆ ಸಮಾರಂಭಕ್ಕೆ ಭಾರತದ ಪ್ರಧಾನಮಂತ್ರಿಗಳಾಗಿದ್ದ ಪಂಡಿತ್ ಜವಹಾರ್ ಲಾಲ್‌ರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲಾಗಿತ್ತು. ನೆಹರೂರವರು ಹೃದಯ ಸ್ಪರ್ಶಿಯಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸರ್ ಎಂ.ವಿ.ಯವರ 'ಸ್ಮರಣ ಸಂಚಿಕೆ' ಬಿಡುಗಡೆ ಮಾಡಲಾಯ್ತು.

ಅನಿಕೇತನರಾದ ಸರ್ ಎಂ.ವಿ.

ಇಂದಿನ ಕಾಲದಲ್ಲಿ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು ಕೋಟ್ಯಾಂತರ ರೂಪಾಯಿ ಆಸ್ತಿಪಾಸ್ತಿ ಮಾಡುತ್ತಿರುವುದನ್ನು ನಾವು

ನೋಡುತ್ತಿದ್ದೇವೆ. ಎಂ.ವಿ.ರವರು ಬೆಂಗಳೂರಿನಲ್ಲಿ ಸ್ವಂತಕ್ಕೆಂದು ಒಂದು ನಿವೇಶನವನ್ನಾಗಲಿ ಮನೆಯನ್ನಾಗಲಿ ಮಾಡಲಿಲ್ಲ. ಮಾಡುವ ಯೋಚನೆಯನ್ನು ಮಾಡಲಿಲ್ಲ. ದೇಶವಿದೇಶಗಳಿಗೆ ಹೋಗಿ ಬರುತ್ತಿದ್ದರು. ಹೊರರಾಜ್ಯಗಳು ಸಲಹೆ ಸೂಚನೆ ನೀಡಲು ತಮ್ಮ ಸಂಸ್ಥಾನ ಇಲ್ಲವೆ ರಾಜ್ಯಗಳಿಗೆ ಆಗಮಿಸಬೇಕೆಂದು ಕೇಳಿಕೊಳ್ಳುತ್ತಿದ್ದರು. ಹೀಗಾಗಿ ಸ್ವಂತ ಮನೆಯ ಯೋಚನೆಯನ್ನೇ ಮಾಡಲಿಲ್ಲ. ಕುವೆಂಪುರವರು ಹೇಳಿರುವಂತೆ 'ಆಗು ನೀ ಅನಿಕೇತನ' ಎಂಬುದು ಬಹುಶಃ ಸರ್ ಎಂ.ವಿ.ಯವರಿಗೆ ಅನ್ವಯಿಸುತ್ತದೇನೊ? ಸಾಕಷ್ಟು ಕಾಲ ಬೆಂಗಳೂರಿನ ಹೈಗ್ರೌಂಡ್ಸ್ ಪ್ರದೇಶದ ಐದನೇ ನಂಬರಿನ ಅಪ್‌ಲ್ಯಾಂಡ್ಸ್ ಎಂಬ ಮನೆಯನ್ನು (ಸರ್ಕಾರಿ ಗೃಹ) ಇನ್ನೂರ ಐವತ್ತು ರೂಪಾಯಿ ಬಾಡಿಗೆಗೆ ಪಡೆದಿದ್ದರು.

ಶಿಸ್ತಿನ ಸಿಪಾಯಿ ಸರ್ ಎಂ.ವಿ.

ಸರ್ ಎಂ.ವಿ.ರವರು ಮನೆಯ ಒಳಗೂ, ಹೊರಗೂ ಶಿಸ್ತನ್ನು ಪಾಲಿಸುತ್ತಿದ್ದರು. ದಿವಾನ್ ಹುದ್ದೆಯಿಂದ ನಿವೃತ್ತಿ ಹೊಂದಿದ ತರುವಾಯ ರಾಷ್ಟ್ರದ ಬೇರೆ ಬೇರೆ ಸಂಸ್ಥಾನಗಳ ಇಲ್ಲವೆ ರಾಜ್ಯಗಳ ಇಂಜಿನಿಯರುಗಳು, ಆಡಳಿತಗಾರರು, ರಾಜರ, ನವಾಬರ ಪ್ರತಿನಿಧಿಗಳು ರಾಜಕೀಯ ಮುತ್ಸದ್ದಿಗಳು ಸರ್ ಎಂ.ವಿ.ರವರ ಸಲಹೆ ಸಹಕಾರ ಕೇಳಲು ಮನೆಗೆ ಬರುತ್ತಿದ್ದರು. ಅಂತಹ ಸಂದರ್ಭದಲ್ಲಿ ಪೂರ್ವ ನಿಗದಿತ ಸಮಯವನ್ನು ಗೊತ್ತುಪಡಿಸಿಕೊಂಡು ಬರಬೇಕಿತ್ತು. ಮನೆಯಲ್ಲಿದ್ದ ವೇಳೆ ಯೋಜನೆಗಳನ್ನು ರೂಪಿಸುವುದು, ಪುಸ್ತಕ ಬರೆಯುವುದು (ಪುಸ್ತಕಗಳ ಪಟ್ಟಿಯನ್ನು ನೀಡಲಾಗಿದೆ) ಸಂದರ್ಶಕರೊಂದಿಗೆ ಮಾತುಕತೆ ಹೀಗೆ ಸಕ್ರಿಯರಾಗಿದ್ದರು. ತಮ್ಮ ಬಂಧುಬಳಗದೊಂದಿಗೆ ನಕ್ಕು ನಲಿಯುತ್ತಿದ್ದರು.

ಹೀಗೆ ಸರ್ ಎಂ.ವಿ.ರವರು ಕರ್ನಾಟಕದಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸ ಪಡೆದು ತಮ್ಮ ವೃತ್ತಿ ಜೀವನವನ್ನು ಮಹಾರಾಷ್ಟ್ರದಲ್ಲಿ ಪ್ರಾರಂಭಿಸಿದರು. 1909ರಿಂದ 1912ರ ತನಕ ಮೈಸೂರು ಸಂಸ್ಥಾನದ ಮುಖ್ಯ ಇಂಜಿನಿಯರರಾಗಿ 1912ರಿಂದ 1918ರ ತನಕ ಮೈಸೂರಿನ ದಿವಾನರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದರು. ಇವರು ಕರ್ನಾಟಕ, ಮಹಾರಾಷ್ಟ್ರ ಆಂಧ್ರಪ್ರದೇಶ, ಗುಜರಾತ್ ಸೇರಿದಂತೆ ಭಾರತದ ನಾನಾ ರಾಜ್ಯಗಳಲ್ಲಿ, ಸಂಸ್ಥಾನಗಳಲ್ಲಿ ಸೇವೆ ಸಲ್ಲಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಾನಂತರ ದೇಶವು ವ್ಯಾಪಾರ, ವಾಣಿಕ್ಯ, ಕೃಷಿ, ನೀರಾವರಿ ಹಾಗೂ ಕೈಗಾರಿಕಾ ಕ್ಷೇತ್ರ ಸೇರಿದಂತೆ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರು. ಮೈಸೂರು ಸಂಸ್ಥಾನದಲ್ಲಿ ಕೆ.ಆರ್.ಎಸ್. ಅಣೆಕಟ್ಟು ನಿರ್ಮಾಣ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಸ್ಥಾಪನೆಯು ಅಮೋಘವಾದುದು. ಕರ್ನಾಟಕದಲ್ಲಿ

ಕೈಗಾರಿಕಾ ಕ್ರಾಂತಿ ಮಾಡಿದ ಮಹಾನ್ ವ್ಯಕ್ತಿ. ಬರಡು ಭೂಮಿಯಾಗಿದ್ದ ಮಂಡ್ಯ ಜಿಲ್ಲೆಯ ಲಕ್ಷಾಂತರ ಎಕರೆ ಭೂಮಿಗೆ ಕಾವೇರಿ ನೀರುಣಿಸುವ ಮೂಲಕ ಮಂಡ್ಯ ಜಿಲ್ಲಾ ರೈತರ ಪಾಲಿಗೆ ಪ್ರಾತಃ ಸ್ಮರಣೀಯರಾಗಿದ್ದಾರೆ.

ಸರ್ ಎಂ.ವಿ.ರವರ ಹೆಜ್ಜೆ ಗುರುತುಗಳು

1860 ಸೆಪ್ಟೆಂಬರ್ 15ರಲ್ಲಿ ಜನನ, ಚಿಕ್ಕಬಳ್ಳಾಪುರ ಜಿಲ್ಲೆ, ಮುದ್ದೇನಹಳ್ಳಿ

1881 ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಪದವಿ.

1883 ಮುಂಬೈ ವಿಶ್ವವಿದ್ಯಾನಿಲಯದಿಂದ ಎಂಜಿನಿಯರಿಂಗ್‌ನಲ್ಲಿ ಪದವಿ (ಪೂನಾ ಕಾಲೇಜಿನಲ್ಲಿ ವ್ಯಾಸಂಗ)

1884 ಮುಂಬೈ ಸರ್ಕಾರದಲ್ಲಿ ಎಂಜಿನಿಯರ್ ಆಗಿ ನೇಮಕ

1885 ಇಲಾಖಾ ಪರೀಕ್ಷೆ ತೇರ್ಗಡೆ, ಮೊದಲ ದರ್ಜೆಯ ಸಹಾಯಕ ಎಂಜಿನಿಯರ್ ಆಗಿ ಬಡ್ತಿ.

1891 ಪೂನಾದಲ್ಲಿ ಡೆಕನ್ ಕ್ಲಬ್ ಸ್ಥಾಪನೆಗೆ ಸಂಘಟನೆ; ರ್‍ಯಾನಡೆ, ಗೋಪಾಲಕೃಷ್ಣ ಗೋಖಲೆ, ತಿಲಕ್, ಕೇಲ್ಕರ್ ಅವರಂತಹ ಸಾರ್ವಜನಿಕ ನಾಯಕರ ಸಂಪರ್ಕ.

1894 ಸಿಂಧ್‌ನ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಗೆ ವಿನ್ಯಾಸ ರಚನೆ.

1898 ಸ್ವಂತ ಖರ್ಚಿನಿಂದ ಜಪಾನ್ ದೇಶದಲ್ಲಿ ಪ್ರವಾಸ

1899 ಪೂನಾ ನೀರಾವರಿ ವಲಯದ ಮೇಲ್ವಿಚಾರಣೆ, ತಾಕು ನೀರಾವರಿ ಪದ್ಧತಿ ಜಾರಿ

1901–03 ಜಲಾಶಯಗಳಿಗೆ ಸ್ವಯಂ ಚಾಲಿತ ಬಾಗಿಲುಗಳ (ಆಟೋಮ್ಯಾಟಿಕ್ ಸ್ಲೂಸ್‌ಗೇಟ್) ಶೋಧನೆ ಮತ್ತು ಅಳವಡಿಕೆ.

1904 ಸಿಮ್ಲಾದಲ್ಲಿ ನಡೆದ ನೀರಾವರಿ ಎಂಜಿನಿಯರ್‌ಗಳ ಸಮಾವೇಶಕ್ಕೆ ನಾಲ್ಕು ಸಂಶೋಧನಾ ಪ್ರಬಂಧಗಳ ಸಲ್ಲಿಕೆ ಮತ್ತು ಗೋಷ್ಠಿಗಳಲ್ಲಿ ಭಾಗಿ, ಮುಂಬಯಿ ಪ್ರಾಂತದ ಸ್ಯಾನಿಟರಿ ಎಂಜಿನಿಯರಾಗಿ ಅಧಿಕಾರ ವಹಿಸಿದ್ದು.

1906 ಪರ್ಷಿಯಾ ಕೊಲ್ಲಿಯಾ ಏಡೆನ್‌ನ ಸೈನಿಕ ಶಿಬಿರಕ್ಕೆ ಕುಡಿಯುವ ನೀರಿನ ಯೋಜನೆ ರಚನೆ.

1906–08 ಮುಂಬೈ ಕರ್ನಾಟಕದ ಅನೇಕ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗಳು ಮತ್ತು ಒಳಚರಂಡಿ ವ್ಯವಸ್ಥೆ ರೂಪಿಸಿದ್ದು.

1908 ಮುಂಬೈ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ. ಯೂರೋಪ್ ಮತ್ತು ಅಮೆರಿಕಗಳಲ್ಲಿ ಪ್ರವಾಸ.

1909 ಹೈದರಾಬಾದ್ ನಗರದ ಪ್ರವಾಹ ಸಮಸ್ಯೆಗಳಿಗೆ ಪರಿಹಾರ ಯೋಜನೆ, ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಆಗಿ ನೇಮಕ.

1911 ಕಾವೇರಿ ಜಲಾಶಯ ಯೋಜನೆ ಪ್ರಾರಂಭ, ಆರ್ಥಿಕ ಪರಿಷತ್ ರಚನೆಗೆ ಪ್ರೇರಣೆ.

1912 ಮೈಸೂರು ಸಂಸ್ಥಾನದ ದಿವಾನರಾಗಿ ನೇಮಕ.

1913 ಮೈಸೂರು ಸಂಸ್ಥಾನಕ್ಕೆ ಹೆಚ್ಚಿನ ರಾಜ್ಯಾಧಿಕಾರ ಲಭ್ಯವಾದ ರಾಜಕೀಯ ಒಪ್ಪಂದ ಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ, ಮೈಸೂರು ಬ್ಯಾಂಕ್ ಸ್ಥಾಪನೆ, ಪ್ರಾಥಮಿಕ ಶಿಕ್ಷಣ ಕಾಯಿದೆ ಜಾರಿ.

1914 ಮಲೆನಾಡು ಅಭಿವೃದ್ಧಿ ಯೋಜನೆ ಮತ್ತು ಗ್ರಾಮಾಭಿವೃದ್ಧಿ ಯೋಜನೆಗಳ ಜಾರಿ.

1915 ಕನ್ನಡ ಸಾಹಿತ್ಯ ಪರಿಷತ್ ಅಸ್ತಿತ್ವಕ್ಕೆ, ಸಾರ್ವಜನಿಕ ಗ್ರಂಥಾಲಯ ಯೋಜನೆ ಜಾರಿ. ಸರ್ ಪದವಿ ಪುರಸ್ಕೃತರು.

1916 ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭ.

1917 ಬೆಂಗಳೂರಿನ ಸೆಂಚುರಿ ಕ್ಲಬ್ ಸ್ಥಾಪನೆ, ಎಂಜಿನಿಯರಿಂಗ್ ಕಾಲೇಜು ಪ್ರಾರಂಭ

1918 ಭದ್ರಾತಿ ಕಬ್ಬಿಣ ಕಾರ್ಖಾನೆ ಆರಂಭ, ದಿವಾನ್ ಹುದ್ದೆಯಿಂದ ನಿವೃತ್ತಿ

1919 ಜಪಾನ್, ಕೆನಡಾ, ಅಮೆರಿಕ ದೇಶಗಳಲ್ಲಿ ಪ್ರವಾಸ, ಬ್ರಿಟನ್‌ಗೆ ಭೇಟಿ.

1920 'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ' ಗ್ರಂಥ ಪ್ರಕಟಣೆ.

1922 ಸರ್ವಪಕ್ಷಗಳ ರಾಜಕೀಯ ಸಮಾವೇಶದ ಅಧ್ಯಕ್ಷತೆ.

1923 ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರು, ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶದ ಅಧ್ಯಕ್ಷತೆ

1924 ಭಾರತೀಯ ಆರ್ಥಿಕ ಸಮ್ಮೇಳನದ ಅಧ್ಯಕ್ಷತೆ

1926 ಯೂರೋಪ್ ಮತ್ತು ಅಮೆರಿಕದಲ್ಲಿ ಪ್ರವಾಸ

1929 ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳ ಸಮಾವೇಶದ ಅಧ್ಯಕ್ಷತೆ.

1934 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ' ಗ್ರಂಥ ಪ್ರಕಟಣೆ.

1935 ಕೈಗಾರಿಕಾ ಅಭಿವೃದ್ಧಿ ಅಧ್ಯಯನಕ್ಕಾಗಿ ಜಪಾನ್, ಯೂರೋಪ್, ಅಮೆರಿಕಗಳಲ್ಲಿ ಪ್ರವಾಸ.

1941 ಅಖಿಲ ಭಾರತ ತಯಾರಿಕರ ಸಂಸ್ಥೆಯ ಸ್ಥಾಪನಾ ಅಧ್ಯಕ್ಷರು.

1946 ಅಮೆರಿಕಾದಲ್ಲಿ ಪ್ರವಾಸ

1949 ಗ್ರಾಮ ಕೈಗಾರಿಕಾ ಯೋಜನೆ ರಚಿಸಿ ಅದರ ಜಾರಿಗೆ ಮಾರ್ಗದರ್ಶನ.

1951 ಆತ್ಮಚರಿತ್ರೆ "ಮೆಮ್ವಾರ್ಸ್ ಆಫ್ ಮೈ ವರ್ಕಿಂಗ್ ಲೈಫ್" ಗ್ರಂಥ ಪ್ರಕಟ.

1957 'ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ' ಕೃತಿ ರಚನೆ.

1960 ಸೆಪ್ಟೆಂಬರ್ 15, ಶತಮಾನೋತ್ಸವ ಅಭಿನಂದನೆ, "ಎಂ.ವಿ." ಅಭಿನಂದನಾ ಗ್ರಂಥ ಪ್ರಕಟ.

1962 ಏಪ್ರಿಲ್ 14ನೇ ದಿನಾಂಕ ಬೆಳಿಗ್ಗೆ 6.15 ಗಂಟೆಗೆ ದೈವಾಧೀನ. ಆಗ ಅವರಿಗೆ 102 ವರ್ಷ 7 ತಿಂಗಳು, 17 ದಿವಸಗಳು ತುಂಬಿದ್ದವು.

ಗೌರವ ಬಿರುದುಗಳು ಮತ್ತು ಪ್ರಶಸ್ತಿಗಳು

1887 ಲಂಡನ್ ಸಿವಿಎಲ್ ಎಂಜಿನಿಯರ್ಸ್ ಸಹ ಸದಸ್ಯತ್ವ

1904 ಅದೇ ಸಂಸ್ಥೆಯ ಪೂರ್ಣ ಸದಸ್ಯತ್ವ

1911 ಸಿ.ಐ.ಇ. ಪ್ರಶಸ್ತಿ

1915 ಸರ್ ಬಿರುದು

1921 ಕಲ್ಕತ್ತ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ ಪದವಿ

1944 ಪಾಟ್ನಾ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ ಪದವಿ

1947 ಅಲಹಾಬಾದ್ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ ಪದವಿ

1958 ಜಾದವಪುರ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಲಾಸ್ ಪದವಿ

1931 ಮುಂಬೈ ವಿಶ್ವವಿದ್ಯಾನಿಲಯದಿಂದ ಡಾಕ್ಟರ್ ಆಫ್ ಲಾಸ್ ಪದವಿ

1948 ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರ್ ಆಫ್ ಲಾಸ್ ಪದವಿ

1937 ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ

1953 ಆಂಧ್ರ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ

1944 ಭಾರತದ ಎಂಜಿನಿಯರ್‌ಗಳ ಸಂಸ್ಥೆಯ ಗೌರವ ಆಜೀವ ಸದಸ್ಯತ್ವ

1950 ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಫೆಲೋಷಿಪ್

1953 ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಗೌರವ ಸದಸ್ಯತ್ವ

1955 ಭಾರತ ಸರ್ಕಾರದಿಂದ 'ಭಾರತರತ್ನ' ಅತ್ಯುನ್ನತ ಪ್ರಶಸ್ತಿ

1958 ದುರ್ಗಾಪ್ರಸಾದ್ ಖೈತಾನ್ ಸ್ಮಾರಕ ಚಿನ್ನದ ಪದಕ

1960 ಶತಮಾನೋತ್ಸವದ ನೆನಪಿಗೆ ವಿಶೇಷ ಅಂಚೆ ಚೀಟಿ ಬಿಡುಗಡೆ

ಕೃತಿಗಳು

1. Speeches by Sir M. Visvesvaraya (Dewan of Mysore 1910-17) Vol. 1, Government Press, Bangalore, 1917.
2. Place of Indian States in the New Constitution of the Government of India, 1917.
3. Reconstructing India, P.S. King and Sons, London, 1920.
4. Planned Economy of India, Bangalore Press, Bangalore, 1934.
5. Memories of Working Life, Caxton Press, Bombay, 1951.
6. Saying-wise and witty, Bangalore Press, Bangalore, 1957.
7. A brief memoir of my complete working life, Government Press, Bangalore, 1959.

ಕುವೆಂಪು

ಕುವೆಂಪು ಆ ಹೆಸರಿನಲ್ಲೇ ಏನೋ ಒಂದು ವಿಧವಾದ ಕಂಪು. ಇದು ಕನ್ನಡದ ಕಂಪು. ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಏರುಗತಿಯಲ್ಲಿ ಸಾಗಲು ಕುವೆಂಪು ಕಾರಣಕರ್ತರು ಎಂದರೆ ತಪ್ಪಾಗಲಾರದು. ಕವನ, ಕಾವ್ಯ, ಸಣ್ಣಕಥೆಗಳು, ನಾಟಕ, ಕಾದಂಬರಿ, ಮಹಾಕಾವ್ಯ, ವಿಮರ್ಶೆ –ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಾಗೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಮೂಲಕ ಅಜರಾಮರವಾಗಿ ಉಳಿದಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಖ್ಯಾತಿಯನ್ನು ತಂದುಕೊಟ್ಟಿದ್ದಾರೆ.

ಕುವೆಂಪುರವರ ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ. ಇವರ ಹುಟ್ಟೂರು ಹಿರೇಕೊಡಿಗೆ. ತಾಯಿಯ ತವರು ಮನೆಯಲ್ಲಿ ಜನನ. ಇದು ಮಲೆನಾಡಿನ ಸೆರಗಿನಲ್ಲಿರುವ ಚಿಕ್ಕಮಗಳೂರು ಜಿಲ್ಲೆ ಕೊಪ್ಪಕ್ಕೆ ಸಮೀಪವಿದೆ. ಇಲ್ಲಿ 1904ನೇ ಇಸವಿ ಡಿಸೆಂಬರ್ ಮಾಹೆ 29ನೇ ತಾರೀಖು ಜನಿಸಿದರು. ತಂದೆ ವೆಂಕಟಪ್ಪಗೌಡ ಮತ್ತು ತಾಯಿ ಶ್ರೀಮತಿ ಸೀತಮ್ಮ. ಅಂದು ಮಲೆನಾಡು ಶಿಕ್ಷಣದಿಂದ ವಂಚಿತವಾಗಿತ್ತು. ಕಂದಾಚಾರ ಮತ್ತು ಮೌಢ್ಯಗಳಿಂದ ತುಂಬಿತ್ತು. ಆದರೆ ಸಹ್ಯಾದ್ರಿ ಪರ್ವತವು ನಿಸರ್ಗವೇ ಬಂದು ಮಲಗಿರುವಂತೆ ಇದ್ದ ಕಾಲವೊಂದಿತ್ತು. ಅಂದಿನ ನಿಸರ್ಗವನ್ನು ಕುವೆಂಪುರವರು ತಮ್ಮ 'ಮಲೆಗಳಲ್ಲಿ ಮದುಮಗಳು' ಸೇರಿದಂತೆ ಕೆಲವು ಕೃತಿಗಳಲ್ಲಿ ವರ್ಣಿಸಿದ್ದಾರೆ. ಬಹುಶಃ ತಾವು ಬೆಳೆದ ಪರಿಸರ ಅವರ ಮೇಲೆ ಬಹುವಾಗಿ ಪ್ರಭಾವ ಬೀರಿರಬಹುದು.

ಪುಟ್ಟಪ್ಪನವರು ಅತಿ ಶ್ರೀಮಂತ ಕುಟುಂಬದಲ್ಲಿ ಜನಿಸಿಲ್ಲದಿದ್ದರೂ ಮೇಲ್ಮಧ್ಯಮ ಕುಟುಂಬದಲ್ಲಿ ಜನಿಸಿದವರು. ಅವರ ತಂದೆಯವರು ಕೂಲಿಮಠದಲ್ಲಿ ಖಾಸಗಿಯಾಗಿ ಅಕ್ಷರಾಭ್ಯಾಸ ಕೊಡಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಐಗಳು ಇವರ ಮೊದಲ ಗುರುವಾಗಿ ಪುಟ್ಟಪ್ಪನವರನ್ನು ತಿದ್ದಿತೀಡಿದರು. ಓದಿನಲ್ಲಿ ಆಸಕ್ತಿ ಹೊಂದಿದ್ದ ಪುಟ್ಟಪ್ಪನವರು ಅಂದು ಶಿಕ್ಷಣದಿಂದ ವಂಚಿತವಾಗಿದ್ದ ಜಿಲ್ಲೆಗೆ ಕ್ರೈಸ್ತಪಾದ್ರಿಗಳು ಬಂದು ಶಿಕ್ಷಣಪ್ರಸರಣ ಮಾಡುವ ನೆಪದಲ್ಲಿ ಕ್ರೈಸ್ತಧರ್ಮ ಪ್ರಚಾರ ಮಾಡಹತ್ತಿದ್ದರು. ಒಮ್ಮೆ ಬಿ.ಎಸ್.ಡಿ. ಮೋಸಸ್ ಎಂಬ ಕ್ರೈಸ್ತ ಪಾದ್ರಿಯ ಬೋಧನೆಯ ಗಾಢ ಪ್ರಭಾವಕ್ಕೆ ಒಳಗಾಗಿದ್ದರು. ಪುಟ್ಟಪ್ಪನವರು ಹಾಗೂ ಅವರ ಬಂಧುಗಳಿಂದ ರಾಮಣ್ಣಗೌಡರು ಕ್ರೈಸ್ತಧರ್ಮಕ್ಕೆ ಸೇರುವರೇನೋ ಎನ್ನುವಷ್ಟರ ಮಟ್ಟಿಗೆ ಆ ಪಾದ್ರಿಯು ಪ್ರಭಾವ ಬೀರಿದ್ದರು. ಊರಿನವರು ಒಗ್ಗೂಡಿ ಕ್ರೈಸ್ತರ ಪ್ರಭಾವವನ್ನು ತಗ್ಗಿಸಿದರು. ಅಂದು ಇಂದಿನಂತೆ ನಾಟಕ, ಸಿನಿಮಾ, ದೂರದರ್ಶನಗಳ ಮನರಂಜನೆಗಳು ಇರಲಿಲ್ಲ. ಭಾಗವತರ ಯಕ್ಷಗಾನ, ರಾಮಾಯಣ, ಮಹಾಭಾರತ ಭಾಗವತಕ್ಕೆ ಸಂಬಂಧಿಸಿದ ನಾಟಕಗಳು, ಕಾವ್ಯವಾಚನ ಇವೇ ಮುಂತಾದವುಗಳು ಅಂದಿನ ಮನರಂಜನೆಗಳಾಗಿದ್ದವು. ಇವುಗಳು ಎಳೆಯ ವಯಸ್ಸಿನ ಪುಟ್ಟಪ್ಪನವರ ಮೇಲೆ ಪ್ರಭಾವ ಬೀರಿದವು.

ತೀರ್ಥಹಳ್ಳಿಯಲ್ಲಿ ತಮ್ಮ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಮುಗಿಸಿದ ಪುಟ್ಟಪ್ಪನವರು 1918ರಲ್ಲಿ ಮೈಸೂರಿನ ಹೆಸರಾಂತ ವೆಸ್ಲಿಯನ್ ಮಿಷನ್ ಹೈಸ್ಕೂಲಿಗೆ ಸೇರಿದರು. ಓದಿನ ಬಗ್ಗೆ ತುಂಬು ಕಾಳಜಿ ಹೊಂದಿದ್ದ ಇವರು ಜ್ಞಾನಾರ್ಜನೆ ಮಾಡತೊಡಗಿದರು. ಎಳೆಯ ವಯಸ್ಸಿನಲ್ಲಿ ವಿಶ್ವವಿಖ್ಯಾತ ಕವಿಗಳಾದ ವರ್ಡ್ಸ್‌ವರ್ತ್, ಬಿ.ಪಿ.ಷೆಲ್ಲಿ, ಟಾಲ್‌ಸ್ಟಾಯ್, ಮಿಲ್ಟನ್ ಇವರೇ ಮುಂತಾದವರ ಕೃತಿಗಳನ್ನು ಓದಿ ಪ್ರಭಾವಿತರಾದರು. ತಾನು ಅವರಂತೆ ಮಹಾಕವಿಯಾಗಬೇಕೆಂಬ ಹಂಬಲ ಬೆಳೆಯಿತು. ಅವರ ಕೃತಿರಚನೆ, ಬರೆಯುವ ದಾಟಿ, ಸಿರಿಸೊಬಗನ್ನು ವರ್ಣಿಸುವ ರೀತಿ–ನೀತಿಗಳು ಪುಟ್ಟಪ್ಪನವರ ಮೇಲೆ ಪ್ರಭಾವ ಬೀರಿತು.

ಪುಟ್ಟಪ್ಪನವರ ಮನಸ್ಸು ಸಹಜವಾಗಿ ಲೌಕಿಕಕ್ಕಿಂತಲೂ ಪಾರಮಾರ್ಥಿಕದೆಡೆಗೆ ಒಲಿಯಿತು. ಶಂಕರಾಚಾರ್ಯ, ರಾಮಾನುಜಾಚಾರ್ಯ, ಹಿಂದೂಧರ್ಮ, ಕ್ರೈಸ್ತಧರ್ಮ, ರಾಮಾಯಣ, ಮಹಾಭಾರತ, ಭಾಗವತಗಳು ಇವರ ಮೇಲೆ ಪ್ರಭಾವ ಬೀರಿದವು. ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿವಿವೇಕಾನಂದರ ಕೃತಿಗಳನ್ನು ಓದಿ ಪುಲಕಿತರಾದರು ಹಾಗೂ ಪ್ರಭಾವಕ್ಕೊಳಗಾದರು. ಆಗಿಂದಾಗ್ಗೆ ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ನಡೆಯುತ್ತಿದ್ದ ವಿಶೇಷ ಉಪನ್ಯಾಸಗಳು, ಭಜನೆ, ಚರ್ಚೆ ಇವೇ ಮುಂತಾದವುಗಳಲ್ಲಿ ಭಾಗವಹಿಸುತ್ತಿದ್ದರು. ಸ್ವಾಮಿವಿವೇಕಾನಂದರ

ಪ್ರಭಾವಕ್ಕೊಳಗಾದರು. ಅಂದು ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ದೇಶ್ವರಾನಂದ ಸ್ವಾಮಿಗಳು ಆ ಯುವಕನಲ್ಲಿದ್ದ ಸಾತ್ವಿಕ ಗುಣಗಳನ್ನು ಮೆಚ್ಚಿಕೊಂಡರು. ಪುಟ್ಟಪ್ಪನವರನ್ನು ತಮ್ಮ ಶಿಷ್ಯವೃಂದದಲ್ಲಿ ಒಬ್ಬರನ್ನಾಗಿ ಸ್ವೀಕರಿಸಿದರು. ಅದೃಷ್ಟವೋ ಏನೋ ಎಂಬಂತೆ ಒಮ್ಮೆ ಪುಟ್ಟಪ್ಪನವರು ಅನಾರೋಗ್ಯಕ್ಕೆ ತುತ್ತಾದರು. ಚೇತರಿಸಿಕೊಂಡ ನಂತರ ಅವರು ಬಾಡಿಗೆಗೆ ವಾಸವಿದ್ದ ಸಣ್ಣಕೋಣೆಯಲ್ಲಿ ಇರುವುದು ಬೇಡವೆಂದು ಹೇಳಿ ಅವರ ಗುರುಗಳಾದ ನಾ. ಕಸ್ತೂರಿಯವರು ಮತ್ತು ಸಿದ್ದೇಶ್ವರ ಸ್ವಾಮೀಜಿಗಳು ರಾಮಕೃಷ್ಣಾಶ್ರಮದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರು. ಇದು ನಿಜಕ್ಕೂ ಅವರ ಯೋಗಾ ಯೋಗವೇ ಸರಿ. ಕಾರಣವೇನೆಂದರೆ ಪ್ರಶಾಂತ ವಾತಾವರಣ ಹಾಗೂ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ವಾಸ ಮಾಡುವ ಅವಕಾಶ ದೊರೆಯಿತು. ಪುಟ್ಟಪ್ಪನವರು ಎಂ.ಎ., ಪಾಸು ಮಾಡಿ ಉಪನ್ಯಾಸಕರಾಗಿ ಕೆಲಸಕ್ಕೆ ಸೇರಿದಾಗಲೂ ಆಶ್ರಮವಾಸಿಗಳಾಗಿದ್ದರು, ಎಂದರೆ ಸಿದ್ದೇಶ್ವರಾನಂದರ ಹಾಗೂ ಪುಟ್ಟಪ್ಪನವರ ಸಂಬಂಧ ಹೇಗಿತ್ತು ಎಂಬುದು ಇದರಿಂದ ತಿಳಿಯುತ್ತದೆ.

ಓದಿನಲ್ಲಿ ಆಸಕ್ತಿಯಿದ್ದ ಪುಟ್ಟಪ್ಪನವರು ಪದವಿಪೂರ್ವ (ಎಂಟ್ರೆನ್ಸ್ ಎಕ್ಸಾಮ್) ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರು. ವಿದ್ಯಾರ್ಥಿಯಾಗಿದ್ದ ಪುಟ್ಟಪ್ಪನವರ ಮೇಲೆ ಪ್ರೊ. ಬಿ.ಎಂ.ಶ್ರೀಕಂಠಯ್ಯ, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ, ಪ್ರೊ. ಟಿ.ಎಸ್.ವೆಂಕಣ್ಣಯ್ಯ ಇವರೇ ಮುಂತಾದವರು ಪ್ರಭಾವ ಬೀರಿದರು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಪುಟ್ಟಪ್ಪನವರಲ್ಲಿ ಕವಿಯ ಮನಸ್ಸು ಇದ್ದಿತು. ಬಾಲಪ್ರತಿಭೆಯು ತುಂಬಿದ್ದಿತು. ತಮ್ಮ 18ನೇ ವಯಸ್ಸಿನಲ್ಲಿ ಎಂದರೆ 1922ರಲ್ಲಿ ಬಿಗಿನರ್ಸ್ ಮ್ಯೂಸ್ (Beginner's Muse) ಎಂಬ ಹೆಸರಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕವನ ಸಂಕಲನವನ್ನು ಬರೆದು ಅವರ ಗುರುಗಳಾದ ಐರಿಷ್ ಕವಿ ಜೇಮ್ಸ್ ಕಸಿನ್ಸ್‌ರವರಿಗೆ ತೋರಿಸಿದರು. ಕಸ್ಸಿನ್ಸ್‌ರವರು ಅದನ್ನು ಓದಿ ನೀವು ರವೀಂದ್ರನಾಥ ಠಾಗೂರರಂತೆ ನಿಮ್ಮ ಮಾತೃಭಾಷೆಯಲ್ಲೇ ನಿಮ್ಮ ಪಾಂಡಿತ್ಯವನ್ನು ಹೊರಗೆಡವಿ ಎಂದು ತಿಳಿಸಿದರು. ಮೊದಮೊದಲು ಕಸಿನ್ಸ್‌ರವರ ಮಾತು ರುಚಿಸಲಿಲ್ಲ. 'ಏಪ್ರಿಲ್' ಎಂಬ ಆಂಗ್ಲ ಕವನವನ್ನು 'ಚೈತ್ರ–ವೈಶಾಖ' ಎಂಬ ತಲೆಬರಹದೊಂದಿಗೆ ಪುಸ್ತಕದ ರೂಪದಲ್ಲಿ ಹೊರ ತಂದರು. ಓದಿನಲ್ಲಿ ಆಸಕ್ತಿ ಹೊಂದಿದ್ದ ಪುಟ್ಟಪ್ಪನವರು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ., ಪದವಿಗೆ ಸೇರಿದರು. ಓದಿನ ಜೊತೆ ಜೊತೆಗೆ ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದರು. ಮೈಸೂರಿನ ಸಣ್ಣಕೋಣೆಯೊಂದರಲ್ಲಿ ಅವರ ವಾಸ್ತವ್ಯ. ಅಂದಿನ ವಯೋಮಾನದವರಲ್ಲಿರಬೇಕಾದ ಅಮೋದ, ಪ್ರಮೋದ, ಆಟೋಟಗಳ ಬಗ್ಗೆ

ಅಷ್ಟಾಗಿ ಆಸಕ್ತಿಯಿರಲಿಲ್ಲ. ಸದಾ ಓದಿನ ಗೀಳು ಹಚ್ಚಿಕೊಂಡಿದ್ದ ಪುಟ್ಟಪ್ಪನವರ ಆರೋಗ್ಯ ಹದಗೆಟ್ಟಿತು. ಆಸ್ಪತ್ರೆ ಸೇರಬೇಕಾಗಿ ಬಂತು.

ರಾಮಕೃಷ್ಣಾಶ್ರಮದ ನಂಟು

ಪುಟ್ಟಪ್ಪನವರಿಗೆ ಸ್ವಾಮಿವಿವೇಕಾನಂದ ಹಾಗೂ ರಾಮಕೃಷ್ಣ ಪರಮಹಂಸರ ಬಗ್ಗೆ ಗೌರವಾದಾರಗಳಿತ್ತು. ರಾಮಕೃಷ್ಣಾಶ್ರಮದೊಂದಿಗೆ ಒಡನಾಟವಿತ್ತು. ಇದರಿಂದಾಗಿ ಅವರ ಗುರುಗಳಾದ ನಾ. ಕಸ್ತೂರಿಯವರ, ವೆಂಕಣ್ಣಯ್ಯನವರ ಸಲಹೆಯಂತೆ ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ವಾಸ್ತವ್ಯ ಹೂಡಿದರು. ರಾಮಕೃಷ್ಣಾಶ್ರಮದ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಸ್ವಾಮಿ ಸಿದ್ದೇಶ್ವರಾನಂದರು ಪುಟ್ಟಪ್ಪನವರನ್ನು ಬರಮಾಡಿಕೊಂಡರು. ಪುಟ್ಟಪ್ಪನವರು ವಿವಾಹವಾಗುವ ತನಕ ಆಶ್ರಮವಾಸಿಗಳಾಗಿದ್ದರು. ಕಾಲೇಜಿನಲ್ಲಿ ಪುಟ್ಟಪ್ಪನವರ ಗುರುಗಳಾದ ಬಿ.ಎಂ. ಶ್ರೀಕಂಠಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯ ಇನ್ನೂ ಮುಂತಾದವರು ಪುಟ್ಟಪ್ಪನವರನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಪುಟ್ಟಪ್ಪನವರ 'ನೆನಪಿನ ದೋಣಿಯಲ್ಲಿ' ಎಂಬ ಅವರ ಆತ್ಮಚರಿತ್ರೆಯಲ್ಲಿ ಅವರ ಎಲ್ಲಾ ಗುರುಗಳಿಗಿಂತಲೂ ಟಿ.ಎಸ್. ವೆಂಕಣ್ಣಯ್ಯನವರನ್ನು ಹಾಗೂ ತಮಗೆ ಆಶ್ರಯ ನೀಡಿದ ಸ್ವಾಮಿಸಿದ್ದೇಶ್ವರರನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಇಡೀ ವಿಶ್ವಕ್ಕೆ ಆಧ್ಯಾತ್ಮಿಕತೆಯನ್ನು ಸಾರಿದ ಹಾಗೂ ಸಾರುತ್ತಿರುವ ರಾಮಕೃಷ್ಣಾಶ್ರಮವು ಪುಟ್ಟಪ್ಪನವರ ವಾಸ್ತವ್ಯವಾಗಿತ್ತು ಎಂದರೆ ನಿಜಕ್ಕೂ ಯೋಗಾಯೋಗವೇ ಸರಿ.

ಪುಟ್ಟಪ್ಪನವರು ಮೊದಲ ಶ್ರೇಣಿಯಲ್ಲಿ ಬಿ.ಎ. ಪದವಿಯನ್ನು ಪಡೆದರು. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಯವರ ಪ್ರಭಾವ ಹಾಗೂ ನಿರ್ದೇಶನದಂತೆ ಕನ್ನಡ ಎಂ.ಎ.ಗೆ ಸೇರಿದರು. ಯುವಕವಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರ ಎಲ್ಲಾ ಗುರುಗಳಿಗೂ (ಬಿ.ಎ., ಎಂ.ಎ. ಸೇರಿ) ಪುಟ್ಟಪ್ಪನವರು ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಎಂ.ಎ. ಓದುತ್ತಿರುವಾಗಲೇ 'ಜಲಗಾರ', 'ಯಮನಸೋಲು' ಎಂಬ ನಾಟಕಗಳನ್ನು ಬರೆದರು. ಕೇವಲ ನಾಟಕಗಳನ್ನು ಬರೆಯುವುದು ಮಾತ್ರವಲ್ಲ ನಾಟಕಗಳಲ್ಲೂ ಬಣ್ಣಹಚ್ಚಿ ಪಾತ್ರಕ್ಕೆ ಜೀವಕಳೆಯನ್ನು ತುಂಬುತ್ತಿದ್ದರು. ಇಂದಿನ ಕಾಲದಂತೆ ಅಂದು ಸ್ತ್ರೀ ಪಾತ್ರಗಳನ್ನು ಗಂಡಸರೇ ವಹಿಸಿಕೊಳ್ಳಬೇಕಿತ್ತು. ಕುವೆಂಪುರವರು ಸ್ತ್ರೀ ವೇಷವನ್ನು ಧರಿಸಿದ್ದುಂಟು. ಓದುಗರಿಗೆ ರುಚಿಸುವಂತಹ ನೀಳ್ಗವನವನ್ನು ರಚಿಸಲು ಪ್ರಾರಂಭಿಸಿದರು. ರಾಬರ್ಟ್ ಬ್ರೌನಿಂಗ್‌ರವರ The pied-piper of Hamelin ಕೃತಿಯು ರೂಪಾಂತರವೇ 'ಬೊಮ್ಮನಹಳ್ಳಿ ಕಿಂದರಜೋಗಿ' ಎಂಬ ನೀಳ್ಗವನ. ಇಂತಹ ನೀಳ್ಗವನಗಳನ್ನು ಒಟ್ಟುಗೂಡಿಸಿ

'ಅಮಲನ ಕಥೆ' ಎಂಬ ಕೃತಿಯನ್ನು ರಚಿಸಿದರು. 'ಬೊಮ್ಮನಹಳ್ಳಿಯ ಕಿಂದರಜೋಗಿ' ಅಂದು ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟ ಕವನವೇ ಸರಿ.

ಅಧ್ಯಾಪಕರಾಗಿ ಪುಟ್ಟಪ್ಪನವರು

ಪುಟ್ಟಪ್ಪನವರ ಶ್ರಮ ವ್ಯರ್ಥವಾಗಲಿಲ್ಲ. 1929ರಲ್ಲಿ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ಗಳಿಸಿದರು. ಪ್ರತಿಭಾವಂತ ವಿದ್ಯಾರ್ಥಿ ಹಾಗೂ ಯುವ ಕವಿ ಪುಟ್ಟಪ್ಪನವರಿಗೆ ಉದ್ಯೋಗ ಕಾಯ್ದಿತ್ತು. ಎಂ.ಎ. ಪಾಸು ಮಾಡಿದ ವರ್ಷವೇ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಅಧ್ಯಯನ, ಅಧ್ಯಾಪನ ಮತ್ತು ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ಅಧ್ಯಾಪಕರಾಗಿರುವಾಗಲೇ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಅವರೊಬ್ಬ ಮಾದರಿ ಅಧ್ಯಾಪಕರಾಗಿದ್ದರು. 1933ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. 1933ರಿಂದ ಕವನ, ಕಾದಂಬರಿ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃಷಿ ಮಾಡುತ್ತಾ ಬಂದರು. 1936ರಲ್ಲಿ 'ಚಿತ್ರಾಂಗದ' ಎಂಬ ಕಾವ್ಯವನ್ನು ರಚಿಸಿದರು. ಇದು ಖಂಡಕಾವ್ಯವಾಗಿದೆ.

ವಿವಾಹ ಬಂಧನ

ಈಗಾಗಲೇ ನಿರ್ಧಾರವಾಗಿದ್ದ ಹೆಣ್ಣು ದೇವಂಗಿಯ ರಾಮಣ್ಣಗೌಡರ ಕುಮಾರಿ ಹೇಮಾವತಿ. ಹೇಮಾವತಿಯವರು ಪುಟ್ಟಪ್ಪನವರ ಬಂಧುವಾಗಿದ್ದು ಆಕೆಯ ಹೆಸರನ್ನು ತಾವೇ ಇಟ್ಟಿದ್ದಾಗಿ ಪುಟ್ಟಪ್ಪನವರು ತಮ್ಮ 'ನೆನಪಿನ ದೋಣಿಯಲ್ಲಿ' ಎಂಬ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಮೈಸೂರಿನಲ್ಲಿ ತಾವು ಸಂಸಾರ ಹೂಡುವ ತನಕ ರಾಮಕೃಷ್ಣಾಶ್ರಮವೇ ಅವರ ಮನೆಯಾಗಿತ್ತು. ನಂತರ ಆಶ್ರಮ ಬಿಟ್ಟು ಮೈಸೂರಿನಲ್ಲಿ ಚಿಕ್ಕಮನೆ ಮಾಡಿದರು. ವೈವಾಹಿಕ ಜೀವನಕ್ಕೆ ತಮ್ಮ ಸಾಹಿತ್ಯ ರಚನೆಯಾಗಲಿ, ಉದ್ಯೋಗವಾಗಲೀ ಅಡ್ಡಿಯಾಗದಂತೆ ಒಬ್ಬ ಸದ್ಗೃಹಸ್ಥನಾಗಿ ಬಾಳ್ವೆ ಮಾಡಿದರು (ಅವರ ನೆನಪಿನ ದೋಣಿಯು ಎಲ್ಲರಿಗೂ ಮಾದರಿ).

ಕುವೆಂಪುರವರ ಸಾಹಿತ್ಯದ ಹೊಳಹುಗಳು / ತಿರುಳು

ಕುವೆಂಪುರವರು ಈ ಮೊದಲೇ ಹೇಳಿರುವಂತೆ ಜಾತಿ, ಮತ, ಧರ್ಮ, ಮೂಢನಂಬಿಕೆಗಳಿಗೆ ಬಲಿಯಾಗದೆ ಸಮಾಜವನ್ನು ತಮ್ಮ ಸಾಹಿತ್ಯದಿಂದ ತಿದ್ದಲು ಪ್ರಯತ್ನ ಮಾಡಿದ್ದಾರೆ. ತಮ್ಮ ಚೊಚ್ಚಲ ಕವನ ಸಂಕಲನವಾದ 'ಕೊಳಲು' ಕವಿಯ

ಮನಸ್ಸನ್ನು ತಿಳಿಸುತ್ತದೆ. ಅದು ಪುಟ್ಟಪ್ಪನವರ ಸಾಹಿತ್ಯಕ್ಕೆ ದಾರಿದೀಪವಾಗುತ್ತದೆ. ಎಂ.ಎ. ವಿದ್ಯಾರ್ಥಿ ದೆಸೆಯಲ್ಲಿಯೇ ಬರೆದ ನಾಟಕಗಳಾದ 'ಜಲಗಾರ' ಮತ್ತು 'ಯಮನ ಸೋಲು', 'ಸರಳ ರಗಳೆ'ಯನ್ನು ಮೊದಲ ಬಾರಿಗೆ ನಾಟಕದ ರಚನೆಗೆ ಬಳಸಿಕೊಂಡಿರುವುದು ನಿಜಕ್ಕೂ ಸ್ತುತ್ಯಾರ್ಹ. ಕಾದಂಬರಿಯ ವಿಷಯಕ್ಕೆ ಬಂದರೆ 'ಮಲೆಗಳಲ್ಲಿ ಮದುಮಗಳು'. ಮಲೆನಾಡಿನ ಬದುಕು ಹಾಗೂ ಅಲ್ಲಿನ ವೈಶಿಷ್ಟ್ಯಗಳನ್ನು ಅವರ ಕೃತಿಗಳಲ್ಲಿ ಕಾಣಬಹುದು. ಅದೇರೀತಿಯ ಮತ್ತೊಂದು ಕಾದಂಬರಿ ಎಂದರೆ ಕಾನೂರು ಸುಬ್ಬಮ್ಮ ಹೆಗ್ಗಡತಿ. ಮಲೆನಾಡು ಜೀವನ ಕುರಿತು ಕುವೆಂಪು ಕಾದಂಬರಿಗಳಲ್ಲಿ ಭಿನ್ನ ಸಾಂಸ್ಕೃತಿಕ ಸ್ತರಕ್ಕೆ ಸೇರಿದ ಪಾತ್ರಗಳು ಬರುತ್ತವೆ. ಅವುಗಳನ್ನು ಸ್ಥೂಲವಾಗಿ ಮೇಲು ವರ್ಗದ ಬ್ರಾಹ್ಮಣರು, ಗೌಡರು (ಒಕ್ಕಲಿಗರು) ಹಳೇಪೈಕದವರು ಅಥವಾ ದೀವರು, ಹರಿಜನರು, ಬೇರೆಡೆಯಿಂದ ಬಂದ ದಕ್ಷಿಣ ಕನ್ನಡದ ಬಿಲ್ಲವರು, ಮುಸ್ಲಿಮರು, ಕ್ರಿಶ್ಚಿಯನರು ಇವರೇ ಮುಂತಾದವರು. ಆಯಾ ವರ್ಗದವರು ಆಡುವ ಕನ್ನಡವನ್ನು ಗುರ್ತಿಸಲು ಸಾಧ್ಯವಾಗುತ್ತದೆ. ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಕುವೆಂಪುರವರು ತಮ್ಮ ಕೃತಿಗಳಲ್ಲಿ ಸೆರೆಹಿಡಿದಿದ್ದಾರೆ. ಕುವೆಂಪುರವರು 'ಸರ್ವರಿಗೂ ಸಮಬಾಳು' 'ಸರ್ವರಿಗೂ ಸಮಪಾಲು' ಎನ್ನುವುದನ್ನು ಮೂಲಮಂತ್ರವಾಗಿಟ್ಟುಕೊಂಡು ಎಲ್ಲಾ ಪಾತ್ರಗಳಿಗೂ ಸಮಾನವಾದ ಅವಕಾಶವನ್ನು ನೀಡಿದ್ದಾರೆ. ಕವಿಯ ಮನಸ್ಸಿನ ಸಹೃದಯವನ್ನು ಅವರ ಕೃತಿಗಳಿಂದಲೇ ಕಾಣಬಹುದು.

ಕುವೆಂಪುರವರ ನಾಟಕಗಳು 1930ರ ಸಂದರ್ಭದಲ್ಲಿ ಅವರ ಗುರುಗಳಾದ ಪ್ರೊ. ಬಿ.ಎಂ. ಶ್ರೀಕಂಠಯ್ಯನವರ ಮಾರ್ಗದರ್ಶನದಲ್ಲಿ ಕನ್ನಡ ರಂಗಭೂಮಿಗೆ ಸಾಹಿತ್ಯ ಪ್ರಧಾನವಾದ ನಾಟಕಗಳು ದೊರಕುವಂತಾಯಿತು. ಅಂದಿನಿಂದ ಇಂದಿನವರೆವಿಗೂ ಜಲಗಾರ ಮಹಾರಾತ್ರಿ, ಸ್ಮಶಾನ ಕುರುಕ್ಷೇತ್ರ, ಯಮನ ಸೋಲು, ನನ್ನ ಗೋಪಾಲ, ರಕ್ತಾಕ್ಷಿ ಇವೇ ಮುಂತಾದ ನಾಟಕಗಳು ಶಾಲಾ, ಕಾಲೇಜುಗಳಲ್ಲಿ, ಹಳ್ಳಿಗಳಲ್ಲಿ ನಡೆಯುತ್ತಿವೆ.

ಕಾದಂಬರಿಯ ವಿಷಯಕ್ಕೆ ಬಂದರೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು ಮಲೆಗಳಲ್ಲಿ 'ಮದುಮಗಳು'. ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾದಂಬರಿಯನ್ನು ರಚಿಸಿದ ಮೂವತ್ತು ವರ್ಷಗಳ ನಂತರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ರಚಿಸಿದರು. ಬಂಧದ ಮತ್ತು ವಿನ್ಯಾಸದ ದೃಷ್ಟಿಯಿಂದ ಅವರ ಎರಡೂ ಕಾದಂಬರಿಗಳು ವಿಭಿನ್ನವಾಗಿವೆ. ಸಾಮಾನ್ಯವಾಗಿ ಮಹಾನ್ ಸಾಹಿತಿಗಳು ಎಳೆಯರ ಅಥವಾ ಮಕ್ಕಳ ಸಾಹಿತ್ಯಕ್ಕೆ ಅಷ್ಟಾಗಿ ಗಮನ ಕೊಡುವುದಿಲ್ಲ. ಆದರೆ ಕುವೆಂಪುರವರು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ

ಒಟ್ಟು ಒಂಬತ್ತು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅಮಲನ ಕಥೆ, ಮರಿವಿಜ್ಞಾನಿ, ನನ್ನ ಮನೆ, ಮೇಘಪುರ, ಹಾಳೂರು ಮತ್ತು ಬೊಮ್ಮನಹಳ್ಳಿಯ ಕಿಂದರಿಜೋಗಿ ಎಂಬ ಆರು ಪದ್ಯ ಸಂಕಲನಗಳನ್ನು ಹಾಗೂ 'ನರಿಗಳಿಗೇಕೆ ಕೋಡಿಲ್ಲ' ಎಂಬ ಕಥೆಯೊಂದನ್ನು ಬಿಟ್ಟರೆ 'ನನ್ನ ಗೋಪಾಲ' ಮತ್ತು 'ಮೋಡಣ್ಣನ ತಮ್ಮ' ಎಂಬ ಎರಡು ನಾಟಕಗಳು. ಕುವೆಂಪುರವರು ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಮಕ್ಕಳ ಪರಿಶುದ್ಧವಾದ ಮನಸ್ಸನ್ನು ಅರಳಿಸುವುದೇ ಅಲ್ಲದೆ ನೈತಿಕತೆಯನ್ನು ಅದರಲ್ಲಿ ತುಂಬಿದ್ದಾರೆ. 'ಬೊಮ್ಮನಹಳ್ಳಿ ಕಿಂದರಿಜೋಗಿ'ಯಂತೂ ಮಕ್ಕಳ ಮನಸ್ಸಿನಷ್ಟೇ ಏಕೆ, ದೊಡ್ಡವರ ಮನಸ್ಸನ್ನೂ ಆಕರ್ಷಿಸಿದೆ. ಈ ಪದ್ಯವು ಕುವೆಂಪುರವರಿಗೆ ಅಪಾರವಾದ ಕೀರ್ತಿ ತಂದುಕೊಟ್ಟಿದ್ದೇ ಅಲ್ಲದೆ ಅವರ ಹೆಸರನ್ನು ನಾಡಿನಾದ್ಯಂತ ಅಜರಾಮರವಾಗಿಸಿದೆ.

ಮಕ್ಕಳ ಕಥೆ, ಮಕ್ಕಳ ಸಾಹಿತ್ಯ ವಿಷಯಕ್ಕೆ ಬಂದರೆ 'ನರಿಗಳಿಗೇಕೆ ಕೋಡಿಲ್ಲ' ಎಂಬ ಕೃತಿಯು ಮಕ್ಕಳಿಗೆ ಕುತೂಹಲ ಕೆರಳಿಸುವುದಲ್ಲದೆ ಮಕ್ಕಳ ಸಾಹಿತ್ಯ ರಚನೆಗೆ ಇದು ಸಹಾಯ ಮಾಡುತ್ತದೆ. ಮಕ್ಕಳ ಕುತೂಹಲನ್ನು ಕೃತಿಯ ಹೆಸರಿನಲ್ಲೇ ಕೆರಳಿಸುತ್ತದೆ. ಮಕ್ಕಳಲ್ಲಿ ಏಕಾಗ್ರತೆ ಮೂಡಿಸುವ ಹಾಗೂ ಶಕ್ತಿ ಬಲಗೊಳ್ಳುವಂತೆ ಮಾಡಲು ಇದು ನೆರವಾಗುತ್ತದೆ. ಮುಂದೆ ಮಕ್ಕಳು ಸಾಹಿತ್ಯವನ್ನು ಓದಲು ಹಾಗೂ ರಚಿಸಲು ಇದು ನೆರವಾಗುತ್ತದೆ. 'ನನ್ನ ಗೋಪಾಲ' ಮತ್ತು 'ಮೋಡಣ್ಣನ ತಮ್ಮ' ಮಕ್ಕಳ ನಾಟಕಗಳು. ಮೊದಲನೆಯದು ಸುಲಭವಾದ ಗದ್ಯದಿಂದ ಕೂಡಿ ಸೊಗಸೆನಿಸಿದರೆ ಎರಡನೆಯದು ಲಯಬದ್ಧವಾದ ಪ್ರಾಸಾನು ಪ್ರಾಸಗಳಿಂದ ಕೂಡಿದ್ದು ಗೀತರೂಪಕವಾಗಿದೆ. ಈ ಎರಡೂ ನಾಟಕಗಳು ಮಕ್ಕಳ ಮನಸ್ಸನ್ನು ಜಾಗೃತಗೊಳಿಸುತ್ತವೆ.

ಕುವೆಂಪುರವರು ರಚಿಸಿರುವ ಜೀವನ ಚರಿತ್ರೆಯು ಸಾಧಾರಣ ವ್ಯಕ್ತಿಗಳಲ್ಲ. ಜೀವನ ಚರಿತ್ರೆಗಳನ್ನು ಬರೆಯಲು ಕೆಲವು ಉದ್ದೇಶಗಳಿರುತ್ತವೆ. ತಮ್ಮ ಜೀವಿತಾವಧಿಯಲ್ಲಿ ಸಾಮಾನ್ಯರು ಸಾಧಿಸಲಾಗದ್ದನ್ನು ಸಾಧಿಸಿ ಕೀರ್ತಿವಂತರಾಗುತ್ತಾರೆ. ಇಂತಹ ವ್ಯಕ್ತಿಗಳ ಜೀವನವನ್ನು ಮುಂದಿನ ತಲೆಮಾರಿನ ಜನ ತಿಳಿದುಕೊಂಡು ಅವರಂತಾಗಲು ಇಲ್ಲವೇ ಅವರ ಒಂದು ಅಂಶದಷ್ಟಾದರೂ ಆಗಲು ಪ್ರಯತ್ನಿಸುತ್ತಾರೆ. ಅಂತಹ ಪ್ರಾತಃಸ್ಮರಣೀಯರೆಂದರೆ 'ಶ್ರೀ ರಾಮಕೃಷ್ಣ ಪರಮಹಂಸ' ಮತ್ತು 'ಸ್ವಾಮಿ ವಿವೇಕಾನಂದ' ಎಂಬ ಇಬ್ಬರು ಮಹಾನ್ ವ್ಯಕ್ತಿಗಳ ಜೀವನಚರಿತ್ರೆ. ಕುವೆಂಪುರವರು ಕಲ್ಕತ್ತಾದ ಬಳಿಯಿರುವ ಬೇಲೂರು ಮಠಕ್ಕೆ ತೆರಳಿ ಅಲ್ಲಿ ಸ್ವಲ್ಪಕಾಲ ತಂಗಿದ್ದು ಶ್ರೀ ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರು ಓಡಾಡಿದ ಸ್ಥಳವನ್ನು ಕಂಡು ಪುಲಕಿತರಾದರು. ಶ್ರೀ ರಾಮಕೃಷ್ಣ

ಪರಮಹಂಸರಲ್ಲಿದ್ದ ಜ್ಞಾನ, ಜಾತ್ಯಾತೀತ ಮನೋಭಾವ ಕುವೆಂಪುರವರನ್ನು ಆಕರ್ಷಿಸಿತು. ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಅವರ ಪತ್ನಿ ಶ್ರೀ ಶಾರದಾದೇವಿಯವರ ನಡುವಿನ ಅಲೌಕಿಕ ಸಂಬಂಧ ಕುವೆಂಪುರವರ ಮೇಲೆ ಗಾಢ ಪ್ರಭಾವ ಬೀರಿತು. ಪತ್ನಿಯನ್ನು ಮಾತೆಯಂತೆ ನಡೆಸಿಕೊಂಡದ್ದು ಕುವೆಂಪುರವರೂ ತಮ್ಮ ಪತ್ನಿಯನ್ನು ಮಾತೆಯಂತೆ ನಡೆಸಿಕೊಳ್ಳತೊಡಗಿದರು. ತಮ್ಮ ಪತ್ನಿಯನ್ನು ಅಕ್ಕ (ಮಲೆನಾಡಿನಲ್ಲಿ ತಾಯಿಯನ್ನು ಅಕ್ಕ ಎಂತಲೂ, ತಂದೆಯನ್ನು ಅಣ್ಣ ಎಂತಲೂ ಕರೆಯುತ್ತಾರೆ) ಎಂದು ಕರೆಯುತ್ತಿದ್ದುದು ಇದಕ್ಕೆ ಸಾಕ್ಷಿಯಾಗಿದೆ (ನೆನಪಿನ ದೋಣಿಯಲ್ಲಿ ಕೃತಿ). ಅದೇ ರೀತಿ ವಿವೇಕಾನಂದರ ಜೀವನ ಚರಿತ್ರೆಯಲ್ಲಿ ಮಹಾರಾಜ ಮಂಗಳಸಿಂಗರಿಗೆ ಮೂರ್ತಿಪೂಜೆಯಲ್ಲಿ ನಂಬಿಕೆ ಹುಟ್ಟಿಸಲು ಸ್ವಾಮಿ ವಿವೇಕಾನಂದರು ಅನುಸರಿಸಿದ ಕ್ರಮ, ಮಾಯಾವತಿಯಲ್ಲಿ ಶ್ರೀ ರಾಮಕೃಷ್ಣರ ಮೂರ್ತಿ ಪೂಜೆಯನ್ನು ನಿಲ್ಲಿಸಿ ಜ್ಞಾನ ಮಾರ್ಗವನ್ನು ತಿಳಿಯಪಡಿಸಿದುದನ್ನು ಕುವೆಂಪುರವರು ಸ್ವಾಮಿ ವಿವೇಕಾನಂದರ ಕೃತಿಯಲ್ಲಿ ಬರೆದಿದ್ದಾರೆ. ವಿವೇಕಾನಂದರು ಅಮೆರಿಕಾಗೆ ಹೋಗಿದ್ದ ಪರಿ ಚಿಕಾಗೊ ಭಾಷಣವನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ.

ಕುವೆಂಪುರವರು ಕನ್ನಡ ಭಾಷೆಗೆ, ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಕಾದಂಬರಿ, ನಾಟಕಗಳು, ಜೀವನಚರಿತ್ರೆ, ಮಕ್ಕಳ ಸಾಹಿತ್ಯ ಇವೇ ಮುಂತಾದ ಕೃತಿಗಳಿಂದಾಗಿ ಕನ್ನಡ ಭಾಷೆಯು ಸಮೃದ್ಧಗೊಂಡಿದೆ. ಓದುಗನ ವಯೋಮಾನಕ್ಕೆ ತಕ್ಕಂತೆ ಕೃತಿಗಳನ್ನು ರಚಿಸಿರುವುದು ಕುವೆಂಪುರವರ ಜಾಣ್ಮೆಯನ್ನು ಪ್ರದರ್ಶಿಸಿದೆ. ಮಕ್ಕಳ ಮನಸ್ಸನ್ನು ಅರಿತು ಓದಲು ಅನುಕೂಲವಾಗುವಂತೆ ಇರುವ ಸರಳ ಭಾಷೆ, ಪ್ರೌಢರು ಓದಲು ಅನುಕೂಲವಾಗುವಂತೆ ಕಾದಂಬರಿಗಳು ವಿದ್ವಜ್ಜನರಿಗಾಗಿಯೇ ಮೀಸಲಾದ 'ರಾಮಾಯಣ ದರ್ಶನಂ' ಮಹಾಕಾವ್ಯ ನಿಜಕ್ಕೂ ಮೆಚ್ಚುವಂತಹದ್ದು.

ಶೈಕ್ಷಣಿಕ ಸಾಧನೆ

ಕುವೆಂಪುರವರು ತಾವು ಓದಿದ ಕಾಲೇಜಿನಲ್ಲೇ ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿದ್ದರಲ್ಲದೆ 1955ರಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದರು. ಅವರು ಪ್ರಾಂಶುಪಾಲರಾದರೂ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ಸಂತೋಷ ಸಿಗುತ್ತಿರಲಿಲ್ಲ. ಹೀಗಾಗಿ ಪ್ರಾಂಶುಪಾಲರಾಗಿದ್ದರೂ ಸಿಕ್ಕ ಸಮಯದಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಮನೆಯಲ್ಲಿ ಮಾಮೂಲಿನಂತೆ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ

ಕರ್ನಾಟಕದಲ್ಲಿರುವ ಕವಿಗಳಲ್ಲಿ ಇಲ್ಲವೆ ಜ್ಞಾನಪೀಠ ಪಡೆದ ಕನ್ನಡಿಗರಲ್ಲಿ ಮೊದಲ ಉಪಕುಲಪತಿಗಳು. ಕರ್ನಾಟಕದ ಪ್ರತಿಷ್ಠಿತ ವಿಶ್ವವಿದ್ಯಾಲಯವಾದ ಮೈಸೂರು ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳಾಗಿ 1956ರಲ್ಲಿ ನೇಮಕಗೊಂಡರು. ವಿಶ್ವವಿದ್ಯಾಲಯದ ಭೋದನಾಂಗ, ಕಾರ್ಯಾಂಗ ಮತ್ತು ಪ್ರಸಾರಾಂಗವನ್ನು ಅಭಿವೃದ್ಧಿಪಡಿಸಿದ ಕೀರ್ತಿ ಕುವೆಂಪುರವರಿಗೆ ಸಲ್ಲುತ್ತದೆ. ಕೆಲಸದ ಒತ್ತಡದ ನಡುವೆಯೂ ತಮ್ಮ ಬರವಣಿಗೆಗೆ ಭಂಗ ಬಾರದಂತೆ ನೋಡಿಕೊಂಡರು. ಸ್ನಾತಕೋತ್ತರ ಪದವಿಗಳು ನಡೆಯುವ ಸ್ಥಳವನ್ನು ಸುಂದರಗೊಳಿಸುವ ಉದ್ದೇಶದಿಂದ ಒಂದು ಪ್ರದೇಶವನ್ನು ಅಭಿವೃದ್ಧಿಪಡಿಸಿ ಅದಕ್ಕೆ 'ಮಾನಸ ಗಂಗೋತ್ರಿ' ಎಂದು ನಾಮಕರಣ ಮಾಡಿದರು. ಮರ, ಗಿಡಗಳು, ಹೂ ಬಳ್ಳಿಗಳಿಂದ ಕೂಡಿರುವ ವನಸಿರಿ ಅಲ್ಲಿಂದ ನೋಡಿದರೆ 'ಕುಕ್ಕರಹಳ್ಳಿ ಕೆರೆ' ಇನ್ನೂ ಮುಂದಕ್ಕೆ ಕಾಣುವ ಮೈಸೂರು ವಿಶ್ವವಿದ್ಯಾಲಯ ಇಂದಿಗೂ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದ ಕೆಲವೇ ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದಾಗಿ ಕಾಣುತ್ತದೆ. ಇದು ಅವರ ಕನಸಿನ ಕೂಸಾಗಿದ್ದು ಈ ಮಾನಸ ಗಂಗೋತ್ರಿಯನ್ನು ಅಭಿವೃದ್ಧಿಪಡಿಸಿದರು.

ಪ್ರಶಸ್ತಿ ಪುರಸ್ಕಾರಗಳು

ಕುವೆಂಪುರವರಿಗೆ ಕನ್ನಡ ಜನತೆ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ರಾಜ್ಯದ ಹಲವು ವಿಶ್ವವಿದ್ಯಾಲಯಗಳು ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿಗಳು ಅತ್ಯುನ್ನತ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದವು. ಮೈಸೂರು ವಿಶ್ವವಿದ್ಯಾಲಯ 1966ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, 1969ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, 1985ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದವು. 1957ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. 1958ರಲ್ಲಿ ಭಾರತ ಸರ್ಕಾರವು 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿತು. 1964ರಲ್ಲಿ 'ರಾಷ್ಟ್ರಕವಿ' ಬಿರುದನ್ನು ನೀಡಿತು. ದೇಶದ ಪ್ರತಿಷ್ಠಿತ ಪ್ರಶಸ್ತಿಯಾದ 'ಜ್ಞಾನಪೀಠ' ಪ್ರಶಸ್ತಿಯನ್ನು 1968ರಲ್ಲಿ ನೀಡಿ ಗೌರವಿಸಿತು. 1988ರಲ್ಲಿ ಪ್ರತಿಷ್ಠಿತ 'ಪಂಪಪ್ರಶಸ್ತಿ'ಯು ದೊರಕಿತು. ಪ್ರಶಸ್ತಿ ಫಲಕಗಳಿಗೆ ಕಿವಿಗೊಡದ ಕುವೆಂಪುರವರು ಒಂದು ಕಡೆ ಕೀರ್ತಿಶನಿ ತೊಲಗಾಚೆ ಎಂದು ಹೇಳಿರುವುದು ನಿಜಕ್ಕೂ ಸ್ತುತ್ಯಾರ್ಹ. 'ನಭೂತೋ ನಭವಿಷ್ಯತಿ' ಎನ್ನುವಂತೆ ಕುವೆಂಪುರವರು ಕನ್ನಡದ ಮಹಾಕವಿಗಳಾಗಿ, ಮೇರು ವ್ಯಕ್ತಿಯಾಗಿ ಬಾಳ

ಬೆಳಗಿದರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಅಪಾರವಾದ ಕೀರ್ತಿ ಗೌರವಗಳನ್ನು ತಂದುಕೊಟ್ಟರು. ಕುವೆಂಪುರವರು ಮನುಜ ಮತ, ವಿಶ್ವಪಥ ಎಂಬ ಸಂದೇಶವನ್ನು ಸಾರಿದರು. ವಿಶ್ವಮಾನವರಾಗಿ ಎಂಬ ಅವರ ಸಂದೇಶ ಎಲ್ಲಾ ಕಾಲಕ್ಕೂ ನಿತ್ಯ ಸತ್ಯ. ಕುವೆಂಪುರವರು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಎಂದರೆ 1994 ನವೆಂಬರ್ 9ರಂದು ಅಮರರಾದರು.

ಕುವೆಂಪುರವರ ಸಾಹಿತ್ಯಕೃಷಿ

ಇಂಗ್ಲಿಷ್‌ನಲ್ಲಿ: 01

Beginner's Muse: ಕುವೆಂಪು ಅವರ ಪ್ರಥಮ ಕೃತಿ. ಮಿತ್ರರ ಒತ್ತಾಯಕ್ಕೆ ಮಣಿದು ತಾವು ರಚಿಸಿದ ಕವನಗಳಲ್ಲಿ ಆಯ್ದ ಆರು ಕವನಗಳುಳ್ಳ ಈ ಸಂಗ್ರಹ 1922ರಲ್ಲಿ ಪ್ರಕಟಿಸಿದರು.

ಮಹಾಕಾವ್ಯ : 01

ಶ್ರೀ ರಾಮಾಯಣ ದರ್ಶನಂ

ಸರಳ ರಗಳೆಯ ಮಹಾಛಂದಸ್ಸಿನಲ್ಲಿ ಮೂಡಿದ ಈ ಯುಗದ ಬೃಹತ್ ಕಾವ್ಯ. 27.01.1936ರಿಂದ 12.01.1945ರವರೆಗಿನ ಅವಧಿಯಲ್ಲಿ ರಚನೆಯಾಗಿದೆ. 4 ಸಂಪುಟಗಳು, 50 ಸಂಚಿಕೆಗಳು, 22284 ಸಾಲುಗಳಿಂದ ಕೂಡಿದೆ. ಕಥೆ ಆದಿಕವಿ ವಾಲ್ಮೀಕಿಯದು, ದರ್ಶನ ಕುವೆಂಪು ಅವರದು. ವಾಲ್ಮೀಕಿಯು ಕೃತಿ ರಚಿಸಿದ ನಂತರ ಅನೇಕರು ಅದನ್ನಾಧರಿಸಿ ರಾಮಾಯಣ ಕೃತಿಗಳನ್ನು ರಚಿಸಿದ್ದಾರೆ. ಅವೆಲ್ಲವನ್ನು ಮತ್ತು ಪಾಶ್ಚಾತ್ಯ ಮಹಾಕಾವ್ಯಗಳ ಅಭಿವ್ಯಕ್ತಿಯನ್ನು ಅಳವಡಿಸಿಕೊಂಡು ರಚಿಸಿರುವ ಈ ಕೃತಿಗೆ ಅತೀಂದ್ರಿಯ ಸಂಬಂಧವು ಇರಬಹುದೆಂದು ಕವಿ ಕುವೆಂಪುರವರೇ ಅಭಿಪ್ರಾಯಪಟ್ಟಿದ್ದಾರೆ.

ಕವನ ಸಂಕಲನ: 28

1. **ಕೊಳಲು:** ಇದು ಕುವೆಂಪು ಅವರ ಮೊದಲ ಕವನ ಸಂಕಲನ. 1930ರಲ್ಲಿ ಪ್ರಕಟವಾದ ಇದರಲ್ಲಿ 70 ಕವನಗಳಿವೆ. ಕನ್ನಡದ ಕಣ್ವ ಬಿ.ಎಂ.ಶ್ರೀ. ಅವರು ಮುನ್ನುಡಿ ಬರೆದಿದ್ದು ಕುವೆಂಪುರವರ ಕವನಗಳಲ್ಲಿ ಅಮೃತತ್ವದ ಸಾರವಿದೆಯೆಂದು ಕೊಂಡಾಡಿದ್ದಾರೆ.
2. **ಪಾಂಚಜನ್ಯ:** ಇದರಲ್ಲಿ 19 ವೀರಗೀತೆಗಳಿವೆ. 1933ರಲ್ಲಿ ಪ್ರಕಟವಾಯಿತು.

3. **ಕಲಾಸುಂದರಿ:** ಇದರಲ್ಲಿ 43 ಕವನಗಳಿವೆ. ಕಲಾಸುಂದರಿ ಆತ್ಮಾಹ್ಲಾದ ಕಾರಿಣಿಯೂ ಹೌದು, ಆತ್ಮೋದ್ಧಾರಕಾರಿಣಿಯೂ ಹೌದು ಎಂಬ ತತ್ವವನ್ನು ಆಧರಿಸಿರುವ ಪ್ರಕೃತಿ ಪ್ರಧಾನ ಕವನಗಳಾಗಿವೆ. 1934ರಲ್ಲಿ ಪ್ರಕಟವಾಯಿತು.

4. **ಚಿತ್ರಾಂಗದಾ:** ಆರು ಪರ್ವಗಳಿಂದ 2496 ಸಾಲುಗಳಿಂದ ಕೂಡಿದ ದೀರ್ಘಕಾವ್ಯ. ಮೊದಲು 1936ರಲ್ಲಿ ಪ್ರಕಟವಾಯಿತು.

5. **ಕಥನ ಕವನಗಳು:** ಹನ್ನೊಂದು ಕಥನ ಕವನಗಳ ಸಂಗ್ರಹ. 1937ರಲ್ಲಿ ಪ್ರಕಟವಾಯಿತು.

6. **ನವಿಲು:** ಇದರಲ್ಲಿ 42 ಕವನಗಳಿವೆ.

7. **ಕೋಗಿಲೆ ಮತ್ತು ಸೋವಿಯತ್ ರಷ್ಯಾ:** ಇದರಲ್ಲಿ 43 ಕ್ರಾಂತಿ ಕವನಗಳಿದ್ದು 1944ರಲ್ಲಿ ಪ್ರಕಟವಾಯಿತು.

8. **ಪ್ರೇಮ ಕಾಶ್ಮೀರ:** 46 ಪ್ರೇಮಗೀತೆಗಳಿದ್ದು 1946ರಲ್ಲಿ ಪ್ರಕಟವಾಯಿತು.

9. **ಅಗ್ನಿಹಂಸ:** ಅನುಭವ ಪ್ರಧಾನವಾದ 45 ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.

10. **ಕೃತ್ತಿಕೆ:** ಪ್ರಕೃತಿ ಪ್ರಧಾನವಾದ 93 ಸಾನೆಟ್ಟುಗಳಿದ್ದು 1946ರಲ್ಲಿ ಪ್ರಕಟವಾಯಿತು.

11. **ಪಕ್ಷಿಕಾಶಿ:** ಪ್ರಕೃತಿ ಪ್ರಧಾನವಾದ 47 ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.

12. **ಕಿಂಕಿಣಿ:** 60 ವಚನ ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.

13. **ಷೋಡಶಿ:** ಇದರಲ್ಲಿ 45 ಪ್ರೇಮಗೀತೆಗಳಿದ್ದು 1947ರಲ್ಲಿ ಪ್ರಕಟವಾಯಿತು.

14. **ಜೇನಾಗುವಾ:** ಇದರಲ್ಲಿ 56 ಪ್ರೇಮಗೀತೆಗಳಿದ್ದು 1952ರಲ್ಲಿ ಪ್ರಕಟವಾಯಿತು.

15. **ಚಂದ್ರಮಂಚಕೆ ಬಾ ಚಕೋರಿ:** ಇದರಲ್ಲಿ 59 ಪ್ರೇಮಗೀತೆಗಳಿದ್ದು 1954ರಲ್ಲಿ ಪ್ರಕಟವಾಯಿತು.

16. **ಇಕ್ಷು ಗಂಗೋತ್ರಿ:** ದೇಶ–ಸಮಾಜವನ್ನು ಕುರಿತ 25 ಕವನಗಳಿದ್ದು 1957ರಲ್ಲಿ ಪ್ರಕಟವಾಯಿತು.

17. **ಅನಿಕೇತನ:** ಅನುಭವ ಪ್ರಧಾನವಾದ 40 ಕವಿತೆಗಳಿದ್ದು 1963ರಲ್ಲಿ ಪ್ರಕಟವಾಯಿತು.

18. **ಅನುತ್ತರಾ:** 21 ಪ್ರೇಮಗೀತೆಗಳಿದ್ದು 1965ರಲ್ಲಿ ಪ್ರಕಟವಾಯಿತು.

19. **ಮಂತ್ರಾಕ್ಷತೆ:** ಸಂಕೀರ್ಣ ಸ್ವಭಾವದ 117 ಪುಟ್ಟ ಕವನಗಳಿದ್ದು 1966ರಲ್ಲಿ ಪ್ರಕಟವಾಯಿತು.

20. **ಕದರಡಕೆ:** ಪ್ರಕೃತಿ ಪ್ರಧಾನವಾದ 46 ಕವನಗಳಿದ್ದು ಜತೆಗೆ 42 ಪುಟ್ಟ ಕವನಗಳನ್ನು ಒಳಗೊಂಡಿದೆ.

21. **ಪ್ರೇತಕ್ಯೂ:** ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿ ಕುರಿತ 40 ಕವಿತೆಗಳಿದ್ದು 1967ರಲ್ಲಿ ಪ್ರಕಟವಾಯಿತು.

22. **ಕುಟೀಚಕ:** ಅನುಭವ ಪ್ರಧಾನವಾದ 48 ಕವನಗಳು ಈ ಸಂಕಲನದಲ್ಲಿದ್ದು 1967ರಲ್ಲಿ ಪ್ರಕಟವಾಯಿತು.

23. **ಕನ್ನಡ ಡಿಂಡಿಮ:** ಕವನ ಸಂಕಲನ

24. **ಪ್ರಾರ್ಥನಾ ಗೀತಾಂಜಲಿ :** ಕವನ ಸಂಕಲನ

25. **ಕಬ್ಬಿಗನ ಕೈ ಬುಟ್ಟಿ:** ಕವನ ಸಂಕಲನ

26. **ಹೊನ್ನ ಹೊತ್ತಾರೆ:** ಕವನ ಸಂಕಲನ

27. **ಸಮುದ್ರ ಲಂಘನ:** ಕವನ ಸಂಕಲನ

28. **ಮಹಾದರ್ಶನ ಮತ್ತು ಪ್ರಾಯಶ್ಚಿತ್ತ:** ಕಾವ್ಯ.

ನಾಟಕಗಳು: 12

1. **ಯಮನ ಸೋಲು:** ಸಾವಿತ್ರಿ ಸತ್ಯವಾನರ ಲೋಕಪ್ರಸಿದ್ಧಿ ಕಥೆಯನ್ನಾಧರಿಸಿದ ನಾಟಕ. ಕುವೆಂಪು ರಚಿಸಿದ ಮೊದಲ ನಾಟಕ.

2. **ಜಲಗಾರ:** ಎರಡು ದೃಶ್ಯಗಳನ್ನು ಹೊಂದಿರುವ ಈ ನಾಟಕ 1928ರಲ್ಲಿ ಮೊದಲು ಪ್ರಕಟವಾಯಿತು. ಬೀದಿಗುಡಿಸುವ ಜಲಗಾರನೊಬ್ಬನ ಮಾನಸಿಕ ಔನ್ನತ್ಯದ ಚಿತ್ರಣವಿದೆ. ತನ್ನ ದಿನನಿತ್ಯದ ಕರ್ತವ್ಯದಲ್ಲಿ ಮಗ್ನನಾಗಿದ್ದುಕೊಂಡು ಅದರಲ್ಲಿಯೇ ದೈವವನ್ನು ಕಂಡ ಕರ್ಮಯೋಗಿ ಆ ಜಲಗಾರ.

3. **ಬಿರುಗಾಳಿ:** ಷೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕದ ರೂಪಾಂತರವಾಗಿದ್ದು ಟಿ.ಎಸ್. ವೆಂಕಣ್ಣಯ್ಯನವರು ಮುನ್ನುಡಿ ಬರೆದಿದ್ದಾರೆ.

4. **ವಾಲ್ಮೀಕಿಯ ಭಾಗ್ಯ:** ಸೀತಾವನವಾಸದ ವಸ್ತು.

5. **ಮಹಾರಾತ್ರಿ:** ಸಿದ್ಧಾರ್ಥನು ಬುದ್ಧನಾಗಲು ಹೊರಡುವ ಮಹಾರಾತ್ರಿಯ ಕಥೆ.

6. **ಸ್ಮಶಾನ ಕುರುಕ್ಷೇತ್ರಂ:** ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶ, ಅವಿವೇಕ, ವಿಧಿ ವಿಫಲತೆ, ಸಂಸ್ಕೃತಿಯ ಸಾವು ಇವುಗಳಿಂದ ಕೂಡಿದ ಮಹಾಭಾರತ ಕಥಾವಸ್ತು.

7. **ರಕ್ತಾಕ್ಷಿ:** ಬಿದನೂರಿನ ಇತಿಹಾಸವನ್ನು ಆಧರಿಸಿದ ಕಥೆ. ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕದ ಪ್ರಭಾವವಿದೆ.

8. **ಶೂದ್ರತಪಸ್ವಿ:** ಮೂರು ದೃಶ್ಯಗಳಿಂದ 48 ಪುಟಗಳಿಂದ ಕೂಡಿರುವ ಈ ನಾಟಕ 1944ರಲ್ಲಿ ಪ್ರಕಟವಾಯಿತು.

9. **ಬೆರಳ್ಗೆ ಕೊರಳ್:** ಮೂರು ದೃಶ್ಯಗಳಿಂದ 72 ಪುಟಗಳನ್ನೊಂದಿರುವ ಈ ನಾಟಕವು 1947ರಲ್ಲಿ ಪ್ರಕಟವಾಯಿತು.

10. **ಬಲಿದಾನ:** ಮೂರು ದೃಶ್ಯಗಳಿಂದ 34 ಪುಟಗಳನ್ನೊಂದಿರುವ ಈ ನಾಟಕ 1948ರಲ್ಲಿ ಪ್ರಕಟವಾಯಿತು.

11. **ಚಂದ್ರಹಾಸ:** ಪೌರಾಣಿಕ ಚಂದ್ರಹಾಸನ ಕಥೆಯನ್ನೊಂದಿರುವ ನಾಟಕ. ಆದಿ, ಮಧ್ಯ ಮತ್ತು ಅಂತ್ಯ ರಂಗಗಳು ಎಂಬ ಮೂರು ಭಾಗಗಳಿಂದ ಇಪ್ಪತ್ತೊಂದು ದೃಶ್ಯಗಳನ್ನೊಂದಿದೆ.

12. **ಕಾನೀನ:** ಕರ್ಣನ ಕಥೆಯನ್ನಾಧರಿಸಿದ ನಾಟಕ.

ಕಥಾಸಂಕಲನ: 03

1. **ಸಂನ್ಯಾಸಿ ಮತ್ತು ಇತರ ಕಥೆಗಳು:** ಸಂನ್ಯಾಸಿ, ಕ್ರಿಸ್ತನಲ್ಲ–ಪಾದ್ರಿಯ ಮಗಳು, ಈಶ್ವರನೂ ನಕ್ಕಿರಬೇಕು, ಆರಾಣಿ ಮೂರು ಕಾಸು, ಯಾರು ಅರಿಯದ ವೀರ, ಹೋಳಿಗೆ ಪ್ರತಿಜ್ಞೆ, ಮಾಯದ ಮನೆ, ದೆವ್ವದ ಕಾಟ, ಶ್ರೀ ಶ್ರೀಮನ್ಮೂಕವಾಗಿತ್ತು ಎಂಬ ಒಂಬತ್ತು ಸಣ್ಣ ಕಥೆಗಳ ಸಂಕಲನ.

2. **ನನ್ನ ದೇವರು ಮತ್ತು ಇತರ ಕಥೆಗಳು:** ನನ್ನ ದೇವರು, ಸಾಲದ ಮಗು, ಆದರ್ಶ ಸಾಧನೆ, ಔದಾರ್ಯ, ಗಂಟು (ಗುಪ್ತಧನ), ಮೀನಾಕ್ಷಿ ಮನೆ ಮೇಷ್ಟರು, ಧನ್ವಂತರಿಯ ಚಿಕಿತ್ಸೆ, ವೈರಾಗ್ಯದ ಮಹಿಮೆ ಅಥವಾ ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ ಎಂಬ ಎಂಟು ಕಥೆಗಳ ಸಂಕಲನ.

3. **ಆರಂಭದಲ್ಲಿ ಕಥೆಗಳೊಡನೆ:** ಹಲವು ಕಥೆಗಳನ್ನೊಳಗೊಂಡ ಕಥಾಸಂಕಲನ.

ಜೀವನ ಚರಿತ್ರೆ: 02

1. **ಶ್ರೀರಾಮಕೃಷ್ಣ ಪರಮಹಂಸ:** ಉದಯ, ಚೈತ್ರಯಾತ್ರೆ, ಯಾತ್ರಿಕರು, ಕಾಮಿನಿ, ಶ್ರೀಮಾತೆ, ದೇವಶಿಲ್ಪಿ, ಮಹಾಸಮಾಧಿ, ಅನಂತರ ಎಂಬ ಎಂಟು ಅಧ್ಯಾಯಗಳನ್ನು ಹೊಂದಿದೆ.

2. **ಸ್ವಾಮಿ ವಿವೇಕಾನಂದ:** ಯಾರಿವನು? ಜನನ ಮತ್ತು ಬಾಲ್ಯ, ಹಿನ್ನೆಲೆ, ನಿರಂಕುಶಮತಿ, ಮುಕ್ತಿ ರಾಹು, ಅಗ್ನಿ ಪರೀಕ್ಷೆ, ಅನುಭೂತಿ, ದರ್ಮನೀಡವಿರಚನೆ, ಪರಿವ್ರಾಜಕ ಸನ್ಯಾಸಿ, ಕಡಲಿನಾಚೆಗೆ, ಹಸುಳೆಯ ಗೆಲುವಿಗೆ ಹೆತ್ತಮ್ಮನ ಹೆಮ್ಮೆ, ಸಹಸ್ರ ದ್ವೀಪೋದ್ಯಾನದಲ್ಲಿ, ಯೂರೋಪಿನಲ್ಲಿ, ಯುಗ ಪ್ರವರ್ತಕ, ಸಂಘ ಸ್ಥಾಪನೆ, ಜೀವನ ಸಂಧ್ಯೆ ಕರೆಯುತಿದೆ ಯುಗವಾಣಿ ಎಂಬ ಹದಿನೇಳು ಅಧ್ಯಾಯಗಳನ್ನು ಹೊಂದಿರುವ ಈ ಕೃತಿ 1932ರಲ್ಲಿ ಪ್ರಕಟವಾಯಿತು.

ಪ್ರಬಂಧ / ಗದ್ಯಚಿತ್ರ: 01

1. **ಮಲೆನಾಡಿನ ಚಿತ್ರಗಳು:** ಹಾಸ್ಯ ಚಟಾಕಿ, ಕಾಡಿನಲ್ಲಿ ಕಳೆದ ಒಂದಿರುಳು, ಅಜ್ಜಯ್ಯನ ಅಭ್ಯಂಜನ, ಬಂದನಾ ಹುಲಿರಾಯನು, ಪುಟ್ಟಾಚಾರಿಯ ಕಾಡುಕೋಳಿ, ಮನೆಯ ಶಾಲೆಯ ಐಗಳ ಮಾಲೆ, ತೋಟದಾಚೆಯ ಭೂತ, ಅಪ್ಪಣ್ಣನ ರೇಷ್ಮೆ ಕಾಯಿಲೆ, ಮಲೆನಾಡಿನ ಗೋಪಾಲಕರು, ಜೇನುಬೇಟೆ, ಕತೆಗಾರ ಮಂಜಣ್ಣ, ರಾಮರಾವಣರ ಯುದ್ಧ ಎಂಬ ಹನ್ನೆರಡು ಗದ್ಯಚಿತ್ರಗಳ ಸಂಕಲನ.

ಅನುವಾದ: 03

1. **ವೇದಾಂತ:** ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಧರ್ಮವನ್ನು ಸಿಂಹ ಕಂಠದಿಂದ ಸಾರಿ ಭರತ ವರ್ಷಕ್ಕೆ ಹಿಂದಿರುಗಿ ಬಂದಮೇಲೆ ಲಾಹೋರಿನಲ್ಲಿ ಮಾಡಿದ ಭಾಷಣದ ಭಾಷಾಂತರ.

2. **ಜನಪ್ರಿಯ ವಾಲ್ಮೀಕಿ ರಾಮಾಯಣ:** ವಾಲ್ಮೀಕಿ ರಾಮಾಯಣ ಕಥೆಯನ್ನು ಹೊಸದಾಗಿ ಓದು ಕಲಿತ ವಯಸ್ಕರಿಗೆ ಹೇಳಿದ ಕೃತಿ.

3. **ಗುರುವಿನೊಡನೆ ದೇವರಡಿಗೆ:** (ಭಾಗ–1, –2) ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೂ ಕುವೆಂಪುರವರ ದೀಕ್ಷಾ ಗುರುಗಳೂ ಆದ ಸ್ವಾಮಿ ಶಿವಾನಂದರ ಮಾತುಕತೆಗಳು ಇಲ್ಲಿವೆ.

ಸಾಹಿತ್ಯ ವಿಮರ್ಶೆ: ೦೬

1. **ಕಾವ್ಯ ವಿಹಾರ:** ಲಕ್ಷ್ಮೀಶನ ಸೀತಾವನವಾಸ, ಕುಮಾರವ್ಯಾಸನ ದುರಂತಕರ್ಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಎಂಬ ಮೂರು ವಿಮರ್ಶಾ ಲೇಖನಗಳಿವೆ.

2. **ತಪೋನಂದನ:** ಮಹಾಶ್ವೇತೆಯ ತಪಸ್ಸು, ಪ್ರತಿಮಾ ಮತ್ತು ಪ್ರಕೃತಿ, ಪಂಪನಲ್ಲಿ ಭವ್ಯತೆ, ಮಹೋಪಮೆ, ಸರೋವರದ ಸಿರಿಗನ್ನಡಿಯಲ್ಲಿ, ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಋಷಿ ವಾಲ್ಮೀಕಿಯ ಕಾವ್ಯ ಜಾಹ್ನವಿ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ ಎಂಬ ಎಂಟು ಪ್ರಬಂಧಗಳಿವೆ.

3. **ವಿಭೂತಿ ಪೂಜೆ:** ಕವಿಯಲ್ಲಿ ವಿಭೂತಿ, ಶಕ್ತಿ ಕವಿ ರನ್ನ, ಕಲಿಯದವರಿಗೂ ಕಾಮಧೇನು, ಇಂದಿನ ಹೊಸಗನ್ನಡ ಕವಿತೆ ಮತ್ತು ಅದರ ಮುಂದಿನ ನಡೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಮಲೆನಾಡಿನ ನಿಸರ್ಗ ವಿಭೂತಿ, ವಚನಕಾರ ಬಸವೇಶ್ವರರು, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪರಮಹಂಸರ ವಚನಾಮೃತದಲ್ಲಿ ದೃಷ್ಟಾಂತ ಕಥಾ ವಿಧಾನ, ದಿವಂಗತ ರಾಷ್ಟ್ರಪಿತ ಬಾಪೂಜಿಗೆ ಭಾಷ್ಪಾಂಜಲಿ, ಪೂರ್ಣದೃಷ್ಟಿಗೆ ಗಾಂಧೀಜಿ, ಕವಿ ರವೀಂದ್ರರು, ಶ್ರೀ ಅರವಿಂದರು, ಪ್ರಖ್ಯಾತ ಪೌರಾಣಿಕ ಯುದ್ಧಗಳು, ಶ್ರೀ ರಾಮಾಯಣ ದಿವ್ಯಶಿಲ್ಪ ಎಂಬ ಹದಿನಾರು ಲೇಖನಗಳಿವೆ.

4. **ದ್ರೌಪದಿಯ ಶ್ರೀಮುಡಿ:** ದ್ರೌಪದಿಯ ಶ್ರೀಮುಡಿ, ಯಶೋಧರ ಚರಿತೆಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ, ಶ್ರೀ ಕೃಷ್ಣ ಜನ್ಮಾಷ್ಟಮಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯ ದೃಷ್ಟಿ, ಇದಾವ ನ್ಯಾಯ? ಕವಿಕೃತಿಯಲ್ಲಿ ಅನನ್ಯ ಪರತಂತ್ರತೆ, ಭಾಷೆ; ಲೋಕೋಪಯೋಗಿ ಮತ್ತು ಭಾವೋಪಯೋಗಿ ಮುಂದಿನ ಸಾಹಿತ್ಯದಲ್ಲಿ ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ –ಎಂಬ ಎಂಟು ವಿಮರ್ಶೆ ಮತ್ತು ಕಾವ್ಯ ಮೀಮಾಂಸೆ ಕುರಿತ ಪ್ರಬಂಧಗಳಿವೆ.

5. **ರಸೋ ವೈ ಸಃ :** ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮ ಸಾಹಿತ್ಯ, ರಸಾನುಭವದ ಅಲೌಕಿಕತೆ, ಸಾಹಿತ್ಯದಲ್ಲಿ ಪ್ರತಿಮಾ, ಭೂಮಾನುಭೂತಿ ಮತ್ತು ಭವ್ಯಕತಾ ಅನುಭವದ ಮೀಮಾಂಸೆ, ರಸೋ ವೈ ಸಃ ಎಂಬ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆ ಕುರಿತ ಐದು ಪ್ರಬಂಧಗಳಿವೆ.

6. ಇತ್ಯಾದಿ: ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಯ ಲೇಖನಗಳು ಇಲ್ಲಿವೆ. ಪ್ರಕೃತಿ ಸೌಂದರ್ಯ, ಉಪಮಾಲೋಲ ಲಕ್ಷ್ಮೀಶ, ರನ್ನನ ವೀರಕೌರವ, ಉಪನಿಷತ್ತಿನ ಋಷಿಯ ದರ್ಶನ, ದಿವಂಗತ ಶ್ರೀಯವರು, ಶಿಲ್ಪಿಯ ಕವಿತೆಯ ಸಮರ್ಥನೆ ಕುರಿತ 6 ಪ್ರಬಂಧಗಳು ಈ ಕೃತಿಯಲ್ಲಿ ಇವೆ.

ಭಾಷಣ/ಲೇಖನಗಳ ಸಂಕಲನ: 07

1. **ಸಾಹಿತ್ಯ ಪ್ರಚಾರ:** ವಿದ್ಯಾರ್ಥಿ ಕವಿಗಳಲ್ಲಿ ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು, ಕವಿಯ ದರ್ಶನದಲ್ಲಿ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಕನ್ನಡ ಸಾಹಿತ್ಯ, ದೇಶದೇವಿಯ ಪೂಜೆಗೆ ಬನ್ನಿ ಎಂಬ ಆರು ಭಾಷಣಗಳ ಈ ಕೃತಿ 64 ಪುಟಗಳನ್ನೊಂದಿದೆ. 1930ರಲ್ಲಿ ಪ್ರಕಟವಾಯಿತು.

2. **ನಿರಂಕುಶಮತಿಗಳಾಗಿ:** ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ? ಎಂಬ ನಾಲ್ಕು ಭಾಷಣಗಳ ಈ ಕೃತಿ 62 ಪುಟಗಳನ್ನೊಂದಿದೆ. 1944ರಲ್ಲಿ ಪ್ರಕಟವಾಯಿತು.

3. **ಷಷ್ಠಿನಮನ:** ಸಂಸ್ಕೃತಿ ಕರ್ಣಾಟಕ, ವಿಶ್ವಮಾನವ, ಮಾನಸ ಗಂಗೋತ್ರಿ, ನಮಗೆ ಬೇಕಾಗಿರುವ ಇಂಗ್ಲೀಷ್, ತೀರ್ಥಯಾತ್ರೆ, ಶ್ರೀ ರಾಮಕೃಷ್ಣ ವಚನವೇದ, ಭಾರತದಲ್ಲಿ ಇಂಗ್ಲೀಷಿನ ಸ್ಥಾನ, ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಶ್ರೀ ವಿನೋಬಾಜಿ, ವಿಶ್ವವಿದ್ಯೆ ಮತ್ತು ಪ್ರಸಾರಾಂಗ, ಸಮನ್ವಯ ರಾಷ್ಟ್ರದಲ್ಲಿ ವಿಶ್ವವಿದ್ಯೆ, ಶ್ರೀ ಅರವಿಂದರ ಕಾವ್ಯದರ್ಶನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಯೆ, ಡಾಕ್ಟರೇಟ್ ಪ್ರಶಸ್ತಿ ಕೊಲಂಬೋ ಇಂದ ಅಲ್ಮೋರಕ್ಕೆ, ಪಂಪನ ಕರ್ಣ, ಮಹಾ ಪುರುಷ ಸ್ವಾಮಿ ಶಿವಾನಂದರು, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಶ್ರೀ ರಾಮಕೃಷ್ಣ ಲೀಲಾಪ್ರಸಂಗ, ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿ ಎಂಬ 30 ಭಾಷಣ / ಮುನ್ನುಡಿಗಳ ಈ ಕೃತಿಯು 272 ಪುಟಗಳನ್ನೊಂದಿದೆ. 1964ರಲ್ಲಿ ಮೊದಲು ಪ್ರಕಟವಾಯಿತು.

4. **ಮನುಜಮತ-ವಿಶ್ವಪಥ:** 1971ರಲ್ಲಿ ಪ್ರಕಟವಾದ ಭಾಷಣ ಲೇಖನಗಳ ಸಂಗ್ರಹವಾಗಿದೆ.

5. **ವಿಚಾರ ಕ್ರಾಂತಿಗೆ ಆಹ್ವಾನ:** 1976ರಲ್ಲಿ ಪ್ರಕಟವಾದ 140 ಪುಟಗಳ ಭಾಷಣ, ಲೇಖನ ಮತ್ತು ಸಂದೇಶಗಳ ಸಂಗ್ರಹವಾಗಿದೆ. ವಿಚಾರ ಕ್ರಾಂತಿಗೆ ಆಹ್ವಾನ, ಬರೆಯಬಯಸುವವರಿಗೆ ಎಚ್ಚರಿಕೆ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಕರ್ನಾಟಕ ಇಟ್ಟ ಹೆಸರು ಕೊಟ್ಟಮಂತ್ರ, ಶಿವಾನಂದರು, ರಾಮಕೃಷ್ಣರ ಕುರಿತು ಟಾಯ್ನಬಿ, ಲಿಪಿ, ಭಾಷೆ, ಭಾವೈಕ್ಯತೆ ಮೊದಲಾದ ಲೇಖನಗಳಿವೆ.

6. **ವಿಶ್ವವಿದ್ಯಾನಿಲಯ ಪ್ರಸಾರಾಂಗ:** ಪ್ರಸಾರಾಂಗ, ವಿದ್ಯಾಭ್ಯಾಸ ಅಂದು ಇಂದು, ಕನ್ನಡ ಮಾಧ್ಯಮ, ಪ್ರಕಟಣೆಗಳು, ಪ್ರಸಾರಾಂಗದ ಮುನ್ನಡೆ, ಇತ್ಯಾದಿ ಮೈಸೂರು ವಿಶ್ವವಿದ್ಯಾಲಯ ಉಪಕುಲಪತಿಗಳಾಗಿ ಮಾಡಿದ ಭಾಷಣಗಳ ಆಯ್ದ ಭಾಗಗಳು.

7. **ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ:**

ಕಾದಂಬರಿಗಳು

1. ಕಾನೂರು ಸುಬ್ಬಮ್ಮ ಹೆಗ್ಗಡತಿ: ಕುವೆಂಪು ರಚಿಸಿದ ಮೊದಲ ಕಾದಂಬರಿ. 1936ರಲ್ಲಿ ಪ್ರಕಟವಾಯಿತು. ಮಹಾಭಾರತವನ್ನು ಹೋಲುವ ಈ ಮಹಾಕೃತಿಯ ಮುನ್ನುಡಿಯಲ್ಲಿ ಕುವೆಂಪು "ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಲ್ಲಿ ಒಂದು ಹನಿ" ಎಂದಿದ್ದಾರೆ. ಅತೀಂದ್ರಿಯ ಅಂಶಗಳಿದ್ದು ಪ್ರಾದೇಶಿಕ ಸೊಗಡು ಪ್ರಧಾನವಾಗಿದೆ. ಕಾನೂರು ಸುಬ್ಬಮ್ಮ ಹೆಗ್ಗಡತಿ ಕ್ಷೇತ್ರ, ಯಂತ್ರ, ನಾಗರಿಕತೆ, ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ ಇವುಗಳಿಂದ ಕೂಡಿದ ಪ್ರಗತಿಗಾಮಿ ಪ್ರಪಂಚದಿಂದ ಬಹುದೂರವಾದ ಮಲೆನಾಡಿನ ಕೊಂಪೆಯ ಚಿತ್ರಣ ಆಗಿದೆ. ನಿತ್ಯ ಚಲನಶೀಲವಾಗಿದ್ದು ದಿನ ದಿನವೂ ಬದಲಾಗುತ್ತಿರುವ ಹೊರಗಿನ ವಿಶಾಲ ಜಗತ್ತಿಗೆ ಪ್ರತಿಯಾದ ಕಾನೂರು, ಮುತ್ತಳ್ಳಿ, ಸೀತೆಮನೆಗಳ ಸಂಕುಚಿತ ಬದುಕು ಈ ಕಾದಂಬರಿಯ ತಿರುಳು.

2. ಮಲೆಗಳಲ್ಲಿ ಮದುಮಗಳು: ಕುವೆಂಪು ರಚಿಸಿದ ಎರಡನೆ ಕಾದಂಬರಿ. 1967ರಲ್ಲಿ ಪ್ರಕಟವಾಯಿತು. ಕಾದಂಬರಿಯ ಕ್ಷೇತ್ರ ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿ ಸೀಮೆ ದುರ್ಗಮ ಪರ್ವತಾರಣ್ಯಗಳ ನೆಲೆವೀಡು. ಈ ಮಲೆನಾಡ ಮಡಿಲಲ್ಲಿರುವ ಸಿಂಬಾವಿ, ಲಕ್ಕುಂದ, ಮೇಗರವಳ್ಳಿ, ಹಳೇಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಇವುಗಳಲ್ಲಿನ ಶ್ರೀಸಾಮಾನ್ಯರ ಬದುಕು– "ಕ್ಷುದ್ರ ಅಲ್ಪ ಜಟಿಲರಾಗದ್ವೇಷಮಯ ಜೀವನ ಜಾಲ" ಈ ಕಾದಂಬರಿ: ವಿವರ ವರ್ಣನೆಯ ರಾಮಾಯಣವನ್ನು ಹೋಲುವ ಈ ಕಾದಂಬರಿಯ ವಸ್ತು ಕಾಮ. ಸಾಮಾನ್ಯರ ಪಾತ್ರಗಳ ಸರಳತೆ ಕಾಣಬರುತ್ತದೆ.

ಆತ್ಮಚರಿತ್ರೆ: 01

ನೆನಪಿನ ದೋಣಿಯಲ್ಲಿ

ಕವಿ ಕುವೆಂಪು ಅಂಬಿಗನಾಗಿ ಜೀವನ ವಾಹಿನಿಯಲ್ಲಿ ತೇಲುತ್ತಾರೆ, ದಾಟುತ್ತಾರೆ. ಹುಟ್ಟು ಹಾಕುತ್ತಾ ಗತಜೀವನದೆಡೆಗೆ ಹಿನ್ನೋಟದ ಚಿತ್ರಣ ನೀಡಿದ್ದಾರೆ. ರಾಮಕೃಷ್ಣರ ಆಶೀರ್ವಾದ ಮತ್ತು ನಿರಂತರ ತಪಸ್ಸಿನಿಂದ ಸಿಕ್ಕ ಜ್ಯೋತಿಯೇ ಕುವೆಂಪು ಅವರ ಪ್ರಾಣ ರಕ್ಷೆಯೆಂದು, ಭಗವತ್ಕೃಪೆ ಅವರ ಚಾಲಕ ಕ್ರಿಯೆಯೆಂಬುದು ಈ ಕೃತಿಯಿಂದ ವ್ಯಕ್ತವಾಗುತ್ತದೆ. ವಿರಕ್ತ ಜೀವನ, ಆಧ್ಯಾತ್ಮ ಸಾಧನೆ, ಕಾವ್ಯರಚನೆ, ಅವಿಭಕ್ತ ಕುಟುಂಬದ ಸ್ಥಿತಿಗತಿ, ಬೈಬಲ್ ವ್ಯಾಸಂಗ, ಮಂಜಪ್ಪಗೌಡರ ಸಂಪರ್ಕ, ಮೈಸೂರು ಹೋಟೆಲುವಾಸ, ಕೃತಿಗಳ ರಚನೆ, ರೋಗಗಳು, ಸಿದ್ಧೇಶ್ವರರ ಆಧ್ಯಾತ್ಮ ಸಂಪರ್ಕ ಇವೆಲ್ಲ ಬದುಕನ್ನು ರೂಪಿಸಿವೆ. ಇಂಗ್ಲೀಷಿನಲ್ಲಿ ಆರಂಭವಾದ ಕಾವ್ಯರಚನೆ ಕ್ರಮೇಣ ಕನ್ನಡದತ್ತ ತಿರುಗಿಸಿ ಸಾಧಿಸಿದ ಸಾಹಸ ವಿಕ್ರಮಗಳ ಕತೆ ಇಲ್ಲಿದೆ.

ಶಿಶುಸಾಹಿತ್ಯ: 09

1. **ಅಮಲನ ಕಥೆ:** 190 ಚೌಪದಿಗಳ 39 ಪುಟಗಳಿಂದ ಕೂಡಿದ ಈ ಕೃತಿ ಮೊದಲು 1924ರಲ್ಲಿ ಪ್ರಕಟವಾಯಿತು. ಅಚ್ಯುತನ ಭಕ್ತನಾದ ಅಮಲನು ಒಮ್ಮೆ ಮರ ತರಲು ಕಾಡಿಗೆ ಹೋಗಿದ್ದನು. ಅಲ್ಲಿ ಕಂಡ ಪ್ರಕೃತಿ ಸೌಂದರ್ಯವೆಲ್ಲ ದೇವರ ಕರುಣೆಯೆಂದು ಹಾಡುತ್ತಾ ಸಾಗುತ್ತಾನೆ. ಒಂದಿಷ್ಟು ಮರಕಡಿದು ಎಳಗರುಕೆ ಮೇಲೆ ವಿಶ್ರಮಿಸಿಕೊಳ್ಳುತ್ತಿರುವಾಗ ಪ್ರಾಣಿಯೊಂದು ಓಡಿ ಬರುತ್ತಿರುವ ಶಬ್ದ ಕೇಳಿಸುತ್ತದೆ. ಎದ್ದಾಗ ಹರಿಣ (ಜಿಂಕೆ)ವೊಂದು ಬಂದು ತನ್ನನ್ನು ಕೊಲ್ಲ ಬರುತ್ತಿರುವ ಶಬರನಿಂದ ರಕ್ಷಿಸು ಎನ್ನುತ್ತದೆ. ಅಮಲ ಅಭಯ ನೀಡುವಷ್ಟರಲ್ಲಿ ಶಬರನು ಬರುವನು. ಅಮಲ ಮತ್ತು ಶಬರರಿಬ್ಬರಿಗೂ ವಾಗ್ವಾದ ಜಗಳಗಳಾಗುತ್ತವೆ. ಅಮಲನು ಸೋಲುತ್ತಾ ಬಂದಾಗ ದೈವ ಪ್ರಾರ್ಥನೆ ಮಾಡುತ್ತಾನೆ. ಎಷ್ಟು ಹೊತ್ತಾದರೂ ತನ್ನ ತಂದೆ ಬರಲಿಲ್ಲವೆಂದು ತಾಯಿಯ ಸಲಹೆಯಂತೆ ಅಮಲನ ಮಗ ಮಧುರನು ತಂದೆಯನ್ನು ಹುಡುಕಲಾರಂಭಿಸುತ್ತಾನೆ. ಭಾರೀ ಮಳೆಯಲ್ಲಿ ಮಧುರನು ದೇವರನ್ನು ಪ್ರಾರ್ಥಿಸಿದಾಗ ಪ್ರತ್ಯಕ್ಷವಾಗಿ ಅವನ ಕಷ್ಟ ನಿವಾರಣೆಯಾಗುತ್ತದೆ. ಎಲ್ಲರೂ ಸುಖವನ್ನೊಂದುತ್ತಾರೆ. ಇದರಲ್ಲಿ ನಿರ್ಮಲ ಭಕ್ತಿ ಪ್ರತಿಪಾದನೆಯಾಗಿದೆ.

2. **ಮೋಡಣ್ಣನ ತಮ್ಮ:** 1926ರಲ್ಲಿ ಪ್ರಕಟವಾಯಿತು. ಮಕ್ಕಳಲ್ಲಿ ಸಹಜವಾಗಿರುವ ಕಲ್ಪನಾಶಕ್ತಿ, ಪ್ರಚೋದಿಸುವ ವಸ್ತು, ಆಗಸದಲ್ಲಿ ತೇಲುತ್ತಿರುವ ಮೋಡ, ಮಿನುಗುತ್ತಿರುವ ನಕ್ಷತ್ರ, ಬೀಸುವ ಗಾಳಿ, ಕುಕಿಲಿಯಿರಿಯುವ ಹಕ್ಕಿಗಳು ಇವುಗಳನ್ನು ಕಲ್ಪನಾಲೋಕದಲ್ಲಿ ವಿಹರಿಸುವ ಮಕ್ಕಳು ಇಲ್ಲಿ ಕಾಣಬರುತ್ತಾರೆ.

3. **ಹಾಳೂರು:** 1926ರಲ್ಲಿ ಪ್ರಕಟವಾಯಿತು. ನವನಾಗರಿಕತೆ ಪ್ರಭಾವದಿಂದ ನಮ್ಮ ಹಳ್ಳಿಗಳು ಹೇಗೆ ಸಂಸ್ಕೃತಿ ಕಳೆದುಕೊಂಡು ಬಂಜೆಯಾಗುತ್ತಿವೆ ಎಂಬುದೇ ಇಲ್ಲಿನ ಕಥಾವಸ್ತುವಾಗಿದೆ.

4. **ಬೊಮ್ಮನಹಳ್ಳಿಯ ಕಿಂದರಿಜೋಗಿ:** ಇಂಗ್ಲಿಷ್ ಕವಿ ಬ್ರೌನಿಂಗ್‌ನ the pide of the Hamelin ಆಧರಿಸಿ ಬರೆದದ್ದು. ಬೊಮ್ಮನಹಳ್ಳಿಯಲ್ಲಿ ಇಲಿಗಳಿಂದಾಗುವ ಹಾವಳಿಯನ್ನು ಮಕ್ಕಳಿಗೆ ಮನಕ್ಕೆ ಮುಟ್ಟುವಂತೆ ರಚಿಸಲಾಗಿದೆ.

5. **ನನ್ನ ಗೋಪಾಲ:** 1930ರಲ್ಲಿ ಪ್ರಕಟವಾಯಿತು. ವಿಧವೆ ಮತ್ತು ಬಡವೆ ತಾಯಿಯೊಬ್ಬಳ ಭಕ್ತಿಯಿಂದ ಮಗ ಗೋಪಾಲನಿಗೆ ಶ್ರೀಕೃಷ್ಣನು ಅಣ್ಣನಾಗಿ ದರ್ಶನ ಕೊಟ್ಟ ಕಥೆ. ಗುರುಭಕ್ತಿ ಕಾಣಿಕೆಗೆ ಏನೂ ಇಲ್ಲದೆ ಮೊಸರಿನ ಕುಡಿಕೆ ಕೊಟ್ಟಾಗ ಅದು ಅಕ್ಷಯವಾಗುತ್ತದೆ. ತಾಯಿಯ ಭಕ್ತಿ ಮತ್ತು ಗೋಪಾಲನ ನಂಬಿಕೆ ಭಗವಂತನು ಒಲಿಯಲು ಕಾರಣವೆಂಬುದು ಇಲ್ಲಿ ವ್ಯಕ್ತವಾಗಿದೆ.

6. **ಮರಿವಿಜ್ಞಾನಿ:** 1947ರಲ್ಲಿ ಪ್ರಕಟವಾಯಿತು. ಅರಳುತ್ತಿರುವ ಮಕ್ಕಳ ಮನಸ್ಸು ತಾಳುವ ವೈಜ್ಞಾನಿಕ ದೃಷ್ಟಿಯ ಗೀತೆಗಳ ಸಂಕಲನವಿದು.

7. **ಮೇಘಪುರ:** 1947ರಲ್ಲಿ ಪ್ರಕಟವಾಯಿತು. ಹಕ್ಕಿ, ನದಿ, ಮುಗಿಲುಗಳೊಡನೆ ಸಂಬಂಧಪಟ್ಟ ಮಕ್ಕಳ ಸ್ವಪ್ನಾತಿಶಯಗಳ ಚಿತ್ರಣವೇ ಈ ಗೀತೆಗಳ ವಸ್ತು.

8. **ನನ್ನ ಮನೆ:** 1946ರಲ್ಲಿ ಪ್ರಕಟವಾಯಿತು. ಪ್ರಕೃತಿ, ಮಾತೃ ಮತ್ತು ಕನ್ನಡ ಪ್ರೇಮವನ್ನು ಚಿತ್ರಿಸುವ ಕೃತಿ.

9. **ನರಿಗಳಿಗೇಕೆ ಕೋಡಿಲ್ಲ:** ಮಕ್ಕಳಿಗಾಗಿ ರಚಿಸಿದ ಕೃತಿ.



ದ.ರಾ. ಬೇಂದ್ರೆ

ಕುರುಡು ಕಾಂಚಾಣ ಕುಣಿಯುತ್ತಲಿತ್ತ
ಕಾಲಿಗೆ ಬಿದ್ದವರ ತುಳಿಯುತ್ತಲಿತ್ತ

ನಾನು ಬಡವಿ ಆತ ಬಡವ
ಒಲುವೆ ನಮ್ಮ ಬದುಕು

ಮೂಡಲ ಮನೆಯ ಮುತ್ತಿನ ನೀರಿನ
ಎರಕವ ಹೊಯ್ದಾ ಎರಕವಾ ಹೊಯ್ದಾ

ಈ ಮೇಲಿನ ಸಾಲುಗಳು ಪ್ರಸ್ತುತ ರಾಜಕೀಯ, ಸಮಾಜ, ಪ್ರಕೃತಿ ಹೀಗೆ ಜೀವನದ ನಾನಾ ಮಗ್ಗಲುಗಳನ್ನು ತಿಳಿಯ ಹೇಳುವ ಕವನಗಳು, ನಾಟಕಗಳು, ವಿಮರ್ಶೆಯೇ ಅಲ್ಲದೆ ಕನ್ನಡ, ಇಂಗ್ಲೀಷ್ ಹಾಗೂ ಮರಾಠಿ ಭಾಷೆಯಲ್ಲಿಯೂ ಹಲವಾರು ಕೃತಿಗಳನ್ನು ಹೊರತಂದು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ತಮ್ಮ ಕೃತಿಗಳಲ್ಲಿ ಬಿಂಬಿಸಿದ್ದಾರೆ. ಇವರ ಕಾವ್ಯನಾಮ "ಅಂಬಿಕಾತನಯದತ್ತ". ಇವರ ಪೂರ್ತಿ ಹೆಸರು. ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಅವರ ಲಕ್ಷ್ಯವೆಲ್ಲ ವರ್ತಮಾನ ಹಾಗೂ ಭವಿಷ್ಯಗಳ ಕಡೆಗೇ ಇದ್ದಿತು. ಬೇಂದ್ರೆಯವರು ಪರಂಪರಾ ವಾದಿಗಳಾಗಿದ್ದರು. ಅವರು ಎಂದಿಗೂ ತಾವೊಬ್ಬ ನವೋದಯ ಕವಿ ಎಂದಾಗಲಿ ಆಧುನಿಕ ಕವಿ ಎಂದಾಗಲಿ ಹೇಳಿಕೊಳ್ಳುತ್ತಿರಲಿಲ್ಲ. ತಾವೊಬ್ಬ ವೇದಕವಿ, ವೇದವಿತ್‌ಕವಿ ಎಂದು ಅಭಿಮಾನದಿಂದ ಹೇಳಿಕೊಂಡಿರುವುದುಂಟು. ಭಾರತದ ಆಧ್ಯಾತ್ಮಿಕ ನೆಲೆಗಳಲ್ಲಿ ರೂಪುಗೊಂಡ ಅವರ ದರ್ಶನದ ಬೀಜ ಮಂತ್ರವೆಂದರೆ ಸಾಮರಸ್ಯ, ದೇವ–ಮಾನವ, ಮಾನವ–ಪ್ರಕೃತಿ. ಹೀಗೆ ಎಲ್ಲಾ ಸ್ತರಗಳಲ್ಲಿಯೂ ಬೇಂದ್ರೆಯವರು ಸಾಮರಸ್ಯದ ಆದರ್ಶವನ್ನು ಪ್ರತಿಪಾದಿಸಿದರು. ಸಂವೇದನಾಶೀಲ ಕವಿಯಾದ ಬೇಂದ್ರೆಯವರು ಆಧುನಿಕ ಸಮಾಜದಲ್ಲಿ ಮನುಷ್ಯರು ಎದುರಿಸುತ್ತಿರುವ ಸಮಸ್ಯೆಗಳತ್ತ ತಮ್ಮ ಗಮನ ಹರಿಸಿ ಅದನ್ನು ತಮ್ಮ ಸಾಹಿತ್ಯದಲ್ಲಿ ಹೊರಗೆಡವಿದ್ದಾರೆ.

ಜೀವನ ಚರಿತ್ರೆ

ಬೇಂದ್ರೆಯವರು 1896 ಜನವರಿ 31ರಂದು ಧಾರವಾಡದಲ್ಲಿ ಜನಿಸಿದರು. ಅವರ ತಂದೆಯ ಹೆಸರು ರಾಮಚಂದ್ರಭಟ್ಟ, ತಾಯಿ ಅಂಬೂತಾಯಿ. ಇವರಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಬೇಂದ್ರೆಯವರು ಮೊದಲನೇ ಮಗ. ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣ ಕುಲಕ್ಕೆ ಸೇರಿದವರು. ಆದ ಕಾರಣ ಇವರ ವಂಶಜರಿಗೆ 'ಠೋಸರ' ಎಂಬ ಹೆಸರಿದ್ದಿತು. ಇವರು ಮೂಲತಃ ಮಹಾರಾಷ್ಟ್ರದ ಕುಲಾಬಾ ಜಿಲ್ಲೆಯ 'ಕುಂಭಾರು' ಎಂಬ ಹಳ್ಳಿಗೆ ಸೇರಿದವರು. ಇವರ ಪೂರ್ವಿಕರು ಕಾರಣಾಂತರಗಳಿಂದ ಗದಗ ಜಿಲ್ಲೆಗೆ ಸೇರಿದ ಶಿರಹಟ್ಟಿಗೆ ಬಂದು ನೆಲೆಸಿದರು. ಬೇಂದ್ರೆಯವರು ಹುಟ್ಟಿನಿಂದ ಶ್ರೀಮಂತರೇನಲ್ಲ. ಕೆಳಮಧ್ಯಮ ಕುಟುಂಬಕ್ಕೆ ಸೇರಿದವರು. ಇವರ ತಂದೆಯವರಾದ ರಾಮಚಂದ್ರ ಭಟ್ಟರು ಅಸುನೀಗಿದರು. ತಾಯಿಯ ತೌರುಮನೆಯವರು ಹಾಗೂ ಅವರ ಚಿಕ್ಕಪ್ಪ ಇಡೀ ಸಂಸಾರದ ಹೊಣೆ ಹೊತ್ತರು. ಮೊದಲೇ ಕಷ್ಟದಲ್ಲಿದ್ದವರಿಗೆ ಇದು ಮತ್ತೊಂದು ದೊಡ್ಡ ಪೆಟ್ಟಾಯಿತು. ಮರಾಠಿ ಸಂತರ ಧಾರ್ಮಿಕ ವಾತಾವರಣದಿಂದ ಬೇಂದ್ರೆಯವರು ಬೆಳೆದರು. 1913ರಲ್ಲಿ ಅವರು ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು. ಕಾಲೇಜು ಶಿಕ್ಷಣಕ್ಕಾಗಿ ಪೂನಾದ 'ಫರ್ಗೂಸನ್ ಕಾಲೇಜಿ'ಗೆ ಸೇರಿದರು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪ್ರಭಾಕರ ಖಾಡಿಲಕರ ಮತ್ತು ಅವರ ಸಂಗಡಿಗರು ಸೇರಿ 'ಶಾರದಾ ಮಂಡಳ' ಎಂಬ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವ ಸಂಘವನ್ನು ಕಟ್ಟಿದರು. ಬೇಂದ್ರೆಯವರು ಈ ಸಂಘದ ಸದಸ್ಯರಾದರು. ಬೇಂದ್ರೆಯವರ ಮೇಲೆ ಬಹುಶಃ ಈ ಸಂಘವು ಪ್ರಭಾವ ಬೀರಿತು ಎಂದರೆ ತಪ್ಪಾಗಲಾರದು. ಮೆಟ್ರಿಕ್ಯುಲೇಷನ್ ನಂತರ ಮುಂಬೈ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿಗಾಗಿ ಸೇರಿದರು. ಪುಣೆಯ ಡೆಕ್ಕನ್ ಕಾಲೇಜಿನ ಕರ್ನಾಟಕ ಸಂಘದ ಸದಸ್ಯರಾದರು (1917). ಇದು ಕನ್ನಡ ಭಾಷೆ ಸಾಹಿತ್ಯದ ಮೇಲೆ ಪ್ರಭಾವ ಬೀರುವ ಸಂಘವಾಗಿತ್ತು. 1918ರಲ್ಲಿ ಬೇಂದ್ರೆಯವರು ಬಿ.ಎ. ಪದವಿಯನ್ನು ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿ ಧಾರವಾಡಕ್ಕೆ ಹಿಂತಿರುಗಿದರು.

ಧಾರವಾಡಕ್ಕೆ ಬರುವಷ್ಟರಲ್ಲಿ ಬೇಂದ್ರೆಯವರು ಉತ್ತಮ ಬರಹಗಾರರು, ಯುವ ಸಾಹಿತಿಗಳೂ ಆಗಿದ್ದರು. ವಿಕ್ಟೋರಿಯಾ ಪ್ರೌಢಶಾಲೆಯ ಶಿಕ್ಷಕರಾಗಿ ನೇಮಕಗೊಂಡರು. ಧಾರವಾಡದ ವಿದ್ಯಾವರ್ಧಕ ಸಂಘದವರು ಹೊರಡಿಸುತ್ತಿದ್ದ 'ವಾಗ್ಭೂಷಣ' ಪತ್ರಿಕೆಯ ಉಪಸಂಪಾದಕರಾಗಿ, ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದರು. ವಾಗ್ಭೂಷಣ ಜಯಕರ್ನಾಟಕ ಹಾಗೂ 'ಪ್ರಭಾತ' ಎಂಬ

ಪತ್ರಿಕೆಗಳಿಗೆ ಹಲವಾರು ಲೇಖನಗಳನ್ನು ಬರೆಯುತ್ತಿದ್ದರು. 1919ರಲ್ಲಿ ಹುಬ್ಬಳ್ಳಿಯ ವಾಸುದೇವರಾವ್ ಜೋಗಳೇಕರ್‌ರವರ ಸುಪುತ್ರಿಯಾದ ರಂಗೂಬಾಯಿಯವರನ್ನು ವಿವಾಹವಾದರು.

ಸಾಹಿತ್ಯ ರಥವನ್ನೇರಿದ್ದು

1922ರಲ್ಲಿ ಬೇಂದ್ರೆಯವರು 'ಕೃಷ್ಣಕುಮಾರಿ' ಎಂಬ ಪ್ರಥಮ ಕಾವ್ಯ ಗ್ರಂಥವನ್ನು ಆಲೂರು ವೆಂಕಟರಾಯರ 'ಶಾರದ ಮಂಡಳ'ವು ಪ್ರಕಟಿಸಿತು. 1926ರಲ್ಲಿ ಸ್ವಧರ್ಮ ಪ್ರಕಾಶನವು 'ಬೆಳಕು' ಎಂಬ ಕವಿತೆಯನ್ನು ಪ್ರಕಟಿಸಿತು. ಇದು ಮಾಸ್ತಿ ವೆಂಕಟೇಶ ಅಯ್ಯಂಗಾರರ ಗಮನವನ್ನು ಸೆಳೆಯಿತು.

ಬೇಂದ್ರೆಯವರ ಸಾಹಿತ್ಯದಲ್ಲಿ ಅವರ ಜೀವನದ ಕೆಲವಾರು ಘಟನೆಗಳು, ನೋವು, ನಲಿವು ಅತಃಕರಣಗಳು ವ್ಯಕ್ತವಾಗುತ್ತವೆ. ತಮ್ಮ ದಾಂಪತ್ಯದಲ್ಲಿ ಪ್ರೇಮವು ಒಮ್ಮೊಮ್ಮೆ ಗಂಡಹೆಂಡಿರ ಮುನಿಸಿನ ನಿಮಿಷಗಳಿಂದಾಗಿ ತನ್ನ ರಸನಿಮಿಷಗಳ ಸವಿಯನ್ನು ಹೆಚ್ಚಿಸಿಕೊಳ್ಳುತ್ತವೆ. ಇಂತಹ ಒಂದು ಮುನಿಸಿನ ಪ್ರಸಂಗದಲ್ಲಿ ತನಗೆ ಎದುರಾಡುವ ಮಡದಿಗೆ 'ಆಡದಿರು ಮನದನ್ನೆ ಎನಗೆ ಇದಿರಾಡದಿರು' ಎಂಬ ಹಿತವಾದ ನೀತಿಬೋಧೆಯನ್ನು ಮಾಡಿದ ಸನ್ನಿವೇಶವು ಓದುಗರ ಮನಸ್ಸಿನಲ್ಲಿ ಚಿರಕಾಲ ಉಳಿಯುವಂತಾಗಿದೆ. ಬೇಂದ್ರೆಯವರು ಇನ್ನೂ ಮುಂದುವರಿದು ಇದಿರಾಡಿ ಹೃದಯವನ್ನು ರಣರಂಗ ಮಾಡಬೇಡ ಎಂದು ತಮ್ಮ ಮಡದಿಗೆ ಬೋಧನೆ ಮಾಡುತ್ತಾರೆ. ಇದು ಆಧುನಿಕ ಸಮಾಜದ ಸಾಂಸಾರಿಕ ಜೀವನದಲ್ಲಿ ಇದು ಸರ್ವೇ ಸಾಮಾನ್ಯ. ಕವಿ ಬೇಂದ್ರೆಯವರು ಅದನ್ನೇ ಕವನ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

1924ರಲ್ಲಿ ಬೇಂದ್ರೆಯವರ ತಾಯಿಯವರು ದೈವಾಧೀನರಾದರು. ತಮ್ಮ ಕಾವ್ಯನಾಮವನ್ನು ತಮ್ಮ ತಾಯಿಯ ಹೆಸರಿನಲ್ಲೇ (ಅಂಬೂತಾಯಿ) 'ಅಂಬಿಕಾತನಯದತ್ತ' ಎಂದು ಕರೆದರು.

ಹಾಡುಗಾರ ಬೇಂದ್ರೆ

ಬೇಂದ್ರೆಯವರು ತಾವು ಬರೆದ ಕವನಗಳನ್ನು ಸಭೆ, ಸಮಾರಂಭಗಳ ವೇದಿಕೆಯಲ್ಲಿ ಹಾಡಿ ಸಭಿಕರನ್ನು ಕುಣಿಯುವಂತೆ ಮಾಡುತ್ತಿದ್ದರು. ಬೇಂದ್ರೆಯವರು ಮೂವತ್ತನೆ ವಯಸ್ಸಿನಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಸಮಾಜ ಇಲ್ಲವೆ ಜೀವನದ ವಿಷಯ ಮಾತ್ರವಲ್ಲ ದೇಶದ ಸ್ವಾತಂತ್ರ್ಯದ ವಿಷಯದಲ್ಲೂ ಕವನಗಳನ್ನು ಬರೆದಿದ್ದಾರೆ. ಅವುಗಳೆಂದರೆ– ಮಕ್ಕಳಿವರೇನಮ್ಮ ಮೂವತ್ತುಕೋಟಿ, ಅಹಹ

ಸ್ವಾತಂತ್ರ್ಯದೇವಿ, ಕನಸಿನೊಳಗೊಂದು ಕನಸು ಇವೇ ಮುಂತಾದುವು ಸ್ವಾತಂತ್ರ್ಯ ಹೋರಾಟಕ್ಕೆ, ದೇಶಭಕ್ತಿಗೆ ಸಂಬಂಧಿಸಿದ್ದರೆ 'ಬೆಳಗು', 'ಚಂದ್ರ', 'ಕೋಗಿಲೆ', 'ಓಹಾಡೇ', 'ಉತ್ತರಧ್ರುವದಿಂ ದಕ್ಷಿಣಧ್ರುವಕು', 'ಪಾತರಗಿತ್ತಿಪಕ್ಕ' ಇವೇ ಮುಂತಾದವು ಭಾವಗೀತೆಗಳಾದರೆ 'ಕುಣಿಯೋಣುಬಾ', 'ನನ್ನ ಕಿನ್ನರಿ', 'ಬಿಸಿಲುದುರಿ'ಮು 'ನಹೀ ನವಿಲು', 'ದಾಗರತಿ' ಇವೇ ಮೊದಲಾದವು ನಾಲ್ವಾಡುಗಳು.

ಬೇಂದ್ರೆಯವರು ತಮ್ಮ ಕಂಠದಿಂದಲೇ ಅವರದೇ ಗತ್ತಿನಲ್ಲಿ ರಸಿಕರ ಹೃದಯ ತಟ್ಟುವಂತೆ, ಮನಮುಟ್ಟುವಂತೆ ಎದ್ದು ಕುಣಿಯುವಂತೆ ಹಾಡುತ್ತಿದ್ದರು. 1929ರ ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ?', 1932ರಲ್ಲಿ 'ಗರಿ' ಪ್ರಕಟವಾದ ಎರಡು ವರ್ಷಗಳಲ್ಲಿ 'ಮೂರ್ತಿ ಮತ್ತು ಕಾಮಕಸ್ತೂರಿ' ಹೊರಬಂದಿತು. ಕಾಮಕಸ್ತೂರಿಯಲ್ಲಿ ವಿವಿಧ ಛಂದದ ಪ್ರಣಯಗೀತೆಗಳು ಹೆಚ್ಚಾಗಿ ತ್ರಿಪದಿ ಛಂದಸ್ಸಿನ ಚೌಕಟ್ಟಿನ ಚಿತ್ರಗಳಾಗಿ ಪ್ರಕಟಣೆಗೊಂಡವು.

ಬೇಂದ್ರೆಯವರ ಭಾವಗೀತೆಗಳು

ಬೇಂದ್ರೆಯವರ ಭಾವಗೀತೆಗಳು ಜನಮಾನಸದಲ್ಲಿ ಆಳವಾಗಿ ಬೇರುಬಿಟ್ಟು ಬೇಂದ್ರೆಯವರನ್ನು ಜೀವಂತಗೊಳಿಸಿವೆ. ಅವರ 'ಭೃಂಗದ ಬೆನ್ನೇರಿ', 'ಬಂತು ಕಲ್ಪನಾ ವಿಲಾಸ' ಎಂಬ ಭಾವಗೀತೆಗಳು ಶ್ರೇಷ್ಠ ಪ್ರತಿಮಾ ಕಾವ್ಯಗಳು. ಬೇಂದ್ರೆಯವರು ಒಂದು ಮಧ್ಯಾಹ್ನ ದೇವಿಗುಡಿಯಲ್ಲಿ ಜೋಂಪಿಸುತ್ತಿದ್ದಾಗ ಒಂದು ಗುಂಗಿಹುಳು ಬಿದಿರು ಕೊರೆಯುವಾಗ ಗುಂಯ್ ಎಂಬ ಶಬ್ದಕ್ಕೆ ಮನಸೋತ ಕವಿಯು ಈ ಭಾವಗೀತೆಯನ್ನು ಬರೆದರು. 1932ರಲ್ಲಿ 'ಗರಿ' ಎಂಬ ಕವನ ಸಂಕಲನವು ಹಾಡುಗಾರರಿಗೆ ಹಾಡಲು ಸ್ಫೂರ್ತಿಯಾದರೆ ಶ್ರೋತೃಗಳಿಗೆ ಕಿವಿ ಇಂಪು ಮಾಡುತ್ತದೆ. ಅದೇ 'ಮುಗಿಲಮಾರಿಗೆ ರಾಗ ರತಿ', 'ಯಾರವ್ವ ಇವ ಚಲುವಾ', 'ನಾನು ಬಡವಿ ಆತ ಬಡವ', 'ಗಮ-ಗಮಾಡಸ್ತಾವ ಮಲ್ಲಿಗೆ', 'ನಾರಿನೋಟ ಹಾರುತ್ತಿತ್ತು ಹೋಳಿಮ್ಯಾಗ ಹೊಸ ಹರೆ ಈಸತಿತ್ತೊ ಹೋಳಿಯಾಗ', 'ಕಾಮಕಸ್ತೂರ್', 'ಮಾಯಾಕಿನ್ನರಿ' ಇವೇ ಮುಂತಾದ ಕವನಗಳು ಪ್ರೇಮದ ಒಂದೊಂದು ವಿಧ, ಒಂದೊಂದು ಮುಖವನ್ನು ಮೂಡಿಸುತ್ತದೆ.

ಪ್ರಕೃತಿಯ ವರ್ಣನೆ

ಬೇಂದ್ರೆಯವರು ಪ್ರಕೃತಿಯ ಆರಾಧಕರು. ಪ್ರಕೃತಿ ಮಾತೆಯು ನಮಗೆ ಏನೆಲ್ಲ ಕೊಡುತ್ತಾಳೆ, ನಿಸರ್ಗದ ಅಂದ, ಚೆಂದ, ವೈವಿಧ್ಯತೆಯನ್ನು ತಮ್ಮ

ಕಾವ್ಯಗಳಲ್ಲಿ ಸೆರೆಹಿಡಿದಿದ್ದಾರೆ. ಬೇಂದ್ರೆಯವರನ್ನು 'ಶ್ರಾವಣದ ಕವಿ' ಎಂದೇ ಕರೆಯುತ್ತಾರೆ. 'ಮತ್ತೆ ಶ್ರಾವಣ ಬಂತು' ಎಂಬ ಕವನ ಸಂಕಲನದಲ್ಲಿ ಗಿಡ, ಬಳ್ಳಿ, ಹೂ, ಹಚ್ಚಹಸಿರು, ಹಕ್ಕಿಗಳ ವೈವಿಧ್ಯತೆ ಇವೇ ಮುಂತಾದುವನ್ನು ವರ್ಣಿಸಿದ್ದಾರೆ.

ಅಲ್ಲಿ ಸಂಪಿಗೆಯಿತ್ತು ಪಾರಿಜಾತವಿತ್ತು
ಮಾವು ಮಲ್ಲಿಗೆಯಿತ್ತು ಮನೆಯಿದಿರು
ಮುಗಿಲ ಮಲ್ಲಿಗೆಯಿತ್ತು, ತೆಂಗಿತ್ತು ಹಲಸಿತ್ತು
ನಿಂಬೆಯ ಇಂಬಿತ್ತು ಎಡೆ ಎಡೆಗೆ
ಹೊಂಗೆಯ ಸಾಲಿತ್ತು ಕಣ್ಮುಂದೆ ಕೆರೆಯಿತ್ತು
ಗುಡ್ಡದ ನೆರೆಯಿತ್ತು ಅದರಾಚೆಗೆ.

ಬೇಂದ್ರೆಯವರು ತಮ್ಮ ಕವನದಲ್ಲಿ ಪ್ರಕೃತಿಯು ನಮಗೆ ಏನೆಲ್ಲ ಕೊಡುತ್ತದೆ ಎಂದು ಓದುಗರಿಗೆ ವರ್ಣಿಸಿ ಹೇಳುತ್ತಾರೆ.

ಕಾವ್ಯದಲ್ಲಿ ಪ್ರೀತಿ, ಪ್ರೇಮ, ಕಾಮದ ಬಗ್ಗೆ

ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಮನುಷ್ಯ ಮನುಷ್ಯರ ನಡುವೆ ಇರುವ ಪ್ರೀತಿ, ಪ್ರೇಮ, ಕಾಮದ ಬಗ್ಗೆ ವರ್ಣಿಸಿದ್ದಾರೆ. ಪೃಥ್ವಿಯ ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೂ ಬೀಸುವ ಚುಂಬಕಗಾಳಿ ಚೇತನಮಯ ಪ್ರಣಯದ ನಿರಂತರತೆಯನ್ನು ವರ್ಣಿಸಿದ್ದಾರೆ. ಕಾರ್ಮೋಡ, ಕೊಳಲನೂದಿದರೇ?, ರಾಧೇಯ ಪಾಡು ಮೊದಲಾದ ಗೀತೆಗಳಲ್ಲೂ ದೇವ ಕಾಮವೇ ಉದಾತ್ತವಾಗಿ ಚಿತ್ರಿಸಲ್ಪಟ್ಟಿದೆ. ಅದೇರೀತಿ ಬೇಂದ್ರೆಯವರು ತಮ್ಮ 'ಪರಾಗ' ಕವನದಲ್ಲಿ ಕಮಲವು ರಸಿಕ ಭೃಂಗವನ್ನು ತನ್ನ ಮಕರಂದವನ್ನು ಸವಿಯಲು ಕರೆ ನೀಡುವ ಸಂಕೇತವನ್ನು ಹೀಗೆ ವರ್ಣಿಸಿದ್ದಾರೆ.

ಬಾಭೃಂಗವೇ ಬಾ ವಿರಾಗಿಯಂದದಿ
ಭ್ರಮಿಸುವಿ ನೀನೇಕೆ?
ಕಂಪಿನ ಕರೆಯಿದು ಸರಾಗವಾಗಿರ
ಬೇರೆಯ ಕರೆಬೇಕೆ?

ಪ್ರಕೃತಿಯ ಹಿನ್ನೆಲೆಯು ಪ್ರಿಯವರ್ದನೆಗೆ ಇಂಬು ನೀಡುವ ಕವನದ ಸಾಲು ಈ ರೀತಿ ಇದೆ–

ಮುಗಿಲ ಮಾರಿಗೆ ರಾಗ ರತಿಯ ನಂಜು ಏರಿತ್ತ
ಆಗ ಸಂಜೆಯಾಗಿತ್ತ–
ನಾರಿ ನಿನ್ನ ಮಾರಿಮ್ಯಾಲ ನಗೀ ನವಿಲು ಆಡತಿತ್ತ

ಆಡತಿತ್ತ ಓಡತಿತ್ತ ಮುಗಿಲ ಕಡೆಗೆ ನೋಡತಿತ್ತ
ಮನದ ಮಾಮರದ ಕೊನಿಗೆ । ಕೋಕಿಲೊಂದು ಕೂಡತಿತ್ತ
ಕೂಡತಿತ್ತ ಹಾಡಬಿಟ್ಟ! ಬರೇ ನಿನ್ನ ನೋಡತಿತ್ತ

ಬೇಂದ್ರೆಯವರ ಈ ಕವನವು ಹೆಚ್ಚು ಜನಪ್ರಿಯವಾಗಿದೆ ಹಾಗೂ ಬೇಂದ್ರೆಯವರಿಗೆ ಬಹುಶಃ ಇಂತಹ ಕವನಗಳು ಹೆಸರು ತಂದುಕೊಟ್ಟಿವೆ ಎಂದು ಹೇಳಬಹುದು.

ಅರಳು ಮರುಳುಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಬೇಂದ್ರೆಯವರ ಕಾವ್ಯ ಪ್ರತಿಭೆ ಅರಳಿದ ಫಲವೇ 1957ರಲ್ಲಿ ಸಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಬೇಂದ್ರೆಯವರು ಅರವತ್ತರ ಅತ್ತ ಇತ್ತ ಇದ್ದಾಗ ಈ ಸಂಪುಟದ ಐದು ಸಂಕಲನಗಳು ಪ್ರಕಟಗೊಂಡವು. ಬಿಡಿ ಬಿಡಿಯಾಗಿ ಬೆಳಕಿಗೆ ಬಂದ ಈ ಐದು ಸಂಕಲನಗಳು ಅರಳು-ಮರಳು ಎಂಬ ಶೀರ್ಷಿಕೆಯನ್ನು ಕೊಡಲಾಯಿತು. ಆ ಐದು ಸಂಕಲನಗಳೆಂದರೆ- ಸೂರ್ಯಪಾನ-1956; ಹೃದಯ ಸಮುದ್ರ-1956; ಮುಕ್ತಕಂಠ-1956; ಜೀವಲಹರಿ-1957; ಚೈತ್ಯಾಲಯ-1957.

ಬೇಂದ್ರೆಯವರು ತಮ್ಮ ಅಚ್ಚುಮೆಚ್ಚಿನ ಗುರುಗಳಾದ ಪಾಂಡಿಚೇರಿಯ ಶ್ರೀ ಅರವಿಂದರು ಹಾಗೂ ಶ್ರೀ ಮಾತಾ ಅರವಿಂದರನ್ನು ಕುರಿತು ಬರೆದಿರುವ ಗೀತೆಗಳು. ಬೇಂದ್ರೆಯವರು ಅನುಭವ, ಅನುಭಾವ, ಭಕ್ತಿ-ಶರಣಾಗತಪರ ಮತ್ತು ಭಾವನಾತ್ಮ ಗೀತೆಗಳಾಗಿವೆ. ಬೇಂದ್ರೆಯವರ 'ಸಮಾಪತ್ತಿ', 'ಸಹಸ್ರತಂತಿ' ಮತ್ತು 'ಮಹಾಪ್ರಸ್ಥಾನ' ಈ ಮೂರು ಕೃತಿಗಳು. ಶ್ರೀ ಅರವಿಂದರು ಮತ್ತು ಮಾತಾ ಅರವಿಂದರು ಅತಿಮಾನಸ ಪ್ರಜ್ಞೆಯನ್ನು ಸಾಧಿಸಿದವರು ಅವರ ತತ್ವಜ್ಞಾನವು ಪ್ರತಿವಿಕಾಸ (Revolution) ಮತ್ತು ವಿಕಾಸ (Evolution) ತತ್ವಜ್ಞಾನವನ್ನು ಬೇಂದ್ರೆಯವರು ಮೆಚ್ಚಿಕೊಂಡು ಅವರ ಶಿಷ್ಯರಾಗಿ ಅವರಿಗಾಗಿ ಕವನ ಸಂಕಲನವನ್ನು ಬರೆದಿದ್ದಾರೆ.

ಬೇಂದ್ರೆಯವರು ಆಧ್ಯಾತ್ಮಿಕದ ಬಗ್ಗೆ ಒಲವು ತೋರಿರುವುದನ್ನು ಕಾಣಬಹುದು. ಪಾಂಡಿಚರಿಯಲ್ಲಿದ್ದ ಶ್ರೀ ಅರವಿಂದರು 1950 ಡಿಸೆಂಬರ್ 5ರಂದು ಮಹಾಸಮಾಧಿ ಹೊಂದಿದ ಸಂದರ್ಭದಲ್ಲಿ ರಚಿತವಾದ ಕವನವೇ 'ಮಹಾಪ್ರಸ್ಥಾನ'.

ಬೇಂದ್ರೆಯವರ ನಾಕುತಂತಿಗೆ ಜ್ಞಾನಪೀಠ

ನಲವತ್ತ ನಾಲ್ಕು ಕವನಗಳು ಈ 'ನಾಕುತಂತಿ' ಎಂಬ ಕೃತಿಯು ನಾಲ್ಕು ಎಂಬ ಸಂಖ್ಯೆಯನ್ನು ಆಡುಭಾಷೆಯಲ್ಲಿ ನಾಕು ಎಂದು ಬಳಸಿದ್ದಾರೆ.

ಬೇಂದ್ರೆಯವರೇ ಹೇಳುವಂತೆ ಇದು ಸಂಖ್ಯೆಗೆ ಸಂಬಂಧವುಳ್ಳದ್ದು ,ಎಂದು ಹೇಳಿದ್ದಾರೆ. ನಲವತ್ತನಾಲ್ಕು ಕವನಗಳಲ್ಲಿ ನಾಲ್ಕನೆಯ ಕವನವಾದ 'ನಾಕುತಂತಿ' ಈ ಸಂಕಲನದ ಜೀವಾಳ. ನಾಕುತಂತಿಗಳ ಶೃತಿ ಒಂದೇ ಆಗಿರಬೇಕು. ಈ ನಾಕುತಂತಿಗಳು ನಾನು, ನೀನು, ಆನು ಮತ್ತು ತಾನು ಎಂಬ ನಾಲ್ಕು ತತ್ವಗಳನ್ನು ಪ್ರತಿನಿಧಿಸುತ್ತವೆ. ನಾನು-ತಂದೆ, ನೀನು-ತಾಯಿ, ಆನು ಇವರಿಬ್ಬರ ಆಧಾರವಾಗಿ ಬರುವ (ಹುಟ್ಟುವ) ಮಗು ಈ ಕುಟುಂಬವೆಂಬ ಸಂಸ್ಥೆಗೆ ಪರಮಾತ್ಮಶಕ್ತಿ 'ತಾನು' ಎಂಬುದು ಕವಿಯ ಭಾವ. ಇನ್ನೊಂದು ಅರ್ಥದಲ್ಲಿ ನಾನು-ಜೀವ, ನೀನು-ದೇಹ, ಆನು-ಚೈತ್ಯ ಅಥವಾ 'ಸೈಕಿ' (ಇದು ಅರವಿಂದರ ದಾರ್ಶನಿಕ ಭಾಷೆ) ತಾನು-ಎಂದರೆ ಆತ್ಮನು ಎಂಬ ಗೂಢಾರ್ಥದಲ್ಲಿ ಬೇಂದ್ರೆಯವರು ಬರೆದಿದ್ದಾರೆ. ನಾಕುತಂತಿ 'ಭಗವತ್' ತತ್ವದ ತಿಳುವಳಿಕೆಯ ನಾಲ್ಕು ಮೆಟ್ಟಿಲುಗಳನ್ನು ತಿಳಿಯಪಡಿಸುತ್ತದೆ. ಬೇಂದ್ರೆಯವರು ಈ ಕೃತಿಯನ್ನು ಬರೆದು ಮುಗಿಸಿದಾಗ ಅವರ ವಯಸ್ಸು 68 ವರ್ಷ ಆಗಿತ್ತು. ಅವರ ಮನಸ್ಸು ಪಾರಮಾರ್ತಿಕದ ಕಡೆಗೆ ಹೊರಳಿತ್ತು. 'ನಾಕುತಂತಿಗೆ' 1964ರಲ್ಲಿ ಜ್ಞಾನಪೀಠ ಪ್ರಶಸ್ತಿಯೂ ಪ್ರಾಪ್ತವಾಯಿತು.

ಅರವಿಂದರ ದೃಷ್ಟಿಯಲ್ಲಿ ಅಂತಿಮ ಸತ್ಯ ಸಚ್ಚಿತಾನಂದ; ಅದನ್ನು ಅನುಭೂತಿಯಿಂದಲೇ ಅರಿಯಬೇಕು. ಅಹಂಕಾರ ನಿರ್ಮೂಲನವಾದಾಗಲೇ ಮನುಷ್ಯ ಅತಿ ಮಾನುಷ ಪ್ರಜ್ಞೆಯ ಮಟ್ಟಕ್ಕೇರಬಲ್ಲ. ಡಾಂಭಿಕತೆ, ಪೊಳ್ಳು ಜಂಭಗಳಳಿಯಬೇಕೆಂಬುದು ನಾಕುತಂತಿ ಕವನಗಳ ಉದ್ದೇಶವಾಗಿದೆ.

ಗಂಗಾವತರಣ ಬೇಂದ್ರೆಯವರ ಸಾಧನೆಯ ಮೈಲುಗಲ್ಲು

ಬೇಂದ್ರೆಯವರ ತಮ್ಮ ಇಡೀ ಜೀವನವನ್ನು ಸಾಹಿತ್ಯ ರಚನೆಯಲ್ಲಿಯೇ ಕಳೆದರು. 1936ರಿಂದ 1949ರ ಅವಧಿಯಲ್ಲಿ ಅಂದರೆ ಒಟ್ಟು 13 ವರ್ಷಗಳ ಅವಧಿಯಲ್ಲಿ ಒಟ್ಟು ಅರವತ್ತೆರಡು ಕವನಗಳನ್ನು ಬರೆದರು. ಅವುಗಳಲ್ಲಿ ಉತ್ತಮವಾದ 50 ಕವನಗಳು ಆಯ್ಕೆಯಾಗಿ 'ಗಂಗಾವತರಣ'ವಾಯಿತು. ಬೇಂದ್ರೆಯವರು ಒಬ್ಬ ಕನಸುಗಾರರು, ಆಧ್ಯಾತ್ಮ ಸಾಧಕರು ಮತ್ತು ಶ್ರೇಷ್ಠ ಕವಿ ಎಂಬುದನ್ನು ಈ 'ಗಂಗಾವತಾರಣ' ಕೃತಿಯು ಸಾಬೀತುಪಡಿಸುತ್ತದೆ. ಈ ಕೃತಿಯಲ್ಲಿ 'ಬಾರೋ ಸಾಧನಕೇರಿಗೆ', 'ಒಂದೇ ಕರ್ನಾಟಕ ಒಂದೇ' ಅನ್ನಯಜ್ಞ, ಗಮಗಮಾಗಮಾಸ್ಸಾವ ಮಲ್ಲಿಗೆ, ಜೋಗಿ, ತುಂಬಿ, ಅಂಬಿಕಾತನಯದತ್ತ, ತೇಲಾಡುವಾಗ, ಒಂದು ಕನಸಿನ ಕಥೆ, ಅನ್ನಯಜ್ಞ, ಅಗಿಸೂಕ್ತ ಇವೇ ಮುಂತಾದವು ಬಹುಜನಪ್ರಿಯವಾದವು. 'ಗಂಗಾವತರಣ' ಎಷ್ಟು ಜನಪ್ರಿಯವಾದ ಕೃತಿ ಎಂದರೆ ಹತ್ತಾರು ಬಾರಿ ಮರುಮುದ್ರಣಗೊಂಡು ಕನ್ನಡಿಗರ ಕೈಸೇರಿತು.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಬೇಂದ್ರೆ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು ಸಣ್ಣಪುಟ್ಟ ಕವಿಗಳನ್ನಲ್ಲ. ಕನ್ನಡ ಸಾಹಿತ್ಯದಲ್ಲಿ ಬಹುದೊಡ್ಡ ಸಾಧನೆ ಮಾಡಿದ ಕವಿಪುಂಗವರಿಗೆ ಮಾತ್ರ ಜೀವನದಲ್ಲಿ ಒಂದು ಬಾರಿ ಅಂತಹ ಅವಕಾಶ ಸಿಗುವುದು. 1943ರಲ್ಲಿ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಮಾಡಿದರು. ಗಂಗಾವತರಣ ಕವಿತೆಯನ್ನು ವಾಚಿಸಿದರು. ಕವಿತೆಯನ್ನು ಅವರ ಬಾಯಿಂದ ಕೇಳಿದ ಜನ ಅದ್ಭುತ ಅದ್ಭುತ ಎಂದರು. ಬೇಂದ್ರೆಯವರ ವ್ಯಕ್ತಿತ್ವ, ಕಾವ್ಯರಚನೆ ಶೈಲಿ, ಕಾವ್ಯವಾಚನ, ವಿಮರ್ಶೆ, ನಾಟಕಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿತು.

ಬೇಂದ್ರೆಯವರ ನಾಟಕಗಳು

ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಬೇಂದ್ರೆಯವರ ಕವಿತೆ, ಕಾವ್ಯ ವಿಮರ್ಶೆ ಮಾತ್ರವಲ್ಲ ನಾಟಕಗಳನ್ನು ಬರೆದಿರುವುದು ವಿಶೇಷ. ಬೇಂದ್ರೆಯವರು ಒಟ್ಟು ಹದಿನಾಲ್ಕು ನಾಟಕಗಳನ್ನು ಬರೆದಿದ್ದಾರೆ. 'ಅಸಂಗತ' ನಾಟಕಗಳು ಕರ್ನಾಟಕದಲ್ಲಿ ಇನ್ನೂ ಹೆಚ್ಚಾಗಿ ಪ್ರಚಲಿತವಿರಲಿಲ್ಲ. ಅಂತಹ ಸಮಯದಲ್ಲಿ ಸಾಯೋ ಆಟ, ಜಾತ್ರೆಯಂಥ ನಾಟಕಗಳು ಪ್ರಜ್ಞಾವಂತರ ಗಮನ ಸೆಳೆದವು. ಇಲ್ಲಿ ಸಾಯೋ ಆಟವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಇಂಗ್ಲೀಷಿನ ಟ್ರಾಜಿಡಿ (Tragedy) (ದುರಂತ) ಪದಕ್ಕೆ ಸಾಯೋ ಆಟ ಎಂಬುದು ವ್ಯಂಜಕವಾದ ದೇಸೀ ಪದ. 1979ರ ಆವೃತ್ತಿಯ ಸಾಯೋ ಆಟ ನಾಟಕದ ಮುನ್ನುಡಿಯಲ್ಲಿ ಬೇಂದ್ರೆಯವರು ಹುಚ್ಚಾಟಗಳ ಅಸಂಗತಗಳ ಒಳ ಉದ್ದೇಶಗಳ ಬಗ್ಗೆ ಈ ಕೆಳಕಂಡ ಮಾತುಗಳನ್ನು ಉಲ್ಲೇಖಿಸಿದ್ದಾರೆ.

> ಇಲ್ಲಿ (ಸಾಯೋ ಆಟದಲ್ಲಿ) ಬರೆದದ್ದನ್ನು ಸಾವಕಾಶ ಓದಿ ವಿವೇಕ ಕಲಿತುಕೊಳ್ಳಿರಿ ಎಂದು ಪ್ರಾರ್ಥನೆ. ಸಿಕ್ಕ ಸಿಕ್ಕ ವಿಚಾರ ವಿಮರ್ಶೆಯೆನಿಸಿಕೊಳ್ಳಲಾರದು. ದಿನಾಲು ವೃತ್ತಪತ್ರಿಕೆಗಳಲ್ಲಿ ಓದುವುದು, ಸಾಮಾಜಿಕತೆಯ ಸಾಯೋ ಆಟ, ಆಡಳಿತದ ಸಾಯೋ ಆಟ; ಬೇಜವಾಬ್ದಾರಿ ಸುದ್ದಿಗಳ ಸಾಯೋ ಆಟ; ಆತ್ಮ ನಿರೀಕ್ಷೆ ಇಲ್ಲದವರು ಇನ್ನೊಬ್ಬರ ಪರೀಕ್ಷೆ ಮಾಡಿ ಯದ್ವಾತದ್ವ ಬರೆದು ಬುದ್ಧಿವಂತರೆನಿಸಿಕೊಳ್ಳುವ ಸಾಯೋಆಟ.

ಹೀಗೆ ಹುಚ್ಚಾಟದ ಮೀಮಾಂಸೆಯನ್ನು ಅದರ ರಸಾತ್ಮಕ ಪ್ರಭಾವ-ಪರಿಣಾಮಗಳನ್ನು ಪರಿಣಾಮಕಾರಿಯಾಗಿ ಬೇಂದ್ರೆಯವರು ವಿನೂತನವಾಗಿ ಪ್ರಯೋಗಿಸಿದ್ದಾರೆ.

1935ರ ಹೊತ್ತಿಗೆ ಹುಚ್ಚಾಟಗಳು ಪುಸ್ತಕ ರೂಪದಲ್ಲಿ ಹೊರಬಂದಿತು. ಇದರಲ್ಲಿರುವ ತಿರುಕರ ಪಿಡುಗು, ದೆವ್ವದಮನೆ ಇವೇ ಮುಂತಾದವು ವಿನೋದ ವ್ಯಂಗ್ಯಗಳ ನಾಟಕಗಳಾದರೆ, ಜಾತ್ರೆ, 'ನಗೆಯ ಹೊಣೆ', ಹೊಸ ಸಂಸಾರ ಇವೇ ಮುಂತಾದವು ತೀಕ್ಷ್ಣವಾದ ವಿಚಾರ ಹಾಗೂ ವಿಶ್ಲೇಷಣೆಯ ರಂಗನಾಟಕಗಳು. ಬೇಂದ್ರೆಯವರು ಹಾಸ್ಯ ವ್ಯಂಗ್ಯ, ವಿಡಂಬನೆ ವಿಚಾರ ಮಂಥನ ಮಾಡುವಂತಹ ನಾಟಕಗಳನ್ನು ಬರೆದು ಯಶಸ್ವಿಯಾದರು. 1935ರ ಸಂದರ್ಭದಲ್ಲಿ ಬೇಂದ್ರೆಯವರನ್ನು ಉತ್ತರ ಕರ್ನಾಟಕದ ಪ್ರಹಾಸನ ಪಿತಾಮಹನೆಂಬ ಪಟ್ಟ ಕಟ್ಟಿದರು.

ಅನುವಾದ ಗ್ರಂಥಗಳು

ಬೇಂದ್ರೆಯವರು ಕೆಲವಾರು ಅಮೂಲ್ಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಆದರೆ ಅನುವಾದಗಳ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳಲ್ಲಿ ಕೆಲವೊಂದು ಸೂಚನೆಗಳು ದೊರಕುತ್ತವೆ. ಉದಾಹರಣೆಗೆ: ತಮ್ಮ ಕನ್ನಡ ಮೇಘದೂತದ ಬಗ್ಗೆ ಅವರು ಹೇಳುವ ಮಾತುಗಳನ್ನು ಗಮನಿಸಬಹುದು. "ನನ್ನ ಕನ್ನಡ ಮೇಘದೂತ ಭಾಷಾಂತರ ಎಂದು ನಾನು ಹೇಳಿಕೊಳ್ಳಲಾರೆ. ಆ ಗುಣ ಅದಕ್ಕಿಲ್ಲ. ಆದರೆ ಮೇಘದೂತದ ಪ್ರತಿಯೊಂದು ಪದ್ಯವನ್ನು ಓದಿ ನನಗಾದ ಆನಂದವನ್ನು ನಾನು ಕಂಡ ಚೆಲುವನ್ನು ಈ ಕನ್ನಡ ಪದ್ಯಗಳಲ್ಲಿ ಕಟ್ಟಿದ್ದೇನೆ, ರಚಿಸಿದ್ದೇನೆ" ಎಂದು ಹೇಳಿಕೊಂಡಿದ್ದಾರೆ.

ಕಾಳಿದಾಸನನ್ನು ಅಪಾರವಾಗಿ ಮೆಚ್ಚಿಕೊಂಡರೆ 'ಅಭಿಜ್ಞಾನ ಶಾಕುಂತಲ'. ಅದರ ಭಾಷಾಂತರ ತಮಗೆ ಸಾಧ್ಯವಾಗದು ಎಂದು ನಂಬಿದ್ದರು. ಭಾಷಾಂತರವಾದ ಮೇಲೆ ಅದರಲ್ಲಿರುವ ಸೊಗಸುಗಾರಿಕೆ ಸಹಜ, ಲಲಿತ ಹಾಗೂ ಸುಂದರವಾದದ್ದು ಬೇರೊಂದಿಲ್ಲ. ಅದೇರೀತಿ ತಮ್ಮ ನೆಚ್ಚಿನ ಕವಿ ರವೀಂದ್ರನಾಥ ಠಾಗೂರರ ಬಂಗಾಲಿ ಗೀತೆಗಳ ಅನುವಾದ ನೂರೊಂದು ಕವನಗಳು. 1928ರಲ್ಲಿ ಗುರುದೇವ ರಾನಡೆಯವರ ಉಪನಿಷತ್ ರಹಸ್ಯ (ಬೇಂದ್ರೆ, ಶಂಭಾಜೋಶಿ, ದಿವಾಕರ) ಶ್ರೀ ಅರವಿಂದರ Indian Rennisance (ಭಾರತದ ಪುನರುಜ್ಜೀವನ) 1936ರಲ್ಲಿ ಭಾರತೀಯ ನವಜನ್ಮ. 1947ರಲ್ಲಿ 'ಅರವಿಂದರ ಯೋಗ', 'ಆಶ್ರಮ ಮತ್ತು ತತ್ವೋಪದೇಶ'. 1966ರಲ್ಲಿ 'ಗುರುಗೋವಿಂದಸಿಂಗ್' (ಮೂಲ-ಇಂಗ್ಲಿಷ್,

ವಾಮನ ಬೇಂದ್ರೆ ಮತ್ತು ಶರ್ಮ) 1967ರಲ್ಲಿ ರವೀಂದ್ರನಾಥ ಠಾಗೂರ್ ಕೃತಿಯನ್ನು ನೂರೊಂದು ಕವನ. 1968 ಕಬೀರ ವಚನಾವಲಿ (ಮೂಲ ಹಿಂದಿ). 1992ರಲ್ಲಿ ಭಗ್ನಮೂರ್ತಿ (ಮೂಲ ಮರಾಠಿ). ಬೇಂದ್ರೆಯವರು ಮರಾಠಿಯಲ್ಲಿ, ಇಂಗ್ಲಿಷ್‌ನಲ್ಲಿ ಗ್ರಂಥ ರಚಿಸಿದರು.

ಹೀಗೆ ದ.ರಾ.ಬೇಂದ್ರೆಯವರು ಮಹಾಕಾವ್ಯ ರಚನೆಯೊಂದನ್ನು ಬಿಟ್ಟು ಉಳಿದಂತೆ ಕವನ ಸಂಕಲನಗಳು, ನಾಟಕ, ಭಾಷಣಗಳು, ವಿಮರ್ಶೆ, ಅನುವಾದ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಜೀವನದುದ್ದಕ್ಕೂ ಹಣ, ಆಸ್ತಿಗಾಗಿ ಆಸೆಪಟ್ಟವರಲ್ಲ. ಹಣದ ಹಿಂದೆ ಬಿದ್ದವರಲ್ಲ. ಅವರು ಕವನ, ಕಾವ್ಯ, ನಾಟಕದ ರಚನೆಯಲ್ಲಿ ಕಂಡುಂಡಷ್ಟು ಸಂತೋಷವನ್ನು ಬೇರೆಲ್ಲೂ ಕಾಣಲಿಲ್ಲ. ಬೇಂದ್ರೆಯವರು ಅಮೃತತ್ವದಲ್ಲಿ ನಂಬಿಕೆಯಿದ್ದಿತು. ದತ್ತಾತ್ರೆಯ ರಾಮಚಂದ್ರ ಬೇಂದ್ರೆಯವರು 1981 ಅಕ್ಟೋಬರ್ 26ರಂದು ಇಹಲೋಕ ತ್ಯಜಿಸಿದರು.

ಬೇಂದ್ರೆಯವರ ಕೃತಿಗಳು

ಕಾವ್ಯ

1. ಕೃಷ್ಣಾಕುಮಾರಿ – 1922
2. ಗರಿ – 1932
3. ಮೂರ್ತಿ ಮತ್ತು ಕಾಮಕಸ್ತೂರಿ – 1934
4. ಸಖೀಗೀತ – 1937
5. ಉಯ್ಯಾಲೆ – 1938
6. ನಾದಲೀಲೆ – 1938
7. ಮೇಘದೂತ – 1943
8. ಹಾಡು–ಪಾಡು – 1946
9. ಗಂಗಾವತರಣ – 1951
10. ಕೃಷ್ಣಾಕುಮಾರಿ ಮತ್ತು ಹಾಡು ಪಾಡು – 1950
11. ಸೂರ್ಯಪಾನ – 1956
12. ಹೃದಯ ಸಮುದ್ರ – 1956

13. ಮುಕ್ತಕಂಠ – 1956
14. ಚೈತ್ಯಾಲಯ – 1956
15. ಜೀವಲಹರಿ – 1956
16. ಅರಳು ಮರಳು – 1957
17. ನಮನ – 1958
18. ಸಂಚಯ – 1959
19. ಉತ್ತರಾಯಣ – 1960
20. ಮುಗಿಲ ಮಲ್ಲಿಗೆ – 1961
21. ಯಕ್ಷ ಯಕ್ಷಿ – 1962
22. ನಾಕು ತಂತಿ – 1964
23. ಮರ್ಯಾದೆ – 1966
24. ಶ್ರೀ ಮಾತಾ – 1968
25. ಬಾ ಹತ್ತರ – 1969
26. ಇದು ನಭೋವಾಣಿ – 1970
27. ವಿನಯ – 1972
28. ಮತ್ತೆ ಶ್ರಾವಣಾ ಬಂತು – 1973
29. ಒಲವೆ ನಮ್ಮ ಬದುಕು – 1977
30. ಚತುರೋಕ್ತಿ – 1978
31. ಪರಾಕಿ – 1982
32. ಕಾವ್ಯ ವೈಖರಿ – 1982
33. ಬಾಲಬೋಧೆ – 1983
34. ತಾ ಲೆಕ್ಕಣಿಕಿ, ತಾ ದೌತಿ – 1983
35. ಚೈತನ್ಯದ ಪೂಜೆ – 1983
36. ಪ್ರತಿಬಿಂಬಗಳು – 1987
37. ಶ್ರಾವಣ ಪ್ರತಿಭೆ – 1987
38. ಕುಣಿಯೋಣ ಬಾ – 1990

39. ಹಾಡು ಪಾಡು
(ರಾಮಚಂದ್ರ ಬೇಂದ್ರೆಯವರ 'ನನ್ನ ಕವಿತೆಗಳು' ಸೇರಿ) – 1996
40. ಕಾಮಕಸ್ತೂರಿ – 1996
41. ಸಮರಸವೇ ಜೀವನ – 1996
42. ನಾಳಿನ ಕನಸು – 1997
43. ಶತಮಾನ (ಅಪ್ರಕಟಿತ)

ನಾಟಕ

1. ತಿರುಕರ ಪಿಡುಗು, ಗೋಲ್, ದೆವ್ವದ ಮನೆ, ಹಳೆಯ ಗೆಳೆಯರು, ಜಾತ್ರೆ, ಹೊಸ ಸಂಸಾರ, ಮಕ್ಕಳು ಅಡಿಗೆಮನೆ ಹೊಕ್ಕರೆ, ಶೋಭಾನಾ – 1930
2. ಉದ್ಧಾರ – 1930
3. ನಗೆಯ ಹೊಗೆ – 1931
4. ಹುಚ್ಚಾಟಗಳು – 1935
5. ಹೊಸ ಸಂಸಾರ ಮತ್ತು ಇತರ ಏಕಾಂಕಗಳು – 1950
6. ಅಂಬಿಕಾತನಯದತ್ತ ನಾಟಕ ಸಂಪುಟ – 1982
7. ಸಾಯೋ ಆಟ

ಕತೆ ಹರಟೆ

1. ನಿರಾಭರಣ ಸುಂದರಿ – 1940
2. ನಿರಾಭರಣ ಸುಂದರಿ – 1983
(ಹರಟೆಗಳನ್ನು ಬಿಟ್ಟು)

ವಿಚಾರ-ವಿಮರ್ಶೆ

1. ಸಾಹಿತ್ಯ ಮತ್ತು ವಿಮರ್ಶೆ – 1937
2. ಸಾಹಿತ್ಯ ಸಂಶೋಧನ – 1940
3. ವಿಚಾರ ಮಂಜರಿ – 1945
4. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ – 1954
5. ಮಹಾರಾಷ್ಟ್ರ ಸಾಹಿತ್ಯ – 1959

6. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು – 1968
7. ಮಾತೆಲ್ಲ ಜ್ಯೋತಿ – 1972
8. ಸಾಹಿತ್ಯದ ವಿರಾಟ್ ಸ್ವರೂಪ – 1974
9. ಕುಮಾರವ್ಯಾಸ – 1976
10. ಮತಧರ್ಮ ಮತ್ತು ಆಧುನಿಕ ಮಾನವ – 1979
11. ಶ್ರೀ ಅರವಿಂದರ ಆಶ್ರಮ ಮತ್ತು ತತ್ವೋಪದೇಶ – 1947
12. ಸಾಹಿತ್ಯಯೋಗ – 1995

ಸಂಪಾದಿತ ಗ್ರಂಥಗಳು

1. ನನ್ನದು ಈ ಕನ್ನಡ ನಾಡು – 1928
2. ಹಕ್ಕಿ ಹಾರುತಿದೆ – 1930
3. ಚಂದ್ರಹಾಸ – 1939
4. ಹೊಸಗನ್ನಡ ಕಾವ್ಯ ಶ್ರೀ (ಎಂ. ಮರಿಯಪ್ಪ ಭಟ್ಟರೊಡನೆ) – 1957
5. ಕನಕದಾಸ ಚತುಶ್ಶತಮಾನೋತ್ಸವ ಸಂಸ್ಮರಣ ಸಂಪುಟ – 1965

ಅನುವಾದ: ಕನ್ನಡಕ್ಕೆ

1. ಉಪನಿಷದ್ರಹಸ್ಯ ಅಥವಾ ಭಾರತೀಯ ಅಧ್ಯಾತ್ಮಶಾಸ್ತ್ರ ಪೀಠಿಕೆಯು (ರಂ.ರಾ. ದಿವಾಕರ ಹಾಗೂ ಶಂ.ಬಾ. ಜೋಶಿಯವರೊಡನೆ) – 1928
2. ಭಾರತೀಯ ನವಜನ್ಮ (ಇಂಗ್ಲಿಷಿನಿಂದ) – 1936
3. ಕಬೀರ ವಚನಾವಲಿ (ಗುರುನಾಥ ಜೋಶಿಯವರೊಡನೆ) (ಹಿಂದಿಯಿಂದ) – 1968
4. ಭಗ್ನಮೂರ್ತಿ (ಮರಾಠಿಯಿಂದ) – 1972
5. ಗುರು ಗೋವಿಂದಸಿಂಗ (ವಾಮನ ಬೇಂದ್ರೆ, ಕೆ.ಎಸ್. ಶರ್ಮರೊಡನೆ) – 1976
6. ನೂರೊಂದು ಕವನಗಳು (ನಾರಾಯಣ ಸಂಗಮರೊಡನೆ) (ಬಂಗಾಲಿಯಿಂದ) – 1967



ಮಾಸ್ತಿ ವೆಂಕಟೇಶ ಅಯ್ಯಂಗಾರ್

ದಕ್ಷಿಣ ಭಾರತದ ಭಾಷೆಗಳಲ್ಲಿ ಒಂದಾದ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯು ಶ್ರೇಷ್ಠತಮವಾಗಿದ್ದು ಹಲವಾರು ಬಾರಿ ಪ್ರತಿಷ್ಠಿತ 'ಜ್ಞಾನಪೀಠ' ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಳ್ಳುತ್ತಿರುವುದಕ್ಕೆ ಕಾರಣವೇನೆಂದರೆ ಕುವೆಂಪು, ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರರಂತಹ ಮೇರು ಸಾಹಿತಿಗಳಿಂದಾಗಿ. ಇವರು ಕತೆ, ಕಾದಂಬರಿ, ಕವಿತೆ, ನಾಟಕ, ವಿಮರ್ಶೆ, ಉಪನ್ಯಾಸ, ಜೀವನ ಚರಿತ್ರೆ, ಆತ್ಮಕಥೆ, ಪತ್ರಿಕೋದ್ಯಮ, ಚಿಂತನೆ, ಅನುವಾದ ಇವೇ ಮೊದಲಾದ ಕ್ಷೇತ್ರಗಳಲ್ಲಿ ಅಮೋಘವಾದ ಕಾಣಿಕೆಯನ್ನು ನೀಡಿದ್ದಾರೆ. ಕನ್ನಡ, ತಮಿಳು, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದ ಅಯ್ಯಂಗಾರರು ಇಂಗ್ಲೀಷ್ ಭಾಷೆಯಲ್ಲಿಯೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅಯ್ಯಂಗಾರರು ಒಬ್ಬ ಉನ್ನತಾಧಿಕಾರಿಯಾಗಿ, ಪತ್ರಿಕೋದ್ಯಮಿಯಾಗಿ, ಸಾಹಿತಿಯಾಗಿ ಛಾಪು ಮೂಡಿಸಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ವಿ.ಕೃ. ಗೋಕಾಕರು ಮಾಸ್ತಿಯವರನ್ನು 'ಕನ್ನಡದ ಆಸ್ತಿ' ಎಂದು ಕರೆದರು. ಅಲ್ಲಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂದ ಕೂಡಲೆ 'ಮಾಸ್ತಿ ಕನ್ನಡದ ಆಸ್ತಿ' ಎಂಬುದು ಇಡೀ ಕರ್ನಾಟಕದಲ್ಲಿ ಜನಜನಿತವಾಗಿ ನಿಂತುಬಿಟ್ಟಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು 'ಮಾಸ್ತಿ' ಎಂಬಲ್ಲಿ ರಾಮಸ್ವಾಮಿ ಅಯ್ಯಂಗಾರ್ ಮತ್ತು ತಿರುಮಲಮ್ಮ ದಂಪತಿಗಳಿಗೆ 08–6–1891ರಂದು ಜನಿಸಿದರು. ಇವರ ಮಾತೃಭಾಷೆ ತಮಿಳು. ಇವರು 'ಪೆರಿಯತ್' ಎಂಬ ಕುಟುಂಬ ವರ್ಗಕ್ಕೆ ಸೇರಿದವರು. ಹಳ್ಳಿಯಲ್ಲಿ ಇವರ ತಂದೆಯವರಾದ ರಾಮಸ್ವಾಮಿ ಅಯ್ಯಂಗಾರರು ಶಾನುಭೋಗಿಕೆಯನ್ನು

ಹೊಂದಿದ್ದು ಅನಿವಾರ್ಯ ಕಾರಣಗಳಿಂದಾಗಿ ಅದನ್ನು ಕಳೆದುಕೊಳ್ಳಬೇಕಾಯ್ತು. ಇದು ಬಾಲಕನ ಮೇಲೆ ಪರಿಣಾಮ ಬೀರಿತು. ಇಡೀ ಕುಟುಂಬ ಕಷ್ಟಕ್ಕೆ ಸಿಲುಕಿತು.

ವಿದ್ಯಾಭ್ಯಾಸ

ಮಾಸ್ತಿಯವರು ತಮ್ಮ ಶಿಕ್ಷಣವನ್ನು ಕೋಲಾರ ಜಿಲ್ಲೆ ಮಂಡ್ಯ ಜಿಲ್ಲೆ ಮತ್ತು ಮೈಸೂರಿನಲ್ಲಿ ಪಡೆದರು. ಇವರ ಶಿಕ್ಷಣಕ್ಕೆ ಸಹಾಯ ಮಾಡಿದವರು ತನ್ನ ತಂದೆ, ತಾತನೇ ಅಲ್ಲದೆ ಸೋದರಮಾವನವರಾದ ವೆಂಕಟರಾಮ ಅಯ್ಯಂಗಾರರು. ಮೈಸೂರಿನ ವೆಸ್ಲಿಯನ್ ಶಾಲೆಗೆ ಸೇರಿದಾಗಲೂ ಊಟ, ವಸತಿಯ ಸಮಸ್ಯೆಯು ಬಾಲಕನಿಗೆ ಕಾಡಿತು. ಹಣಕಾಸಿನ ವಿಷಯದಲ್ಲಿ ಬಡತನವಿದ್ದರೂ ಓದಿನಲ್ಲಿ ಜ್ಞಾನ ಗಳಿಸುವುದರಲ್ಲಿ ಬಾಲಕ ಶ್ರೀಮಂತನಾಗಿದ್ದ. ಅಂದರೆ ಓದಿನಲ್ಲಿ ಮುಂದಿದ್ದ ಬಾಲಕ ಎಲ್ಲಾ ತರಗತಿಯಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದ. 1907ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ 1909ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಬಾಲಕನ ಬುದ್ಧಿಶಕ್ತಿಯನ್ನು ಮೆಚ್ಚಿ ಸರ್ಕಾರದಿಂದ ಮಾಹೆಯಾನ 10 ರೂಪಾಯಿ ವಿದ್ಯಾರ್ಥಿ ವೇತನ ಲಭಿಸುತ್ತಿತ್ತು. ಬೆಂಗಳೂರಿನಲ್ಲಿದ್ದ ಮಾಸ್ತಿಯವರ ಬಂಧುವಾದ ಶ್ರೀ ವರದರಾಜ ಅಯ್ಯಂಗಾರರ ಮೆಚ್ಚುಗೆಗೆ ಪಾತ್ರರಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಇಂಗ್ಲಿಷ್ ಮತ್ತು ಕನ್ನಡ ಭಾಷೆಯನ್ನು ಅಧ್ಯಯನ ಮಾಡಿ 1912ರಲ್ಲಿ ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದರು. ಎಂ.ಎ. ಓದಲು ಮದ್ರಾಸಿಗೆ ತೆರಳಿದರಾದರೂ ಟೇಟ್ ಸಾಹೇಬರ ಮತ್ತು ಹಂಟರ್ ಎಂಬ ಮದ್ರಾಸ್ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರ ಒತ್ತಾಸೆಯಂತೆ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ತೆಗೆದುಕೊಂಡು ಅದರಲ್ಲಿ ಉತ್ತೀರ್ಣರಾದರು.

ಅಧಿಕಾರಿಯಾಗಿ ಮಾಸ್ತಿ

ಇಂದು ಕೆ.ಎ.ಎಸ್. ಎಂದು ಕರೆಯುವ ಪರೀಕ್ಷೆಯನ್ನು ಅಂದು ಎಂ.ಎ.ಎಸ್. ಎಂದು ಕರೆಯುತ್ತಿದ್ದರು. ಅಂದು ತೇರ್ಗಡೆಯಾದರೂ ನೇಮಕಾತಿಯಲ್ಲಿ ಇಂದಿನಂತೆ ಅಂದೂ ವಿಳಂಬವಾಗಿದ್ದರಿಂದ ಅಷ್ಟರಲ್ಲಿ ಮದ್ರಾಸಿಗೆ ತೆರಳಿ ಎಂ.ಎ. ಪರೀಕ್ಷೆಯನ್ನು ಬರೆದು ಬಂದರು. ನೇಮಕಾತಿ ಆದೇಶ ಬರುವಷ್ಟರಲ್ಲಿ ಎಂ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು.

ನೇಮಕಾತಿ ಆದೇಶ ಪಡೆದು ಬೆಂಗಳೂರಿನ ಸೆಕ್ರೆಟೇರಿಯೆಟ್‌ನಲ್ಲಿ ತರಬೇತಿ ಪಡೆದು ಮೈಸೂರಿನಲ್ಲಿ ಆರು ತಿಂಗಳು, ಮತ್ತೆ ಬೆಂಗಳೂರಿಗೆ ವರ್ಗವಾಗಿ ಅಸಿಸ್ಟೆಂಟ್ ಸೆಕ್ರೆಟರಿಯಾಗಿ, ಚಿಕ್ಕಮಗಳೂರಿನ ಸಬ್‌ಡಿವಿಜ಼ನ್ ಆಫೀಸರ್ ಆಗಿ

ನಂತರ ಬೆಂಗಳೂರಿನಲ್ಲಿ ಸೆನ್ಸಸ್ (ಜನಗಣತಿ) ಕಛೇರಿಯ ಮುಖ್ಯಸ್ಥರಾಗಿ, ನಂತರ ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಆಗಿ, ಸೆನ್ಸಸ್ ಸೂಪರಿಂಟೆಂಡೆಂಟ್ ಆಗಿ, ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯಾಗಿ ಬೆಂಗಳೂರಿಗೆ ಬಂದು ಎಕ್ಸೈಜ್ ಕಮೀಷನರ್ ಆಗಿ, ಲೇಬರ್ ಕಮೀಷನರ್ ಆಗಿ ನಿಯುಕ್ತರಾದರು. ಅಧಿಕಾರದ ಅತ್ಯುನ್ನತ ಪದವಿಗೇರಿದ ಸಂದರ್ಭದಲ್ಲಿಯೇ ಅಂದರೆ 16.4.1944ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರು. ಅದಕ್ಕೆ ಕಾರಣ ಬಹುಶಃ ಅವರಲ್ಲಿದ್ದ ಕವಿಯ ಮನಸ್ಸು ಅವರಿಗೆ ಹೇಳಿತು. ಅಧಿಕಾರ, ಅಂತಸ್ತು ಶಾಶ್ವತವಲ್ಲ. ಸಾಹಿತಿಯಾಗಿ ಶಾಶ್ವತವಾಗಿ ಉಳಿ ಎಂದಿರಬೇಕು. ತಮ್ಮ ಉಳಿದ ಕಾಲವನ್ನು ಸಾಹಿತಿಯಾಗಿ ಕಳೆದರು.

ಸಾಹಿತಿಯಾಗಿ ಮಾಸ್ತಿಯವರು

ಮಾಸ್ತಿಯವರಲ್ಲಿ ಒಬ್ಬ ಕವಿಯಿದ್ದ ಎಂದರೆ ತಪ್ಪಾಗಲಾರದು. 1910–11ರಲ್ಲೇ ಅಂದರೆ ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಸಾಹಿತ್ಯ ರಚನೆಗೆ ಕೈಹಾಕಿದರು. 'ರಂಗನ ಮದುವೆ' ಎಂಬ ಸಣ್ಣಕಥೆಯನ್ನು ಬರೆದರು. ಕ್ರಮೇಣ ಸಣ್ಣಕಥೆಗಳು ಜನಪ್ರಿಯವಾದವು. 1910–20ರ ತನಕ ಕೆಲವಾರು ಸಣ್ಣಕಥೆಗಳನ್ನು ಬರೆದರು. ಇವುಗಳಲ್ಲಿ ಮೊಸರಿನ ಮಂಗಮ್ಮ, ವೆಂಕಟಶಾಮಿಯ ಪ್ರಣಯ, ಕಲ್ಮಾಡಿಯ ಕೋಣ, ನಿಜಗಲ್ಲಿನ ರಾಣಿ ಇವೇ ಮುಂತಾದವು. 'ಸುಬ್ಬಣ್ಣ' ಎಂಬ ನೀಳ್ಗತೆಯು ವಿಶ್ವದ ಅತ್ಯುತ್ತಮ ಕಥೆಗಳ ಸಾಲಿಗೆ ಸೇರುವಂಥದ್ದು. ಇದು ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಇಂಗ್ಲಿಷ್, ಜರ್ಮನ್ ಭಾಷೆಗಳಿಗೆ ಅನುವಾದವಾಗಿದೆ. ಮಾಸ್ತಿಯವರ ಕಾವ್ಯನಾಮ 'ಶ್ರೀನಿವಾಸ'.

ಮಾಸ್ತಿಗೆ ಜ್ಞಾನಪೀಠ ಪ್ರಶಸ್ತಿ

ಮಾಸ್ತಿಯವರ ಕಥಾ ಸಾಹಿತ್ಯದಲ್ಲಿ ಚನ್ನಬಸವ ನಾಯಕ ಮತ್ತು ಚಿಕವೀರ ರಾಜೇಂದ್ರ ಕಾದಂಬರಿಗಳು ಶ್ರೇಷ್ಠ ಕಾದಂಬರಿಗಳಾಗಿವೆ. ಇವುಗಳು ಕ್ರಮವಾಗಿ 1949–50 ಹಾಗೂ 1956ರಲ್ಲಿ ಹೊರಬಂದವು. ಚಿಕ್ಕವೀರ ರಾಜೇಂದ್ರ ಕಾದಂಬರಿಗೆ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಯಾದ 'ಜ್ಞಾನಪೀಠ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯ್ತು. ಚನ್ನಬಸವ ನಾಯಕ ಕಾದಂಬರಿಯು ಬಿದನೂರಿನ ನಾಯಕ ಮನೆತನದ ಕಥೆಯಾಗಿದೆ. ಅಲ್ಲಿನ ರಾಣಿಯ ಕೆಟ್ಟ ನಡತೆ, ತಾಯಿಮಕ್ಕಳ ವೈಮನಸ್ಸು, ಅಕ್ರಮ ಸಂಬಂಧ, ಅಸಮರ್ಥ ಆಡಳಿತ ಇವೇ ಮುಂತಾದವು ಕಾದಂಬರಿ ರೂಪದಲ್ಲಿ ಹೊರ ಹಾಕಿದ್ದಾರೆ. ಭೂತಕಾಲದ ಕತೆಯನ್ನು ವರ್ತಮಾನದೊಡನೆ ಬೆಸುಗೆ ಹಾಕಿ ಜೀವಂತಗೊಳಿಸಿದ್ದಾರೆ. ಈ ಕಾದಂಬರಿಯು ತಮಿಳು ಹಿಂದಿ ಮತ್ತು ಇಂಗ್ಲಿಷ್ ಇವೇ ಮುಂತಾದ ಭಾಷೆಗಳಲ್ಲಿ ಭಾಷಾಂತರವಾಗಿದೆ.

ಚಿಕ್ಕವೀರ ರಾಜೇಂದ್ರ ಕಾದಂಬರಿಯು ಅರಸನ ಲಂಪಟತನ, ಅಧಿಕಾರ ಲಾಲಸೆ, ಕಾಮಕತನ, ಅರಮನೆಯ ತುಂಬೆಲ್ಲ ಆತನ ಕಾಮತೃಷೆಗಾಗಿಯೆ ಇದ್ದ ರಾಣಿ ವಾಸದವರು, ರಾಜನ ಸ್ವೇಚ್ಛಾ ಪ್ರವೃತ್ತಿ. ಇವೇ ಮುಂತಾದುವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಮಾಸ್ತಿಯವರು ಈ ಕಾದಂಬರಿಗಾಗಿ ಚಿಕ್ಕವೀರ ರಾಜೇಂದ್ರ ತಳವೂರಿದ್ದ ಉತ್ತರ ಪ್ರದೇಶ (ವಾರಣಾಸಿ) ಇಂಗ್ಲೆಂಡ್‌ಗಳಿಗೂ ತೆರಳಿ ಸಂಶೋಧನಾತ್ಮಕ ಕಾದಂಬರಿಯನ್ನು ವಿಶ್ವಕ್ಕೆ ನೀಡಿದ್ದಾರೆ. ಮಾಸ್ತಿಯವರ ಚಿಕ್ಕವೀರ ರಾಜೇಂದ್ರ ಕಾದಂಬರಿಯು ಅತ್ಯುತ್ತಮ ಕಾದಂಬರಿ ಎಂದು ಪರಿಗಣಿಸಿ 1983ರಲ್ಲಿ 'ಜ್ಞಾನಪೀಠ ಪ್ರಶಸ್ತಿ' ನೀಡಿ ಗೌರವಿಸಿತು.

ಮಾಸ್ತಿಯವರ ಕಾವ್ಯಗಳು

ಮಾಸ್ತಿಯವರು ಉತ್ತಮವಾದ ಕಾವ್ಯಗಳನ್ನು ರಚಿಸಿದ್ದಾರೆ. ಇವರ ಕಾವ್ಯ ಸರಳವಾದುದು. ಮಾಸ್ತಿಯವರ ಮೊದಲ ಭಾವಗೀತೆಗಳ ಸಂಗ್ರಹವೇ 'ಬಿನ್ನಹ' ಇದು 1922ರಲ್ಲಿ ಪ್ರಕಟವಾಯಿತು. ಹಲವಾರು ಭಾವಗೀತೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೋಗಿಲೆ, ಮಲಾರ ಕೊಂಬು, ಕೆನ್ನೈದಿಲೆ, ನಲವತ್ತರ ನಲುಗು ಇವೇ ಮುಂತಾದವು. ಮಾಸ್ತಿಯವರು ಖಂಡ ಕಾವ್ಯವನ್ನು ರಚಿಸಿದ್ದಾರೆ. ಅವುಗಳಲ್ಲಿ ಮೂಕನ ಮಕ್ಕಳು, ಗೌಡರ ಮಲ್ಲಿ, ಲೇಪಾಕ್ಷಿ, ಶ್ರೀ ರಾಮನವಮಿ ಮುಖ್ಯವಾದವು. ಮಾಸ್ತಿಯವರ "ಶ್ರೀರಾಮ ಪಟ್ಟಾಭಿಷೇಕ" ಸರಳ ರಗಳೆಯನ್ನು ಉತ್ತಮವಾಗಿ ಬಳಸಿಕೊಂಡಿದ್ದಾರೆ. ಶ್ರೀರಾಮಚಂದ್ರನ ಪಟ್ಟಾಭಿಷೇಕವನ್ನು ಕೇಂದ್ರವಾಗಿರಿಸಿಕೊಂಡು ಸಂಪೂರ್ಣ ರಾಮಾಯಣದ ಕಥೆಯನ್ನು ಕಂಡರಿಸಿರುವುದು ಗ್ರಂಥವಾಗಿದೆ. ಇದರಲ್ಲಿ 9000 ಸಾಲುಗಳಿಗೂ ಹೆಚ್ಚಾಗಿರುವ ಈ ಗ್ರಂಥವು ಸುದೀರ್ಘ ಕಾವ್ಯವಾಗಿದೆ.

ಮಾಸ್ತಿಯವರ ನಾಟಕಗಳು

ಮಾಸ್ತಿಯವರು ನಾಟಕಗಳಲ್ಲಿಯೂ ಕೃಷಿ ಮಾಡಿದ್ದಾರೆ. 1923ರಲ್ಲಿ ಪ್ರಕಟಗೊಂಡ ಅವರ ಮೊದಲ ನಾಟಕವೇ ಶಾಂತಾ. ಇದೊಂದು ಪೌರಾಣಿಕ ನಾಟಕ. ಸಾವಿತ್ರಿ–ಸತ್ಯವಾನ ಮತ್ತು ಸಾವಿತ್ರಿಯರ ಕಥೆಯನ್ನೊಳಗೊಂಡದ್ದು. ನಂತರ ಉಷಾ, ತಾಳಿಕೋಟೆ, ಮಂಜುಳಾ, ಶಿವಛತ್ರಪತಿ, ಯಶೋಧರಾ, ಅನಾರ್ಕಲಿ, ತಿರುಪಾಣಿ, ಮಾಸತಿ, ಕಾಳಿದಾಸ, ಪುರಂದರದಾಸ, ಕನಕಣ್ಣ, ಅಜ್ಜನದಾರಿ, ವಿಮಲ ಮರಿಯನ್, ಭಟ್ಟರ ಮಗಳು ಇವೇ ಮುಂತಾದ ಹದಿನಾರಕ್ಕೂ ಹೆಚ್ಚು ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳಾಗಿವೆ. ಇವುಗಳಲ್ಲಿ 'ಕಾಕನಕೋಟೆ' ಮಾಸ್ತಿಯವರ ಉತ್ತಮ ನಾಟಕವಾಗಿದೆ. ಇದರಲ್ಲಿ ಕಾಡುಕುರುಬರ ಐತಿಹಾಸಿಕ

ಅಂಶಗಳನ್ನೊಳಗೊಂಡ ಕಥೆಯ ಅಂದರವಾಗಿದೆ. 'ಯಶೋಧರ' ಎಂಬ ನಾಟಕವು ಗೌತಮಬುದ್ಧನ ಹೆಂಡತಿ ಯಶೋಧರೆಯ ಮಾನಸಿಕ ತುಮುಲವನ್ನು ಪ್ರಧಾನವನ್ನಾಗಿಸಿಕೊಂಡು ಚಿತ್ರಿಸಿರುವ ನಾಟಕ ಇದಾಗಿದೆ. 'ಕಾಳಿದಾಸ' ನಾಟಕವು ಮಹಾಕವಿ ಕಾಳಿದಾಸನ ಬಗ್ಗೆ ಇರುವ ಕಟ್ಟುಕತೆ, ಇತಿಹಾಸವನ್ನು ಬಳಸಿಕೊಂಡು ರಚಿಸಿರುವ ಏಳು ಅಂಕಗಳ ನಾಟಕ.

'ಭಾವ' ಎಂಬ ಆತ್ಮಕಥನ

ಮಾಸ್ತಿಯವರ ಸ್ನೇಹಿತರು, ಹಿತೈಷಿಗಳು, ಅಭಿಮಾನಿಗಳು ತಮ್ಮ ಆತ್ಮಚರಿತ್ರೆಯನ್ನು ಬರೆಯಬೇಕೆಂದು ಒತ್ತಾಯಿಸಿದ್ದರಿಂದ ಮೂರು ಸಂಪುಟಗಳಲ್ಲಿ ಪ್ರಕಟವಾಯಿತು. ಕೊನೆಯ ಸಂಪುಟ 1969ರಲ್ಲಿ ಪ್ರಕಟವಾಯಿತು. 'ಭಾವ' ಎಂಬ ಆತ್ಮಕಥನವು ಭಾವ ಸಂವತ್ಸರದಲ್ಲಿ ಹುಟ್ಟಿದ ಮಾಸ್ತಿಯವರ ಜೀವನ ವಿವರಗಳನ್ನು ಹಾಗೂ ಸಮಕಾಲೀನ ಬದುಕಿನ ವಿವರಗಳನ್ನು ಒಳಗೊಂಡು, ಒಬ್ಬ ಸಾಹಿತಿಯ ಜೊತೆ ಜೊತೆಗೆ ಒಬ್ಬ ದಕ್ಷ ಅಧಿಕಾರಿಯ ಬದುಕಿನ ಕಥೆಯೂ ಆಗಿದೆ. ಮಾಸ್ತಿಯವರೇ ಹೇಳಿಕೊಂಡಿರುವಂತೆ ಇದು ನನ್ನ ಜೀವನ ಚರಿತ್ರೆಯಲ್ಲ. "ನನ್ನ ಬಾಳುವೆಯನ್ನು ಕುರಿತು ನನಗೆ ತೋರಿದ ಭಾವ" ಎಂದಿದ್ದಾರೆ. ಹೀಗಾಗಿ ಅವರ ಆತ್ಮಕಥನಕ್ಕೆ 'ಭಾವ' ಎಂದು ಹೆಸರಿಟ್ಟಿದ್ದಾರೆ. ಅವರ ಬದುಕಿನ ಎಪ್ಪತ್ತಮೂರು ವರ್ಷಗಳಿಗೆ ಸಂಬಂಧಿಸಿದ ಅವರಿಗೆ ಹೇಳಬೇಕೆನಿಸಿದ ವೃತ್ತಾಂತ ಮತ್ತು ಸಂಗತಿಗಳನ್ನು ಒಳಗೊಂಡ ಆತ್ಮಚರಿತ್ರೆಯಾಗಿದೆ. ಮೊದಲ ಸಂಪುಟವು 457 ಪುಟಗಳಷ್ಟಿದ್ದು ಮಾಸ್ತಿಯವರು ತಮ್ಮ ಶಿಕ್ಷಣವನ್ನು ಮುಗಿಸಿ ಸಿವಿಲ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಪ್ರೊಬೇಷನರಿ ಅಸಿಸ್ಟೆಂಟ್ ಆಗಿ ನೇಮಕಗೊಳ್ಳುವವರೆಗೆ ಇದೆ. ಅಧಿಕಾರವನ್ನು ಸೇವಾವಕಾಶ ಎಂದು ಭಾವಿಸಿಕೊಂಡು ಬದುಕಿದ ವ್ಯಕ್ತಿಯೇ ಮಾಸ್ತಿ. ಒಂದೆಡೆ ವೃತ್ತಿಕ್ಷಮತೆ, ಮತ್ತೊಂದೆಡೆ ಸಾಹಿತ್ಯ ಸೃಷ್ಟಿ –ಇವೆರಡು ಅವರ ವ್ಯಕ್ತಿತ್ವ ವಿಕಸನಗೊಳ್ಳುತ್ತ ಹೋಗುವುದನ್ನು ತಿಳಿಸುತ್ತದೆ. ಮೂರನೆಯ ಭಾಗವು 500 ಪುಟಗಳಷ್ಟು ಸುದೀರ್ಘವಾದ ಗ್ರಂಥವಾಗಿದೆ. ಮಾಸ್ತಿಯವರೇ ಹೇಳುವಂತೆ ಇದರ ಮೊದಲರ್ಧ ನಾನು ದಕ್ಷ ಅಧಿಕಾರಿಯೆಂದು ಅಕೌಂಟ್ಸ್ ಇಲಾಖೆಯ ಮುಖ್ಯಾಧಿಕಾರಿಯಾಗಿ ನೇಮಕ ಪಡೆದಂದಿನಿಂದ ಮೊದಲಾಗಿ, ಮಂತ್ರಿ ಸ್ಥಾನ ದೊರೆಯಲಿಲ್ಲವೆಂಬ ಕಾರಣದಿಂದ ನಾನು ಅಧಿಕಾರದಿಂದ ನಾನಾಗಿ ನಿವೃತ್ತಿ ಪಡೆದಂದಿನಿಂದ ಈಚಿನ ವಿಶ್ರಾಂತ ಜೀವನದ ವ್ಯವಹಾರವನ್ನು ತಿಳಿಸುತ್ತದೆ. ಹಾಗೆಯೇ ನನಗೆ ಇಷ್ಟರಾದ ಪರಿಚಿತರಾದ, ಹಲವು ಮಹನೀಯರ ವ್ಯಕ್ತಿ ಚಿತ್ರಣಗಳನ್ನು ಕೊಡದೆ ಉಳಿಸಿದೆ (ಪು–1 ಮುನ್ನುಡಿ ಭಾಗ–3).

ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಕುರಿತು

ಮಾಸ್ತಿಯವರು ಭಾರತಮಾತೆಯ ಸುಪುತ್ರರ ಜೀವನ ಚರಿತ್ರೆಯನ್ನು ಕುರಿತು ಬರೆದಿದ್ದಾರೆ. ಅವುಗಳಲ್ಲಿ ಶ್ರೀ ರವೀಂದ್ರನಾಥ ಠಾಗೂರ್ ಮತ್ತು ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತ ಎರಡು ಜೀವನ ಚರಿತ್ರೆಗಳು. 1935ರಲ್ಲಿ ಶ್ರೀ ರವೀಂದ್ರನಾಥ ಠಾಗೂರ್‌ರ ಜೀವನ ಚರಿತ್ರೆಯು ಪ್ರಕಟವಾಯಿತು. ಇದರಲ್ಲಿ ಠಾಗೂರರ ಬದುಕಿನ ಸಂಕ್ಷಿಪ್ತ ಪರಿಚಯವಿದೆ. ಅವರ ಕೃತಿಗಳು, ಅವರು ಸ್ಥಾಪಿಸಿದ 'ಶಾಂತಿನಿಕೇತನ' ಠಾಗೂರರ ಆದರ್ಶ ಜೀವನ ಇವೇ ಮುಂತಾದವು.

ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತ ಕೃತಿಯು ರಾಮಕೃಷ್ಣ ಪರಮಹಂಸರ ಜನ್ಮಶತಮಾನೋತ್ಸವ ಸಂದರ್ಭಕ್ಕೆ ತಮ್ಮ ಕಾಣಿಕೆ ಎಂಬಂತೆ ಈ ಕೃತಿಯನ್ನು ಲೋಕಾರ್ಪಣೆ ಮಾಡಿದ್ದಾರೆ.

ಮಾಸ್ತಿಯವರ ಇಂಗ್ಲಿಷ್ ಕೃತಿಗಳು

ಈಗಾಗಲೇ ತಿಳಿಸಿರುವಂತೆ ಮಾಸ್ತಿಯವರ ಮಾತೃಭಾಷೆ ತಮಿಳು, ಆಡಳಿತ ಭಾಷೆ ಇಂಗ್ಲಿಷ್, ಕೃಷಿ ಮಾಡಿದ್ದು ಕನ್ನಡ ಭಾಷೆಯಲ್ಲಿ. ಇವರು 1937ರಿಂದ ಹಲವಾರು ಇಂಗ್ಲಿಷ್ ಕೃತಿಗಳನ್ನು ರಚಿಸಿದರು. Popular Culture in Karnataka (1937) The Poetry of Valmiki (1940), Subbanna (1943), Short Stories 1, 2, 3, 4 (1943-44), Ravindranath Tagore (0000), Essays, Addresses (1975), Rajaji Vol. I & II (1975) Srimad Bhagavadgita - A study (1978) Address (1980), Kalidasa (1980) Thoughts on religion (1983) Thinking of my life (1983) ಇವೇ ಮುಂತಾದ ಕೃತಿಗಳನ್ನು ಆಂಗ್ಲಭಾಷೆಯಲ್ಲಿ ಬರೆದು ಲೋಕಾರ್ಪಣೆ ಮಾಡಲಾಗಿ ಕನ್ನಡಿಗನೊಬ್ಬನ ವಿದ್ವತ್ತನ್ನು ಬೇರೆ ಭಾಷಿಕರು ತಿಳಿಯುವಂತಾಯಿತು.

ಮಾಸ್ತಿಯವರ ಅನುವಾದ ಕೃತಿಗಳು

ಮಾಸ್ತಿಯವರು ಸಾಹಿತ್ಯ ಕೃತಿ ಮಾಡುವ ಸಂದರ್ಭದಲ್ಲಿ ವಿಶ್ವದ ಮೂರು ಸಾಹಿತಿಗಳ ಕೃತಿಗಳನ್ನು ಓದಿ ಅರ್ಥಮಾಡಿಕೊಂಡಿದ್ದಾರೆ. ಅವರಿಗೆ ಬಹು ಮೆಚ್ಚುಗೆಯಾದ ಕವಿ ಎಂದರೆ 'ವಿಲಿಯಂ ಷೇಕ್ಸ್‌ಪಿಯರ್'. ಆತನ ಕೃತಿಗಳಾದ ಹ್ಯಾಮ್‌ಲೆಟ್, ಚಂಡಮಾರುತ, ಲಿಯರ್ ಮಹಾರಾಜ, ದ್ವಾದಶರಾತ್ರಿ, ಷೇಕ್ಸ್‌ಪಿಯರ್ ನಾಟಕದ ದೃಶ್ಯಗಳು–1, (ಆಯ್ದ 15 ದೃಶ್ಯಗಳು), ಷೇಕ್ಸ್‌ಪಿಯರ್ ದೃಶ್ಯಗಳು ಭಾಗ–2 (ಆಯ್ದ 9 ದೃಶ್ಯಗಳು), ಷೇಕ್ಸ್‌ಪಿಯರ್ ದೃಶ್ಯಗಳು–3

(ಹೆನ್ರಿ 4 ಮತ್ತು ಹೆನ್ರಿ 5ರ ಅನುವಾದ). ಹೀಗೆ ಮಾಸ್ತಿಯವರು ಷೇಕ್ಸ್‌ಪಿಯರ್‌ನ ಕೆಲವು ಪ್ರಮುಖ ನಾಟಕಗಳನ್ನು ಭಾಷಾಂತರಿಸಿ ಕನ್ನಡಿಗರಿಗೆ ಉಣಬಡಿಸಿದ್ದಾರೆ.

ಪತ್ರಿಕೋದ್ಯಮಿಯಾಗಿ ಮಾಸ್ತಿ

ಮಾಸ್ತಿಯವರು ಪತ್ರಿಕೋದ್ಯಮಿಯಾಗಿ 1944ರಿಂದ 1965ರವರೆಗೆ ದುಡಿದರು. ಪತ್ರಿಕೆಯ ಹೆಸರು 'ಜೀವನ' ಎಂದು. ಇದು 1939ರಲ್ಲೇ ಧಾರವಾಡದಲ್ಲಿ ಪ್ರಾರಂಭವಾಯಿತು. ನವೆಂಬರ್ ತಿಂಗಳಿನಲ್ಲಿ ಮೊದಲ ಸಂಚಿಕೆ ಪ್ರಕಟವಾಯಿತು. ಎರಡನೆಯ ಮಹಾಯುದ್ಧದಿಂದಾಗಿ ಪತ್ರಿಕೆಗೆ ಕಾಗದ ದೊರೆಯುವುದು ಕಷ್ಟವಾಯಿತು. ವರಮಾನಕ್ಕಿಂತಲೂ ಖರ್ಚು ಹೆಚ್ಚಾಗಿತ್ತು. ಮಾಸ್ತಿಯವರು 1944ರಲ್ಲಿ ಸ್ವಯಂ ನಿವೃತ್ತಿಯ ನಂತರ ಪತ್ರಿಕೆಯನ್ನು ಧಾರವಾಡದಿಂದ ಬೆಂಗಳೂರಿಗೆ ತಂದರು. ಅಂದು ಇಂದಿನಂತೆ ಹೆಚ್ಚಿನ ಚಂದಾದಾರರಿರಲಿಲ್ಲ. ಅಂದು ಪತ್ರಿಕೋದ್ಯಮ ಲಾಭದಾಯಕವೂ ಆಗಿರಲಿಲ್ಲ. ಮಾಸ್ತಿಯವರು ಸೊಗಸಾದ ವಿಶೇಷ ಸಂಚಿಕೆಗಳನ್ನು ತಂದರು. ಭಾರತೀಯ ಕಾವ್ಯ ವಿಶೇಷ ಸಂಚಿಕೆ, ವಿಮರ್ಶನಾ ವಿಶೇಷ ಸಂಚಿಕೆ, ಗ್ರಂಥ ಪರಿಚಯ ವಿಶೇಷ ಸಂಚಿಕೆ, ವಿಶ್ವೇಶ್ವರಯ್ಯ ವಿಶೇಷ ಸಂಚಿಕೆ, ಬೆನಗಲ್ ರಾಮರಾವ್ ವಿಶೇಷ ಸಂಚಿಕೆ ಇವೇ ಮುಂತಾದವು. ಕನ್ನಡದ ಹಿರಿಯ ಕವಿಗಳಾದ ಬೇಂದ್ರೆ, ಕುವೆಂಪು, ವಿ.ಕೃ. ಗೋಕಾಕ್, ವಿ.ಸೀ., ಪು.ತಿ.ನ., ತೀ.ನಂ.ಶ್ರೀ. ಅವರೇ ಅಲ್ಲದೆ ಉದಯೋನ್ಮುಖ ಕವಿಗಳಾದ ಎಸ್.ಎ. ಪರಮೇಶ್ವರಭಟ್ಟರು, ಜಿ.ಎಸ್. ಶಿವರುದ್ರಪ್ಪನವರು, ಚನ್ನವೀರ ಕಣವಿ ಇವರೇ ಮುಂತಾದ ಕವಿಗಳ ನಾಟಕಗಳು, ಕವಿತೆಗಳು, ಬರಹಗಳನ್ನು ಪ್ರಕಟಿಸುತ್ತಿದ್ದರು.

ಮಾಸ್ತಿಯವರ ಸಣ್ಣಕತೆಗಳು

'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಮಾಸ್ತಿಯವರು ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ದುಡಿದಿದ್ದಾರೆ. ನೂರಾರು ಕೃತಿಗಳನ್ನು ಓದುಗರಿಗೆ ಉಣಬಡಿಸಿದ್ದಾರೆ. ಒಂದೊಂದೂ ವೈವಿಧ್ಯಮಯವಾಗಿವೆ. ಹೀಗಾಗಿ ಮಾಸ್ತಿಯವರಿಗೆ 1968ರಲ್ಲಿ 'ಕೇಂದ್ರಸಾಹಿತ್ಯ ಅಕಾಡೆಮಿ'ಯ ಪ್ರಶಸ್ತಿ ಲಭಿಸಿತು. 'ರಂಗನ ಮದುವೆ' ಕಥೆಯಿಂದ 'ಮಾತುಗಾರ ರಾಮಣ್ಣ' ಕಥೆಯವರೆಗೆ ನೂರೊಂದು ಕತೆಗಳ ವಸ್ತು ರಚನೆಗಳು ವೈವಿಧ್ಯಮಯವಾಗಿವೆ. 'ಹೇಮಕೂಟದಿಂದ ಬಂದ ಮೇಲೆ' ಮತ್ತು 'ಗೌತಮಿ ಹೇಳಿದ ಕತೆ' ಇವು ಮಾಸ್ತಿಯವರೇ ಸೃಷ್ಟಿಸಿರುವ ಪುರಾಣ ಕತೆಗಳು. ಎರಡು ಕತೆಗಳು ಕಾಳಿದಾಸನ ಅಭಿಜ್ಞಾನ ಶಾಕುಂತಲಕ್ಕೆ ಸಂಬಂಧಿಸಿದವುಗಳಾಗಿವೆ. 'ವೆಂಕಟಿಗನ ಹೆಂಡತಿ' ಆಂಗ್ಲ

ನೌಕಾ ಕ್ಯಾಪ್ಟನ್. ಈ ಎರಡು ಕತೆಗಳು ಹೆಣ್ಣಿನ ಪತನದ ಕತೆಗಳಾಗಿವೆ. ಮೊಸರಿನ ಮಂಗಮ್ಮ ಕಥೆಯು ಲಘು ಹಾಸ್ಯದಿಂದ ಕೂಡಿದ್ದು ಮಾನವ ಸ್ವಭಾವಗಳ ಅನಾವರಣದಲ್ಲಿ ಕ್ರಿಯಾಶೀಲವಾಗುವುದು. 'ವೆಂಕಟಶಾಮಿಯ ಪ್ರಣಯ' ಈ ಕಥೆ ನಡೆದದ್ದು ಹಳ್ಳಿಯಲ್ಲಿ. ಅದನ್ನು ಹೇಳಿದವನು ರಂಗಸ್ವಾಮಿ. ಅದನ್ನು ಕೇಳಿದವನು ಕಥೆಗಾರ. ಇಲ್ಲಿ ಇಬ್ಬರು ಸೂತ್ರಧಾರಿಗಳು. ದೊಂಬರ ಹುಡುಗಿಗೆ ಮನಸೋತ ವೆಂಕಟಶಾಮಿಯ ಕತೆ ಪರಿಣಾಮಗೊಳ್ಳುತ್ತದೆ. ಡೊಂಬರ ಹುಡುಗಿಗೆ ಮನಸೋತ ವೆಂಕಟಶಾಮಿಯ ಕಥೆ ದುರಂತದಲ್ಲಿ ಕೊನೆಗೊಳ್ಳುತ್ತದೆ. 'ಆಚಾರ್ಯರ ಪತ್ನಿ' ಈ ಕಥೆಯು ಮಾನವ ಜನಾಂಗಕ್ಕೆ ಹೊಸ ಬೋಧೆಯನ್ನು ನೀಡಿದ ಆಚಾರ್ಯ ರಾಮಾನುಜಾಚಾರ್ಯರ ದಾಂಪತ್ಯಕ್ಕೆ ಸಂಬಂಧಿಸಿದ್ದು. ಆಚಾರ್ಯರು ತಮ್ಮ ಕಿರಿಯ ವಯಸ್ಸಿನ ಮಡದಿಯ ಹಠಮಾರಿತನಕ್ಕೆ ಬೇಸತ್ತು ಸಂಸಾರವನ್ನು ತ್ಯಜಿಸಿ ಬಂದದ್ದು. ಮಾಸ್ತಿಯವರ ಕಥೆಗಳಲ್ಲಿ ನ್ಯಾಯ ದಾನಕ್ಕೆ ಸಂಬಂಧಿಸಿದ 'ಬಾದಷಹನ ನ್ಯಾಯ' ಜೋಗ್ಯರ ಅಂಜಪ್ಪನ ಕೋಳಿ ಕತೆ ಇಲ್ಲಿಯ ತೀರ್ಪು 'ಇನ್ನೊಂದು ಹಳೆಯ ಕತೆ' ಬಾದಷಹನ ಮರಣದಂಡನೆ, ಸುಭೇದಾರನಿಗೆ ಪ್ಯಾದೆ ಮಾತು ಇವೇ ಮುಂತಾದ ಕತೆಗಳು. ಇಷ್ಟೇ ಅಲ್ಲದೆ ಅಶೋಕನು ಕಳಿಂಗ ಯುದ್ಧದ ಬಳಿಕ ಬೌದ್ಧಧರ್ಮ ಸ್ವೀಕರಿಸಿದ ಕತೆಯನ್ನು 'ಪ್ರಿಯದರ್ಶಿಕ ಅಶೋಕ', 'ರಂಗನಹಳ್ಳಿಯ ರಾಮ', 'ಮಸುಮತ್ತಿ' ಲಿಯರ್ ದೊರೆಯ ಮಗಳುದಿರು, 'ಆನ್ ಷೇಕ್ಸ್‌ಪಿಯರ್', 'ಮುಪ್ಪಿನ ಚಪಲ', ಬೇಬಿಲಾನ್ ಕುಮಾರಿ, 'ಪೊಲೋನಿಯ ಹೇಳಿಕೆ', 'ಕೊನೆಯ ಕಾಪೆಟ್', 'ಕರಿಯ ಸವಾರ', 'ರಾಣಿ ಹಾಟ್‌ಷೇಪ್ ಸೀಟು', ಧರ್ಮಕಿಂಕರ ಫಿಟ್ಸ್ ಸ್ಟೀಫನ್, ಅಲೆಕ್ಸಾಂಡರನ ಗುರು ಕಾಣಿಕೆ, ಮಾಸ್ಟರ್ ವಿಲಿಯಂ, ಸಂಯಮಿ ಕೇಟೊ, ಡೊಬಾಯಿ ಪಾದ್ರಿಯ ಒಂದು ಪತ್ರ ಆಂಬ್ರೊಸ್ ಅಪ್ಪಾಜಿ ಅಟಿಲನ ದಾಕ್ಷಿಣ್ಯ ಬೋರ್ಜಿಯಾ ತಂದೆ ಮಗ ಇವೇ ಮುಂತಾದವು.

ಸಾಹಿತ್ಯ ಪರಿಷತ್ತಿನೊಂದಿಗಿನ ಒಡನಾಟ

1915ರಲ್ಲಿ ಆಳರಸರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್ ಎಂ.ವಿ.ಯವರ ಪರಿಶ್ರಮದಿಂದ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಹೆಚ್ಚಾಗಿ ಒಡನಾಟ ಇಟ್ಟುಕೊಂಡರು. ಪರಿಷತ್ತನ್ನು ಉಳಿಸಿ ಬೆಳೆಸಲು ಶ್ರಮಿಸಿದರು. ಈಗಾಗಲೇ ನಾಡಿನಾದ್ಯಂತ ಸಮ್ಮೇಳನಗಳು ನಡೆಯುತ್ತಿದ್ದವು. ಈ ಮೂಲಕ ಎಲ್ಲೆಡೆ ಕನ್ನಡ ಸಾಹಿತ್ಯ, ಸಂಸ್ಕೃತಿ ಪಸರಿಸುತ್ತಿತ್ತು. ಶಿವಮೊಗ್ಗ ರಬಕವಿ, ಹರಪನಹಳ್ಳಿ, ಮದ್ರಾಸ್ ಮತ್ತು ಕಾಸರಗೋಡುಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದು ದ.ರಾ. ಬೇಂದ್ರೆ, ಬಸವನಾಳ, ಸಿ.ಕೆ.

ವೆಂಕಟರಾಮಯ್ಯ, ಟಿ.ಪಿ. ಕೈಲಾಸಂ ಮತ್ತು ತಿರುಮಲೆ ತಾತಾಚಾರ್ಯ ಶರ್ಮರು ಅನುಕ್ರಮವಾಗಿ ಅಧ್ಯಕ್ಷರಾಗಿದ್ದರು. ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ದುಡಿಯುತ್ತಿರುವ ಮಾಸ್ತಿಯವರನ್ನು 1929ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಂಭ್ರಮಿಸಿದರು. ಇದು ಮಾಸ್ತಿಯವರು ಕನ್ನಡಕ್ಕಾಗಿ ದುಡಿಯುತ್ತಿದ್ದ ಸಂಕೇತವೆಂದೇಳಬಹುದು. 1942ರಲ್ಲಿ ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ವಿಭಾಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. 1943ರಿಂದ 1948ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ 1953–54ರವರೆಗೆ ಅಧ್ಯಕ್ಷರಾಗಿ ದುಡಿದರು. 1946ರಲ್ಲಿ ಮದರಾಸಿನಲ್ಲಿ ನಡೆದ ದಕ್ಷಿಣ ಭಾಷೆಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. 1954ರಲ್ಲಿ ಪೂನಾದಲ್ಲಿ ಜರುಗಿದ ಭಾಷಾ ಸಮ್ಮೇಳನದಲ್ಲಿ ರಾಷ್ಟ್ರ ಭಾಷಾ ವಿಭಾಗದ ಅಧ್ಯಕ್ಷರಾಗಿದ್ದರು.

ಪ್ರಶಸ್ತಿ ಪುರಸ್ಕಾರಗಳು

ಮಾಸ್ತಿಯವರ ವಿದ್ಯೆ ವಿದ್ವತ್ತನ್ನು ಗೌರವಿಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿದವು. ಇಡೀ ರಾಷ್ಟ್ರವೇ ಗೌರವಿಸಿತು. 1956ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ 1977ರಲ್ಲಿ ಮೈಸೂರು ವಿಶ್ವವಿದ್ಯಾಲಯಗಳು ಮಾಸ್ತಿಯವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದವು. 1956ರಲ್ಲಿ ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ಲೇಖಕರ ಸಮ್ಮೇಳನದ ಗೌರವ ಅಧ್ಯಕ್ಷರಾಗಿ ಆಯ್ಕೆ. 1964ರಲ್ಲಿ ಇಂಡಿಯನ್ ಪಿ.ಇ.ಎನ್. ಸಂಸ್ಥೆಯ ಉಪಾಧ್ಯಕ್ಷರಾಗಿ ಆಯ್ಕೆ, ಅದೇ ಸಂಸ್ಥೆಗೆ 1976ರಲ್ಲಿ ಗೌರವ ಅಧ್ಯಕ್ಷರಾಗಿ ಆಯ್ಕೆ. 1974ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋ ಆಗಿ ಆಯ್ಕೆ. 1968ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1972ರಲ್ಲಿ ಪಿ.ಇ.ಎನ್. ಸಂಸ್ಥೆಯ ಭಾರತೀಯ ವಿಭಾಗದ ಅಧ್ಯಕ್ಷರಾಗಿ ಆಯ್ಕೆ, 1980ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. 1983 ಜ್ಞಾನಪೀಠ ಪ್ರಶಸ್ತಿ, 1984ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸನ್ಮಾನ. ಮೈಸೂರು ಮಹಾರಾಜರಿಂದ ರಾಜಸೇವಾ ಪ್ರಸಕ್ತ ಬಿರುದು.

ಹಳ್ಳಿಯಲ್ಲಿ ಹುಟ್ಟಿದರೂ ಪೆರಿಯತ್ (ದೊಡ್ಡಮನೆ) ಕುಟುಂಬಕ್ಕೆ ಸೇರಿದ್ದರೂ ದೊಡ್ಡ ಬಡತನದ ಮೂಟೆಯನ್ನು ಹೊತ್ತುಕೊಂಡು ಒಲ್ಲದ ಮನಸ್ಸಿನಿಂದ ವಾರನ್ನದ ಶಿಕ್ಷಣ ಪಡೆದು ಶೈಕ್ಷಣಿಕವಾಗಿ ಎತ್ತರಕ್ಕೆ ಬೆಳೆದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸರ್ಕಾರದ ಉನ್ನತ ಹುದ್ದೆಯನ್ನು ಪಡೆದರು. ನೌಕರಿಯುಲ್ಲಿದ್ದಾಗಲೂ ಅವರ ಸೃಜನಶೀಲ ಮನಸ್ಸು ಕ್ರಿಯಾಶಾಲಿಯಾಗಿದ್ದರೂ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ

ಲೋಪವಾಗದಂತೆ ದಕ್ಷತೆಯನ್ನು ಮೆರೆದರು. ಮಾಸ್ತಿಯವರು ಕನ್ನಡ ಭಾಷೆಗೆ, ಸಾಹಿತ್ಯಕ್ಕೆ ಹೊಸ ಅರ್ಥ, ಆಯಾಮ ತಂದುಕೊಟ್ಟ ಧೀಮಂತ ಸಾಹಿತಿ, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅವರದು ಸಿಂಹಪಾಲು. ಕನ್ನಡ ಭಾಷೆಗೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಮಾಸ್ತಿಯವರಿಗೆ 1983ರಲ್ಲಿ 'ಜ್ಞಾನಪೀಠ ಪ್ರಶಸ್ತಿ' ಬಂದಾಗ ಒಂದೂವರೆ ಲಕ್ಷ ರೂಪಾಯಿಗಳ ಪ್ರಶಸ್ತಿಯ ಹಣವನ್ನು ಎರಡು ದತ್ತಿಗಳನ್ನು ಆರಂಭಿಸಿದರು. ಅದರಲ್ಲಿ ಒಂದು ಮಾಸ್ತಿ ಕನ್ನಡ ಸೇವಾನಿಧಿಗೆ ಒಂದು ಲಕ್ಷ ರೂಪಾಯಿ ಇನ್ನೊಂದು ಮಾಸ್ತಿ ಪ್ರಕಾಶನ ನಿಧಿಗೆ ಐವತ್ತು ಸಾವಿರ ರೂಪಾಯಿಗಳನ್ನು ನೀಡಿದರು. ಇವುಗಳಲ್ಲದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ತಮ್ಮ ತಂದೆ, ತಾಯಿಯರ ಹೆಸರಿನಲ್ಲಿ ಒಂದು ದತ್ತಿಯನ್ನಿರಿಸಿದ್ದಾರೆ. ಮಾಸ್ತಿಯವರು ಕನ್ನಡ ಭಾಷೆಗೆ ಸಾಹಿತ್ಯಕ್ಕೆ ಕೊಟ್ಟಿರುವ ಗಣನೀಯ ಕೊಡುಗೆಯನ್ನು ಕಂಡು ನಾಡಿನ ಗಣ್ಯರಾದ ಕನ್ನಡದ ಕಣ್ವ ಬಿ.ಎಂ.ಶ್ರೀಯವರು ಮಾಸ್ತಿಯವರನ್ನು ನಾಡಿನ 'ಪ್ರೇಮ ಪುತ್ಥಳಿ' ಎಂದು ಶ್ಲಾಘಿಸಿದ್ದಾರೆ. ವಿ.ಕೃ. ಗೋಕಾಕ್‌ರವರು 'ಮಾಸ್ತಿ ಕನ್ನಡದ ಆಸ್ತಿ' ಎಂದರೆ ವರಕವಿ ಬೇಂದ್ರೆಯವರು 'ಅಣ್ಣ' ಎಂದಿದ್ದಾರೆ. ತುಂಬು ಜೀವನ ನಡೆಸಿದ ಕನ್ನಡದ ಕುವರ ಮಾಸ್ತಿ ವೆಂಕಟೇಶ ಅಯ್ಯಂಗಾರರು 1986ರಲ್ಲಿ ತಮ್ಮ ತೊಂಬತ್ತೈದನೆಯ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

ಪ್ರಶಸ್ತಿ-ಗೌರವಗಳು

1929: ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

1942: ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ವಿಭಾಗದ ಅಧ್ಯಕ್ಷತೆ.

1946: ಮದರಾಸಿನಲ್ಲಿ ನಡೆದ ದಕ್ಷಿಣ ಭಾರತ ಸಾಹಿತ್ಯಗಳ ಸಮ್ಮೇಳನದ ಅಧ್ಯಕ್ಷತೆ.

1954: ಪುಣೆ ವಿಶ್ವವಿದ್ಯಾಲಯದ ಭಾಷಾ ಸಮ್ಮೇಳನದಲ್ಲಿ ರಾಷ್ಟ್ರಭಾಷಾ ವಿಭಾಗದ ಅಧ್ಯಕ್ಷತೆ.

1956: ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. ಪದವಿ.

1961: ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಲೇಖಕರ ಸಮ್ಮೇಳನದ ಅಧ್ಯಕ್ಷತೆ.

1964: ಪಿ.ಇ.ಎನ್. ಸಂಸ್ಥೆಯ ಭಾರತೀಯ ವಿಭಾಗದ ಉಪಾಧ್ಯಕ್ಷತೆ

1968: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

1972: ಪಿ.ಇ.ಎನ್. ಸಂಸ್ಥೆಯ ಭಾರತೀಯ ವಿಭಾಗದ ಅಧ್ಯಕ್ಷತೆ.

1974: ಕೇಂದ್ರ ಸಾಹಿತ್ಯ ಅಕಾಡೆಮಿಯ ಗೌರವ ಫೆಲೋಷಿಪ್.

1977: ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್. ಪದವಿ.

1980: ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

1983: ಜ್ಞಾನಪೀಠ ಪ್ರಶಸ್ತಿ.

1984: ಕರ್ನಾಟಕ ಸರ್ಕಾರದ ಸನ್ಮಾನ.

1985: 'ಪ್ರಬುದ್ಧ ಕರ್ನಾಟಕ'ದ 'ಮಾಸ್ತಿ ಸಂಚಿಕೆ' ಪ್ರಕಟಣೆ.

ಮಾಸ್ತಿ ವಿರಚಿತ ಸಮಗ್ರ ಸಾಹಿತ್ಯ ಸಂಪದ

1. ಕೆಲವು ಸಣ್ಣ ಕತೆಗಳು – 1910–20
2. ಬಿನ್ನಹ (ಕಾವ್ಯ) – 1922
3. ಶಾಂತಾ (ನಾಟಕ) – 1923
4. ಸಾವಿತ್ರಿ (ನಾಟಕ) – 1923
5. ಸಣ್ಣ ಕತೆಗಳು – (1924)
6. ಸಾಹಿತ್ಯ (ಪ್ರಬಂಧ) – 1924
7. ಅರುಣ (ಕಾವ್ಯ) – 1924
8. ವಿಮರ್ಶೆ – 1924
9. ಉಷಾ (ನಾಟಕ) – (1927)
10. ಸುಬ್ಬಣ್ಣ (ನೀಳ್ಗತೆ) – 1928
11. ತಾಳೀಕೋಟೆ (ನಾಟಕ) – 1929
12. ವಿಮರ್ಶೆ–2 – 1929
13. ನಾಲ್ಕು ಸಣ್ಣ ಕತೆಗಳು – (1930)
14. ಕನ್ನಡದ ಸೇವೆ – 1930
15. ಮಂಜುಳ (ನಾಟಕ) – 1930
16. ತಾವರೆ (ಕಾವ್ಯ) – 1930
17. ಜನತೆಯ ಸಂಸ್ಕೃತಿ (ಪ್ರಬಂಧ) – 1931

18. ಚೆಲುವು (ಕಾವ್ಯ) – 1931
19. ಶಿವಛತ್ರಪತಿ (ನಾಟಕ) – 1932
20. ವಿಮರ್ಶೆ–3 – 1933
21. ಯಶೋಧರಾ (ನಾಟಕ) – 1933
22. ಮಲಾರ (ಕಾವ್ಯ) – 1933
23. ಸಣ್ಣಕತೆಗಳು–4 – 1934
24. ರವೀಂದ್ರನಾಥ ಠಾಕೂರರು (ಜೀವನ ಚರಿತ್ರೆ) – 1935
25. ಸಣ್ಣಕತೆಗಳು–5 – 1936
26. ಶ್ರೀ ರಾಮಕೃಷ್ಣ (ಜೀವನ ಚರಿತ್ರೆ) – 1936
27. Sri Ramakrishna - 1936
28. ತಿರುಪಾಣಿ (ಕಾವ್ಯ ನಾಟಕ) – 1937
29. ಜನಪದ ಸಾಹಿತ್ಯ (ಪ್ರಬಂಧ) – 1937
30. Popular Culture in Karnataka - 1937
31. ಕಾಕನಕೋಟೆ (ನಾಟಕ) – 1938
32. ಆದಿಕವಿ ವಾಲ್ಮೀಕಿ (ರಾಮಾಯಣದ ಸಮೀಕ್ಷೆ) – 1938
33. ವಿಮರ್ಶೆ–4 – 1939
34. ಸಣ್ಣಕತೆಗಳು–6 – 1940
35. ಗೌಡರಮಲ್ಲಿ (ಕಾವ್ಯ) – 1940
36. The Poetry of Valmiki - 1940
37. ರಾಮನವಮಿ (ಕಾವ್ಯ) – 1940
38. ಮೂಕನ ಮಕ್ಕಳು (ಕಾವ್ಯ) – 1943
39. Subbanna (A story) - 1943
40. Short Stories-1 - 1943
41. Short Stories-2 - 1943
42. Short Stories-3 - 1943

43. Short Stories-4 - 1944

44. ತಾಯ್ನುಡಿಯ ತಮ್ಮಡಿ
(ಅಖಿಲ ಭಾರತ ಓರಿಯಂಟಲ್ ಕಾನ್‌ಫರೆನ್ಸ್‌ನ ಭಾಷಣ) – 1944

45. ನವರಾತ್ರಿ – (2 ಕಥನ ಕವನಗಳು) – 1944

46. ನವರಾತ್ರಿ – (4 ಕಥನ ಕವನಗಳು) – 1945

47. ಚಿತ್ರಾಂಗದಾ
(ರವೀಂದ್ರನಾಥ ಠಾಕೂರರ ನಾಟಕಾನುವಾದ) – 1945

48. ನವರಾತ್ರಿ – (3 ಕಥನ ಕವನಗಳು) – 1946

49. ಸುನೀತಾ (ಕಾವ್ಯ) – 1946

50. ಪ್ರಸಂಗ (ಘಟನೆ ಪ್ರೇರಿತ ಲೇಖನಗಳು) – 1946

51. Rabindranath Tagore (Biography) - 1946

52. ಸಣ್ಣ ಕತೆಗಳು–7 – 1947

53. ಸಣ್ಣ ಕತೆಗಳು–8 – 1947

54. ನವರಾತ್ರಿ – (5 ಕಥನ ಕವನಗಳು) – 1948

55. ಸಣ್ಣ ಕತೆಗಳು–9 – 1949

56. ಚೆನ್ನಬಸವನಾಯಕ (ಐತಿಹಾಸಿಕ ಕಾದಂಬರಿ) – 1950

57. ಸಣ್ಣ ಕತೆಗಳು–10 – 1950

58. ಮನವಿ (ಕಾವ್ಯ) – 1951

59. ಪೂಜನ (ಮುನ್ನುಡಿಗಳು) – 1951

60. ಚಿಂತನ (ಚಿಂತನ ಟಿಪ್ಪಣಿಗಳು) – 1952

61. ಭಾರತ ತೀರ್ಥ (ಮಹಾಭಾರತದ ಸಮೀಕ್ಷೆ) – 1952

62. ನವರಾತ್ರಿ–1 (ಕಥನ ಕವನಗಳು) – 1953

63. ಮಾಸತಿ (ಕಾವ್ಯ ನಾಟಕ) – 1953

64. ಅನಾರ್ಕಲಿ (ನಾಟಕ) – 1955

65. ಚಿಕವೀರ ರಾಜೇಂದ್ರ (ಐತಿಹಾಸಿಕ ಕಾದಂಬರಿ) – 1956

66. ಕನ್ನಡಲೆಂಕ (ಕರ್ನಾಟಕ ವಿ.ವಿ. ಘಟಿಕೋತ್ಸವ ಭಾಷಣ) – 1957

67. ಆರು ಸಣ್ಣಕತೆಗಳು – 1957

68. Chenna Basava Nayaka (Novel)
(Translation by Navaratna Rama Rao) - 1957

69. ಹ್ಯಾಮ್‌ಲೆಟ್ (ಷೇಕ್ಸ್‌ಪಿಯರ್ ನಾಟಕದ ಅನುವಾದ) – 1958

70. ಚಂಡಮಾರುತ (ಷೇಕ್ಸ್‌ಪಿಯರ್ ನಾಟಕದ ಅನುವಾದ) – 1959

71. ಲಿಯರ್ ಮಹಾರಾಜ (ಷೇಕ್ಸ್‌ಪಿಯರ್ ನಾಟಕದ ಅನುವಾದ) – 1959

72. ದ್ವಾದಶ ರಾತ್ರಿ (ಷೇಕ್ಸ್‌ಪಿಯರ್ ನಾಟಕದ ಅನುವಾದ) – 1959

73. ಶ್ರೀ ಕೃಷ್ಣಕರ್ಣಾಮೃತ (ಸಂಸ್ಕೃತ ಕಾವ್ಯ – ಕನ್ನಡ ಅನುವಾದ) – 1959

74. ನಮ್ಮ ನುಡಿ (ಭಾಷೆ ಬೆಳವಣಿಗೆ) – 1960

75. ಸರ್ ಎಂ. ವಿಶ್ವೇಶ್ವರಯ್ಯ (ಸಂಪಾದಿತ ಲೇಖನ ಸಂಗ್ರಹ) – 1960

76. ಷೇಕ್ಸ್‌ಪಿಯರ್ ದೃಶ್ಯಗಳು–1 (ಆಯ್ದ 15 ದೃಶ್ಯಗಳು) – 1963

77. ಪ್ರಸಂಗ–2 (ಘಟನೆ ಪ್ರೇರಿತ ಲೇಖನಗಳು) – 1963

78. ಪುರಂದರದಾಸ (ನಾಟಕ) – 1964

79. ಷೇಕ್ಸ್‌ಪಿಯರ್ ದೃಶ್ಯಗಳು–2 (ಆಯ್ದ 9 ದೃಶ್ಯಗಳು) – 1964

80. ಷೇಕ್ಸ್‌ಪಿಯರ್ ದೃಶ್ಯಗಳು–3
(ಹೆನ್ರಿ 4 ಮತ್ತು ಹೆನ್ರಿ 5ರ ಅನುವಾದ) – 1964

81. ಪ್ರಸಂಗ–3 (ಘಟನೆ ಪ್ರೇರಿತ ಲೇಖನಗಳು) – 1964

82. ಕನಕಣ್ಣ (ನಾಟಕ) – 1965

83. ಸಣ್ಣಕತೆಗಳು–12 – 1965

84–88. ಸಂಪಾದಕೀಯ (ಐದು ಭಾಗಗಳು) – 1967

89. ಸಾಹಿತ್ಯಲಾಲನೆ (ಪತ್ರಗಳು ಸಂಗ್ರಹ) – 1967

90. ಪ್ರಸಂಗ–4 (ಘಟನೆ ಪ್ರೇರಿತ ಲೇಖನಗಳು) – 1967

91. ಸಣ್ಣಕತೆಗಳು–13 – 1967

92. Short Stories-5 - 1968

93–95. ಭಾವ (3 ಭಾಗಗಳು: ಆತ್ಮಚರಿತ್ರೆ) – 1968–69

96. ಭಟ್ಟರ ಮಗಳು (ಗೀತನಾಟಕ) – 1969

97. ಸಂಕ್ರಾಂತಿ (ಕಾವ್ಯ) – 1969

98. ವಿಚಾರ (ಚಿಂತನೆಗಳು) – 1971

99. ಶ್ರೀರಾಮಪಟ್ಟಾಭಿಷೇಕ (ಕಥನ ಕಾವ್ಯ) – 1972

100. ಬಾನುಲಿ ದೃಶ್ಯಗಳು (ನಾಟಕಗಳು) – 1974

101. ಸಾಹಿತ್ಯ ಪ್ರೇರಣೆ (ಉಪನ್ಯಾಸ) – 1975

102. Essays & Addresses Etc., - 1975

103–104. Rajaji Vol. I & II (Biographical Sketch) - 1975

105. ಶೇಷಮ್ಮ (ನೀಳ್ಗತೆ) – 1976

106. ನವರತ್ನ ರಾಮರಾವ್ (ಉಪನ್ಯಾಸ) – 1976

107. ಪತ್ರಗಳು (ಮಾಸ್ತಿಯವರಿಗೆ ಬರೆದವು) – 1977

108. Srimad Bhagavadgita - A Study - 1977

109. ಕಾಳಿದಾಸ (ನಾಟಕ) – 1978

110. ಸಣ್ಣಕತೆಗಳು–14 – 1979

111. ಆರಂಭದ ಆಂಗ್ಲಸಾಹಿತ್ಯ (ಉಪನ್ಯಾಸ) – 1979

112. ನಮ್ಮ ಹೊಸ ಸಾಹಿತ್ಯದ ಪ್ರಾರಂಭ (ಉಪನ್ಯಾಸ) – 1979

113. ಅರ್ಚನ (ಪೂಜ್ಯ ಸ್ಮರಣೆ) – 1979

114. Addresses Etc., - 1980

115. Kalidasa (A play) - 1980

116. ಪ್ರಸಂಗ–5 (ಘಟನೆ ಪ್ರೇರಿತ ಲೇಖನಗಳು) – 1980

117. ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ – 1981

118. ಉತ್ತರಕಾಂಡ ವಿಚಾರ (ಪ್ರಬಂಧ) – 1981

119. ಅಂತರಗಂಗೆ (ಪ್ರಬಂಧ) – 1982

120. ಅಜ್ಜನ ದಾರಿ (ನಾಟಕ) – 1983

121. ಧರ್ಮಸಂರಕ್ಷಣೆ (ಪ್ರಬಂಧ) – 1983

122. Thoughts on Religion - 1983

123. Thinking of My Life - 1983

124. ಸಣ್ಣಕತೆಗಳು–15 – 1984

125. ವಿಮಲ ಮರಿಯಾನ್ (ನಾಟಕ) – 1985

126. ಮಾತುಗಾರ ರಾಮಣ್ಣ (ಬರೆದು ಮುಗಿಸಿದುದು) – 1985



ಡಿ.ವಿ.ಜಿ.

ಕನ್ನಡ ನಾಡಿನಾದ್ಯಂತ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವನ್ನು ಕೇಳದವರಿಲ್ಲ. ದೇವನಹಳ್ಳಿ ವೆಂಕಟರಮಣಪ್ಪ ಗುಂಡಪ್ಪನವರು, ಡಿ.ವಿ.ಜಿ. ಎಂದೇ ಎಲ್ಲರಿಗೂ ಚಿರಪರಿಚಿತರು. ಶಿಕ್ಷಣದಿಂದ ಮತ್ತು ಜ್ಞಾನಪೀಠ ಪ್ರಶಸ್ತಿಯಿಂದ ವಂಚಿತರಾದ ಕವಿ, ಲೇಖಕ, ಪತ್ರಕರ್ತ, ಬುದ್ಧಿಜೀವಿ, ಸಮಾಜಸುಧಾರಕ ಡಿ.ವಿ.ಜಿ.ಯವರು. ಇಂದಿನ ಕಾಲದಲ್ಲಿ ಹಣ, ಅಂತಸ್ತು ಮಾಡಬೇಕಾದರೆ ಶಿಕ್ಷಣ ಬೇಕು, ಸಮಾಜದಲ್ಲಿ ಗೌರವ ಸಂಪಾದಿಸಬೇಕೆಂದರೆ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದವರಾಗಿರಬೇಕು ಎಂಬ ಭಾವನೆಯನ್ನು ಹುಸಿಗೊಳಿಸಿದ ವ್ಯಕ್ತಿಯೇ ಡಿ.ವಿ.ಜಿ. ಕೊನೆಯವರೆಗೂ ಜೀವಿತಕಾಲದಲ್ಲಿ ಹಣ, ಆಸ್ತಿಗಾಗಿ ಆಸೆಪಡದೆ ಬಡತನವನ್ನೇ ವರಿಸಿದ ಏಕಮಾತ್ರ ಕವಿ.

ಇವರ ಪೂರ್ವಿಕರು ತಮಿಳುನಾಡಿನ ತಿರುಚನಾಪಳ್ಳಿಯಲ್ಲಿ ವಾಸಿಸುತ್ತಿದ್ದು ಅನಿವಾರ್ಯ ಕಾರಣಗಳಿಂದಾಗಿ ಕರ್ನಾಟಕದ ಮುಳಬಾಗಿಲಿನಲ್ಲೂ ನಂತರ ದೇವನಹಳ್ಳಿಯಲ್ಲೂ ನೆಲೆಸಿದರು. ಗುಂಡಪ್ಪನವರ ತಾತನ ಹೆಸರೂ ಗುಂಡಪ್ಪ ಎಂದೇ. ಇವರು ಶೇಖ್‌ದಾರರಾಗಿ ಸೇವೆ ಸಲ್ಲಿಸಿದರು. ಇವರ ಮಗ ವೆಂಕಟರಮಣಯ್ಯನವರು ಶಾಲಾ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರ ಮಗನೇ ಗುಂಡಪ್ಪ 1885 ಮಾರ್ಚ್ 17ನೇ ತಾರೀಖು ಜನಿಸಿದರು. ಶಾಲಾ ಮಾಸ್ತರನ ಮಗನಾದ್ದರಿಂದ ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳನ್ನು ಕಲಿಯಲು ಸಹಾಯವಾಯಿತು. ಮುಳಬಾಗಿಲಿನಲ್ಲಿ ಗುಂಡಪ್ಪನವರು ವಾಸಿಸುತ್ತಿದ್ದ ಮನೆಯ ಸುತ್ತಮುತ್ತ ಅನೇಕ ಸಂಗೀತಗಾರರು, ನರ್ತಕಿಯರ ಮನೆಗಳಿದ್ದವು. ಗುಂಡಪ್ಪನವರಲ್ಲಿ ಸುಪ್ತವಾಗಿದ್ದ ಕಲಾಭಿಜ್ಞತೆಗೆ ಇದು ಸಹಾಯವಾಯಿತು.

ಮನೆಯಲ್ಲಿ ಎಲ್ಲಾ ಅನುಕೂಲಗಳಿದ್ದುದರಿಂದ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕೆಂದು ವೆಂಕಟರಮಣಯ್ಯನವರು ತಮ್ಮ ಮಗನನ್ನು ಮೈಸೂರಿಗೆ ಕಳುಹಿಸಿದರು. ಅಲ್ಲಿ ಕಾನಕಾನಹಳ್ಳಿ ವರದಾಚಾರ್ಯರು, ಬಾಪು ಸುಬ್ಬರಾಯರು, ಬೆಳವಾಡಿ ದಾಸಪ್ಪನವರಿಂದ ಪಾಠ ಪ್ರವಚನಗಳಾದವು. ಮುಳಬಾಗಿಲಿನ ಮನೆಯಲ್ಲಿ ನಡೆದ ಅವಘಡಗಳಿಂದ (ಪ್ಲೇಗ್ ಕಾಯಿಲೆ) ಓದನ್ನು ಅರ್ಧಕ್ಕೆ ನಿಲ್ಲಿಸಿ ಮುಳಬಾಗಿಲಿಗೆ ಹಿಂತಿರುಗಬೇಕಾಯ್ತು. ಮುಳಬಾಗಿಲಿನಲ್ಲಿ ಓದು ಮುಂದುವರಿಸಿದರಾದರೂ 'ಮೆಟ್ರಿಕ್ಯುಲೇಷನ್' ಪರೀಕ್ಷೆಯಲ್ಲಿ ನಾಪಾಸಾದರು. ಅಲ್ಲಿಗೆ ವಿದ್ಯಾಭ್ಯಾಸ ಮೊಟಕುಗೊಂಡಿತು. 1904ರಲ್ಲಿ ಭಾಗೀರಥಮ್ಮ ಎಂಬ ಕನ್ಯೆಯೊಂದಿಗೆ ವಿವಾಹ ಜರುಗಿತು. ಗುಂಡಪ್ಪನವರು ಅನಿವಾರ್ಯ ಕಾರಣಗಳಿಂದ ಓದಿನಲ್ಲಿ ಆಸಕ್ತಿ ಕಳೆದುಕೊಂಡರು. ನಾಪಾಸಾದರೆ ವಿನಹ ಸಾಹಿತ್ಯದಲ್ಲಿ, ಸಂಗೀತದಲ್ಲಿ ಆಸಕ್ತಿ ಇದ್ದಿತು. ತಮಗೆ ಸಿಕ್ಕ ಪುಡಿಗಾಸಿನಲ್ಲಿ ಪುಸ್ತಕಗಳನ್ನು ಕೊಂಡು 'ಮಾನಸೋಲ್ಲಾಸ' ಎಂಬ ಖಾಸಗಿ ಗ್ರಂಥ ಭಂಡಾರವನ್ನು ತೆರೆದರು.

ಉದ್ಯೋಗಕ್ಕಾಗಿ ಅಲೆದಾಟ

ಗುಂಡಪ್ಪನವರು ಸಂಸಾರಿಗಳಾದ ಮೇಲೆ ಜವಾಬ್ದಾರಿಯು ಮತ್ತಷ್ಟು ಹೆಚ್ಚಾಯ್ತು. ಜೀವನ ನಿರ್ವಹಣೆಗಾಗಿ ದಿನಾಂಕ 03.12.1905ರಿಂದ 06.6.1906 ರವರೆಗೆ ಹಾಜಿ ಇಸ್ಮಾಯಿಲ್‌ರವರ 'ಛಾಂಪಿಯನ್ ರೀಪ್ಸ್' ಎಂಬ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದರು. ಸಮಾಧಾನವಾಗದೆ ಅಲ್ಲಿಯೂ ಕೆಲಸ ಬಿಟ್ಟರು. ಬೆಂಗಳೂರಿನ ಬೀದಿ ಬೀದಿಗಳಲ್ಲಿ ಕೆಲಸಕ್ಕಾಗಿ ಅಲೆದರು. ಹಿರಿಯರ ಹಾಗೂ ತಂದೆಯವರ ಮಾತನ್ನು ಧಿಕ್ಕರಿಸಿ ಬೆಂಗಳೂರಿಗೆ ಬಂದು ಪರಿಪಾಟಲು ಪಟ್ಟರು.

ಡಿ.ವಿ.ಜಿ. ಮತ್ತು ಪತ್ರಿಕೋದ್ಯಮ

ಡಿ.ವಿ.ಜಿ.ಯವರೇ ಹೇಳುವಂತೆ ಪತ್ರಿಕಾವೃತ್ತಿ ನಾನು ಆರಿಸಿಕೊಂಡ ಕಸುಬಲ್ಲ. ಅದು ನನ್ನ ಪಾಲಿಗೆ ಸಂದರ್ಭ ನಿರ್ಬಂಧದಿಂದ ಬಂದದ್ದು. ಬೇರೆ ವೃತ್ತಿ ಯಾವುದೂ ಇಲ್ಲ. ಇದರಲ್ಲೇ ನಿನಗೆ ಅನ್ನ ಅಂತ ವಿಧಿ ತೋರಿಸಿದ ಹಾಗೆ ನನಗನ್ನಿಸುತ್ತದೆ. ಡಿ.ವಿ.ಜಿ.ಯವರ ಮನದಾಳದ ಮಾತುಗಳು ಅವರಲ್ಲಿನ ಮುಗ್ಧತೆ ಅವರ 'ಜೀವನ ಚರಿತ್ರೆ' ತೆರೆದ ಪುಸ್ತಕವಾಗಿದೆ. 1907ರ ಪ್ರಾರಂಭದಲ್ಲಿ ಬಿ. ನರಸಿಂಗರಾಯರ 'ಸೂರ್ಯೋದಯ ಪ್ರಕಾಶಿತಂ' ಎಂಬ ಪತ್ರಿಕೆಗೆ ತಿಂಗಳಿಗೆ ನಾಲ್ಕು ಕಾಲಂಗಳಷ್ಟು ಲೇಖನ ಬರೆದುಕೊಟ್ಟು ನಾಲ್ಕು ಕಾಸು ಸಂಪಾದಿಸುತ್ತಿದ್ದರು. ಡಿ.ವಿ.ಜಿ.ಯವರಿಗೆ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಮೇಲೆ ಪಾಂಡಿತ್ಯವಿತ್ತು. ಇವರ ಲೇಖನವನ್ನು ಓದಿದ 'ಈವಿನಿಂಗ್ ಮೈಲ್' ಎಂಬ ಅಂದು

ಕಂಟ್ರೋನ್ಮೆಂಟ್‌ನಿಂದ ಪ್ರಕಟವಾಗುತ್ತಿದ್ದ ಪತ್ರಿಕೆಯವರು ತಮಗೂ ಲೇಖನಗಳನ್ನು ಬರೆದುಕೊಡಿ ಎಂದು ಕೇಳಿಕೊಂಡರು. ಅವರೂ ಒಂದಿಷ್ಟು ಹಣ ಕೊಡುತ್ತಿದ್ದರು. ಕಾಲಾನಂತರ 'ಭಾರತಿ' ಎಂಬ ದಿನಪತ್ರಿಕೆ, 'ದಿ ಮೈಸೂರ್ ಸ್ಟಾಂಡರ್ಡ್' ಮತ್ತು 'ನಡೆಗನ್ನಡಿ' ಎಂಬ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಬಂದ ಹಣದಿಂದ ಸಂಸಾರ ನಡೆಯುತ್ತಿತ್ತು. ನಂತರ ಮದ್ರಾಸಿಗೆ ತೆರಳಿ 'ದಿ ಹಿಂದೂ' ಮತ್ತು 'ಇಂಡಿಯನ್ ಫೇಟ್ರಿಯೇಟ್' ಎಂಬ ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯತೊಡಗಿದರು. ಮದ್ರಾಸಿನಿಂದ ಬೆಂಗಳೂರಿಗೆ ವಾಪಸ್ ಬಂದು ಸ್ವತಃ ಪುಸ್ತಕ ಹಾಗೂ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿ ಒಂದೆಡೆ ನಿಲ್ಲಬೇಕೆಂದು ತೀರ್ಮಾನಿಸಿದರು. ಚಿಕ್ಕಪೇಟೆಯಲ್ಲಿ 'ವಂದೇ ಮಾತರಂ ಸೀರೀಸ್' ಎಂಬ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದರು. ನಂತರ 'ಸುಮತಿ ಗ್ರಂಥಮಾಲೆ' ಎಂದು ಬದಲಾಯಿಸಿಕೊಂಡರು. 'ಸಂಯುಕ್ತ ಅಂಡ್ ಯುನೈಟೆಡ್ ಇಂಡಿಯಾ' ಎಂಬ ಕಿರು ಹೊತ್ತುಗೆಯನ್ನು ಮೊದಲು ಪ್ರಕಟಿಸಿದರು. ನಂತರ 'ರೀಜನ್ ಅಂಡ್ ನ್ಯಾಷನಲಿಝಂ' ಎಂಬ ಕೃತಿ ನಂತರ 'ವೇದಾಂತ ಮತ್ತು ರಾಷ್ಟ್ರೀಯತೆ'. ಇವೇ ಮುಂತಾದ ಕೃತಿಗಳು 1910ರ ವೇಳೆಗೆ ಹೊರಬಂದವು.

ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿದ ಮೈಸೂರಿನ ದಿವಾನರುಗಳಲ್ಲಿ ಪ್ರಮುಖರಾದ 'ದಿವಾನ್ ರಂಗಾಚಾರ್ಲು'ರವರನ್ನು ಕುರಿತು ಒಂದು ಕೃತಿಯನ್ನು ರಚಿಸಿದರು. ಇದನ್ನು ಓದಿದ ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅಲ್ಲಿಂದ ವಿಶ್ವೇಶ್ವರಯ್ಯನವರ ಸಂಬಂಧ ಬೆಳೆಯಿತು. ನಂತರ 'ದಿ ಕರ್ನಾಟಕ' ಎಂಬ ವಾರಪತ್ರಿಕೆಯನ್ನು 1913ರಲ್ಲಿ ಪ್ರಾರಂಭಿಸಿದರು. ಇವರು ಈ ಪತ್ರಿಕೆಗೆ ಮುಖ್ಯ ಸಂಪಾದಕರು ಹಾಗೂ ಮಾಲೀಕರು. 1921ರಲ್ಲಿ ಈ ಪತ್ರಿಕೆಯು ನಿಂತುಹೋಯಿತು. ಡಿ.ವಿ.ಜಿ.ಯವರು ಪತ್ರಿಕೆಯ ಜೊತೆ ಜೊತೆಗೆ ಪುಸ್ತಕಗಳನ್ನು ಬರೆದು ಹಣ ಗಳಿಸುತ್ತಿದ್ದರು. ಅವುಗಳಲ್ಲಿ 'ದಿವಾನ್ ರಂಗಾಚಾರ್ಲು', 'ಕನಕಾಲುಕಂ', (ಟೆನ್ನಿಸನ್ ಕವಿಯ 'ದಿ ಕಪ್' ಎಂಬ ನಾಟಕವನ್ನು ಕುರಿತು) ಬೆಕ್ಕೂಜಿ (ಮಕ್ಕಳಿಗಾಗಿ) 'ಜಾರ್ಜ್ ಚಕ್ರವರ್ತಿಗಳ ಕಿರೀಟ ಧಾರಣ ಪ್ರಶಂಸೆ,' 'ಇಂದ್ರ ವಜ್ರ', 'ರಾಮಮೋಹನರಾಯ', 'ವಂದೇಮಾತರಂ', 'ಸ್ವದೇಶಿ', 'ಹರಿಭಕ್ತಿಸಾರ', 'ಜೀವಗೀತೆ', ಇವೇ ಮುಂತಾದ ಕೃತಿಗಳು ಪ್ರಕಟವಾದವು. ಪುಸ್ತಕಗಳನ್ನು ಬರೆದು ಹಣ ಸಂಪಾದಿಸಲು ಸಾಧ್ಯವಿಲ್ಲ. ಇಂದಿನಂತೆ ಅಂದು ಸರ್ಕಾರವು ಪುಸ್ತಕಗಳನ್ನು ಕೊಂಡು 'ಸಾರ್ವಜನಿಕ ಗ್ರಂಥಾಲಯ'ಗಳಿಗೆ ಒದಗಿಸುವ ವ್ಯವಸ್ಥೆಯಿರಲಿಲ್ಲ. ಡಿ.ವಿ.ಜಿ.ಯವರ ಕೃತಿಗಳಲ್ಲೇ ಪ್ರಮುಖವಾದುದು 'ರಂಗಾಚಾರ್ಲು'ರವರ ಜೀವನ ಚರಿತ್ರೆ. ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಿದರು.

ದಿವಾನ್ ಟಿ. ಆನಂದರಾವ್‌ರವರು 200 ಪ್ರತಿಗಳನ್ನು ಖರೀದಿಸಿ ಹಂಚಿದರು. ಡಿ.ವಿ.ಜಿ. ಯವರು 300 ಪ್ರತಿಗಳನ್ನು ಮಾರಾಟ ಮಾಡಿದರು. ಉಳಿದ 500 ಪ್ರತಿಗಳು ಖರ್ಚಾಗಲು 10 ವರ್ಷ ಬೇಕಾಯ್ತು ಎಂದರೆ ಲೇಖಕರ ಪಾಡೇನಾಗಬೇಕು?

ಸಾಹಿತಿಯಾಗಿ ಡಿ.ವಿ.ಜಿ.

1905-06ರಲ್ಲಿ ಡಿ.ವಿ.ಜಿ.ಯವರು ಪತ್ರಕರ್ತರಾಗಿ ಪತ್ರಿಕಾರಂಗಕ್ಕೆ ಕಾಲಿಟ್ಟರು. ಅಲ್ಲಿಂದ 1925ರವರೆಗೆ ಪತ್ರಿಕಾರಂಗದ ನಾನಾ ಮೊಗ್ಗಲುಗಳ ಪರಿಚಯವಾಗಿತ್ತು. ಅದರಲ್ಲಿನ ಕಷ್ಟನಿಷ್ಠುರಗಳು, ಲಾಭ ನಷ್ಟಗಳು ಇವೇ ಮುಂತಾದವುಗಳ ಅನುಭವದ ಮೂಸೆಯಿಂದ 1928ರಲ್ಲಿ ಹೊರಬಂದ ಕೃತಿಯೇ 'ವೃತ್ತಪತ್ರಿಕೆ'. 1952ರಲ್ಲಿ 'ರಾಜ್ಯಶಾಸ್ತ್ರ' ಎಂಬ ಕೃತಿಯು ಹೊರಬಂದಿತು. ಭಾರತದ ಮೇರು ವ್ಯಕ್ತಿಗಳಾದ ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ದಿವಾನ್ ರಂಗಾಚಾರ್ಲು ಇವರೇ ಮುಂತಾದವರ ಬಗ್ಗೆ ಡಿ.ವಿ.ಜಿ.ಯವರ ಬರಹವನ್ನು ಮೆಚ್ಚಿಕೊಂಡ ಅಂದಿನ ಸರ್ಕಾರವು ದಿವಾನ್ ಸಿ. ರಂಗಾಚಾರ್ಲು ಕೃತಿಯನ್ನು ಶಾಲಾ ಕಾಲೇಜುಗಳಿಗೆ ಪಠ್ಯಪುಸ್ತಕವಾಗಿ ಪರಿಚಯಿಸಲಾಗಿ ಹಲವು ಮುದ್ರಣಗಳನ್ನು ಕಂಡಿತು. ನಂತರ ಇವರ 'ಗೋಪಾಲಕೃಷ್ಣ ಗೋಖಲೆ' ಎಂಬ ಜೀವನ ಚರಿತ್ರೆಯನ್ನು ಶಾಲಾ ಕಾಲೇಜುಗಳಿಗೆ ಪಠ್ಯಪುಸ್ತಕವಾಗಿ ಸರ್ಕಾರವು ಪರಿಚಯಿಸಿತು. ಇದೂ ಹಲವಾರು ಮುದ್ರಣಗಳನ್ನು ಕಂಡಿತು. ಇದರಿಂದಾಗಿ ಡಿ.ವಿ.ಜಿ.ಯವರಿಗೆ ಸ್ವಲ್ಪ ಹಣ ಬಂದಿತು. ಕೇವಲ ವಿದ್ವಾಂಸರುಗಳಿಗೆ ಮಾತ್ರ ಗೊತ್ತಿದ್ದ ಡಿ.ವಿ.ಜಿ.ಯವರು ಶಾಲಾ ಕಾಲೇಜಿನ ಮಕ್ಕಳಿಗೂ ಚಿರಪರಿಚಿತರಾದರು. ವಿದ್ಯಾರಣ್ಯರ ಬಗ್ಗೆ ಸಂಶೋಧನಾತ್ಮಕವಾಗಿ ಹೊರಬಂದಿರುವ ಕೃತಿಯೇ 'ವಿದ್ಯಾರಣ್ಯಸ್ತುತಿ' ಎಂಬುದು. ಇದನ್ನು 1924ರಲ್ಲಿ ಹೊರ ತಂದರು.

ಕವಿತೆ, ಕಾವ್ಯ ರಚನೆಯಲ್ಲಿ ಡಿ.ವಿ.ಜಿ.

ಆಡು ಮುಟ್ಟದ ಗಿಡವಿಲ್ಲ ಎಂಬಂತೆ ಡಿ.ವಿ.ಜಿ.ಯವರು ಜೀವನ ಚರಿತ್ರೆ, ನಾಟಕ, ಕವಿತೆ, ಭಾರತೀಯ ಧರ್ಮ, ಸಂಸ್ಕೃತಿ, ರಾಜ್ಯಾಡಳಿತ, ಮಕ್ಕಳ ಸಾಹಿತ್ಯ ಸೇರಿದಂತೆ ಹಲವಾರು ಕೃತಿಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಅವುಗಳಲ್ಲಿ 'ವಸಂತ ಕುಸುಮಾಂಜಲಿ' ಡಿ.ವಿ.ಜಿ.ಯವರ ಮೊದಲ ಕವನ ಸಂಕಲನ (1922). ಇದರಲ್ಲಿ ಗೋಖಲೆ, ತಿಲಕ್, ರವೀಂದ್ರನಾಥ ಠಾಗೂರ್, ವಿಶ್ವೇಶ್ವರಯ್ಯ, ರಾಜಾರಾಮ್ ಮೋಹನರಾಯ್ ಸೇರಿದಂತೆ ಭಾರತಮಾತೆ ಪುತ್ರರ ಸಾಧನೆಗಳ ಚಿತ್ರಣವನ್ನು ಮೂಡಿಸಿದ್ದಾರೆ. 'ನಿವೇದನ' (1924) ಎಂಬ ಎರಡನೆಯ ಕವನ

ಸಂಕಲನದಲ್ಲಿ ಡಿ.ವಿ.ಜಿ.ಯವರ ಪ್ರಕೃತಿ, ಪ್ರೇಮ, ಮಾನವ ಸ್ವಭಾವಗಳು, ಸಂಸ್ಕೃತಿಯ ಚಿಂತನೆ ಮುಂತಾದವುಗಳ ಬಗ್ಗೆ ಬರೆಯಲಾಗಿದೆ. 'ಭಾರತ ಭೂ ವಂದನಂ' ಭಾರತಕ್ಕೆ ಸ್ವಾತಂತ್ರ್ಯ ಬಂದ ಸಮಯದ ಬಗ್ಗೆ ಹೀಗೆ ವಿವರಿಸಿದ್ದಾರೆ: ರಕ್ತಪಾತವಿಲ್ಲದೆ ಸ್ವಾತಂತ್ರ್ಯದ ಸೌಭಾಗ್ಯವನ್ನು ಸಂಪಾದಿಸಿದೆ. ಶ್ರೀ ರಾಮ, ಶ್ರೀ ಕೃಷ್ಣ ಅಶೋಕ, ಶಂಕರಾಚಾರ್ಯರಂತಹ ಮಹಾಮಹಿಮರಿಂದ ಈ ದೇಶ ಒಂದಾಗಿ ಉಳಿದು ಬಂದಿದೆ. ನಮ್ಮದು ಭೀಷ್ಮನ ವ್ರತದಂತೆ ದೃಢವ್ರತವಾಗಲಿ, ವಿಶ್ವದ ಎಲ್ಲಾ ಜನರ ಹಿತಕ್ಕಾಗಿ ಬಾಳೋಣ. ನಾವೆಲ್ಲ ಸರ್ವಜನ ಹಿತವಾದ ನೀತಿಯನ್ನು ಅನುಸರಿಸೋಣ ಎಂದು ಬರೆದಿದ್ದಾರೆ. 'ಶೃಂಗಾರ ಮಂಗಳಂ' ಎಂಬ ಕವನಗುಚ್ಛವು ಸ್ವಾರಸ್ಯಕರವಾದ ಕಿರು ಹೊತ್ತುಗೆ. ಶೃಂಗಾರವೆನ್ನುವುದು ಎಲ್ಲಾ ಸೃಷ್ಟಿಯನ್ನು ಒಂದುಗೂಡಿಸುವ ಶಕ್ತಿಯುಳ್ಳದ್ದು. ಜೀವಿಗಳ ಅಂತರಂಗದ 'ಅನಿಲ'ವನ್ನು ಶಮನಗೊಳಿಸುವ ಚೈತನ್ಯವುಳ್ಳದ್ದು ಎಂದಿದ್ದಾರೆ. ಮತ್ತೊಂದು ಕವನ ಸಂಕಲನ 'ಕೇತಕೀವನ' 1973ರಲ್ಲಿ ಪ್ರಕಟವಾಯಿತು. ಈ ಕವನ ಸಂಕಲನದಲ್ಲಿ ಯುವಮನಸ್ಸಿನಲ್ಲಿ ಹೊಯ್ದಾಡುವ ಅನೇಕ ಮುಖದ ಆಸೆ ಆಕಾಂಕ್ಷೆಗಳು, ರೋಷ ನಿರಾಸೆಗಳು, ಧ್ಯೇಯ ಧೋರಣೆಗಳು ಸಾವು-ಬದುಕಿನ ಬಗ್ಗೆ ಆಲೋಚನೆಗಳು ಪರತತ್ವದ ಬಗ್ಗೆ ನಂಬುಗೆ ಸಂದೇಹಗಳೂ ಕಾವ್ಯ ವಸ್ತುಗಳಾಗಿವೆ. ಡಿ.ವಿ.ಜಿ.ಯವರ ಜೀವಿತದಲ್ಲಿ ನಡೆದ ಒಂದು ದುರಂತವು ಕಾರಣ. ಡಿ.ವಿ.ಜಿ.ಯವರು ತರುಣ ವಯಸ್ಸಿನಲ್ಲಿರುವಾಗ ಅವರ ಪತ್ನಿಯನ್ನು ಕಳೆದುಕೊಂಡರು. ಆ ಸಮಯದಲ್ಲಿ ಅವರ ಅನೇಕ ಆಶಾಸೌಧಗಳು ಉರುಳಿ ಬಿದ್ದವು. ಇಂಥ ಸಮಯದಲ್ಲಿ ಡಿ.ವಿ.ಜಿ.ಯವರು ಕವನ ರೂಪದಲ್ಲಿ ತಮ್ಮ ನೋವನ್ನು ಹೊರಗೆಡವಿದ್ದಾರೆ. ಅದೆಂದರೆ-

"ನಡೆವ ಮಸಣಂ ನೋಡಾ
ನಡಗಿಹುವೆನ್ನೆದೆಯೊಳನಿತೂ ಸಂಕಲ್ಪಕವಂ
ಸುಡುತಿಹುದಿದೊ ಚಿಂತಾಚಿತಿ
ಗುಡುಗುಡಿಸುತಲತಿವು ವತ್ತಲಾಶಾಪ್ರೇತಂ

ಪದ್ಯದ ತಾತ್ಪರ್ಯ ಹೀಗಿದೆ- ನಾನು ನಡೆಯುತ್ತಿರುವ ಹೆಣವಾಗಿದ್ದೇನೆ. ನಾನು ಮಾಡಿದ ಅನೇಕ ಸಂಕಲ್ಪಗಳೆಲ್ಲವೂ ಹೆಣವಾಗಿ ನನ್ನ ಎದೆಯಲ್ಲಿ ಅಡಗಿವೆ. ಚಿಂತೆಯೆಂಬ ಚಿತಾಗ್ನಿ ಸುಡುತ್ತಿದೆ. ಅದರೆದುರು ಆಸೆಗಳೆಲ್ಲಾ ಪ್ರೇತಗಳಾಗಿ ಎತ್ತೆತ್ತಲೋ ಅಲೆದಾಡುತ್ತಿವೆ.

ಡಿ.ವಿ.ಜಿ.ಯವರ ಅಂತಃಪುರಗೀತೆ ಮತ್ತು 'ಗೀತಾಶಾಕುಂತಲಮ್' ಎಂಬ ಕವನ ಸಂಕಲನಗಳು ಶಿಲ್ಪಸೌಂದರ್ಯವನ್ನು ಕುರಿತ ಬೇಲೂರಿನ ಶಿಲ್ಪಕಲೆಯ ಬಗ್ಗೆ ಡಿ.ವಿ.ಜಿ.ಯವರಿಗೆ ಎಲ್ಲಿಲ್ಲದ ವ್ಯಾಮೋಹ. ಆ ಶಿಲ್ಪಗಳಲ್ಲಿ ಕಲೆಗಾರರು ಹುದುಗಿಸಿರುವ ಭಾವವಿಲಾಸಗಳನ್ನು ಎಳೆಎಳೆಯಾಗಿ ವರ್ಣಿಸಿದ್ದಾರೆ.

ಭಾರತದ ಮಹಾಕಾವ್ಯಗಳಾದ 'ರಾಮಾಯಣ' ಮತ್ತು 'ಮಹಾಭಾರತ'ಗಳು ಪ್ರತಿಯೊಬ್ಬ ಹಿಂದೂವಿಗೂ ಪವಿತ್ರವಾದುದು. ಸಾವಿರಾರು ವರ್ಷಗಳಿಂದ ಅವು ನಮ್ಮ ಸಂಸ್ಕೃತಿಯ ಆಧಾರಗಳಾಗಿ ಬೆಳಗುತ್ತವೆ. ಈ ಎರಡು ಮಹಾಕಾವ್ಯಗಳಲ್ಲಿ ಶ್ರೀರಾಮ ಮತ್ತು ಶ್ರೀ ಕೃಷ್ಣರ ಆದರ್ಶದ ಬಗ್ಗೆ. ಅವೇ 'ಶ್ರೀರಾಮ ಪರೀಕ್ಷಣಂ' ಮತ್ತು 'ಶ್ರೀಕೃಷ್ಣ ಪರೀಕ್ಷಣಂ' ಎಂಬ ಕಾವ್ಯಗಳು. ರಾಮಾಯಣವನ್ನು ವಿಮರ್ಶೆ ಮಾಡುವುದು ತಮ್ಮ ಕೆಲಸವಲ್ಲವೆಂದು ಡಿ.ವಿ.ಜಿ.ಯವರು ಹೇಳಿದ್ದಾರೆ. ಮತ್ತೊಂದು ಕಡೆ ರಾಷ್ಟ್ರದ ಪ್ರಥಮ ಕವಿಯೇ ನನ್ನನ್ನು ಕ್ಷಮಿಸು. ನಿನ್ನ ಕಾವ್ಯದಲ್ಲಿರುವ ಚಾತುರ್ಯವನ್ನು ನಾನು ವಿಮರ್ಶೆ ಮಾಡುವುದಿಲ್ಲ. ಅಮೃತದಂತೆ ರುಚಿಕರವಾದ ಆಹಾರವನ್ನು ಸ್ವೀಕರಿಸಿದವನು ತನ್ನ ಕೈಬೆರಳುಗಳನ್ನು ಮತ್ತೆ ಮತ್ತೆ ನೆಕ್ಕುವುದಿಲ್ಲವೇ ಹಾಗೆ ಎಂದಿದ್ದಾರೆ.

ಡಿ.ವಿ.ಜಿ.ಯವರು ಅನುವಾದಿಸಿರುವ ಕಾವ್ಯಗಳಲ್ಲಿ 'ಉಮರನ ಒಸಗೆ' ಎಂಬುದು ವಿಶೇಷವಾದುದು. ಪರ್ಷಿಯಾ ದೇಶದ ಸುಪ್ರಸಿದ್ಧ ಕವಿ 'ಉಮರ್ ಖಯ್ಯಾಮ್' ಪ್ರೀತಿ, ವಾತ್ಸಲ್ಯಗಳ ದ್ಯೋತಕದಂತಿದ್ದ ಈತ ಸತ್ತ 800 ವರ್ಷಗಳ ನಂತರ ಅವನ 'ರುಬಾಯಿಗಳು' ಪ್ರಪಂಚದ ಕಣ್ಣಿಗೆ ಬಿದ್ದುದು. ಇಂಗ್ಲೆಂಡಿನ 'ಫಿಟ್ಸ್ ಜೆರಾಲ್ಡ್' ಎಂಬಾತನು ಉಮರನ ರುಬಾಯಿಗಳನ್ನು ಅನುವಾದಿಸಿದ್ದು ಡಿ.ವಿ.ಜಿ.ಯವರು ಫಿಟ್ಸ್ ಜೆರಾಲ್ಡ್‌ನ 86 ಪದ್ಯಗಳು ಹಾಗೂ ಮಿಕ್ಕ ಮೂಲಗಳಿಂದ 86 ಪದ್ಯಗಳು ಒಟ್ಟು 172 ರುಬಾಯಿಗಳನ್ನು ಸೇರಿಸಿ 'ಉಮರನ ಒಸಗೆ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಅವೆಂದರೆ– 'ಒಸಗೆ' ಎಂದರೆ 'ಶುಭ ಸಂದೇಶ', ಸುದ್ದಿ, ಸಮಾಚಾರ ಎಂದರ್ಥ. ಉಮರನ ಒಸಗೆಯನ್ನು ಡಿ.ವಿ.ಜಿ.ಯವರು ಹೀಗೆ ಸಂಗ್ರಹಿಸಿದ್ದಾರೆ. 'ಈ ಜನ್ಮಸಾಕು' ಎಂದು ದೂರುವುದೇಕೆ? ಸಾವು ಬರುವಾಗ ಬರಲಿ. ಅದು ಬರುವವರೆಗೂ ಕಾಯೋಣ, ಬದುಕೋಣ. ಇದೇ ಉಮರನ ಒಸಗೆಯ ಸಂದೇಶ. ತಾಪತ್ರಯ, ಗೋಳಾಟ, ಗೊಣಗಾಟ ಎಲ್ಲ ಕಾಲದಲ್ಲೂ ಇದ್ದೇ ಇರುತ್ತದೆ. ದಿನದ ಒಪ್ಪತ್ತಾದರೂ ಉಲ್ಲಾಸದಿಂದ ಇರೋಣ ಎನ್ನುವುದೇ ಉಮರನ ಸಂದೇಶ. ಇದು ಇಂದಿನ ಕಾಲದ ಮಧ್ಯಮ, ಬಡ ಮಧ್ಯಮ ವಿದ್ಯಾವಂತರಲ್ಲಿ ನೆಮ್ಮದಿ ಎಂಬುದೇ ಇಲ್ಲ. ದಿನದ 24 ಗಂಟೆ ವರ್ಷದ 365 ದಿನಗಳೂ ಒಂದಲ್ಲಾ ಒಂದು ಸಮಸ್ಯೆಗಳಿಗೆ ಸಿಕ್ಕಿಕೊಳ್ಳುತ್ತಾನೆ ಇಲ್ಲವೆ ಸೃಷ್ಟಿಸಿಕೊಳ್ಳುತ್ತಾನೆ. ನೆಮ್ಮದಿ ಎಂಬುದೇ ಇಲ್ಲ. ಹತ್ತಾರು–ಕೋಟಿ ರೂಪಾಯಿಗಳ ಆಸ್ತಿವಂತನು ನೂರಾರು ಕೋಟಿ ರೂಪಾಯಿಗಳ ಆಸ್ತಿವಂತನಾಗಲು ಹವಣಿಸುತ್ತಿರುತ್ತಾನೆ. ನೆಮ್ಮದಿ ಎಂಬುದೇ ಇಲ್ಲ. ಪುರಂದರದಾಸರು ಹೇಳಿರುವಂತೆ 'ಮದುವೆಯಾಗದಿದ್ದರೆ ಒಂದು ಚಿಂತೆ, ಮದುವೆಯಾದರೆ ಮತ್ತೊಂದು ಚಿಂತೆ. ಮಕ್ಕಳಿಲ್ಲದಿದ್ದರೆ ಒಂದು ಚಿಂತೆ. ಮಕ್ಕಳಾದರೆ ನಾನಾ ಚಿಂತೆ, ಅನುಗಾಲವು ಚಿಂತೆ

ಈ ದೇಹದೊಳಗೆ' ಎಂಬಂತೆ ಅನುಗಾಲವೂ ಒಂದಲ್ಲ ಒಂದು ಚಿಂತೆಗೆ ಈಡಾಗುತ್ತಿದ್ದೇವೆ. ನಿನ್ನೊಳು ಮಾಯೆಯೋ, ಮಾಯೆಯೊಳು ನೀನೋ ಎನ್ನುವಂತೆ.

ಡಿ.ವಿ.ಜಿ.ಯವರ ಮಂಕುತಿಮ್ಮನಕಗ್ಗ ಜನಸಾಗರ ಗ್ರಂಥವಾಗಿದೆ. ಈ ಕೃತಿಯು ಡಿ.ವಿ.ಜಿ.ಯವರಿಗೆ ಹೆಸರು ತಂದುಕೊಟ್ಟಿತು. ಸಾವಿರ ಪದ್ಯಗಳ ಸರಮಾಲೆಯಾದ ಇದು ಮನುಷ್ಯನ ಅನೇಕ ಸಮಸ್ಯೆಗಳು, ಜೀವನ ಜಂಜಾಟಗಳು ಇವೇ ಮುಂತಾದವುಗಳನ್ನು ತಿಳಿಯಪಡಿಸುತ್ತದೆ. ಒಂದೊಂದು ಪದ್ಯವೂ ಬಿಡಿ ಬಿಡಿಯಾದ ಮುತ್ತಿನಂತೆ ಸುಂದರವಾಗಿದೆ. ಇವೆಲ್ಲ ನಾಲ್ಕು ಸಾಲಿನ, ದ್ವಿತೀಯಾಕ್ಷರ ಪ್ರಾಸದ ಪದ್ಯಗಳು. ಪ್ರತಿಯೊಂದು ಪದ್ಯದ ಕೊನೆಯಲ್ಲಿ ಮಂಕುತಿಮ್ಮ ಎಂಬ ಅಂಕಿತ ಬರುತ್ತದೆ. ಈ ಕೃತಿಗೆ ಒಂದು ಪೀಠಿಕೆ ಎಂಬಂತೆ 'ಕಗ್ಗದ ಕಥೆ'ಯೊಂದು ಇದೆ. ಈ ಕಥೆಯನ್ನು ಅರ್ಥಮಾಡಿಕೊಂಡರೆ ಕವಿಯು ಯಾವ ಕಾರಣದಿಂದ 'ಮಂಕುತಿಮ್ಮ' ಎಂದು ಹೇಳಿದ್ದಾನೆ ಎಂದು ತಿಳಿಯುತ್ತದೆ. ಈ ಕಥೆಯು ಹೀಗಿದೆ–

ಗುಂಡಪ್ಪನವರ ಕೃತಿಗಳ ರಾಶಿಯಲ್ಲಿ ಅಪೂರ್ವವಾದ ಗ್ರಂಥ 'ಮಂಕುತಿಮ್ಮನ ಕಗ್ಗ'. ಸುಮಾರು ಸಾವಿರ ಪದ್ಯಗಳಲ್ಲಿ ಮಾನವ ಜೀವನದ ಬಹುಮುಖ್ಯ ಸಮಸ್ಯೆಗಳನ್ನು ಕುರಿತ ಗಾಢವಾದ ಚಿಂತನೆಗಳನ್ನೊಳಗೊಂಡ ಈ ಗ್ರಂಥಕ್ಕೆ ಒಂದು ಪೀಠಿಕೆ ಎಂಬಂತೆ 'ಕಗ್ಗದ ಕಥೆ'ಯೊಂದು ಇದೆ. ತುಂಬ ಅರ್ಥವತ್ತಾದ ಈ ಕಥೆ ಹೀಗಿದೆ–

ಒಬ್ಬ ಉಪಾಧ್ಯಾಯನಿದ್ದ. ಅವನು ತನ್ನನ್ನು 'ಮಂಕುತಿಮ್ಮ' ಎಂದು ಕರೆದುಕೊಳ್ಳುತ್ತಿದ್ದ. ಅವನು ಪಾಠ ಕಲಿಸುತ್ತಿದ್ದ ಮಕ್ಕಳಿಗೆ ಅವನನ್ನು ಕಂಡರೆ ಸಲಿಗೆಯಿಂದಲೂ ಸಂತೋಷದಿಂದಲೂ ಅವನನ್ನು ಸುತ್ತುಗಟ್ಟುವ ಅಭ್ಯಾಸ. ಅವನ ತಾಯಿ ಕುರುಡಿ. ಅವಳು ಅವಳ ಮಗಳ ಮನೆಯಲ್ಲಿದ್ದಳು. ಮಂಕುತಿಮ್ಮನು ಕೂಡ ಅವರ ಜೊತೆಯಲ್ಲಿಯೇ ಬಾಳುತ್ತಿದ್ದನು. ಅವನಿಗೆ ಮದುವೆಯಾಗಿರಲಿಲ್ಲ. ಐವತ್ತು ವರ್ಷಗಳನ್ನು ಅವನು ಹೀಗೆ ಕಳೆದನು. ಬೆಳಗ್ಗೆ ನರಸಿಂಹ ಶತಕವನ್ನು ಪಠನ ಮಾಡಿ, ಸಂಜೆ ರಾಮದಾಸರ ಕೀರ್ತನೆಗಳನ್ನು ಹಾಡಿಕೊಂಡು, ಬಿಡುವಿನ ಹೊತ್ತಿನಲ್ಲಿ ದೇವಾಲಯದ ಯಾವುದೋ ಒಂದು ಭಾಗದಲ್ಲಿ ಕುಳಿತು, ದೈವಚಿಂತನೆಯಲ್ಲಿ ಮುಳುಗಿರುತ್ತಿದ್ದನು. ಮಂಕುತಿಮ್ಮನ ತಂಗಿಯ ಮಗ ಸೋಮಿ. ಈ ಸೋಮಿಯೇ 'ತಿಮ್ಮ ಗುರುಗೆ ಜೀವವಿವನೆ ಲೋಕವೆಲ್ಲವು, ಮಾವನಿವನನೆತ್ತಿ, ನಡೆಸಿ, ಲಾಲಿಸಿ, ಪ್ರೇಮದಂಗಿ ತೊಡಿಸಿ, ಪದ್ಯಕಲಿಸಿ, ಬರಹ ತಿದ್ದಿ, ಮುಂಜಿಯಾದುದನ್ನು ನೋಡಿ, ಕೇಳಿ ವಿದ್ಯೆ ಪೆಂಪನು' ನಲಿದನು. ಸೋಮಿಗೆ ಹದಿನಾರು ವರ್ಷವಾದಾಗ ಅವನು ಮೈಲಾರಕ್ಕೆ ಮುಂದಿನ ವಿದ್ಯಾಭ್ಯಾಸಕ್ಕೆ

ಹೊರಟನು. ತಿಮ್ಮ ಗುರುವಿಗೆ ಮಂಡುಗೆರೆಗೆ ವರ್ಗವಾಯಿತು. ಕೆಲವು ತಿಂಗಳು ಕಳೆದ ಮೇಲೆ ತನ್ನ ಸೋದರಳಿಯನನ್ನು ನೋಡಬೇಕೆಂದು ಮೈಲಾರಕ್ಕೆ ಬಂದನು ತಿಮ್ಮ ಗುರು. ಅಲ್ಲಿ ಸೋಮಿಯು ಪ್ರವರ್ಧಮಾನನಾಗಿರುವುದನ್ನು ಕಂಡು ಗುರು ಸಂತೋಷದಿಂದ ಹಿಂದಿರುಗಿದನು.

ಮತ್ತೆ ಕೆಲವು ತಿಂಗಳ ನಂತರ ತಿಮ್ಮ ಗುರುವು ತನ್ನ ಭಾವನಿಗೆ ಒಂದು ಪತ್ರವನ್ನು ಬರೆದು ಹೀಗೆ ತಿಳಿಸಿದನು: "ಇದುವೆ ನನ್ನ ಕಡೆಯ ಬರಹ. ತಿರುಪತಿಗಾಂ ಬಂದಿಹೆಂ. ನನಗೆ ಕೆಲಸ ಸಾಕೆನುತ್ತ ಮೇಲಕೆ ನಾಂ ಬರೆದಿಹೆಂ. ಋಣದ ರೊಕ್ಕಲೆಕ್ಕವೆಲ್ಲಾ ಶೇಷ ಬಿಡದೆ ಸಲ್ಲಿಸಿಹೆ. ಮುಂದೆ ಹೀಗೆ ಯಾತ್ರೆ ಕಾಶಿಗೆಂದು ಮನವ ಮಾಡಿಹೆಂ. ದಂದುಗವೇನೆನ್ನೊಳಿಲ್ಲ. ವೆಸನಕ್ಕಿಲ್ಲ ಕಾರಣಂ. ಸೋಮಿ ಹರೆಯವಾಂತ ಬಳಿಕ ಹಗುರವಾಯಿತೆನ್ನೆದೆ ಸ್ವಾಮಿ ಕೃಪೆಯಿನವನು ಬೆಳೆದು ಸೊಗವ ಯಶವಗಳಿಸುಗೆ. ಏನೊ ಮಮತೆ ಏನೊ ಮೋಹ, ಏನೋ ಋಣದ ಬಂಧನ, ಎನ್ನನಿಷ್ಟು ದಿನವು ಕಟ್ಟಿ ನಿಲಿಸಿತವನ ಕಾರಣ. ಈಗಳವನು ತನ್ನ ಶಕ್ತಿಯಿಂದ ಬೆಳೆಯೆ ತಕ್ಕನು. ಈಗಳೆಯೆ ನಗಮಂತರಾತ್ಮ ಸೇವೆಯೊಂದೆ ತಕ್ಕುದು. ಇಂತಹ ದಿನ ಬರಲೆನುತ್ತ ಬೇಡಿ ಕಾಯುತ್ತಿದ್ದೆನು; ಸಂತಸವನು ಸೋಮಿಯೇಳ್ಗೆಯಿಂದಲೀಗ ಕಂಡೆನು..... ನಾನು ಮಂಡುಗೆರೆಯೊಳಿದ್ದ ಮನೆಯೊಳೊಂದು ಗೂಡಿನೊಳ್ ಏನೊ ಬರೆದ ಕಡತವೊಂದನಿರಿಸಿರುವೆನು ಗಂಟಿನೊಳ್. ಸೋಮಿಯದನು ನೋಡಿ ತೆಗೆದುಕೊಳ್ಳುವೊಡಂತುಮಾಡಲಿ"

ಮಂಡುಗೆರೆಗೆ ಸೋಮಿ ಹೋಗಿ ನೋಡಿದನಾ ಕಡತವ.
ಕಂಡನದರೊಳಿನಿತು ಬಾಳ್ಗೆ ಸಲುವ ತತ್ವಮಥಿತವ.
ಸಖರ ತೃಪ್ತಿಗೆಂದು ಸೋಮಿಯಾಯ್ದು ಹಲವು ಬಂತೆಯ
ಲಿಖಿಸಿದ ಪಡಿಹೊತ್ತಗೆಯಿದು ಮಂಕುತಿಮ್ಮ ಕಂತೆಯ.

ಇದು ಪದ್ಯದಲ್ಲಿಯೇ ಇರುವ ಪೀಠಿಕೆ. ಇದರಿಂದ ದತ್ತವಾಗುವ ಪೂರ್ವ ಸಿದ್ಧತೆಯನ್ನು ಓದುಗನು ತನ್ನಲ್ಲಿ ಒದಗಿಸಿಕೊಂಡು ಈ ಗ್ರಂಥವನ್ನು ಓದುವುದು ಪ್ರಯೋಜನಕರವಾಗುತ್ತದೆ.

ಮೇಲಿರುವ ಪೀಠಿಕೆಯಲ್ಲಿ ಬರುವ ತಿಮ್ಮ ಗುರು ಮತ್ತಾರೂ ಅಲ್ಲ. ಗುಂಡಪ್ಪನವರ ಸೋದರಮಾವ ತಿಮ್ಮಪ್ಪನವರೇ. ಅವರೇ ಗುಂಡಪ್ಪನವರ ಬಾಲ್ಯದಲ್ಲಿ ಪರಂಪರೆಯಿಂದ ಬಂದ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾಭ್ಯಾಸವನ್ನು ನೀಡಿ ಬೌದ್ಧಿಕ ವಿಷಯಗಳಲ್ಲಿ ಆಸಕ್ತಿಯನ್ನು ಬೆಳೆಸಿದವರು. ಸಂಸ್ಕೃತದ ಭಾಷಾ ಸಾಹಿತ್ಯಗಳಲ್ಲದೆ ವೇದವೇದಾಂತಗಳಲ್ಲಿ ಕುತೂಹಲವನ್ನು ಕುದುರಿಸಿದವರು. ಈ ಜ್ಞಾನದಾಹವೇ ತಿಮ್ಮಗುರು ಬಿಟ್ಟುಹೋದ ಗ್ರಂಥವೆಂಬುದನ್ನು ಇಲ್ಲಿ ವರ್ಣಿಸಲಾಗಿದೆ.

ಕವಿಯು ತಮ್ಮ ಮಂಕುತಿಮ್ಮ ಕಗ್ಗದಲ್ಲಿ 'ಪ್ರಕೃತಿ ರಸ ತಂತ್ರ'ದಲ್ಲಿ ಪ್ರಕೃತಿಯು ಮನುಷ್ಯನಿಗೆ ಕೊಟ್ಟಿರುವ ಅಪಾರವಾದ ಕೊಡುಗೆಯ ಬಗ್ಗೆ ಹೀಗೆ ತಿಳಿಸಿದ್ದಾರೆ:

ಹೆಸರಿನರಿಯದ ಸಸಿಯೊಳಿರವೆ ರಸಗಂಧಗಳು?
ಬಿಸಿಲಿದನು ಪಕ್ವಗೊಳಿಸುತೆ ಬಿಡಿಸದಿಹುದೆ?
ಪಸರಿಸದೆ ಗಾಳಿಯದನೊಯ್ದು ದಿಸೆ ದಿಸೆಗಳೊಳು?
ಉಸಿರುತಿಹೆವದ ನಾವು–ಮಂಕುತಿಮ್ಮ

ತಾತ್ಪರ್ಯ: ಹೆಸರುಗಳನ್ನು ತಿಳಿಯದಿರುವ ಎಳೆಯ ಗಿಡಗಳಲ್ಲಿ ರಸ ಮತ್ತು ಸುವ್ವಾಸನೆಗಳು ಇರುವುದಿಲ್ಲವೇನು? ಅವುಗಳನ್ನು ಬಿಸಿಲು ಹಣ್ಣು ಮಾಡುವುದಿಲ್ಲವೇನು? ನಂತರ ಗಾಳಿ ಆ ಸುಗಂಧವನ್ನು ಎಲ್ಲಾ ದಿಕ್ಕುಗಳಿಗೂ ಹರಡುವುದಿಲ್ಲವೇನು? ಆ ಸುವ್ವಾಸನೆಯಾದ ಗಾಳಿಯನ್ನೇ ನಾವು ಉಸಿರಾಡುತ್ತಿದ್ದೇವೆ. ಇವುಗಳೆಲ್ಲವನ್ನು ಭಗವಂತನು ನಮಗೆ ನೀಡಿದ್ದಾನೆ.

ಟಗರೆರಡ ಬೆಳಸಿ ಕೊಬ್ಬಿಸಿ ಕೆಣಕಿ ಹುರಿಗೊಳಿಸಿ
ಜಗಳವಾಡಿಸಿ ದೈವಜೀವಿಗಳ ಪೆಸರಿಂ
ನಗುತಲಿರುವನು ನೋಡಿ; ಪರಬೊಮ್ಮನೇಂ ಬಿನದಿ!
ಬಿಗಿಯದಿರು ನೀಂ ಬೀಗಿ ಮಂಕುತಿಮ್ಮ

ತಾತ್ಪರ್ಯ: ಎರಡು ಟಗರುಗಳನ್ನು ಚೆನ್ನಾಗಿ ಬೆಳೆಸಿ, ಕೊಬ್ಬಿಸಿ, ಉತ್ಸಾಹ ಮತ್ತು ಉತ್ತೇಜನಗಳನ್ನು ಕೊಟ್ಟು ಇವೆರಡನ್ನು ದೈವಸೃಷ್ಟಿ ಎನ್ನುವ ಹೆಸರಿನಲ್ಲಿ ಜಗಳವಾಡಿಸಿ, ವಿನೋದದಿಂದ (ಬಿನದಿ) ನೋಡಿ ನಗುತ್ತಿದ್ದಾನೆ. ನೀನು ಮಾತ್ರ ನಿನ್ನ ಹುಷಾರಿನಲ್ಲಿರು. ಅಹಂಕಾರದಿಂದ ಗರ್ವ (ಬಾಗು)ಪಡಬೇಡ. ನೀನು ಆ ಟಗರುಗಳಲ್ಲಿ ಒಂದು ಎನ್ನುವುದನ್ನು ಮರೆಯಬೇಡ. ಇವುಗಳೆಲ್ಲ ಅವನ ವಿನೋದ ಎಂದು ಡಿ.ವಿ.ಜಿ.ಯವರು ಗರ್ವಪಡುವ ಮನುಷ್ಯರನ್ನು ಎಚ್ಚರಿಸಿದ್ದಾರೆ.

ಪರಬೊಮ್ಮನಾ ವಿಧಿಯ ನೇಮಿಸಿಹುದೇತಕೆನೆ
ನರಜಾತಿ ಸಾನುಭೂತಿಯ ಕಲಿಯಲೆಂದು
ಪರರೆಂಬರಿಲ್ಲ ಆತ್ಮಾಂಶರೆಲ್ಲರೆನುತ್ತೆ
ಬೆರೆ ನೀನು ವಿಶ್ವದಲಿ – ಮಂಕುತಿಮ್ಮ

(ನೇಮಿಸುಹುದು+ಏತಕೆ+ಎನೆ) (ಪರರು+ಎಂಬರಿಲ್ಲ) (ಆತ್ಮಾಂಶರೆಲ್ಲರು +ಎನುತ್ತೆ)

ಮನುಷ್ಯನು ಸುಖ ದುಃಖಗಳನ್ನು ಹಂಚಿಕೊಂಡು (ಸಹಾನುಭೂತಿಯ) ಬಾಳಲು ಕಲಿಯಲೆಂದು, ಈ ವಿಧಿಯನ್ನು ಪರಮಾತ್ಮನು ನೇಮಿಸಿದ್ದಾನೆ. ಬೇರೆ ಎನ್ನುವವರಿಲ್ಲ, ಎಲ್ಲರೂ ನನ್ನ ಆತ್ಮದ ಒಂದು ಅಂಶವೇ, ಎಂದು ನೀನು ತಿಳಿದುಕೊಂಡು, ಈ ಪ್ರಪಂಚದ ಎಲ್ಲರಲ್ಲೂ ಒಂದಾಗು.

ಕರವೆರಡದೃಷ್ಟಕ್ಕೆ ನರನ ಪೂರ್ವಿಕವೊಂದು
ಪೆರತೊಂದು ನವಸೃಷ್ಟಿಸತ್ತ್ವಾ ಬೊಗಸೆ
ಧರಿಸಿಹುದು ಮನುಜಜೀವಿತವನದರೊತ್ತಡದೆ
ಪರಿದಾಟ ನಮಗೆಲ್ಲ –ಮಂಕುತಿಮ್ಮ

(ಕರ+ಎರಡು+ಅದೃಷ್ಟಕ್ಕೆ) (ಮನುಜ ಜೀವಿತವನು+ಅದರ+ಒತ್ತಡದೆ)

ಅದೃಷ್ಟಕ್ಕೆ ಎರಡು ಕೈ (ಕರ)ಗಳಿವೆ. ಮನುಷ್ಯನ ಪೂರ್ವಜನ್ಮದ ಕರ್ಮಗಳೊಂದು ಕೈ. ಇನ್ನೊಂದು ಹೊಸ ಸೃಷ್ಟಿಯ ಸಾರ. ಮನುಷ್ಯನ ಜೀವನ ಅದರ ಒತ್ತಡವನ್ನು ತಡೆದುಕೊಂಡಿದೆ. ಇದರಿಂದ, ನಮಗೆಲ್ಲ ಪರದಾಟ.

ಆವ ಬೇಳೆಯದಾವ ನೀರಿನಲಿ ಬೇಯುವುದೊ!
ಆವ ಜೀವದ ಪಾಕವಾವ ತಾಪದಿನೋ!
ಆ ವಿವರವನು ಕಾಣದಾಕ್ಷೇಪಣೆಯದೇನು?
ದೈವಗುಟ್ಟದು ತಿಳಿಯೆ– ಮಂಕುತಿಮ್ಮ

(ಬೇಳೆ+ಅದಾವ) (ಪಾಕವು+ಆವ) (ಕಾಣದ+ಆಕ್ಷೇಪಣೆ+ಅದೇನು)

ಯಾವ ಬೇಳೆಯು ಯಾವ ನೀರಿನಲ್ಲಿ ಬೇಯುತ್ತದೆಯೋ? ಯಾವ ಜೀವವು ಪಕ್ವವಾಗುವುದು ಯಾವ ತಾಪದಿಂದಲೋ? ಈ ವಿವರಗಳನ್ನು ಕಾಣದೆ, ಆಕ್ಷೇಪಣೆ ಏಕೆ ಮಾಡುತ್ತೀಯಾ? ಅದು ದೈವದಲ್ಲಿರುವ ಗುಟ್ಟು,

ಸರ್ವರುಂ ಸಾಧುಗಳೆ ಸರ್ವರುಂ ಬೋಧಕರೆ
ಜೀವನಪರೀಕ್ಷೆ ಬಂದಿದಿರು ನಿಲುವನಕ
ಭಾವಮರ್ಮಂಗಳೇಳುವುವಾಗ ತಳದಿಂದ
ದೇವರೇ ಗತಿಯಾಗ – ಮಂಕುತಿಮ್ಮ

(ಬಂದು+ಇದಿರು) (ಭಾವಮರ್ಮಂಗಳ+ಏಳುವುವು+ಆಗ) (ಗತಿ+ಆಗ)

ಜಗತ್ತಿನಲ್ಲಿ ಪ್ರತಿಯೊಬ್ಬನೂ ಸಾಧು ಸಂತನೇ ಮತ್ತು ಉಪದೇಶ ಮಾಡುವವನೆ. ಆದರೆ, ಅವನಿಗೆ ಒಂದು ಉತ್ಕಟ ಜೀವನ ಪರೀಕ್ಷೆ ಸವಾಲಾಗಿ ನಿಂತಾಗ, ಅವನ ಮನಸ್ಸಿನ ಒಳಭಾವನೆಗಳು ಹೊರಹೊಮ್ಮುತ್ತವೆ. ಅವನನ್ನು ಆವಾಗ ದೇವರೇ ಕಾಪಾಡಬೇಕು. ಇನ್ನೊಬ್ಬರಿಗೆ ಉಪದೇಶ ಮಾಡುವುದು ಸುಲಭ. ತನಗೇ ಆ ಪರಿಸ್ಥಿತಿ ಬಂದಾಗ, ಅದನ್ನು ಎದುರಿಸುವುದು ಬಹಳ ಕಷ್ಟ.

ಆನೆಗಾರ್ ಇರುವೆಗಾರ್ ಕಾಗೆಗಾರ್ ಕಪ್ಪೆಗಾರ್
ಕಾಣಿಸುವರನ್ನವನು? ಹಸಿವವರ ಗುರುವು
ಮಾನವನುಮಂತುದರಶಿಷ್ಯನವನಾ ರಸನೆ
ನಾನಾವಯವಗಳಲಿ – ಮಂಕುತಿಮ್ಮ

(ಆನೆಗೆ+ಆರ್) (ಇರುವೆಗೆ+ಆರ್) (ಕಾಗೆಗೆ+ಆರ್) (ಕಪ್ಪೆಗೆ+ಆರ್) (ಕಾಣಿಸುವರ್+ಅನ್ನವನು) (ಹಸಿವು+ಅವರ) (ಮಾನವನುಂ+ಅಂತು+ಉದರ +ಶಿಷ್ಯನ್+ಅವನ+ಆ) (ನಾನಾ+ಆವಯವಗಳಲಿ)

ಆನೆ, ಇರುವೆ, ಕಾಗೆ ಮತ್ತು ಕಪ್ಪೆಗಳಿಗೆ ಊಟವನ್ನು ಯಾರಿಡುತ್ತಾರೆ? ಹಸಿವಾದಾಗ ಅವುಗಳು, ಊಟವನ್ನು ಹುಡುಕಿಕೊಂಡು ಹೊರಡುತ್ತವೆ. ಮನುಷ್ಯನೂ ಸಹ, ಈ ಹೊಟ್ಟೆಯ ಶಿಷ್ಯನೇ ಆದರೂ, ಅವನ ನಾಲಿಗೆ (ರಸನೆ)ಯ ಪ್ರಭಾವ ಮಾತ್ರ ಎಲ್ಲಾ ಅಂಗಗಳಲ್ಲೂ ಇರುತ್ತದೆ. ಅದೇ ತರಹ ಅವನ ಹಸಿವು ನಾನಾ ರೀತಿಗಳಲ್ಲಿ ಇರುತ್ತದೆ.

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?
ವಿಹಿತವಾಗಿಹುದದರ ಗತಿ ಸೃಷ್ಟಿವಿಧಿಯಿಂ
ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ
ಸಹನೆ ವಜ್ರದ ಕವಚ – ಮಂಕುತಿಮ್ಮ

(ವಿಹಿತ+ಆಗಿ+ಇಹುದು+ಅದರ) (ಮುಗಿಯದು+ಆದ)

ನಮ್ಮ ನಮ್ಮ ಗ್ರಹಗತಿಗಳು, ನಾವು ಹುಟ್ಟಿದ ತಕ್ಷಣವೇ ನಿರ್ಣಯಿಸಲ್ಪಟ್ಟಿರುತ್ತವೆ. ಅವುಗಳನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಜ್ಯೋತಿಷಿಯೇನಾದರೂ ಜಾತಕವನ್ನು ತಿದ್ದಿ ಆ ಗ್ರಹಗತಿಯನ್ನು ಬದಲಾಯಿಸಲು ಸಾಧ್ಯವೇನು? ಎಂದಿಗೂ ಇಲ್ಲ. ನಮಗೆ ಯಾವ ಸ್ಥಿತಿ (ದಶೆ) ಬಂದರೂ ಅದನ್ನು ಸಹಿಸಿದಲ್ಲದೆ, ಬೇರೆ ಯಾವ ದಾರಿಯೂ ಇಲ್ಲ. ಅದನ್ನು ಸಹಿಸಿ ಆ ಸ್ಥಿತಿ (ದಶೆ)ಯನ್ನು ಮುಗಿಸಬೇಕು ಅಷ್ಟೆ. ಇದನ್ನು ಮಾಡುವುದಕ್ಕೆ ನಮಗೆ ಸಹಾಯಕವಾದುದ್ದು ಸಹನೆ ಎಂಬ ವಜ್ರದ ಕವಚ.

ಸ್ವಾತಿ ಮಳೆಹನಿ ಬೀಳ್ವ, ಶುಕ್ತಿ ಬಾಯ್ದೆರೆದೇಳ್ವ
ಕೌತುಕದ ಸಮಯಯೋಗದೆ ಮೌಕ್ತಿಕ ಫಲ
ಪ್ರೀತಿ ಸುಖ ಸತ್ಯದರ್ಶನ ಶಾಂತಿಗಳ ಹುಟ್ಟುಮ್
ಆ ತೆರದ ಯೋಗದಿನೆ – ಮಂಕುತಿಮ್ಮ

(ಬಾಯಿ+ತೆರೆದು+ಏಳ್ವ)

ಮುತ್ತಿನ ಸೃಷ್ಟಿಯ ಬಗೆಗೆ ಇದೊಂದು ಐತಿಹ್ಯ. ಸ್ವಾತಿ ನಕ್ಷತ್ರದ ಮಳೆಯ ಹನಿ ಬೀಳುವ ವೇಳೆಗೆ, ಮುತ್ತಿನ ಚಿಪ್ಪು ಕಡಲಿನಿಂದ ಮೇಲೆದ್ದು, ಚಿಪ್ಪು ತೆರೆದು ಬಾಯಿ ಬಿಡುತ್ತದಂತೆ; ಆ ಹೊತ್ತಿಗೆ ಒಂದು ಮಳೆಯ ಹನಿ ಅದರ ಬಾಯಿಗೆ ಬಿದ್ದು ಅದರ ಹೊಟ್ಟೆಗೆ ಸೇರುವುದಂತೆ; ಕಾಲಕ್ರಮದಲ್ಲಿ ಆ ಹನಿಯೇ ಅಲ್ಲಿ ಮುತ್ತಾಗಿ ದೊರೆಕೊಳ್ಳುವುದಂತೆ.

ಸ್ವಾತಿ ಮಳೆ ಹನಿ ಬೀಳುವ ಸಮಯದಲ್ಲಿ ಮುತ್ತಿನ ಚಿಪ್ಪು (ಶುಕ್ತಿ) ಬಾಯ್ತೆರೆದು, ಅದರಲ್ಲಿ ಆ ನೀರು ಸೇರುವ, ಕುತೂಹಲಕಾರಿಯಾದ ಸಮಯದ ಯೋಗದಿಂದಲೇ ಮುತ್ತು ಹುಟ್ಟುವುದು (ಮೌಕ್ತಿಕ ಫಲ). ಪ್ರೀತಿ, ಸುಖ, ಸತ್ಯದರ್ಶನ ಮತ್ತು ಶಾಂತಿಗಳ ಹುಟ್ಟುಗಳೂ ಕೂಡ ಈ ತರಹದ ಯೋಗದಿಂದಲೇ ಆಗುತ್ತವೆ.

ಆವ ಋಣಕೋಸುಗವೊ, ಆರ ಹಿತಕೋಸುಗವೊ ।
ಆವಾವ ಕಾರಣಕೊ, ಆವ ಯೋಜನೆಗೋ ॥
ನೋವ ನೀಂ ಪಡುವುದೇ ದೈವೇಚ್ಛೆಯಾಗಿರದೆ? ।
ದೈವ ಕುರುಡೆನ್ನದಿರು –ಮಂಕುತಿಮ್ಮ ॥

(ದೈವ+ಇಚ್ಛೆ+ಆಗಿರದೆ) (ಕುರುಡು+ಎನ್ನದೆ+ಇರು)

ಯಾವ ಯಾವ, ಪೂರ್ವಜನ್ಮಗಳ ಸಾಲಗಳನ್ನು ತೀರಿಸುವುದಕ್ಕೋಸ್ಕರವೋ? ಯಾರ ಹಿತಕ್ಕಾಗಿಯೋ, ಅಥವಾ ಇನ್ನೂ ಯಾವ ಯಾವ ಕಾರಣಗಳಿಗೋ, ನೀನು ನೋವನ್ನು ಪಡೆಯಲೇಬೇಕೆಂಬುದು, ದೈವೇಚ್ಛೆಯಾಗಿದ್ದರೆ ದೈವ ಕುರುಡು ಎನ್ನಬೇಡ.

ಆವುದರಿನಾವಾಗ ದೈವ ತಾನೊಲಿದೀತೊ? ।
ಪೂರ್ವಿಕದ ನಿಯತಿಯನದೆಂದು ಸಡಲಿಪುದೋ? ॥
ಭಾವಿಸುಕೃತವದೆಂದು ಪೂರ್ವದುರಿತಕೆ ಮಿಗಿಲೊ? ।
ದೈವಿಕರಹಸ್ಯವದು – ಮಂಕುತಿಮ್ಮ

(ಆವುದರಿಂ+ಆವಾಗ) (ತಾಂ+ಒಲಿದೀತೋ) (ನಿಯತಿಯಂ+ಅದು+ ಎಂದು) (ಪೂರ್ವ+ದುರಿತ)

ದೈವವು ಯಾವಾಗ ಒಲಿಯುವುದೆನ್ನುವುದನ್ನು ನಾವು ತಿಳಿಯಲಾರೆವು. ಹಾಗೆಯೇ, ಪೂರ್ವಜನ್ಮದ ಋಣಗಳ ನಿಯಮಗಳನ್ನೂ ಕೂಡ ಅದು ಯಾವಾಗ ಸಡಿಲಿಸುವುದೋ, ಅದೂ ನಮಗೆ ತಿಳಿಯದು. ಮುಂದೆ ನಾವು ಮಾಡುವ ಪುಣ್ಯ ಕಾರ್ಯಗಳು, ಹಿಂದೆ ನಾವು ಮಾಡಿದ ಪಾಪಕರ್ಮಗಳಿಗಿಂತ (ದುರಿತ) ಯಾವಾಗ ಮಿಗಿಲಾಗುತ್ತದೆ? ಇದು ದೈವದಲ್ಲಡಗಿರುವ ಗುಟ್ಟು. ನಮಗೆ ತಿಳಿಯಗೊಡುವುದಿಲ್ಲ.

ಭಕ್ತಿ ನಂಬುಗೆ ಸುಲಭ; ಭಜನೆ ವಂದನೆ ಸುಲಭ ।
ತತ್ತ್ವ ಶೋಧನೆ ಕಷ್ಟ; ಮತಿಕಾರ್ಯ ಕಷ್ಟ ॥
ಸುತ್ತುವುದು ಗಿರಿಸುತ್ತ ಸುಳುವೆಂದು ಲೋಕಜನ ।
ಹತ್ತುವನು ತಾಪಸಿಯೊ – ಮಂಕುತಿಮ್ಮ

ಭಕ್ತಿಯ ನಂಬುಗೆ ಸುಲಭ, ಭಜನೆ ನಮಸ್ಕಾರಗಳೂ ಸುಲಭ. ಸಿದ್ಧಾಂತವನ್ನು ಹುಡುಕುವುದು ಕಷ್ಟ ಬುದ್ಧಿಶಕ್ತಿಯಿಂದ ಕೆಲಸ ಮಾಡುವುದು ಕಷ್ಟ ಜಗತ್ತಿನ ಜನಗಳು, ಸುಲಭ (ಸುಳು)ವೆಂದು ಬೆಟ್ಟದ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಆದರೆ ಆ ಬೆಟ್ಟವನ್ನು ಹತ್ತುವವನು ತಪಸ್ವಿ ಮಾತ್ರ, ಸಾಧನೆ ಮಾಡಿದವನು ಮಾತ್ರ, ಜನಸಾಮಾನ್ಯರಿಗೆ, ಮೈಗಳ್ಳರಿಗೆ, ಅದು ನಿಲುಕುವಂಥದ್ದಲ್ಲ.

ವ್ಯಕ್ತಿಮೌಲ್ಯ

ಪರದೈವವನು ತೊರೆಯೆ ಗತಿ ನರನಿಗಿಲ್ಲ ದಿಟ ।
ನರನಿಲ್ಲದಿರೆ ದೇವನನು ಕೇಳ್ವರಾರು? ॥
ಪುರುಷತೆಯೆ ಸೇತುವೆ ಮೃಗತ್ವದಿಂ ದಿವ್ಯತೆಗೆ ।
ಮುರಿಯದಿರು ಸೇತುವೆಯ – ಮಂಕುತಿಮ್ಮ

(ನರನಿಗೆ+ಇಲ್ಲ) (ನರನ್+ಇಲ್ಲದಿರೆ) (ಕೇಳ್ವರ್+ಆರು) (ಮುರಿಯದೆ+ ಇರು)

ಪರಮಾತ್ಮನನ್ನು ಬಿಟ್ಟರೆ, ಮನುಷ್ಯನಿಗೆ ಬೇರೆ ಗತಿ ಇಲ್ಲವೆನ್ನುವುದು ನಿಜ. ಆದರೆ ಮನುಷ್ಯನೇ ಇಲ್ಲದಿದ್ದರೆ, ದೇವರನ್ನು ಕೇಳುವವರು ಯಾರು? ಮೃಗತ್ವದಿಂದ, ದಿವ್ಯತೆಯ ಕಡೆಗೆ ಸಾಗುವುದಕ್ಕೆ, ಪುರುಷತೆಯೇ ಸೇತುವೆ. ಆ ಸೇತುವೆಯನ್ನು ಮುರಿಯಬೇಡ.

ನಿನ್ನ ಕಣ್ ಕಿವಿ ಮನಗಳರಿವಷ್ಟು ನಿನ್ನ ಜಗ
ನಿನ್ನನಳಿಸುವ ನಗಿಸುವೆಲ್ಲ ನಿನ್ನಂಶ
ಉನ್ನತಿಗೆ ನೀನೇರಿದಂತೆ ಜಗ ವಿಸ್ತರಿಸಿ
ಸಣ್ಣತನ ಸವೆಯುವುದು – ಮಂಕುತಿಮ್ಮ

(ಮನಗಳ್+ಅರಿವಷ್ಟು) (ನಿನ್ನಂ+ಅಳಿಸುವ) (ನಗಿಸುವ+ಎಲ್ಲ) (ನಿನ್ನ+ಅಂಶ) (ನೀನ್+ಏರಿದಂತೆ)

ನಿನ್ನ ಕಣ್ಣು, ಕಿವಿ ಮತ್ತು ಮನಸ್ಸುಗಳ ತಿಳಿವಿಗೆ ಬರುವಷ್ಟು ಮಾತ್ರ ನಿನ್ನ ಜಗತ್ತು ಮತ್ತು ನಿನ್ನನ್ನು ಅಳಿಸುವ ಮತ್ತು ನಗಿಸುವ ಭಾಗಗಳಿಗೆ ಸೀಮಿತವಾದದ್ದು. ಎತ್ತರಕ್ಕೆ ನೀನು ಏರಿದಂತೆ, ನಿನ್ನ ಅನುಭವದ ಜಗತ್ತು ವಿಸ್ತಾರವಾಗಿ, ನಿನ್ನ ಸಣ್ಣತನ ಸವೆದುಹೋಗುತ್ತದೆ.

ಕಟ್ಟಡದ ಪರಿಯನಿಟ್ಟಿಗೆಯೆಂತು ಕಂಡೀತು?
ಗಟ್ಟಿ ನಿಲದದು ಬೀಳೆಗೋಡೆ ಬಿರಿಯುವುದು
ಸೃಷ್ಟಿ ಕೋಟೆಯಲಿ ನೀನೊಂದಿಟಕೆ; ಸೊಟ್ಟಾಗೆ
ಪೆಟ್ಟು ತಿನ್ನುವ ಜೋಕೆ – ಮಂಕುತಿಮ್ಮ

(ಪರಿಯನು+ಇಟ್ಟಿಗೆ+ಎಂತು) (ನಿಲದು+ಅದು) (ನೀನು+ಒಂದು+ಇಟಿಕೆ) (ಸೊಟ್ಟು+ಆಗೆ)

ಕಟ್ಟಡವು ಯಾವ ರೂಪದಲ್ಲಿ ಬರುವುದೆಂದು ಇಟ್ಟಿಗೆಗೆ ಹೇಗೆ ತಿಳಿಯುತ್ತದೆ? ಇಟ್ಟಿಗೆ ಗಟ್ಟಿಯಾಗಿ ನಿಲ್ಲದಿದ್ದರೆ, ಗೋಡೆಯಲ್ಲಿ ಬಿರುಕುಂಟಾಗುತ್ತದೆ. ಜಗತ್ತು ಎನ್ನುವ ಈ ಕೋಟೆಯಲ್ಲಿ, ನೀನು ಒಂದು ಇಟ್ಟಿಗೆ ಮಾತ್ರ. ಇಟ್ಟಿಗೆ ಸರಿಯಾಗಿ ನಿಲ್ಲದೆ ಗೋಡೆ ಸೊಟ್ಟಾದರೆ, ಅದನ್ನು ನೆಟ್ಟಗೆ ಮಾಡಲು, ನಿನ್ನನ್ನು ಹೊಡೆಯುತ್ತಾರೆ. ಹುಷಾರಾಗಿದ್ದು, ಗೋಡೆ ಸೊಟ್ಟಾಗಾಗದಿರುವಂತೆ ನೀನು ನಿಲ್ಲು.

ಡಿ.ವಿ.ಜಿ. ಮತ್ತು ನಾಟಕಗಳು

ಡಿ.ವಿ.ಜಿ.ಯವರು ಕೆಲವಾರು ನಾಟಕಗಳನ್ನು ಬರೆದಿದ್ದಾರೆ. ಅವರು ಬರೆದ ಮೊದಲ ನಾಟಕವೆಂದರೆ 'ಕನಕಾಂಬರಿ'. ಇದು ಟೆನಿಸನ್ ಕವಿಯ 'The Cup' ಎಂಬ ಆಂಗ್ಲ ನಾಟಕದ ಕನ್ನಡ ರೂಪಾಂತರ. ಇಂಗ್ಲೀಷ್ ಹೆಸರಿನ ಮೊದಲ ಅಕ್ಷರದಿಂದಲೇ ಕನ್ನಡ ನಾಟಕದ ಪಾತ್ರಗಳನ್ನು, ಪಾತ್ರಧಾರಿಗಳನ್ನು ಕರೆಯುವ ವಾಡಿಕೆಯನ್ನು ಡಿ.ವಿ.ಜಿ.ಯವರ ನಾಟಕಗಳಲ್ಲಿ ಕಾಣಬಹುದು. ಹ್ಯಾಮ್ಲೆಟ್–ಹೇಮಚಂದ್ರ ಎಂತಲೂ ಪೋರ್ಷಿಯ ಪಾಂಚಾಲಿ ಎಂದು ಇವರ ನಾಟಕಗಳಲ್ಲಿ ಪುನರ್‌ನಾಮಕರಣವಾಗಿರುವುದನ್ನು ಕಾಣಬಹುದು. 'ತಿಲೋತ್ತಮೆ' ಎಂಬ ಇವರ ಮತ್ತೊಂದು ನಾಟಕ. ಸಂದೋಪ ಸಂದರೆಂಬ ತಿಲೋತ್ತಮೆಯ ಸೌಂದರ್ಯಕ್ಕೆ ಮರುಳಾಗಿ ಪರಸ್ಪರ ಕಾದಾಡಿ ಇಬ್ಬರೂ ಮರಣ ಹೊಂದುವ ಪೌರಾಣಿಕ ಕಥೆಯನ್ನು ವಸ್ತುವಾಗಿ ಹೊಂದಿದೆ. ಲೋಕಕಲ್ಯಾಣಕ್ಕಾಗಿ ಪಾರ್ವತಿಯು ತಿಲೋತ್ತಮೆ ಎಂಬ ಹೆಸರಿನಲ್ಲಿ ಬಂದು ರಾಕ್ಷಸರನ್ನು ನಾಶಮಾಡುವ ಕಥೆ ಇದಾಗಿದೆ.

ಡಿ.ವಿ.ಜಿ.ಯುವರು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಆಯಾ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಷೇಕ್ಸ್‌ಪಿಯರ್‌ನ ಹೆಸರಾಂತ ಮ್ಯಾಕ್‌ಬತ್, ಜಾತ್‌ಕೇಡ್‌ನಂತಹ ನಾಟಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. 'ಮ್ಯಾಕ್‌ಬೆತ್' ಎಂಬುದು ಷೇಕ್ಸ್‌ಪಿಯರ್‌ನ ರುದ್ರನಾಟಕ. ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಡಿ.ವಿ.ಜಿ.ಯವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುವ ಎಷ್ಟೋ ವರ್ಷಗಳ ಹಿಂದೆ ಶ್ರೀಕಂಠೇಶಗೌಡರು, ಸಿ. ಆನಂದರಾಯರು, ಎಂ.ಎಸ್. ಪುಟ್ಟಪ್ಪನವರು, ಬಸಪ್ಪಶಾಸ್ತ್ರಿಗಳು ಇನ್ನೂ ಮುಂತಾದವರು ಯಶಸ್ವಿಯಾಗಿ ಅನುವಾದಿಸಿದ್ದಾರೆ. ಕನ್ನಡ ರಂಗಭೂಮಿಯ ಮೇಲೆ ಇದೊಂದು ಹೊಸ ಪ್ರಯೋಗವಾಗಿ ಕಂಡಿತು. ಷೇಕ್ಸ್‌ಪಿಯರ್‌ನ ನಾಟಕಗಳ

ಕಥೆಯನ್ನಷ್ಟೇ ಹೇಳದೆ ಆತನು ಬಳಸಿರುವ ಹೆಸರುಗಳು, ನಿರ್ಮಿಸಿರುವ ವಾತಾವರಣ, ಪಾತ್ರಗಳು ಇವೇ ಮುಂತಾದವುಗಳಿಗೆ ಭಂಗ ಬರದಂತೆ ಡಿ.ವಿ.ಜಿ.ಯವರು ನೋಡಿಕೊಂಡಿದ್ದಾರೆ. ಮ್ಯಾಕ್‌ಬೆತ್ ನಾಟಕವನ್ನು ಡಿ.ವಿ.ಜಿ.ಯವರು ಏಕೆ ಭಾಷಾಂತರ ಮಾಡಲು ಒಪ್ಪಿಕೊಂಡರು ಎಂದರೆ ಷೇಕ್ಸ್‌ಪಿಯರ್‌ನ ನಾಟಕಗಳಲ್ಲೇ ಇದು ಶ್ರೇಷ್ಠವಾಗಿರುವುದು. ಆಸೆಯೇ ದುಃಖಕ್ಕೆ ಕಾರಣ ಎಂದು ಭಗವಾನ್ ಬುದ್ಧನು ಹೇಳುತ್ತಾನೆ ನಿಜ. ಆಸೆಯಿಂದ ತಪ್ಪಿಸಿಕೊಳ್ಳುವುದು ಎಷ್ಟು ಕಷ್ಟ ಎಂಬುದನ್ನು ಷೇಕ್ಸ್‌ಪಿಯರ್‌ನು ಈ ನಾಟಕದಲ್ಲಿ ತಿಳಿಸಿದ್ದಾನೆ. ಮಾಟ, ಮಂತ್ರ ಪಿಶಾಚಿ, ಯಕ್ಷಣಿಯರು ಇವೇ ಮುಂತಾದ ಮೂಢನಂಬಿಕೆಗಳನ್ನು ಕವಿ ಹೇಗೆ ಬಳಸಿಕೊಂಡಿದ್ದಾನೆ. ಅಂದು ಇಂಗ್ಲೆಂಡಿನ ಜನರಿಗೆ ನಂಬಿಕೆ ಇತ್ತು ಎಂಬುದು ಇದರಿಂದ ತಿಳಿಯುತ್ತದೆ. ಡಿ.ವಿ.ಜಿ.ಯವರ ಅನುವಾದಿತ ಮ್ಯಾಕ್‌ಬೆತ್ ನಾಟಕವು ಇಂದಿಗೂ ಅತ್ಯುತ್ತಮ ನಾಟಕಗಳಲ್ಲಿ ಒಂದಾಗಿದೆ.

ಡಿ.ವಿ.ಜಿ.ಯವರು ಎಷ್ಟು ಪ್ರಖ್ಯಾತರಾಗಿದ್ದರೆಂದರೆ 1967ರಲ್ಲಿ ಬೆಂಗಳೂರಿಗೆ ಬಂದಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯಾಗಿದ್ದ ಕೃಷ್ಣಕೃಪಲಾನಿಯವರು ಡಿ.ವಿ.ಜಿ.ಯವರನ್ನು ನೋಡಬೇಕೆಂದು ಶ್ರೀ ಜಿ. ವೆಂಕಟಸುಬ್ಬಯ್ಯನವರನ್ನು ಕೇಳಿಕೊಂಡರು. ವೆಂಕಟಸುಬ್ಬಯ್ಯನವರು ಅವರನ್ನು ಡಿ.ವಿ.ಜಿ.ಯವರ ಬಳಿಗೆ ಕರೆದುಕೊಂಡು ಹೋದರು. ಸುಮಾರು ಎರಡು ಗಂಟೆಗಳ ಕಾಲ ಮಾತನಾಡಿದರು.

ಡಿ.ವಿ.ಜಿ.ಯವರು ಮುಂದೆ ವಿದ್ಯಾರಣ್ಯ ವಿಜಯ, ಜಾಕ್‌ಕೌಡ್, ಪ್ರಹಸನತ್ರಯೀ, ಪರಶುರಾಮ ಇವೇ ಮುಂತಾದ ನಾಟಕಗಳನ್ನು ರಚಿಸಿದರು. ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದು ರಾಜಕಾರಣಿಗಳ ಚುನಾವಣಾ ಬೂಟಾಟಿಕೆ ಇವೇ ಮುಂತಾದವುಗಳನ್ನು ನಾಟಕದಲ್ಲಿ ಬಿಂಬಿಸಿದ್ದಾರೆ.

ಮಕ್ಕಳ ಸಾಹಿತ್ಯ

ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಮೂಡಿಸಲು ಎರಡು ಮಕ್ಕಳ ಪುಸ್ತಕಗಳನ್ನು ಬರೆದರು. ಅವೇ 'ಬೆಕ್ಕೋಜಿ' ಮತ್ತು 'ಇಂದ್ರವಜ್ರ' ಎಂಬ ಕೃತಿಗಳು. ಜರ್ಮನಿ, ಇಂಗ್ಲೆಂಡ್, ಜಪಾನಿನಲ್ಲಿ ಜನಜನಿತವಾಗಿರುವ ಕಥೆಗಳನ್ನು ಅನುಸರಿಸಿ ಈ ಮೇಲಿನ ಎರಡು ಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ಮೂರು ಕಥೆಗಳಿವೆ. ಮುಖ್ಯವಾಗಿ ಭಾರತದ ಜನಪದ ಕಥೆಗಳು, ವಿಕ್ರಮಾಂಕನ ಸಿಂಹಾಸನವನ್ನು ಭೋಜರಾಜನು ಉಪಯೋಗಿಸಿದ ಕಥೆಯನ್ನು ಸ್ವಲ್ಪ ವಿಸ್ತಾರವಾಗಿ ಬರೆದಿದ್ದಾರೆ.

ಇವುಗಳು ಮಕ್ಕಳ ಆಸಕ್ತಿಯನ್ನು ಕೆರಳಿಸಿ ಓದಿನಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಇವು ನೆರವಾಗುತ್ತವೆ.

ಜ್ಞಾಪಕ ಚಿತ್ರಶಾಲೆ

ಡಿ.ವಿ.ಜಿ.ಯವರ ವಿನೂತನ ಪ್ರಯೋಗ ಎಂಟು ಸಂಪುಟಗಳ ಸುಮಾರು ಮುನ್ನೂರು ವ್ಯಕ್ತಿಗಳ ವ್ಯಕ್ತಿಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಒಂದುನೂರು ವರ್ಷಗಳ ಆಸುಪಾಸಿನಲ್ಲಿ ಜೀವಿಸಿದ್ದ, ತಾವು ಕಂಡು ಕೇಳಿದ್ದ ಮೈಸೂರು ಸಂಸ್ಥಾನದ ಸುಪ್ರಸಿದ್ದ ಹಾಗೂ ಸಾಮಾನ್ಯ ವ್ಯಕ್ತಿಗಳನ್ನು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. 1969ರಿಂದ 1977ರ ಅವಧಿಯಲ್ಲಿ ಒಟ್ಟು ಎಂಟು ಕೃತಿಗಳು ಹೊರಬಂದವು. ಪುಸ್ತಕಗಳ ಹೆಸರೇ ಸೂಚಿಸುವಂತೆ ಡಿ.ವಿ.ಜಿ.ಯವರ ನೆನಪಿನ ಅಂಗಳದಲ್ಲಿರುವ ವ್ಯಕ್ತಿಗಳನ್ನು ಕಟ್ಟಿಕೊಟ್ಟಿದ್ದಾರೆ. ಅವರ ಆ 8 ಕೃತಿಗಳು ಈ ಕೆಳಕಂಡಂತಿವೆ.

1) ಸಾಹಿತಿ, ಸಜ್ಜನ, ಸಾರ್ವಜನಿಕರು
2) ಕಲೋಪಾಸಕರು
3) ಸಾಹಿತ್ಯೋಪಾಸಕರು
4) ಮೈಸೂರಿನ ದಿವಾನರುಗಳು
5) ವೈದಿಕಧರ್ಮ ಸಂಪ್ರದಾಯಸ್ಥರು
6) ಹಲವರು ಸಾರ್ವಜನಿಕರು
7) ಹೃದಯ ಸಂಪನ್ನರು
8) ಸ್ಮೃತಿ ಚಿತ್ರಗಳು

ಈ ಕೃತಿಗಳಲ್ಲಿ ಶೇಷಾದ್ರಿ ಅಯ್ಯರ್, ಸರ್ ಎಂ.ವಿ.ಯವರಂಥ ಶ್ರೇಷ್ಠ ದಿವಾನರುಗಳು, ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು, ಎಂ. ವೆಂಕಟಕೃಷ್ಣಯ್ಯ ಬೆಳ್ಳಾವೆ ವೆಂಕಟನಾರಾಯಣಪ್ಪ, ತಳುಕಿನ ವೆಂಕಣ್ಣಯ್ಯ, ಬಿ.ಎಂ.ಶ್ರೀಕಂಠಯ್ಯ, ಎಂ. ಹಿರಿಯಣ್ಣ, ರಾ. ನರಸಿಂಹಾಚಾರ್, ಎ.ಆರ್. ಕೃಷ್ಣಶಾಸ್ತ್ರಿ ಇವರೇ ಮುಂತಾದವರ ಬಗ್ಗೆ ತಮ್ಮ 'ಜ್ಞಾಪಕ ಚಿತ್ರಶಾಲ' ಕೃತಿಗಳಲ್ಲಿ ದಾಖಲಿಸಿದ್ದಾರೆ. ಇಷ್ಟೇ ಅಲ್ಲದೆ ಕಾವ್ಯಮೀಮಾಂಸೆ–ವಿಮರ್ಶೆ, ರಾಜ್ಯಾಡಳಿತ– ರಾಷ್ಟ್ರಧರ್ಮ ಇವೇ ಮುಂತಾದ ಕೃತಿಗಳು ಹೊರಬಂದಿವೆ.

ಸಾಹಿತ್ಯ ಸಂಘ ಸಂಸ್ಥೆಗಳೊಂದಿಗಿನ ಒಡನಾಟ

ಸಾಹಿತಿಗಳ ಹಾಗೂ ಸಜ್ಜನರ ಸಂಸ್ಥೆಗಳೆಂದೇ ಬಿಂಬಿತವಾದ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಗೋಖಲೆ ಸಾರ್ವಜನಿಕ ಸಂಸ್ಥೆಯೂ ಅಲ್ಲದೆ ವಸಂತ ಸಾಹಿತ್ಯೋತ್ಸವ ಎಂಬ ಸಂಘ ಸಂಸ್ಥೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡರು. ಕನ್ನಡ ಭಾಷೆ ಸಾಹಿತ್ಯಗಳ ಬೆಳವಣಿಗೆಗಾಗಿ 03.5.1915ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿ.ರವರ ಶ್ರಮದಿಂದ ಸ್ಥಾಪನೆಯಾಯ್ತು. ಡಿ.ವಿ.ಜಿ.ಯವರು ಪರಿಷತ್ತನ್ನು ಬೆಳೆಸಲು ದುಡಿದರು. ಈ ಸಂಸ್ಥೆಯ ಉದ್ದೇಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಯ ಹೇಳುವ ಸಲುವಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜ್‌ನಲ್ಲಿ 1918ರಲ್ಲಿ 'ಕರ್ನಾಟಕ ಸಂಘ' ಎಂಬ ಸಂಘವು ಹುಟ್ಟಿಕೊಂಡಿತು. ಕರ್ನಾಟಕದಲ್ಲಿ ವಿದ್ಯಾರ್ಥಿಗಳ ಅಂಗಳದಲ್ಲಿ ವಿದ್ಯಾರ್ಥಿಗಳು ಮತ್ತು ಯುವಕರಿಗಾಗಿ ಸ್ಥಾಪನೆಯಾದ ಮೊದಲ ಸಂಘವೆಂದೇಳಬಹುದು. ವಿದ್ಯಾರ್ಥಿಗಳು ಹಾಗೂ ಯುವಕರಲ್ಲಿ ಕನ್ನಡಭಾಷೆ ಮತ್ತು ಸಾಹಿತ್ಯದ ಬಗ್ಗೆ ಅಭಿಮಾನ ಮೂಡಲಿ ಎಂಬ ಉದ್ದೇಶದಿಂದ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು ಡಿ.ವಿ.ಜಿ.ಯವರ 'ವಸಂತ ಕುಸುಮಾಂಜಲಿ', ನಿವೇದನ, ಬಿ.ಎಂ.ಶ್ರೀ.ಯವರ ಇಂಗ್ಲಿಷ್ ಗೀತೆಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರರ 'ತಾವರೆ' ಕೃತಿಗಳನ್ನು ಅಚ್ಚುಹಾಕಿಸಿ ಉಚಿತವಾಗಿ ಹಂಚುವ ವ್ಯವಸ್ಥೆಯನ್ನು ಮಾಡಿದರು. ಸಾಹಿತ್ಯ ಪರಿಷತ್ತಿನಲ್ಲಿ ಮುಂದಾಳಾಗಿದ್ದ ಪ್ರೊ. ಬಿ. ವೆಂಕಟನಾರಾಯಣಪ್ಪನವರು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರು. ಬಹಳ ವರ್ಷಗಳ ಕಾಲ ಕರ್ನಾಟಕ ಸಂಘದ ಕಾರ್ಯ ಕಲಾಪಗಳು ಪರಿಷತ್ತಿನ ಕಾರ್ಯಕಲಾಪಗಳಿಗಿಂತ ಮಿಗಿಲಾಗಿ ನಡೆಯುತ್ತಿತ್ತು. ಡಿ.ವಿ.ಜಿ.ಯವರ ಪುತ್ರ ಡಾ. ಬಿ.ಜಿ.ಎಲ್. ಸ್ವಾಮಿ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ 1936ರಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು. ಅವರ ನೆನಪುಗಳನ್ನು 'ಪಂಚ ಕಳಸ ಗೋಪುರ' ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. 'ಸಾಹಿತ್ಯ ಮತ್ತು ಜನಜೀವನ' ಎಂಬ ವಿಷಯದ ಮೇಲೆ ಭಾಷಣ ಮಾಡಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗೆ ಒತ್ತುಕೊಡುವಂತೆ ಹೇಳಿದ್ದಾರೆ. 1933ರಲ್ಲಿ ಡಿ.ವಿ.ಜಿ.ಯವರು ಪರಿಷತ್ತಿನ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಡಿ.ವಿ.ಜಿ.ಯವರು ಯಾವುದೇ ಹುದ್ದೆಯನ್ನಲಂಕರಿಸಿದರೆ ಅದನ್ನು ಬಹಳ ಶ್ರದ್ದೆಯಿಂದ ಮಾಡುತ್ತಿದ್ದರು. 1927 ರಿಂದ 1940ರ ವರೆಗೆ ಶಾಸನ ಪರಿಷತ್ ಸದಸ್ಯರಾಗಿ, ಮೈಸೂರು

ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ (1927-43) ಮೈಸೂರು ರಾಜ್ಯ ನಿಬಂಧನ ಸುಧಾರಣೆಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

'ವಸಂತ ಸಾಹಿತ್ಯೋತ್ಸವ' ಎಂಬ ಪ್ರಾಯೋಗಿಕ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಇದರ ಹಿಂದಿನ ಉದ್ದೇಶವೇನೆಂದರೆ ರಾಜ್ಯದ ಶಾಲಾ ಕಾಲೇಜುಗಳ ಉಪಾಧ್ಯಾಯರುಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು ವಿದ್ವಾಂಸರು ಮತ್ತು ವಿಷಯ ತಜ್ಞರಿಂದ ಒಳ್ಳೆಯ ಉಪನ್ಯಾಸಗಳನ್ನು ಏರ್ಪಡಿಸಿ ಅವರ ಜ್ಞಾನವನ್ನು ಹೆಚ್ಚಿಸುವಂತೆ ಮಾಡುವುದು. ಇದಕ್ಕೆ ಸ್ಪಂದಿಸಿದ 250 ಉಪಾಧ್ಯಾಯರು ಈ ಕಮ್ಮಟಕ್ಕೆ ಆಗಮಿಸಿದರು. ಇದಕ್ಕೆ ತಗಲುವ ಖರ್ಚನ್ನು ಸರ್ಕಾರ ಭರಿಸುವಂತೆ ಮಾಡಿದವರು ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಿದ್ದ ಎನ್.ಎಸ್. ಸುಬ್ಬರಾಯರು.

ಮತ್ತೊಂದು ಸಂಸ್ಥೆಯೆಂದರೆ 'ಗೋಖಲೆ ಸಾರ್ವಜನಿಕ ಸಂಸ್ಥೆ' 1915ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ವಿಧಿವಶರಾದರು. 'ಮೈಸೂರು ಸೋಷಿಯಲ್ ಸರ್ವಿಸ್ ಲೀಗ್' ಎಂಬ ಸಂಸ್ಥೆಯು ಸಂತಾಪ ಸೂಚನಾ ಸಭೆಯನ್ನು ಏರ್ಪಡಿಸಿ ಸರ್ ಎಂ.ವಿ.ಯವರನ್ನು ಬರಮಾಡಿಕೊಂಡಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಸರ್ ಎಂ.ವಿ.ಯವರ ಭಾಷಣವನ್ನು ಕೇಳಿ ಪುಲಕಿತರಾದ ಡಿ.ವಿ.ಜಿ.ಯವರಿಗೆ ಒಂದು ಆಲೋಚನೆ ಹೊಳೆಯಿತು. ಗಾಂಧೀಜಿಯುವರನ್ನು ಕರೆಸಿ ಗೋಖಲೆಯವರ ಭಾವಚಿತ್ರವನ್ನು ಏಕೆ ಅನಾವರಣಗೊಳಿಸಬಾರದು ಎಂದು. ಗಾಂಧೀಜಿಯವರು ಆಗ ದಕ್ಷಿಣ ಆಫ್ರಿಕಾದಲ್ಲಿ ಪ್ರವಾಸ ಕೈಗೊಂಡಿದ್ದರು. ಗಾಂಧೀಜಿಯವರು ಬೆಂಗಳೂರಿಗೆ ಬಂದು ಈ ಕಾರ್ಯವನ್ನು ನೆರವೇರಿಸಿ ಕೊಡಬೇಕೆಂದು ಕೇಳಿಕೊಂಡರು. ಅವರ ಮನವಿಗೆ ಓಗೊಟ್ಟ ಗಾಂಧೀಜಿಯವರು 08.05.1915ರಂದು ಬೆಂಗಳೂರಿಗೆ ಬಂದು ಗೋಖಲೆಯವರ ಭಾವಚಿತ್ರವನ್ನು ಅನಾವರಣ ಮಾಡಿದರು. 1945ರಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಯು ಸ್ವಂತ ಕಟ್ಟಡವನ್ನು (ಬಸವನಗುಡಿ) ಪಡೆದು ಅಲ್ಲಿ ಗ್ರಂಥಾಲಯ, ಉಪನ್ಯಾಸ ಕೊಠಡಿಗಳ ಕಟ್ಟಡವನ್ನು ಹೊಂದಿತು. ಇಂದಿಗೂ ಬಸವನಗುಡಿ ದೊಡ್ಡಬಸವಣ್ಣನ ದೇವಾಲಯದ ರಸ್ತೆಯಲ್ಲಿ ಕಾಣಬಹುದು. ಗೋಖಲೆ ಸಂಸ್ಥೆಯು ಸ್ಥಾಪನೆಯಾದಾಗಿನಿಂದ ಯಾವ ಹಣ ಸಂದಾಯವಾದರೂ ಅದು ಆ ಸಂಸ್ಥೆಯ ಲೆಕ್ಕಕ್ಕೆ ಸೇರುವಂತೆ ಮಾಡಿದರು. ಸಾರ್ವಜನಿಕ ಸಮಾರಂಭದಲ್ಲಿ ಅವರಿಗೆ ಗೌರವಧನ ಅರ್ಪಿಸಿದರೆ ಅದನ್ನು ಸಂಸ್ಥೆಗೆ ಸೇರಿಸಿದರು. ಸಾರ್ವಜನಿಕ ಸಮಾರಂಭ ಒಂದರಲ್ಲಿ ಒಂದು ಲಕ್ಷ ರೂಪಾಯಿಯನ್ನು ಡಿ.ವಿ.ಜಿ.ಯವರಿಗೆ ಸಲ್ಲಿಸಿದಾಗ ಅಷ್ಟೂ ಹಣವನ್ನು ಸಂಸ್ಥೆಗೆ ನೀಡಿದರು. ಡಿ.ವಿ.ಜಿ.ಯವರು ಕವನ,

ಕಾವ್ಯ, ನಾಟಕ, ಜೀವನ ಚರಿತ್ರೆ ಹೀಗೆ ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಹತ್ತಾರು ಕೃತಿಗಳನ್ನು ರಚಿಸಿದ್ದರೂ ಇವರ 'ಮಂಕುತಿಮ್ಮನ ಕಗ್ಗ' ಜನಮಾಸವನ್ನು ಗೆದ್ದಿದೆ. ತಮ್ಮ ಉಸಿರಿರುವ ತನಕ ಸಾಹಿತ್ಯಕ್ಕಾಗಿ ದುಡಿದರು. 1973ರ ಸಂದರ್ಭದಲ್ಲಿ ಅವರ ಆರೋಗ್ಯ ಹದಗೆಡತೊಡಗಿತು. ಅಕ್ಟೋಬರ್ 2 1975 ರಲ್ಲಿ ಇಹಲೋಕ ತ್ಯಜಿಸಿದರು.

ಡಿ.ವಿ.ಜಿ.ಯವರ ಕೃತಿಗಳು

ಕನ್ನಡ

1. ಜೀವನ ಚರಿತ್ರೆಗಳು
    1. ದಿವಾನ್ ರಂಗಾಚಾರ್ಲು – 1911
    2. ಗೋಪಾಲಕೃಷ್ಣ ಗೋಖಲೆ – 1915
    3. ವಿದ್ಯಾರಣ್ಯ ವೃತ್ತಾಂತ – 1933
    4. ವಿದ್ಯಾರಣ್ಯರ ಸಮಕಾಲೀನರು – 1934
    5. ದಾದಾಭಾಯಿ ನವರೋಜಿ – 1950
    6. ರಾಜಾರಾಮ್ ಮೋಹನರಾಯ್ – 1950
    7. ಜಾರ್ಜ್ ಚಕ್ರವರ್ತಿಗಳ ಕಿರೀಟಧಾರಣೆ – 1951
2. ಕವಿತೆ
    1. ವಸಂತ ಕುಸುಮಾಂಜಲಿ – 1922
    2. ನಿವೇದನ – 1924
    3. ವಿದ್ಯಾರಣ್ಯಸ್ತುತಿ – 1924
    4. ಉಮರನ ಒಸಗೆ – 1930
    5. ಕುಮಾರವ್ಯಾಸ ದರ್ಶನ – 1933
    6. ಶ್ರೀರಾಮಪರೀಕ್ಷಣಂ – 1945
    7. ಭಾರತಭೂವಂದನಂ – 1946
    8. ಮಹಾತ್ಮಗಾಂಧಿ ಜ್ಞಾಪಕ ಪದ್ಯ – 1947

    79. ಅಂತಃಪುರಗೀತೆ – 1949

    10. ಮಂಕುತಿಮ್ಮನ ಕಗ್ಗ – 1943

11. ಮಹಾಚುನಾವಣೆ – 1947
12. ವಾಲ್ಮೀಕಿ ವ್ಯಾಸ ವಂದನಂ – 1948
13. ಗೀತ ಶಾಕುಂತಲಮ್ – 1949
14. ಶೃಂಗಾರ ಮಂಗಳಂ – 1970
15. ಶ್ರೀಕೃಷ್ಣ ಪರೀಕ್ಷಣಂ – 1973
16. ಕೇತಕೀವನ – 1974
17. ಮರುಳು ಮುನಿಯನ ಕಗ್ಗ – 1975

3. ನಾಟಕ

1. ಕನಕಾಲುಕಾ – 1911
2. ತಿಲೋತ್ತಮೆ – 1921
3. ಮ್ಯಾಕ್‌ಬೆತ್ – 1936
4. ವಿದ್ಯಾರಣ್ಯ ವಿಜಯ – 1947
5. ಜಾಕ್ ಕೇಡ್ – 1949
6. ಪ್ರಹಸನತ್ರಯೀ – 1974
7. ಪರಶುರಾಮ – 1974

4. ಭಾರತೀಯ ಸಂಸ್ಕೃತಿ / ಧರ್ಮ

1. ಬಾಳಿಗೊಂದು ನಂಬಿಕೆ – 1950
2. ಪುರುಷ ಸೂಕ್ತ – 1953
3. ಈಶೋಪನಿಷತ್ತು – 1953
4. ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನ ಧರ್ಮಯೋಗ – 1954
5. ದೇವರು – 1973
6. ಋತ–ಸತ್ಯ–ಧರ್ಮ – 1975
7. ಸಂಸ್ಕೃತಿ – 1954
8. ಶ್ರೀಮದಾಂಜನೇಯ ಸ್ವಾಮಿ – 1976

5. ಕಾವ್ಯಮೀಮಾಂಸೆ–ವಿಮರ್ಶೆ

1. ಜೀವನಸೌಂದರ್ಯ ಮತ್ತು ಸಾಹಿತ್ಯ
2. ಸಾಹಿತ್ಯ ಶಕ್ತಿ – 1950
3. ಕಾವ್ಯ ಸ್ವಾರಸ್ಯ – 1975

6. ಮಕ್ಕಳ ಸಾಹಿತ್ಯ

1. ಬೆಕ್ಕೋಜಿ – 1911
2. ಇಂದ್ರವಜ್ರ – 1912

7. ರಾಜ್ಯಾಡಳಿತ–ರಾಷ್ಟ್ರಧರ್ಮ

1. ಮೈಸೂರಿನ ಕೈಗನ್ನಡಿ – 1915
2. ವೃತ್ತಪತ್ರಿಕೆ – 1928
3. ಸ್ವರಾಜ್ಯ ಎಂದರೇನು – 1944
4. ರಾಜ್ಯಶಾಸ್ತ್ರ – 1952
5. ರಾಜ್ಯಾಂಗ ತತ್ವಗಳು – 1954
6. ರಾಜಕೀಯ ಪ್ರಸಂಗಗಳು (1) – 1958
7. ರಾಜಕೀಯ ಪ್ರಸಂಗಗಳು (2) – 1958
8. ಇಂಡಿಯಾದ ಭಾಷಾ ಪ್ರಶ್ನೆ–ಇಂಗ್ಲಿಷ್‌ನ ಸ್ಥಾನ – 1959
9. ಸಾರ್ವಜನಿಕದಲ್ಲಿ ಸಾತ್ವಿಕ – 1971
10. ರಾಜ್ಯಕುಟುಂಬ – 1973

8. ಜ್ಞಾಪಕ ಚಿತ್ರಶಾಲೆ

1. ಸಾಹಿತಿ ಸಜ್ಜನ ಸಾರ್ವಜನಿಕರು – 1969
2. ಕಲೋಪಾಸಕರು – 1970
3. ಸಾಹಿತ್ಯೋಪಾಸಕರು – 1970
4. ಮೈಸೂರಿನ ದಿವಾನರುಗಳು – 1971
5. ವೈದಿಕಧರ್ಮ ಸಂಪ್ರದಾಯಸ್ಥರು – 1972
6. ಹಲವರು ಸಾರ್ವಜನಿಕರು – 1973
7. ಹೃದಯಸಂಪನ್ನರು – 1972
8. ಸ್ಮೃತಿಚಿತ್ರಗಳು – 1977

ಇಂಗ್ಲಿಷ್ ಭಾಷೆಯಲ್ಲಿ ರಚಿಸಿದ ಪ್ರಮುಖ ಲೇಖನಗಳು

The problems of Indian Native States (Open letters to H.H. The Maharaja of Bikaneer) (1917).

The Native States in the Empire (Memorial to Rt. Hon. E.S. Monteagu) (1918).

The Indian Native States and the Monteagu-Chelmsford Report (1918).

The Government of India and the Indian States (Draft Scheme of Federation) (1926).

The Indian States Committee: A note on the terms of reference and their implications (presented to the butler Committee) (1928).

The States and their people in the Indian Constitution (1931).

All about Mysore (Hand Book) (1931).

Note (of Dissent) appended to the report of the committee on Constitutional reforms in Mysore (1939).

The case of the people of the Indian States (Memorandum of Sir Stafford Cripps) (1942)

All India Union (Memorandum to the (Sapru) Conciliation Committee) (1945)

Simla and After (1945)

All India Federal Union (Sequel to All India Union) (1946)

The Cabinet Deligation and after (1946)

The Constitution Assembly and the States (1946)

The Indian Independence Act 1947 (1947)

The Indian States and the Linguistic Problem (contributed to the

Indian Year Book of International Affairs) (1954)

Gokhale for Today: Liberalism Restated (1958) etc.,

(ಇದಲ್ಲದೆ ರಾಜಕೀಯ, ಸಾಮಾಜಿಕ ಜೀವನ, ಆಡಳಿತ, ಪತ್ರಿಕಾ ಪ್ರಪಂಚ, ಸಾಹಿತ್ಯ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಹಾಗೆ ನೂರಾರು ಬಿಡಿ ಲೇಖನಗಳನ್ನು ಕನ್ನಡದಲ್ಲಿಯೂ, ಇಂಗ್ಲಿಷ್‌ನಲ್ಲಿಯೂ ಬರೆದಿದ್ದಾರೆ)



ಶಿವರಾಮ ಕಾರಂತ

ಶಿವರಾಮ ಕಾರಂತರು ಕನ್ನಡ ನಾಡಿನ ಧೀಮಂತ ಸಾಹಿತಿ. ಬಹುಮುಖ ಪ್ರತಿಭೆಯ ಕವಿ. ಇವರನ್ನು 'ನಡೆದಾಡುವ ವಿಶ್ವವಿದ್ಯಾಲಯ', ವಿಶ್ವಕೋಶ, 'ಕಡಲ ತೀರದ ಭಾರ್ಗವ' ಇವೇ ಮುಂತಾಗಿ ಕರೆಯುತ್ತಾರೆ. ಇವರು ರಚಿಸಿರುವ ತಮ್ಮ ಆತ್ಮಚರಿತ್ರೆ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಹತ್ತು ಮುಖಗಳಲ್ಲ ನೂರು ಮುಖಗಳು ಎಂದರೆ ತಪ್ಪಾಗಲಾರದು.

ಸಾಹಿತ್ಯ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ರಂಗಭೂಮಿ, ವಿಜ್ಞಾನ, ಚಲನಚಿತ್ರ, ಶಿಕ್ಷಣ, ಪತ್ರಿಕೋದ್ಯಮ, ರಾಜಕೀಯ, ಪರಿಸರ, ಭಾಷೆ, ಸಂಸ್ಕೃತಿ ಇವೇ ಮುಂತಾದ ವಿಷಯಗಳಲ್ಲಿ ಆಳವಾದ ಜ್ಞಾನವಿತ್ತು. 'ಆಡುಮುಟ್ಟದ ಸೊಪ್ಪಿಲ್ಲ' ಎಂಬ ಮಾತು ಬಹುಶಃ ಕಾರಂತರಿಗೆ ಬಹುವಾಗಿ ಸಲ್ಲುತ್ತದೆ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಓದನ್ನು ನಿಲ್ಲಿಸಬೇಕಾಗಿ ಬಂತು. ಅದೊಂದನ್ನು ಬಿಟ್ಟರೆ ಜ್ಞಾನದ ವಿಷಯದಲ್ಲಿ ಅವರಿಗೆ ಸರಿಸಮಾನರು ಯಾರೂ ಇಲ್ಲ. ಕಾರಂತರಿಗೆ ನಾಡಿನ ಹಲವಾರು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿಗಳನ್ನು ಕೊಡಮಾಡಿದವು. ಕೇಂದ್ರ 'ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಪಂಪ ಪ್ರಶಸ್ತಿ', 'ಜ್ಞಾನಪೀಠ ಪ್ರಶಸ್ತಿ'ಗಳಂತಹ ಪ್ರಶಸ್ತಿಗಳು ಲಭಿಸಿದವು. ಕಾದಂಬರಿ ಅವರ ಮುಖ್ಯ ಸಾಹಿತ್ಯ ಪ್ರಕಾರವಾಗಿದ್ದರೂ ಕಾವ್ಯ, ನಾಟಕ, ಸಣ್ಣಕಥೆ, ಹರಟೆ–ವಿಡಂಬನೆ, ಬಾಲಸಾಹಿತ್ಯ, ವಿಚಾರ ಸಾಹಿತ್ಯ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪ, ವಯಸ್ಕರ ಶಿಕ್ಷಣ, ಪ್ರವಾಸ ಕಥನ, ಜೀವನ ಚರಿತ್ರೆ, ಆತ್ಮಕಥೆ, ನಿಘಂಟು, ಪತ್ರಿಕೋದ್ಯಮ, ಸಂಪಾದನೆ, ಅನುವಾದ, ಮಕ್ಕಳಿಗಾಗಿ ವಿಜ್ಞಾನ ಇವೇ ಮುಂತಾದ ಹಲವು ಹತ್ತು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ದೈತ್ಯ ಪ್ರತಿಭೆ.

ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬ ಊರಿನಲ್ಲಿ 1902 ಅಕ್ಟೋಬರ್ 10ರಂದು ಜನಿಸಿದರು. ಇವರ ತಂದೆ–ತಾಯಿಗಳು ಶೇಷ ಕಾರಂತರು ಮತ್ತು ಲಕ್ಷ್ಮಿ ಕಾರಂತರು. ಚಿಕ್ಕ ವಯಸ್ಸಿನಲ್ಲೇ ಉಡುಪಿ ಸುತ್ತಮುತ್ತಲಿನ ಪ್ರಕೃತಿ, ಪ್ರಾಣಿ, ಪಕ್ಷಿಗಳೊಂದಿಗೆ ಆಡಿ ಬೆಳೆದವರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಕೋಟ ಮತ್ತು ಅದಕ್ಕೆ ಎಂಟು ಮೈಲಿ ದೂರವಿದ್ದ ಕುಂದಾಪುರದಲ್ಲಿ ಓದಿದರು. 1920ರಲ್ಲಿ ಎಸ್.ಎಸ್.ಎಲ್.ಸಿ. ಓದಿ ಮುಗಿಸಿದರು. ಸಂಪ್ರದಾಯಸ್ಥ ಮನೆಯಲ್ಲಿ ಹುಟ್ಟಿ ಬೆಳೆದವರಾದರೂ ಓದುವಾಗ ಅನ್ಯಜಾತಿಯವರೊಂದಿಗೆ ಕೂಡಿ ಬೆಳೆದುದರ ಪರಿಣಾಮವಾಗಿ ಜಾತ್ಯಾತೀತತೆ ಬೆಳೆಯಿತು. 1920 ಜೂನ್ ತಿಂಗಳಿನಲ್ಲಿ ಮಂಗಳೂರಿನ ಸರ್ಕಾರಿ ಕಾಲೇಜನ್ನು ಸೇರಿ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಆರಿಸಿಕೊಂಡರು. ಕಾರಂತರು ಓದಿನಲ್ಲಿ ಚುರುಕು. ಆಟ ಪಾಠಗಳಲ್ಲಿಯೂ ಅದೇ ರೀತಿ. ಮಾಸ್ತರಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿ, ಸಹಪಾಠಿಗಳಿಗೆ ಉತ್ತಮ ಹಾಗೂ ನಂಬಿಕಸ್ಥ ಗೆಳೆಯ. ಮಡಿ ಮೈಲಿಗೆ, ಅಸ್ಪೃಶ್ಯತಾಚಾರಣೆ ಅವರಿಗೆ ಒಗ್ಗದ ಕಷಾಯ, ಅವರು ಎಂದಿಗೂ ಒಪ್ಪುತ್ತಿರಲಿಲ್ಲ.

ಸ್ವಾತಂತ್ರ್ಯ ಹೋರಾಟದಲ್ಲಿ ಕಾರಂತರು

1920ರಲ್ಲಿ ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಚಳುವಳಿಗೆ ಧುಮುಕಲಾಗಿ ರಾಷ್ಟ್ರೀಯ ಆಂದೋಲನದ ಗತಿಯೇ ಬದಲಿಸಿತು. ಇಡೀ ರಾಷ್ಟ್ರವು ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸ ತೊಡಗಿತು, ಜನಜಾಗೃತಿ ಬೆಳೆಯಿತು. ಅಬಾಲ ವೃದ್ಧರಾಗಿ ಸ್ವಾತಂತ್ರ್ಯದ ಕಡೆಗೆ ಮುಖಮಾಡಿದರು. ಯುವಕ ಶಿವರಾಮ ಕಾರಂತರನ್ನೂ ಬಿಡಲಿಲ್ಲ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾರಂತರು 1921 ಫೆಬ್ರವರಿಯಲ್ಲಿ ಓದನ್ನು ನಿಲ್ಲಿಸಿ ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕಿದರು. ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಂಡು ಸಮಾಜ ಸುಧಾರಣೆ ಮಾಡಲು ನಿರ್ಧರಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. 'ಖಾದಿ ಉತ್ಪನ್ನ ಮಾಡಿ', 'ವಿದೇಶೀ ವಸ್ತುಗಳನ್ನು ತ್ಯಜಿಸಿ' ಸ್ವದೇಶಿ ವಸ್ತುಗಳನ್ನೇ ಬಳಸಿ, ವಿದೇಶೀ ಬಟ್ಟೆ ಬರಿ, ವಸ್ತುಗಳನ್ನು ಸುಟ್ಟು ಹಾಕಿ ಎಂದು ಹೇಳುತ್ತಾ ಹಳ್ಳಿ ಹಳ್ಳಿಗೆ, ನಗರ, ಪಟ್ಟಣಗಳಿಗೆ ಸುತ್ತಿ ರಾಷ್ಟ್ರೀಯ ಕಾಂಗ್ರೆಸ್‌ನ ಧ್ಯೇಯಧೋರಣೆಗಳನ್ನು ಅನುಷ್ಠಾನಗೊಳಿಸತೊಡಗಿದರು. ಬರೀ ಭಾಷಣಗಳಿಂದ ಪ್ರಯೋಜನವಾಗುವುದಿಲ್ಲವೆಂದು ಮನಗಂಡು ರಚನಾತ್ಮಕ ಕೆಲಸಗಳಿಗೆ ಕೈಹಾಕಿದರು. ಖಾದಿ ಉತ್ಪನ್ನದ ಸಲುವಾಗಿ ಬಡಗಿಗಳಿಂದ ಚರಕಗಳನ್ನು ಮಾಡಿಸಿ ಜನರಿಗೆ ಹಂಚುವ ಕೆಲಸ ಮಾಡಿದರು. ಜನರಿಂದ ನೂಲು ತಯಾರಿಸಿ, ನೇಕಾರರಿಂದ ಬಟ್ಟೆ ತಯಾರಿಸಿ ಖಾದಿ ಗ್ರಾಮೋದ್ಯೋಗವನ್ನು ಬಲಪಡಿಸಿದರು. ಇಷ್ಟು ಸಾಲದಕ್ಕೆ

ಕುಂದಾಪುರದಲ್ಲಿ 1921ರಲ್ಲಿ ಸ್ನೇಹಿತರ ನೆರವಿನಿಂದ 'ಖಾದಿ ಭಂಡಾರ' ಎಂಬ ಸಂಸ್ಥೆಯನ್ನು ಆರಂಭಿಸಿದರು. 1921ರ ಸಂದರ್ಭದಲ್ಲಿ ಕುಂದಾಪುರದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಪತ್ರಿಕೋದ್ಯಮ

ಈಗಾಗಲೇ ನಾಟಕ, ಕವನ, ಕಾವ್ಯ ರಚನೆಗಳಲ್ಲಿ ತೊಡಗಿದ್ದ ಕಾರಂತರಿಗೆ ಪ್ರಕಟಿಸುವ ಬಯಕೆ ಇದ್ದಿತು. ಇಷ್ಟೇ ಅಲ್ಲದೆ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಲು ತಮ್ಮ ಧ್ಯೇಯೋದ್ದೇಶಗಳನ್ನು ವ್ಯಕ್ತಪಡಿಸಲು ಪತ್ರಿಕೆಯಂತಹ ಮಾಧ್ಯಮವನ್ನು ಹುಟ್ಟು ಹಾಕಬೇಕೆಂದು ತೀರ್ಮಾನಿಸಿದರು. ಅದಕ್ಕಾಗಿ 'ವಸಂತ' ಎಂಬ ಕನ್ನಡ ವಾರಪತ್ರಿಕೆಯನ್ನು 1923 ಡಿಸೆಂಬರ್‌ನಲ್ಲಿ ಕುಂದಾಪುರದಿಂದ ಹೊರಡಿಸಿದರು. ತಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಈ ಪತ್ರಿಕೆಯನ್ನು ಪ್ರಬಲ ಅಸ್ತ್ರವನ್ನಾಗಿ ಬಳಸಿಕೊಂಡರು. ವಸಂತ ಪತ್ರಿಕೆಯು 1923ರಿಂದ 1944ರವರೆಗೆ ಅಂದರೆ 21 ವರ್ಷಗಳ ಕಾಲ ಅವಿರತವಾಗಿ ಸೇವೆ ಸಲ್ಲಿಸಿತು. ಕಾರಂತರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದಂತೆಲ್ಲಾ ಈ ಪತ್ರಿಕೆಯನ್ನು ಸಮರ್ಥವಾಗಿ ಬಳಸಿಕೊಂಡರು.

ಚಲನಚಿತ್ರ ನಿರ್ಮಾಣಕ್ಕೆ ಕೈ ಹಾಕಿದ ಕಾರಂತರು

ಸುದ್ದಿ ಮಾಧ್ಯಮಗಳಾದ ಪತ್ರಿಕೆಗಿಂತಲೂ ರಂಗಭೂಮಿಯು ಶಕ್ತಿಶಾಲಿ ಎಂದು ಅರಿತಿದ್ದರು. ಅದಕ್ಕಿಂತಲೂ ಶಕ್ತಿಶಾಲಿ ಮಾಧ್ಯಮವೆಂದರೆ ಚಲನಚಿತ್ರವೆಂದು ತಿಳಿದಿದ್ದ ಕಾರಂತರು ತಮ್ಮ ಭಾವನೆಗಳನ್ನು ಹಾಗೂ ಆದರ್ಶಗಳನ್ನು ಚಲನಚಿತ್ರದ ಮೂಲಕ ತೋರಿಸಲು ತೀರ್ಮಾನಿಸಿದರು. ಈಗಾಗಲೇ ಅಸ್ಪೃಶ್ಯತೆಯ ವಿರುದ್ಧ ತಾವೇ ಬರೆದು ನಾಟಕ ರೂಪದಲ್ಲಿ ಪ್ರದರ್ಶಿಸಿ ಯಶಸ್ವಿಯಾಗಿದ್ದ 'ಡುಮಿಂಗೋ' ಎಂಬ ಕತೆಯನ್ನು ಆಧಾರವಾಗಿಟ್ಟುಕೊಂಡು 1930ರಲ್ಲಿ ಚಲನಚಿತ್ರ ನಿರ್ಮಿಸಿದರು. ಚಿತ್ರವು ಬೆಳ್ಳಿತೆರೆ ಕಂಡಿತು ನಿಜ. ಆದರೆ ಚಿತ್ರವು ಸೋತಿತು. ಕಾರಣವೇನೆಂದರೆ ಚಿತ್ರದ ಸಾರಾಂಶ ಅಸ್ಪೃಶ್ಯತೆಗೆ ಸಂಬಂಧಿಸಿದ್ದು. ಬಹುಶಃ ಅಂದು ಚಿತ್ರ ನಿರ್ಮಾಣಕ್ಕೆ ರಾಮಾಯಣ, ಮಹಾಭಾರತ, ಪುರಾಣ ಪುಣ್ಯಕತೆಗಳನ್ನು ಆಧಾರವಾಗಿಟ್ಟುಕೊಂಡು ಚಿತ್ರ ನಿರ್ಮಿಸಿದ್ದರೆ ಚಿತ್ರ ಗೆಲ್ಲುತ್ತಿತ್ತು. ಕಾರಂತರು ಚಿತ್ರ ನಿರ್ಮಾಣಕ್ಕೆ ಇಳಿದಾಗ 28ರ ಪ್ರಾಯ. ಚಿಮ್ಮುವ ಉತ್ಸಾಹ. ಕಥೆ ಬರೆದರು, ತಾವೇ ನಿರ್ದೇಶಿಸಿದರು, ನೆಗೆಟಿವ್ ಅನ್ನು ತಾವೇ ಡೆವಲಪ್ ಮಾಡಿದರು, ಕ್ಯಾಮರ ಕೊಂಡುಕೊಂಡು ತಾವೇ ಕ್ಯಾಮರಾಮೆನ್ ಆದರು. ಸಂಕಲನ ಸೇರಿದಂತೆ ಅವರೇ ಎಲ್ಲಾ. ಚಿತ್ರ ಸೋತ ನಂತರ 'ಭೂತರಾಜ್ಯ' ಎಂಬ ಪತ್ತೇದಾರಿ ಚಿತ್ರ

ನಿರ್ಮಿಸಿದರು. ಇದು ಎರಡನೆಯ ಪ್ರಯೋಗ. ಇದೂ ಅಷ್ಟಾಗಿ ಯಶಸ್ಸು ಕಾಣಲಿಲ್ಲ. ನಂತರ ಬಿ.ವಿ. ಕಾರಂತರು ಶಿವರಾಮಕಾರಂತರ ಸುಪ್ರಸಿದ್ಧ ಕಾದಂಬರಿ 'ಚೋಮನದುಡಿ'ಯನ್ನು ಚಲನಚಿತ್ರ ಮಾಡಿದರು. ಇದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯಿತು. ಶಿವರಾಮ ಕಾರಂತರಲ್ಲಿ ಮತ್ತೆ ಚಿತ್ರ ಮಾಡಬೇಕೆಂಬ ಆಸೆ ಚಿಗುರಿತು. 1978ರಲ್ಲಿ ತಮ್ಮ 'ಕುಡಿಯರ ಕೂಸು' ಕಾದಂಬರಿಯನ್ನು ಆಧರಿಸಿ 'ಮಲೆಯ ಮಕ್ಕಳು' ಎಂಬ ಚಿತ್ರ ನಿರ್ಮಿಸಿದರು. ಹೀಗೆ ಚಲನಚಿತ್ರ ರಂಗದಲ್ಲಿ ಏಳು ಬೀಳನ್ನು ಕಂಡರು. ಹಾಗೇ ಮುಂದುವರೆದಿದ್ದರೆ ಹಿಂದಿಯ ಚಲನಚಿತ್ರ ನಿರ್ಮಾಪಕ 'ಸತ್ಯಜಿತ್‌ರಾಯ'ರನ್ನು ಮೀರಿಸಬಹುದಿತ್ತು. ಆದರೆ ಆದದ್ದೇ ಬೇರೆ, ಸಿನಿಮಾ ಸೋತಿತು.

ಮಕ್ಕಳ ಸಾಹಿತ್ಯ ಮತ್ತು ವಿಶ್ವಕೋಶ

ಕಾರಂತರು ಶಿಕ್ಷಣದ ಬಗ್ಗೆ ಅದರಲ್ಲೂ ಪ್ರಾಥಮಿಕ ಶಿಕ್ಷಣದ ಬಗ್ಗೆ ಆಸಕ್ತಿ ಇದ್ದಿತು. ಅಂದಿನ ಕಾಲದ ಐಗಳ ಮಠದ ಶಿಕ್ಷಣ ಮತ್ತು ಕಾಲಕ್ರಮೇಣ ಬಂದ ಇಂಗ್ಲಿಷ್ ಶಿಕ್ಷಣ (ಐರೋಪ್ಯ ಮಾದರಿ ಶಿಕ್ಷಣ) ಇವೆರಡನ್ನೂ ಕಣ್ಣಾರೆ ಕಂಡಿದ್ದ ಕಾರಂತರಿಗೆ ಈ ಎರಡೂ ಶಿಕ್ಷಣ ಪದ್ಧತಿಯ ಕುಂದುಕೊರತೆಗಳು ಸಮಸ್ಯೆಗಳ ಸಂಪೂರ್ಣ ಅರಿವಿತ್ತು. ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುವಂತಹ ಬೋಧನಾಕ್ರಮ ಹಾಗೂ ಪಠ್ಯವಿಷಯಗಳ ಬಗ್ಗೆ 1931ರಕ್ಕೂ ಹಿಂದೆಯೇ ಪ್ರಯೋಗಗಳನ್ನು ನಡೆಸಿದ್ದರು. ಇದರ ಪರಿಣಾಮವಾಗಿ 1934ರಲ್ಲಿ ಮಕ್ಕಳಿಗಾಗಿ 'ಬಾಲವನ' ಶಾಲೆಯನ್ನು ಸ್ಥಾಪಿಸಿದರು. ಇಂದಿಗೂ ಪುತ್ತೂರಿನಲ್ಲಿ ಬಾಲವನ ಕಾರಂತರ ಸ್ಮಾರಕ ವಸ್ತು ಸಂಗ್ರಹಾಲಯವಾಗಿದೆ. ಮಕ್ಕಳ ಜ್ಞಾನವನ್ನು ಕುತೂಹಲವನ್ನು ತಣಿಸಲು 'ಬಾಲಪ್ರಪಂಚ', 'ವಿಜ್ಞಾನ ಪ್ರಪಂಚ' 'ಕಲಾ ಪ್ರಪಂಚ' ಮತ್ತು 'ಪ್ರಾಣಿ ಪ್ರಪಂಚ' ಎಂಬ ಕಿರಿಯರಿಗಾಗಿ ವಿಶ್ವಕೋಶಗಳನ್ನು ಬರೆದು ಪ್ರಕಟಿಸಿದರು. ಒಟ್ಟು 4000 ಪುಟಗಳ ಒಟ್ಟು ಏಳು ಸಂಪುಟ (ಭಾಗಗಳು) ಗಳಲ್ಲಿ ಪ್ರಕಟಿಸಿದ್ದಾರೆ. (ಕೊನೆಯಲ್ಲಿ ತಿಳಿಸಲಾಗಿದೆ) ವಿಜ್ಞಾನ ಲೋಕದ ಅನ್ವೇಷಣೆ, ಸಂಶೋಧನೆಗಳನ್ನು ತಿಳಿಸುವ 'ವಿಜ್ಞಾನ ಪ್ರಪಂಚ'ವನ್ನು ಮೂರು ಸಂಪುಟಗಳಲ್ಲಿ ಬರೆದಿದ್ದರೂ ಇವು ಮಕ್ಕಳಿಗಷ್ಟೇ ಅಲ್ಲ ದೊಡ್ಡವರಿಗೂ ಉಪಯುಕ್ತವಾಗುವ ಆಕರ ಗ್ರಂಥಗಳಾಗಿವೆ.

ವಿವಾಹ ಜೀವನ

ನುಡಿದಂತೆ ನಡೆದ ಕಾರಂತರು ಜನರಿಗೆ ಬೋಧನೆಯನ್ನು ಮಾಡಿ, ತಾವು ಮಾತ್ರ ಅದಕ್ಕೆ ವಿಮುಖರಾಗಲಿಲ್ಲ. ಕಾರಂತರು ಸಂಪ್ರದಾಯಸ್ಥ ಬ್ರಾಹ್ಮಣ

ಕುಟುಂಬದಿಂದ ಬಂದಿದ್ದರೂ ಯಾರ ಮಾತನ್ನು ಕೇಳದೆ 6-5-1936ರಲ್ಲಿ ಲೀಲಾ ಎಂಬ ಕನ್ಯೆಯನ್ನು 'ಅಂತರ್ಜಾತಿಯ ವಿವಾಹವಾದರು' ಐವತ್ತು ವರ್ಷಗಳ ಕಾಲ ವೈವಾಹಿಕ ಜೀವನ ನಡೆಸಿದರು.

ಕನ್ನಡ ಸಾಹಿತ್ಯಕ್ಕೆ ಕಾರಂತರ ಕೊಡುಗೆ

ಈಗಾಗಲೇ ತಿಳಿಸಿರುವಂತೆ ಕಾರಂತರು ಕಾದಂಬರಿ, ನಾಟಕ, ಕವನ, ಕಾವ್ಯ, ಮಕ್ಕಳ ಸಾಹಿತ್ಯ ಇವೇ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಕಾರಂತರು ತಮ್ಮ ಇಡೀ ಜೀವಿತ ಕಾಲದಲ್ಲಿ 421 ಕೃತಿಗಳನ್ನು ರಚಿಸಿರುವರೆಂದು ತಿಳಿದು ಬರುತ್ತದೆ. (ಶಿವರಾಮಕಾರಂತ ವಾಙ್ಮಯ ವೃತ್ತಾಂತ -ಸಂಪಾದಕರು, ಬಿ. ಮಾಲಿನಿ ಮಲ್ಯ) ಅವುಗಳಲ್ಲಿ ಕೆಲವನ್ನು ಮಾತ್ರ ಹೆಸರಿಸಬಹುದು.

ಕಾದಂಬರಿಗಳು

ಕಾರಂತರು ಕಾದಂಬರಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಮೊದಲ ಕಾದಂಬರಿ 'ವಿಚಿತ್ರಕೂಟ' ಪತ್ತೇದಾರಿ ಕಥೆಯಾಗಿದೆ. 1924ರಲ್ಲಿ ತಮ್ಮ ಪತ್ರಿಕೆಯಾದ 'ವಸಂತ'ದಲ್ಲಿ ಪ್ರಕಟವಾಯಿತು. 1925ರಲ್ಲಿ 'ಭೂತ' ಮತ್ತೊಂದು ಪತ್ತೇದಾರಿ ಕಾದಂಬರಿ 1925ರಲ್ಲಿ 'ನಿರ್ಭಾಗ್ಯ ಜನ್ಮ', 'ವೇಶ್ಯಾವಾಟಿಕೆಯಿಂದಾಗುವ ಸಾಮಾಜಿಕ ಹಾನಿ', 'ಕನ್ಯಾ ಬಲಿ / ಸೂಳೆಯು ಸಂಸಾರ', 'ದೇವದೂತರು'- ಕಟುವಾದ ವಿಡಂಬನೆ, ಹಾಸ್ಯಲೇಪನದಿಂದ ಕೂಡಿದ್ದು, ವೇಶ್ಯಾವಾಟಿಕೆಗೆ ಸಂಬಂಧಿಸಿದ್ದು ಕಾರಂತರ ತುಸು ಗಂಭೀರ ಸ್ವರೂಪದ ಕಾದಂಬರಿ ಮುಂದೆ 'ಕನ್ಯಾಬಲಿ' ಎಂಬ ಹೆಸರಿನಲ್ಲಿ ಹಲವು ಬಾರಿ ಮುದ್ರಣಗೊಂಡಿತು. ಇದು ವಿಧವೆಯರನ್ನು ಸಮಾಜ ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳುವುದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ 1933ರಲ್ಲಿ ಪ್ರಕಟವಾದ ಕಾರಂತರ ಕಾದಂಬರಿಗಳಲ್ಲೇ ಹೆಚ್ಚು ಜನಪ್ರಿಯವಾದ ಕಾದಂಬರಿ 'ಚೋಮನದುಡಿ' ಹೊಲೆಯನಾಗಿ ಹುಟ್ಟಿದ ಚೋಮ ತನ್ನದೇ ಸ್ವಂತ ಹೊಲ ಪಡೆಯಲು ಪ್ರಯತ್ನಿಸಿ ದುರಂತಕ್ಕೀಡಾದ ವಸ್ತುವುಳ್ಳ ಕಾದಂಬರಿ. 'ಸರಸಮ್ಮನ ಸಮಾಧಿ'-ದಾಂಪತ್ಯ ಜೀವನದ ವಿರಸಗಳ ವಿವಿಧ ಚಿತ್ರಗಳ ಬಗ್ಗೆ. 'ಮರಳಿ ಮಣ್ಣಿಗೆ'- ದಕ್ಷಿಣ ಕನ್ನಡ ಜಿಲ್ಲೆಯ ಪಡುಗಡಲ ತೀರದ ಕೋಡಿ ಎಂಬ ಹಳ್ಳಿಯ ಬಡ ಬ್ರಾಹ್ಮಣ ಮನೆತನದ ಮೂರು ತಲೆಮಾರುಗಳಲ್ಲಿ ಕಂಡ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳೇ ಕತೆಯ ಮುಖ್ಯವಸ್ತು. 1943ರಲ್ಲಿ ಪ್ರಕಟವಾದ 'ಬೆಟ್ಟದ ಜೀವ' ಮನುಷ್ಯ ತನ್ನ ಅನ್ನಕ್ಕಾಗಿ ನಿಸರ್ಗದೊಂದಿಗೆ ನಡೆಸಿದ ಹೋರಾಟದ ಕತೆ, 1945ರಲ್ಲಿ ಪ್ರಕಟಿಸಿದ 'ಹೆತ್ತಳಾತಾಯಿ' -ದಾಂಪತ್ಯ ವಿರಸದ ಇನ್ನೊಂದು ಮುಖ.

'ಔದಾರ್ಯದ ಉರುಳಲ್ಲಿ' (1947) ರಾಷ್ಟ್ರೀಯ ಆಂದೋಲನದ ಹಲವು ಮುಖಗಳನ್ನು ಹಾಗೂ ಚಳುವಳಿಯ ನೇಕಾರರ ದ್ವಿಮುಖ ನೀತಿಯೇ ಕಾದಂಬರಿಯ ಸಾರ. 1948ರಲ್ಲಿ ಪ್ರಕಟವಾದ 'ಮೂಗ ಪಡೆದ ಮನ' (1948) ನೃತ್ಯ, ನಾಟಕಗಳ ಗೀಳನ್ನು ಅಂಟಿಸಿಕೊಂಡ ಕಲಾವಿದನೊಬ್ಬನ ಕಲಾಜೀವನದ ಬಗ್ಗೆ ಅದೇ ವರ್ಷ ಪ್ರಕಟವಾದ 'ಸನ್ಯಾಸಿಯ ಬದುಕು' ಸೋಗಿನ ಸನ್ಯಾಸತನಕ್ಕಿಂತ, ಮಾನವೀಯ ಅಂತಃಕರಣದ ಸಾಂಸಾರಿಕ ಬದುಕೇ ಸಾರ್ಥಕ ಮತ್ತು ಸುಂದರ ಎಂಬ ಸಂದೇಶ ನೀಡುತ್ತದೆ. 1949ರ 'ಕರುಳಿನ ಕರೆ' –ಸಾಂಸಾರಿಕ ಬದುಕಿನ ಹಲವು ಮುಖಗಳ ಸಂಘರ್ಷ, ಸುಖ, ದುಃಖಗಳು, ತಾಯಿ ಮಕ್ಕಳ ಮಿಲನದೊಂದಿಗೆ ಸುಖಾಂತ್ಯಗೊಳ್ಳುವ ಕಥೆ. 1951ರಲ್ಲಿ ಪ್ರಕಟವಾದ 'ಕುಡಿಯರ ಕೂಸು' ಮಲೆಕುಡಿಯರ ಜೀವನದ ರೀತಿ, ರಿವಾಜು, ಕಷ್ಟ, ಸುಖ, ಪ್ರೀತಿ, ದ್ವೇಷ, ಧಾರ್ಮಿಕ ನಂಬಿಕೆ, ಕಟ್ಟುಕಟ್ಟಳೆಗಳೇ ಕಥೆಯ ಅಂದರ. 1978ರಲ್ಲಿ ಕಾರಂತರು ಇದೇ ಕಥೆಯನ್ನು 'ಮಲೆಯ ಮಕ್ಕಳು' ಎಂಬ ಚಲನಚಿತ್ರ ತಯಾರಿಸಿದರು. ಬುಡಕಟ್ಟು ಜನಾಂಗವೊಂದರ ಸುತ್ತ ಹೆಣೆದಿರುವ ಕಥೆ. 1951ರಲ್ಲಿ ಪ್ರಕಟವಾದ 'ಚಿಗುರಿದ ಕನಸು' –ಬಾಂಬೆ, ದೆಹಲಿಯಂತಹ ನಗರಗಳಲ್ಲಿ ವಾಸಿಸುತ್ತಿದ್ದ ವಿದ್ಯಾವಂತ ತರುಣ ಶಂಕರನು ತನ್ನ ಹಳ್ಳಿಗೆ ಬಂದು ಕೃಷಿ ಮಾಡಿ ಯಶಸ್ವಿಯಾದ ಬಗ್ಗೆ. 1952ರಲ್ಲಿ ಪ್ರಕಟಗೊಂಡ 'ಜಾರುವ ದಾರಿ' ಶಿವಪ್ಪನೆಂಬ ಕಥಾನಾಯಕನು ಉತ್ತಮವಾಗಿ ಬದುಕು ನಡೆಸುತ್ತಾ ತನ್ನ ಆದರ್ಶಗಳನ್ನು ಎಂದಿಗೂ ಬಲಿಕೊಡದೆ ಕೊನೆಯತನಕ ಆದರ್ಶಪ್ರಾಯವಾಗಿ ಬದುಕಿ, ಬಾಳಿದ ವ್ಯಕ್ತಿಯ ಕಥೆ. 1953ರಲ್ಲಿ ಹೊರಬಂದ 'ಬತ್ತದ ತೊರೆ' ನಂದಿನಿ, ಆಶಾ, ವಿನತೆ, ಮಂಜುಳೆ, ಮಾಧವಿ, ಲಾವಣಿ ಎಂಬ ಹೆಣ್ಣುಮಕ್ಕಳ ಹೆಣ್ಣು, ಗಂಡಿನ ಪ್ರೀತಿ, ಪ್ರೇಮಗಳಲ್ಲಿ ಅಡಗಿರುವ ಮೋಸ, ವಂಚನೆ, ಸ್ವೇಚ್ಛಾಚಾರಗಳ ವಾಸ್ತವಿಕ ಚಿತ್ರಣವನ್ನು ಕಲಾತ್ಮಕವಾಗಿ ಕಾರಂತರು ಬಿಚ್ಚಿಟ್ಟಿದ್ದಾರೆ.

'ಗೊಂಡಾರಣ್ಯ' 1954ರಲ್ಲಿ ಹೊರಬಂದ ಕೃತಿಯು ಸ್ವಾತಂತ್ರ್ಯ ಹೋರಾಟದ ಸಮಯದ ಚಿತ್ರಣ, ಸ್ವಾತಂತ್ರ್ಯಾ ನಂತರ ಭಾರತದ ರಾಜಕಾರಣಿಗಳ ಸ್ವೇಚ್ಛಾಚಾರ, ಲಂಚಗುಳಿತನ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸಮಯ ಸಾಧಕತನವನ್ನು ಚಿತ್ರಿಸಲಾಗಿದೆ.

1956ರಲ್ಲಿ ಪ್ರಕಟಗೊಂಡ 'ಸಮೀಕ್ಷೆ' ಕಾಲೇಜು ಓದುತ್ತಿದ್ದ ವಿದ್ಯಾರ್ಥಿಗಳು ತಮ್ಮದೇ ಆದ ಆದರ್ಶದ ಕನಸನ್ನು ಕಟ್ಟಿಕೊಂಡಿರುತ್ತಾರೆ. ಕಾಲೇಜಿನಿಂದ ಹೊರಹೋದ ಮೇಲೆ ತಮ್ಮ ಜೀವನ ರೂಪಿಸಿಕೊಂಡ ಯುವಕರಲ್ಲಿ ಕೆಲವರು ಆದರ್ಶವಾದಿಗಳಾದರೆ ಮತ್ತೆ ಕೆಲವರು ಆದರ್ಶ ಬಿಟ್ಟು ಅಂದು ನಾವೆಲ್ಲ ಕಂಡಿದ್ದು ಬರೀ ಕನಸು ಎಂಬಂತೆ ವರ್ತಿಸುತ್ತಾರೆ.

'ನಂಬಿದವರ ನಾಕ' 1956ರಲ್ಲಿ ಹೊರಬಂದ ಈ ಕಾದಂಬರಿಯು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವೊಂದು ತಮ್ಮ ಮಗಳನ್ನು ಮೋಸದಿಂದ ಕೆಳಜಾತಿಯ ಯುವಕನಿಗೆ ಮದುವೆ ಮಾಡಿ ಕ್ರಮೇಣ ಆಕೆಗೆ ಈ ವಿಷಯ ತಿಳಿದು ಮನೋವ್ಯತೆಯಿಂದ ಪರಿತಪಿಸುವ ಕಥೆ.

ದೇವರು, ಧರ್ಮ, ಸಾಧು, ಸಂತರೆನಿಸಿಕೊಂಡವರನ್ನು ಅನುಸರಿಸಿ ಮೋಸಹೋಗುವ ಚಿತ್ರಣವನ್ನು 'ಕರ್ಮವೀರ' ಎಂಬ ಕಾದಂಬರಿಯಲ್ಲಿ ತಮ್ಮದೇ ಆದ ಒಂದು ಚಿತ್ರಣವನ್ನು ನೀಡಿದ್ದಾರೆ.

ಕಾಡಿನ ಕೊಂಪೆಯೊಂದರ ಹಳ್ಳಿಯ ಜನಜೀವನದಲ್ಲಿ ಕಂಡುಬರುವ ಆಸ್ತಿಯ ಕಲಹವನ್ನು ವಸ್ತುವಾಗಿಸಿಕೊಂಡು ಆ ಕಲಹದ ನಾನಾ ಮುಖಗಳನ್ನು 'ಶನೀಶ್ವರನ ನೆರಳಲ್ಲಿ' (1960) ಎಂಬ ಕಾದಂಬರಿಯಲ್ಲಿ ಪರಿಚಯಿಸಿದ್ದಾರೆ.

1960ರಲ್ಲಿ ಹೊರಬಂದ 'ಅಳಿದ ಮೇಲೆ' ಎಂಬ ಕಾದಂಬರಿಯು ಕಾರಂತರ ಸುಪ್ರಸಿದ್ಧ ಕಾದಂಬರಿಗಳಲ್ಲೊಂದು ಮನುಷ್ಯ ಅಳಿದ ಮೇಲೆ ಉಳಿಯುವುದೇನು ಎಂಬುದನ್ನು ಶೋಧಿಸ ಹೊರಟ ಕಥನವಿದು. ಸಂಸಾರದಿಂದ, ಸಮಾಜದಿಂದ ತಾವು ಕೊಂಡುದಕ್ಕಿಂತ, ಕೊಟ್ಟಿದ್ದೇ ಹೆಚ್ಚಾಗಿರಬೇಕು ಎಂಬ ಜೀವನ ಮೌಲ್ಯವನ್ನು ಈ ಕಾದಂಬರಿ ಸಾರುತ್ತದೆ.

ನಮ್ಮ ದೇಶದ ಪುಣ್ಯಕ್ಷೇತ್ರಗಳ ಸಾಂಸ್ಕೃತಿಕ ದೃಷ್ಟಿಯ ಅನ್ವೇಷಣೆ, ನಮ್ಮ ನಾಡಿನ ರಾಜಕೀಯವನ್ನು ಕುರಿತ ಚಿಂತನ–ಮಂಥನ ದೇವರು, ಧರ್ಮ, ನಂಬಿಕೆಗಳು, ಆದರ್ಶಗಳು ಹೀಗೆ ಹಲವಾರು ದೃಷ್ಟಿಕೋನಗಳಿಂದ ವಿಶ್ಲೇಷಿಸಿರುವ ಕಾದಂಬರಿಯೇ 1962ರಲ್ಲಿ ಪ್ರಕಟವಾದ 'ಆಳ ನಿರಾಳ' ಕಾದಂಬರಿ.

ಸೀಗೆಮನೆ ಗಣಪತಿ ಹೆಗ್ಗಡೆಯವರು ಭಾರೀ ಶ್ರೀಮಂತರು, ಆಸ್ತಿವಂತರು. ಆದರೆ ಅಚಾನಕ್ಕಾಗಿ ಇದ್ದೊಬ್ಬ ಮಗ ಮೃತನಾದಾಗ ಹೆಗ್ಗಡೆಯ ಬಂಧುಗಳು ಆತನ ಆಸ್ತಿ ಕಬಳಿಸಲು ಏನೆಲ್ಲ ಪ್ರಯತ್ನಪಡುತ್ತಾರೆ. ಆದರೆ ಕಷ್ಟಪಟ್ಟು ದುಡಿದು ಸಮಾಜಕ್ಕೆ, ದೇಶಕ್ಕೆ ನೆರವಾಗಬಲ್ಲ ಶಂಕರಯ್ಯನಿಗೆ ತನ್ನ ಆಸ್ತಿಯನ್ನು ಧಾರೆಯೆರೆಯಲು ನಿರ್ಧರಿಸಿದ ಕಥೆಯನ್ನು 'ಇದ್ದರೂ ಚಿಂತೆ' ಎಂಬ 1964ರಲ್ಲಿ ರಚಿಸಿದ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

1966ರಲ್ಲಿ ರಚಿಸಿದ 'ಸ್ವಪ್ನದಹೊಳೆ' ಕಾದಂಬರಿಯ ಕಥಾನಾಯಕ 'ಕಿಟ್ಟಣ್ಣ'ನು ಬಾಲ್ಯದಿಂದಲೂ ನಿಸರ್ಗದೊಂದಿಗೆ ಬೆಳೆದವನು. ಕಾಲೇಜೊಂದರಲ್ಲಿ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದ ತನ್ನ ಶಿಷ್ಯೆ 'ಬನ್ನಿ'ಯು ಕಿಟ್ಟಣ್ಣನ ಸಹದ್ಯೋಗಿ ಮಿತ್ರನ ವಂಚನೆಗೆ ಬಲಿಯಾಗುತ್ತಾಳೆ. ಆಕೆಯನ್ನು ಯಾರೂ ಮದುವೆಯಾಗಲು ಒಪ್ಪದಿದ್ದಾಗ ಆಕೆಯನ್ನು ವರಿಸಿ ಆದರ್ಶಪ್ರಾಯನಾಗುತ್ತಾನೆ.

1968ರಲ್ಲಿ ಪ್ರಕಟವಾದ 'ಮೂಕಜ್ಜಿಯ ಕನಸುಗಳು' ಕಾದಂಬರಿಯು ಕಾರಂತರ ಅತ್ಯುತ್ತಮ ಕಾದಂಬರಿಗಳಲ್ಲೊಂದು. ಈ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿಯು ಲಭಿಸಿತು. ಈ ಕಾದಂಬರಿಗೆ ಕಥಾನಾಯಕನಿಲ್ಲ; ನಾಯಕಿಯಿಲ್ಲ, ಮೂಕಜ್ಜಿಯು ಇಲ್ಲಿ ನಾಯಕಿಯಲ್ಲ ಎಂದು ಕಾರಂತರು ಮುನ್ನುಡಿಯಲ್ಲಿ ಹೇಳಿರುವುದು ಉಚಿತವಾಗಿದೆ. 'ಮೂಕಜ್ಜಿ' ಕಾರಂತರು ಸೃಷ್ಟಿಸಿದ ಅಪೂರ್ವ ಪಾತ್ರಗಳಲ್ಲೊಂದು. ಜೀವನದ ಜತೆಗೆ ಸಾಗುತ್ತಾ, ಸುಖದುಃಖಗಳನ್ನು ಸಮನಾಗಿ ಸಹಿಸುತ್ತಾ ಬೆಳೆಯುವ ಅದೆಷ್ಟೋ ಜನ ಮುದುಕಿಯರು ಅವರ ಸಾಲಿನಲ್ಲಿ ನಿಲ್ಲುವ ಮೂಕಜ್ಜಿಯು ಹೊಸ ಬಗೆಯವಳು. ನಿತ್ಯದ ಬದುಕಿನ ಐಂದ್ರಿಕ ಅನುಭವಗಳನ್ನು ಪಡೆಯುತ್ತಲೇ, ಅದರ ಮೂಲಕವೇ ಹೊಸದೊಂದು ಜಗತ್ತನ್ನು ಆಕೆ ಕಾಣಬಲ್ಲಳು. ಹಿಂದೆ ಆದದ್ದನ್ನು, ಮುಂದೆ ಆಗುವುದನ್ನು ನೋಡಬಲ್ಲವಳಾಗಿದ್ದಾಳೆ. ವಾಸ್ತವ ನೆಲೆಯಲ್ಲಿ ನಿಂತ ಓದುಗನಿಗೆ ಮೂಕಜ್ಜಿಯಂಥವರು ಕಾಲ್ಪನಿಕವೆಂದೋ ಸುಳ್ಳು ಎಂದೋ ತೋರಬಹುದು. ಆದರೆ ಅದು ಇಲ್ಲಿ ಮುಖ್ಯವಲ್ಲ. ಏಕೆಂದರೆ ಇಲ್ಲಿ ಕೇವಲ ಹತ್ತು ವರ್ಷಕ್ಕೆ ವಿಧವೆಯಾದಳು. ಮೂಕಜ್ಜಿ ಮನುಷ್ಯನ ಅನ್ವೇಷಕ ಪ್ರವೃತ್ತಿಯ ಮೂರ್ತ ರೂಪವಾಗಿದ್ದಾಳೆ. ತನಗಿಂತ ಕಿರಿಯರು ಕಣ್ಣೆದುರಿನಲ್ಲಿಯೇ ಸಾಯುವುದನ್ನು ಕಂಡಳು. ತನ್ನ ಸುತ್ತಣ ಇಬ್ಬಂದಿತನವನ್ನು ಕಂಡಳು. ಏಕೆ ಹೀಗೆ ಎನ್ನುವ ಪ್ರಶ್ನೆ. ಅವಳಿಗೆ ಸಹಜ ಅನುಭವದಿಂದಲೇ ಹುಟ್ಟಿದ್ದು. ಅವಳ ಕನಸುಗಳು ಕಾಣ್ಕೆಗಳು ಈ ಪ್ರಶ್ನೆಗೆ ಉತ್ತರ ನೀಡಬಲ್ಲವು. ಎಂದೋ ಎಲ್ಲೋ ಆಗಿಹೋದ ಘಟನೆಗಳ ಮೂಲಕವೇ ಇಂದಿನ ಜೀವನವನ್ನು ಅರಿಯಲು, ಅರ್ಥೈಸಲು ಆಕೆ ಸಮರ್ಥಳಾಗುತ್ತಾಳೆ.

1970ರಲ್ಲಿ ರಚನೆಯಾದ 'ಉಕ್ಕಿದ ನೊರೆ' ಕಾದಂಬರಿಯು ದಕ್ಷಿಣ ಕನ್ನಡದ ಸಾಮಾಜಿಕ ಆವರಣದ ಚಿತ್ರಣವನ್ನು ಕೊಡುತ್ತದೆ.

1971ರಲ್ಲಿ ಹೊರಬಂದ 'ಮನುಷ್ಯರು' ಎಂಬ ಕಾದಂಬರಿಯಲ್ಲಿ ಸಾಂಸಾರಿಕ ಜಂಜಾಟದಿಂದ ಹೊರಬಂದ ಮುಕುಂದ ಕಮ್ತಿಯು 'ಅಭಿನ್ನಾನಂದ' ಎಂಬ ಹೆಸರಿನಿಂದ ಸನ್ಯಾಸಿಯಾಗಿ ನಿಷ್ಕಪಟತನದಿಂದ ನಡೆದುಕೊಂಡ ಬಗೆಯನ್ನು ಕಾರಂತರು ಚಿತ್ರಿಸಿದ್ದಾರೆ.

1974ರಲ್ಲಿ ಹೊರಬಂದ 'ಮೂಜನ್ಮ' ಎಂಬ ಕಾದಂಬರಿಯು ಭಾರತ ಸ್ವಾತಂತ್ರ್ಯಪೂರ್ವ ಚರಿತ್ರೆ. ಅಷ್ಟೇ ಅಲ್ಲದೆ ಸ್ವಾತಂತ್ರ್ಯಾನಂತರ ರಾಜಕೀಯದ ಕುರಿತು ವಿಶೇಷ ಬೆಳಕು ಚೆಲ್ಲುತ್ತದೆ.

1977ರಲ್ಲಿ ರಚಿಸಿದ 'ಅದೇಊರು, ಅದೇಮರ'. ಕಾದಂಬರಿಯು ವಟಪುರವೆಂಬ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಹಳ್ಳಿ ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯಾ ನಂತರದ ನಾಲ್ಕೈದು ದಶಕಗಳಲ್ಲಿ ಏನೆಲ್ಲ ಸ್ಥಿತ್ಯಂತರಗಳನ್ನು ಕಂಡಿತು ಎಂಬುದನ್ನು ಚಿತ್ರಿಸಿದ್ದಾರೆ.

ಹೀಗೆ ಕಾರಂತರು ತಮ್ಮ ಕಾದಂಬರಿಗಳನ್ನು ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಅವರ 45 ಕಾದಂಬರಿಗಳಲ್ಲಿ 'ಮರಳಿ ಮಣ್ಣಿಗೆ', 'ಚೋಮನದುಡಿ', 'ಅಳಿದ ಮೇಲೆ', 'ಬೆಟ್ಟದ ಜೀವ', 'ಧರ್ಮರಾಯನ ಸಂಸಾರ' ಇವೇ ಮುಂತಾದ ಕಾದಂಬರಿಗಳು ಬಾರಿ ಯಶಸ್ಸು ಕಂಡಿವೆ. 1969ರಲ್ಲಿ 'ಪದ್ಮಭೂಷಣ' ಪ್ರಶಸ್ತಿ ಲಭಿಸಿತು.

ಕಾರಂತರ ಸಣ್ಣಕಥೆಗಳು

ಈಗಾಗಲೇ ತಿಳಿಸಿರುವಂತೆ ಕಾರಂತರು ಕವನ, ಕಾದಂಬರಿ, ವಿಡಂಬನೆ, ಪತ್ರಿಕೋದ್ಯಮವೇ ಅಲ್ಲದೆ ಸಣ್ಣಕಥೆಗಳ ಬಗ್ಗೆಯೂ ತಮ್ಮ ಒಲವನ್ನು ತೋರಿದ್ದಾರೆ. ಬಹುಶಃ ತಮ್ಮ 'ವಸಂತ' ಪತ್ರಿಕೆಯಲ್ಲಿ ಓದುಗರಿಗಾಗಿ ರಚಿಸಲ್ಪಟ್ಟ ಸಣ್ಣ ಸಣ್ಣಕಥೆಗಳು ಸಾಕಷ್ಟಿವೆ ಎಂದು ಹೇಳಬಹುದು. 'ಕಲ್ಲು ಕರಗಲು ಕಲ್ಲೆದೆಯು', 'ಪಶುಬಲಿ', 'ರಂಗಪ್ಪನ ಗೊಂಬೆ', 'ಟಬರನ ಸಾಹಸ', 'ನಂದಾದೀಪ', 'ನವದಂಪತಿಗಳ ಹಂಗಿನ ಬಳುವಳಿ', ಮಂಗಳೂರು ಬಾಲ ಸಾಹಿತ್ಯ ಮಂಡಳಿ ವತಿಯಿಂದ 1931ರಲ್ಲಿ ಪ್ರಕಟವಾದ 'ಹಸಿವು', 'ಶ್ರೀಧರನ ಹುಚ್ಚು', 'ಕಳ್ಳ ಫಕೀರ', 'ಹೋಳಿಗೆ', 'ನಂದಯ್ಯನಾಯರಿ', 'ಅಜ್ಜಿ ಹೆಣ', 'ಸೆಟ್ಟಸಾಲ', 'ಮಗಳ ಮದುವೆ', 'ಬಬ್ಬು ಸಾಕ್ಷಿ', 'ಅಡುಗೆಮನೆ' ಎಂಬ ಹತ್ತು ಸಣ್ಣಕಥೆಗಳಿವೆ. 1932ರಲ್ಲಿ ಪ್ರಕಟವಾದ 9 ಸಣ್ಣಕಥೆಗಳ 'ಹಾವು' ಎಂಬ ಕಥಾಸಂಕಲನ. 'ಸ್ವದೇಶಾಭಿಮಾನ' ಪತ್ರಿಕೆಯಲ್ಲಿ ಹಲವಾರು ಸಣ್ಣಕಥೆಗಳು ಪ್ರಕಟವಾದವು. ಒಟ್ಟಿನಲ್ಲಿ ಕಾರಂತರು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಬೆರಳು ಮಾಡಿ ತೋರಿಸಿ ಅವುಗಳಿಂದಾಗುವ ಹಾನಿಗಳ ಕುರಿತು ಸಮಾಜಕ್ಕೆ ಎಚ್ಚರಿಕೆ ನೀಡುವ ಸಲುವಾಗಿ ತಮ್ಮ ಬರವಣಿಗೆಯ ಕಾಯಕದಲ್ಲಿ ಸಣ್ಣಕಥೆಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಹರಟೆ ಮತ್ತು ವಿಡಂಬನಾ ಪ್ರಬಂಧಗಳು

ಕಾರಂತರ ವಿಡಂಬನಾ ಸಾಹಿತ್ಯದ ಅವರ ಶೈಲಿ, ತಂತ್ರಗಳೂ ಭಿನ್ನ ಭಿನ್ನ ರೂಪ, ಆಕಾರಗಳನ್ನು ತಾಳಿವೆ. ಕಥೆ, ಕವನ, ನಾಟಕ, ಕಾದಂಬರಿ ಮತ್ತು ವಿಭಿನ್ನ ಶೈಲಿಯ ಲೇಖನಗಳ ಮೂಲಕ ಕಾರಂತರು ಹಾಸ್ಯದ ಮೊನಚನ್ನು ಕನ್ನಡ ನಾಡಿಗೆ ಪರಿಚಯಿಸಿದ್ದಾರೆ. ಹಿಂದೂಧರ್ಮದಲ್ಲಿರುವ ಆಚಾರ, ವಿಚಾರ, ದೇವರು,

ಅಂಧಃಶ್ರದ್ಧೆ, ವಿಜ್ಞಾನ, ರಾಜಕೀಯ ಇವೇ ಮುಂತಾದ ವಿಷಯಗಳ ಬಗ್ಗೆ ವ್ಯಂಗ್ಯ ಲೇಪಿತ ಬರಹದ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಿದ್ದಾರೆ. ಸುಮಾರು 700 ಪುಟಗಳ 6 ಗ್ರಂಥಗಳನ್ನು ಐವತ್ತಕ್ಕೂ ಹೆಚ್ಚು ಲಘು ಬರಹಗಳನ್ನು ವಿಡಂಬನ ಸಾಹಿತ್ಯಕ್ಕೆ ಕೊಡುಗೆಯನ್ನಾಗಿ ನೀಡಿದ್ದಾರೆ.

'ಬೆಕ್ಕು' ಎಂಬ ಹರಟೆಯೇ ಅವರ ಮೊದಲ ಹಾಸ್ಯ ಪ್ರಬಂಧ. ನಂತರ 'ಕವಿ ಕುಲತಿಲಕ', 'ಮೈಗಳ್ಳನ ದಿನಚರಿ', 'ಗ್ನಾನ' (1932), 'ಚಿಕ್ಕದೊಡ್ಡವರು' (1941), 'ಮೈಲಿಲ್ಲಿನೊಡನೆ ಮಾತುಕತೆಗಳು' (1944), 'ಹಳ್ಳಿಯ ಹತ್ತು ಸಮಸ್ತರು' (1941), ಎಂಬ ಶಿರೋನಾಮೆಯ ಕೃತಿಯಲ್ಲಿ ಹತ್ತಾರು ಲಘು ಪ್ರಬಂಧಗಳನ್ನು ರಚಿಸಿದ್ದನ್ನು ಕಾಣಬಹುದು.

ವಿಡಂಬನಾತ್ಮಕ ಕವನಗಳನ್ನು ಬರೆದು ಯಶಸ್ವಿಯಾಗಿದ್ದಾರೆ. 'ಸೀಳ್ಗವನ' ಎಂಬ ಕವನ ಸಂಕಲನವನ್ನು 90ರ ದಶಕದಲ್ಲಿ ರಚಿಸಿದರು. ಶಿರೋನಾಮೆಯೇ ವಿಡಂಬನಾತ್ಮಕವಾಗಿರುವುದು ಇದರ ವಿಶೇಷ. 'ನಷ್ಟ ದಿಗ್ಗಜರು', 'ಜಗದೋದ್ಧಾರನ', 'ದೇವದೂತರು', 'ನಾವು ಕಟ್ಟಿದ ಸ್ವರ್ಗ', 'ಅಂಟಿದ ಅಪರಂಜಿ' ಇವೇ ಮುಂತಾದವು.

ಮಕ್ಕಳ ಸಾಹಿತ್ಯ

'ಬೆಳೆಯುವ ಪೈರು ಮೊಳಕೆಯಲ್ಲಿ' ಎನ್ನುವಂತೆ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹಾಗೂ ಕುತೂಹಲವನ್ನು ತಣಿಸಲು ಕಾರಂತರು ಮಕ್ಕಳಿಗಾಗಿ ಇನ್ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದರು. ಇಷ್ಟೇ ಅಲ್ಲದೆ ಮಕ್ಕಳಿಗಾಗಿ ಕೊಟ್ಟ ಕಾಣಿಕೆ ಎಂದರೆ ಬಾಲಪ್ರಪಂಚ, ವಿಜ್ಞಾನ ಪ್ರಪಂಚ ಮತ್ತು ಪ್ರಾಣಿ ಪ್ರಪಂಚವೆಂಬ ಮೂರು ವಿಶ್ವಕೋಶಗಳು. ಬಹುಶಃ ಕನ್ನಡದಲ್ಲೇ ಬಲು ಅಪರೂಪದ ಸಚಿತ್ರ ಕೃತಿಗಳು. ಅವುಗಳಲ್ಲಿ ಪ್ರಾಣಿ ಪ್ರಪಂಚದ ವಿಸ್ಮಯಗಳು, ಮಂಗನ ಖಾಯಿಲೆ ಮತ್ತು 'ವಿಶಾಲ ಸಾಗರಗಳು', 'ವಿಚಿತ್ರ ಖಗೋಲ', 'ನಮ್ಮ ಭೂ ಖಂಡಗಳು', 'ಅನಾದಿಕಾಲದ ಮನುಷ್ಯ', 'ಒಂದೇ ರಾತ್ರಿ', 'ಒಂದೇ ಹಗಲು', 'ಗೆದ್ದವರ ಸತ್ಯ', 'ಗಜರಾಜ', 'ಢಂ ಢಂ ಕೋಲು', 'ಹಿರಿಯ ಕಿರಿಯ ಹಕ್ಕಿಗಳು'. ಇವೇ ಮುಂತಾದ ಬಾಲ ಸಾಹಿತ್ಯವನ್ನು ರಚಿಸಿ ಕನ್ನಡದ ಕಂದಮ್ಮಗಳಿಗೆ ಅಮೋಘ ಕೊಡುಗೆಯನ್ನು ನೀಡಿದ್ದಾರೆ.

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸೃಜನಶೀಲ ಮತ್ತು ಸೃಜನೇತರ ವಿಭಾಗಗಳೆರಡರಲ್ಲೂ ಕಾರಂತರು ವಿಫುಲವಾಗಿ ಗ್ರಂಥಗಳನ್ನು ರಚಿಸಿದ್ದಾರೆ.

ಮಕ್ಕಳಿಗಾಗಿ ಕಥೆಗಳನ್ನು ಬರೆದುದೇ ಅಲ್ಲದೆ ಮಕ್ಕಳಿಂದ ಕಥೆ ಹೇಳಿಸಿದ್ದಾರೆ. ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ. ಮಕ್ಕಳಿಂದ ನಾಟಕ ಆಡಿಸಿದ್ದಾರೆ.

ಹೀಗೆ ಮಕ್ಕಳ ಮನೋವಿಕಾಸಕ್ಕೆ ಒತ್ತುಕೊಟ್ಟಿದ್ದಾರೆ. ಮಕ್ಕಳ ಮನಸ್ಸು ಬೆಣ್ಣೆಯಂತಹದ್ದು ಅವರು ಒಳ್ಳೆಯದನ್ನು ಹೇಳಿಕೊಟ್ಟರೆ ಒಳ್ಳೆಯದನ್ನು ಕಲಿಯುತ್ತಾರೆ. ಅದೇ ರೀತಿ ಕೆಟ್ಟದನ್ನು ಹೇಳಿಕೊಟ್ಟರೆ ಕೆಟ್ಟದನ್ನು ಕಲಿಯುತ್ತಾರೆ. ಆದ್ದರಿಂದ ಚಿಕ್ಕವಯಸ್ಸಿನಲ್ಲೇ ಪ್ರಪಂಚದ ಆಗು ಹೋಗುಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಹಾಗೂ ಮಕ್ಕಳಲ್ಲಿ ಓದುವ ಆಸಕ್ತಿ ಮೂಡಿಸಿದ್ದಾರೆ.

ವಯಸ್ಕರ ಶಿಕ್ಷಣಕ್ಕೆ ಕಾರಂತರ ಕೊಡುಗೆ

ಈಗಾಗಲೇ ತಿಳಿಸಿರುವಂತೆ 'ಆಡುಮುಟ್ಟದ ಗಿಡವಿಲ್ಲ' ಕಾರಂತರು ಬರೆಯದ ವಿಷಯವಿಲ್ಲ ಎನ್ನುವಂತೆ ವಯಸ್ಕರ ಶಿಕ್ಷಣಕ್ಕೂ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. 1954ರಲ್ಲಿ 'ಯುನೆಸ್ಕೋ ಗ್ರೂಪ್ ಟ್ರೈನಿಂಗ್ ಸ್ಕೀಮ್'ನವರು ಮೈಸೂರಿನ ಇಲವಾಲದಲ್ಲಿ ವಯಸ್ಕರ ಶಿಕ್ಷಣ ಶಿಬಿರವನ್ನು ಏರ್ಪಡಿಸಿ ಶಿವರಾಂ ಕಾರಂತರನ್ನು ವಿಶೇಷ ಸಂಪನ್ಮೂಲ ವ್ಯಕ್ತಿಯನ್ನಾಗಿ ಆಹ್ವಾನಿಸಿದ್ದರು ಹಾಗೂ ವಯಸ್ಕರ ಶಿಕ್ಷಣದ ಬಗ್ಗೆ ಕೃತಿಗಳನ್ನು ಬರೆದು ಕೊಡುವಂತೆ ಕೇಳಿಕೊಂಡರು. ಮಕ್ಕಳ ಶಿಕ್ಷಣಕ್ಕೆ ಒತ್ತುಕೊಟ್ಟಷ್ಟೇ ವಯಸ್ಕರ ಶಿಕ್ಷಣಕ್ಕೂ ಒತ್ತುಕೊಡಬೇಕೆಂದು ಅಂದೇ ತೀರ್ಮಾನಿಸಿದರು. 1954ರಲ್ಲಿ 'ದೇವ ಒಲಿವ ಊರು', 'ಜೋಗಿ ಕಂಡ ಊರು' (1954), 'ಅಖಿಲ ಭಕ್ತಿ ಮಳಲಸೇವೆ' 1954. 'ಹುಟ್ಟು ಸಾವು ಒಟ್ಟು ಒಟ್ಟು' (1954), 'ಬೇರೆಯುವರೂ ಸರಿಯಿರಬಹುದು' (1954), 'ಹಿಂದೂಸ್ಥಾನದ ನದಿಗಳು' (1961), 'ಕರ್ನಾಟಕದ ಜಾನಪದ ಕಲೆಗಳು' (1961)' 'ಕೋಳಿ ಸಾಕಣೆ' (1966) ಇವೇ ಮುಂತಾದ ಕೃತಿಗಳನ್ನು ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ನೀಡಿದರು.

ಕಲಾ ಜಗತ್ತಿಗೆ ಕಾರಂತರ ಕೊಡುಗೆ

ಕಾರಂತರು ಕಲೆ, ವಾಸ್ತುಶಿಲ್ಪ, ಚಿತ್ರಕಲೆ, ವರ್ಣಚಿತ್ರ, ನೃತ್ಯ, ನಾಟಕ, ಯಕ್ಷಗಾನ ಸೇರಿದಂತೆ 'ಲಲಿತ ಕಲೆ'ಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ನೂರಕ್ಕೂ ಹೆಚ್ಚು ನಾಟಕ ಕೃತಿಗಳನ್ನು ಬರೆದಿದ್ದಾರೆ. ಮೂರು ಸಾವಿರ ಪುಟಗಳಿಗೂ ಹೆಚ್ಚು, ಸುಮಾರು 24 ಕಲಾ ಗ್ರಂಥಗಳನ್ನು ರಚಿಸಿದ್ದಾರೆ. ತಮ್ಮ ಕಾದಂಬರಿಗಳಲ್ಲೂ ಅಲ್ಲಲ್ಲಿ ಲಲಿತಕಲೆಗಳನ್ನು ಪರಿಚಯಿಸಿದ್ದಾರೆ. 1930ರಲ್ಲಿ ರಚಿಸಿದ 'ಭಾರತೀಯ ಚಿತ್ರಕಲೆ' ಗ್ರಂಥಕ್ಕೆ 1931ರಲ್ಲಿ 'ದೇವರಾಜ ಬಹದ್ದೂರ್' ಪ್ರಶಸ್ತಿಯು ಲಭಿಸಿತು.

ಪ್ರವಾಸ ಸಾಹಿತ್ಯಕ್ಕೆ ಕಾರಂತರ ಕೊಡುಗೆ

'ದೇಶ ಸುತ್ತು ಇಲ್ಲ ಕೋಶ ಓದು' ಎನ್ನುವುದು ಹಳೆಯ ಗಾದೆ ಮಾತು. ಕಾರಂತರು ಕೋಶವನ್ನು ಓದುವುದಷ್ಟೇ ಅಲ್ಲ ದೇಶವನ್ನು ಚೆನ್ನಾಗಿ ಸುತ್ತಿದ್ದಾರೆ. ದೊಡ್ಡ ದೊಡ್ಡ ನಗರಗಳನ್ನು ಮಾತ್ರವಲ್ಲ ಹಳ್ಳಿ, ಪಟ್ಟಣ, ನಗರ, ದೇಶ ವಿದೇಶಗಳ ಮಹಾನಗರ ಅಲ್ಲಿರುವ ಪರಿಸರ, ಬದುಕು, ಜನಜೀವನ, ಭಾಷೆ, ಸಂಸ್ಕೃತಿ ಇವೇ ಮುಂತಾದವುಗಳನ್ನು ಕಣ್ಣಲ್ಲೇ ಅಳೆದು ಸುರಿದು ತಾವು ಕಂಡು ಕೇಳಿದ್ದನ್ನು ಗ್ರಂಥರೂಪದಲ್ಲಿ ಹೊರತಂದಿದ್ದಾರೆ. 'ಅಬೂವಿನಿಂದ ಬರಾಮಕ್ಕೆ' (1950), 'ಅಪೂರ್ವ ಪಶ್ಚಿಮ' (1954), 'ಪಾತಾಳಕ್ಕೆ ಪಯಣ' (1973), 'ಪೂರ್ವದಿಂದ ಅತ್ಯಪೂರ್ವಕ್ಕೆ' (1982), 'ಅರಸಿಕರಲ್ಲ' (1987), 'ಯಕ್ಷರಂಗಕ್ಕಾಗಿ ಪ್ರವಾಸ' (1992) ಇವೇ ಮುಂತಾದವು ಕಾರಂತರ ಪ್ರವಾಸ ಕೃತಿಗಳು.

ಜೀವನ ಚರಿತ್ರೆ ಮತ್ತು ಆತ್ಮಕಥನಗಳು

ಕಾರಂತರ ಕೈಯಲ್ಲಿ ವ್ಯಕ್ತಿಯೊಬ್ಬರ ಜೀವನ ಚರಿತ್ರೆಯಾಗಿದೆ ಎಂದರೆ ಬಹುಶಃ ಆ ವ್ಯಕ್ತಿಯು ಮಹಾನ್ ವ್ಯಕ್ತಿಯಾಗಿರಬೇಕು. ಅಂಥವರ ಬಗ್ಗೆ ಮಾತ್ರ ಕಾರಂತರು ಬರೆದಿದ್ದಾರೆ. ಅವರಲ್ಲಿ 1955ರಲ್ಲಿ 'ಕಲಾವಿದ ಕೃಷ್ಣ ಹೆಬ್ಬಾರರು' ಎಂಬ ಕಿರುಹೊತ್ತಿಗೆ. 1972ರಲ್ಲಿ 'ಪಂಜೆ ಮಂಗೇಶರಾಯರು' 'ಕಾರ್ನಾಡ್ ಸದಾಶಿವರಾಯರು', 'ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ' ಮತ್ತು 'ರಮಣ ತಾತಾ' ಎಂಬ ಅನುವಾದಿತ ವ್ಯಕ್ತಿಚಿತ್ರಗಳು.

1948ರಲ್ಲಿ 'ಹುಚ್ಚುಮನಸ್ಸಿನ ಹತ್ತುಮುಖಗಳು' ಎಂಬ ತಮ್ಮ ಆತ್ಮಕಥನ ಕೃತಿಯನ್ನು ಹೊರತಂದರು. ಕಾಲಕಾಲಕ್ಕೆ ಅದನ್ನು ವಿಸ್ತರಿಸುತ್ತಾ ಸಾಗಿದರು. ಈ ಕೃತಿಯಲ್ಲಿ ಕಾರಂತರು ತಾವು ಮಾಡಿದ ಸಾಹಸಗಳು, ಕಷ್ಟ ಕಾರ್ಪಣ್ಯಗಳು, ಸಮಾಜ ಸುಧಾರಣೆಯ ಕನಸುಗಳು, ದೇಶಭಕ್ತಿಯ ಕೆಲಸಗಳು, ನೃತ್ಯ ಸಂಗೀತ ನಾಟಕ, ಯಕ್ಷಗಾನ, ಲಲಿತಕಲೆಗಳಲ್ಲಿ ಇದ್ದ ಆಸಕ್ತಿ. ತಾವು ಪಟ್ಟ ಕಷ್ಟ, ಸುಖಗಳು, ನೋವು ನಲಿವುಗಳು. 1977, 78, 79ರಲ್ಲಿ ಪ್ರಕಟಗೊಂಡ 'ಸ್ಮೃತಿಪಟಲದಿಂದ' (ಭಾಗ 1, 2, 3) ಕಾರಂತರ ಆತ್ಮಕಥನದ ವಿಸ್ತೃತ ಆವೃತ್ತಿಗಳಾಗಿದ್ದು ಅವರ ಬಹುಮುಖ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ಕಾರಂತರ ವಿಶ್ವಕೋಶ

ಕಾರಂತರು ವಿಶ್ವಕೋಶವನ್ನು ರಚಿಸಿದ್ದು ನಿಜಕ್ಕೂ ಒಂದು ಸಾಹಸವೇ ಸರಿ. ದೇಶೀಯ ಭಾಷೆಯಲ್ಲಿ ವಿಶ್ವಕೋಶವನ್ನು ರಚನೆ ಮಾಡಿ ಕನ್ನಡ ಭಾಷೆ

ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. 1936ರಲ್ಲಿ 'ಬಾಲಪ್ರಪಂಚ' ಎಂಬ ಮೂರು ಸಂಪುಟಗಳ ವಿಶ್ವಕೋಶವನ್ನು ರಚಿಸಿದರು. ಮತ್ತೆ 2000 ಪುಟಗಳ 'ವಿಜ್ಞಾನ ಪ್ರಪಂಚ' ನಾಲ್ಕು ಸಂಪುಟಗಳ 'ಬೃಹತ್ ವಿಶ್ವಕೋಶ'ವನ್ನು ರಚಿಸಿದರು. ಕಲೆ, ವಾಸ್ತುಶಿಲ್ಪ, ಪ್ರಾಣಿ ಪಕ್ಷಿಗಳು ಒಟ್ಟಾರೆ ಜೀವಜಂತು ಅವುಗಳ ಹುಟ್ಟು, ಸಾವು, ಬದುಕು, ಆಹಾರ ಪದ್ಧತಿ ಇವೇ ಮುಂತಾದವುಗಳನ್ನು ಸಚಿತ್ರ ವಿಶ್ವಕೋಶವನ್ನು ಲೋಕಾರ್ಪಣೆ ಮಾಡಿ ಓದುಗರಲ್ಲಿ ಆಸಕ್ತಿ ಮೂಡಿಸಿದ್ದಾರೆ. 'ಬಾಲಪ್ರಪಂಚ'ವನ್ನು ಮಕ್ಕಳಿಗಾಗಿ ರಚಿಸಿದ್ದರೂ ವಯಸ್ಕರೂ ತಿಳಿಯುವಂತಹದ್ದು ಒಟ್ಟಾರೆ ಮಕ್ಕಳಲ್ಲಿ ಓದು ಆಸಕ್ತಿ ಮೂಡಿಸುವುದೇ ಕಾರಂತರ ಉದ್ದೇಶ. 1941ರಲ್ಲಿ 560 ಪುಟಗಳ 'ಸಿರಿಗನ್ನಡ ಅರ್ಥಕೋಶ'ವನ್ನು ರಚಿಸಿದರು.

ಕಾರಂತರ ಸಂಪಾದಿತ ಕೃತಿಗಳು

ಸಾಹಿತ್ಯ ಕ್ಷೇತ್ರದಲ್ಲಿ ಬಿಡುವಿಲ್ಲದೆ ದುಡಿಯುತ್ತಿದ್ದ ಕಾರಂತರಿಗೆ ಸಂಪಾದಿತ ಕೃತಿಗಳನ್ನು ರಚಿಸಲು ಬಿಡುವು ಸಿಗುತ್ತಿರಲಿಲ್ಲವೇ ವಿನಃ ಅದು ತನ್ನಂತಹ ಮೇಧಾವಿಗೆ ಅದು ಸಲ್ಲದು ಎಂದಲ್ಲ. 1952ರಲ್ಲಿ 'ಪಂಜೆಮಂಗೇಶರಾಯರ ನೆನಪಿಗಾಗಿ ಪಂಜೆ ಸ್ಮಾರಕ ಗ್ರಂಥ ಸಮಿತಿಯನ್ನು ರಚಿಸಿದರು. ಆ ಸಮಿತಿಯಲ್ಲಿ ಮಂಜೇಶ್ವರ ಗೋವಿಂದ ಪೈ ಮತ್ತು ವಿ. ಸೀತಾರಾಮಯ್ಯನವರಿದ್ದರು. 'ಪಂಜೆಯವರ ನೆನಪಿಗಾಗಿ' ಎಂಬ ಗ್ರಂಥವನ್ನು ಹೊರತಂದರು. ದಕ್ಷಿಣ ಕನ್ನಡದಲ್ಲಿ ಜನಪ್ರಿಯರಾಗಿದ್ದ ಬತ್ತಲೇಶ್ವರ ಕವಿ ವಿರಚಿತ 'ರಾಮಾಯಣ' ತಾಳೆಗರಿ ಪ್ರತಿಗಳು ಕಾರಂತರಿಗೆ ಅಚಾನಕ್ಕಾಗಿ ಸಿಕ್ಕವು. ಆ ಕೂಡಲೇ ಅವನ್ನು ಸಂಗ್ರಹಿಸಿ ಉಗ್ರಾಣ ಮಂಗೇಶರಾಯರೆಂಬ ಹೆಸರಾಂತ ಕನ್ನಡ ಪಂಡಿತರ ನೆರವಿನಿಂದ 1966ರಲ್ಲಿ 'ಕೌಶಿಕ ರಾಮಾಯಣ' ಎಂಬ 560 ಪುಟಗಳ ಮಹಾಕಾವ್ಯವನ್ನು ಪ್ರಕಟಿಸಿದರು. ಇಷ್ಟೇ ಅಲ್ಲದೆ ತಮ್ಮ ಗುರುಗಳಾದ ಏರೋಡಿ ಶಿವರಾಮಯ್ಯ –ಬದುಕು ಮತ್ತು ಬರಹ ಎಂಬ ಗ್ರಂಥವನ್ನು ಸಂಪಾದಿಸಿದರು.

ಅನುವಾದ ಕೃತಿಗಳು

ಕನ್ನಡೇತರ ಭಾಷೆಗಳಲ್ಲಿರುವ ಜ್ಞಾನವನ್ನು ಭಾಷಾಂತರದ ಮೂಲಕ ಕನ್ನಡಕ್ಕೆ ತಂದು ಕನ್ನಡಿಗರಿಗೆ ಉಪಕಾರ ಮಾಡುವ ಉದ್ದೇಶದಿಂದ. ಅನ್ಯಭಾಷಾ ಕೃತಿಗಳನ್ನು ಅನುವಾದ ಮಾಡಿದ್ದಾರೆ. ಅವುಗಳಲ್ಲಿ 1951ರಲ್ಲಿ ಮರಾಠಿ ಭಾಷೆಯ ಪ್ರಸಿದ್ಧ ಲೇಖಕ ಹರಿನಾರಾಯಣ, ಆಪ್ಟೆಯವರ 'ಫಣ್‌ಕೋಣ್ ಲಕ್ಷ್ಯಾಂಕ್ ಘತ್ತಾತ್' ಎಂಬ ಕಾದಂಬರಿಯನ್ನು 'ಯಾರು ಲಕ್ಷಿಸುವವರು?' ಎಂಬ ಹೆಸರಿನಿಂದ ಕನ್ನಡೀಕರಿಸಿದ್ದಾರೆ. 1935ರಲ್ಲಿ 'ಶ್ರೀ ರಾಮಕೃಷ್ಣರ ಜೀವನ ಚರಿತ್ರೆ'

ಮತ್ತೊಂದು ಕೃತಿ 'ಅದ್ವೈತ ಆಶ್ರಮ, ಮಾಯಾವತಿ' ಎಂಬ ಜನಪ್ರಿಯ ಕೃತಿ. ರಷ್ಯಾದ ಹೆಸರಾಂತ ಲೇಖಕ ಕಾರ್ಲ್ ಎಸ್ಕಾ ಬರೆದ 'ದಿ ಫೈವ್ ಸೀಸನ್ಸ್' ಎಂಬ ಕೃತಿಯನ್ನು 'ಭಾರತ ವರ್ಷದಲ್ಲಿ ಬ್ರಿಟಿಷರು' ಎಂದು ಅನುವಾದಿಸಿದರು. 1956ರಲ್ಲಿ 'ನಮ್ಮ ಸುತ್ತಲಿನ ಕಡಲು' 1983ರಲ್ಲಿ 'ಕೀಟನಾಶಕಗಳ ಪಿಡುಗು', ನಮ್ಮ ಪ್ರಮಾಣ ಚೈತನ್ಯ-ಉತ್ಪಾದನ ಸಾಧನಗಳು (1986) ನಮ್ಮೆಲ್ಲರಿಗೂ ಒಂದೇ ಭವಿಷ್ಯ (1985) ಭಾರತದ ಪರಿಸರ- ದ್ವಿತೀಯ ಸಮೀಕ್ಷೆ (1986) ಹೀಗೆ ಹಲವಾರು ಕೃತಿಗಳನ್ನು ಕನ್ನಡಿಗರಿಗೆ ನೀಡಿದ್ದಾರೆ.

ಯಕ್ಷಗಾನ ಮತ್ತು ಬಯಲಾಟಕ್ಕೆ ಕಾರಂತರ ಕೊಡುಗೆ

ದಕ್ಷಿಣ ಕನ್ನಡದ ಜನಪ್ರಿಯ ಮನರಂಜನೆಗಾಗಿ ಯಕ್ಷಗಾನ ಮತ್ತು ಬಯಲಾಟವನ್ನು ಆಡುತ್ತಾರೆ. ಬಹುಶಃ ಯಕ್ಷಗಾನಕ್ಕೆ ಒಳ್ಳೆಯ ಕಾಯಕಲ್ಪವನ್ನು ನೀಡಿದವರೆಂದರೆ ಕಾರಂತರು. 1959ರಲ್ಲಿ 'ಯಕ್ಷಗಾನ-ಬಯಲಾಟ' ಎಂಬ ಕೃತಿಯನ್ನು ಬರೆದರು. ಇದಕ್ಕೆ 'ಇಂಟರ್‌ನ್ಯಾಷನಲ್ ಡ್ಯಾನ್ಸ್ ಆರ್ಕೈವ್ಸ್ ಸ್ಟಾಕ್ ಹೋಮ್' ಎಂಬ ಸಂಸ್ಥೆಯು ಕಂಚಿನ ಪದಕವನ್ನು ನೀಡಿ ಗೌರವಿಸಿತು. 'ಯಕ್ಷಗಾನ-ಬಯಲಾಟ' ಕೃತಿಯಲ್ಲಿ ಕಾರಂತರು ವೈಜ್ಞಾನಿಕವಾಗಿ ಸಂಶೋಧಿಸಿ ಬರೆದಿದ್ದಾರೆ. ಯಕ್ಷಗಾನ ಮತ್ತು ಬಯಲಾಟಕ್ಕೆ ಈ ಕೃತಿಯು ಬೈಬಲ್ ಇದ್ದಂತೆ. ಈ ಕೃತಿಗೆ 1959ರಲ್ಲಿ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ಲಭಿಸಿತು.

ಆಂಗ್ಲ ಭಾಷೆಯಲ್ಲಿ ಕೃತಿಗಳು

ಕರ್ನಾಟಕದ ಜಾನಪದ ಕಲೆಗಳ ಬಗ್ಗೆ ಚಿತ್ರಕಲೆ, ಯಕ್ಷಗಾನ, ಬಯಲಾಟ ಜಾನಪದ ಕಲೆಗಳ ಬಗ್ಗೆ ಇಂಗ್ಲಿಷ್ ಭಾಷೆಯಲ್ಲಿ ಗ್ರಂಥಗಳನ್ನು ರಚಿಸಿ ಯಶಸ್ವಿಯಾಗಿದ್ದಾರೆ. 1997ರಲ್ಲಿ ನವದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಸಂಸ್ಥೆಯವರು ಯಕ್ಷಗಾನ (Yakshagana) ಎಂಬ ಗ್ರಂಥವನ್ನು ಪ್ರಕಟಿಸಿದರು. ನಂತರದ ದಿನಗಳಲ್ಲಿ Pictureques South Kanara, Folk Art of Karnataka, Karnataka Paintings, My concern for life, Literature & Art ಇವೇ ಮುಂತಾದವು. ಕಾರಂತರ Yakshagana ವನ್ನು ಮೈಸೂರು ವಿಶ್ವವಿದ್ಯಾಲಯವೂ ಪ್ರಕಟಿಸಿತು.

ಹೀಗೆ ಕಾರಂತರು ಕನ್ನಡ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ದುಡಿದಿದ್ದಾರೆ. ಬಾಲ್ಯದಿಂದಲೂ ಚುರುಕಾಗಿದ್ದು ಕಾರಂತರು ತಮ್ಮ ತೊಂಬತ್ತಾರನೇ ವಯಸ್ಸಿನಲ್ಲೂ ಕೂಡ ಯುವಕರಂತೆ ಯಕ್ಷಗಾನ ಬಯಲಾಟವನ್ನು ಆಡುತ್ತಿದ್ದುದು ರೋಚಕವಾಗಿತ್ತು. ತಮ್ಮ ಜೀವನದುದ್ದಕ್ಕೂ ಸಾಹಿತ್ಯಕ್ಕಾಗಿ ದುಡಿದರು. ಕೊನೆಯ

ತನಕ ಶಿಸ್ತು ಸಂಯಮದಿಂದ ಬದುಕಿದ್ದ ಕಾರಂತರು ಲೋಕಸಭಾ ಚುನಾವಣಾ ಕಣಕ್ಕಿಳಿದರು. ಆದರೆ ಚುನಾವಣೆಯಲ್ಲಿ ಪ್ರಚಾರವನ್ನೇ ಮಾಡಲಿಲ್ಲ. ಇದೇ ಕಾರಣಕ್ಕೆ ಸೋತರು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಸೋಲಿಲ್ಲದ ಸರದಾರ. ನಾಡಿನ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿದರೆ ಕೇಂದ್ರವು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿಯಂತಹ ಪ್ರಶಸ್ತಿಗಳನ್ನು ನೀಡಿ ಗೌರವಿಸಿದವು. ಕಾರಂತರ ಜ್ಞಾನಕ್ಕೆ ವಿದೇಶಗಳೂ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದವು. (ಪಟ್ಟಿಯನ್ನು ಕೊಡಲಾಗಿದೆ) ಕಡಲತೀರದ ಭಾರ್ಗವ ಕೋಟ ಶಿವರಾಮ ಕಾರಂತರು 1997 ಡಿಸೆಂಬರ್ 9ರಂದು ಇಹಲೋಕ ತ್ಯಜಿಸಿದರು.

ಕಾರಂತರ ಸಂದ ಪ್ರಶಸ್ತಿ, ಪುರಸ್ಕಾರಗಳು

೧.	ದೇವರಾಜ ಬಹದ್ದೂರ್ ಬಹುಮಾನ (ಭಾರತೀಯ ಚಿತ್ರಕಲೆ)	೧೯೨೯
೨.	ದೇವರಾಜ ಬಹದ್ದೂರ್ ಬಹುಮಾನ (ಮರಳಿ ಮಣ್ಣಿಗೆ ಕಾದಂಬರಿ)	೧೯೪೩
೩.	ಕನ್ನಡ ಸಾಹಿತ್ಯ ರಾಜ್ಯಮಟ್ಟದ ಸಮ್ಮೇಳನದ ಅಧ್ಯಕ್ಷತೆ	೧೯೪೫
೪.	ಲಾ ಆರ್ಕೈವ್ಸ್ ಲಾ ಇಂಟರ್ ನ್ಯಾಷನಲ್ ಸ್ಟಾಕ್ ಹೋಮ್ ಕಂಚಿನ ಪದಕ	೧೯೫೮
೫.	ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಯಕ್ಷಗಾನ ಬಯಲಾಟ)	೧೯೫೯
೬	ಗೌರವ ಡಿ. ಲಿಟ್ (ಕರ್ನಾಟಕ ವಿಶ್ವವಿದ್ಯಾಲಯ)	೧೯೬೨
೭.	ಗೌರವ ಡಿ. ಲಿಟ್ (ಮೈಸೂರು ವಿಶ್ವವಿದ್ಯಾಲಯ)	೧೯೬೩
೮.	ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ	೧೯೬೬
೯.	ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ (ತುರ್ತು ಪರಿಸ್ಥಿತಿ ಹೇರಿಕೆಯನ್ನು ಪ್ರತಿಭಟಿಸಿ ೧೯೭೫ರಲ್ಲಿ ಈ ಪ್ರಶಸ್ತಿಯನ್ನು ಮರಳಿಸಿದರು)	೧೯೬೮
೧೦.	ಕೇಂದ್ರ ಸಂಗೀತ ನಾಟಕ ಅಕಾಡೆಮಿ ಗೌರವ ಫೆಲೋಶಿಪ್	೧೯೭೩
೧೧.	ಚೋಮನದುಡಿ ಚಲನಚಿತ್ರಕ್ಕೆ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಕಥಾ ಪ್ರಶಸ್ತಿ, ಅತ್ಯುತ್ತಮ ಚಿತ್ರ ಸಂಭಾಷಣೆ ಪ್ರಶಸ್ತಿ	೧೯೭೫
೧೨.	ಗೌರವ ಡಿ. ಲಿಟ್ (ಮೀರತ್ ವಿಶ್ವವಿದ್ಯಾಲಯ)	೧೯೭೬
೧೩.	ಜ್ಞಾನಪೀಠ ಪ್ರಶಸ್ತಿ (ಮೂಕಜ್ಜಿಯ ಕನಸುಗಳು)	೧೯೭೮
೧೪.	ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೭೮ರ ಅತ್ಯುತ್ತಮ ಕೃತಿ ಕಲಾಪ್ರಪಂಚ)	೧೯೭೯
೧೫.	ಜಾಪನೀಸ್ ಡ್ಯಾನ್ಸ್ ಕ್ರಿಟಿಕ್ಸ್ ಸೊಸೈಟಿ ಅವಾರ್ಡ್	೧೯೮೧

(ಕಾರಂತ ನಿರ್ದೇಶಿತ ಯಕ್ಷಗಾನ ಪ್ರದರ್ಶನಗಳಿಗೆ) ೧೯೮೨

೧೬. ಗೌರವ ಡಿ. ಲಿಟ್ (ಮಂಗಳೂರು ವಿಶ್ವವಿದ್ಯಾಲಯ) ೧೯೮೩

೧೭. ಗೌರವ ಡಿ. ಲಿಟ್ (ಜಬ್ಬಲ್ ಪುರ ವಿಶ್ವವಿದ್ಯಾಲಯ) ೧೯೮೩

೧೮. ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ (ಭಾರತೀಯ ಶಿಲ್ಪಕಲೆ) ೧೯೮೪

೧೯. ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಫೆಲೋಶಿಪ್ ೧೯೮೫

೨೦. ಗೌರವ ಡಿ. ಲಿಟ್ (ವರ್ಲ್ಡ್ ಅಕಾಡೆಮಿ ಆಫ್ ಆರ್ಟ್ ಅಂಡ್ ಕಲ್ಚರ್) ೧೯೮೬

೨೧. ದಿ. ಏಶಿಯಾಟಿಕ್ ಸೊಸೈಟಿಆಫ್ ಬಾಂಬೆ-ಕ್ಯಾಂಪ್‌ಬೆಲ್ ಮೆಮೋರಿಯಲ್ ಚಿನ್ನದ ಪದಕ ೧೯೮೯

೨೨. ದಾದಾಭಾಈ ನವರೋಜಿ ಮೆಮೋರಿಯಲ್ ಪ್ರೈಜ್ ೧೯೯೦

೨೩. ತುಲಸೀ ಸಂಮಾನ್ (ಯಕ್ಷರಂಗ) ಜಾನಪದ ಕಲೆಯ ಪುನರುತ್ಥಾನ ಕಾರ್ಯಕ್ಕಾಗಿ ದೊರೆತ ಮಧ್ಯಪ್ರದೇಶ ಸರಕಾರದ ಪುರಸ್ಕಾರ ೧೯೯೦

೨೪. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಮತ್ತು ಮಾನವ ಕಲ್ಯಾಣ ಇಲಾಖೆಯ ಫೆಲೋಶಿಪ್ (ಯಕ್ಷಗಾನ ಕಲೆಯ ಕುರಿತು ನಡೆಯಿಸುತ್ತಿದ್ದ ರಂಗ ಚಟುವಟಿಕೆಗಳ ಬಗ್ಗೆ) ೧೯೯೨

೨೫. ಪಂಪ ಪ್ರಶಸ್ತಿ (ಮೈಮನಗಳ ಸುಳಿಯಲ್ಲಿ - ಕಾದಂಬರಿಗೆ) ೧೯೯೨

೨೬. ಇಂದಿರಾಗಾಂಧಿ ಪರ್ಯಾವರಣ ಪುರಸ್ಕಾರ ೧೯೮೯
(ಕಾರಂತರಿಗೆ ಅಧ್ಯಕ್ಷರಾಗಿರುವ ಸಮಾಜ ಪರಿವರ್ತನೆ ಸಮುದಾಯಕ್ಕೆ) ೧೯೯೨

೨೭. ಜಸ್ಟಿಸ್ ಕೆ.ಎಸ್. ಹೆಗ್ಡೆ ಪ್ರತಿಷ್ಠಾನ ಪ್ರಶಸ್ತಿ ೧೯೯೩

೨೮. ಇಂದಿರಾಗಾಂಧಿ ಪರ್ಯಾವರಣ ಪುರಸ್ಕಾರ ೧೯೯೨
(ಕಾರಂತರಿಗೆ ದೊರೆತ ಗೌರವ) ೧೯೯೪

೨೯. ಸರ್.ಎಂ. ವಿಶ್ವೇಶ್ವರಯ್ಯ ಮೆಮೋರಿಯಲ್ ಅವಾರ್ಡ್ ೧೯೯೫

೩೦. ಲಯನ್ಸ್ ಅಂತರರಾಷ್ಟ್ರೀಯ ಗೌರವ ಸದಸ್ಯತ್ವ ೧೯೯೬

೩೧. ಭಾರತೀಯ ವಿದ್ಯಾಭವನದ ಗೌರವ ಸದಸ್ಯತ್ವ ೧೯೯೬

೩೨. 'ದೇಶಿಕೋತ್ತಮ' ಗೌರವ ಡಾಕ್ಟೊರೇಟ್ (ವಿಶ್ವಭಾರತಿ ವಿಶ್ವವಿದ್ಯಾಲಯ, ಶಾಂತಿನಿಕೇತನ) ೧೯೯೭

೩೩. 'ನಾಡೋಜ' ಗೌರವ ಡಾಕ್ಟೊರೇಟ್ (ಕನ್ನಡ ವಿಶ್ವವಿದ್ಯಾಲಯ, ಹಂಪಿ) ೧೯೯೭

ಎ.ವಿ. ವರದಾಚಾರ್ಯ

ಇಪ್ಪತ್ತನೆಯ ಶತಮಾನದ ಪ್ರಾರಂಭದ ಹೊಸ್ತಿಲಲ್ಲಿ ನಾಟಕ, ನೃತ್ಯ, ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರು. ಅಂದು ಇಂದಿನ ಕಾಲದಂತೆ ಸಿನಿಮಾ, ನೃತ್ಯ, ದೂರದರ್ಶನ ಇವೇ ಮುಂತಾದ ಮನರಂಜನೆಗಳಿರಲಿಲ್ಲ. ಅಂದಿನ ಕಾಲದಲ್ಲಿ ನಾಟಕಗಳು ಇಂದಿನ ಸಿನಿಮಾಗಳಂತೆ ಹೆಚ್ಚು ಜನಪ್ರಿಯವಾಗಿದ್ದವು. ಆದರೆ ಇಂದಿನ ಕಾಲದ ನಾಟಕಗಳಂತೆ ಧ್ವನಿವರ್ಧಕಗಳು, ಕಣ್ಣು ಕೋರೈಸುವ ವಿದ್ಯುತ್ ದೀಪಗಳು, ಬಣ್ಣ ಬಣ್ಣದ ದೀಪಗಳು ಇವೇ ಮೊದಲಾದ ಆಧುನಿಕ ತಂತ್ರಜ್ಞಾನವಿರಲಿಲ್ಲ. ನಟನಾದವನಿಗೆ ಶರೀರ, ಶಾರೀರಗಳು ಚೆನ್ನಾಗಿರಬೇಕಾಗಿತ್ತು. ಅಂತಹ ನಟರನ್ನೂ ಅವರ ನಟನೆಯನ್ನು ಜನ ಮೆಚ್ಚುತ್ತಿದ್ದರು. ಅಂತಹವರಿಗೆ ಇಂದಿನ ಕಾಲದಂತೆ ಅಂದು ಸಮಾಜದಲ್ಲಿ ತಾರಾಮೌಲ್ಯವಿರುತ್ತಿತ್ತು. ಅಂತಹ ಒಬ್ಬ ನಟಸಾರ್ವಭೌಮನೆಂದರೆ ಎ.ವಿ. ವರದಾಚಾರ್ಯ. ಅಂದು ಇಡೀ ರಾಜ್ಯದಾದ್ಯಂತ ಹೆಸರುವಾಸಿಯಾಗಿದ್ದ ಸುಪ್ರಸಿದ್ದ ನಾಟಕಕಾರ, ಜಗತ್ಪ್ರಸಿದ್ದ ಕವಿ ರವೀಂದ್ರನಾಥ ಠಾಗೂರ್‌ರವರು ವರದಾಚಾರ್ಯರ ನಾಟಕವನ್ನು ನೋಡಿ ಮೆಚ್ಚಿಕೊಂಡರಂತೆ. ಇಂತಹ ಧೀಮಂತ ನಟಸಾರ್ವಭೌಮ ಎ.ವಿ. ವರದಾಚಾರ್ಯ.

ವರದಾಚಾರ್ಯರ ತಂದೆಯವರು ರಂಗಸ್ವಾಮಿ ಅಯ್ಯಂಗಾರ್ಯರು ಇವರಿಗೆ ಮೂರು ಜನ ಮಕ್ಕಳು. ಇವರ ಮೊದಲನೆಯ ಪುತ್ರನೇ ಕರ್ನಾಟಕದ ಹೆಸರಾಂತ ನಾಟಕಕಾರ ವರದಾಚಾರ್ಯರು. ಇವರು 1869 ಫೆಬ್ರವರಿ 2ನೇ ತಾರೀಖು ಜನಿಸಿದರು. ಅನುಮಲಪಲ್ಲಿ ರಂಗಸ್ವಾಮಿ ಅಯ್ಯಂಗಾರ್ಯರು ಹೆಸರಾಂತ ಸಂಗೀತಗಾರರಾಗಲಿ ನಾಟಕಕಾರರಾಗಲಿ ಆಗಿರಲಿಲ್ಲ. ಅವರು

ಮೈಸೂರು ಸರ್ಕಾರದ ಕಂದಾಯ ಇಲಾಖೆಯ ಶಿರಸ್ತೇದಾರ (Revenue Inspector) ಹುದ್ದೆಯಲ್ಲಿದ್ದರು. ಹೇಳಿಕೇಳಿ ವರದಾಚಾರ್ಯರ ತಂದೆಯವರು ಸರ್ಕಾರಿ ಹುದ್ದೆಯಲ್ಲಿದ್ದುದರಿಂದ ಆಗಿಂದಾಗ್ಗೆ ಒಂದು ಊರಿನಿಂದ ಮತ್ತೊಂದು ಊರಿಗೆ ವರ್ಗಾವಣೆಯಾಗುತ್ತಿತ್ತು. ಕೆಲವುಕಾಲ ಚಿತ್ರದುರ್ಗದಲ್ಲಿದ್ದಾಗ ವರದಾಚಾರ್ಯರು ಅಲ್ಲಿಯೇ ಜನಿಸಿದರು. ಪ್ರಾರಂಭದಿಂದ ಪ್ರೌಢಶಾಲಾ ಶಿಕ್ಷಣದವರೆವಿಗೂ ಚಿತ್ರದುರ್ಗದಲ್ಲೇ ನಡೆಯಿತು. ರಂಗಸ್ವಾಮಿ ಅಯ್ಯಂಗಾರರು ತಮ್ಮ ಮಗಳಾದ ತಾಯಮ್ಮನನ್ನು ಬೆಂಗಳೂರಿನಲ್ಲಿ ಸರ್ಕಾರಿ ಚಾಕರಿಯಲ್ಲಿದ್ದ ಒಬ್ಬ ವರನಿಗೆ ಕೊಟ್ಟು ವಿವಾಹ ಮಾಡಿದ್ದರು. ರಂಗಸ್ವಾಮಿಯವರಿಗೆ ಶಿವಮೊಗ್ಗಕ್ಕೆ ವರ್ಗವಾಗಲಾಗಿ ವರದಾಚಾರ್ಯರು ಎಫ್.ಎ. ಓದಲು ತಮ್ಮ ತಂಗಿಯ ಮನೆಯಲ್ಲೇ ಓದು ಮುಂದುವರಿಸಿದರು. ವರದಾಚಾರ್ಯರ ತಾಯಿಯವರು ಎಫ್.ಎ. ಮುಗಿದ ಬಳಿಕ ವಿವಾಹ ಮಾಡಿದರು. ನಂತರ ಒಂದು ಮಗುವೂ ಜನಿಸಿತು. ಅಂದಿನ ಕಾಲದಲ್ಲಿ ಎಫ್.ಎ. ಮುಗಿಸಿದ ಯುವಕರಿಗೆ ಸರ್ಕಾರಿ ಕೆಲಸ ಸಿಗುತ್ತಿತ್ತು. ಅಂತೆಯೇ ವರದಾಚಾರ್ಯರಿಗೆ ಸರ್ಕಾರಿ ಹುದ್ದೆ ದೊರೆಯಿತು.

ನಾಟಕದ ಗೀಳು ಹಾಗೂ ರಂಗಭೂಮಿಗೆ ಪಾದಾರ್ಪಣೆ

ಆಗಿನ ಕಾಲದಲ್ಲಿ ಇಂದಿನಂತೆ ಸಿನಿಮಾ, ದೂರದರ್ಶನಗಳಿರಲಿಲ್ಲ. ನಾಟಕಗಳೇ ಪ್ರಮುಖ ಆಕರ್ಷಣೆ. ಒಮ್ಮೆ ಮೈಸೂರಿನಲ್ಲಿದ್ದಾಗ ನಾಟಕ ನೋಡಲು ತೆರಳಿದ ವರದಾಚಾರ್ಯರಿಗೆ ಮುಖ್ಯ ನಟನ ಅಭಿನಯ, ಹಾಡುವ ಶೈಲಿ ಇವೇ ಮುಂತಾದವು ಅವರಿಗೆ ಇಷ್ಟವಾಗಲಿಲ್ಲ. ತಾನೇ ಆ ನಟನಾಗಿದ್ದರೆ ಹೇಗೆ ಅಭಿನಯಿಸುತ್ತಿದ್ದೆ, ಹಾಡುತ್ತಿದ್ದೆ ಎಂದು ತಮ್ಮ ಸಹೋದ್ಯೋಗಿಗಳಿಗೆ, ಸ್ನೇಹಿತರಿಗೆ ಅಭಿನಯಿಸಿ ತೋರಿಸಿ ಶಹಬಾಸ್‌ಗಿರಿ ಪಡೆದರು. ಮುಂದೆ ಇದೇ ರಂಗಸಜ್ಜಿಕೆಯಾಯ್ತು. ತನಗೆ ಗೊತ್ತಿದ್ದೂ ಗೊತ್ತಿಲ್ಲದಂತೆಯೂ ರಂಗಭೂಮಿಗೆ ಆಕರ್ಷಿತರಾದರು.

ಅಂದಿನ ಕಾಲದಲ್ಲಿ ಬೆಂಗಳೂರಿಗಿಂತಲೂ ಮೈಸೂರು ಸಂಗೀತ, ನಾಟಕಗಳ ಸಾಂಸ್ಕೃತಿಕ ಕೇಂದ್ರವಾಗಿತ್ತು. ಮೈಸೂರಿನ ಆಳರಸರು ಇದಕ್ಕೆ ಪೋಷಕರಾಗಿದ್ದರು. ಮೈಸೂರಿನ ಚಾಮರಾಜೇಂದ್ರ ಒಡೆಯರು ನಾಟಕ ಕಂಪನಿಯೊಂದಕ್ಕೆ ಸಹಾಯಧನ ನೀಡಿದುದರ ಫಲವಾಗಿ ಅವರ ಹೆಸರಿನಲ್ಲಿಯೇ "ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ" ಎಂಬ ನಾಟಕ ಕಂಪನಿಯು ರಾಜಾಶ್ರಯ ಪಡೆದು ಮೈಸೂರು ಸುತ್ತಮುತ್ತ ಪ್ರಖ್ಯಾತವಾದ ನಾಟಕ ಕಂಪನಿಯಾಗಿದ್ದಿತು. ಅಲ್ಲಿ ಒಳ್ಳೆಯ ಕಲಾವಿದರಿದ್ದರು. ಇದಕ್ಕೆ ಕಾರಣವೇನೆಂದರೆ ಮೈಸೂರು ಪ್ರಾಂತ್ಯದಲ್ಲಿ ರಾಜಾಶ್ರಯ ಪಡೆದ ಹೆಸರಾಂತ ಕಂಪನಿಯಾದುದು

ನಾಟಕಕಾರರಾದ ಗೌರಿನರಸಿಂಹಯ್ಯನವರು, ಅವರ ಮಿತ್ರರು ಕಲಾಪೋಷಕರು, ಕಲಾಭಿಮಾನಿಗಳು ಸೇರಿ "ಶ್ರೀ ಸರಸ್ವತಿ ವಿಲಾಸ ರತ್ನಾವಳಿ ನಾಟಕ ಸಭಾ" ಎಂಬ ನಾಟಕ ಮಂಡಳಿಯನ್ನು ಸ್ಥಾಪಿಸಿದರು. ಅಂದಿನ ಕಾಲದಲ್ಲಿ ಸ್ತ್ರೀ ಪಾತ್ರಧಾರಿಗಳಿರಲಿಲ್ಲ. ಪುರುಷರೇ ಸ್ತ್ರೀ ಪಾತ್ರವನ್ನು ವಹಿಸುತ್ತಿದ್ದರು. ಗೌರಿನರಸಿಂಹಯ್ಯನವರೇ ಸ್ತ್ರೀ ಪಾತ್ರಧಾರಿಗಳಾಗಿ ಅಭಿನಯಿಸುತ್ತಿದ್ದರು. ಈ ರತ್ನಾವಳಿ ನಾಟಕ ಸಭಾ ಒಳ್ಳೆಯ ನಟರಿಂದಾಗಿ ಹೆಸರುವಾಸಿಯಾದ ನಾಟಕ ಮಂಡಳಿಯಾಗಿತ್ತು. ವರದಾಚಾರ್ಯರಿಗೆ ಗೌರೀನರಸಿಂಹಯ್ಯನವರ ಪರಿಚಯವಾಗಿತ್ತು. ವರದಾಚಾರ್ಯರು ಅವರ ನಾಟಕ ಮಂಡಳಿಯಲ್ಲಿ ನಟರಾಗಿ ಪ್ರವೇಶ ಮಾಡಿದರು. ವರದಾಚಾರ್ಯರ ಶರೀರ, ಶಾರೀರ ಮೈಸೂರಿಗರನ್ನು ಆಕರ್ಷಿಸಿತು. ಕೆಲವೇ ದಿನಗಳಲ್ಲಿ ವರದಾಚಾರ್ಯರ ಹೆಸರು ಮೈಸೂರಿನಲ್ಲಿ ಮನೆಮಾತಾಯಿತು. ಮೈಸೂರಿನಿಂದ ಬಳ್ಳಾರಿಯವರೆವಿಗೂ ಅವರ ನಾಟಕ ತಂಡ ಸಂಚಾರಿ ನಾಟಕ ತಂಡವಾಗಿ ಊರಿಂದೂರಿಗೆ ಸಂಚರಿಸುತ್ತಿತ್ತು. ನಾಟಕ ತಂಡ ಎಲ್ಲೆಡೆ ಜನಪ್ರಿಯತೆ ಗಳಿಸಿತು. ವರದಾಚಾರ್ಯರು ಸಂತೋಷದ ತುತ್ತತುದಿಯಲ್ಲಿರುವಾಗಲೇ ಅವರಿಗೆ ಆಘಾತ ಕಾಯ್ದಿತ್ತು. ಅದೇನೆಂದರೆ ಬೆಂಗಳೂರಿನಲ್ಲಿ ವಾಸವಾಗಿದ್ದ ಅವರ ಹೆಂಡತಿ, ಮಕ್ಕಳ ಆರೋಗ್ಯ ತೀರಾ ಹದಗೆಟ್ಟಿತ್ತು. ಸಾವು ಬದುಕಿನ ನಡುವೆ ಹೋರಾಡುತ್ತಿದ್ದರು. ವಿಷಯ ತಿಳಿದ ವರದಾಚಾರ್ಯರು ಬೆಂಗಳೂರಿಗೆ ಧಾವಿಸಿದರು. ಅಷ್ಟರಲ್ಲಿ ಹೆಂಡತಿ ಮತ್ತು ಮಗ ಸಾವನ್ನಪ್ಪಿದ್ದರು.

ತಾವು ಗಳಿಸಿದ ಹಣ, ಆಸ್ತಿ, ಜನಪ್ರಿಯತೆ ತನ್ನ ಹೆಂಡತಿ ಮಕ್ಕಳನ್ನು ಉಳಿಸಿಕೊಳ್ಳಲಾಗಲಿಲ್ಲವಲ್ಲ ಎಂದು ಪರಿತಪಿಸಿದರು. ಮೈಸೂರು ತನಗೆ ಒಗ್ಗಿ ಬರಲಿಲ್ಲ. ಅದರಿಂದಲೇ ಹೀಗಾಯಿತು ಎಂದು ತಮ್ಮಲ್ಲೇ ಅಂದುಕೊಂಡು ಮೈಸೂರಿನಿಂದ ಬೆಂಗಳೂರಿಗೆ ಬಂದು ಇಲ್ಲಿಯೇ ನೆಲೆಸಿದರು. ವರದಾಚಾರ್ಯರ ತಂಗಿಯ ಸಂಸಾರ ಅಣ್ಣನ ಆರೈಕೆಯಲ್ಲಿ ತೊಡಗಿತು. ಅಂದಿನ ಕಾಲದಲ್ಲಿ ಸರ್ಕಾರಿ ಕೆಲಸ ಗಿಟ್ಟಿಸಿಕೊಳ್ಳುವುದು ಈಗಿನಷ್ಟು ಕಷ್ಟವಿರಲಿಲ್ಲ. ವರದಾಚಾರ್ಯರು ಬೆಂಗಳೂರಿನ ರೆಸಿಡೆಂಟರ (ರಾಜ್ಯಪಾಲರ) ಕಛೇರಿಯಲ್ಲಿ ಉದ್ಯೋಗಕ್ಕೆ ಸೇರಿದರು. ಜೀವನಕ್ಕೆ ತೊಂದರೆಯಿರಲಿಲ್ಲ. ಆದರೂ ನಾಟಕರಂಗ ವರದಾಚಾರ್ಯರನ್ನು ಕೈಬೀಸಿ ಕರೆಯುತ್ತಿತ್ತು.

1900ರ ಸಮಯದಲ್ಲಿ ಬೆಂಗಳೂರಿನಲ್ಲಿದ್ದ ಸರ್ಕಾರಿ ಅಧಿಕಾರಿಗಳು, ಕಲಾಸಕ್ತರು ನಾಟಕ ಅಭಿಮಾನಿಗಳು ಅದರಲ್ಲೂ ವಿಶೇಷವಾಗಿ ವರದಾಚಾರ್ಯರ ನಾಟಕವನ್ನು ನೋಡಿ ಅವರ ಅಭಿಮಾನಿಗಳಾಗಿದ್ದ ಕೃಷ್ಣಸ್ವಾಮಿ ಅಯ್ಯರ್, ಸಿದ್ದರಾಮಪ್ಪ, ಕೃಷ್ಣಸ್ವಾಮಿ ಅಯ್ಯಂಗಾರ್ ಜಯರಾಮ್, ಸೆಟ್ಲೂರ್ ಇವರೇ

ಮುಂತಾದವರು ಸೇರಿ 'ಬೆಂಗಳೂರು ಯೂನಿಯನ್' ಎಂಬ ನಾಟಕ ತಂಡವನ್ನು ಕಟ್ಟಿದರು. ವರದಾಚಾರ್ಯರು ಸಂಪೂರ್ಣವಾಗಿ ಈ ನಾಟಕ ತಂಡದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಒಮ್ಮೆ ನಾಟಕದ ಗೀಳು ಹತ್ತಿಸಿಕೊಂಡರೆ ಅದರಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ವರದಾಚಾರ್ಯರು ಸರ್ಕಾರಿ ಕೆಲಸವನ್ನು ಬಿಟ್ಟು ಸಂಘಕ್ಕಾಗಿ ದುಡಿದರು. ಸಂಘದಲ್ಲಿ ಒಡಕುಂಟಾಯಿತು. ಸಂಘವು ಒಡೆದು ಹೋಳಾದಾಗ ವರದಾಚಾರ್ಯರು ಮಮ್ಮಲ ಮರುಗಿದರು. ಬೆಂಗಳೂರಿನಲ್ಲಿದ್ದರೆ ಹೆಂಡತಿ ಮಕ್ಕಳ ನೆನಪಾಗುತ್ತದೆ. ಅದರಿಂದ ತಪ್ಪಿಸಿಕೊಳ್ಳಬೇಕು ಎಂದು ಹೇಳಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಬೆಳೆಸಿದರು. ಮೈಸೂರು ಆಚಾರ್ಯರನ್ನು ಕೈಬೀಸಿ ಕರೆಯಿತೆಂದರೆ ತಪ್ಪಾಗಲಾರದು. ಮೈಸೂರಿನಲ್ಲಿ ಈಗಾಗಲೇ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಎಂಬ ನಾಟಕ ಮಂಡಳಿಯೇ ಅಲ್ಲದೆ 'ಶ್ರೀ ಸರಸ್ವತಿ ವಿಲಾಸ ರತ್ನಾವಳಿ ಥಿಯೇಟ್ರಿಕಲ್ ಕಂಪನಿ' ಎಂಬ ತಂಡವನ್ನು ತಾಂಡೂರು ಶ್ರೀನಿವಾಸ ಅಯ್ಯಂಗಾರರು ಹುಟ್ಟುಹಾಕಿದ್ದರು. ಸ್ನೇಹಿತರು ಅಭಿಮಾನಿಗಳ ಒತ್ತಾಯದಿಂದ ಈ ಕಂಪನಿಗೆ ಸೇರಿದರು. ಈಗಾಗಲೇ ಹೆಸರುವಾಸಿಯಾಗಿದ್ದ ಶ್ರೀ ಚಾಮರಾಜೇಂದ್ರ ಕಂಪನಿಯು 'ಅರಮನೆ ಕಂಪನಿ' ಎಂದು ಹೆಸರುವಾಸಿಯಾಗಿತ್ತು. ರಾಜ ಪೋಷಿತ ಅರಮನೆ ಕಂಪನಿಯನ್ನು ಹಿಂದಿಕ್ಕಿತು. ಮತ್ತೆ ಆಚಾರ್ಯರು ಜನಪ್ರಿಯರಾದರು. ದುರಾದೃಷ್ಟವಶಾತ್ ಈ ನಾಟಕ ಮಂಡಳಿಯ ಆಡಳಿತ ಹದಗೆಟ್ಟಿತು, ನಷ್ಟ ಸಂಭವಿಸತೊಡಗಿತು. ಆಚಾರ್ಯರು ಇದು ಮರ್ಯಾದೆ ಪ್ರಶ್ನೆ ಎಂದು ಹೇಳಿ 1902ರಲ್ಲಿ ಆ ಕಂಪನಿಯನ್ನು ತಾವೇ ವಹಿಸಿಕೊಂಡ ಆ ಕಂಪನಿಗೆ 'ಮೈಸೂರು ರತ್ನಾವಳಿ ಥಿಯಟ್ರಿಕಲ್ ಕಂಪನಿ' ಎಂದು ನಾಮಕರಣ ಮಾಡಿದರು. ವರದಾಚಾರ್ಯರ ನೇತೃತ್ವದ ಕಂಪನಿಯು ಜನಪ್ರಿಯವಾಗುತ್ತಾ ಹೋದಂತೆ ಕೃಷ್ಣಸ್ವಾಮಿ ಅಯ್ಯಂಗಾರ್, ಕೃಷ್ಣಮೂರ್ತಿರಾವ್, ಭೀಮಸೇನರಾವ್, ವಿಶ್ವನಾಥರಾವ್, ಕಪಿನಿಪತಿರಾವ್ ಇನ್ನೂ ಮುಂತಾದ ನಟ ಮಹಾಶಯರು ಈ ಕಂಪನಿಗೆ ಸೇರಿದರು. ರಂಗಸಜ್ಜಿಕೆ, ನವನವೀನ ಸೀನರಿ (ಒಳನೋಟ, ದೃಶ್ಯ)ಗಳನ್ನು ಬೆಳಕು ನೆರಳಿನ ಕೌಶಲ್ಯವನ್ನು ಚೆನ್ನಾಗಿ ಬಳಸಿಕೊಂಡರು. ಗ್ಯಾಸ್‌ಲೈಟರ್‌ಗಳ ಬಳಕೆ ಅಂದು ವಿಶೇಷವಾಗಿತ್ತು. ರಾತ್ರಿ ವೇಳೆಯ ನಾಟಕವನ್ನು ಹಗಲುವೇಳೆಯಲ್ಲಿ ನೋಡುವಂತೆ ನೋಡಬಹುದಾಗಿದ್ದಿತು. ಮೈಸೂರು, ಬೆಂಗಳೂರು, ಚಿತ್ರದುರ್ಗ, ಬಳ್ಳಾರಿ, ತುಮಕೂರು, ಗುಬ್ಬಿ ಹೀಗೆ ನಾಟಕಕ್ಕೆ ಹರಿದು ಬರುವ ಜನ ಕಡಿಮೆಯಾದಂತೆಲ್ಲ ಸ್ಥಳವನ್ನು ಬದಲಾಯಿಸುತ್ತಿದ್ದರು. ಲಂಕಾ ದಹನ, ದ್ರೌಪದಿ ಸ್ವಯಂವರ, ಸಂಪೂರ್ಣ ರಾಮಾಯಣ, ಮಹಾಭಾರತ, ಶಾಕುಂತಲ, ರತ್ನಾವಳಿ, ಕಾಂತಿಮತಿ ಹೀಗೆ ಹಲವಾರು ನಾಟಕಗಳನ್ನು ಹಾಡಿ ರಂಜಿಸುತ್ತಿದ್ದರು.

ವರದಾಚಾರ್ಯರ ಕಂಪನಿಯು ಅರಮನೆ ನಾಟಕ ಕಂಪನಿಗಿಂತಲೂ ಜನಪ್ರಿಯವಾಗತೊಡಗಿತು. 1910ರ ಸಮಯದಲ್ಲಿ ಬೀರೂರು, ಭದ್ರಾವತಿ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ಮಂಗಳೂರು ಸೇರಿದಂತೆ ಎಲ್ಲೆಡೆ ಈ ತಂಡವು ನಾಟಕ ಪ್ರದರ್ಶನ ಮಾಡತೊಡಗಿತು. ರಾಜ್ಯದಾದ್ಯಂತ ಆಚಾರ್ಯರು ಹೆಸರುವಾಸಿಯಾದರು. ಅವರು ಹೋದೆಡೆಯೆಲ್ಲಾ ಇಂದು ಸಿನಿಮಾ ನಟನಟಿಯರನ್ನು ಮುತ್ತುವಂತೆ ಜನ ಮುತ್ತುತ್ತಿದ್ದರು. ದಶದಿಕ್ಕುಗಳಲ್ಲೂ ಅವರ ಹೆಸರು ಕೇಳಿಬರುತ್ತಿತ್ತು. ರಾಮಾಚಾರ್, ಆರ್. ನಾಗೇಂದ್ರರಾವ್, ಬಿ.ಎಸ್. ರಾಜಯ್ಯಂಗಾರ್ ಸೇರಿದಂತೆ ಪ್ರಖ್ಯಾತ ನಟರು ಇವರ ಕಂಪನಿಯನ್ನು ಸೇರಿದರು.

'ಭಕ್ತ ಪ್ರಹ್ಲಾದ ಚರಿತ್ರೆ' ಎಂಬ ನಾಟಕವು ಮೈಸೂರಿನಲ್ಲಿ ನಾಲ್ಕು ತಿಂಗಳಿಗೂ ಹೆಚ್ಚುಕಾಲ ಪ್ರದರ್ಶನ ಕಂಡಿತು. ರಾಜಪೋಷಿತ 'ಅರಮನೆ ನಾಟಕ ಕಂಪನಿ' ಎಂದೇ ಹೆಸರುವಾಸಿಯಾಗಿದ್ದ ಕಂಪನಿಯನ್ನು ಹಿಂದಿಕ್ಕಿ ಜನಪ್ರಿಯತೆ ಪಡೆದ ವರದಾಚಾರ್ಯರ ನೇತೃತ್ವದ ನಾಟಕ ತಂಡದ ನಾಟಕವನ್ನು ಒಮ್ಮೆ ನಾಲ್ವಡಿ ಕೃಷ್ಣರಾಜರು ನೋಡಬಯಸಿದರು. ಅರಸರು ಹಾಗೆಲ್ಲ ಅರಮನೆ ಬಿಟ್ಟು ಎಲ್ಲೆಂದರಲ್ಲಿ ನಾಟಕ, ನೃತ್ಯ ನೋಡುವವರಲ್ಲ. ಹೀಗಾಗಿ ಅಂದಿನ ದಿವಾನರಾಗಿದ್ದ ಶ್ರೀ ಕಾಂತರಾಜ ಅರಸರಿಗೆ ಜಗನ್ಮೋಹನ ಅರಮನೆಯ ಹಜಾರದಲ್ಲಿ ನಾಟಕ ಪ್ರದರ್ಶಿಸಲು ವ್ಯವಸ್ಥೆ ಮಾಡುವಂತೆ ಅಪ್ಪಣೆ ಮಾಡಿದರು. ಶ್ರೀ ಕಾಂತರಾಜ ಅರಸರು ವರದಾಚಾರ್ಯರ ತಂಡಕ್ಕೆ ಆಹ್ವಾನ ನೀಡಿದರು. ಹೇಳಿಕೇಳಿ ಮಹಾರಾಜರು ತಮ್ಮ ನಾಟಕ ನೋಡುವುದು ಎಂದರೆ ಸಾಮಾನ್ಯವೇ. ಹೀಗಾಗಿ ಮೂರು ತಿಂಗಳ ಮೊದಲೇ ಅರಮನೆಯಲ್ಲಿ ಬೀಡುಬಿಟ್ಟು ರಂಗತಾಲೀಮು ನಡೆಸಿ ಸಜ್ಜಾದರು. ಮಹಾರಾಜರು ಮತ್ತು ಅವರ ಪರಿವಾರದವರ ಎದುರು ಎರಡು ನಾಟಕಗಳನ್ನು ವರದಾಚಾರ್ಯರ ತಂಡ ಯಶಸ್ವಿಯಾಗಿ ಪ್ರದರ್ಶಿಸಿತು. ಶ್ರೀ ನಾಲ್ವಡಿ ಕೃಷ್ಣರಾಜರು ನಾಟಕ ತಂಡವನ್ನು ಶ್ರೀ ವರದಾಚಾರ್ಯರನ್ನು ಮನಸಾರ ಹೊಗಳಿದರು. ದಿವಾನ್ ಶ್ರೀ ಕಾಂತರಾಜ ಅರಸರು ದರ್ಬಾರ್ ಹಾಲ್‌ನಲ್ಲಿ ವರದಾಚಾರ್ಯರಿಗೆ ಗಿಫ್ಟೆಡ್ ಆಕ್ಟರ್ (Gifted Actor) ಎಂಬ ಬಿರುದು ನೀಡಿ ಗೌರವಿಸಿದರು. ಇತ್ತ ಬೆಂಗಳೂರಿನಲ್ಲಿದ್ದ ಆಚಾರ್ಯರ ಅಭಿಮಾನಿಗಳು ಕಲಾಪೋಷಕರು ಬೆಂಗಳೂರಿಗೆ ಬಂದು ನಾಟಕ ಪ್ರದರ್ಶಿಸುವಂತೆ ಒತ್ತಾಯಿಸುತ್ತಿದ್ದರು.

ಆಚಾರ್ಯರ ತಂಡವು ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದಿಳಿಯಿತು. ಅಂದು ಬೆಂಗಳೂರಿನಲ್ಲಿ ಹೆಚ್ಚಾಗಿ ಡ್ರಾಮ ಥಿಯೇಟರ್‌ಗಳಿರಲಿಲ್ಲ. ತುಳಸೀತೋಟ (ಮೆಜೆಸ್ಟಿಕ್ ಥಿಯೇಟರ್ ಚೌಕದ ದಕ್ಷಿಣ ಭಾಗ)ದಲ್ಲಿ ಒಂದು ಡ್ರಾಮ ಥಿಯೇಟರ್ ಇತ್ತು (ಈಗ ವಾಣಿಜ್ಯ ಕಟ್ಟಡಗಳು ತಲೆ ಎತ್ತಿವೆ) ಅದು ಆಚಾರ್ಯರ ನಾಟಕ

ತಂಡಕ್ಕೆ ಚಿಕ್ಕದಾಗಿತ್ತು. ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ಜನ ಬಂದು ಸೇರಲು ಕಷ್ಟವಾಗಿತ್ತು. ವಿಶಾಲವಾದ ಛತ್ರದಲ್ಲಿ ನಾಟಕ ಮಾಡಲು ತೀರ್ಮಾನಿಸಿದರು. ಅಂದು ಧರ್ಮಾತ್ಮರು ಬೆಂಗಳೂರಿಗೆ ಬಂದು ಹೋಗುವವರಿಗೆಂದು ಗುಬ್ಬಿ ತೋಟದಪ್ಪ ಛತ್ರ, ಸುಬೇದಾರ್ ಛತ್ರ, ಕಮಲಾಸಾನಿ ಛತ್ರ, ಕೃಷ್ಣಶೆಟ್ಟಿ ಛತ್ರ ಇವೇ ಮುಂತಾದ ಧರ್ಮಛತ್ರಗಳು ಲಿಂಗಾಯತ ಮಠಗಳು ಬೆಂಗಳೂರಿನ ಹೃದಯ ಭಾಗದಲ್ಲಿದ್ದವು. ಕೃಷ್ಣಶೆಟ್ಟಿ ಛತ್ರವನ್ನು **'ಕಿಚ್ಚಿಟ್ಟಿ ಛತ್ರ'**ವೆಂದು ಕರೆಯುತ್ತಿದ್ದರು. ಇಂದು ಸ್ಟೇಟ್ಸ್ ಚಿತ್ರಮಂದಿರ ಹಾಗೂ ಅದೇ ಸಾಲಿನಲ್ಲಿ ಹಲವಾರು ವಾಣಿಜ್ಯ ಕಟ್ಟಡಗಳು ಹೋಟೆಲ್‌ಗಳು ತಲೆಎತ್ತಿವೆ. ಆದರೆ ಒಂದೊಮ್ಮೆ ಆ ಪ್ರದೇಶವು ಕಂದಕ ಹಾಗೂ ಮುಳ್ಳುಕಂಟಿಗಳಿಂದ ಬೆಳೆದು ನಿಂತಿತ್ತು. ಕಿಚ್ಚಿಟ್ಟಿ ಛತ್ರವು ಹಳೆಯದಾದರೂ ಒಳಗೆ ಹಾಗೂ ಹೊರಗೆ ವಿಶಾಲವಾಗಿತ್ತು. ನಾಟಕವು ಅಂದು ಪ್ರಮುಖ ಮನರಂಜನಾ ಕೇಂದ್ರವಾಗಿತ್ತು. ಪರಊರಿನಿಂದ ಎತ್ತಿನಗಾಡಿಗಳಲ್ಲಿ ಬರುತ್ತಿದ್ದರು. ಜನ ಜಾಸ್ತಿಯಾದರೆ ಹೊರಗೆ ನಿಂತು ಮಾತನಾಡಲು, ವಿರಮಿಸಲು ಇದು ಉತ್ತಮವಾದ ಸ್ಥಳವಾಗಿತ್ತು. ನಾಟಕ, ನೃತ್ಯ, ಕುಸ್ತಿ ಇನ್ನಿತರೆ ಮನರಂಜನೆಯನ್ನು ಹೊರತುಪಡಿಸಿದರೆ ಬೇರೆಯ ಸಮಯದಲ್ಲಿ ಅಲ್ಲಿ ಓಡಾಡುತ್ತಿದ್ದ ಜನ ವಿರಳ. ಆಚಾರ್ಯರ ತಂಡವು ಬೆಂಗಳೂರಿನಲ್ಲಿ 'ಭಕ್ತ ಪ್ರಹ್ಲಾದ ಚರಿತ್ರೆ' ಎಂಬ ನಾಟಕವನ್ನು ಆಡಿತು. ಇದು ಯಶಸ್ವಿಯಾಯಿತು. ನಂತರ ಹಲವಾರು ಪ್ರದರ್ಶನಗಳನ್ನು ಕಂಡಿತು. ನಾಟಕ ನೋಡಲು ಬೆಂಗಳೂರು ಹಾಗೂ ಸುತ್ತಮುತ್ತಲಿನಿಂದ ಜನಸಾಗರವೇ ಹರಿದು ಬರತೊಡಗಿತು. ಒಂದೇ ನಾಟಕವನ್ನು ಹಲವಾರು ಬಾರಿ ಪ್ರದರ್ಶಿಸಿದರೆ ಜನರ ಸಂಖ್ಯೆ ಕಡಿಮೆಯಾಗುತ್ತದೆ ಎಂದರಿತು "ಸುಗ್ರೀವ ಸಖ್ಯ" ಎಂಬ ಮತ್ತೊಂದು ನಾಟಕವನ್ನು ಅಭ್ಯಾಸ ಮಾಡಿ ಪ್ರಯೋಗಿಸಿದರು. ಇದೂ ಕೂಡ ಯಶಸ್ವಿಯಾಯಿತು. ಹಲವಾರು ತಿಂಗಳುಗಳ ಕಾಲ ಬೆಂಗಳೂರಿನಲ್ಲಿದ್ದುದರಿಂದ ಪ್ರೇಕ್ಷಕರ ಸಂಖ್ಯೆ ಸ್ವಲ್ಪ ಕಡಿಮೆಯಾಗತೊಡಗಿತು. ಅಂದು ಶಿವಮೊಗ್ಗ, ತೀರ್ಥಹಳ್ಳಿಯಲ್ಲಿ ಜಾತ್ರೆಯು ಆ ಪ್ರಾಂತ್ಯದಲ್ಲಿ ಹೆಸರುವಾಸಿಯಾಗಿತ್ತು. ಆಚಾರ್ಯರ ತಂಡವು 1913ರಲ್ಲಿ ತೀರ್ಥಹಳ್ಳಿಗೆ ಪ್ರಯಾಣ ಬೆಳೆಸಿತು. ಅಲ್ಲಿಯೂ ಜನವೋ ಜನ. ಅಲ್ಲಿಂದ ಮಂಗಳೂರು, ಕುಂದಾಪುರ, ಉಡುಪಿಗೆ ಬಂದಿಳಿದರು. ಉಡುಪಿಯಲ್ಲಿ ನಾಟಕ ಪ್ರದರ್ಶನವನ್ನು ಮಾಡುತ್ತಿರುವಾಗ ಉಡುಪಿ ಶ್ರೀ ಮಠದಿಂದ ಕರೆಬಂತು. ಶ್ರೀಗಳ ದರ್ಶನ ಮಾಡಿದ ಆಚಾರ್ಯರು, ಸ್ವಾಮಿಗಳ ಅಪೇಕ್ಷೆಯಂತೆ ಶ್ರೀಕೃಷ್ಣ ಮಠದಲ್ಲೇ ನಾಟಕವಾಡಲು ತೀರ್ಮಾನಿಸಿದರು. ಉಡುಪಿ ಮಠಾಧೀಶರು ನಾಟಕವನ್ನು ನೋಡಿ ತುಂಬು ಹೃದಯದಿಂದ ತಮ್ಮ ಮೆಚ್ಚುಗೆ ಸೂಚಿಸಿ ಆಚಾರ್ಯರಿಗೆ **'ನಾಟ್ಯಕಲಾ ಚತುರ'** ಎಂಬ ಬಿರುದನ್ನು ದಯಪಾಲಿಸಿದರು.

ಕರ್ನಾಟಕದ ದಕ್ಷಿಣ ಪ್ರಾಂತ್ಯದಾದ್ಯಂತ ಸಂಚರಿಸಿ ಹಣ ಮತ್ತು ಕೀರ್ತಿ ಸಂಪಾದಿಸಿ ಮತ್ತೆ ಬೆಂಗಳೂರಿಗೆ ಧಾವಿಸಿದರು. ಬೆಂಗಳೂರಿನ ಪುರ ಜನರು ಬಹಳ ದಿನಗಳ ನಂತರ ಬಂದ ಆಚಾರ್ಯರನ್ನು ಅವರ ತಂಡವನ್ನು ಸ್ವಾಗತಿಸಿತು. ಮತ್ತೆ ಪ್ರೇಕ್ಷಕರು ಆಚಾರ್ಯರ ನಾಟಕವನ್ನು ನೋಡಿ ಬೆಂಬಲಿಸ ತೊಡಗಿದರು. ಬೆಂಗಳೂರಿನಲ್ಲಿದ್ದಾಗ ಬೆಂಗಳೂರು ಅರಮನೆಯಿಂದ ಕರೆ ಬಂದಿತು. ಅದೇನೆಂದರೆ ಬಂಗಾಳದ ಕೋಚ್ ಬಿಹಾರ್‌ನ ರಾಜ ದಂಪತಿಗಳು ಮೈಸೂರರಸರ ಅತಿಥಿಗಳಾಗಿ ಬೆಂಗಳೂರಿಗೆ ನಂತರ ಮೈಸೂರಿಗೆ ಧಾವಿಸಿದ್ದರು. ಬೆಂಗಳೂರಿನಲ್ಲೇ ಇದ್ದ ಆಚಾರ್ಯರ ತಂಡಕ್ಕೆ ಆಹ್ವಾನ ಬಂತು. ಉತ್ತರದಿಂದ ಬಂದ ರಾಜ ದಂಪತಿಗಳಿಗೆ ಕನ್ನಡ ಬಾರದು ಎಂಬ ಕಾರಣದಿಂದ ಆಚಾರ್ಯರು ಹಾಗೂ ಅವರ ತಂಡ ಹಿಂದಿಯಲ್ಲಿ ನಾಟಕವನ್ನು ಅಭ್ಯಾಸ ಮಾಡಿ 'ಪ್ರತಾಪಸಿಂಹ' ಎಂಬ ನಾಟಕವನ್ನು ಬೆಂಗಳೂರು ಅರಮನೆ ಆವರಣದಲ್ಲಿ ಪ್ರದರ್ಶಿಸಿತು. ಕೋಚ್ ಬಿಹಾರಿನ ರಾಜ ದಂಪತಿಗಳು ಹಾಗೂ ಮೈಸೂರರಸರು ಮುಕ್ತಕಂಠದಿಂದ ಹಾಡಿ ಹೊಗಳಿದರು.

ಆಚಾರ್ಯರು ಬೆಂಗಳೂರಿನಿಂದ ಬಳ್ಳಾರಿ ನಂತರ ಮತ್ತೊಮ್ಮೆ ತೀರ್ಥಹಳ್ಳಿ, ಭದ್ರಾವತಿ, ಉಡುಪಿ, ಮಂಗಳೂರು, ಕುಂದಾಪುರ ಸೇರಿದಂತೆ ಹಲವೆಡೆ ಎರಡನೆಯ ಬಾರಿ ನಾಟಕ ಪ್ರದರ್ಶನ ಮಾಡಿದರು. ನಾಟಕದ ಬಗ್ಗೆ ಗೌರವ ಸಹಾನುಭೂತಿಯನ್ನು ಹೊಂದಿದ್ದ ಕೊಯಮತ್ತೂರಿನ ಜನ ತಮ್ಮ ಊರಿಗೆ ಬರುವಂತೆ ಕೇಳಿಕೊಂಡರು. ಅದರಂತೆ ಆಚಾರ್ಯರು ಕೊಯಮತ್ತೂರಿಗೆ ಧಾವಿಸಿದರು. ಅಲ್ಲಿನ ನಾಟಕ ಮಂಡಳಿ ಮಾಲೀಕರಾದ ವಿನ್ಸಂಟ್‌ರವರು ಆಚಾರ್ಯರ ತಂಡಕ್ಕೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟರು. ಸೀನರಿಗಳು ಮಂಗಳೂರಿನಿಂದ ಕೊಯಮತ್ತೂರಿಗೆ ಬರುವಷ್ಟರಲ್ಲಿ ಹಾಳಾಗಿದ್ದವು. ಇಡೀ ತಂಡಕ್ಕೆ ಅಲ್ಪಸ್ವಲ್ಪ ನಷ್ಟವಾಗಿತ್ತು. ಇಂತಹ ಸಮಯದಲ್ಲಿ ವಿನ್ಸಂಟ್‌ರವರು ಇಡೀ ತಂಡಕ್ಕೆ ಬಂದೊದಗಿದ್ದ ಕಷ್ಟವನ್ನು ಪರಿಹರಿಸಿದರು. ನಾಟಕ ತಂಡವು ಕೊಯಮತ್ತೂರಿನಲ್ಲೂ ಹೆಸರು ಗಳಿಸಿತು. ಅಲ್ಲಿ ಸಾಕಷ್ಟು ಜನ ಕನ್ನಡಿಗರು ನೆಲೆಸಿದ್ದರಿಂದ ನಾಟಕ ತಂಡಕ್ಕೆ ಭಾಷಾ ತೊಡಕಾಗಲಿಲ್ಲ. ಅಲ್ಲಿಯೂ ಯಶಸ್ಸಿನ ಬೆನ್ನೇರಿದ ಆಚಾರ್ಯರು ತಮಿಳುನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ನಾಟಕ ಪ್ರದರ್ಶನ ಮಾಡುತ್ತಾ ನಡೆದರು. ನಂತರ ತಿರುಪ್ಪೂರು, ಈರೋಡು ನಂತರ ತಿರುಚನಾಪಳ್ಳಿಗೆ ನಡೆದರು. ಅಂದು ಡಾ. ಅನಿಬೆಸೆಂಟ್‌ರು ಮದ್ರಾಸ್, ಪಾಂಡಿಚೆರಿ, ತಿರುಚನಾಪಳ್ಳಿ ಸೇರಿದಂತೆ ಬೇರೆ ಬೇರೆ ಕಡೆ ಥಿಯೋಸಾಫಿಕಲ್ ಸೊಸೈಟಿಯವರು ಪ್ರಚಾರ ಮಾಡುವುದರ ಜೊತೆಗೆ ಸ್ವದೇಶಿ ಆಂದೋಲನವನ್ನು ಮಾಡುತ್ತಿದ್ದರು. ಬಿಡುವಿನ ವೇಳೆಯಲ್ಲಿ ಭಾರತದ ಕಲೆ, ವಾಸ್ತುಶಿಲ್ಪ, ಸಂಸ್ಕೃತಿ ಭಾಷೆಯ ಬಗ್ಗೆ

ತಿಳಿದುಕೊಳ್ಳುತ್ತಿದ್ದರು. ಅದೇ ಸಮಯಕ್ಕೆ ಆಚಾರ್ಯರ ತಂಡವು ತಿರುಚನಾಪಳ್ಳಿಯಲ್ಲಿ ಪ್ರದರ್ಶನ ನಡೆಸುತ್ತಿತ್ತು. ಆ ನಾಟಕವನ್ನು ನೋಡುವಂತೆ ಡಾ॥ ಅನಿಬೆಸೆಂಟರ ಅನುಯಾಯಿಗಳು ಆಕೆಗೆ ತಿಳಿಸಿದರು. ಅದರಂತೆ ಅನಿಬೆಸೆಂಟರು ನಾಟಕವನ್ನು ನೋಡಿ ಮೆಚ್ಚಿಕೊಂಡು ಅಭಿಮಾನಿಗಳ ಸಮ್ಮುಖದಲ್ಲಿ ಡಾ. ಅನಿಬೆಸೆಂಟರು ಆಚಾರ್ಯರಿಗೆ 'ನಾಟಕ ಶಿರೋಮಣಿ' ಎಂಬ ಬಿರುದು ನೀಡಿ ಗೌರವಿಸಿದರು. ಇದು ಆಚಾರ್ಯರಿಗೆ ಸಂದ ಗೌರವವಲ್ಲ. ಇಡೀ ಕರ್ನಾಟಕಕ್ಕೆ ಕನ್ನಡ ಭಾಷೆಗೆ ಸಂದ ಗೌರವವಾಗಿತ್ತು.

ತಮಿಳುನಾಡಿನ ಮಧುರೈ, ತಿರುಚನಾಪಳ್ಳಿ, ಕಾರೈಕುಡಿ, ಕೊಯಮತ್ತೂರು ಭಾಗಗಳಲ್ಲಿ ಸುತ್ತಿ ಹಣ ಮತ್ತು ಕೀರ್ತಿಯನ್ನು ಗಳಿಸಿದ ಆಚಾರ್ಯರು ಮೈಸೂರಿಗೆ ವಾಪಸ್ಸಾದರು. ಮೈಸೂರಿನ ಜನ ಮತ್ತೊಮ್ಮೆ ಆಚಾರ್ಯರ ತಂಡವನ್ನು ಆಧರಿಸಿತು. ಆಚಾರ್ಯ ಜೀವಿತ ಕಾಲದಲ್ಲಿ ಘಟಿಸಿದ ಒಂದು ಸುಸಂದರ್ಭವೆಂದರೆ ಮೈಸೂರು ಮತ್ತು ಬೆಂಗಳೂರಿಗೆ ಆಗಮಿಸಿದ್ದ ನೊಬೆಲ್ ಪ್ರಶಸ್ತಿ ವಿಜೇತರಾದ ಖ್ಯಾತಕವಿ ರವೀಂದ್ರನಾಥ ಠಾಗೂರರು ಮೈಸೂರಿಗೆ ಆಗಮಿಸಿದ್ದರು. ಠಾಗೂರರಿಗೆ ತಮ್ಮ ನಾಟಕ ಪ್ರದರ್ಶಿಸಿ ಅವರ ಅಭಿಪ್ರಾಯವನ್ನು ಕೇಳಬೇಕೆಂಬ ಹಂಬಲ ಮೈಸೂರಿನ ಕೆಲವು ಪುರ ಜನರಿಗೆ ಹಾಗೂ ನಾಟಕ ಕಂಪನಿಯ ಇತರ ಸದಸ್ಯರಿಗೆ ಹೆಚ್ಚಿತು. ಅದರಂತೆ ಒಂದು ದಿನ ರವೀಂದ್ರನಾಥ ಠಾಗೂರರನ್ನು ಭೇಟಿಮಾಡಿ ಅವರನ್ನು ಆಹ್ವಾನಿಸಿದರು. ರವೀಂದ್ರನಾಥ ಠಾಗೂರರು ಆಚಾರ್ಯರ ಕಲಾಕೌಶಲದ ಬಗ್ಗೆ ಈಗಾಗಲೇ ತಿಳಿದುಕೊಂಡಿದ್ದರು. ಬರಲು ಒಪ್ಪಿದರು. ಆದರೆ ಅನಾರೋಗ್ಯದ ನಿಮಿತ್ತ ಕೇವಲ ಅರ್ಧ ಗಂಟೆಗಳ ಕಾಲ ನಾಟಕವನ್ನು ನೋಡುತ್ತೇನೆ ಎಂದು ಬಂದ ರವೀಂದ್ರರು ನಾಟಕ ಮುಗಿಯುವ ತನಕ ವೀಕ್ಷಿಸಿ ಶಹಬಾಸ್‌ಗಿರಿ ನೀಡಿದರು. ಆಚಾರ್ಯರನ್ನು ಆಲಿಂಗಿಸಿಯೇ ಬಿಟ್ಟರು. ಆಚಾರ್ಯರು ತಮ್ಮ ಜೀವನ ಸಾರ್ಥಕವಾಯಿತೆಂದು ಆನಂದಭಾಷ್ಪ ಸುರಿಸಿದರು.

ಮೈಸೂರಿನಲ್ಲಿ ಆಚಾರ್ಯರ ತಂಡವು ಮೂರು ನಾಟಕಗಳನ್ನು ಪ್ರದರ್ಶಿಸಿತು. ನಾಟಕವನ್ನು ನೋಡಿದ ಮಹಾರಾಜರು ಮೆಚ್ಚುಗೆಯ ಮಾತುಗಳನ್ನು ಆಡಿದುದೇ ಅಲ್ಲದೆ ಸಾಕಷ್ಟು ಹಣವನ್ನು ನೀಡಿ ಗೌರವಿಸಿದರು.

ಮೈಸೂರಿನಲ್ಲಿ ನಾಟಕ ನೋಡುವವರ ಸಂಖ್ಯೆ ಕಡಿಮೆಯಾಗುತ್ತಿದ್ದಂತೆ 1925ರಲ್ಲಿ ಬೆಂಗಳೂರಿಗೆ ವಾಪಸಾದರು. ಬೆಂಗಳೂರಿನಲ್ಲಿ 'ಗುಲೇಬಕಾವಲಿ' (ತೆಲುಗು) ಎಂಬ ನಾಟಕವನ್ನು ಪ್ರದರ್ಶಿಸಿದರು. ಮತ್ತೆ ಬೆಂಗಳೂರಿಗರು ಆಚಾರ್ಯರ ತಂಡವನ್ನು ಪ್ರೋತ್ಸಾಹಿಸಿತು. ವಿಧಿ ಆಚಾರ್ಯರ ನಾಟಕಕ್ಕೆ ತೆರೆ

ಎಳೆಯಲು ಸಜ್ಜಾಗ ತೊಡಗಿತು. ಆಚಾರ್ಯರ ದೇಹ ಬಳಲಿತು. ಹಾಸಿಗೆ ಹಿಡಿದರು, ಈಗಾಗಲೇ ಆಚಾರ್ಯರು ಸಣ್ಣ ಪುಟ್ಟ ಸಾಲ ಸೋಲ ಮಾಡಿದ್ದರು. ಸಾಲ ಕೊಟ್ಟಿದ್ದ ಜನ ಇದೇ ನೆಪ ಮಾಡಿಕೊಂಡು ಕೋರ್ಟಿನಲ್ಲಿ ದಾವೆ ಹೂಡಿದರು. ಇಂತಹ ಸಮಯದಲ್ಲಿ ಆಪತ್‌ಬಾಂಧವರಂತೆ ಬಂದವರೇ ಟಿ.ಪಿ. ಕೈಲಾಸಂರವರು. ಹೋಂರೂಲು, ಬ್ರಾಹ್ಮಣಿಕೆ, ಬಂಡ್ವಾಳವಿಲ್ಲದ ಬಡಾಯಿ, ಪಾತುತೌರ್ಮನೆ ಇವೇ ಮುಂತಾದ ನಾಟಕಗಳನ್ನು ಪ್ರದರ್ಶಿಸಿ ತಾವು ಸ್ವಲ್ಪ ಹಣ ಗಳಿಸಿ ಉಳಿದ ಹಣವನ್ನು ಆಚಾರ್ಯರಿಗೆ ನೀಡಿದರು. 1926ರ ಏಪ್ರಿಲ್ ಮೂರನೇ ತಾರೀಖು ಆಚಾರ್ಯರು ಇಹಲೋಕ ತ್ಯಜಿಸಿದರು.

ಕನ್ನಡ ರಂಗಭೂಮಿಯ ಮೇರುನಟ ಎ.ವಿ. ವರದಾಚಾರ್ಯರು ಕರ್ನಾಟಕದ ಮೂಲೆಮೂಲೆಯಲ್ಲಿ ತಮ್ಮ ನಾಟಕ ಕಲೆಯನ್ನು ಪ್ರದರ್ಶಿಸಿದರು. ಅವರ ಕಲೆಗೆ ಭಾಷೆ ಅಡ್ಡಿ ಬರಲಿಲ್ಲ. ಅಬಾಲವೃದ್ಧರಾಗಿ ಎಲ್ಲರನ್ನೂ ಆಕರ್ಷಿಸಿತು. ರಾಜ, ಮಹಾರಾಜರು, ದಿವಾನರು, ಡಾ. ಅನಿಬೆಸೆಂಟ್, ಆಚಾರ್ಯ ರವೀಂದ್ರನಾಥ ಠಾಗೂರರಂತಹ ಮೇರು ವ್ಯಕ್ತಿಗಳು ಮೆಚ್ಚಿ ತಲೆದೂಗಿದರು. ವರದಾಚಾರ್ಯರು ನಾಟಕ ಕಲೆಗೆ ಹೊಸ ಭೂಮಿಕೆಯನ್ನು ಹಾಕಿ ಅಜರಾಮರರಾಗಿದ್ದಾರೆ.

ಟಿ. ಚೌಡಯ್ಯ

ಸಂಗೀತ ಮನುಷ್ಯನ ಮನಸ್ಸನ್ನು ಮೃದುಗೊಳಿಸುತ್ತದೆ. ತನ್ನದೇ ಆದ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ. ಇತ್ತೀಚಿನ ದಿನಗಳಲ್ಲಿ ಶಾಸ್ತ್ರೀಯ ಹಾಗೂ ಸಾಂಪ್ರದಾಯಿಕ ಸಂಗೀತ ಕ್ಷೀಣಿಸುತ್ತಿದೆ. ಒಮ್ಮೆ ದಕ್ಷಿಣ ಭಾರತದಲ್ಲಿಯೇ ತಮಿಳುನಾಡು ಸಂಗೀತ ಕ್ಷೇತ್ರದಲ್ಲಿ ಮನೆಮಾತಾಗಿತ್ತು. ಅದರಲ್ಲಿಯೂ ತಿರುಚಿನಾಪಳ್ಳಿ, ತಂಜಾವೂರು, ಶ್ರೀರಂಗಂ, ಚಿದಂಬರಂ, ಕುಂಭಕೋಣಂ ಇನ್ನೂ ಮುಂತಾದವು. ಕರ್ನಾಟಕ ಸಂಗೀತವನ್ನು ಪುರಂದರದಾಸರಿಂದ ಹಿಡಿದು ತ್ಯಾಗರಾಜ, ಮತ್ತುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳವರೆವಿಗೆ ಜನಪ್ರಿಯಗೊಳಿಸಿದರು.

ಕರ್ನಾಟಕದಲ್ಲಿ ರುದ್ರಪಟ್ಟಣ, ಹನಸೋಗೆ (ವೀಣೆ ಶೇಷಣ್ಣನವರ ಹುಟ್ಟೂರು), ಮೈಸೂರು, ಶ್ರೀರಂಗಪಟ್ಟಣ, ತಿರುಮಕೂಡಲು (ಚೌಡಯ್ಯನವರ ಹುಟ್ಟೂರು) ಇನ್ನೂ ಮುಂತಾದವು ಸಂಗೀತ ಕೇಂದ್ರಗಳಾಗಿದ್ದವು.

ಸಂಗೀತ ಕ್ಷೇತ್ರದಲ್ಲಿ ಮೈಸೂರಿನ ಹೆಸರನ್ನು ದಶದಿಕ್ಕುಗಳಿಗೂ ಹಬ್ಬಿಸಿದವರು ಟಿ. ಚೌಡಯ್ಯನವರು. ತಂದೆ ಅಗಸ್ತೇಗೌಡರು, ತಾಯಿ ಸುಂದರಮ್ಮ. ಸಂಗೀತ ಮತ್ತು ನೃತ್ಯದಲ್ಲಿ ಪರಿಣತಿ ಹೊಂದಿದ್ದ ಹೆಣ್ಣುಮಗಳು ಆಕೆ. ವಿವಾಹಿತೆಯೊಬ್ಬಳು ಮನೆಯ ಹೊಸಲು ದಾಟಬಾರದೆಂಬ ಕಾಲವದು. ಚೌಡಯ್ಯನವರು 1894ರ ಜನವರಿಯಲ್ಲಿ ಜನಿಸಿದರು. ಬಾಲಕ ಚೌಡಯ್ಯ ದೂರದ ನರಸೀಪುರಕ್ಕೆ ಹೋಗಿ ಬಂದು ವಿದ್ಯೆ ಕಲಿಯಬೇಕಾದ ಅಗತ್ಯವಿದ್ದಿತು. ಓದಿನಲ್ಲಿ ಅಷ್ಟೇನು ಆಸಕ್ತಿ ಇರಲಿಲ್ಲ. ಆತನ ಮನಸ್ಸು ಸಂಗೀತದೆಡೆಗೆ ತನಗರಿವಿಲ್ಲದಂತೆ ಹಾತೊರೆಯುತ್ತಿದ್ದಿತು. ಚೌಡಯ್ಯನವರ ಸೋದರಮಾವನ ಹೆಸರೂ ಚೌಡಯ್ಯ ಎಂಬುದಾಗಿತ್ತು. ಅವರು

ಮೈಸೂರಿನಲ್ಲಿ ಉದ್ಯೋಗದಲ್ಲಿದ್ದರು. ತನ್ನ ಸೋದರಿಯ ಮಗನಾದ ಚೌಡಯ್ಯನನ್ನು ಮೈಸೂರಿಗೆ ಕರೆತಂದು, ಇಡೀ ದಕ್ಷಿಣ ಭಾರತದಲ್ಲಿ ಹೆಸರುವಾಸಿಯಾಗಿದ್ದ ಬಿಡಾರಂ ಕೃಷ್ಣಪ್ಪನವರಲ್ಲಿಗೆ ಸಂಗೀತಾರ್ಜನೆಗಾಗಿ ಸೇರಿಸಿದರು. ಹಿರಿಯರ ಆಶೀರ್ವಾದ ಮತ್ತು ಗುರುಗಳ ಮಾರ್ಗದರ್ಶನದಿಂದ ದಿನೇ ದಿನೇ ಮೇಲೇರತೊಡಗಿದ ಚೌಡಯ್ಯನವರಿಗೆ ಶರೀರ–ಶಾರೀರ ಎರಡೂ ಚೆನ್ನಾಗಿದ್ದವು. ಆದರೆ ಅವರ ಗುರುಗಳ ಅಪ್ಪಣೆಯಂತೆ ಹಾಡುಗಾರಿಕೆಯ ಬದಲು ಪಿಟೀಲು ನುಡಿಸುವುದನ್ನು ಕಲಿಯತೊಡಗಿದರು. ಪಿಟೀಲು ವಾದನವನ್ನು ಕರತಲಾಮಲಕ ಮಾಡಿಕೊಂಡರು.

ಬಿಡಾರದ ಕೃಷ್ಣಪ್ಪನವರು ವೀಣೆ ಶೇಷಣ್ಣನವರು ಆಪ್ತ ಸ್ನೇಹಿತರು. ಕೆಲವೊಮ್ಮೆ ಶೇಷಣ್ಣನವರ ಮನೆಯಲ್ಲಿ ಮತ್ತೊಮ್ಮೆ ಕೃಷ್ಣಪ್ಪನವರ ಮನೆಯಲ್ಲಿ ದಿನದ ಯಾವುದಾದರೂ ವೇಳೆಯಲ್ಲಿ ಸಂಗೀತ ಸಭೆಯನ್ನು ನಡೆಸುತ್ತಿದ್ದರು. ಅಂತಹ ಸಮಯದಲ್ಲಿ ಚೌಡಯ್ಯನವರು ಅವರಿಗೆ ಪಕ್ಕ ವಾದ್ಯ ನುಡಿಸುತ್ತಿದ್ದರು. ಕೆಲವು ಸಲ ಸೀತಾರಾಮ ಮಂದಿರದಲ್ಲಿ ಬಿಡಾರದ ಕೃಷ್ಣಪ್ಪನವರು ಮೈಸೂರಿನ ಸಾರ್ವಜನಿಕರಿಗಾಗಿ ಸಂಗೀತ ರಸದೌತಣವನ್ನು ಏರ್ಪಡಿಸುತ್ತಿದ್ದರು. ಇದರ ಉದ್ದೇಶವೇನೆಂದರೆ ಕೃಷ್ಣಪ್ಪನವರು, ಶೇಷಣ್ಣನವರು ಆಸ್ಥಾನ ವಿದ್ವಾಂಸರು. ಸಾಮಾನ್ಯ ಜನಗಳಿಗೆ ಅಂದು ಅರಮನೆಗೆ ಪ್ರವೇಶವಿರಲಿಲ್ಲ. ತಮ್ಮ ವಿದ್ವತ್ತು ಕೇವಲ ಮಹಾರಾಜರು ಮತ್ತು ಅವರ ಪರಿವಾರದವರಿಗೆ ಮಾತ್ರ ಮೀಸಲಾಗಿಡದೆ ಸಾರ್ವಜನಿಕರಿಗೂ ಈ ಮೂಲಕ ಅವಕಾಶ ನೀಡುತ್ತಿದ್ದರು. ಒಮ್ಮೆ ಒಂದು ಕಹಿ ಘಟನೆ ನಡೆಯಿತು. ಅದೇನೆಂದರೆ ಸೀತಾರಾಮ ಮಂದಿರದಲ್ಲಿ ಬಿಡಾರದ ಕೃಷ್ಣಪ್ಪನವರು ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಜನ ಸಂಗೀತ ಸುಧೆಯಲ್ಲಿ ಮುಳುಗಿದ್ದರು. ಚೌಡಯ್ಯನವರ ಪಿಟೀಲು ಆ ನಡುವೆ ಕಿರಿಕಿರಿ ಶಬ್ದ ಮಾಡತೊಡಗಿತು. ಅಪಸ್ವರದಿಂದ ರಸಭಂಗವಾದ ಕೂಡಲೆ ಕೃಷ್ಣಪ್ಪನವರಿಗೆ ತಡೆಯಲಾರದ ಕೋಪ ಬಂದು ಸಾವಿರಾರು ಜನರೆದುರು ಚೌಡಯ್ಯನವರ ಕಪಾಳಕ್ಕೆ ಬಾರಿಸಿಯೇ ಬಿಟ್ಟರು. ಇದನ್ನು ನೋಡುತ್ತಿದ್ದ ಜನ ಸ್ತಂಬೀಭೂತರಾದರು. ಕೆಲವರು ಕೃಷ್ಣಪ್ಪನವರು ಹಾಗೆ ಮಾಡಬಾರದಿತ್ತು. ಮನೆಗೆ ಹೋದ ಮೇಲೆ ಅವರಿಗೆ ಹೊಡೆದರೆ ತಪ್ಪಾಗುತ್ತಿರಲಿಲ್ಲ. ಶಿಷ್ಯ ಎಂದ ಮಾತ್ರಕ್ಕೆ ಸಾರ್ವಜನಿಕರೆದುರು ಅವಮಾನ ಮಾಡುವುದು ನಾಗರಿಕತೆಯಲ್ಲ ಇತ್ಯಾದಿ ಮಾತನಾಡಿಕೊಳ್ಳುತ್ತಿದ್ದರು. ಆದರೆ ಏನೂ ನಡೆದಿಲ್ಲವೇನೋ ಎಂಬಂತೆ ಚೌಡಯ್ಯನವರು ತಮ್ಮ ತಪ್ಪನ್ನು ತಿದ್ದಿಕೊಂಡು ಕಛೇರಿಯನ್ನು ಮುಂದುವರಿಸಿದರು. ಸಂಗೀತ ಕಛೇರಿ ಮುಗಿದ ಮೇಲೆ ಕೃಷ್ಣಪ್ಪನವರಿಗೆ ತಮ್ಮ ತಪ್ಪು ಅರಿವಾಯಿತೇನೋ ಮಗು ಪೆಟ್ಟಾಯಿತೆ? ನಾನು ದುಡುಕಿ ನಿನ್ನನ್ನು

ಅವಮಾನಿಸಿಬಿಟ್ಟೆ ಎಂದು ಕಣ್ಣಲ್ಲಿ ನೀರು ತುಂಬಿಕೊಂಡರು. ಚೌಡಯ್ಯನವರು ಮತ್ತೆ ಅಂತಹ ತಪ್ಪನ್ನು ಮಾಡುವುದಿಲ್ಲವೆಂದು ಹೇಳಿದರು. ಇದೇ ಗುರು ಶಿಷ್ಯರ ಸಂಬಂಧ. ಇಂತಹ ಘಟನೆಗಳು ಇದು ಕೊನೆಯದಲ್ಲ. ಇಂತಹವು ಹಲವಾರು ಬಾರಿ ನಡೆದವು. ಬಿಡಾರದ ಕೃಷ್ಣಪ್ಪನವರು ಯಾವತ್ತೂ ಚೌಡಯ್ಯನವರ ಬಗ್ಗೆ ಕೆಟ್ಟದಾಗಿ ನಡೆದುಕೊಂಡವರಲ್ಲ. ಆದರೆ ಮುಂಗೋಪಿಯಾಗಿದ್ದರು.

ಪಿಟೀಲಿನ ತಂತ್ರಜ್ಞಾನದಲ್ಲಿ ಹೊಸ ಶೋಧ

ಬಿಡಾರದ ಕೃಷ್ಣಪ್ಪನವರು ಶರೀರ ಶಾರೀರದಲ್ಲಿ ಹೆಸರುವಾಸಿ. ಸಂಗೀತ ಕಛೇರಿಗಳಲ್ಲಿ ಭೋರ್ಗರೆಯುವ ಶಾರೀರ. ಸಂಗೀತ ಕಛೇರಿಯಲ್ಲಿ ಕುಳಿತಿರುವ ಶ್ರೋತೃಗಳಿಗೆ ಜುಳುಜುಳು ನೀರಿನಂತೆ, ತುಂತುರು ಮಳೆಯಂತೆ, ಜಡಿಮಳೆಯಂತೆ ಭೋರ್ಗರೆಯುವ ನದಿಯಂತೆ ತಮ್ಮ ನಾದವನ್ನು ಹೊಮ್ಮಿಸುತ್ತಿದ್ದರು. ಸುಮಾರು ಒಂದು ಘಂಟೆಯ ಕಾಲ ರಾಗಾಲಾಪನೆ ಮಾಡುತ್ತಿದ್ದರು. ಅವರಿಗೆ ಪಿಟೀಲಿನಂತಹ ಪಕ್ಕವಾದ್ಯ ನುಡಿಸುವವರು ಅಷ್ಟೇ ಸಮರ್ಥರಾಗಿರಬೇಕಿತ್ತು. ಇಲ್ಲವಾದರೆ ಇಡೀ ಕಛೇರಿ ನಿರರ್ಥಕವಾಗಿ ಬಿಡುತ್ತಿತ್ತು. ತಮಿಳುನಾಡಿನಲ್ಲೂ ಕೃಷ್ಣಪ್ಪನವರನ್ನು ಮೀರಿಸುವ ಸಂಗೀತ ದಿಗ್ಗಜರಿದ್ದರು. ಅವರುಗಳೆಂದರೆ ಪಟ್ನಂ ಸುಬ್ರಹ್ಮಣ್ಯ ಅಯ್ಯರ್, ವೈದ್ಯನಾಥಯ್ಯರ್, ಕೋನೇರಿರಾಜಪುರಂ, ಹರಿಕೇಶನಲ್ಲೂರು, ಪಾಲಕ್ಕಾಡು ರಾಮಭಾಗವತರ್, ಮುತ್ತಯ್ಯ ಭಾಗವತರು ಇವರೇ ಮುಂತಾದವರು. ಇವರುಗಳ ಹಾಡುಗಾರಿಕೆಯ ನಡುವೆ ಪಿಟೀಲು ವಾದನವು ಸಪ್ಪೆಯಾಗಿರುತ್ತಿತ್ತು. ಇಂದಿನ ಕಾಲದಂತೆ ಧ್ವನಿವರ್ಧಕಗಳಿರಲಿಲ್ಲ. ಇದ್ದರೂ ಬಹಳ ದುಬಾರಿಯಾಗಿತ್ತು. ಇಂದಿನಂತೆ ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಇದನ್ನು ನಿವಾರಿಸಲು ವಾದ್ಯಸಂಗೀತಗಾರರು ಹೊಸಪ್ರಯೋಗಗಳನ್ನು ಮಾಡಲು ಯತ್ನಿಸುತ್ತಿದ್ದರು. ತಮಿಳುನಾಡಿನ ಮುರುಂಗಾಪುರಿ ಗೋಪಾಲಕೃಷ್ಣ ಅಯ್ಯರ್‌ರವರು ತಮ್ಮ ಪಿಟೀಲಿಗೆ 'ಧ್ವನಿವರ್ಧಕ'ವನ್ನು ಅಳವಡಿಸಿಕೊಂಡರು. ಅವರ ನಿರೀಕ್ಷೆಯಂತೆ ಇದು ಯಶಸ್ವಿ ಕಾಣಲಿಲ್ಲ. ಕಾರಣವೇನೆಂದರೆ ಈ ಧ್ವನಿವರ್ಧಕದಿಂದ ಮೂಡಿಬರುವ ಪಿಟೀಲಿನ ನಾದವು ಕರ್ಕಶ ಕರ್ಕಶವಾಗಿ ಇಡೀ ಸಂಗೀತ ಸಭೆಯನ್ನು ಕೆಡಿಸುತ್ತಿತ್ತು. ಶ್ರೀಯುತರು ಇಂತಹ ಪ್ರಯೋಗಕ್ಕೆ ಇತಿಶ್ರೀ ಹಾಡಿದರು.

ಚೌಡಯ್ಯನವರು ಹೊಸ ಪ್ರಯೋಗಗಳನ್ನು ಯಾರಿಗೂ ತಿಳಿಸದಂತೆ ಮಾಡುತ್ತಿದ್ದರು. ವಾದ್ಯದ ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಂತಿಗಳಿಗೆ ಸಮಾನಾಂತರವಾಗಿ ಜೋಡಿ ತಂತಿಗಳನ್ನು ಸೇರಿಸಿ, ಎರಡೂ ತಂತಿಗಳಿಗೂ ಒಂದು ಸ್ಥಾಯಿಯ ಅಂತರವನ್ನೇರ್ಪಡಿಸಿ ನೋಡಿದರು. ಉಳಿದ ಮೂರು ತಂತಿಗಳಿಗೆ ಒಂದೊಂದಕ್ಕೂ ಒಂದು ಸ್ಥಾಯಿ ಕೆಳಗಿರುವ ಇನ್ನೊಂದು

ತಂತಿಯನ್ನು ಅಳವಡಿಸಿದರು. ಈ ತಂತಿಗಳ ನಾದದಲ್ಲಿ ಕರ್ಕಶ ಶಬ್ದ ಹೊರಡದಂತೆ ನೋಡಿಕೊಂಡರು. ಹೀಗೆ ಒಟ್ಟು ಏಳು ತಂತಿಗಳ ಪಿಟೀಲನ್ನು ತಯಾರು ಮಾಡಿದರು. ಪಿಟೀಲಿನ ನಾದ ಸಾಮರ್ಥ್ಯ ಗಣನೀಯವಾಗಿ ಹೆಚ್ಚಿತು. ಚೌಡಯ್ಯನವರು ಮೇಲಿಂದ ಮೇಲೆ ಪ್ರಯೋಗ ಮಾಡುತ್ತಾ ಅಭ್ಯಾಸ ಮಾಡುತ್ತಾ ಎಲ್ಲಿಯೂ ಎಡವಟ್ಟು ಆಗದಂತೆ ಎಚ್ಚರ ವಹಿಸಿ ಹಗಲಿರುಳು ತಮ್ಮ ಪ್ರಯೋಗದಲ್ಲಿ; ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರು ಎಂದರೆ ತಪ್ಪಾಗಲಾರದು. ಇದು ಯಶಸ್ವಿಯಾದಾಗ ಅಷ್ಟಕ್ಕೆ ಸುಮ್ಮನಾಗಲಿಲ್ಲ ಹನ್ನೆರಡು ತಂತಿಗಳ ಪಿಟೀಲನ್ನು ತಯಾರಿಸಿ ನುಡಿಸಿದರು, ನಂತರ ಹತ್ತೊಂಬತ್ತು ತಂತಿಗಳ ಪಿಟೀಲನ್ನು ತಯಾರಿಸಿದರು. ಈ ಪ್ರಯೋಗವು ಯಶಸ್ವಿಯಾದರೂ ಆಗಿಂದಾಗ್ಗೆ ಶ್ರುತಿ ಮಾಡಿಕೊಳ್ಳಬೇಕಾಗಿತ್ತು. ಕಾರಣವೇನೆಂದರೆ ಅಧಿಕ ತಂತಿಗಳು ಒಂದಾದ ನಂತರ ಒಂದರಂತೆ ತಮ್ಮ ನಾದವನ್ನು ಕಳೆದುಕೊಳ್ಳುತ್ತಿದ್ದವು. ಆದಕಾರಣ ಚೌಡಯ್ಯನವರು ಏಳು ತಂತಿಗಳ ಪಿಟೀಲನ್ನು ಆಯ್ಕೆ ಮಾಡಿಕೊಂಡರು. ನಾಲ್ಕು ತಂತಿಗಳ ಜಾಗದಲ್ಲಿ ಏಳು ತಂತಿಗಳನ್ನು ಜೋಡಿಸುವುದು ಸುಲಭವಲ್ಲ. ಅಲ್ಲದೆ ನಾಲ್ಕು ತಂತಿಗಳ ಪಿಟೀಲನ್ನು ನುಡಿಸಿ ಅಭ್ಯಾಸವಿರುವವರಿಗೆ ಈ ಏಳು ತಂತಿಗಳ ಪಿಟೀಲನ್ನು ನುಡಿಸುವುದು ಕಷ್ಟವಾಗುತ್ತಿತ್ತು. ಆದರೆ ಚೌಡಯ್ಯನವರಿಗೆ ಇದೇನು ಕಷ್ಟವಾಗಲಿಲ್ಲ.

ಏಳು ತಂತಿಗಳ ಪ್ರಯೋಗಕ್ಕೆ ಸಿದ್ಧತೆ

ಚೌಡಯ್ಯನವರೇನೊ ಏಳು ತಂತಿಗಳ ಪಿಟೀಲನ್ನು ಸಿದ್ದಪಡಿಸಿದರು. ಆದರೆ ಅದರ ಪ್ರಯೋಗ ಮಾಡುವುದು ಹೇಗೆಂದು ಯೋಚಿಸುತ್ತಿದ್ದರು. ಕಾರಣವೇನೆಂದರೆ ಕೃಷ್ಣಪ್ಪನವರು ಹೇಳಿಕೇಳಿ ಸಂಪ್ರದಾಯಸ್ಥರು, ಮುಂಗೋಪಿಗಳು ಅವರು ಒಮ್ಮೆ ಆಗಲ್ಲವೆಂದು ತಲೆಯಾಡಿಸಿದರೆ ಮತ್ತೆ ಅವರನ್ನು ಒಪ್ಪಿಸುವುದು ಅಷ್ಟು ಸುಲಭವಲ್ಲವೆಂದು ತಿಳಿದಿತ್ತು. ಅದಕ್ಕಾಗಿ ಒಂದು ಉಪಾಯ ಹೊಳೆಯಿತು. ಅದೇನೆಂದರೆ ಹೇಳಿ, ಕೇಳಿ ಕೃಷ್ಣಪ್ಪನವರು ಹಾಗೂ ವೈಣಿಕ ಶಿಖಾಮಣಿ ಶೇಷಣ್ಣನವರು ಆಪ್ತ ಸ್ನೇಹಿತರು. ಅಲ್ಲದೆ ಶೇಷಣ್ಣನವರು ಕೃಷ್ಣಪ್ಪನವರಿಗಿಂತಲೂ ವಯಸ್ಸಿನಲ್ಲಿ ಹಿರಿಯರು ಅವರಿಂದ ಹೇಳಿಸಿದರು. ಕೆಲಸ ಸುಗಮವಾಗುತ್ತದೆ ಎಂದು ಆ ಕೂಡಲೆ ವೀಣೆ ಶೇಷಣ್ಣನವರ ಮನೆಗೆ ನಡೆದರು. ತಾವು ಹೊಸದಾಗಿ ತಯಾರಿಸಿದ (ಸಂಶೋಧಿಸಿದ) ಪಿಟೀಲನ್ನು ತೋರಿಸಿ ಒಂದು ಚರಣವನ್ನು ನುಡಿಸಿದರು. ವೀಣೆ ಶೇಷಣ್ಣನವರು ಎಷ್ಟು ಹೆಸರುವಾಸಿಗಳಾಗಿದ್ದರೆಂದರೆ ಮೈಸೂರಿಗೆ ಯಾರೇ ವಿದ್ವಾಂಸರು, ಸಂಗೀತಗಾರರು, ಪಕ್ಕವಾದ್ಯ ನುಡಿಸುವವರು ಬಂದರೆ ಅವರಲ್ಲಿಗೆ ಬಂದು ತಮ್ಮ ಪ್ರತಿಭೆ ಪ್ರದರ್ಶಿಸಿ ಅವರಿಂದ ಷಹಬಾಸ್‌ಗಿರಿ

ಪಡೆದರೆ ಅದು ತಮ್ಮ ಪೂರ್ವಜನ್ಮದ ಪುಣ್ಯ ಎಂದು ತಿಳಿದು ಅವರ ಬಳಿ ಬಂದು ಆಶೀರ್ವಾದ ಪಡೆದುಕೊಂಡು ಹೋಗುತ್ತಿದ್ದರು.

ಚೌಡಯ್ಯನವರು ಇಂತಹ ಅವಕಾಶವನ್ನು ಉಪಯೋಗಿಸಿಕೊಂಡು ವೀಣೆ ಶೇಷಣ್ಣನವರನ್ನು ಭೇಟಿಮಾಡಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ತಾವು ಹೊಸದಾಗಿ ಸಂಶೋಧಿಸಿರುವ, ಹೊಸ ನಮೂನೆಯ ಪಿಟೀಲನ್ನು ತೋರಿಸಿ ಕೆಲವು ಸಂಗೀತಗಳನ್ನು ನುಡಿಸಿದರು. ಶೇಷಣ್ಣನವರು ತಲೆದೂಗಿದರು. ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು. ಮೀನಾ ಮೇಷ ನೋಡುವುದೇಕೆ ಕಛೇರಿಯಲ್ಲಿ ಪ್ರಯೋಗಿಸಿ ನೋಡು ಚೌಡಯ್ಯ ಎಂದೇ ಬಿಟ್ಟರು. ಚೌಡಯ್ಯನವರು ಆನಂದ ಪರವಶರಾದರು. ಇದೇ ಸಮಯವೆಂದು ಚೌಡಯ್ಯನವರು ಗುರುಗಳೆ ಕೃಷ್ಣಪ್ಪ ಗುರುಗಳು ಒಪ್ಪುತ್ತಾರೋ ಇಲ್ಲವೊ ಅವರನ್ನು ಒಪ್ಪಿಸುವ ಭಾರ ತಮ್ಮದು ಗುರುಗಳೆ ಎಂದು ಅವರ ಮೇಲೆ ಭಾರ ಹಾಕಿದರು. ಶೇಷಣ್ಣನವರು ಆತನನ್ನು ಒಪ್ಪಿಸುವ ಭಾರ ನನ್ನದು ಬಿಡು ಇನ್ನು ಹೊರಡು ಎಂದರು. ಬಂದ ಕೆಲಸ ಆಯಿತು ಎಂದುಕೊಂಡ ಚೌಡಯ್ಯನವರು ಅಲ್ಲಿಂದ ಹೊರ ನಡೆದರು.

ಎಂದಿನಂತೆ ಒಂದು ದಿನ ಶೇಷಣ್ಣನವರ ಮನೆಯಲ್ಲಿ ಸಂಗೀತ ಕಛೇರಿ ಏರ್ಪಡಿಸಿದ್ದರು. ಕೃಷ್ಣಪ್ಪನವರು ಮಾಮೂಲಿನಂತೆ ಸಂಗೀತ ಅವರ ಶಿಷ್ಯ ಚೌಡಯ್ಯನವರದೇ ಪಕ್ಕವಾದ್ಯ ಒಂದೆರಡು ಭಕ್ತಿಗೀತೆಗಳಾದ ನಂತರ ಚೌಡಯ್ಯನವರು ತಮ್ಮ ವಿನೂತನ ಪಿಟೀಲನ್ನು ಹೊರತೆಗೆದು ನಮಸ್ಕರಿಸಿ ಶ್ರುತಿ ಮಾಡಿಕೊಳ್ಳತೊಡಗಿದರು. ಇದನ್ನು ಗಮನಿಸಿದ ಕೃಷ್ಣಪ್ಪನವರು ಇದೇನಿದು ಹೊಸ ನಮೂನೆ ಎಂದರು. ಇದು ಏಳು ತಂತಿಗಳ ಪಿಟೀಲು ಗುರುಗಳೆ ಎಂದು ತಿಳಿಸಿದರು. ಸಂಗೀತ ಕಛೇರಿಯನ್ನು ಕೆಡಿಸಲು ಬಂದಿದ್ದಿಯೋ ಇಷ್ಟಾದರೂ ಬುದ್ಧಿ ಬಂದಿಲ್ಲವಲ್ಲ ನಿನಗೆ ಎಂದು ಕೂಗಾಡುತ್ತಿದ್ದರು. ಇದನ್ನು ಗಮನಿಸಿದ ಶೇಷಣ್ಣನವರು ಕೃಷ್ಣಪ್ಪ ಹುಡುಗ ಏನೋ ಪ್ರಯೋಗ ಮಾಡುತ್ತಿದ್ದಾನೆ, ಸಾಲದಕ್ಕೆ ಇದೇನು ರಾಜಸಭೆಯೋ ಇಲ್ಲವೆ ಸಾರ್ವಜನಿಕ ಸಭೆಯೋ ಏನು ಇಲ್ಲ ತಾನೆ ನುಡಿಸಲು ಬಿಡು. ಮೊದಲು ನೀನು ಹಾಡು ಎಂದರು. ಕೃಷ್ಣಪ್ಪನವರಿಗಿಂತ ಹಿರಿಯರು, ಸಂಭಾವಿತರು, ಮೇಧಾವಿಗಳಿಗೆ ಎದುರುತ್ತರ ಕೊಡುವುದು ಸರಿಯಲ್ಲವೆಂದು ಕೃಷ್ಣಪ್ಪನವರು ನೀವು ಹೇಳಿದ್ದು ಸರಿಯೆ ಗುರುಗಳೆ ಮಾನ ಹೋಗುವುದಾದರೆ ನಿಮ್ಮ ಮುಂದೆಯೇ ಮಾನ ಹೋಗಲಿ ಎಂದು ತಮ್ಮ ಒಪ್ಪಿಗೆ ಸೂಚಿಸಿದರು. ಕೃಷ್ಣಪ್ಪನವರ ಸಂಗೀತಕ್ಕೆ ಏಳು ತಂತಿಗಳ ಹೊಸ ನಮೂನೆಯ ಪಿಟೀಲನ್ನು ನುಡಿಸಿದರು. ಸೊಗಸಾಗಿದೆಯಲ್ಲ ಕೃಷ್ಣಪ್ಪ ಮಗು ಇನ್ನು ಮುಂದೆ ಇದನ್ನೇ ಬಳಸಲಿ ನಿನ್ನದೇನು ತಕರಾರು ಎಂದೇ ಬಿಟ್ಟರು. ಕೃಷ್ಣಪ್ಪನವರು

ಮರುಮಾತನಾಡದೆ ಒಪ್ಪಿಕೊಂಡರು. ಅಂದಿನಿಂದ ಹೊಸ ನಮೂನೆಯ ಪಿಟೀಲಿಗೆ ಕೃಷ್ಣಪ್ಪನವರ ಕಛೇರಿಯಲ್ಲಿ ನುಡಿಸಲು ಖಾಯಂ ಜಾಗ ಗಿಟ್ಟಿಸಿಕೊಂಡರು. ಅಂದಿನ ಕಾಲದಲ್ಲಿ ಗುರು–ಹಿರಿಯರಿಗೆ ಅಂಥ ಸಂಬಂಧ ಭಕ್ತಿ ಬಾಂಧವ್ಯವಿದ್ದಿತು. ವೀಣೆ ಶೇಷಣ್ಣನವರ ಮನೆಯಲ್ಲಿ ನಡೆದ ಈ ಪ್ರಯೋಗ ಮುಂದೆ ಚೌಡಯ್ಯನವರು ದಕ್ಷಿಣ ಭಾರತದಾದ್ಯಂತ ದಾಂಗುಡಿ ಇಡಲು ಬಹುಶಃ ಇದು ದಾರಿದೀಪವಾಯಿತು.

ಚೌಡಯ್ಯನವರು ಅಂದಿನ ಕಾಲದಲ್ಲಿ ಮಾಡಿದ್ದ ಈ ಪ್ರಯೋಗ ಯಾರೂ ಮಾಡಿಯೇ ಇರಲಿಲ್ಲವೆಂದಲ್ಲ ದಕ್ಷಿಣ ಭಾರತದ ಅಲ್ಲಲ್ಲಿ ಅದರಲ್ಲೂ ತಮಿಳುನಾಡಿನ ಕೆಲವು ಕಡೆ ಪ್ರಯೋಗಗಳು ನಿರಂತರವಾಗಿ ನಡೆಯುತ್ತಿತ್ತು. ತಮಿಳುನಾಡಿನ 'ಮಾಸಲಾಮಣಿ ಮುದಲಿಯೊರ್' ಎಂಬ ಪಿಟೀಲು ವಿದ್ವಾಂಸರು ತಮ್ಮ ಪಿಟೀಲಿಗೆ ಐದನೆಯ ತಂತಿಯನ್ನು ಅಳವಡಿಸಿಕೊಂಡು ಕಛೇರಿಗಳಲ್ಲಿ ಅದನ್ನು ಬಳಸುತ್ತಿದ್ದರು. ಸಂಗೀತ ವಿದ್ವಾಂಸರಾದ ರಾಘವಯ್ಯನವರಿಗೆ ಪಕ್ಕವಾದ್ಯ ನುಡಿಸುತ್ತಿದ್ದರು. ಇವರು ಹಾಡುವಾಗ ಅನುಮಂದ್ರ ಸ್ಥಾಯಿಯ ಪಂಚಮವನ್ನು ಸರಾಗವಾಗಿ ಬಳಸುತ್ತಿದ್ದರು. ಅದನ್ನು ಮೊದಲಿಯಾರರು ವಾದ್ಯದಲ್ಲೂ ತರಲು ಅನುಕೂಲವಾಗುವಂತೆ ಅನುಮಂದ್ರ ಪಂಚಮಕ್ಕೆ ಶ್ರುತಿ ಮಾಡಿಕೊಂಡು ಐದನೆಯ ತಂತಿಯೊಂದನ್ನು 'ರಾಘವ ತಂತಿ' ಎಂದು ಕರೆಯುತ್ತಿದ್ದರು. ಇದು ಕೆಲವು ಬಾರಿ ಕೈಕೊಡುತ್ತಿತ್ತು. ಅದೇರೀತಿ ತಮಿಳುನಾಡಿನ ಆರ್.ಆರ್. ಕೇಶವಮೂರ್ತಿ, ವಿ. ಸೇತು ರಾಮಯ್ಯ ಇನ್ನೂ ಮುಂತಾದವರು ಪ್ರಯೋಗಿಸಿದರು. ಐದನೆಯ ತಂತಿಯನ್ನು ಸಂಬಾಳಿಸುವುದು, ನಿಭಾಯಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆದರೆ ಚೌಡಯ್ಯನವರು ಕರ್ನಾಟಕದಲ್ಲಿ ಕೃಷ್ಣಪ್ಪನವರ ಸಾರ್ವಜನಿಕ ಕಛೇರಿಗಳಲ್ಲಿ ದೊಡ್ಡ ದೊಡ್ಡ ಸಂಗೀತ ಕಛೇರಿಗಳಲ್ಲಿ ಮೈಸೂರು ಅರಮನೆ ಸಂಗೀತ ಕಛೇರಿಗಳಲ್ಲಿ ಏಳುತಂತಿಗಳ ವಿನೂತನ ಪಿಟೀಲನ್ನು ನುಡಿಸಿ ಅದನ್ನು ಸಂಬಾಳಿಸಿ, ನಿಭಾಯಿಸಿ ಚೆನ್ನಾಗಿ ಪಳಗಿಸಿಕೊಂಡಿದ್ದರು. ಅಂದು ಕರ್ನಾಟಕದ ಮಟ್ಟಿಗೆ ಇದು ಯಶಸ್ವಿಯಾಗಿತ್ತು. ಆದರೆ ತಮಿಳುನಾಡು, ಕೇರಳ ಇನ್ನಿತರ ಭಾಗಗಳಲ್ಲಿ ಪ್ರಯೋಗ ಮಾಡುವ ಅವಕಾಶಕ್ಕಾಗಿ ಚೌಡಯ್ಯನವರು ಕಾಯುತ್ತಿದ್ದರು.

ಚೌಡಯ್ಯನವರಿಗೆ ಹಾಗೂ ಅವರ ಏಳು ತಂತಿಗಳ ಪಿಟೀಲು ವಾದನಕ್ಕೆ ಕರ್ನಾಟಕ ಹೆಸರು ವಾಸಿಯಾಗಿತ್ತು. ಆದರೆ ತಮಿಳುನಾಡಿನಲ್ಲಿ ಅಂತಹ ಅವಕಾಶ ಸಿಕ್ಕಿರಲಿಲ್ಲ. ಅಂದು ಸಂಗೀತ ಸಾಮ್ರಾಜ್ಯದ ಹೆಬ್ಬಾಗಿಲೇ ತಮಿಳುನಾಡಿನ ಮದ್ರಾಸ್ ಹಾಗೂ ಮಧುರೈ ಪಟ್ಟಣಗಳು. ತಮಿಳುನಾಡಿನ ಕುನ್ನುಕುಡಿ, ಶ್ರೀರಂಗಂ, ಕಂಚಿ, ತಂಜಾವೂರು, ಮಧುರೈ ಇವೇ ಮುಂತಾದ ಪ್ರದೇಶಗಳಲ್ಲಿ ನಡೆಯುತ್ತಿದ್ದ

ಸಂಗೀತೋತ್ಸವಗಳು ಇಡೀ ದಕ್ಷಿಣ ಭಾರತದಲ್ಲೇ ಹೆಸರುವಾಸಿಯಾಗಿತ್ತು. ಅಲ್ಲಿ ಸಂಗೀತ ಹಾಡು ಜಯಿಸುವುದೆಂದರೆ ಸಾಮಾನ್ಯವಲ್ಲ. ಅದೇ ರೀತಿ ಅಂತಹವರಿಗೆ ಪಕ್ಕವಾದ್ಯ ನುಡಿಸಿ ಸೈ ಎನಿಸಿಕೊಳ್ಳುವುದು ಸಾಮಾನ್ಯವಾದ ವಿಷಯವಾಗಿರಲಿಲ್ಲ.

1926ರ ವರ್ಷ ಚೌಡಯ್ಯನವರ ಜೀವಿತ ಕಾಲದಲ್ಲಿ ಪ್ರಮುಖವಾದ ದಿನ ಅಥವಾ ಘಟ್ಟವೆಂದು ಹೇಳಬಹುದು. ಅಂದು ಮದರಾಸಿನ ಹೆಸರಾಂತ "ತೊಂಡಮಂಡಲಂ ಸಂಗೀತ ಸಭಾ" ವತಿಯಿಂದ ಮದರಾಸಿನ ಸೌಂದರ್ಯ ಮಹಲಿನಲ್ಲಿ ದಕ್ಷಿಣ ಭಾರತದ ಸುಪ್ರಸಿದ್ಧ ಸಂಗೀತಗಾರರಾಗಿದ್ದ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಸಂಗೀತ ಏರ್ಪಡಿಸಲಾಗಿತ್ತು. ಆ ಸಭೆಗೆ ಬಿಡಾರದ ಕೃಷ್ಣಪ್ಪನವರು, ಚೌಡಯ್ಯನವರು ಸೇರಿದಂತೆ ಕೆಲವರಿಗೆ ಆಹ್ವಾನ ಬಂದಿತ್ತು. ಚೌಡಯ್ಯನವರ ಅದೃಷ್ಟವೋ ಏನೋ ಹೆಸರಾಂತ ಪಿಟೀಲು ವಾದಕ ಮದ್ರಾಸ್ ಬಾಲಕೃಷ್ಣಯ್ಯನವರು ಆ ಸಂಗೀತ ಸಭೆಗೆ ಅನಿವಾರ್ಯ ಕಾರಣಗಳಿಂದಾಗಿ ಬರಲಾಗಲಿಲ್ಲ. ಈಗಾಗಲೇ ಚೌಡಯ್ಯನವರ ಹೆಸರನ್ನು ಅಲ್ಲಿನವರು ಕೇಳಿದ್ದರು. ಆದರೆ ಏಳು ತಂತಿಗಳ ಪಿಟೀಲಿನ ಪ್ರಯೋಗವನ್ನು ಅಲ್ಲಿನ ಯಾರೂ ಕೇಳಿರಲಿಲ್ಲ. ಕಾರ್ಯಕ್ರಮ ನಿರ್ವಾಹಕರಾಗಿದ್ದ ಮುನಿಸ್ವಾಮಿ ನಾಯ್ಡುರವರು ಚೌಡಯ್ಯನವರನ್ನು ಪಿಟೀಲು ನುಡಿಸಿ ರಾಮಾನುಜಯ್ಯಂಗಾರರಿಗೆ ಸಾತ್ ನೀಡಬೇಕೆಂದು ಕೇಳಿಕೊಂಡರು. ಸಾವಿರಾರು ಶ್ರೋತೃಗಳು ತುಂಬಿದ್ದ ಸಂಗೀತ ಸಭೆ, ಸಭಾಂಗಣದ ಹೊರಗೆ, ಒಳಗೆ ಜನವೋ ಜನ. ಚೌಡಯ್ಯನವರು ತಮ್ಮ ಗುರುಗಳಾದ ಬಿಡಾರದ ಕೃಷ್ಣಪ್ಪನವರ ಆಶೀರ್ವಾದ ಪಡೆದು ವೇದಿಕೆಯನ್ನು ಏರಿದರು. ರಾಮಾನುಜಯ್ಯಂಗಾರರು ದೇವರನಾಮವನ್ನು ಹಾಡಿ ಮುಗಿಸಿದರು, ತ್ಯಾಗರಾಜರ ಕೀರ್ತಿನೆಯನ್ನು ಹಾಡಿ ಮುಗಿಸಿದರು. ಮತ್ತೊಂದು ತ್ಯಾಗರಾಜರ ಕೀರ್ತನೆಯನ್ನು ಅತ್ಯತಿವಿಲಂಬಿತ, ಅತಿವಿಲಂಬಿತ, ವಿಲಂಬಿತ, ಮಧ್ಯ, ದ್ರುತ, ಅತಿದ್ರುತ ಎಂಬ ಆರು ಕಾಲಗಳಲ್ಲಿ ಹಾಡಿ ರಂಜಿಸಿದರು. ಚೌಡಯ್ಯನವರು ತಾವೇನು ಕಮ್ಮಿ ಇಲ್ಲವೆಂದು ಅವರಿಗೆ ಸಾತ್ ನೀಡಿದರು. ರಾಗ ವಿಸ್ತಾರಕ್ಕೆ ನೆರವಾದ ಚೌಡಯ್ಯನವರ ಜಾಣ್ಮೆ ಸಂಗೀತದ ಮೇಲಿರುವ ಅಸಾಧಾರಣ ಪಾಂಡಿತ್ಯವನ್ನು ಕಂಡು ಅಲ್ಲಿ ನೆರೆದಿದ್ದ ಸಹಸ್ರಾರು ಸಂಖ್ಯೆಯ ಶ್ರೋತೃಗಳ ಕಿವಿಗಡಚಿಕ್ಕುವಂತೆ ಚಪ್ಪಾಳೆಯ ಸುರಿಮಳೆ ಗೈದರು. ರಾತ್ರಿ ಬೆಳಗಾಗುವಷ್ಟರಲ್ಲಿ ಚೌಡಯ್ಯನವರ ಕೀರ್ತಿ ದಶದಿಕ್ಕುಗಳಿಗೆ ಹರಡಿತು.

ಚೌಡಯ್ಯನವರ ಏಳುತಂತಿ ಪಿಟೀಲಿನ ಪ್ರಯೋಗ ವಿಶೇಷವು ವಿನೂತನವೂ ಆಗಿದ್ದಿತು. ಅದು ಅವರ ಪ್ರತಿಭೆ, ಪ್ರಯಾಸ, ಸಾಧನೆ, ಸಹನೆ, ಆತ್ಮಸ್ಥೈರ್ಯ, ಪಾಂಡಿತ್ಯದ ನಿದರ್ಶನವಾಗಿದೆ. ಹಿಡಿದ ಪಟ್ಟು ಬಿಡದ ಯಮ ಸಾಧನೆ ಮಾಡಿ, ಅಸಾಧ್ಯವಾದುದನ್ನು ಸಾಧಿಸುವ ಕೆಚ್ಚು ಅವರದು. ತಮಿಳುನಾಡು

ಸೇರಿದಂತೆ ಎಲ್ಲೇ ಸಂಗೀತ ಕಛೇರಿ ನಡೆಯಲಿ ಅವರ ಪಿಟೀಲೇ ಮೇಲುಗೈ. ಇವರಿಂದಾಗಿ ಸಂಗೀತಗಾರರಿಗೆ ರಾಗ ವಿಸ್ತರಿಸಲು ಸುಲಭಸಾಧ್ಯವಾದ್ದರಿಂದ ನಂತರದ ಕಾಲದಲ್ಲಿ ಎಲ್ಲಾ ಸಂಗೀತಗಾರರು ಚೌಡಯ್ಯನವರನ್ನೇ ಅವಲಂಬಿಸ ತೊಡಗಿದರು. ಚೌಡಯ್ಯನವರು ಸಂಗೀತ ಸಭೆಗೆ ಬಂದು ಕುಳಿತರೆ ಅದೇ ಒಂದು ರೀತಿಯ ಸಂಭ್ರಮದ ವಾತಾವರಣ. ಅವರೊಮ್ಮೆ ಪಿಟೀಲಿನ ಮೇಲೆ ಕಮಾನು ಹಾಕಿದರೆಂದರೆ ಜನ ಚಪ್ಪಾಳೆಯ ಸುರಿಮಳೆಗೆರೆಯ್ಯುತ್ತಿದ್ದರು. ಚೌಡಯ್ಯನವರು ದಂತಕತೆಯಾದರು. ಅವರಿಲ್ಲದೆ ಸಂಗೀತ ಕಛೇರಿ ಕಳೆಕಟ್ಟುತ್ತಿರಲಿಲ್ಲ. ಇಂದಿನ ಸಿನಿಮಾ ತಾರೆಯರಿಗಿರುವಂತೆ ಅಂದು ಚೌಡಯ್ಯನವರಿಗೆ ಜನ ತಾರಾಪಟ್ಟ ನೀಡಿದ್ದರು. ಚೌಡಯ್ಯನವರನ್ನು ದಕ್ಷಿಣ ಭಾರತದ ಸಂಗೀತ ಕ್ಷೇತ್ರದಲ್ಲಿ 'ಮೈಸೂರಿನ ಹುಲಿ' ಎಂದೇ ಕರೆಯುತ್ತಿದ್ದರು. ಚೌಡಯ್ಯನವರ ಶರೀರ, ಶಾರೀರ, ಸಂಗೀತದ ಮೇಲಿರುವ ಪಾಂಡಿತ್ಯ, ಪಿಟೀಲಿನ ಮೇಲಿನ ನಿಯಂತ್ರಣ ಇವೇ ಮುಂತಾದವು ಅವರಿಗೆ ಗೌರವ ಭಾವ ತಂದುಕೊಟ್ಟಿತು.

ಸಂಗೀತ ಕ್ಷೇತ್ರದ ಅತಿರಥ ಮಹಾರಥರು ಚೌಡಯ್ಯನವರನ್ನು ಆಶ್ರಯಿಸುತ್ತಿದ್ದರು. ಅವರಿದ್ದರೆ ಆ ಸಭೆಗೆ ಒಂದು ಕಳೆ ಸಂಗೀತ ಪ್ರಿಯರಿಗೆ ರಸದೌತಣ. ತಮಿಳುನಾಡಿನ ಟೈಗರ್ ವರದಾಚಾರ್ಯರು, ಕೆ. ವಾಸುದೇವಾಚಾರ್ಯರು, ಚಿಕ್ಕರಾಮರಾಯರು, ಕೇರಳರಾಜ್ಯದ ಪಾಲಕಾಡು ರಾಮಭಾಗವತರು. ಇಷ್ಟೇ ಅಲ್ಲದೆ ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರು, ಮಹಾರಾಜಪುರಂ ವಿಶ್ವನಾಥ ಅಯ್ಯರ್, ಚಂಬೈ ವೈದ್ಯನಾಥಯ್ಯ, ಮಹಾರಾಜಪುರಂ ವಿಶ್ವನಾಥಯ್ಯ, ಮುಸುರಿ ಸುಬ್ರಮಣಯ್ಯರ್, ಜಿ.ಎನ್. ಬಾಲಸುಬ್ರಹ್ಮಣ್ಯಂ, ಶೆಮ್ಮಂಗುಡಿ ಶ್ರೀನಿವಾಸಯ್ಯರು ಇವರೇ ಮುಂತಾದ ಸಂಗೀತ ವಿದ್ವಾಂಸರಿಗೆ ಪಕ್ಕವಾದ್ಯ ನುಡಿಸಿ ಸೈ ಎನಿಸಿಕೊಂಡರು.

1934ರಲ್ಲಿ ತಮಿಳುನಾಡಿನ ಕುಂಭಕೋಣಂನಲ್ಲಿ ಭಾರೀ ಸಂಗೀತ ಕಛೇರಿಯನ್ನು ಏರ್ಪಡಿಸಿದ್ದರು. ಶೆಮ್ಮಂಗುಡಿಯವರ ಹಾಡುಗಾರಿಕೆ, ಚೌಡಯ್ಯನವರ ಪಿಟೀಲು ವಾದನ, ಟಿ.ಆರ್. ಮಹಾಲಿಂಗಂರವರ ಕೊಳಲು ವಾದನ ಪಾಲಕಾಡು ಮಣಿ ಅಯ್ಯರ್‌ರವರ ಮೃದಂಗಂ, ಕಾರೈಕ್ಕುಡಿ ರಾಮಾನುಜ ಅಯ್ಯಂಗಾರ್ಯರ ವೀಣಾವಾದನ. ಈ ಸಂಗೀತ ಅಖಾಡಕ್ಕೆ ಜನವೋ ಜನ. ಅದು ರಾಮನವಮಿ ಪ್ರಯುಕ್ತ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಸಭೆ ಒಂದು ಘಂಟೆ ತಡವಾಗಿ ಪ್ರಾರಂಭವಾಯಿತು. ಕಾರಣವೇನೆಂದರೆ ಚೌಡಯ್ಯನವರ ಆಗಮನವಾಗಿರಲಿಲ್ಲ. ಚೌಡಯ್ಯನವರು ಬಂದರು ಎಂದಕೂಡಲೆ ಜನ ಚಪ್ಪಾಳೆಯೋ ಚಪ್ಪಾಳೆ.

ಸಾಮಾನ್ಯವಾಗಿ ಸಂಗೀತ ಕಛೇರಿಯೆಂದರೆ ಹಾಡುಗಾರರದೇ ಮೇಲುಗೈ ಪಕ್ಕವಾದ್ಯ ನುಡಿಸುವವರು ಅವರನ್ನು ಹಿಂಬಾಲಿಸಬೇಕು ಇಲ್ಲವೆ ದನಿಗೂಡಿಸಬೇಕು. ಆದರೆ ಅಲ್ಲಿ ತಮ್ಮ ಸ್ವಪ್ರತಿಷ್ಠೆ ತೋರಿಸಿಕೊಳ್ಳಬಾರದು. ಇದರ ಸತ್ಯವನ್ನರಿತಿದ್ದ ಚೌಡಯ್ಯನವರು ಎಂದೂ ಸ್ವಪ್ರತಿಷ್ಠೆ ತೋರಿಸುತ್ತಿರಲಿಲ್ಲ. ತನಗೆ ಜನ ಮನ್ನಣೆ ಕೊಡುತ್ತಾರೆಂದು ಎಂದೂ ನಿಯಮ ಬಿಟ್ಟು ಹೋಗುತ್ತಿರಲಿಲ್ಲ. ಇದರಿಂದಾಗಿ ಎಲ್ಲಾ ಸಂಗೀತಗಾರರು ಚೌಡಯ್ಯನವರನ್ನು ಮೆಚ್ಚುತ್ತಿದ್ದರು. ಚೌಡಯ್ಯನವರು ಸಂಗೀತ ಕಛೇರಿಯಲ್ಲಿದ್ದಾರೆ ಎಂದರೆ ಕಾರ್ಯಕ್ರಮದ ಪ್ರಾಯೋಜಕರಿಗೆ, ಸಂಗೀತಗಾರರಿಗೆ ಒಂದು ರೀತಿಯ ಧೈರ್ಯ ಹಾಗೂ ನೆಮ್ಮದಿ. ಅದೇ ರೀತಿ ಸಂಗೀತಪ್ರೇಮಿಗಳು ಅಂದು ಊರಿನಿಂದ ಪರಊರಿಗೆ ತೆರಳಿ ಸಂಗೀತ ಸುಧೆಯಲ್ಲಿ ಮಿಂದು ತಮ್ಮ ಸಂಗೀತದ ದಾಹವನ್ನು ಅಡಗಿಸಿಕೊಳ್ಳುತ್ತಿದ್ದರು.

ಒಮ್ಮೆ ತಮ್ಮ ಗುರುಗಳಾದ ಬಿಡಾರದ ಕೃಷ್ಣಪ್ಪನವರ ಸವಿನೆನಪಿಗಾಗಿ ಮೈಸೂರಿನ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಒಂದು ವರ್ಷ ರಾಮೋತ್ಸವದ ಕಛೇರಿಯನ್ನು ಏರ್ಪಡಿಸಿದರು. ಆ ದಿನ ಆಲತ್ತೂರು ಸಹೋದರರ ದ್ವಂದ್ವ ಗಾಯನ. ಚೌಡಯ್ಯನವರದೇ ಪಿಟೀಲು ಪಕ್ಕವಾದ್ಯ; ಪಾಲಕಾಡು ಮಣಿ ಅಯ್ಯರ್‌ರವರ ಮೃದಂಗ. ಆ ಸಹೋದರರು ಕಛೇರಿಯ ಕೊನೆಯ ಭಾಗವಾಗಿ ರಾಗ, ತಾಳ, ಪಲ್ಲವಿಯನ್ನು ತೀರಾ ಅಪರೂಪವಾದ ಪಲ್ಲವಿಯೊಂದನ್ನು ಸಿದ್ಧಪಡಿಸಿಕೊಂಡು ಬಂದಿದ್ದರು. ತಾಳ ಯಾವುದೆಂದು ತಿಳಿಯುವಂತಿರಲಿಲ್ಲ. ಚೌಡಯ್ಯನವರ ಮಿತ್ರರು ಸ್ವಲ್ಪ ಕಳವಳಕ್ಕೀಡಾದರು. ಇದನ್ನು ಚೌಡಯ್ಯನವರು ಹೇಗೆ ನಿಭಾಯಿಸುತ್ತಾರೋ ಎಂದು. ಚೌಡಯ್ಯನವರಿಗೆ ಇದೇನು ಹೊಸತಲ್ಲ. ಪಲ್ಲವಿ ಹಾಡುತ್ತಿರುವಾಗ ಜೊತೆಯಲ್ಲೇ ಪಿಟೀಲಿನ ನಾದವು ಮೇಲೆ ಮೇಲೆ ಅನುಸರಿಸುತ್ತಿತ್ತು. ಪಲ್ಲವಿ ಹಾಡಿ ಮುಗಿದ ಮೇಲೆ ಪಿಟೀಲಿನ 'ತನಿವಿನಿಕೆ' ನಡೆಯಬೇಕಷ್ಟೆ. ಚೌಡಯ್ಯನವರು ತಮ್ಮ ಏಳು ತಂತಿಗಳ ಪಿಟೀಲಿನಿಂದ ಭೋರ್ಗರೆಯುವ ತನಿಯ ಅಲೆಗಳು ಮೇಲೆದ್ದು ಸಭಾಭವನ ತುಂಬಿಹೋದವು. ಸಭೆಯಲ್ಲಿದ್ದವರು ಚೌಡಯ್ಯನವರ ಪಿಟೀಲಿನ ಮೋಡಿಯಿಂದ ಹೊರಬಂದವರೇ ಕೈ ಚಪ್ಪಾಳೆಯನ್ನು ಕೆಲ ನಿಮಿಷಗಳ ಕಾಲ ನಿಲ್ಲಿಸಲೇ ಇಲ್ಲ.

ಎಂ.ಎಸ್. ಸುಬ್ಬುಲಕ್ಷ್ಮಿ ಪ್ರಸಂಗ

ಅಂದು ಸಂಗೀತ ಕ್ಷೇತ್ರದಲ್ಲಿ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರು ಮಹಾರಾಜಪುರಂ ವಿಶ್ವನಾಥಯ್ಯ, ಮುಸುರಿ ಸುಬ್ರಹ್ಮಣ್ಯ ಅಯ್ಯರ್, ಪಾಪನಾಶಂ ಶಿವ, ಮಧುರೈ ಮಣಿ ಅಯ್ಯರ್ ಇವರೇ ಮುಂತಾದವರು ಇಡೀ ದಕ್ಷಿಣ

ಭಾರತದಲ್ಲಿ ಖ್ಯಾತ ನಾಮರು. ಇದೇ ತಮಿಳುನಾಡಿನಿಂದ ಎಂ.ಎಸ್. ಸುಬ್ಬುಲಕ್ಷ್ಮಿಯು ಅಲ್ಲಲ್ಲಿ ಕಛೇರಿ ನಡೆಸಿ ಸ್ವಲ್ಪ ಹೆಸರು ಗಳಿಸುತ್ತಿದ್ದರು. ಆದರೆ ಪಕ್ಕವಾದ್ಯದಲ್ಲಿ ಹೆಸರುವಾಸಿಯಾಗಿದ್ದ ಪಾಲಕಾಡು ಮಣಿ ಅಯ್ಯರ್, ಟಿ.ಆರ್. ಮಹಾಲಿಂಗಂ, ಚೌಡಯ್ಯನವರಂತಹವರು ತನಗೆ ಪಕ್ಕವಾದ್ಯ ನುಡಿಸುತ್ತಾರೋ ಇಲ್ಲವೋ ಕೇಳುವುದು ಹೇಗೆ ಎಂಬ ಭಯ ಸುಬ್ಬಲಕ್ಷ್ಮಿಯವರಿಗೆ. ಅವರು ತಮ್ಮ ಸಂಗೀತ ಕಛೇರಿಗೆ ಬಂದು ಮೃದಂಗ ನುಡಿಸಬೇಕೆಂದು ಪಾಲಕಾಡು ಮಣಿ ಅಯ್ಯರ್‌ರವರನ್ನು ಕೇಳಿಕೊಂಡರು. ಅಂದಿನ ಕಾಲದಲ್ಲಿ ಸ್ತ್ರೀ ಸಂಗೀತಗಾರರಿಗೆ ಅದರಲ್ಲೂ ಬೆಳೆಯುತ್ತಿರುವ ಇಂತಹ ಸ್ತ್ರೀ ಸಂಗೀತಗಾರರಿಗೆ ಪಕ್ಕವಾದ್ಯ ನುಡಿಸುವುದು ತಮಗೆ ಅವಮಾನವೆಂದು ಭಾವಿಸಿದ್ದರು. ಪಾಲಕಾಡು ಮಣಿ ಅಯ್ಯರ್ ಅದಕ್ಕೆ ಒಪ್ಪಲಿಲ್ಲ. ಸುಬ್ಬುಲಕ್ಷ್ಮಿಯವರಿಗೆ ಅವಮಾನವಾದಂತಾಯಿತು. ಯಾವುದಕ್ಕೂ ಇರಲಿ ಎಂದು ಚೌಡಯ್ಯನವರನ್ನು ಕೇಳಿಯೇ ಬಿಟ್ಟರು. ಚೌಡಯ್ಯನವರು ಆಗಲಿ 'ತಂಗಿ' ನಾನು ಕಾರ್ಯಕ್ರಮ ನಡೆಸಿಕೊಡುತ್ತೇನೆ ಎಂದು ಹೇಳಿ ತಮ್ಮ ಒಪ್ಪಿಗೆ ನೀಡಿ ತಮ್ಮ ಔದಾರ್ಯವನ್ನು ಮೆರೆದರು. ಸುಬ್ಬುಲಕ್ಷ್ಮಿಯವರು ಅಣ್ಣ ಚೌಡಯ್ಯನವರನ್ನು ಹಲವಾರು ಬಾರಿ ಅವರ ನೆರವನ್ನು ಯಾಚಿಸಿದರು.

ಚೌಡಯ್ಯನವರಿಗೆ ಬೆಂಗಳೂರು ಸಂಗೀತ ಪ್ರೇಮಿಗಳಿಗೆ ಹೆಣ್ಣು ಮಗಳಾದ ಸುಬ್ಬಲಕ್ಷ್ಮಿಯವರ ಗಾಯನವನ್ನು ಕೇಳಿಸಬೇಕೆಂದು ಒಮ್ಮೆ ತೀರ್ಮಾನಿಸಿದರು. ಈಗ ಕಪಾಲಿ ಥಿಯೇಟರ್ ಇರುವ ಜಾಗದಲ್ಲಿ ಮೊದಲು 'ಶಿವಾನಂದ ಥಿಯೇಟರ್ಸ್' ಎಂಬುದಿತ್ತು. ಸುಬ್ಬಲಕ್ಷ್ಮಿಯವರ ಕಛೇರಿ ನಡೆದದ್ದು ಅಲ್ಲಿಯೇ ಪಕ್ಕವಾದ್ಯ ಚೌಡಯ್ಯ ಹಾಗೂ ಸಂಗಡಿಗರದು. ಸಂಗೀತ ಪ್ರೇಮಿಗಳಿಗೆ ಅದು ರಸದೌತಣವಾಗಿತ್ತು.

ಚೌಡಯ್ಯನವರ ಕಾರುಗಳ ಹವ್ಯಾಸ

ಈಗಾಗಲೇ ತಿಳಿಸಿರುವಂತೆ ಚೌಡಯ್ಯನವರು ಹಠವಾದಿಗಳು, ಪ್ರಯೋಗಶೀಲರು, ಸಂಗೀತ ಪ್ರಿಯರು ಸರಿ. ಅಷ್ಟೇ ಅಲ್ಲ ಕಾರುಗಳನ್ನು ಖರೀದಿಸಿ ದೂರದ ಊರುಗಳಿಗೆ ತಮ್ಮ ಸ್ನೇಹಿತರೊಂದಿಗೆ ತಾವೇ ಚಾಲನೆ ಮಾಡಿಕೊಂಡು ಹೋಗುವುದು ಅವರ ಹವ್ಯಾಸವಾಗಿತ್ತು. ಹಳೆಯ ಕಾರುಗಳನ್ನು ಹೆಚ್ಚಿನ ಬೆಲೆಗೆ ಖರೀದಿಸಿ ಅದು ಮಾರ್ಗಮಧ್ಯದಲ್ಲಿ ಕೆಟ್ಟು ನಿಂತರೆ ರಿಪೇರಿಯನ್ನು ತಾವೇ ಮಾಡಿ ಪ್ರವಾಸವನ್ನು ಮುಂದುವರಿಸುತ್ತಿದ್ದರು. ಕೆಲವೊಮ್ಮೆ ಸಂಗೀತ ಕಛೇರಿಗೆ ಒಂದು ಗಂಟೆ ಹೋಗುವುದು ತಡವಾದರೆ ಕ್ಷಮೆ ಕೇಳುವುದೂ ನಡೆಯುತ್ತಿತ್ತು. ಮೈಸೂರಿನ ಆಸ್ಥಾನ ವಿದ್ವಾಂಸರೂ ಆಗಿದ್ದರು. ಊಟಿ,

ಕೊಯಮತ್ತೂರುಗಳಲ್ಲಿ ಆಗಿಂದಾಗ್ಗೆ ಸಂಗೀತ ಸಭೆಗಳು ನಡೆಯುತ್ತಿದ್ದವು. ಅಂತಹ ಸಭೆಗಳಿಗೆ ಮೈಸೂರಿನಿಂದ ಹೊರಟು ಬಂಡೀಪುರ ಮಾರ್ಗವಾಗಿ ಕೊಯಮತ್ತೂರನ್ನು ಸೇರುತ್ತಿದ್ದರು. ರಾತ್ರಿ ಕಛೇರಿ ಮುಗಿಸಿ ಆವೇಳೆಯಲ್ಲಿ ಬಂಡೀಪುರ ಮಾರ್ಗವಾಗಿಯೇ ವಾಪಸ್ಸು ಮೈಸೂರಿಗೆ ಬಂದು ತಲುಪುತ್ತಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರು ಬೇಸಿಗೆ ಕಾಲದಲ್ಲಿ ಕೆಲವು ತಿಂಗಳು ಬಂಡೀಪುರ ಅರಣ್ಯದಲ್ಲಿ ವಿಶ್ರಮಿಸುತ್ತಿದ್ದರು. ಕೆಲವಾರು ದಿನಗಳ ಕಾಲ ಆವೇಳೆಯಲ್ಲಿ ಒಂಟಿ ಕಾರೊಂದು ಸದ್ದು ಮಾಡುತ್ತಾ ಹೋಗುತ್ತಿರುವುದನ್ನು ಮಹಾರಾಜರು ಗಮನಿಸಿದರು. ತಮ್ಮ ಆಳುಗಳನ್ನು ಕಳುಹಿಸಿ ಅದು ಯಾರೆಂದು ತಿಳಿದು ಬರಲು ಕಳುಹಿಸಲಾಗಿ ಅವರು ಮತ್ತಾರೂ ಅಲ್ಲ ಚೌಡಯ್ಯನವರೆಂದು ಮಹಾರಾಜರಿಗೆ ತಿಳಿಸಿದರು. ಒಂದು ದಿನ ಮಹಾರಾಜರು ಚೌಡಯ್ಯನವರನ್ನು ಬರಮಾಡಿಕೊಂಡು. ಕುಶಲೋಪರಿ ವಿಚಾರಿಸಿದ ನಂತರ ಏನು ಚೌಡಯ್ಯನವರೇ ಕಾಡುಮೃಗಗಳಿರುವ ಈ ಬಂಡೀಪುರ ಕಾಡಿನಲ್ಲಿ ಸಂಚರಿಸಿ ಆಪತ್ತು ತಂದುಕೊಳ್ಳುತ್ತೀರಿ. ಒಂದು ಹೊಸ ಕಾರನ್ನು ಕೊಳ್ಳಬಹುದಲ್ಲ ಎಂದರು. ಚೌಡಯ್ಯನವರು ನನ್ನ ಬೇಬಿ ಆಸ್ಟಿನ್ ಕಾರು ಹಳೆಯದಾದರೂ ರೋಲ್ಸ್‌ರಾಯ್ಸ್ ಕಾರಿಗೇನೂ ಕಮ್ಮಿಯಿಲ್ಲ ಪ್ರಭುಗಳೆ ಎಂದು ಉತ್ತರವನ್ನು ನೀಡಿದರು. ಅದರ ಎಂಜಿನ್ ಎಷ್ಟು ಚೆನ್ನಾಗಿದೆ ಗೊತ್ತೇ ಪ್ರಭುಗಳೆ ಎಂದು ತಮ್ಮ ಹಳೆಯ ವಾಹನದ ಬಗ್ಗೆ ಬಡಾಯಿ ಕೊಚ್ಚಿಕೊಂಡರು. ಅದಕ್ಕೆ ಮಹಾರಾಜರು ಜೋಪಾನವಾಗಿರಿ ಎಂದು ಹೇಳಿ ಬೀಳ್ಕೊಟ್ಟರು. ಚೌಡಯ್ಯನವರು ತಮ್ಮ ಕಾರಿನ ಬಳಿ ಬಂದಾಗ ಮಹಾರಾಜರ ಅಧಿಕಾರಿಯೊಬ್ಬ ಚೌಡಯ್ಯನವರನ್ನು ಉದ್ದೇಶಿಸಿ ಏನು ಚೌಡಯ್ಯನವರೆ ನಿಮಗೆ 'ಬುದ್ಧಿ ಕಮ್ಮಿ' ಮಹಾರಾಜರು ಒಂದು ಒಳ್ಳೆಯ ಕಾರನ್ನು ಕೊಡಿಸಬೇಕೆಂದಿದ್ದರು ಅದು ತಪ್ಪಿತಲ್ಲ ಎಂದು ಪೇಚಾಡಿಕೊಂಡರು. ಚೌಡಯ್ಯನವರೂ ಪಶ್ಚಾತಾಪಪಟ್ಟುಕೊಂಡರು.

ಚೌಡಯ್ಯ ಮತ್ತು ಮ್ಯೂಸಿಕ್ ತೆರಪಿ

ಈಗಾಗಲೇ ತಿಳಿಸಿರುವಂತೆ ಚೌಡಯ್ಯನವರು ಪ್ರಯೋಗಶೀಲರು. ಸಂಗೀತಕ್ಕೆ ಮನುಷ್ಯರು ಹಾಗೂ ಬೆಳೆಯುತ್ತಿರುವ ಸಸ್ಯಗಳೂ ಚೇತರಿಸಿಕೊಳ್ಳುವ ಶಕ್ತಿಯಿದೆ ಎಂದು ಅದ್ಭುತ ಪ್ರಯೋಗ ಮಾಡಿದರು. ಇದೇ ಅವರ ಹೆಸರಾಂತ 'ಮ್ಯೂಸಿಕ್ ಥೆರಪಿ'. ಚೌಡಯ್ಯನವರು ಬಿಡುವಿನ ವೇಳೆ ಮೈಸೂರಿನ ತಮ್ಮ ಮನೆಯಲ್ಲಿದ್ದಾಗ ಬೆಳೆಯುತ್ತಿರುವ ಗಿಡಗಳ ಮುಂದೆ ಪಿಟೀಲು ವಾದನದ ಪ್ರಯೋಗ ಮಾಡಿ ಯಶಸ್ವಿಯಾದರೆಂದು ಕೆಲವು ವರ್ಷಗಳ ಹಿಂದೆ ಮೈಸೂರಿನ ಹಿರಿಯರೊಬ್ಬರು 'ಪ್ರಜಾವಾಣಿ' ಪತ್ರಿಕೆಗೆ ಬರೆದಿದ್ದನ್ನು ನಾನು ಓದಿದ್ದೇನೆ.

ಅಯ್ಯನಾರ್ ಸಂಗೀತ ಕಲಾಶಾಲೆ

ಚೌಡಯ್ಯನವರ ಗುರುಗಳಾದ ಬಿಡಾರದ ಕೃಷ್ಣಪ್ಪನವರ ಆಸೆಯಂತೆ ಮೈಸೂರಿನಲ್ಲಿ 1928ರಲ್ಲಿ 'ಸೀತಾರಾಮ ಮಂದಿರ'ವನ್ನು ಸ್ಥಾಪಿಸಿ ಅದರ ಸ್ಥಾಪಕ ಕಾರ್ಯದರ್ಶಿಯಾಗಿ ತಾವೇ ನಿಂತು ಮೈಸೂರಿನ ನಾಗರಿಕರು ಸಂಗೀತವನ್ನು ಸವಿಯಲು ಅನುವು ಮಾಡಿಕೊಟ್ಟರು. ಪ್ರತಿ ಶ್ರೀರಾಮನವಮಿಯಂದು ಮೈಸೂರಿನಲ್ಲಿ ಸಂಗೀತ ಕಛೇರಿಗಳು ನಡೆಯತೊಡಗಿತು. ಸಂಗೀತವನ್ನು ಹಾಡಲು ಪಕ್ಕವಾದ್ಯ ನುಡಿಸಲು ಕಲಿಸುವ ಶಾಲೆಯೊಂದನ್ನು ತೆರೆಯಬೇಕೆಂದು ತೀರ್ಮಾನಿಸಿದರು. ಶಬರಿಮಲೈ ಅಯ್ಯಪ್ಪನ ಭಕ್ತರಾದ್ದರಿಂದ 'ಅಯ್ಯನಾರ್' (ಅಯ್ಯಪ್ಪನ ಮತ್ತೊಂದು ಹೆಸರು) ಕಲಾಶಾಲೆ ಎಂದು ನಾಮಕರಣ ಮಾಡಿದರು. ಇಂತಹ ಶಾಲೆಯನ್ನು ಬೆಂಗಳೂರು, ಮೈಸೂರಿನಲ್ಲಿ ಪ್ರಾರಂಭಿಸಿದರು. ಇಂದಿಗೂ ಈ ಕಲಾಶಾಲೆಯು ಸಾರ್ವಜನಿಕರ ಸೇವೆಗಯ್ಯುತ್ತಿದೆ. ಪ್ರಖ್ಯಾತ ಸಂಗೀತ ವಿದ್ವಾಂಸರೊಬ್ಬರು ಸ್ಥಾಪಿಸಿದ ಕಲಾಶಾಲೆ ಇದೇ ಮೊದಲು. ಇದು ಅವರ ದೂರದೃಷ್ಟಿಗೆ ಸಾಕ್ಷಿಯಾಗಿದೆ.

ಚಲನಚಿತ್ರ ನಿರ್ಮಾಣಕ್ಕೆ ಕೈ ಹಾಕಿದ ಚೌಡಯ್ಯನವರು

ಈಗಾಗಲೇ ತಿಳಿಸಿರುವಂತೆ ಚೌಡಯ್ಯನವರು ಪ್ರಯೋಗಶೀಲರು ಹಾಗೂ ಛಲವಾದಿಗಳು ಸಂಗೀತವನ್ನು ಹೆಚ್ಚೆಚ್ಚು ಜನಪ್ರಿಯಗೊಳಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಇಂದಿಗೆ 70–80 ವರ್ಷಗಳ ಹಿಂದೆ ಚಲನಚಿತ್ರಗಳು ಆಗತಾನೆ ಜನಪ್ರಿಯಗೊಳ್ಳುತ್ತಿದ್ದವು. ಸಂಗೀತವನ್ನೇ ಪ್ರಧಾನವನ್ನಾಗಿರಿಸಿಕೊಂಡು ಚಿತ್ರ ಮಾಡಬೇಕೆಂಬ ಹಂಬಲ ಚೌಡಯ್ಯನವರದಾಗಿತ್ತು. ಈ ಮೊದಲು ತಮಿಳುನಾಡಿನಲ್ಲಿ ಇಂತಹ ಪ್ರಯೋಗಗಳು ನಡೆದಿತ್ತು. ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೈ 'ಬುದ್ಧ ಜೀವನ'ವೆಂಬ ಚಲನಚಿತ್ರ ಮಾಡಲು ಹೋಗಿ ಅದು ಅರ್ಧಕ್ಕೆ ನಿಂತಿತು. 'ನಂದನಾರ್' ಎಂಬ ಜನಪ್ರಿಯ ತಮಿಳುಚಿತ್ರದ ಪುನರ್‌ಮುದ್ರಣ ಕಾಲದಲ್ಲಿ ಶಮ್ಮಂಗುಡಿ ಶ್ರೀನಿವಾಸಯ್ಯರ್‌ರವರು ಮುಖ್ಯಪಾತ್ರ ವಹಿಸಬೇಕಿತ್ತು. ಆದರೆ ಸಂಪ್ರದಾಯ ಶರಣರಾದ ಶ್ರೀನಿವಾಸಯ್ಯನವರು ಹಣಕ್ಕಾಗಿ ಸಿನಿಮಾದಲ್ಲಿ ಪಾತ್ರಮಾಡಿ ಸಂಗೀತಕ್ಕೆ ದ್ರೋಹ ಮಾಡುವುದಿಲ್ಲವೆಂದು ಒಪ್ಪಲೇ ಇಲ್ಲ. ಅದು ಅರ್ಧಕ್ಕೆ ನಿಂತುಹೋಯಿತು. ಈ ಮೇಲ್ಕಂಡ ವಿಷಯಗಳು ಚೌಡಯ್ಯನವರಿಗೆ ತಿಳಿದಿರಲಿಲ್ಲವೆಂದಲ್ಲ. ಅವರು ಸಾಹಸ ಪ್ರವೃತ್ತಿಯುಳ್ಳ ವ್ಯಕ್ತಿಯಾಗಿದ್ದರು. 1943ರಲ್ಲಿ 'ವಾಣಿ' (ಸರಸ್ವತಿ) ಎಂಬ ಚಲನಚಿತ್ರದ ನಿರ್ಮಾಪಕರು, ನಿರ್ದೇಶಕರು, ನಟರೂ ಆಗಿ ಸಿನಿಮಾ ತಯಾರಿಕೆಗೆ ನಿಂತೇಬಿಟ್ಟರು. ಹೆಚ್.ಆರ್.ಜಿ.ಸಿ. ಪಿಕ್ಚರ್ಸ್ ಎಂಬ ಸಂಸ್ಥೆಯಡಿ ನಿರ್ಮಾಣಕ್ಕೆ ತೊಡಗಿತು. ಚಿತ್ರದ ತಾರಾಗಣದಲ್ಲಿ ಕೆ. ಹಿರಣ್ಣಯ್ಯ,

ಪಂಡರೀಬಾಯಿ, ಬಳ್ಳಾರಿ ರತ್ನಮಾಲಾ, ಬಳ್ಳಾರಿ ಲಲಿತಾ, ಕೆ.ವಿ. ಅಚ್ಯುತರಾವ್, ಮುಸಿರಿ ಕೃಷ್ಣಮೂರ್ತಿ ಇನ್ನೂ ಮುಂತಾದವರು. ಸಂಗೀತಕ್ಕೆ ಒತ್ತುಕೊಡುವ ಈ ಚಿತ್ರ ತೆರೆಕಂಡ ಮೇಲೆ ಜನ ಈ ಚಿತ್ರವನ್ನು ಅಷ್ಟಾಗಿ ಮೆಚ್ಚಲಿಲ್ಲ. ಚಿತ್ರವು ಸಂಪೂರ್ಣವಾಗಿ ಸೋತಿತು. ಚೌಡಯ್ಯನವರು ಕೂಡಿಟ್ಟ ಹಣ ಖಾಲಿಯಾಯಿತು. ಬಹುಶಃ ಈ ಚಿತ್ರ ಯಶಸ್ವಿಯಾಗಿದ್ದರೆ ಚೌಡಯ್ಯನವರು ಸಂಗೀತ ಕ್ಷೇತ್ರದಿಂದ ಸಿನಿಮಾ ಕ್ಷೇತ್ರಕ್ಕೆ ಧುಮುಕುತ್ತಿದ್ದರು.

ಪ್ರಶಸ್ತಿ ಪುರಸ್ಕಾರಗಳು

ಚೌಡಯ್ಯನವರು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದಕ್ಷಿಣ ಭಾರತದಲ್ಲಿ ಪ್ರಖ್ಯಾತಿ ಹೊಂದಿದರು. ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು 1941ರಲ್ಲಿ 'ಸಂಗೀತರತ್ನ' ಎಂಬ ಬಿರುದು ನೀಡಿ ಗೌರವಿಸಿದರು. ಮದ್ರಾಸಿನ ಹೆಸರಾಂತ 'ಮ್ಯೂಸಿಕ್ ಅಕಾಡೆಮಿ'ಯು 1957ರಲ್ಲಿ 'ಸಂಗೀತ ಕಲಾನಿಧಿ' ಎಂಬ ಬಿರುದು ನೀಡಿ ಗೌರವಿಸಿತು. 1952ರಲ್ಲಿ ಅಂದಿನ ಮೈಸೂರು ಸರ್ಕಾರವು ಇವರನ್ನು ನ್ಯಾಯ ವಿಧಾಯಕ ಸಭೆಗೆ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಂಡಿತು.

ಗಮಕಿ ಎಂ. ರಾಘವೇಂದ್ರರಾವ್‌ರವರು ತಮ್ಮ 'ಕಲೆಯ ಕಾಣಿಕೆ'ಯಲ್ಲಿ ಹೀಗೆ ಬರೆದಿದ್ದಾರೆ:

'ಅವರು ಪಿಟೀಲಿನಲ್ಲಿ ಸೊಗಸಾಗಿ ಮಾತನಾಡುತ್ತಾರೆ'

1940 ಡಿಸೆಂಬರ್ 1ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿ.ಎಂ.ಶ್ರೀ. ಅವರ ಅಧ್ಯಕ್ಷತೆಯಲ್ಲಿ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರಿಗೆ ಒಂದು ಸನ್ಮಾನ ಸಮಾರಂಭ ಏರ್ಪಡಿಸಲಾಯಿತು. ಮಹಾರಾಜರು ಅವರಿಗೆ **'ಸಂಗೀತರತ್ನ'** ಎಂಬ ಬಿರುದು ದಯಪಾಲಿಸಿದ್ದು ಆ ಅಭಿನಂದನೆಗೆ ಕಾರಣವಾಗಿತ್ತು.

ವೇದಿಕೆಯ ಮೇಲೆ ಎರಡು ಕುರ್ಚಿಗಳಿದ್ದುವು. ಒಂದರಲ್ಲಿ ಬಿ.ಎಂ.ಶ್ರೀ ಯವರೂ ಇನ್ನೊಂದರಲ್ಲಿ ಚೌಡಯ್ಯನವರೂ ಮಂಡಿಸಿದ್ದರು. ಸಭಾಂಗಣ ಕಿಕ್ಕಿರಿದಿತ್ತು; ಜನ ಸಭಾಂಗಣದ ಹೊರಭಾಗದಲ್ಲಿಯೂ ನಿಂತಿದ್ದರು. ಸ್ವಾಗತ ಪದ್ಯಮಾಲಿಕೆಯ ಕಟ್ಟು ಹಾಕಿದ್ದ ಪ್ರತಿಯನ್ನು ಹಾಡಿ ಅವರಿಗೆ ಅರ್ಪಿಸಲಾಯಿತು.; ಅವರ ಪ್ರತಿಭೆ ವಿದ್ವತ್ತೆ ಕೀರ್ತಿಗಳ ಬಗೆಗೆ ಉಪನ್ಯಾಸವಾಯಿತು. ಬಳಿಕ ಶ್ರೀ ಯವರು ಚೌಡಯ್ಯನವರನ್ನು ಸನ್ಮಾನಿಸಿದರು.

ಅಭಿನಂದನೆಗೆ ಪಾತ್ರರಾದ ಟಿ. ಚೌಡಯ್ಯನವರು ಕೆಲವು ಕೃತಜ್ಞತೆಯ ಮಾತುಗಳನ್ನು ಹೇಳಲು ಎದ್ದುನಿಂತರು. ಅವರು ಹಿಂದೆಂದೂ ಅಂತಹ ಸಭೆಗಳಲ್ಲಿ

ಮಾತಾಡಿ ಅಭ್ಯಾಸವಿದ್ದವರಲ್ಲ. ಕಂಠ ಗದ್ಗದಗೊಂಡಿತು. ಆನಂದಬಾಷ್ಪ ತುಂಬಿತು. ತಮ್ಮ ಎರಡೂ ಕೈಗಳನ್ನು ಜೋಡಿಸಿ ಸಭೆಗೂ ಅಧ್ಯಕ್ಷರಿಗೂ ತಲೆ ಬಗ್ಗಿಸಿ ನಮಸ್ಕರಿಸಿದರು. ಬಳಿಕ "ಸ್ವಾಮಿ, ನಾನು ಎಂದೂ ಇಂತಹ ಸಭೆಯಲ್ಲಿ ಇದುವರೆಗೆ ಭಾಗವಹಿಸಿರಲಿಲ್ಲ. ತಮ್ಮ ಮುಂದೆ ಏನೂ ಮಾತಾಡಲಾರೆ. ದಯವಿಟ್ಟು ಕ್ಷಮಿಸಿ" ಎಂದು ಇಷ್ಟು ಮಾತ್ರ ಹೇಳಿ ಕುಳಿತುಬಿಟ್ಟರು. ಸಭೆ ಭಾವಪರವಶವಾಯಿತು. ಶ್ರೀಯವರು ಈ ಅನಿರೀಕ್ಷಿತ ಮುಕ್ತಾಯದ ಅತಿಸಂಕ್ಷಿಪ್ತ ಕೃತಜ್ಞತಾ ಭಾಷಣದಿಂದ ಒಂದು ನಿಮಿಷ ಸ್ತಬ್ಧರಾದರು. ಆದರೆ ಬಳಿಕ ಸಭೆಯನ್ನು ಉದ್ದೇಶಿಸಿ ಹೀಗೆ ಮಾತನಾಡಿದರು:

"ಈ ದಿನ ಶ್ರೀ ಚೌಡಯ್ಯನವರನ್ನು ಸನ್ಮಾನಿಸಲು ನಾವಿಲ್ಲಿ ಸೇರಿದ್ದೇವೆ. ಈ ನಮ್ಮ ಕನ್ನಡನಾಡಿನ ಒಬ್ಬ ದೊಡ್ಡವಿದ್ವಾಂಸರನ್ನು ಗೌರವಿಸುವುದು ನಮಗೇ ಕೀರ್ತಿ ತರುವ ವಿಷಯ. ಶ್ರೀ ಚೌಡಯ್ಯನವರಿಗೆ ಮಾತನಾಡಲು ಬರುವುದಿಲ್ಲವೆಂದು ನೀವು ಹೇಳಬಲ್ಲಿರಾ? ಅವರಿಗೆ ಕನ್ನಡ ಬರುವುದಿಲ್ಲವೇ? ಕನ್ನಡವೇ ಅವರ ಮಾತೃಭಾಷೆ! ಆದರೆ ಈ ದಿನ ಅವರ ಬಾಯಿಂದ ಏಕೆ ಒಂದೆರಡು ಮಾತುಗಳಾದರೂ ಹೊರಡಲಿಲ್ಲವೆಂದು ಕೇಳುವುದಾದರೆ, ನಾನದಕ್ಕೆ ಉತ್ತರ ಹೇಳುತ್ತೇನೆ, ಕೇಳಿ! ಶ್ರೀ ಚೌಡಯ್ಯನವರಲ್ಲಿ ನಾದಶಾರದೆ ಸಂಪೂರ್ಣವಾಗಿ ಸನ್ನಿಹಿತಳಾಗಿದ್ದಾಳೆ. ಅವರಲ್ಲಿ ನಾದಸಾಹಿತ್ಯ ತುಂಬಿದೆ, ನಮ್ಮಲ್ಲಿ ಶಬ್ದಸಾಹಿತ್ಯ ತುಂಬಿದೆ, ಅಷ್ಟೆ! ಅವರು ಪಿಟೀಲಿನಲ್ಲಿ ಸೊಗಸಾಗಿ ಮಾತನಾಡುತ್ತಾರೆ, ನಾವು ಬಾಯಲ್ಲಿ ಮಾತನಾಡುತ್ತೇವೆ. ಅವರು ಎರಡೇ ವಾಕ್ಯಗಳನ್ನು ಚೆನ್ನಾಗಿಯೇ ನಮ್ಮೆದುರಿಗೆ ಆಡಿ ತೋರಿಸಿದರಲ್ಲ! ಅದಕ್ಕಿಂತ ಹೆಚ್ಚೇನು ಬೇಕು?"

ಹೀಗೆ ಹೇಳಿ ಬಿ.ಎಂ.ಶ್ರೀ ಯವರು ಚೌಡಯ್ಯನವರ ಬೆನ್ನು ತಟ್ಟಿದರು. ಅವರ ಕರಸ್ಪರ್ಶದಿಂದ ಚೌಡಯ್ಯನವರು ರೋಮಾಂಚನಗೊಂಡರು. ಸಭೆ ಮುಕ್ತಾಯವಾಯಿತು.

ಚೌಡಯ್ಯನವರ ಕೀರ್ತಿ ಹೆಚ್ಚಾದಂತೆ ದಕ್ಷಿಣ ಭಾರತದಲ್ಲಿ ನಡೆಯುವ ಸಂಗೀತ ಕಛೇರಿಗಳು ಚೌಡಯ್ಯನವರ ಪಕ್ಕವಾದ್ಯಕ್ಕೆ ಎರಡು–ಮೂರು ತಿಂಗಳುಗಳ ಮೊದಲೇ ಅವರ ಬರುವಿಕೆಗೆ ಕಾಯ್ದಿರಿಸಿದ್ದರು. ಚೌಡಯ್ಯನವರಿಗೆ ಹತ್ತಾರು ಸಂಗೀತ ಕಛೇರಿಗಳು ಅವರ ನಿರೀಕ್ಷೆಯಲ್ಲಿದ್ದವು. 1967 ಜನವರಿ 19ರಂದು ತಮ್ಮ 73ನೇ ವಯಸ್ಸಿನಲ್ಲಿ ವಿಧಿವಶರಾದರು. ದಕ್ಷಿಣ ಭಾರತದ ಕಲಾನಿಧಿಯ ಪಿಟೀಲು ನುಡಿಸುವುದನ್ನು ನಿಲ್ಲಿಸಿದರೂ ಅವರು ಸ್ಥಾಪಿಸಿದ 'ಅಯ್ಯನಾರ್ ಕಲಾಶಾಲೆಯು' ಪಿಟೀಲು, ವೀಣೆ, ತಾಳ, ಮೃದಾಂಗಾದಿಯಾಗಿ ಪ್ರತಿಧ್ವನಿಸುತ್ತಿದೆ.

ಹೀಗೆ ಚೌಡಯ್ಯನವರು ಸಂಗೀತ ಕ್ಷೇತ್ರಕ್ಕೆ ಬಂದು ದಕ್ಷಿಣ ಭಾರತದ ಸಂಗೀತ ದಿಗ್ಗಜರಲ್ಲಿ ಒಬ್ಬರಾಗಿ ಮೆರೆದು ಸಂಗೀತ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟು ಕರ್ನಾಟಕದ ಹೆಸರನ್ನು ದಶದಿಕ್ಕುಗಳಿಗೂ ಹಬ್ಬಿಸಿದ್ದಾರೆ. ಇಂದಿಗೂ ಹಳೇ ಮೈಸೂರು ಭಾಗದಲ್ಲಿ ಪಿಟೀಲು ಚೌಡಯ್ಯನೆಂದು ಕರೆಯುತ್ತಾರೆ. ಚೌಡಯ್ಯನವರ ಮೇಲಿನ ಪ್ರೀತಿ ಮತ್ತು ಗೌರವಕ್ಕಾಗಿ ನಗರದ ಹೃದಯಭಾಗದಲ್ಲಿ ಪಿಟೀಲಿನ ಆಕಾರದಲ್ಲಿ ಚೌಡಯ್ಯ ಭವನವನ್ನು ಅಂದಿನ ಬಿ.ಡಿ.ಎ. ಅಧ್ಯಕ್ಷರಾಗಿದ್ದ ಕೆ.ಕೆ. ಮೂರ್ತಿಯವರು ನಿರ್ಮಿಸಿರುವುದು ಅವರ ನೆನಪನ್ನು ಹಸಿರಾಗಿಸಿದೆ.



ಪಂಡಿತ್ ಭೀಮಸೇನ ಜೋಶಿ

ಭಾರತರತ್ನ ಭೀಮಸೇನ ಜೋಶಿಯವರು ನಿಜಕ್ಕೂ ಭಾರತದ ರತ್ನ ಮಾತ್ರವಲ್ಲ ಭೂಲೋಕದ ಗಾನಗಂಧರ್ವ. ಭೂಲೋಕದ ಮನುಷ್ಯರು ಜೀವನವೆಂಬ ಮಾಯೆಯಲ್ಲಿ ಸಿಲುಕಿರುವಾಗ ಅವರು ಜಂಜಾಟದಿಂದ ಕೆಲವು ಕಾಲ ಹೊರಬರಲು ವಿಷ್ಣುವು ಭೀಮಸೇನ ಜೋಶಿಯವರನ್ನು ಧರೆಗೆ ಕಳುಹಿಸಿದನಂತೆ. ಹಳ್ಳಿಯಿಂದ ದಿಲ್ಲಿಗೆ, ದಿಲ್ಲಿಯಿಂದ ಇಡೀ ವಿಶ್ವಕ್ಕೆ ತಮ್ಮ ನಾದ ಸುಧೆಯನ್ನು ಹರಿಸುತ್ತಾ ಸಾಗಿದ ನಾದಬ್ರಹ್ಮ, ಸಂಗೀತ ಸ್ವರಗಳ ಬೇಟೆಯಾಡುತ್ತಾ, ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಂಗಳಿಂ (Let noble thoughts come from all the windows) ಎನ್ನುವಂತೆ ನಾಡಿನ ಉದ್ದಗಲಕ್ಕೂ ಅಲ್ಲಲ್ಲಿ ಅಡಗಿದ್ದ ಸಂಗೀತಗಾರರನ್ನು ತಮ್ಮ ಗುರುಗಳನ್ನಾಗಿ ಮಾಡಿಕೊಂಡು ಪಡಬಾರದ ಕಷ್ಟಪಟ್ಟು ಸ್ವರಗಳ ಮಾಂತ್ರಿಕನಾಗಿ ಬೆಳೆದರು ಜೋಶಿಯವರು. ಹೆಸರೇ ಹೇಳುವಂತೆ ಭೀಮಸೇನರಿಗೆ ದೇವರು ಶರೀರ, ಶಾರೀರ ಶರೀರ=ದೇಹ ಶಾರೀರ=ಕಂಠ ಎರಡನ್ನೂ ದಯಪಾಲಿಸಿದ. ಸ್ವರಗಳನ್ನು ರಾತ್ರೋರಾತ್ರಿ ಕಲಿತುಬಿಡುವ ಜಾಯಮಾನವಲ್ಲ. ನೂರಾರು, ಸಾವಿರಾರು, ಲಕ್ಷಾಂತರ ಬಾರಿ ಹಾಡಿ, ಹಾಡಿ ಸ್ವರತಾನಗಳನ್ನು ಕಲಿತರು. ನಡೆದಾಡುವ ಸಂಗೀತ ವಿಶ್ವವಿದ್ಯಾಲಯದಂತಿದ್ದರು. ಹಣಕ್ಕಾಗಿ ಹಾಡಿದವರಲ್ಲ ಸಂಗೀತಪ್ರಿಯರ ಸಂತೋಷಕ್ಕಾಗಿ ಹಾಡಿದರು. ಭಾಗ್ಯದ ಲಕ್ಷ್ಮೀ ಬಾರಮ್ಮ..... ಗೀತೆಯನ್ನು ಕನ್ನಡಿಗರ ಎದೆಯಲ್ಲಿ ಶಾಶ್ವತವಾಗಿ ತುಂಬಿದ್ದಾರೆ. ಅಚ್ಚಕನ್ನಡಿಗರಾದ ಭೀಮಸೇನರು ಮರಾಠಿ ಭಾಷೆಯಲ್ಲಿ ಭಜನೆ ಮತ್ತು ಭಕ್ತಿಗೀತೆಗಳನ್ನು ಹಾಡುತ್ತಿದ್ದರೆ ಇವರು ನಮ್ಮವರು ಎಂದು ಮರಾಠಿಗರು, ಬಂಗಾಳದಾದ್ಯಂತ ಗಾನಸುಧೆಯನ್ನು ಹರಿಸುತ್ತಾ ನಡೆದಾಗ ಬಂಗಾಳಿಗಳು ಬಂಗಾಳಿ ಎಂದು ಈತ ಪಂಜಾಬಿಗಳು

ಪಂಜಾಬಿ ಎಂದು ಹೀಗೆ ಇಡೀ ಭಾರತೀಯರನ್ನು ತಮ್ಮ ಸಂಗೀತ ಸ್ವರಗಳಿಂದ ಬೆಸೆದ ಸ್ವರಾಧಿರಾಜ, ಭಾರತರತ್ನ ಪಂಡಿತ ಭೀಮಸೇನ ಜೋಶಿ.

ಪಂಡಿತ್ ಭೀಮಸೇನ ಜೋಶಿಯವರು 1922 ಫೆಬ್ರವರಿ 4ರಂದು ಜನಿಸಿದರು. ರೋಣಾದ ಗುರುರಾಜಾಚಾರ್ಯ ಮತ್ತು ರಮಾಬಾಯಿ ಇವರ ತಂದೆತಾಯಂದಿರು.ತಂದೆ ಸ್ಕೂಲ್ ಮಾಸ್ತರು. ಮಧ್ಯಮ ವರ್ಗದ ಕುಟುಂಬದಿಂದ ಬಂದ ಜೋಶಿಯವರು ಬಾಲ್ಯದಲ್ಲಿ ಎಲ್ಲರಂತೆ ತುಂಟ ಬಾಲಕ. ಆದರೆ ತುಸು ಹಠಸ್ವಭಾವ. ಬಾಲ್ಯಾವಸ್ಥೆಯಲ್ಲಿರುವಾಗಲೇ ಸಂಗೀತ ಆಲಿಸುವ, ಹಾಡುವ ಹುಚ್ಚು ಹಿಡಿಸಿಕೊಂಡಿದ್ದರು. ಉಸ್ತಾದ್ ಅಬ್ದುಲ್ ಕರೀಮ್‌ಖಾನ್‌ರ ಧ್ವನಿಮುದ್ರಿಕೆಯನ್ನು ಕೇಳುತ್ತಾ ಬೆಳೆದ ಬಾಲಕ. ತಾನೂ ಅದೇ ರೀತಿ ಅತ್ಯುತ್ತಮ ಸಂಗೀತಗಾರ ನಾಗಬೇಕೆಂಬ ಹಂಬಲ. ಈ ಮೊದಲೇ ಹೇಳಿದಂತೆ ಹೇಳಿಕೇಳಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಜೋಶಿಯವರು ಸಂಗೀತ ಕಲಿಯಲು ಗುರುಗಳ ಹುಡುಕಾಟದಲ್ಲಿ ರೈಲಿಗೂ ದುಡ್ಡಿಲ್ಲದೆ ಬರಿಗೈಲಿ ರೈಲನ್ನೇರಿದ ಬಾಲಕ. ಅಂದು ರಾಜಮಹಾರಾಜರು ಸಂಗೀತ ಪ್ರಿಯರಾಗಿದ್ದು ಸಂಗೀತ ಪೋಷಕರೂ ಆಗಿದ್ದರು. ಉದಾ: ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಬಿಡರಾಂ ಕೃಷ್ಣಪ್ಪ, ವೀಣೆ ಶೇಷಣ್ಣ, ಪಿಟೀಲು ಚೌಡಯ್ಯ, ವಾಸುದೇವಾಚಾರ್ಯರು ಇದ್ದರು. ಅಂತೆಯೇ ಗ್ವಾಲಿಯರ್ ಮಹಾರಾಜರು ಶಾಸ್ತ್ರೀಯ ಸಂಗೀತ ಕಲಿಯುವ ವಿದ್ಯಾರ್ಥಿಗಳಿಗೆ ಒಂದು ಹೊತ್ತಿನ ಊಟವನ್ನು ಉಚಿತವಾಗಿ ನೀಡುತ್ತಿದ್ದ ವಿಷಯ ಜೋಶಿಯವರ ಕಿವಿಗೆ ಬೀಳುತ್ತಲೆ ಗ್ವಾಲಿಯರ್‌ಗೆ ಪಯಣ ಬೆಳೆಸಿದರು. ಸಂಗೀತ ವಿದ್ಯಾರ್ಥಿಯಾಗಿ ವಿದ್ಯಾರ್ಜನೆ. ಅಲ್ಲಿಂದ ಕಲ್ಕತ್ತಾಗೆ ಪಯಣ. ಸಿನಿಮಾ ರಂಗದಲ್ಲಿ ಹೆಸರು ಮಾಡಿದ್ದ ಪಹಾಡಿ ಸನ್ಯಾಲ್ ಬೇಟಿ. ಜೋಶಿಗೆ ಸಿನಿಮಾದಲ್ಲಿ ನಟಿಸಲು ಆಹ್ವಾನ. ಸಂಗೀತದ ಬೇಟೆಗಾಗಿ ಬಂದಿರುವ ಯುವಕನಿಗೆ ಸಿನಿಮಾ ರುಚಿಸಲಿಲ್ಲ. ಪಂಜಾಬಿನ ಜಲಂದರ್‌ಗೆ ಪ್ರಯಾಣಿಸಿ ಪಂಡಿತ್ ಪಟವರ್ಧನರನ್ನು ಬೇಟಿ ಮಾಡಿದರು ಯುವ ಜೋಶಿ. ಕರ್ನಾಟಕದ ಯುವಕ ಸಂಗೀತ ಗುರುವಿಗಾಗಿ ದೇಶವನ್ನೆಲ್ಲ ಹರಸುತ್ತಾ ಸುತ್ತುತ್ತಿರುವುದನ್ನು ಕಂಡು ನಕ್ಕ ಪಟವರ್ಧನರು ಕರ್ನಾಟಕದಲ್ಲೇ 'ಸವಾಯಿ ಗಂಧರ್ವ' ಎಂಬ ಗುರುಗಳಿದ್ದಾರೆ. ಅಲ್ಲೇ ಕಲಿ, ಸಾಧನೆ ಮಾಡು ಎಂದು ಯುವಕನಿಗೆ ಮಾರ್ಗದರ್ಶನ ಮಾಡಿದರು. ಯುವಕ ಅಲ್ಲಿಂದ ಕುಂದಗೋಳಕ್ಕೆ ಪ್ರಯಾಣ ಮಾಡಿ ಪಂಡಿತ್ ಸವಾಯಿ ಗಂಧರ್ವರನ್ನು ಬೇಟಿ ಮಾಡಿದರು.

ಸವಾಯಿ ಗಂಧರ್ವರ ಶಿಷ್ಯರಾಗಿ ಜೋಶಿ

ಈಗಾಗಲೇ ತಿಳಿಸಿರುವಂತೆ 'ಕೈಯಲ್ಲಿ ಬೆಣ್ಣೆ ಹಿಡಿದುಕೊಂಡು ತುಪ್ಪಕ್ಕಾಗಿ ಊರೆಲ್ಲ ಅಲೆದರು' ಎನ್ನುವಂತೆ ಜೋಶಿಯವರು ಕರ್ನಾಟಕದ ತಮ್ಮ ಊರಿನ

ಸಮೀಪವೇ ಇರುವ ಕುಂದಗೋಳದಲ್ಲಿ ವಾಸವಾಗಿದ್ದ ಸಂಗೀತ ಸಾಮ್ರಾಟ ಅಬ್ದುಲ್ ಕರೀಮ್‌ಖಾನ್‌ರ ಶಿಷ್ಯ ಸವಾಯಿ ಗಂಧರ್ವರು. ಸವಾಯಿ ಗಂಧರ್ವರು ತುಂಬಾ ಕಡಕ್ ಮನುಷ್ಯ ಅಂದಿನಕಾಲದಲ್ಲಿ ಇಂದಿನಂತೆ ಮನೆಪಾಠ, ಸಂಗೀತ ಪಾಠಕ್ಕೆ ತಿಂಗಳಿಗೆ ಇಂತಿಷ್ಟು ಹಣ ನೀಡಿ ಕಲಿಯುವಂತಿರಲಿಲ್ಲ. ಪುರಂದರದಾಸರು ಹೇಳುವಂತೆ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬಂತೆ ಗುರುವಿನ ಮನೆಯ ದಾಸನಾಗಿ ಸಂಗೀತ ಕಲಿಯಬೇಕಿತ್ತು. ಗುರುಸೇವೆಯೇ ಅವರ ಆಶೀರ್ವಾದ ಎನ್ನುವಂತೆ ಬದುಕಬೇಕಿತ್ತು. ಪ್ರತಿದಿನ ಗುರುಗಳ ಮನೆಗೆ ನೀರನ್ನು ಸುತ್ತಮುತ್ತಣ ಬಾವಿಯಿಂದ ಸೇದಿ ತಂದು ಹಾಕುವುದು, ಮನೆಗೆಲಸ ಮಾಡುವುದು, ಗುರುಗಳಿಗೆ ಅಗತ್ಯವೆನಿಸಿದಾಗ ಅವರ ಕೈಕಾಲು ಒತ್ತುವುದು ಇವೇ ಮುಂತಾದ ಚಾಕರಿ ಮಾಡಬೇಕಿತ್ತು. ಆಗಮಾತ್ರ ಗುರುಗಳು ಒಲಿಯುತ್ತಿದ್ದರು. ಭೀಮಸೇನರು ಈ ಎಲ್ಲಾ ಸೇವೆ ಮಾಡಿ ಸೈ ಎನಿಸಿಕೊಂಡರು. ಗುರುಗಳು ಶಿಷ್ಯನನ್ನು ಮೆಚ್ಚಿಕೊಂಡರು. ಶಿಷ್ಯನಿಗೆ ಒಂದು ಬ್ರಾಹ್ಮಿ ಮುಹೂರ್ತದಲ್ಲಿ (ಬೆಳಿಗ್ಗೆ 4 ಘಂಟೆ) ಸಂಗೀತಾಭ್ಯಾಸ ಮಾಡಿಸುತ್ತಿದ್ದರು. ಮುಂಜಾನೆ 'ತೋಡಿ' ಮಧ್ಯಾಹ್ನ 'ಮುಲ್ತಾನಿ' ಸಂಜೆ 'ಪುರಿಯಾ' ರಾಗದಲ್ಲಿ ತಾಲೀಮು ಮಾಡಿಸುತ್ತಿದ್ದರು. ಈ ರಾಗಗಳ ತಾಲೀಮು ತಿಂಗಳುಗಳು, ಕೆಲವೊಮ್ಮೆ ವರ್ಷಗಳು ಉರುಳುತ್ತಿದ್ದವು. ಈ ಮೂರು ರಾಗಗಳನ್ನು ವಿಸ್ತರಿಸುವ ಬಗೆಗಳನ್ನು ಗುರುಗಳು ತಿಳಿಸುತ್ತಿದ್ದರು.

ಸಂಗೀತದಲ್ಲಿ **'ರಿಯಾಜು'** ಮತ್ತು **'ತಾಲೀಮು'** ಎಂಬ ಎರಡು ಶಬ್ದಗಳಿವೆ. ಗುರುಗಳಿಂದ ಕಲಿತದ್ದನ್ನು ಮನದಟ್ಟು ಮಾಡಿಕೊಂಡು ಕಂಠಪಾಠ ಮಾಡಿ ಸಂಗೀತದ ವಿದ್ಯಾರ್ಥಿಯು ತಾನೊಬ್ಬನೇ ಕುಳಿತುಕೊಂಡು ಹಾಡುತ್ತಾ ಅಭ್ಯಾಸ ಮಾಡುವ ಸಾಧನೆಯನ್ನು 'ರಿಯಾಜ್' ಎನ್ನುತ್ತಾರೆ. ಅದೇ ಸಂಗೀತ ವಿದ್ಯಾರ್ಥಿಯು ಒಂದು ರಾಗವನ್ನು ಚೆನ್ನಾಗಿ ಅಭ್ಯಸಿಸಿ ಗುರುವಿನ ಸಮ್ಮುಖದಲ್ಲಿ ಅಭ್ಯಾಸ ಮಾಡುವುದು ಇಲ್ಲವೆ ಗುರುಗಳಿಗೆ ಒಪ್ಪಿಸುವುದನ್ನು ತಾಲೀಮು ಎನ್ನುತ್ತಾರೆ. ಹೀಗೆ ಜೋಶಿಯವರು ರಿಯಾಜ್ ಮತ್ತು ತಾಲೀಮು ಮಾಡುತ್ತಾ ಸ್ವರಗಳನ್ನು ವಶಪಡಿಸಿಕೊಳ್ಳುತ್ತಿದ್ದರು. ಗುರುಗಳು ಶಿಷ್ಯನಿಗೆ ರಾಗ, ತಾಳಗಳು, ಬಂದಿಶ್, ಬಡತ್‌ಗಳನ್ನು ಕಲಿಸಿದರು. ಇದೇ ಸಮಯಕ್ಕೆ ಕರ್ನಾಟಕದ ಮತ್ತೊಬ್ಬ ಮಹಾನ್ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ಗಂಧರ್ವರ ಬಳಿ ಶಿಷ್ಯೆಯಾಗಿ ಸೇರಿಕೊಂಡರು. ಗುರುಗಳ ಮನೆಯಲ್ಲಿ ಉಳಿದುಕೊಳ್ಳಲಾಗದೆ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ, ಸಂಜೆಯಾಗುತ್ತಲೇ ಕುಂದಗೋಳದಿಂದ ಹುಬ್ಬಳ್ಳಿಗೆ ದಿನಂಪ್ರತಿ ಪ್ರಯಾಣಿಸುತ್ತಿದ್ದರು. ಆ ಸಮಯದಲ್ಲಿ ಭೀಮಸೇನರು ಮತ್ತು ಗಂಗೂಬಾಯಿಯವರು ಅಣ್ಣ–ತಂಗಿಯಂತಿದ್ದರು. ಗುರುಗಳು ಶಿಷ್ಯರಿಗೆ

ರಾಗ-ಸ್ವರ-ಸಂವಾದಿ-ತಾಳ-ಬಂದಿಶುಗಳನ್ನು ಹೇಳಿಕೊಡುತ್ತಿದ್ದರು. ರಿಯಾಜ್ ಮತ್ತು ತಾಲೀಮು ಮಾಡುವ ಜೋಶಿಯು ತಪ್ಪು ಮಾಡಿದರೆ ದಂಡಿಸಲು ಗುರುಗಳು ಹಿಂದುಮುಂದು ನೋಡುತ್ತಿರಲಿಲ್ಲ, ಥಳಿಸುತ್ತಿದ್ದರು. ಗುರುಗಳು ಶಿಷ್ಯನಿಗೆ ಭೈರವ್, ಮಾಲಕಂಸ್, ತೋಡಿ, ಯಮನ್ ರಾಗಗಳನ್ನು ಕಲಿಸಿದರು ಹಾಗೂ ವಿಸ್ತರಿಸುವಂತೆ ಹೇಳುತ್ತಿದ್ದರು. ಕಿರಾನ, ಘರಾನೆಯನ್ನು ಹೇಳಿಕೊಟ್ಟರು.

ಆಕಾಶವಾಣಿ ಲಖನೌದಲ್ಲಿ ಉದ್ಯೋಗ

ಸವಾಯಿಗಂಧರ್ವರು ಕಲಿಸಿದ ಸಂಗೀತವಿದ್ಯೆ ಸಾಲದಾಯಿತು. 1941-42ರಲ್ಲಿ ಲಖನೌಕ್ಕೆ ಬಂದಿಳಿದರು. ಲಖನೌ ಆಕಾಶವಾಣಿ ಜೋಶಿಯವರನ್ನು ಕೈಬೀಸಿ ಕರೆಯಿತು. ವಾರದಲ್ಲಿ ಎರಡು ದಿನ ಹಾಡಲು ಅವಕಾಶವಿತ್ತು. ಉಳಿದ ದಿನಗಳಲ್ಲಿ ಸಂಗೀತಾಭ್ಯಾಸ ಮಾಮೂಲಿನಂತೆ ನಡೆಯುತ್ತಿತ್ತು. ಅಲ್ಲಿದ್ದ ಸಂದರ್ಭದಲ್ಲಿ ಅಮೀರ್‌ಖಾನ್‌ರ ಅಂತರ್ಮುಖೀ ಆಲಾಪ ಶೈಲಿ, ಕೇಸರಬಾಯಿ ಕೇಳಕರ್ ಅವರ 'ಜೈಪುರಿ' ಶೈಲಿಯ ಸಂಕೀರ್ಣ ತಾನುಗಳು ಲಖನೌ-ಬನಾರಸ್‌ನ ಠುಮ್ರಿಯ, ಶೃಂಗಾರದ ಝುಲಕ್, ಬಾಲಗಂಧರ್ವರ ನಾಟ್ಯ, ಸಂಗೀತ, ಶಹನಾಯಿ ಮಾಂತ್ರಿಕ ಉಸ್ತಾದ್ ಬಿಸ್ಮಿಲ್ಲಾಖಾನ್‌ರು ಶಾಹನಾಯಿ ನುಡಿಸುತ್ತಿದ್ದ ರೀತಿ ರಿವಾಜುಗಳನ್ನು ಕಲಿತರು. ಜೋಶಿಯವರನ್ನು ತುಂಬಾ ಆಕರ್ಷಿಸಿದ್ದು ಎಂದರೆ 'ಕುಮರಿ' ಗಾಯನ. ಜೋಶಿಯವರು 'ರಾಗ ಪೂರಿಯಾ' ಮತ್ತು 'ಮಾರವಾ'ಗಳನ್ನು ಒಂದರ ನಂತರ ಒಂದನ್ನು ಹಾಡಿದರು. ಸಭೆಯಲ್ಲಿದ್ದ ಕೇಸರಬಾಯಿಯವರು ಮೂಖವಿಸ್ಮಿತರಾದರು. ಭೀಮಸೇನರು ಉತ್ತರ ಭಾರತದ ಸಂಗೀತ ದಿಗ್ಗಜರಲ್ಲಿ ಒಬ್ಬರಾಗಿ ಹೊರಹೊಮ್ಮಿದಾಗ ಗಣೇಶ ಉತ್ಸವ, (ಮುಂಬೈನಲ್ಲಿ ಭಾರಿ ಜನ ಸೇರುವ ಏಕೈಕ ಹಬ್ಬ) ಶ್ರೀಮಂತರ ಮನೆಯ ಮದುವೆ, ದೇಶ ವಿದೇಶಿ ಗಣ್ಯರಿರುವ ಸಭೆ ಸಮಾರಂಭ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ ಹಾಡುತ್ತಿದ್ದರು. ವಾರದಲ್ಲಿ ಐದರಿಂದ ಆರುದಿನ ಕಾರ್ಯಕ್ರಮ ಕೊಡುತ್ತಿದ್ದರು. ಹಣ ಧಾರಾಕಾರವಾಗಿ ಬರುತ್ತಿತ್ತು.

ವಿವಾಹ ಬಂಧನಕ್ಕೆ ಸಿಲುಕಿದ ಭೀಮಸೇನರು

ಭೀಮಸೇನರ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಅಂದರೆ 1943ರಲ್ಲಿ ಕಂಕಣಭಾಗ್ಯ ಕೂಡಿಬಂದಿತು. 'ಸುನಂದ' ಎಂಬ ಕನ್ಯೆಯನ್ನು ಕೈಹಿಡಿದರು. ಮಕ್ಕಳಾಯಿತು. ಆದರೂ ಸಂಸಾರವು ಅವರ ಸಂಗೀತದ ಓಟಕ್ಕೆ ತೊಡಕಾಗಲಿಲ್ಲ. ಲಕ್ಷಾಂತರ ಶ್ರೋತೃಗಳನ್ನು ಮೋಡಿ ಮಾಡುತ್ತಿದ್ದ ಭೀಮಸೇನರನ್ನು ಅವರಲ್ಲಿಗೆ ಸಂಗೀತವನ್ನು ಕಲಿಯಲು ಬಂದ 'ವತ್ಸಲ' ಎಂಬ ಶಿಷ್ಯೆ ಭೀಮಸೇನರನ್ನೇ ಮೋಡಿ

ಮಾಡಿದಳು. ಭೀಮಸೇನರು ನಾಟಕಗಳಲ್ಲಿ ನಾಯಕ ನಟರಾಗಿ ಪಾತ್ರ ವಹಿಸುತ್ತಿದ್ದ ವೇಳೆ ವತ್ಸಲಾ ಮುಧೋಳಕರ ಅವರು ನಾಯಕಿಯಾಗಿ ಪಾತ್ರ ಮಾಡುತ್ತಿದ್ದರು. ಆಕೆಯ ಪ್ರೇಮ ಪಾಶಕ್ಕೆ ಬಿದ್ದ ಭೀಮಸೇನರು 1951ರಲ್ಲಿ ಆಕೆಯನ್ನು ವಿವಾಹವಾದರು. ಎರಡೂ ಸಂಸಾರಗಳನ್ನು ನಿಭಾಯಿಸಲು ಸಾಕಷ್ಟು ಹಣ ಬರುತ್ತಿತ್ತು. ಆಗಿನ ಕಾಲದಲ್ಲಿ (1950) ತಿಂಗಳಿಗೆ ಐದು ಸಾವಿರ ರೂಪಾಯಿಗಳಿಗೂ ಹೆಚ್ಚಿನ ಸಂಪಾದನೆಯಿತ್ತು.

ಭೀಮಸೇನರು ಎಷ್ಟೇ ಎತ್ತರಕ್ಕೆ ಬೆಳೆದರೂ ಸ್ನೇಹಕ್ಕೆ ಮೊದಲ ಆದ್ಯತೆ. ದತ್ತಾತ್ರೇಯ **'ಸದಾಶಿವ ಗರೂಡ'**ರವರು ಮತ್ತು ಭೀಮಸೇನರು ಬಾಲ್ಯ ಸ್ನೇಹಿತರು. ಹಾಡುವಿಕೆಯಲ್ಲಿ ಇಬ್ಬರಿಗೂ ಪೈಪೋಟಿ ಅಂತಿಮ ಜಯ ಭೀಮಸೇನರದು. ಗರೂಡರು ತಬಲಾ ಮಾಂತ್ರಿಕರಾಗಿ ಮೆಚ್ಚುಗೆ ಗಳಿಸಿದರು. ಎಷ್ಟೋ ದಿನಗಳ ನಂತರ ಗೆಳೆಯ ಗರೂಡರು ಸಿಕ್ಕಿದಾಗ ಆತ್ಮೀಯವಾಗಿ ಹಿಂದಿನ ದಿನಗಳನ್ನು ನೆನೆದರಲ್ಲದೆ ಪುರಭವನದಲ್ಲಿ ಈಗಾಗಲೇ ಗೊತ್ತುಪಡಿಸಿದ್ದ ಸಂಗೀತ ಕಾರ್ಯಕ್ರಮಕ್ಕೆ ಗೆಳೆಯ ಗರೂಡರನ್ನು ಆಹ್ವಾನಿಸಿಯೇ ಬಿಟ್ಟರು. ಈಗಾಗಲೇ ತಬಲ ನುಡಿಸಲು ಗೊತ್ತುಪಡಿಸಿದ್ದ ಶಮ್‌ಶುದ್ದೀನ್ ಖಾನರನ್ನು ಮುಂದಿನ ಕಾರ್ಯಕ್ರಮಕ್ಕೆ ನುಡಿಸುವಂತೆ ಹೇಳಿದರು. ಸಾಹಿತಿಗಳಿಗೆ ಗುರು ಹಿರಿಯರಿಗೆ ಗೌರವ ಕೊಡುವ ವಿಚಾರದಲ್ಲೂ ಭೀಮಸೇನರು ಎತ್ತಿದ ಕೈ. ಅವರ ಅಚ್ಚುಮೆಚ್ಚಿನ ಹಿರಿಯ ಸಾಹಿತಿಯೆಂದರೆ ದ.ರಾ.ಬೇಂದ್ರೆಯವರು. ಅವರೊಂದಿಗೆ ಗಂಟೆಗಟ್ಟಲೆ ಮಾತನಾಡುತ್ತಿದ್ದರು. 1946ರಲ್ಲಿ ತಮ್ಮ ಗುರುಗಳಾದ ಸವಾಯಿಗಂಧರ್ವರ 60ನೇ ವರ್ಷದ ಷಷ್ಠಿಪೂರ್ತಿ ಸಮಾರಂಭವನ್ನು ಪುಣೆಯಲ್ಲಿ ಅದ್ದೂರಿಯಾಗಿ ಭೀಮಸೇನರು ನಡೆಸಿಕೊಟ್ಟರು.

ಸಂಗೀತಾರ್ಜನೆಗಾಗಿ ಗುರುಭಕ್ತಿಯ ಪರಾಕಾಷ್ಠೆ.

ಭೀಮಸೇನರಿಗೆ ಸಂಗೀತ ಕಲಿಯುವ ದಾಹ ಎಷ್ಟಿತ್ತೆಂದರೆ ಅಂದು ಅವರು ಯಾವ ಬೆಲೆಯನ್ನಾದರೂ ತೆತ್ತು ಸಂಗೀತದ ಸ್ವರಗಳನ್ನು ವಶಪಡಿಸಿಕೊಳ್ಳುತ್ತಿದ್ದರು. ಒಮ್ಮೆ ಹೀಗಾಯಿತು: ಮುಷ್ತಕ್ ಹುಸೇನ್ ಖಾನರು ರಾಂಪುರದ ನವಾಬರ ಆಸ್ಥಾನ ಗಾಯಕರಾಗಿದ್ದರು. ಹುಸೇನರು 'ಘರಾನೆ' ಸೇರಿದಂತೆ ಕೆಲವು ಅಪರೂಪದ ರಾಗಗಳನ್ನು ಕಲಿತಿದ್ದರು. ಅವರಿಂದ ಆ ರಾಗಗಳನ್ನು ಕಲಿಯುಬೇಕೆಂಬ ಆಸಕ್ತಿ ಜೋಶಿಯುವರಿಗೆ. ಖಾನ್‌ಸಾಹೇಬರು ಮಾಂಸಾಹಾರಿಗಳು. ಭೀಮಸೇನರು ಖಾನ್‌ಸಾಹೇಬರ ಮನೆಯಲ್ಲಿ ಗುರುಸೇವೆಗೆ ನಿಂತರು. ಆಗಿಂದಾಗ್ಗೆ ಮಾಂಸದ ಅಂಗಡಿಗೆ ಹೋಗಿ ಮಾಂಸವನ್ನು ತಂದು ತಾವೇ ಅದನ್ನು ತಯಾರಿಸಿ ಗುರುಗಳಿಗೆ ಬಡಿಸಬೇಕಿತ್ತು. ಅಂತಹ ಸಂದರ್ಭದಲ್ಲೂ

ಸಂಪ್ರದಾಯಸ್ಥರಾದ ಭೀಮಸೇನರು ಆ ಎಲ್ಲಾ ಕೆಲಸವನ್ನು ಮಾಡುತ್ತಿದ್ದರು. ಇದನ್ನು ಗುರುಸೇವೆ ಎಂದೇ ಭಾವಿಸಿದರೇ ಪರಂತು ತಾವು ತಮಗಿಷ್ಟವಿಲ್ಲದ ಕೆಲಸವನ್ನು ಮಾಡುತ್ತಿದ್ದೇನೆ ಎಂದು ಭಾವಿಸಿದವರಲ್ಲ. ಹೀಗೆ ಖಾನ್ ಸಾಹೇಬರಿಂದ ಅಪರೂಪದ ರಾಗಗಳನ್ನು ಕಲಿತರು.

ನಾದ ಬ್ರಹ್ಮರಾಗಿ ಹೊರ ಹೊಮ್ಮಿದ ಭೀಮಸೇನರು

ಪುರಂದರದಾಸರು ಒಂದು ಕಡೆ ಹೇಳುತ್ತಾರೆ. ಸುಮ್ಮನೆ ಬಾಹುದಯ್ಯ ಮುಕ್ತಿ..... ಎಂದು ಹಾಗೆ ಭೀಮಸೇನರು ಒಬ್ಬೊಬ್ಬ ಗುರುಗಳಿಂದ, ಸಂಗೀತಗಾರರಿಂದ, ಸ್ನೇಹಿತರಿಂದ ಒಂದೊಂದು ರಾಗಗಳನ್ನು ಕಲಿತು ನಾದ ಬ್ರಹ್ಮರಾದರು. ಪೂರಿಯಾ, ಪೂರಿಯಾ-ಧನಾಶ್ರೀ, ಶುದ್ಧ-ಕಲ್ಯಾಣ, ಪೂರ್ವ ಕಲ್ಯಾಣ, ಆಭೋಗಿ, ದುರ್ಗಾ, ದರಬಾರಿ-ಕಾನಾಡಾ, ಮಾಲಕಂಸ, ಮಿಯಾಮಲಹಾರ, ಬಸಂತ, ಹಿಂಡೋಲ, ಆಥಾನಾ, ಬಹಾರ, ತೋಡಿ, ಗುರ್ಜರಿ-ತೋಡಿ, ಬಹಾದ್ದೂರಿ-ತೋಡಿ, ಲಲಿತ, ಅಸಾವರಿ, ಯಮನೀ-ಬಿಲಾವಲ್, ಅಲ್ಹೈಯಾ-ಬಿಲಾವಲ್, ಸುಹಾ, ಮೇಘ, ಕೇದಾರ, ಕಾಮೋದ, ಶಂಕರಾಭರಣ, ಬಾಗೇಶ್ರೀ, ಮಾರವಾ, ಗೌರಿ, ದೇಸ, ಭೈರವಿ, ರಾಗಪುರಿಯಾ, ಮೊರವಾ, ಠುಮರಿ, ಪೂರಿಯಾ, ಮುಲ್ತಾನಿ, ಯಮನ್, ತೋಡಿ, ಜೀವನಪುರಿ, ಲಂಕಾದಹನ, ಸಾರಂಗ, ಭೈರವಬಹಾರ್, ಮಲುಹಾ, ಭಂಕಾರ, ನಟ ಮಲ್ಹಾರ, ಜೈಜೈವಂತಿ, ಜಯಂತ ಕಲ್ಯಾಣ, ಹಿಂಡೋಲ ಬಹಾರ, ಖಟ್, ಜೈತಾಶ್ರೀ, ಆಸಾವರಿ, ಶುದ್ಧ ಕಲ್ಯಾಣ, ಮಾಲಕೌಂಸ್, ಮಿಯಮಲ್ಹಾರ, ದರ್ಬಾರಿ, ಮಾರುಬಿಹಾಗ್, ಬಿಭಾಸ್, ಲಲಿತ್, ಭೈರವ, ಕೋಮಲರಿಘಟ, ಆಸಾವರಿ, ಅಹಿರಭೈರವ, ಪ್ರಭಾತ್ ಭೈರವ, ತೋಡಿ, ಬಿಲಾಸಖಾನಿ ತೋಡಿ, ಹಿಂಡೋಲ, ಸಾಲಗವರಾಳಿ, ಅಲ್ಹೈಯಾ, ಬಿಲಾವಲ್, ದೇವಗಿರಿ ಬಿಲಾವಲ್, ಬಿಭಾಸ, ಜೋಗಿಯಾ, ದೇಶಿ, ದೇಸಕಾರ, ಜೀವನಪುರಿ, ದೇಶಿತೋಡಿ, ಲಲತ್ ಪಂಚಮ, ಭೈರವಿ, ಸೂರ ಮಲ್ಹಾರ, ಶುದ್ಧ ಸಾರಂಗ, ಬೃಂದಾವನಿಸಾರಂಗ, ಗೌಡಸಾರಂಗ, ಸುಹಾಕಾನಡಾ, ಮಧುವಂತಿ, ಪಟದೀಪ, ಭೀಮಪಲಾಸ, ಮುಲ್ಲಾನಿ, ಜಯಂತ್‌ಮಲ್ಹಾರ, ಮಾರವಾ, ಶುದ್ಧ ಕಲ್ಯಾಣ, ಯಮನ್, ದುರ್ಗಾ, ಕಾಮೋದ, ಬಾಗೇಶ್ರೀ, ದರಬಾರಿ ಕಾನಾಡಾ, ಅಭೋಗಿ, ಮಿಯಾ ಮಲ್ಹಾರ, ಮೇಘಮಲ್ಹಾರ, ರಾಗೇಶ್ವರಿ, ಮಾಳಕಂಸ, ಚಂದ್ರಕೌಂಸ, ಚಕ್ರಧರ, ಕಲಾವತಿ, ಬಹಾರ, ಭೂಪ, ಅಥಾಣಾ, ಬಸಂತ ಉಹಾರ್, ಖಂಬಾವತಿ, ಮಲುಹ ಕೇದಾರ, ಕೇದಾರ, ಗೋರಖಕಲ್ಯಾಣ, ತಿಲಂಗ, ಸುಹಾ ದೇಸ, ಜಯ ಜಯವಂತಿ, ಬಸಂತ ಬಹಾರ್, ಸುಗ್ರಾಮಿ, ಪೂರಿಯಾ ಧನಶ್ರೀ, ಸೋಹನಿ, ಮರು ಬಿಹಾಗ್,

ಶಂಕರಾಭರಣ ಇವೇ ಮುಂತಾದ ರಾಗಗಳ ಅಧಿಪತಿಯಾದರು. ದೇಶದಲ್ಲಿ ಎಲ್ಲೇ ಆದರೂ ಸಂಗೀತ ಕಛೇರಿ ನಡೆಸುವ ಧೈರ್ಯ ಸ್ಥೈರ್ಯ ಬಂದಿತು.

ಕನ್ನಡಿಗರ ಹೃದಯಾಂತರಾಳದಲ್ಲಿ ನಿಂತ ಭೀಮಸೇನರು

ಭೀಮಸೇನರು ಪಕ್ಕಾ ಶಾಸ್ತ್ರೀಯ ಸಂಗೀತಗಾರರಾದರೂ ಕೂಡ ಪಂಡಿತಪಾಮರರೂ ಕೂಡ ಸಂಗೀತಕ್ಕೆ ಮಾರುಹೋಗುವಂತೆ ಮಾಡಿದ ಕೀರ್ತಿ ಭೀಮಸೇನರಿಗೆ ಸಲ್ಲುತ್ತದೆ. ಭೀಮಸೇನರು ಹಣದ ಆಸೆಗಾಗಿ ರಾಜರ ಆಸ್ಥಾನ ಗಾಯಕರಾಗಿದ್ದು ಇಷ್ಟವಿಲ್ಲದಿದ್ದರೂ ರಾಜರಿಗೆ, ದಿವಾನರಿಗೆ, ನವಾಬರಿಗೆ ಸಂಗೀತವನ್ನು ಉಣಬಡಿಸುವ ಜಾಯಮಾನವಲ್ಲ. ಅಷ್ಟೇ ಅಲ್ಲದೆ ನಿಂತ ನೀರಾಗದೆ ದೇಶದಾದ್ಯಂತ ಸಂಚರಿಸಿ ತಮ್ಮ ನಾದ ಸುಧೆಯನ್ನು ಹರಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ, ನಾಟಕಗಳಲ್ಲಿ, ಚಲನಚಿತ್ರಗಳಲ್ಲಿ, ಗ್ರಾಮಫೋನುಗಳ ತಟ್ಟೆಯ ಮೂಲಕ ಜನಮಾನಸವನ್ನು ತಣಿಸಿದರು. ಕನ್ನಡಿಗರ ಮನದಾಳದಲ್ಲಿ ಕೆಲವುಗೀತೆಗಳನ್ನು ಅಚ್ಚೊತ್ತಿದ್ದಾರೆ. ಅವುಗಳೆಂದರೆ– ಭಾಗ್ಯದಲಕ್ಷ್ಮಿ ಬಾರಮ್ಮ, ಎನ್ನ ಪಾಲಿಸೋ ಕರುಣಾಕರ..... ಯಾದವ ನೀ ಬಾ ಯಧುಕುಲ ನಂದನ..., ಬಂದಿತೋ ಶೃಂಗಾರ ಮಾಸಾ... ಕಾಯೋ ಕರುಣಾನಿಧೇ....., ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಹರಿಭಜನೆ ಮಾಡೋ, ಉತ್ತರ ಧೃವದಿಂ, ಬಾ ಭೃಂಗವೇ ಬಾ, ನಾನೇ ವೀಣೆ ನೀನೆ ತಂತಿ....., ಎಲೆ ಮನ ಮುರಾರಿಯನು ಕೊಂಡಾಡೋ ಇವೇ ಮುಂತಾದವು.

ಭಾರತೀಯರನ್ನು ಸಂಗೀತದ ಮೂಲಕ ಬೆಸೆದ ಭೀಮಸೇನ

ಸ್ವರ ಮಾಂತ್ರಿಕರಾದ ಭೀಮಸೇನರು ತಮ್ಮ ಸಂಗೀತದ ಕಲೆಯಿಂದ ಇಡೀ ಭಾರತೀಯರನ್ನು ಬೆಸೆದರು. ಭಾರತವು ಹಲವಾರು ಜಾತಿಗಳ, ಧರ್ಮಗಳ, ಭಾಷಿಕರ ದೇಶವಾಗಿದೆ. ದೇಶ, ಭಾಷೆ, ಜನಾಂಗಗಳನ್ನು ಒಗ್ಗೂಡಿಸುವ ಶಕ್ತಿ ಸಂಗೀತಕ್ಕಿದೆ. ಭೀಮಸೇನರು ಪುರಂದರದಾಸರ ಭಾಗ್ಯದಲಕ್ಷ್ಮಿ ಬಾರಮ್ಮ ಗೀತೆಯು ಕರ್ನಾಟಕ ಪದ್ಧತಿಯಲ್ಲಿ **'ಮಧ್ಯಮಾವತಿ'** ರಾಗದಲ್ಲಿ ಹಾಡುವುದು ಸಾಮಾನ್ಯ. ಹೀಗಾಗಿ ಕರ್ನಾಟಕದವರ ಎದೆಯಲ್ಲಿ ಈ ಸಂಗೀತವು ಬೇರುಬಿಟ್ಟಿದೆ. ಇದೇ ಭಾಗ್ಯದಲಕ್ಷ್ಮಿ ಬಾರಮ್ಮ ಗೀತೆಯನ್ನು ಹಿಂದೂಸ್ಥಾನಿ ಪದ್ಧತಿಯ **'ಬಿಭಾಸ್'** ರಾಗವನ್ನು ಆಧಾರವಾಗಿಟ್ಟುಕೊಂಡು ಹಾಡುತ್ತಿದ್ದರು. ಉತ್ತರ ಭಾರತೀಯರು ಈ ಗೀತೆಯನ್ನು ಇಷ್ಟಪಟ್ಟು ಅದನ್ನೇ ಹಾಡುವಂತೆ ಜೋಶಿಯವರನ್ನು ಒತ್ತಾಯಿಸುತ್ತಿದ್ದರು. ಇದನ್ನು ನೋಡಿದಾಗ ಸಂಗೀತಕ್ಕೆ ಹಾಗೂ ಸಂಗೀತಗಾರನಿಗೆ ಎಂತಹ ಮಾಂತ್ರಿಕ ಶಕ್ತಿ ಇದೆ ಎಂದು ತಿಳಿಯುತ್ತದೆ.

ಚಲನಚಿತ್ರ ಸಂಗೀತದಲ್ಲಿ ಭೀಮಸೇನರು

ಮೂಕಿಚಿತ್ರಗಳ ಕಾಲ ಮುಗಿದು ಟಾಕಿಚಿತ್ರಗಳು ಜನಪ್ರಿಯವಾದವು. ಚಲನಚಿತ್ರಗಳಿಗೆ ಇಂದಿನ ಕಾಲದಲ್ಲಿರುವಂತೆ ಅಶ್ಲೀಲ ಇಲ್ಲವೆ ಕೆಟ್ಟ ಸಾಹಿತ್ಯವಿರಲಿಲ್ಲ. ಸದಭಿರುಚಿಯ ಹಾಗೂ ಶಾಸ್ತ್ರೀಯ ಸಂಗೀತಕ್ಕೆ ಮನ್ನಣೆ ಇದ್ದ ಕಾಲವದು. ಪ್ರಸಿದ್ಧ ಗಾಯಕರನ್ನು ನಾಯಕ, ನಾಯಕಿಯಾಗಿ ಪಾತ್ರವಹಿಸಲು ಕೇಳಿಕೊಳ್ಳುತ್ತಿದ್ದರು. ಉದಾ: ಸರ್ವಶ್ರೇಷ್ಠ ಗಾಯಕಿ ಎಂ.ಎಸ್. ಸುಬ್ಬಲಕ್ಷ್ಮಿಯವರು 'ಮೀರಾ' ಚಿತ್ರದಲ್ಲಿ ಮೀರಾಬಾಯಿ ಪಾತ್ರವಹಿಸಿ ಅಲ್ಲಿ ಬರುವ ಮೀರಾಬಾಯಿಯ ಭಜನೆಗಳನ್ನು ತಾವೇ ಹಾಡಿದರು. ಚಲನಚಿತ್ರಗಳಿಗೆ ಭೀಮಸೇನರ ಸಂಗೀತವನ್ನು ಬಳಸಿಕೊಳ್ಳುವ ಪ್ರಯತ್ನಗಳು ನಡೆದವು. 1953ರಲ್ಲಿ ಮರಾಠಿ ಚಿತ್ರ 'ಗುಳಾಚಾ ಗಣಪತಿ' ಚಿತ್ರಕ್ಕೆ 'ಇಂದ್ರಾಯಾಣಿ ಕಾಠಿ' ಗೀತೆಯನ್ನು ಹಾಡಿದರು. ಇದು 'ಅಭಂಗ'ದಲ್ಲಿದೆ. ನಂತರ 'ಮೀ ತುಳಸಿ ತು ಝಾ ಅಂಗಣಿ' ಚಿತ್ರಕ್ಕೆ ಹಾಡಿದರು. 1956ರ ಸಂದರ್ಭದಲ್ಲಿ 'ಬಸಂತ ಬಹಾರ್' ಹಿಂದಿ ಸಿನಿಮಾಕ್ಕೆ ಹಾಡಿದ ಗೀತೆ ಇಡೀ ಭಾರತದಲ್ಲೇ ಜನಪ್ರಿಯವಾಯಿತು.

ಕನ್ನಡ ಚಲನಚಿತ್ರಗೀತೆಗಳಲ್ಲಿ ಜೋಶಿಯವರು

ಒಬ್ಬ ಸಂಗೀತಗಾರನ ಜೀವನ ಹಾಗೂ ಹೋರಾಟವನ್ನು ಕುರಿತಾದ 'ಸಂಧ್ಯಾರಾಗ' ಎಂಬ ಅ.ನ.ಕೃಷ್ಣರಾಯರ ಕಾದಂಬರಿ. ಈ ಚಿತ್ರದ ನಾಯಕ ನಟರಾಗಿ ಡಾ. ರಾಜ್‌ಕುಮಾರ್ ನಟಿಸಿದರು. ಈ ಚಿತ್ರಕ್ಕೆ ಡಾ. ಬಾಲಮುರಳಿ ಕೃಷ್ಣ ಹಾಗೂ ಜಿ.ಕೆ. ವೆಂಕಟೇಶ್‌ರವರು ಸಂಗೀತ ನಿರ್ದೇಶಕರು. ಹಿನ್ನೆಲೆ ಗಾಯನ ಪಂ. ಭೀಮಸೇನ ಜೋಶಿಯವರದು. 'ನಂಬಿದೆ ನಿನ್ನ ನಾದ ದೇವತೆಯೆ' ಎಂಬ ಹಾಡು 'ಪೂರಿಯಾ ಕಲ್ಯಾಣ' ರಾಗದಲ್ಲಿದೆ. ಈ ಹಾಡನ್ನು ಒಂದೇ ರಾಗದಲ್ಲಿ ಬೇರೆ ಬೇರೆ ಲಯಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಎಸ್. ಜಾನಕಿ, ಬಾಲಮುರಳಿಕೃಷ್ಣ ಹಾಗೂ ಪಂಡಿತ್ ಭೀಮಸೇನ ಜೋಶಿಯವರು ಹಾಡಿದ್ದಾರೆ. ಈ ಹಾಡು ಸಿನಿಮಾ ಇತಿಹಾಸದಲ್ಲೊಂದು ಮೈಲಿಗಲ್ಲು. ಜನಸಾಮಾನ್ಯರ ಬಾಯಲ್ಲಿ ಭಕ್ತಿ ಪ್ರಧಾನವಾದ ಗೀತೆಗಳು ಸಿನಿಮಾ ಎಂಬ ಸಮೂಹ ಮಾಧ್ಯಮದ ಮೂಲಕ ಜನಪ್ರಿಯಗೊಂಡವು. ಈ ಮೊದಲು ಶಾಸ್ತ್ರೀಯ ಸಂಗೀತವೆಂದರೆ ಮೂಗುಮುರಿಯುತ್ತಿದ್ದ ಜನ ಚಲನಚಿತ್ರಗಳಿಂದಾಗಿ ಜನಸಾಮಾನ್ಯರಿಗೆ ಹತ್ತಿರ ಹತ್ತಿರವಾಗತೊಡಗಿತು.

ಭೀಮಸೇನ ಜೋಶಿಯವರು ಜನಪ್ರಿಯವಾದಂತೆ ಅವರ ಸಂಗೀತಕ್ಕೆ ಬೇಡಿಕೆ ಹೆಚ್ಚಿತು. ಅವರ ಸಂಗೀತಗಳನ್ನು ಚಲನಚಿತ್ರಗಳಿಗೆ ಅಳವಡಿಸಿಕೊಂಡು

ನಿರ್ಮಾಪಕರು ಹಣ ಮಾಡತೊಡಗಿದರು. ಚಿತ್ರ ನಿರ್ದೇಶಕರು ಸಂಗೀತಮಯ ಚಿತ್ರಗಳನ್ನು ದಿಗ್ದರ್ಶಿಸತೊಡಗಿದರು. ಸಂಗೀತವನ್ನು ಚಲನಚಿತ್ರಕ್ಕೆ ಅಳವಡಿಸಲಾಗಿ ಜನಸಾಮಾನ್ಯರ ಬಾಯಲ್ಲಿ ಅವರ ಸಂಗೀತ ನಿಂತವು. ಅವುಗಳಲ್ಲಿ–

1. ನಂಬಿದೆ ನಿನ್ನ ನಾದ ದೇವತೆ (ಸಂಧ್ಯಾ ರಾಗ)
2. ತೇಲಿಸೂ ಇಲ್ಲ ಮುಳುಗಿಸೋ (ಸಂಧ್ಯಾ ರಾಗ)
3. ಗುರುವಿನ ಗುಲಾಮನಾಗುವ ತನಕ (ಯಮನ ಸೋಲು)
4. ಭಾಗ್ಯದ ಲಕ್ಷ್ಮಿ ಬಾರಮ್ಮ..... (ನೋಡಿ ಸ್ವಾಮಿ ನಾವಿರೋದೇ ಹೀಗೆ)
5. ಈ ಪರಿಯ ಸೊಬಗಾವ ದೇವರಲಿ ಕಾಣೆ (ನೋಡಿ ಸ್ವಾಮಿ ನಾವಿರೋದೇ ಹೀಗೆ)
6. ಯಾದವ ನೀ ಬಾ, ಯದುಕುಲ ನಂದನ (ಮಕ್ಕಳಿರಲವ್ವ ಮನೆತುಂಬ)

ಹಿಂದಿ ಚಿತ್ರಗೀತೆಗಳು

1. ಕೇತಕಿ ಗುಲಾಬರಿ (ಬಸಂತ ಬಹಾರ್)
2. ರಘುವರ ತುಮಕೋ ಮೇರಿರಾಜ (ಅನಕಹಿ)
3. ಕುಮಕ ರುವಕ ಪಗೆ (ಅನಕಹಿ)

ಬಂಗಾಲಿ

1. ಚಲೋ ಚಿರಂಜೀವ (ತಾನಸೇನ)
2. ಏರಿ ಮಾಯಿ ಆಜ (ತಾನಸೇನ)

ಹೀಗೆ ಇವೇ ಮುಂತಾದ ಭಾರತೀಯ ಭಾಷಾ ಚಲನಚಿತ್ರಗಳಿಗೆ ಹಿನ್ನೆಲೆ ಗಾಯಕರಾಗಿ ಹಾಡಿದ್ದಾರೆ.

ನಾಟಕಗಳಲ್ಲಿ ನಾಯಕ ನಟರಾಗಿ

ಭೀಮಸೇನ ಜೋಶಿಯವರು ಸಂಗೀತಗಾರರು ಮಾತ್ರರಲ್ಲ ನಾಟಕಕಾರರು ಎಂದರೆ ಜನಸಾಮಾನ್ಯರು ನಂಬಲಿಕ್ಕಿಲ್ಲ. ಜೋಶಿಯವರು ಗಾಯಕರೆಂದೇ ಪ್ರಸಿದ್ಧಿಯಾಗಿದ್ದಾರೆ. ಈಗಾಗಲೇ ತಿಳಿಸಿರುವಂತೆ ಜೋಶಿಯವರು ಉತ್ತಮವಾದ ಶರೀರ, ಶಾರೀರವನ್ನು ಹೊಂದಿದ್ದರೆಂದು ಈಗಾಗಲೇ ತಿಳಿಸಿದೆ. 1949ರಿಂದ 1950ರ ಸಂದರ್ಭದಲ್ಲಿ ಕೆರೂರು ವಾಸುದೇವಾಚಾರ್ಯರು ಬರೆದು ದಿಗ್ದರ್ಶಿಸಿದ

ನಾಟಕ 'ನಳದಮಯಂತಿ' ಎಂಬ ಸಂಗೀತ ಪ್ರಧಾನ ನಾಟಕದಲ್ಲಿ ನಾಯಕ ನಟರಾಗಿ ಭೀಮಸೇನರು ಮಿಂಚಿದರು. ಅವರಿಗೆ ಆಗ ಕೇವಲ 28–30ರ ತಾರುಣ್ಯ. ಅಜಾನುಬಾಹು, ಕಂಚಿನಕಂಠ ನಾಟಕಾಸಕ್ತರನ್ನು ಮೋಡಿ ಮಾಡಿದರು. ನಂತರ ಲಕ್ಷ್ಮಣರಾವ್ ಬೇಂದ್ರೆಯವರು ಬರೆದ 'ಭಾಗ್ಯಶ್ರೀ' ಮತ್ತು 'ಪರಿವರ್ತನ' ಎಂಬ ನಾಟಕಗಳಲ್ಲಿಯೂ ನಾಯಕ ನಟರಾಗಿ ಅಭಿನಯಿಸಿದರು. ಇಷ್ಟೇ ಅಲ್ಲದೆ ಶ್ರೀಮತಿ ಮುಕ್ತಾ ದೀಕ್ಷಿತ ಬರೆದ ಕೇಶವರಾವ್ ದಾತೆಯವರ ನಿರ್ದೇಶನದ 'ಜುಗಾರ' ಎಂಬ ಮರಾಠಿ ನಾಟಕದಲ್ಲಿ ನಾಯಕ ನಟರಾಗಿ ಅಭಿನಯಿಸಿದರು. ತಮ್ಮ ಸಂಗೀತವನ್ನು ನಾಟಕಕ್ಕೆ ತಕ್ಕಂತೆ ಅಳವಡಿಸಿಕೊಂಡರು.

ಇಷ್ಟೇ ಅಲ್ಲದೆ ನಾಟಕಗಳಲ್ಲಿ ಬರುವ ನಾಟ್ಯಗೀತೆಗಳು ರಾಗಗೀತೆಗಳನ್ನು ಸಂಗೀತ ನಿರ್ದೇಶನ ಮಾಡಿಯೂ ಸೈ ಎನಿಸಿಕೊಂಡರು. ಗೋಪಾಲಕೃಷ್ಣ ಭೇಜಿಯವರ 'ಧನ್ಯತೆ ಗಾಯನಿ ಕಳಾ" ಎಂಬ ನಾಟಕವು 1968ರಲ್ಲಿ ಪ್ರದರ್ಶನ ಕಂಡಿತು. ಆ ಸಂದರ್ಭದಲ್ಲಿ ಅದರ ನಾಟ್ಯಗೀತೆಗಳಿಗೆ ಸಂಗೀತ ನಿರ್ದೇಶನ ಮಾಡಿದರು.

ಧ್ವನಿ ಮುದ್ರಿಕೆಗಳಲ್ಲಿ ಭೀಮಸೇನರ ಸಂಗೀತ

ನಾದಬ್ರಹ್ಮ ಪಂಡಿತ ಭೀಮಸೇನ ಜೋಶಿಯವರು ಹಾಡಲು ಶುರು ಮಾಡಿದರೆ ಮೈಮರೆತು ನಾದದಲ್ಲಿ ಲೀನವಾಗುತ್ತಿದ್ದರು. ಅಂದಿನ ಕಾಲದಲ್ಲಿ ಅಷ್ಟು ಹೊತ್ತು ಧ್ವನಿಮುದ್ರಿಕೆ ಮಾಡುವುದು ಸಾಧ್ಯವಿಲ್ಲದ ಮಾತಾಗಿತ್ತು. ಕಾರಣವೇನೆಂದರೆ ಧ್ವನಿಮುದ್ರಿಕೆಯ ತಟ್ಟೆಯ ಅವಧಿ ಕೇವಲ ಮೂರು ನಿಮಿಷ ಮಾತ್ರ. ಉದಾ: 78 R.P.M. ಎಂದರೆ 78 Rotation Per Minute ಎಂದರ್ಥ. ಸುದೀರ್ಘವಾದ ಗಾಯನವನ್ನು ಕೇವಲ ಮೂರು ನಿಮಿಷಗಳಿಗೆ ಕಡಿತಗೊಳಿಸುವುದು ಕಷ್ಟಕರವಾದ ಮಾತಾಗಿತ್ತು. ಭೀಮಸೇನರ ಮನವೊಲಿಸಿ ಮೂರು ನಿಮಿಷಕ್ಕೆ ಹಾಡಿ ಮುಗಿಸುವಂತೆ ಕೇಳಿಕೊಳ್ಳಲಾಯ್ತು. ಅದರಂತೆ ಭೀಮಸೇನರು ಮೂರು ನಿಮಿಷಕ್ಕೆ ಮಿತಿಗೊಳಿಸಿಕೊಂಡು ಹಾಡಿದರು. ಹೀಗೆ ಹಾಡಿದ ಜನಪ್ರಿಯ ಕನ್ನಡಗೀತೆಗಳನ್ನು ಇಲ್ಲಿ ನೀಡಲಾಗಿದೆ. 'ಬಾ ಭೃಂಗವೆ ಬಾ' (ಭಾಗ ಒಂದು) ಏ ಬಾ ಬಾರೆ ಗುಣವಂತಿ (ಭಾಗ ಎರಡು) ಜನಪ್ರಿಯ ಕನ್ನಡ ಗೀತೆ 'ನನ್ನ ಹರಣ ನಿನಗೆ ಶರಣ' (ಭಾಗ ಎರಡು) ಜನಪ್ರಿಯ ಕನ್ನಡ ಗೀತೆಗಳ ಸಾಲಿನಲ್ಲಿ – 'ಕರುಣಾಕರ ನೀ ಎಂಬುವದ್ಯಾತಕೋ', 'ಬಂದಿತೋ ಶೃಂಗಾರಮಾಸಾ' ಎನ್ನ ಪಾಲಿಸೊ ಕರುಣಾಕರ..... ಕಾಯೋ ಕರುಣಾನಿಧೇ.... ಎನ್ನ ಪಾಲಿಸೋ ಕರುಣಾಕರ..... ಹರಿಭಜನೆ ಮಾಡೋ..... ಒಂದೇ ಒಂದೇ ಕರ್ನಾಟಕ ಒಂದೇ.....,

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು...., ಕರುಣಿಸೋ ರಾಗಾ..... ನಾನು ಬಡವಿ ಆತ ಬಡವ ಒಲವೆ ನಮ್ಮ ಜೀವನ.....

ಮೂರು ನಿಮಿಷದ E.P. ರೆಕಾರ್ಡುಗಳು ಬಂದವು. ಅದಕ್ಕೆ ತಕ್ಕಂತೆ ಹಾಡಿದರು ನಂತರ ಇಪ್ಪತ್ತು ನಿಮಿಷಗಳ L.P. (Long Play) ರೆಕಾರ್ಡುಗಳು (ಧ್ವನಿಮುದ್ರಿಕೆಗಳು) LPಯಲ್ಲಿ 2253ರಿಂದ 2876ರವರೆಗೆ ವಿಸ್ತರಿಸುತ್ತಾ ಬಂದರು. ಇಂತಹ ಧ್ವನಿಮುದ್ರಿಕೆಗಳಿಂದಾಗಿ ಶ್ರೋತೃಗಳು ಪಂಡಿತ ಭೀಮಸೇನ ಜೋಶಿಯವರ ಸಂಗೀತವನ್ನು ಹೋಟೆಲುಗಳಲ್ಲಿ, ಅಂಗಡಿಗಳಲ್ಲಿ ಮದುವೆ ಸಮಾರಂಭಗಳಲ್ಲಿ, ಮನೆಗಳಲ್ಲಿ ಕುಳಿತು ಕೇಳಲು ಸಹಾಯವಾಯಿತು. ಕಾಲಕ್ರಮೇಣ ದೇಶ–ವಿದೇಶಗಳಿಗೂ ಇಂತಹ ಧ್ವನಿಮುದ್ರಿಕೆಗಳನ್ನು ಕಳುಹಿಸಲು ಹಾಗೂ ಕೊಂಡೊಯ್ಯಲು ಸಹಾಯವಾಯಿತು. ಧ್ವನಿಮುದ್ರಿಕೆಗಳನ್ನು ಕೇಳಿದ ವಿದೇಶೀಯರು ಭೀಮಸೇನರ ಕಾರ್ಯಕ್ರಮಗಳನ್ನು ಆಯೋಜಿಸತೊಡಗಿದರು. ಇದರಿಂದಾಗಿ ಭಾರತಕ್ಕೆ ಸೀಮಿತವಾಗಿದ್ದ ಭೀಮಸೇನರು ಹಾರುವ, ಆಡುವ ಹಕ್ಕಿಯಂತೆ ದೇಶವಿದೇಶಗಳಿಗೆ ಸಂಚರಿಸ ತೊಡಗಿದರು.

ದೇಶ ವಿದೇಶ ಸಂಚಾರ

ಈಗಾಗಲೇ ತಿಳಿಸಿರುವಂತೆ ಹಾಡುವ, ಹಾರುವ ಹಕ್ಕಿಯು ದೇಶ–ವಿದೇಶಗಳಲ್ಲಿ ಪಂಡಿತ ಪಾಮರರೆನ್ನದೆ ತಮ್ಮ ಸಂಗೀತ ಸುಧೆಯನ್ನು ಉಣಿಸುತ್ತಾ ಸಾಗಿದರು. ಅವರ ಗಾನಮಾಧುರ್ಯಕ್ಕೆ ತಲೆದೂಗದವರಿಲ್ಲ. ಕರ್ನಾಟಕದ ಗುಲ್ಬರ್ಗ, ಶಹಬಾದ್, ಶಹಾಪುರ, ಸುರಪುರ, ಅಳಂದ, ಚಿತ್ರದುರ್ಗ, ದೇವಗೇರಿ, ಯಾದಗಿರಿ, ಚಿಂಚೋಳಿ, ಗೋಕಾಕ, ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ ಸೇರಿದಂತೆ ಊರುಕೇರಿಗಳಲ್ಲಿ ತಮ್ಮ ಗಾನಸುಧೆಯನ್ನು ಹರಿಸಿದರು. ಆಂಧ್ರದ–ವಾರಂಗಲ್, ವಿಶಾಖಪಟ್ಟಣ, ಹೈದರಾಬಾದ್, ಸಿಕಂದರಾಬಾದ್, ಗುಂಟೂರು, ಕಡಪ, ಕರ್ನೂಲುಗಳು, ಕೇರಳದ– ಕಾಸರಗೋಡು, ಕ್ಯಾಲಿಕಟ್, ಕಣ್ಣೂರು, ತಿರುವನಂತಪುರಂ, ಕೊಚಿನ್, ಎರ್ನಾಕುಲಂ ಪ್ರದೇಶಗಳು. ತಮಿಳುನಾಡಿನ– ಮದ್ರಾಸ್, ಮಧುರೈ, ಕಂಚಿ, ತಂಜಾವೂರು, ಕನ್ಯಾಕುಮಾರಿ ಸೇರಿದಂತೆ ಬಿಹಾರ, ಮಹಾರಾಷ್ಟ್ರ, ರಾಜಸ್ಥಾನ, ನಾಗಾಲ್ಯಾಂಡ್, ಹಿಮಾಚಲ ಪ್ರದೇಶ, ಪಂಜಾಬ್, ಜಲಂಧರ್, ಪಟಿಯಾಲ ಹೀಗೆ ದೇಶದ ಮೂಲೆ ಮೂಲೆಗಳಲ್ಲಿ ತಮ್ಮ ಸಂಗೀತದ ಬೈಠಕ್‌ಗಳನ್ನು ನಡೆಸಿ ಕೋಟ್ಯಾಂತರ ಸಂಗೀತ ಪ್ರೇಮಿಗಳಿಗೆ ರಸದೌತಣವನ್ನು ನೀಡಿದರು. ವಿದೇಶಗಳಲ್ಲೂ ಕೂಡ ತಮ್ಮ ಗಾನಸುಧೆಯನ್ನು ಹರಿಸಿದರು. ಅವುಗಳು ಇಂತಿವೆ:

ಇಂಗ್ಲೆಂಡ್	ಮಿನಿಯಾಪಾಲಿಸ್
ಲಂಡನ್	ಶಿಕಾಗೋ ಇತ್ಯಾದಿ
ಮ್ಯಾಂಚೆಸ್ಟರ್	ಕೆನಡಾ
ಬರ್ಮಿಂಗ್‌ಹ್ಯಾಮ್	ಮಾಂಟ್ರೀಯಲ್
ಐರ್ಲೆಂಡ್	ಓಟಾವಾ
ನ್ಯೂಯಾರ್ಕ್	ಟೋರಾಂಟೊ
ನ್ಯೂಜೆರ್ಸಿ	ಫ್ರಿಡ್ರಿಕಟನ್
ಬಾಸ್ಟಿನ್	ವ್ಯಾಂಕೂವರ್
ಫಿಲಿಡೆಲ್ಫಿಯಾ	ಕಲಗ್ಯಾರಿ
ಪೀಟರ್ಸ್‌ಬರ್ಗ್	ಪ್ಯಾರಿಸ್
ಕೊಲಂಬಿಯ	ಜರ್ಮನಿ

ಚಲನಚಿತ್ರ ಗೀತೆಗಳು

ಖಯಾಲ ಗಾಯಕರಾದ ಪಂಡಿತ್‌ಜಿ ಸಿನಿಮಾಕ್ಕಾಗಿಯೂ ಹಾಡಿದ್ದಾರೆ. ಉಪಶಾಸ್ತ್ರೀಯ ಸಂಗೀತ, ಧೃತಲಯದ ಬಂದೀಶ, ಭಕ್ತಿಗೀತೆ –ಹೀಗೆ ಶಾಸ್ತ್ರೀಯ ಸಂಗೀತದ ತಳಪಾಯದ ಮೇಲೆ ನಿಂತ ಅತ್ಯಂತ ಜನಪ್ರಿಯ ಗೀತೆಗಳು. ಅವರ ದನಿಯಲ್ಲಿ ಮೊಳಗಿವೆ. "ಇಂದ್ರಾಯಣಿ ಕಾಠಿ"ಯಂತೂ ಮುಂದೆ ಪ್ರಚಂಡ ಜನಪ್ರಿಯವಾದ 'ಸಂತವಾಣಿ' ಕಾರ್ಯಕ್ರಮಗಳ "ಪ್ರಸ್ಥಾನಬಿಂದು" ವಾಗಿಬಿಟ್ಟಿತ್ತೆನ್ನಬಹುದು.

	ಮರಾಠಿ ಹಾಡು	ಚಿತ್ರ
1.	ಇಂದ್ರಾಯಣಿ ಕಾಠಿ ದೇವಾಜಿ ಆಳಂದಿ	ಗುಳಾಚಾ ಗಣಪತಿ 1953
2.	ಆಜ ಮನ ಲಾಮ್ಯೊ ಲಂಗರವಾ	– " –
3.	ಪಿಯಾ ಮಿಲನಕಿ ಆಸ	ಮಿ ತುಳಸ ತುರಝ್ಯಾ ಆಂಗಣಿ 1955
4.	ಗಾವೂ ಕೋಣತೆ ಗೀತ ರಸಿಕಾ	– " –
5.	ಸಂಪಲೆ ಜೀವನ, ಸಂಪಲಿ ಹಿ ಗಾಥಾ	– " –
6.	ಪಿಯಾ ಬಿನ್ ನಹಿ ಆವತ ಚೈನ	ಪತಿವ್ರತಾ 1959
7.	ಮೋರೆ ಘರ ಆವೋ ಪ್ರೀತಮ ಪ್ಯಾರೆ	ಭೈರವಿ 1960

8.	ಆಜ ಮೋರೆ ಮನ ಲಾಮ್ಯೊ	ಸುವಾಸಿನಿ 1961
9.	ದೇವ ದಯೆಚಾ ಅಥಾಂಗ ಸಾಗರ	ಕ್ಷಣ ಆಲಾ ಭಾಗ್ಯಾಚಾ 1962
10.	ರಮ್ಯ ಹಿ ಸ್ವರ್ಗಾಹುನಿ ಲಂಕಾ	ಸ್ವಯಂವರ ಝೂಲೆ ಸೀತೆಚೆ 1964
11.	ರಂಗಲಿ ಆಜ ಜುಗಲಬಂದಿ	ಸೇರಾಸ್ ಸವ್ವಾಸೇರ 1966
12.	ಟಾಳ ಬೋಲೆ ಚಿಪಳಿಲಾ ನಾಚ ಮಾಝ್ಯಾ ಸಂಗ	ಭೋಳಿ ಭಾಬಡಿ 1973
13.	ರಾತ್ರಂದಿನ ಆಮ್ಹಾ ಯುದ್ಧಾಚಾ ಪ್ರಸಂಗ	ರಾಜಾ ಶಿವಚತ್ರಪತಿ 1974
14.	ವಿಠ್ಠಲಾಚಿ ಪಾಯಿ ಥರಾರಲಿ ವೀಟ	ದೇವಕಿನಂದನ ಗೋಪಾಲಾ 1977
15.	ಪಂಢರಾಚಿವಾರಿ ಜಯಾಚಿಯೆ ಕುಳಿ	ಪಂಢರಾಚಿವಾರಿ 1988
16.	ಪಂಢರಾಚಿವಾರಿ ಜಯಾಚಿಯೆ ಕುಳಿ	ಸಂತ ತುಳಸೀದಾಸ 1972
17.	ಪಂಢರಾಚಿವಾರಿ ಜಯಾಚಿಯೆ ಕುಳಿ	ರೇಶಮಗಾಠಿ 1988
	ಹಿಂದಿ ಹಾಡು	**ಚಿತ್ರ**
1.	ಕೇತಕಿ ಗುಲಾಬಕಿ (ಮನ್ನಾಡೆ ಜೊತೆಗೆ ಹಾಡು)	ಬಸಂತ ಬಹಾರ
2.	ರಘುವರ ತುಮಕೋ ಮೇರಿರಾಜ	ಅನಕಹಿ
3.	ಝುಮಕ ಝುವಕ ಪಗ (ಪಾರ್ಶ್ವಗಾಯಕ ರಾಷ್ಟ್ರೀಯ ಪುರಸ್ಕಾರ)	ಅನಕಹಿ
	ಕನ್ನಡ ಹಾಡು	**ಚಿತ್ರ**
1.	ನಂಬಿದೆ ನಿನ್ನ ನಾದ ದೇವತೆ (ಪುರಿಯಾ ಕಲ್ಯಾಣ)	ಸಂಧ್ಯಾರಾಗ
2.	ತೇಲಿಸೊ ಇಲ್ಲ ಮುಳುಗಿಸೋ (ದೇಸಿ)	
3.	ಗುರುವಿನ ಗುಲಾಮನಾಗುವ ತನಕ (ಯಮನ)	
4.	ಈ ಪರಿಯ ಸೊಬಗಾವ ದೇವರಲಿ	
5.	ಭಾಗ್ಯದ ಲಕ್ಷ್ಮೀ ಬಾರಮ್ಮಾ	ನಾವಿರೋದು ಹೀಗೆ ಸ್ವಾಮಿ

ಬಂಗಾಲಿ

1. ಚಲೋ ಚಿರಂಜೀವ (ದರಬಾರಿ) ತಾನಸೇನ
2. ಏರಿ ಮಾಯಿ ಆಜ (ತೋಡಿ) – " –

ಇವಲ್ಲದೆ, ಶ್ಯಾಮ ಬೆನಗಲರ ನೆಹರೂ ಸಾಕ್ಷ್ಯಚಿತ್ರಕ್ಕೆ ಗಾಯನ, ಮಿಲೇ ಸುರೆ ಮೇರಾ ತುಮ್ಹಾರಾ, ಜನಗಣಮನ, ವಂದೇಮಾತರಂ (ಭಾರತಬಾಲಾ ನಿರ್ಮಿತಿ) ಇತ್ಯಾದಿ.

ನಾಟ್ಯಗೀತಕ್ಕೆ ಸಂಗೀತ ನಿರ್ದೇಶನ

ಗೋಪಾಲಕೃಷ್ಣ ಭೋಬೆಯವರ "ಧನ್ಯತೆ ಗಾಯನಿ ಕಳಾ" ನಾಟಕ 1968ರಲ್ಲಿ ಪ್ರದರ್ಶನವಾಯಿತು. ಅದರ ಹಾಡುಗಳ ಸಂಗೀತ ನಿರ್ದೇಶನ ಪಂಡಿತ್‌ಜೀ ಮಾಡಿದ್ದು, ಅವು ಹೀಗಿವೆ:

1. ರಾಗ ಶುದ್ಧ ಕೇದಾರ
   ಸೋಹೆ ಲಲಾರಿ
   ಮೋರ ಬುಲಾಯಿ ಸಾವನಕಿ
2. ರಾಗ ಬಾಗೇಶ್ರಿ
   ದಾನಕರೀ, ರೆ, ಗುರು ಅತಿಪಾವನ
3. ರಾಗ ಲಲತ ಭಾಟಿಯಾರ
   ಬೇರಂಜಿವ ರಾಹೋ ಜಗೀ
   ರಾಮನಾಮ
4. ರಾಗತೋಡಿ
   ಭವಾನಿ ಜಗತ ಜನನಿ (ಧೃತ ಏಕತಾಳ)
5. ರಾಗ ಬಸಂತ
   ಭಲಿರಿ ಮಾಯಿ ದೌಡಿ
   (ಧೃತ ತೀನತಾಳ)
6. ರಾಗ ಮಾರವಾ
   ಹೇ ಕರುಣಾಕರಾ, ಈಶ್ವರಾ (ತೀನತಾಳ)
7. ರಾಗ ಮುಲ್ತಾನಿ
   ಆಸ ಮೋರೆ ಮನಕಿ

8. ರಾಗ ಕಲಾಶ್ರೀ
ಧನಧನ ಭಾಗ ಸುಹಾಗ ತೇರೋ
(ಧೃತ ತೀನತಾಳ)

9. ರಾಗ ದೀಪ
ಜಲ ಜಾ ಅಗನಕಿ ಜ್ವಾಲಾ

10. ರಾಗ ಭೈರವಿ
ಸಾಂಜವಾತ ಮಮ ಗಾತ ಭೈರವಿ

ಪಾತ್ರವಹಿಸಿದ ನಾಟಕಗಳು

ದಿ. ಕೆರೂರು ವಾಸುದೇವಾಚಾರ್ಯರು ಬರೆದ ಸಂಗೀತ ಪ್ರಧಾನ ನಾಟಕ "ನಳ ದಮಯಂತಿ" ಹಾಗೂ ದಿ. ಶ್ರೀ ಲಕ್ಷ್ಮಣರಾವ್ ಬೇಂದ್ರೆ ಬರೆದ "ಭಾಗ್ಯಶ್ರೀ" ಮತ್ತು "ಪರಿವರ್ತನ" ನಾಟಕಗಳಲ್ಲಿ ಪಂಡಿತ ಭೀಮಸೇನಜೋಶಿ ನಾಯಕ ನಟನಾಗಿ ನಟಿಸಿದ್ದರು. ನಾಯಕ ನಟಿ ಕುಮಾರಿ ವತ್ಸಲಾ ಮುಧೋಳಕರ ಕನ್ನಡ ಸಂಭಾಷಣೆಗಳನ್ನು ಮರಾಠಿಯಲ್ಲಿ ಬರೆದುಕೊಂಡು ಕಂಠಪಾಠ ಮಾಡಿದ್ದರು. ಎಲ್ಲ ಪದಗಳಿಗೂ ಧಾಟಿ ಹಚ್ಚಿ, ಇತರ ಪಾತ್ರಧಾರಿಗಳಿಗೆ ಹಾಡಲು ಕಲಿಸಿ, ಸ್ವತಃ ಪಂಡಿತ್‌ಜೀ ಬಹಳಷ್ಟು ಹಾಡುಗಳನ್ನು ಹಾಡಿದ್ದರೂ ದಾಖಲೆಯಾಗಿ ಉಳಿದಿದ್ದು ಮೂರು ನಿಮಿಷಗಳ ರೆಕಾರ್ಡುಗಳು ಮಾತ್ರ.

ಶ್ರೀಮತಿ ಮುಕ್ತಾ ದೀಕ್ಷಿತ ಬರೆದ, ಕೇಶವರಾವ ದಾತೆಯವರ ನಿರ್ದೇಶನದ "ಜುಗಾರ" ಎಂಬ ಮರಾಠಿ ನಾಟಕದಲ್ಲಿ ನಾಯಕ ನಟನಾಗಿ ಅಭಿನಯಿಸಿದ್ದರು.

ಸಾಕ್ಷ್ಯಚಿತ್ರಗಳು

1. ವಿಕಾಸ ದೇಸಾಯಿ ತಯಾರಿಸಿದ FTII ಯ ಡಿಪ್ಲೋಮಾ ಫಿಲ್ಮ್
2. ಮಿಯಾಮಲ್ಹಾರ – ಜೇಮ್ಸ್ ಬೆವರಿಜ್–New York University ಪರವಾಗಿ
3. ಗುಲ್ಜಾರ್ ತಯಾರಿಸಿದ ಚಿತ್ರ – Films Division ಪರವಾಗಿ
4. ರವೀಂದ್ರ ಮಂಕಣಿ ತಯಾರಿಸಿದ ಚಿತ್ರ – ದೂರದರ್ಶನದ ಪರವಾಗಿ

ಜೀವನ-ಸಾಧನೆ

ಪಂಡಿತ್‌ಜೀಯವರ ಜೀವನದ ಮುಖ್ಯ ಘಟನೆಗಳನ್ನು ಮತ್ತು ಮಹತ್ವದ ಪ್ರಶಸ್ತಿ, ಸನ್ಮಾನಗಳನ್ನು ಇಲ್ಲಿ ನಮೂದಿಸಲಾಗಿದೆ. ಇನ್ನೂ ಅನೇಕಾನೇಕ ಪ್ರಶಸ್ತಿ ಸನ್ಮಾನಗಳು ಬಂದಿವೆ.

1922 ಫೆ. 4	ಜನನ ರೋಣದಲ್ಲಿ. (ರಥಸಪ್ತಮಿ)
1931	ಪಂ. ಜವಾಹರಲಾಲ್ ನೆಹರು ಎದುರು ಸಭೆಯಲ್ಲಿ "ವಂದೇ ಮಾತರಂ" ಹಾಡಿದರು ಗದುಗಿನಲ್ಲಿ ಸೆಪ್ಟೆಂಬರ್ ಮನೆ ಬಿಟ್ಟು ಹೋಗಿದ್ದು.
1936	ಪುಣೆ, ಮುಂಬೈ, ಗ್ವಾಲಿಯರ್ ಕಲಕತ್ತಾ, ಜಲಂಧರ ಮುಂತಾದ ಕಡೆ ಹೋಗಿ ತಿರುಗಿ ಬಂದದ್ದು (ಎರಡೂವರೆ ವರ್ಷ)
1938-1941/42	ಸವಾಯಿ ಗಂಧರ್ವರ ಮನೆಯಲ್ಲಿ, ಕುಂದಗೋಳ ಗುರುಕುಲ ಪದ್ಧತಿಯಲ್ಲಿ ಶಿಕ್ಷಣ
1941	ಸವಾಯಿ ಗಂಧರ್ವರಿಂದ ಗಂಡಾಬಂಧನ
1941-42	ನೌಕರಿ - ಲಖನೌ ಆಕಾಶವಾಣಿ ಕೇಂದ್ರ
1943	ಹಾಡಿನ ಒಪ್ಪಂದ-ಮುಂಬೈ ಮತ್ತು ನಿಜಾಮ ರೇಡಿಯೋ
1943	ಮೊದಲನೆಯ ಮದುವೆ, ಸುನಂದಾ ಜೊತೆಗೆ
1946	ಸವಾಯಿ ಗಂಧರ್ವ 60ನೇ ವರ್ಷ ಪೂರ್ಣ ಸಮಾರಂಭದ ನಿಮಿತ್ತ ಪುಣೆಯಲ್ಲಿ ಗಾಯನ
1946	ಮೂರು ನಿಮಿಷಗಳ ರಾಗ ಸಂಗೀತ ಕನ್ನಡ ಗೀತೆಗಳ ರಿಕಾರ್ಡಿಂಗ್
1948-49	ಕಲಕತ್ತಾದಲ್ಲಿ ಪ್ರಥಮ ಬಾರಿ ಗಾಯನ
1948-50	ಕನ್ನಡ ಸಂಗೀತ ನಾಟಕಗಳಲ್ಲಿ ನಾಯಕನ ಪಾತ್ರ -ಯಶಸ್ವೀ ಪ್ರಯೋಗಗಳು
1951	ಎರಡನೆಯ ಮದುವೆ - ವತ್ಸಲಾ ಜೊತೆಗೆ
1953	ಸವಾಯಿ ಗಂಧರ್ವರ ಮೊದಲನೇ ಪುಣ್ಯತಿಥಿ ಸಂಗೀತ ಕಾರ್ಯಕ್ರಮ
1954	ಆಕಾಶವಾಣಿ ಪ್ರಥಮ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ
1954	ರಾಮೇಶ್ವರ ಮಂದಿರ, ಪುಣೆಯ ಬ್ರಹ್ಮವೃಂದದಿಂದ "ಪಂಡಿತ" ಬಿರುದು

1960	ಪ್ರಥಮ L.P. ಮುದ್ರಿಕೆ
1962	ಉಸ್ತಾದ ಬಡೇಗುಲಾಂ ಅಲೀಖಾನ ಪ್ರಶಸ್ತಿ
1964	"ಗಾಯನಾಚಾರ್ಯ" ಅಖಿಲ ಭಾರತೀಯ ಪ್ರಶಸ್ತಿ
1964	ಪ್ರಥಮ ವಿದೇಶ ಯಾತ್ರೆ- ಅಫಘಾನಿಸ್ಥಾನಕ್ಕೆ; ಭಾರತದ ಸಾಂಸ್ಕೃತಿಕ ತಂಡದ ಭಾಗವಾಗಿ ಹೋದರೂ ರಾಜನ ವಿಶೇಷ ಆಮಂತ್ರಣವೂ ಇತ್ತು. ಗಂಧರ್ವ ಮಹಾವಿದ್ಯಾಲಯದಿಂದ ಬಿರುದು
1972	"ಸಂಗೀತ ರತ್ನ" ಶ್ರೀ ರಾಘವೇಂದ್ರಸ್ವಾಮಿ ಪೀಠದಿಂದ
1972	ಪದ್ಮಶ್ರೀ – ಭಾರತ ಸರಕಾರ
1972	ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ
1970	"ಸ್ವರ ಭಾಸ್ಕರ" ಪ್ರಶಸ್ತಿ
1972	ಪ್ರಥಮ "ಸಂತವಾಣಿ" ಕಾರ್ಯಕ್ರಮ
1974	ಮಿಯಾ ತಾನಸೇನ ಪ್ರಶಸ್ತಿ
1974	"ಸಂಗೀತಾಚಾರ್ಯ" –ಜಯಪುರ ಗಂಧರ್ವ ಮಹಾವಿದ್ಯಾಲಯದಿಂದ
1975	ಸರ್ವೋತ್ತಮ ಪಾರ್ಶ್ವಗಾಯನ ನ್ಯಾಶನಲ್ ಫಿಲಂ ಫೆಸ್ಟಿವಲ್
1975	ಮಹಾರಾಷ್ಟ್ರ ವಿಧಾನ ಪರಿಷತ್ ಸನ್ಮಾನ
1976	ಸ್ಕ್ರೋಲ್ ಆಫ್ ಆನರ್– ಶ್ರೀ ಕೋನಾ ಪ್ರಭಾಕರ ರಾವ್ ಅವರಿಂದ
1976	ಡಿ.ಲಿಟ್ – ಗುಲಬರ್ಗಾ ವಿದ್ಯಾಪೀಠ
1978	ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ
1978	"ದಕ್ಷಿಣಿ ಬಾರ್ತಾ" ಕಲಕತ್ತಾ
1979	ಪದ್ಮಭೂಷಣ, ಭಾರತ ಸರಕಾರ
1979	ಅಭಿನಂದನಾ ಪತ್ರ, ಕಾನಪೂರ ಮಹಾನಗರ ಪಾಲಿಕೆ

1990	ಮಹಾರಾಷ್ಟ್ರ ಗೌರವ ಪುರಸ್ಕಾರ
1991	ತಾನಸೇನ ಪುರಸ್ಕಾರ, ತಾನಸೇನ ಸಮಾರೋಹ ಮಧ್ಯಪ್ರದೇಶ
1991	ಶ್ರೀಮತಿ ಸುನಂದಾ ಭೀಮಸೇನ ಜೋಶಿ ನಿಧನ
1992	ದೀನಾನಾಥ ಮಂಗೇಶಕರ ಪುರಸ್ಕಾರ
1993	ಡಿ.ಲಿಟ್ –ಟಿಳಕ ಮಹಾರಾಷ್ಟ್ರ ವಿದ್ಯಾಪೀಠದಿಂದ
1996	ಪುಣೆ ಮಹಾನಗರ ಪಾಲಿಕೆಯಿಂದ ಸನ್ಮಾನ
1996	ಪದ್ಮಭೂಷಣ –ತ್ರಿದಲ ಸಂಸ್ಥೆ, ಪುಣೆಯ ಪ್ರಥಮ ಪ್ರಶಸ್ತಿ
1996	ಪುಣೆ ಫೆಸ್ಟಿವಲ್ ಸನ್ಮಾನ
1997	ಅಮೃತ ಮಹೋತ್ಸವ –ಗೌರವ ಗ್ರಂಥ "ಸ್ವರಾಧಿರಾಜ" ಬಿಡುಗಡೆ ಮತ್ತು ಸನ್ಮಾನ
1999	ಪದ್ಮವಿಭೂಷಣ – ಭಾರತ ಸರಕಾರ
1999	ಕಲಕತ್ತಾ ಮಹಾನಗರ ಪಾಲಿಕೆಯಿಂದ ಸನ್ಮಾನ
2001	ಭೀಮಸೇನ ಜೋಶಿ ಪೀಠ –ಪುಣೆ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ
2002	ಮಹಾರಾಷ್ಟ್ರ ಭೂಷಣ – ಮಹಾರಾಷ್ಟ್ರ ರಾಜ್ಯದ ಅತ್ಯುನ್ನತ ಪ್ರಶಸ್ತಿ
2002	ಸ್ವಾತಿ ತಿರುನಾಳ ಪ್ರಶಸ್ತಿ – ಕೇರಳ ರಾಜ್ಯದ ಅತ್ಯುನ್ನತ ಪ್ರಶಸ್ತಿ
2003	"ಡಿ.ಲಿಟ್" ಕರ್ನಾಟಕ ವಿಶ್ವವಿದ್ಯಾಲಯ
2004	ಕರ್ನಾಟಕ ರತ್ನ – ಕರ್ನಾಟಕ ರಾಜ್ಯದ ಅತ್ಯುನ್ನತ ಪ್ರಶಸ್ತಿ
2005	ಶ್ರೀಮತಿ ವತ್ಸಲಾ ಭೀಮಸೇನ ಜೋಶಿ ನಿಧನ
2007	ಸ್ವಾಮಿ ಹರಿವಲ್ಲಭದಾಸ ಪುರಸ್ಕಾರ
2009	ಭಾರತರತ್ನ – ಭಾರತ ಸರಕಾರ

ಹೀಗೆ ಪಂಡಿತ ಭೀಮಸೇನ ಜೋಶಿಯವರು ಮನೆಯಲ್ಲಿ ಅಮ್ಮ ಊಟಕ್ಕೆ ತುಪ್ಪ ಕಡಿಮೆ ಹಾಕಿದರು ಎಂಬ ನೆಪಮಾಡಿಕೊಂಡು ಊರುಬಿಟ್ಟು ತಿರುಗಿ ಸಂಗೀತ ಗುರುಗಳಿಗಾಗಿ ಹುಡುಕಾಟ ಮಾಡಿದರು. ಸರ್ವಜ್ಞ ಹೇಳುವಂತೆ "ಸರ್ವಜ್ಞನೆಂಬುವನು ಗರ್ವದಿಂದಾದವನಲ್ಲ. ಸರ್ವರೊಳಗೊಂದೊಂದು ನುಡಿ ಕಲಿತು ಸರ್ವಜ್ಞನಾದ....." ಎನ್ನುವಂತೆ ಇಡೀ ಭಾರತವನ್ನು ಸುತ್ತಿ ಸಂಗೀತಗಾರರ ಸಂಗೀತವನ್ನು ಕೇಳಿ ಅವರ ನೈಪುಣ್ಯತೆಯನ್ನು ಆರಿಸಿಕೊಂಡರು. ಭೀಮಸೇನರು ರಾತ್ರೋರಾತ್ರಿ ಸಂಗೀತಗಾರರಾಗಲಿಲ್ಲ. ಸುಮಾರು ಏಳು ದಶಕಗಳ ಕಾಲ ತಮ್ಮ ನಿರಂತರ ಪರಿಶ್ರಮ, ಚಿಂತನ-ಮಂಥನ ಪ್ರಯೋಗಶೀಲತೆ, ನೈಪುಣ್ಯತೆಗಳನ್ನು ಅಳವಡಿಸಿಕೊಂಡರು. ಸಂಗೀತ, ಭಜನೆ, ದಾಸವಾಣಿ, ಸಂತವಾಣಿ, ಭಕ್ತಿಗೀತೆಗಳನ್ನು ಹಾಡುತ್ತಾ ಭಾರತ ಮಾತ್ರವಲ್ಲ ಜಗತ್ತಿನ ಹಲವಾರು ರಾಷ್ಟ್ರಗಳನ್ನು ಸುತ್ತಿ ಕೋಟ್ಯಾಂತರ ಸಂಗೀತ ಪ್ರಿಯರನ್ನು ತಣಿಸಿದರು. ಅವರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆತವು (ಪ್ರತ್ಯೇಕ ಪಟ್ಟಿ ಮಾಡಲಾಗಿದೆ) ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತರತ್ನ' ಪ್ರಶಸ್ತಿ ಕರ್ನಾಟಕದ ಅತ್ಯುನ್ನತ ಪ್ರಶಸ್ತಿಯಾದ 'ಕರ್ನಾಟಕ ರತ್ನ' ಪ್ರಶಸ್ತಿ ಸೇರಿದಂತೆ ಅವರ ಕಿರೀಟಕ್ಕೆ ಹಲವಾರು ಚಿನ್ನದ ಗರಿಗಳು ಸೇರಿವೆ. ಅವರು ಬದುಕಿರುವಾಗಲೇ ದಂತಕಥೆಯಾಗಿದ್ದ ಪಂಡಿತ್ ಭೀಮಸೇನರು ತಮ್ಮ 89ನೇ ವಯಸ್ಸಿನಲ್ಲಿ ಅಂದರೆ 2011ರಲ್ಲಿ ತನ್ನ ಕೆಲಸ ಮುಗಿಯಿತು ಎಂದು ಹೇಳಿ ಬದುಕಿಗೆ ವಿದಾಯ ಹೇಳಿದರು.

ಗಂಗೂಬಾಯಿ ಹಾನಗಲ್

ಕರ್ನಾಟಕದಲ್ಲಿ ಹುಟ್ಟಿ ನಾಡಿನ ಹೆಸರನ್ನು ದೇಶ ವಿದೇಶಗಳಿಗೆ ಹಬ್ಬಿಸಿದ ಸ್ವರ ಸಾಮ್ರಾಜ್ಞಿ ಗಂಗೂಬಾಯಿ ಹಾನಗಲ್. ಗಾಂಧಾರಿಯಾಗಿ ಹುಟ್ಟಿ, ಗಂಗಾಬಾಯಿ, ಗಂಗೂಬಾಯಿ ಹುಬ್ಳಿಕರ್ ಆಗಿ ಗಂಗೂಬಾಯಿ ಹಾನಗಲ್ ಆಗಿ ಗಂಗಜ್ಜಿಯಾಗಿ ಸಂಗೀತ ಲೋಕದಲ್ಲಿ ಗಂಗೆಯಷ್ಟೇ ಅಮರಳಾಗಿ ಉಳಿದಿರುವ ಗಂಗೂಬಾಯಿ ಹಾನಗಲ್. ಸಂಗೀತ ಗಂಗೆ, ಗಾಯನ ಗಂಗೆ, ಸ್ವರ ಸಾಮ್ರಾಜ್ಞಿ, ಗಾನವಿದೂಷಿ, ಸಂಸ್ಕೃತಿಯ ಕಳಸ, ಸ್ವರ ಸರಸ್ವತಿ ಭಾರತದ ಸಂಗೀತ ರಾಯಭಾರಿ ಎಂದೆಲ್ಲ ಅಭಿಮಾನಿಗಳು ಹಾಗೂ ನೇತಾರರಿಂದ ಕರೆಸಿಕೊಂಡ ಗಂಗೂಬಾಯಿ ಹಾನಗಲ್. ಕಷ್ಟದಲ್ಲಿ ಹುಟ್ಟಿ, ಕಷ್ಟದಲ್ಲೇ ಬೆಳೆದರೂ ಶಾಸ್ತ್ರೀಯ ಸಂಗೀತವನ್ನು ಅದರಲ್ಲೂ ಹಿಂದೂಸ್ಥಾನಿ ಸಂಗೀತವನ್ನು ಶ್ರೀಮಂತಗೊಳಿಸಿದ ಕನ್ನಡಾಂಬೆಯ ಪುತ್ರಿ, ನಿರಾಣಾಘರಾಣಾದ ನಕ್ಷತ್ರ. ಮಾರವಾ, ಕಲಾವತಿ ರಾಗಗಳನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಗಂಗಜ್ಜಿ ಸಂಗೀತದಲ್ಲಿ ತಮ್ಮದೇ ಛಾಪು ಮೂಡಿಸಿದರು. ಬಡಕಲು ಶರೀರ (ಶರೀರ=ಮೈ, ದೇಹ) ಧೀಮಂತ ಶಾರೀರ (ಶಾರೀರ= ಕಂಠದ ಇಂಪು, ನಾದ, ಮಾಧುರ್ಯ) ಸರಳ ಸಜ್ಜನಿಕೆಯ ಸಾಕಾರಮೂರ್ತಿ ತನ್ನ ತೊಂಬತ್ತಾರನೆಯ ವಯಸ್ಸಿನವರೆಗೂ ಎಳ್ಳಷ್ಟು ಹಮ್ಮುಬಿಮ್ಮನ್ನು ಕಾಣದ ಹೆಣ್ಣುಮಗಳು. ಸಂಗೀತ, ನೃತ್ಯ, ನಾಟಕಗಳಲ್ಲಿ ಪಾತ್ರವಹಿಸುವುದು ಕೀಳರಿಮೆ ಎಂಬ ಕಾಲದಲ್ಲಿ ಹುಟ್ಟಿ ಕೀರ್ತಿಯ ಉತ್ತುಂಗ ಶಿಖರಕ್ಕೇರಿದ ಸಂಗೀತ ಸರಸ್ವತಿ.

ಸಂಗೀತಗಾರರ ಮನೆತನ

ಗಂಗೂಬಾಯಿ ಹಾನಗಲ್ಲರು 1913ರ ಮಾರ್ಚ್ 5ರಂದು ಧಾರವಾಡದ ಶುಕ್ರವಾರಪೇಟೆಯಲ್ಲಿ ಜನಿಸಿದರು. ತಾಯಿ ಅಂಬಾಬಾಯಿ ತಂದೆ ಚಿಕ್ಕುರಾವ್-ನಾಡಗೀರ್. ಗಂಗೂಬಾಯಿಯ ಮೊದಲ ಹೆಸರು ಗಾಂಧಾರಿ ಇವರು ಗಂಗಾಮತಸ್ಥರು, ಗಂಗೂಬಾಯಿಯ ಮುತ್ತಜ್ಜಿಯ ಹೆಸರು ಗಂಗವ್ವ, ಇವರ ಪೂರ್ವಿಕರು ಮೊದಲು ನರಗುಂದದಲ್ಲಿದ್ದರು. ಕಾರಣಾಂತರಗಳಿಂದಾಗಿ ಹಾವೇರಿ ಜಿಲ್ಲೆಯ ಹಾನಗಲ್ಲಿಗೆ ಬಂದು ನೆಲೆಸಿದರು. ಗಂಗೂಬಾಯಿಯವರ ತಾಯಿ ಅಂಬಾಬಾಯಿ ಕನ್ನಡ ಸಂಗೀತ ವಿದುಷಿಯಾಗಿದ್ದರು. ದ.ರಾ.ಬೇಂದ್ರೆಯವರೊಮ್ಮೆ ಲೋಕಾಭಿರಾಮವಾಗಿ ಮಾತನಾಡುತ್ತಾ ನಮ್ಮ ತಾಯಿಯವರ ಹೆಸರೂ ಅಂಬಾಬಾಯಿ. ನಿಮ್ಮ ತಾಯಿಯವರ ಹೆಸರೂ ಅಂಬಾಬಾಯಿ ನಾವಿಬ್ಬರೂ ಅಂಬಾಬಾಯಿ ಮಕ್ಕಳು ಎಂದು ಹೇಳುತ್ತಿದ್ದರು. ಗಂಗೂಬಾಯಿ ಹುಬ್ಳಿಕರ್ ಎಂದು ಹೆಸರಾಗಿದ್ದ ಗಂಗಕ್ಕ ತಮ್ಮ ಸೋದರಮಾವನ ಒತ್ತಾಯದಿಂದ 'ಗಂಗೂಬಾಯಿ ಹಾನಗಲ್' ಆದರು. ತಾಯಿ ಅಂಬಾಬಾಯಿಯವರು ತಮ್ಮ ಮಗಳು ಗಂಗೂಗೆ ಉತ್ತಮ ಸಂಗೀತ ಶಿಕ್ಷಣ ಕೊಡಿಸಿ ಶ್ರೇಷ್ಠ ಗಾಯಕಿಯನ್ನಾಗಿ ಮಾಡಬೇಕೆಂಬ ಹಂಬಲವಿತ್ತು.

ಅದು ಬ್ರಿಟಿಷರ ಕಾಲ, ಜೊತೆಗೆ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದು, ಸಂಪ್ರದಾಯಕ್ಕೆ ವಿರುದ್ಧ ಎನ್ನುವಂತಹ ಕಾಲವಿತ್ತು. ಗಂಗೂಬಾಯಿಯು ಐದನೆ ತರಗತಿಯವರೆಗೆ ಮಾತ್ರ ಓದಲು ಸಾಧ್ಯವಾಯ್ತು. ಶಾಲೆಯಿಂದ ಮನೆಗೆ ಹೋಗುವ ಹಾದಿಯಲ್ಲಿ ಹಿಂದೂಸ್ಥಾನಿ ಹಾಡುಗಾರಿಕೆಯ ಧ್ವನಿಸುರುಳಿ ಇಲ್ಲವೆ ಧ್ವನಿತಟ್ಟೆಗಳಿಂದ ತೇಲಿಬರುವ ಸಂಗೀತ ಸುಧೆಯನ್ನು ಆಲಿಸಿ ಬೆಳೆದ ಹುಡುಗಿ ಗಂಗೂಬಾಯಿ. ಮನೆಯಲ್ಲಿ ತಾಯಿಯ ಜೊತೆಗೂಡಿ ಸಂಗೀತದ ತಾಲೀಮು ಶಾಲೆಯಲ್ಲಿ, ಶ್ರೀಮಂತರ ಮನೆಯಲ್ಲಿ ನಡೆಯುವ ಹುಟ್ಟುಹಬ್ಬ ಇವೇ ಮುಂತಾದ ಸಭೆ, ಸಮಾರಂಭಗಳಲ್ಲಿ ಬಾಲಕಿಯ ಹಾಡುಗಾರಿಕೆ ಪುಟ್ಟ ಹಾಗೂ ಮುಗ್ಧ ಬಾಲಕಿಗೆ ಆಗಿಂದಾಗ್ಗೆ ಹಾಡುವ ಅವಕಾಶ ಲಭಿಸುತ್ತಿತ್ತು.

ಪುಟ್ಟಬಾಲಕಿಯು ತನ್ನ ವಯಸ್ಸಿಗೂ ಮೀರಿ ಹಾಡುತ್ತಿದ್ದುದು ಧಾರವಾಡ ಸುತ್ತಮುತ್ತ ಹೆಸರುವಾಸಿಯಾದಳು ಬಾಲಕಿ ಗಂಗೂಬಾಯಿ. ಇದರ ದೆಸೆಯಿಂದಾಗಿ 1924ರಲ್ಲಿ ಬೆಳಗಾಂನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ (ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದರು) ಬಾಲಕಿ ಗಂಗೂಬಾಯಿಯಿಂದ ಸ್ವಾಗತಗೀತೆ ಹಾಡಲು ಅವಕಾಶ ಸಿಕ್ಕಿತು. ಬಾಲಕಿ ಗಂಗೂಬಾಯಿಗೆ ಆಗ ಹನ್ನೊಂದು ವರ್ಷ ವಯಸ್ಸು. "ಸ್ವಾಗತವು ಸಕಲ ಜನಸಂಕುಲಕೆ" ಎಂಬ ಸಮೂಹ ಗೀತೆಯಲ್ಲಿ ಹಾಡಲು ಅವಕಾಶ ಸಿಕ್ಕಿತು.

ತಾಯಿ ಅಂಬಾಬಾಯಿ ಕರ್ನಾಟಕ ಸಂಗೀತ ಗಾಯಕಿಯಾಗಿದ್ದರು. ಗಂಗೂಗೆ ತಾಯಿಯೇ ಮೊದಲಗುರು. ಹುಟ್ಟಿದ ಮನೆಯೇ ಗುರುಮನೆ ಗುರುಕುಲ ಎಲ್ಲ. ಕರ್ನಾಟಕ ಸಂಗೀತದ ಮಟ್ಟುಗಳು, ಕೀರ್ತನೆಗಳು, ಭಕ್ತಿಗೀತೆ, ಮೀರಾಭಜನೆ ಕರ್ನಾಟಕ ಸಂಗೀತದ ಜೊತೆ ಜೊತೆಗೆ ಶೃಂಗಾರದ ಜಾವಳಿ ಪದಗಳನ್ನು ಹಾಡುತ್ತ ಬೆಳೆದ ಗಂಗೂಬಾಯಿ. ತಾಯಿ ಅಂಬಾಬಾಯಿಗೇನು ಕಡಿಮೆ ಇಲ್ಲ. ಕರ್ನಾಟಕ ಸಂಗೀತವನ್ನು ಹರಪನಹಳ್ಳಿಯ ಇಮಾಮ್ ಸಾಹೇಬರಿಂದಲೂ, ರಾಣಿಬೆನ್ನೂರಿನ ಶ್ಯಾಮಾಚಾರ್ಯರಿಂದ ಶಾಸ್ತ್ರೀಯ ಸಂಗೀತವನ್ನು ಕಲಿತರು. ಅಂದು ಸಂಗೀತ ದಿಗ್ಗಜರಾಗಿದ್ದ ಅಬ್ದುಲ್ ಕರೀಂಖಾನ್‌ರು ಧಾರವಾಡಕ್ಕೆ ಬಂದಾಗಲೆಲ್ಲ ಅವರಿಂದ ಕರ್ನಾಟಕ ಸಂಗೀತ ಹಾಡಿಸುತ್ತಿದ್ದರು. 'ಕಿರಾಣಾ ಘರಾಣ' ಇವೇ ಮುಂತಾದ ಸಂಗೀತದ ಪ್ರಕಾರಗಳನ್ನು ಹಾಡಿಸಿ ಆನಂದಪಡುತ್ತಿದ್ದರು. ತನ್ನ ಮಗಳೂ ಹೀಗೆಯೇ ಒಂದೊಮ್ಮೆ ಮೇರು ಗಾಯಕಿಯಾಗಬೇಕೆಂಬ ಕನಸು ಕಾಣುತ್ತಿದ್ದರು. ಬಾಲಕಿ ಗಂಗೂಬಾಯಿ ಕರೀಂಖಾನರ ನೊಟೇಷನ್ (ಸ್ವರವಿಸ್ತಾರ) ಅನ್ನು ಗಮನಿಸುತ್ತಿದ್ದಳು ಹಾಗೂ ತಾನೂ ಹೀಗೆಯೇ ಸ್ವರ ವಿಸ್ತರಿಸಬೇಕೆಂದು ಪರಿಶ್ರಮಪಟ್ಟು ಕಲಿಯುತ್ತಿದ್ದಳು. ತಾಯಿ ಅಂಬಾಬಾಯಿಗೆ ತಮ್ಮ ಮಗಳಿಗೆ ಕರ್ನಾಟಕ ಸಂಗೀತಕ್ಕಿಂತಲೂ ಹಿಂದುಸ್ತಾನಿ ಸಂಗೀತ ಕಲಿಯಲು ಸಹಾಯ ಮಾಡುತ್ತಿದ್ದರು. ತನ್ನ ಮಗಳು ಹಿಂದೂಸ್ತಾನಿ ಸಂಗೀತ ಕಲಿಯಲು ಕರ್ನಾಟಕ ಸಂಗೀತ ತೊಡಕಾಗಬಾರದೆಂಬ ಕಾರಣಕ್ಕೆ ತನಗೆ ಗೊತ್ತಿರುವ 'ಕರ್ನಾಟಕ ಸಂಗೀತ'ವನ್ನು ಹಾಡುವುದನ್ನು ನಿಲ್ಲಿಸಿಯೇ ಬಿಟ್ಟಳು. ಮಗಳಿಗಾಗಿ ಹುಬ್ಬಳ್ಳಿಯ ಗಣೇಶಪೇಟೆಯಲ್ಲಿ ಬಾಡಿಗೆ ಮನೆ ಮಾಡಿದರು.

ಕೆಲವಂ ಬಲ್ಲವರಿಂದು ಕಲ್ತು

ಗಂಗೂಬಾಯಿಯು ಒಳ್ಳೆಯ ಸಂಗೀತ ವಿದುಷಿಯಾಗಲು ಏನು ಬೇಕೊ ಅದೆಲ್ಲವನ್ನು ಕಲಿಸಲು ತಾಯಿ ಅಂಬಾಬಾಯಿ ಸಿದ್ದಳಿದ್ದಳು. ಮಗಳಿಗಾಗಿ ಏನೆಲ್ಲ ತ್ಯಾಗ ಮಾಡಲು ಸಿದ್ದಳಿದ್ದಳು ಕೂಡ. 1925ರಲ್ಲಿ ಖಾನ್ ಸಾಹೇಬ್ ಅಬ್ದುಲ್ ಕರೀಂಖಾನರು ಒಮ್ಮೆ ಅಂಬಾಬಾಯಿಯವರಲ್ಲಿಗೆ ಬಂದು ಬೈಠಕ್ ನಡೆಸಿದರು. ಗಂಗೂಬಾಯಿಗೂ ಹಾಡಲು ಅವಕಾಶ ನೀಡಿದರು. ಬಾಲಕಿಯಲ್ಲಿದ್ದ ಆಸಕ್ತಿ ಮತ್ತು ವಿದ್ವತ್ತನ್ನು ಕಂಡ ಕರೀಂಖಾನರು ಚಕಿತರಾದರು. 'ಗಲಾ ಅಚ್ಚಾ ಹೈ ಬೇಟೀ' ಎಂದು ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ಇದು ಮುಂದೆ ಕಲಿಯಲು ಸಹಾಯುವಾಯಿತು. ಹಿಂದೂಸ್ತಾನಿ ಸಂಗೀತ ಕಲಿಯುಲು ಉತ್ತೇಜನ ಸಿಕ್ಕಿದಂತಾಯ್ತು. ಗಂಗಕ್ಕ ಶ್ರದ್ಧಾಭಕ್ತಿಯಿಂದ ಸಂಗೀತ ಕಲಿಯತೊಡಗಿದಳು.

ಸವಾಯಿ ಗಂಧರ್ವರ ಶಿಷ್ಯೆಯಾಗಿ

ಅಂದು ದಕ್ಷಿಣ ಭಾರತದ ಹೆಸರಾಂತ ಸಂಗೀತಗಾರರೆಂದರೆ ಅಬ್ದುಲ್ ಕರೀಂಖಾನ್, ಸವಾಯಿ ಗಂಧರ್ವರು, ಹುಲಗೂರು ಕೃಷ್ಣಾಚಾರ್ಯರು ಇವರೇ ಮುಂತಾದವರು. ಅಬ್ದುಲ್ ಕರೀಂಖಾನರು ಮಹಾರಾಷ್ಟ್ರ ಮತ್ತು ಮೀರಜ್‌ನಲ್ಲಿ ಪ್ರಖ್ಯಾತ ಸಂಗೀತಗಾರರಾಗಿದ್ದರು. ಅವರು ಮೂಲತಃ ಕರ್ನಾಟಕದ ಕುಂದಗೋಳದವರು. ಸಂಗೀತ ಕಾರ್ಯಕ್ರಮವು ವರ್ಷದಲ್ಲಿ ಹಲವಾರು ದಿನಗಳು ತಿಂಗಳುಗಳು ಒಂದಲ್ಲ ಒಂದುಕಡೆ ಇರುತ್ತಿತ್ತು. ಸದಾ ದೇಶ ಸಂಚಾರ ಮಾಡುತ್ತಿದ್ದರು. ಬಿಡುವಿನ ವೇಳೆಯಲ್ಲಿ ಧಾರವಾಡ, ಹುಬ್ಬಳ್ಳಿ, ಕುಂದಗೋಳದಲ್ಲಿದ್ದ ಶಿಷ್ಯರಲ್ಲಿಗೆ ಬಂದುಹೋಗುತ್ತಿದ್ದರು. ಅವರ ಶಿಷ್ಯರಲ್ಲಿ ದಶರಥ ಬುವಾ, ಕಪಿಲೇಶ್ವರ ಬುವಾ, ರೋಶನಾರಾ ಬೇಗಂ, ಬೆಹರ್‌ಬುವ ರಾಮಭಾವು, ಬೇಗಂ ಅಖ್ತರ್, ಹೀರಾಬಾಯಿ ಬಡೋದೇಕರ್, ಸರಸ್ವತಿ ರಾಣಿ, ಸುರೇಶಬಾಬು ಮಾನೆ, ಪ್ರಭಾಅತ್ರಿ, ಸೀತಾಮಾಲ್ಕಿ ಇವರೇ ಮುಂತಾದವರು. ಅವರ ನೂರಾರು ಜನ ಶಿಷ್ಯರಲ್ಲಿ ಒಬ್ಬ ಶಿಷ್ಯರತ್ನ ಎಂದರೆ 'ಸವಾಯಿ ಗಂಧರ್ವರು'. ಇವರ ಪೂರ್ವದ ಹೆಸರು 'ಸೂರಗೊಳ ರಾಮಭಾವು'. ಇವರು ಕರೀಂಖಾನರ ಶಿಷ್ಯರಾಗಿ ಸಂಗೀತ ಕಲಿತು ಮೇರುವ್ಯಕ್ತಿಯಾಗಿ 'ಸವಾಯಿಗಂಧರ್ವ'ರೆಂದು ಹೆಸರುವಾಸಿಯಾದರು. ಕರೀಂಖಾನರಿಂದ ಕಿರಾಣ ಘರಾಣೆಯನ್ನು ಕಲಿತು ಹೆಸರುವಾಸಿಯಾದರು. 'ಕಿರಾಣ ಘರಾಣಾ' ಎಂಬುದು ಹಿಂದೂಸ್ತಾನಿ ಸಂಗೀತದಲ್ಲಿ ಒಂದು ಪ್ರಮುಖ ಪ್ರಕಾರವೇ ಸರಿ. 'ಕಿರಾಣಾ' ಎಂಬುದು ದೆಹಲಿಯ ಸಮೀಪದ ಒಂದು ಹಳ್ಳಿ. ಅಲ್ಲಿಯ ಅನಕ್ಷರಸ್ಥ ವೃದ್ಧ ಗಾಯಕನೊಬ್ಬ ಸಂಶೋಧಿಸಿ ಸಿದ್ದಪಡಿಸಿದ ಸಂಗೀತ ಪ್ರಕಾರವೇ 'ಕಿರಾಣಾ ಘರಾಣಾ'. ಇದರ ಪ್ರಚಾರಕ್ಕಾಗಿ ಆರ್ಯ ಸಂಗೀತ ವಿದ್ಯಾಕೇಂದ್ರಗಳು ಹುಟ್ಟಿಕೊಂಡು ಮೀರಜ್, ದೆಹಲಿ, ಮುಂಬೈ ಪ್ರಾಂತ್ಯಗಳಲ್ಲಿ ಜನಪ್ರಿಯಗೊಳಿಸಿದವು. ಕರೀಂಖಾನರು ಕರ್ನಾಟಕದವರಾದರೂ ಮುಂಬೈ, ಮೀರಜ್ ಸೇರಿದಂತೆ ದೇಶದ ಹಲವಾರು ಕಡೆ ಶಾಖೆಗಳನ್ನು ತೆರೆದಿದ್ದರು. ಅದರಲ್ಲಿ ಕುಂದಗೋಳವೂ ಒಂದು ಶಾಖೆಯಾಗಿತ್ತು. ಕರೀಂಖಾನರು 'ಕಿರಾಣಾ ಘರಾಣ'ವನ್ನು ಜನಪ್ರಿಯಗೊಳಿಸಿದರು.

'ಸವಾಯಿ ಗಂಧರ್ವ'ರು ಕಿರಾಣಾ ಘರಾಣೆಯ ವಿಖ್ಯಾತ ಗಾಯಕರಾಗಿ ಹೊರ ಮೂಡಿದರು. ಪುಣೆಯನ್ನು ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಮಹಾರಾಷ್ಟ್ರದ ತುಂಬೆಲ್ಲ ತಮ್ಮ ಸಂಗೀತ ಕಛೇರಿಯನ್ನು ನಡೆಸುತ್ತಾ ಸಂಚರಿಸುತ್ತಿದ್ದರು. ಅಂದು ಸವಾಯಿ ಗಂಧರ್ವರ ಸಂಗೀತ ಕಛೇರಿಯೆಂದರೆ ಅದೊಂದು ವಿಶೇಷ ಸಂಗೀತ ಕಛೇರಿಯೇ ಆಗಿರುತ್ತಿತ್ತು. ಇಂತಹ ಬಹುದೊಡ್ಡ

ಗಾಯಕ ಸಮಯ ಸಿಕ್ಕಾಗ ವರ್ಷದಲ್ಲಿ ಯಾವಾಗಲಾದರೂ ಒಮ್ಮೆ ತಮ್ಮ ಊರಾದ ಕುಂದಗೋಳಕ್ಕೆ ಬರುತ್ತಿದ್ದರು. ಬಂದಾಗ ಕೆಲವಾರು ದಿನ ಇದ್ದು ತಮ್ಮ ಹೊಲಮನೆ ಸ್ನೇಹಿತರು ಆಪ್ತೇಷ್ಟರನ್ನು ನೋಡಿಕೊಂಡು ಪುಣೆಗೆ ಹೋಗುತ್ತಿದ್ದರು. ಕುಂದಗೋಳದಲ್ಲಿ ಅವರಿಗೆ ಪರಮಾಪ್ತರೆಂದರೆ 'ದತ್ತೋಪಂತ ದೇಸಾಯಿ'ಯವರು. ಗಂಧರ್ವರು ಕುಂದಗೋಳಕ್ಕೆ ಒಮ್ಮೆ ಬಂದಾಗ ಅವರ ಮನೆಯಲ್ಲಿ ಸಂಗೀತದ ಬೈಠಕ್ ನಡೆಸಿದರು. ಅವರ ಸಂಗೀತವನ್ನು ಆಲಿಸಲು ಅಂಬಾಬಾಯಿ ತನ್ನ ಮಗಳಾದ ಗಂಗೂಬಾಯಿಯೊಂದಿಗೆ ಬಂದಿದ್ದಳು. ಬಾಲಕಿ ಗಂಗೂ ಗಂಧರ್ವರ ಸಂಗೀತ ಕೇಳಿ ಮನ ಸೋತರೆ ಅವರ ತಾಯಿ ಅಂಬಾಬಾಯಿ ತಮ್ಮ ಮಗಳಿಗೆ ಇವರಿಂದಲೇ ಸಂಗೀತ ದೀಕ್ಷೆ ಕೊಡಿಸಬೇಕೆಂದು ಮನಸ್ಸು ಮಾಡಿದಳು.

ಸವಾಯಿ ಗಂಧರ್ವರು 1927ರ ಸಮಯದಲ್ಲಿ ಒಮ್ಮೆ ತಮ್ಮ ಹೊಲ ಮನೆ, ಸ್ನೇಹಿತರನ್ನು ಕಾಣಲು ಕುಂದಗೋಳಕ್ಕೆ ಬಂದಿದ್ದರು. ಈ ವಿಷಯ ತಿಳಿಯುತ್ತಲೇ ಅಂಬಾಬಾಯಿಯು ಗಂಧರ್ವರ ಆಪ್ತಸ್ನೇಹಿತರಾದ ದತ್ತೋಪಂತರಲ್ಲಿಗೆ ತಮ್ಮ ಮಗಳನ್ನು ಕರೆದುಕೊಂಡು ಹೋಗಿ ತಮ್ಮ ಸ್ನೇಹಿತರದಾದ ಗಂಧರ್ವರಿಂದ ನಮ್ಮ ಮಗಳಿಗೆ ಸಂಗೀತ ಪಾಠ ಹೇಳಿಕೊಡುವಂತೆ ಶಿಫಾರಸ್ಸು ಮಾಡಲು ಒತ್ತಾಯಿಸಿದಳು. ಅದರಂತೆ ದತ್ತೋಪಂತರು ತಮ್ಮ ಸ್ನೇಹಿತರಾದ ಸವಾಯಿ ಗಂಧರ್ವರಿಗೆ ಗಂಗುವನ್ನು ಪರಿಚಯಿಸಿ ನೀನು ಇವಳಿಗೆ ಸಂಗೀತಪಾಠ ಹೇಳಿಕೊಡು 'ರಾಮಭಾವು' ಎಂದು ಕೇಳಿದರು. ಅದಕ್ಕೆ ಸವಾಯಿಗಂಧರ್ವರು ಅಲ್ಲಾ ದತ್ತು ನಾನು ಊರೂರು ಸುತ್ತುವವ. ಕುಂದಗೋಳಕ್ಕೆ ವರ್ಷಕ್ಕೆ ಒಂದೆರಡು ಬಾರಿ ಬಂದರೆ ಸಂಗೀತ ಹೇಳಿ ಕೊಡಲು ಹೇಗೆ ಸಾಧ್ಯ? ನೀನು ಹೇಳು ಎಂದು ಉತ್ತರಿಸಿದರು. ಯಾವುದಕ್ಕೂ ಬಡಪಟ್ಟಿಗೆ ಒಪ್ಪದ ಅಂಬಾಬಾಯಿ ತಮ್ಮಂತಹ ಗಾನಗಂಧರ್ವರಿಂದಲೇ ನನ್ನ ಮಗಳಿಗೆ ಸಂಗೀತ ದೀಕ್ಷೆಯಾಗಬೇಕೆಂದು ಹಠ ಹಿಡಿದಳು.

ಗಂಡಾ ಬಂಧನ

ಸಂಗೀತ ಕ್ಷೇತ್ರದಲ್ಲಿ ಗಂಡಾಬಂಧನ ಸಮಾರಂಭ ಎಂದರೆ ಬೇರೆ ಅರ್ಥವಿದೆ. ನಾವು ತಿಳಿದುಕೊಂಡಂತೆ ಮದುವೆ ಬಂಧನವಲ್ಲ. 'ಗಂಡಾಬಂಧನ' ಎಂದರೆ ಗಂಡ ಎಂದರೆ ದಾರ/ ದಾರದ ಗಂಟು ಎಂದರ್ಥ. ಸರಳವಾಗಿ ಹೇಳಬೇಕೆಂದರೆ ಗುರುಪೂಜೆಯೇ ಗಂಡಾಬಂಧನ. ಗುರುಶಿಷ್ಯರ ಪವಿತ್ರ ಬಂಧನದ ಸಮಾರಂಭ. ಶಿಷ್ಯರಾಗಬೇಕಾಗಿರುವವರು ಗುರುವಿಗೆ ಪೂಜೆ ಸಲ್ಲಿಸಿ

ದಕ್ಷಿಣೆ ಕೊಟ್ಟು ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಪ್ರಾರ್ಥಿಸುವುದು. ಗುರುಗಳಾಗ ಬಯಸುವವರು ತಮ್ಮ ಶಿಷ್ಯ ಅಥವಾ ಶಿಷ್ಯೆಯ ಮುಂಗೈಗೆ ಗಂಡಾ (ದಾರ)ವನ್ನು ಮೂರು ಸುತ್ತು ಕಟ್ಟಿ ಅಂತಹವನನ್ನು/ಳನ್ನು ಶಿಷ್ಯ/ಶಿಷ್ಯೆಯನ್ನಾಗಿ ಮಾಡಿಕೊಂಡಿರುವೆನೆಂದು ಉದ್ಘೋಷಿಸುವುದು. ಅಲ್ಲಿಗೆ ವಿದ್ಯುಕ್ತವಾಗಿ ಗುರುಶಿಷ್ಯರ ಸಂಬಂಧ ಅಂದಿನಿಂದ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಎಂತಹ ಮೇರು ಸಂಗೀತಗಾರ ಇಲ್ಲವೆ ನೃತ್ಯಗಾರರನ್ನು ತಮ್ಮ ಗುರು ಯಾರು ಎಂದು ಕೇಳುತ್ತಾರೆ. ಉದಾ: ಸಂಗೀತ ಸಾಮ್ರಾಟ ಭೀಮಸೇನ ಜೋಶಿಯವರ ಗುರುಗಳಲ್ಲಿ ಪ್ರಮುಖ ಗುರುಗಳು ಸವಾಯಿಗಂಧರ್ವರು. ಹೀಗೆ ಗಂಗಕ್ಕ ಗಂಡಾ ಬಂಧನಕ್ಕೆ ಒಳಗಾದರು. ಇದು ಎರಡನೆಯ ಗಂಡಾಬಂಧನ. ಮೊದಲ ಬಾರಿ ಹುಬ್ಬಳ್ಳಿಯ ಸ್ವಗೃಹದಲ್ಲಿ ಮೊದಲಸಲ ಗಂಡಾಬಂಧನವಾದರೆ ಸವಾಯಿ ಗಂಧರ್ವರೊಂದಿಗೆ ಎರಡನೆ ಸಲ ಗಂಡಾಬಂಧನವಾಯ್ತು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಸವಾಯಿಗಂಧರ್ವರು 1937–38ರ ಸಂದರ್ಭದಲ್ಲಿ ಸಂಗೀತ ನಾಟಕಗಳೆಂದು ಊರೂರು ಸುತ್ತಿ ತಮ್ಮ ಸಂಗೀತ, ನಾಟಕ (ನಾಟಕಕಾರರೂ ಹೌದು)ಗಳನ್ನು ನಿಲ್ಲಿಸಿ ತಮ್ಮ ಹುಟ್ಟೂರಾದ ಕುಂದಗೊಳಕ್ಕೆ ಬಂದು ನೆಲೆಸಿದರು. ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಸೇರಿದಂತೆ ಕೆಲಭಾಗಗಳಲ್ಲಿ ಸಂಗೀತ ಕಲಿಯಲು ಹಾತೊರೆಯುತ್ತಿದ್ದರು. ಅವರಲ್ಲಿ ಸಂಗೀತ ಕಲಿಯಲು ಮುಗಿಬೀಳುತ್ತಿದ್ದರು. ಈ ಸಂದರ್ಭದಲ್ಲಿ ಸವಾಯಿಗಂಧರ್ವರ ಶಿಷ್ಯರಾಗಿ ಭೀಮಸೇನಜೋಶಿಯವರೂ ಶಿಷ್ಯರಾದರು. ಗಂಗಕ್ಕ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಲೋಕಲ್ ಟ್ರೈನಿನಲ್ಲಿ ದಿನಂಪ್ರತಿ ಪ್ರಯಾಣಿಸುತ್ತಿದ್ದರು. ಬೆಳಿಗ್ಗೆ ಒಂದಿಷ್ಟು ತಿಂದು ಹುಬ್ಬಳ್ಳಿಯ ತಮ್ಮ ಮನೆಯನ್ನು ಬಿಟ್ಟು ಲೋಕಲ್ ಟ್ರೈನ್ ಹತ್ತಿ ಕುಂದಗೋಳ ತಲುಪಿ ಗುರುಗಳ ಮನೆಸೇರಿ ಅಲ್ಲಿನ ಕಸಮುಸುರೆ ತೆಗೆದು ಸಂಗೀತಾಭ್ಯಾಸ. ಅದು ಕೇವಲ ಅಭ್ಯಾಸವಲ್ಲ, ಕಠಿಣ ಅಭ್ಯಾಸ, ಕಠೋರ ತಪಸ್ಸು, ಅಸಡ್ಡೆ ತೋರಿದರೆ ಅಂದೇ ಮನೆಯಿಂದ ಹೊರಹಾಕುವ ಸಂದರ್ಭ ಬರುತ್ತಿತ್ತು.

ಬಡತನದ ಬೇಗೆಯಲ್ಲಿ ಬೆಂದು ಸಂಗೀತದಲ್ಲಿ ಮಿಂದ ಗಂಗಕ್ಕ

ಪುರಂದರದಾಸರು ಹೇಳುವಂತೆ "ಸುಮ್ಮನೇ ಬಾಹುದಯ್ಯ ಮುಕ್ತಿ" ಎಂಬಂತೆ ಗಂಗಕ್ಕ ಅಷ್ಟು ಸುಲಭವಾಗಿ ಸಂಗೀತ ಕಲಿತು ಸಂಗೀತ ಸಾಮ್ರಾಜ್ಞಿಯಾಗಿಲ್ಲ. ಜೀವನ ಇಲ್ಲವೆ ಕುಟುಂಬದ ಜಂಜಾಟ, ಬಡತನ ನಿತ್ಯವೂ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಹೋಗಿಬರುವುದು ಕಠಿಣ ಪರಿಶ್ರಮ ನಡೆದೇ ಇತ್ತು. 1929ರಲ್ಲಿ ಹುಬ್ಬಳ್ಳಿಯ ಗುರುರಾವ್ ಕೌಲಗಿ ಎಂಬ ವಿದುರರು ಹದಿನಾರರ ಹರೆಯದ ಗಂಗೂಬಾಯಿಯನ್ನು ವರಿಸಿದರು. ಅವರು ಹೆಸರಿಗೆ

ಮಾತ್ರ ವಕೀಲರು. ಆದರೆ ಸಂಪಾದನೆಯಿಲ್ಲ. ಅವರು ಏನನ್ನು ಕೊಡದಿದ್ದರೂ ಗಂಗಕ್ಕಳಿಗೆ ಮೂರು ಮಕ್ಕಳನ್ನು ಕೊಟ್ಟು (ಬಾಬೂರಾವ್, ನಾರಾಯಣರಾವ್, ಕೃಷ್ಣ) ಮನೆಯಲ್ಲಿ ಈ ಸಂಬಂಧ ಬೇಡವೆನ್ನುತ್ತಿದ್ದಾರೆಂದು ಹೇಳಿ ಮೂರನೆಯ ಮದುವೆಯಾದ ಆಸಾಮಿಯೇ 'ಗುರುರಾವ್‌ಕೌಲಗಿ'. ವಯಸ್ಸಿನ ಕಾಯಿಲೆಗೆ ಒಳಗಾದ ತಾಯಿ, ಮೂರುಜನ ಮಕ್ಕಳ ಪಾಲನೆ ಕೈಯಲ್ಲಿ ಬಿಡಿಗಾಸಿಲ್ಲ. ಸಂಗೀತ ಪಾಠಕ್ಕೆ ಚಕ್ಕರ್ ಹೊಡೆಯುವಂತಿಲ್ಲ. ಎಷ್ಟೋ ದಿನ ಹೊಟ್ಟೆಗೆ ಏನನ್ನೂ ತಿನ್ನದೆ, ಕುಡಿಯದೆ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಟ್ರೈನ್ ಹತ್ತಿ ಗುರುಗಳ ಮನೆಯಲ್ಲಿ ಸಂಗೀತಾಭ್ಯಾಸ. ಹಸಿವು ಎಂದು ಯಾರಲ್ಲೂ ಹೇಳಿಕೊಳ್ಳಲಾಗದು, ಹೇಳಿಕೊಂಡರೂ ಪ್ರಯೋಜನವಿಲ್ಲ. ಸಂಗೀತಾರಾಧನೆ ಮಾಡುತ್ತಾ ಮೈಮರೆತರೆ ಹಸಿವು ನೀಗುತ್ತಿತ್ತು. ಭೀಮಸೇನ ಜೋಶಿಯವರು ಗಂಗಕ್ಕನ ಸಹಪಾಠಿ ತಂಗೀ ಎಂದೇ ಪ್ರೀತಿಯಿಂದ ಕರೆಯುತ್ತಿದ್ದ ಭೀಮಸೇನರು ಭೀಮಣ್ಣನೆನ್ನುತ್ತಿದ್ದ ಗಂಗಕ್ಕ. ತನ್ನ ನೋವನ್ನು ಯಾರಲ್ಲೂ ಹೇಳಿಕೊಳ್ಳುತ್ತಿರಲಿಲ್ಲ. ಅದು ಆಕೆಗೆ ಬೇಕಾಗೂ ಇರಲಿಲ್ಲ. ಗಂಗಕ್ಕ ಪ್ರಾರಂಭದಲ್ಲಿ ಭಕ್ತಿಗೀತೆ, ರಾಷ್ಟ್ರಭಕ್ತಿಗೀತೆ, ಭಜನೆ ಇವೇ ಮುಂತಾದವುಗಳನ್ನು ಕಲಿತು ಹಾಡುತ್ತಿದ್ದರು. ನಂತರ ಶಾಸ್ತ್ರೀಯ ಸಂಗೀತದೆ ಒಲವು ತೋರಿಸಿದರು. ಶಾಸ್ತ್ರೀಯ ಸಂಗೀತ ಉಕ್ಕಿನ ಕಡಲೆಯಾಗಿತ್ತು. ಗುರುಗಳ ಸಾನ್ನಿಧ್ಯದಲ್ಲಿ ಗಂಗಕ್ಕಳು 'ಮಂದ್ರ' ಸಪ್ತಶದ ಸ್ವರಗಳ ಅಭ್ಯಾಸ (ಖರಜ ಮೆಹನತ್) ಮಧ್ಯಾಹ್ನ ವಿಶ್ರಾಂತಿಯ ನಂತರ ಗಾಯನದ ವಿವಿಧ ಅಂಗಗಳ ಅಭ್ಯಾಸ ಮಾಡುತ್ತಿದ್ದರು. ಸ್ವರ, ಆಲಾಪ, ಘಸೀಟ್, ಮುರಕಾ, ಬಟಕಾ, ಗಮಕ, ಪಿರತ ಇತ್ಯಾದಿ ಅಂಗಗಳ ಅಭ್ಯಾಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಇಡೀ ದಿನ 'ಕರಜ' ವಿಲಂಬಿತದಿಂದ ಮಧ್ಯ ಷಡ್ಜ ಸ್ವರಕ್ಕೆ ಬರುವ ಕ್ರಮವನ್ನಷ್ಟೆ ಅಭ್ಯಾಸ ಮಾಡಬೇಕಿತ್ತು. ನಂತರ ಗುರುಗಳ ಮುಂದೆ 'ರಿಯಾಜು' (ತಾಲೀಮು) ಮಾಡಬೇಕಿತ್ತು. ಒಂದು ತಾಸಿನವರೆಗೂ ಮದ್ಯಷಡ್ಜಕ್ಕೆ ಹೊಂದುವ ಎಡಬಲ ಸ್ವರವನ್ನು ಬೇರೆ ಬೇರೆ ರೀತಿಯಲ್ಲಿ ಹಚ್ಚಿ ಅದರ ಸೌಂದರ್ಯವನ್ನು ಎತ್ತಿ ತೋರಿಸುವ ಕೌಶಲವನ್ನು ಕಲಿತುಕೊಂಡರು.

ರಾಗಗಳ ಬೆನ್ನಟ್ಟಿ ಗಂಗಕ್ಕ

ಸಂಗೀತದ ರಾಗಗಳನ್ನು ವಶೀಕರಿಸಿಕೊಳ್ಳುವುದು ಇಲ್ಲವೆ ಒಲಿಸಿಕೊಳ್ಳುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಇಂದಿನ ಕಾಲದಲ್ಲಿ ಸಂಗೀತ ಇಲ್ಲವೆ ನೃತ್ಯವನ್ನು ಒಂದೆರಡು ದಿನ ಇಲ್ಲವೆ ಒಂದೆರಡು ತಿಂಗಳಲ್ಲಿ ಕಲಿತು ತಾನೂ ಪಂಡಿತ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವವರನ್ನು ನಾವು ನೋಡಿದ್ದೇವೆ. ಅಂದು ಒಂದು ರಾಗವನ್ನು ಕಲಿತು ಅದರಲ್ಲಿ ಪಾಂಡಿತ್ಯ

ಹೊಂದಬೇಕಾದರೆ ಕನಿಷ್ಠವೆಂದರೂ ಒಂದು ವರ್ಷ ಬೇಕಾಗುತ್ತಿತ್ತು. ಸವಾಯಿಗಂಧರ್ವರು ಅಬ್ದುಲ್ ಕರೀಂಖಾನರ ಶಿಷ್ಯರಾಗಿದ್ದ ವೇಳೆ **'ಪೂರಿಯ'** ರಾಗವನ್ನು ಸಂಪೂರ್ಣವಾಗಿ ಕಲಿಯಲು ಸುಮಾರು ಒಂದು ವರ್ಷಕಾಲ ತೆಗೆದುಕೊಂಡರಂತೆ. ಹೀಗೆ ಗಂಗಕ್ಕ ಸ್ವರಸಂಪಾದನೆಯಲ್ಲಿ ತಿಂಗಳುಗಟ್ಟಲೆ, ವರ್ಷಗಟ್ಟಲೆ ಹಾಡಿ ಹಾಡಿ ಒಂದೊಂದೇ ಸ್ವರ ಕಲಿಯತೊಡಗಿದರು. ಗುರುಗಳು ಶಿಷ್ಯರ ಸಂಗೀತಾಭ್ಯಾಸವನ್ನು ತೀಕ್ಷ್ಣವಾಗಿ ಗಮನಿಸುತ್ತಿದ್ದರು. ಗಂಗಕ್ಕಳಿಗೆ ಪೂರಿಯಾ ರಾಗದ ಸಾಧನೆಯೇ ವರ್ಷ ಪರ್ಯಂತ ನಡೆಯಿತು. 'ಯಮನ್, ಬಿಭಾಸ್', 'ಮುಲ್ತಾನಿ'ಯಂತಹ ಮೂರು ಹೊತ್ತಿನ ರಾಗಗಳನ್ನು ಕಲಿತರು. 'ಕಿರಾಣ ಘರಾಣಾ' ಕಲಿತರು. ಸುಮಾರು ಹನ್ನೆರಡು ವರ್ಷಗಳ ಸತತ ಅಭ್ಯಾಸ ಮಾಡಿ ಗಂಗಕ್ಕಳು ತೋಡಿ, ಮುಲ್ತಾನಿ, ಪರಿಯಾ, ಪೂರಿಯೊಧನಂಶ್ರೀ, ಪೂರ್ವಿಕಲ್ಯಾಣ, ಶುದ್ಧಕಲ್ಯಾಣ, ಮಾರವಾ, ದರಬಾರಿ, ಅಸಾವರಿ, ಮಾಲಕಂಸ, ಸುಹಾಸುಗ್ರಾಯಿ ಇವೇ ಮುಂತಾದ ರಾಗಗಳನ್ನು ಕಲಿತು ಪಾಂಡಿತ್ಯ ಪಡೆದುಕೊಂಡರು. ಗುರು ಸವಾಯಿಗಂಧರ್ವರಲ್ಲಿ ಸಂಗೀತ ಪಾಠಗಳನ್ನು ಕಲಿಯುತ್ತಿರುವಾಗಲೇ ಗಂಗಕ್ಕ ಬೇರೆ ಬೇರೆ ರಾಜ್ಯಗಳಿಗೆ ತೆರಳಿ ಕಾರ್ಯಕ್ರಮ ನೀಡಿ ಬರುತ್ತಿದ್ದರು (ಗುರುಗಳ ಅಪ್ಪಣೆ ಪಡೆದು).

ಹಿಂದೂಸ್ತಾನಿ ಸಂಗೀತದ 'ಕಿರಾಣಾ ಘರಾಣಾ'

ಹಿಂದೂಸ್ತಾನಿ ಸಂಗೀತದಲ್ಲಿ 'ಕಿರಾಣಾ ಘರಾಣಾ' ಎಂಬ ಪ್ರಕಾರವು ಆಗಿಂದಾಗ್ಗೆ ಕೇಳಿಬರುತ್ತದೆ. ಅಬ್ದುಲ್ ಕರೀಂಖಾನ್, ಸವಾಯಿಗಂಧರ್ವ, ಭೀಮಸೇನ ಜೋಶಿ, ಕುಮಾರ ಗಂಧರ್ವ, ಗಂಗೂಬಾಯಿ ಹಾನಗಲ್ ಇವರೇ ಮುಂತಾದವರು, ಕಿರಾಣಾಘರಾಣಾ ಹಾಡುವುದರಲ್ಲಿ ಹೆಸರುವಾಸಿ. ಏನಿದು ಕಿರಾಣಾ ಘರಾಣಾ? 'ಘರಾಣಾ' ಎಂದರೆ ಮನೆತನ ಇಲ್ಲವೆ ಕುಟುಂಬ ಎಂದರ್ಥ. ಘರಾನಾ ಎಂಬ ಉರ್ದು ಶಬ್ದದ ಅಪಭ್ರಂಶ. ಘರಾಣೆಗೆ ಯಾರು ಸ್ಥಾಪಕರು/ಸಾಧಕರು ಆಗಿರುತ್ತಾರೋ ಅವರ ಊರಿನ ಹೆಸರಿನಿಂದ ಅಂತಹ ಘರಾಣವು ಪ್ರಸಿದ್ಧಿಗೆ ಬರುತ್ತದೆ. ಸಂಗೀತ ಸಂದರ್ಭದಲ್ಲಿ ಘರಾಣೆ ಎಂದರೆ ಒಂದು ಗಾಯನ ಶೈಲಿಯ ಪರಂಪರೆ. ಗ್ವಾಲಿಯರ್ ಘರಾಣೆ ಎಲ್ಲಾ ಘರಾಣೆಗಳಿಗೂ ತಾಯಿಬೇರು, ನತ್ಥನ್‌ಪೀರ್‌ಭಕ್ಷ ಇದರ ಸ್ಥಾಪಕ. ಆಗ್ರಾ ಘರಾಣಾದ ಸ್ಥಾಪಕ ಹಾಜಿ ಸುಜಾನ್‌ಖಾನರವರು. ಜೈಪುರದ ಘರಣೆಯು ಅಲ್ಲಿನ ಅಲ್ಲಾ ದಿಯಾಖಾನ್‌ರಿಂದ ಸ್ಥಾಪಿತವಾದದು. ಅದೇ ರೀತಿ 'ಕಿರಾಣಾ ಘರಾಣಿ' ಈಗಾಗಲೇ ತಿಳಿಸಿರುವಂತೆ ದೆಹಲಿಯ ಸಮೀಪದಲ್ಲಿರುವ ಕೈರಾನಾ ಗ್ರಾಮದಲ್ಲಿದ್ದ ಅಬ್ದುಲ್ ವಹೀದ್‌ಖಾನ್ ಎಂಬುವರಿಂದ ಸ್ಥಾಪಿತವಾದ ಖ್ಯಾಲ್ ಗಾಯನ ಶೈಲಿಗೆ 'ಕಿರಾಣ ಘರಾಣಾ' ಎಂದು ಹೆಸರು ಬಂದಿದೆ. ಇದೇ ರೀತಿ ಅತ್ರೋಲಿ, ಪಟಿಯಾಲ,

ಇಂದೋರ, ಸಹಸ್ವಾನ, ಮೇವಾತಿ, ಘಹಸ್ತಾನ, ಭೆಂಡಿಭಜಾರ್, ದಿಲ್ಲಿ, ರಾಮಪುರ ಘರಾಣಾ ಇವೇ ಮುಂತಾದ ಘರಾಣಾಗಳಿವೆ. ಇದರಲ್ಲೆಲ್ಲ ಕಿರಾಣಘರಾಣವು ಸ್ವರ ಪ್ರಧಾನವಾದುದು. ಜೊತೆಗೆ ಆಲಾಪ ಪ್ರಧಾನವೂ ಹೌದು. ಘರಾಣಾದಲ್ಲಿ ಒಂದೊಂದೆ ಸ್ವರಗಳನ್ನು ಸಿದ್ಧಿಸಿಕೊಂಡು ವಿಸ್ತರಿಸಬೇಕಾಗುತ್ತದೆ. ಕಂಠಶೈಲಿ, ಗಮಕ ಪ್ರಯುಕ್ತಿ, ಆಲಾಪ ವಿಧಾನ, ಲಯಕಾರಿ ಮುಂತಾದ ಅಂಶಗಳಿಂದಾಗಿ ಈ ಘರಾಣವು ಪರಸ್ಪರವಾಗಿ ಬೇರೆಯಾಗಿವೆ.

ಈಗಾಗಲೇ ತಿಳಿಸಿರುವಂತೆ ಪೂರಿಯಾ ರಾಗವನ್ನು ಕಲಿತು ಪಾಂಡಿತ್ಯ ಸಂಪಾದಿಸಬೇಕಾದರೆ ಒಂದು ವರ್ಷ ಹಾಡಿದ್ದನ್ನೇ ಹಾಡಬೇಕೆಂದರೆ ಹುಚ್ಚು ಹಿಡಿಯುವುದೇ ಸರಿ. ಹೀಗೆ ಗಂಗಕ್ಕ ಛಲಬಿಡದ ವಿಕ್ರಮಾದಿತ್ಯನಂತೆ ಮುನ್ನಡೆದರೆ ಮತ್ತೊಂದೆಡೆ ಗಂಗಕ್ಕಳನ್ನು ಬಿಡದೇ ಕಾಡುವ ತೊಂದರೆಗಳು. ಗಂಡನ ಸಾವು, ಬಡತನ, ದಿನಂಪ್ರತಿ ಬೆಳಿಗ್ಗೆ ಸಂಜೆ ಎನ್ನದೆ ಪ್ರಯಾಣ ಇವೇ ಮುಂತಾದವು ಎಡೆಬಿಡದೆ ಕಾಡಿದವು. ಇದರ ಜೊತೆಗೆ ಪ್ರತಿದಿನ ಗುರುಮಠಕ್ಕೆ ಹೋಗಲೇಬೇಕು. ಇಂದಿನ ಕಾಲದಲ್ಲಾದರೆ ಸಂಸಾರದ ತಾಪತ್ರಯ, ಟ್ರೈನ್‌ಲೇಟ್, ಬಡತನ, ಮಕ್ಕಳಕಾಟ ಇವೇ ಮುಂತಾದ ಸಬೂಬುಗಳನ್ನು ಹೇಳುತ್ತೇವೆ. ಅಂದು ಗುರುಗಳಿಗೆ ವಿನಮ್ರವಾಗಿ ನಡೆದುಕೊಳ್ಳುವುದೇ ಅಲ್ಲದೆ ಅವರು ಹೇಳಿಕೊಟ್ಟದ್ದನ್ನು ಸರಿಯಾಗಿ ಕಲಿತು ರಿಯಾಜ್ ಮಾಡದಿದ್ದರೆ ಕೈಗೆ ಸಿಕ್ಕಿದ್ದರಲ್ಲಿ ಬಡಿಯುತ್ತಿದ್ದರು. ರಿಯಾಜ್ ಎಂದರೆ ತಾಲೀಮು. ಅರ್ಥಾತ್ ಅಭ್ಯಾಸ ಎಂದರ್ಥ. ಮತ್ತೆ ತಿದ್ದಿಕೊಳ್ಳದಿದ್ದರೆ ಅಂದೇ ಕೊನೆ. ಹೊರ ಹಾಕುತ್ತಿದ್ದರು. ಗಂಗಕ್ಕ ಸವಾಯಿ ಗಂಧರ್ವರ ಗರುಡಿಯಲ್ಲಿ ಪಳಗಿ ಶಾಸ್ತ್ರೀಯ ಸಂಗೀತದ ಭದ್ರವಾದ ನೆಲಗಟ್ಟನ್ನು ಪಡೆದುಕೊಂಡರು.

ಸಂಗೀತ ಕಛೇರಿಗಳು ಮತ್ತು ಆಕಾಶವಾಣಿಯಲ್ಲಿ ಗಂಗಕ್ಕ

ಗಂಗಕ್ಕ ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ ಅಂದರೆ 1933ರ ಸಂದರ್ಭದಲ್ಲಿ ಅವರ ಗಾಯನವನ್ನು ಆಕಾಶವಾಣಿ ಹಾಗೂ ಸಾರ್ವಜನಿಕರು ಗುರುತಿಸಿದರು. ಸಾರ್ವಜನಿಕ ಸಂಗೀತ ಕೊಡಬೇಕೆಂದು ಒತ್ತಾಯ ಬರುತ್ತಿತ್ತು. ಅಂದು ಆಕಾಶವಾಣಿಯವರಿಗೆ ಒಳ್ಳೆಯ ಕಾರ್ಯಕ್ರಮ ನೀಡುವುದು ಸವಾಲಿನ ಕೆಲಸವಾಗಿತ್ತು. ಉತ್ತಮ ಗಾಯಕರನ್ನು ಹುಡುಕುವುದು (ಕಡಿಮೆ ಸಂಭಾವನೆಗೆ) ಹಾಡಿಸುವುದು ಕಷ್ಟದ ಕೆಲಸವಾಗಿತ್ತು. ಈಗಾಗಲೇ ಗಂಗಕ್ಕ ನೂರಾರು ರಾಗಗಳ ಒಡತಿಯಾಗಿದ್ದರು. ಅಂದಿನ ಕಾಲದಲ್ಲಿ ಹೆಣ್ಣುಮಗಳೊಬ್ಬಳು ಸಾರ್ವಜನಿಕವಾಗಿ ಸಂಗೀತ ಕಛೇರಿ ನಡೆಸಿಕೊಡುವುದು ಕಷ್ಟದ ಮಾತಾಗಿತ್ತು. ಇಂತಹ ಸಂದರ್ಭದಲ್ಲಿ ದತ್ತೋಪಂತರು ಗಂಗಕ್ಕನ ಸಹಾಯಕ್ಕೆ ನಿಂತರು ರೇಡಿಯೋ ಕಾರ್ಯಕ್ರಮಗಳಲ್ಲಿ

ಜನಪ್ರಿಯವಾಗುತ್ತಿದ್ದಂತೆ ಹೆಚ್.ಎಂ.ವಿ. (His Master voice) ಕಂಪನಿಯವರು ಗಂಗಕ್ಕಳಿಗೆ ಮುಗಿಬಿದ್ದರು. ಕಾರ್ಯಕ್ರಮ ನಡೆಸಿಕೊಡಬೇಕೆಂದು ಹಣ ನೀಡುತ್ತಿದ್ದರು. ಹೆಚ್.ಎಂ.ವಿ. ಧ್ವನಿ ತಟ್ಟೆಗಳು ಮಾರುಕಟ್ಟೆಯಲ್ಲಿ ಹೆಚ್ಚೆಚ್ಚು ಬಿಕರಿಯಾಗತೊಡಗಿದವು. ಗಂಗಕ್ಕನ ಕೀರ್ತಿ ಇಮ್ಮಡಿಯಾಗತೊಡಗಿತು. ಶ್ರೋತೃಗಳು ಗಂಗಕ್ಕಳ ಸಂಗೀತವನ್ನು ಕೇಳಲು ಹಾತೊರೆಯ ತೊಡಗಿದರು. ಸುಪ್ರಸಿದ್ಧ ಹೆಚ್.ಎಂ.ವಿ.ಗೆ ಪರಿಚಯವಾಗಲು ಕಾರಣವೇನೆಂದರೆ 1933ರಲ್ಲಿ ಬಾಂಬೆಯ ಸಾಂತಾಕ್ರೂಜ್‌ನಲ್ಲಿನ 'ಸಬರ್ಬನ್ ಮ್ಯೂಜಿಕ್ ಸರ್ಕಲ್' ಸಾರ್ವಜನಿಕ ಸಂಗೀತ ಕಛೇರಿಯನ್ನು ಏರ್ಪಡಿಸಿತು. ಅಲ್ಲಿ ಸೇರಿದ್ದ ಸಂಗೀತ ಪ್ರೇಮಿಗಳು ಉಲ್ಲಸಿತರಾದರು. ಗಂಗಕ್ಕನಿಗೆ ಎಪ್ಪತ್ತೈದು ರೂಪಾಯಿ ಸಂಭಾವನೆ ದೊರೆಯಿತು. ಅದು ನಿಜಕ್ಕೂ ಅಂದಿನ ಕಾಲಕ್ಕೆ ದೊಡ್ಡ ಮೊತ್ತವೆ. ಕಾರಣವೇನೆಂದರೆ ಕರ್ನಾಟಕದಲ್ಲಿ ಒಬ್ಬ ಸರ್ಕಾರಿ ಅಧಿಕಾರಿಯ ತಿಂಗಳ ಸಂಬಳವಾಗಿತ್ತು. ಗಂಗಕ್ಕಳಿಗೆ ಆನಂದವೋ ಆನಂದ. ಈ ಕಛೇರಿ ಹೆಚ್.ಎಂ.ವಿ. ಕಂಪನಿಯ ಗಮನಕ್ಕೆ ಬಂದಿತು. ಮುಂಬೈನ ಗೋರೆಗಾವ್, ದಾದರ್ ಬೋರಿವಿಲಿ, ಅಂದೇರಿ ಹೀಗೆ ಮುಂಬೈನ ಒಂದಲ್ಲಾ ಒಂದುಕಡೆ ಕಾರ್ಯಕ್ರಮಗಳು ಇರುತ್ತಿದ್ದವು. ಗಂಗಕ್ಕ ದಿನೇ ದಿನೇ ಜನಪ್ರಿಯತೆಯ ಎತ್ತರಕ್ಕೆ ಏರತೊಡಗಿದರು.

ಗಂಡು ಧನಿಯ ಗಂಗಕ್ಕ

ಗಂಗಕ್ಕಳಿಗೆ ತಿಂಗಳು ಪೂರ್ತಿ ಒಂದಲ್ಲ ಒಂದು ಸಂಗೀತ ಕಛೇರಿ ಇರುತ್ತಿತ್ತು. ಗಂಟೆಗಟ್ಟಲೆ ಹಾಡುಗಾರಿಕೆಯಿಂದಾಗಿ ಗಂಟಲು, ನರಗಳು ಉಬ್ಬಿ ನೋವು ಕಾಣಿಸಿಕೊಳ್ಳತೊಡಗಿತು. ವೈದ್ಯರಿಗೆ ತೋರಿಸಲಾಗಿ ಅವರು ಗಂಟಲಿನ ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದರು. ನಂತರದ ದಿನಗಳಲ್ಲಿ ಮೊದಲಿನ ಧ್ವನಿ ಉಳಿಯುತ್ತದೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಇದು ಧ್ವನಿಪೆಟ್ಟಿಗೆಗೆ ಸಂಬಂಧಿಸಿದ್ದು. ಸಾಮಾನ್ಯ ವ್ಯಕ್ತಿಗಳಾಗಿದ್ದರೆ ತೊಂದರೆಯಿಲ್ಲ. ಕಾರಣವೇನೆಂದರೆ ದಿನದಲ್ಲಿ ಕೆಲವು ನಿಮಿಷ ಇಲ್ಲವೇ ಗಂಟೆಗಳು ಮಾತನಾಡುತ್ತಾರೆ. ಆದರೆ ಸಂಗೀತಗಾರರು ಗಂಟೆಗಟ್ಟಲೆ ಸಾಮಾನ್ಯ ವ್ಯಕ್ತಿಗಿಂತಲೂ ಎತ್ತರದ ಧ್ವನಿಯಲ್ಲಿ ಹಾಡುವುದರಿಂದ ಧ್ವನಿಪೆಟ್ಟಿಗೆಗೆ ಹೆಚ್ಚಿನ ತ್ರಾಸವಾಗುತ್ತದೆ. ಆದಕಾರಣ ಗ್ಯಾರಂಟಿ ಕೊಡಲಾಗದು ಎಂದು ವೈದ್ಯರು ಕೈಚೆಲ್ಲಿದರು. ಮಾತ್ರೆಗಳಿಗೆ ಅದು ಒಗ್ಗಲಿಲ್ಲ. ವಿಧಿ ಇಲ್ಲದೆ ಶಸ್ತ್ರಚಿಕಿತ್ಸೆ ಮಾಡಿಸಿದರು. ಗಂಗಕ್ಕಳಿಗೆ ನೋವಿನ ಜೊತೆಗೆ ಹೆಣ್ಣಿನ ಧ್ವನಿಯೂ ಹೋಯಿತು. ಅದರ ಬದಲು ಗಂಡುಧ್ವನಿ ಬಂದಿತು. ಏರುಧ್ವನಿಯಲ್ಲಿ ಹಾಡುತ್ತಾ ಹಾಡುತ್ತಾ ಶ್ರೋತೃಗಳಿಗೆ ವ್ಯತ್ಯಾಸ ಗೊತ್ತಾಗುತ್ತಿರಲಿಲ್ಲ. ಆದರೆ ಗಂಗಕ್ಕಳ ಸಂಗೀತವನ್ನು ಮೊದಲು ಆಲಿಸುತ್ತಿದ್ದವರಿಗೆ ಏನೋ ಗಂಡುಧ್ವನಿ ಕೇಳಿಬರುತ್ತಿತ್ತು.

ಒಮ್ಮೆ ಹೀಗಾಯಿತಂತೆ. ಮುಂಬೈನ ತಮ್ಮ ಬಂಧು ಒಬ್ಬರ ಮನೆಯಲ್ಲಿ ಉಳಿದುಕೊಂಡಿದ್ದರಂತೆ ಗಂಗಕ್ಕ. ಈ ದಿನ ಆಕಾಶವಾಣಿ ಮುಂಬೈ ಕೇಂದ್ರದಿಂದ ನೇರ ಪ್ರಸಾರವಿದೆ ಕೇಳಿ ಎಂದು ಮನೆಯ ಒಡತಿಗೆ ಹೇಳಿಹೋಗಿದ್ದರಂತೆ. ಅವರು ರೇಡಿಯೋ ಹಾಕುವ ವೇಳೆಗಾಗಲೇ ಸಂಗೀತ ಶುರುವಾಗಿತ್ತು. ಯಾರೋ 'ಉಸ್ತಾದರು' ಹಾಡುತ್ತಿರಬಹುದೆಂದು ರೇಡಿಯೋ ಸ್ವಿಚ್ ಆಫ್ ಮಾಡಿದರಂತೆ. ಮನೆಗೆ ಬಂದ ಗಂಗಕ್ಕ ತಮ್ಮ ಗಾಯನ ಹೇಗಿತ್ತು ಎಂದು ತಮ್ಮ ಬಂಧುಗಳನ್ನು ಕೇಳಿದರಂತೆ. 'ಉಸ್ತಾದರ' ಹಾಡು ರೇಡಿಯೋ ನಿಲ್ಲಿಸಿದ್ದಾಗಿ ಹೇಳಿದಾಗ ಇಲ್ಲ ಆ ಉಸ್ತಾದೇ ತಾನು ಎಂದು ನಂಬಿಸಲು ಗಂಗಕ್ಕ ಹರಸಾಹಸಪಟ್ಟರಂತೆ. ಗಂಗೂಬಾಯಿಯವರು ಮತ್ತು ದ.ರಾ.ಬೇಂದ್ರೆಯವರು ಬಹಳ ಆಪ್ತರಾಗಿದ್ದರು. ಅಣ್ಣ-ತಂಗಿಯ ಸಂಬಂಧ ಅವರಲ್ಲಿತ್ತು. ಗಂಡುಧ್ವನಿಯ ಬಗ್ಗೆ ಬೇಂದ್ರೆಯವರು ನಿನ್ನ ಗಂಟಲಲ್ಲಿ 'ಶಾಪಗ್ರಸ್ಥ ಗಂಧರ್ವ ಕೂತಿದ್ದಾನೆ' ಎಂದು ಹಾಸ್ಯ ಮಾಡುತ್ತಿದ್ದರಂತೆ. ಕೆಲವುಸಲ ಈ ಗಂಡುಧ್ವನಿಯ ಗಂಗಕ್ಕನಿಗೆ ಅನುಕೂಲವೇ ಆಗುತ್ತಿತ್ತು. ಕಾರಣವೇನೆಂದರೆ ಪಂಜಾಬಿನ ಪಾಟಿಯಾಲ, ಅಮೃತಸರ, ಹರಿಯಾನ ಇವೇ ಮುಂತಾದ ಕಡೆ ಹಾಡಬೇಕಾದ ಸಮಯದಲ್ಲಿ ಪಂಜಾಬಿಗಳು ಇಂತಹ ಗಂಡುಮೆಟ್ಟಿದ ನಾಡಿನ 'ಗಂಡುಧ್ವನಿ'ಯನ್ನು ಇಷ್ಟಪಡುತ್ತಿದ್ದರು. ಮರಾಠಿಗರಿಗೆ 'ಬಡೇ ದೀದಿ'ಯಾಗಿದ್ದರು ಗಂಗೂಬಾಯಿ.

ಸರಳ ಸಜ್ಜನಿಕೆಯ ಸಾಕಾರಮೂರ್ತಿ

ಪಂಡಿತ್ ಭೀಮಸೇನರಿಗೆ ಶರೀರ ಶಾರೀರ ಎರಡೂ ದಷ್ಟಪುಷ್ಟವಾಗಿದ್ದರೆ ಗಂಗಕ್ಕಳಿಗೆ ಶರೀರ ಕೃಶವಾಗಿದ್ದರೂ ಶಾರೀರ ದಷ್ಟಪುಷ್ಟವಾಗಿತ್ತು. ತಮ್ಮ ಶರೀರ, ಸರಳತೆಯ ಬಗ್ಗೆ ತಮ್ಮನ್ನು ತಾವೇ ಹಾಸ್ಯಮಾಡಿ ಎಲ್ಲರನ್ನು ನಗಿಸಿ ತಾವು ನಗುತ್ತಿದ್ದುದುಂಟು. ಅವರೇ ಹೇಳುವಂತೆ ದೆಹಲಿ ಆಕಾಶವಾಣಿಯಿಂದ ಹಾಡಲು ಗುತ್ತಿಗೆ ಮಾಡಿಕೊಳ್ಳಲು ಅವಕಾಶ ಬಂತು. ಕಾರ್ಯಕ್ರಮಕ್ಕೆ ಅಂತ ಗಂಗಕ್ಕ ಆಕಾಶವಾಣಿ ಕೇಂದ್ರಕ್ಕೆ ಹೋದರಂತೆ. ಅವರು ನಿರೀಕ್ಷಣ ಕೋಣೆಯಲ್ಲಿ ಕುಳಿತರಂತೆ. ಯಾರೂ ಅವರನ್ನು ಮಾತನಾಡಿಸಲಿಲ್ಲವಂತೆ. ಕಾರ್ಯಕ್ರಮ ಶುರು ಆಗೋ ವೇಳೆಗೆ ಅಧಿಕಾರಿಯೊಬ್ಬ ಬಂದು ಯಾರ್ರೀ ಗಂಗೂಬಾಯಿ ಹಾನಗಲ್? ತಂಬೂರಿ ತಕ್ಕೊಳ್ರಿ, ಒಳ ನಡೆಯಿರಿ ಎಂದು ಸಾಮಾನ್ಯ ಗಾಯಕ-ಗಾಯಕಿಯರಿಗೆ ಹೇಳುವಂತೆ ಅಧಿಕಾರಿಯುತವಾಗಿ ಹೇಳಿದರಂತೆ. ಗಂಗಕ್ಕ ಮರುಮಾತನಾಡದೆ ತಂಬೂರಿಯೊಂದಿಗೆ ಒಳ ನಡೆದರಂತೆ. ರಾಗ 'ಪೂರಿಯ' ಎಂದು ರಿಹರ್ಸಲ್ ಮಾಡಿಕೊಳ್ಳಲು ಅವಕಾಶ ನೀಡದೆ ಘೋಷಿಸಿಯೇ ಬಿಟ್ಟರಂತೆ. ಕಿರಾಣಾ

ಘರಾಣೆಯ 'ಸುರೇಲ' ಸ್ವರ ಗಾಳಿಯಲ್ಲಿ ತೇಲಿ ತಂಬೂರಿಯ ಸ್ವರ ಗಂಗಕ್ಕನ ಸ್ವರ ಲೀನವಾಗಿ ಅಮೋಘ ಸಂಗೀತ ತ್ರಿಪಥ ಗಾಮಿನಿಯಾದ ಗಂಗಾ ತರಂಗಿಣಿ ಸಂಗೀತ ವಾಹಿನಿಯಾಗಿ ನಭೋ ಮಂಡಲವನ್ನು ವ್ಯಾಪಿಸಿತು. ಗಾಯನ ಕೇಳಿದ ದೆಹಲಿ ಆಕಾಶವಾಣಿ ನಿಲಯ ನಿರ್ದೇಶಕರು ಮನೆಯಿಂದ ಕೇಂದ್ರಕ್ಕೆ ಬಂದು ಗಂಗಕ್ಕನಿಗೆ ಸಲಾಮು ಹೊಡೆದು ಚಹಾ ತರಿಸಿಕೊಟ್ಟು ಉಪಚರಿಸಿ ಷಹಬಾಸ್‌ಗಿರಿ ಕೊಟ್ಟರಂತೆ.

ಮತ್ತೊಮ್ಮೆ ಹೀಗಾಯಿತಂತೆ. 1933ರಲ್ಲಿ ಮುಂಬೈ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ನಿಗದಿಯಾಗಿತ್ತಂತೆ. ಗಂಗಕ್ಕ ಆಕಾಶವಾಣಿ ಕೇಂದ್ರಕ್ಕೆ ನಿಗದಿಯಾಗಿದ್ದ ವೇಳೆಗಿಂತ ಮೊದಲೇ ಹೋದರಂತೆ. ಆಕೆಯ ಸರಳವಾದ ಉಡುಗೆ ತೊಡುಗೆ ಕೃಶದೇಹ ಹರುಕು ಮುರುಕು ಮರಾಠಿ ಭಾಷೆ, ಒಬ್ಬ ಪ್ರಸಿದ್ಧ ಗಾಯಕಿಗೆ ಇರಬೇಕಾದ ವೇಷಭೂಷಣ ಠಾಕು ಠೀಕಾಗಿಲ್ಲದ ಗಂಗಕ್ಕಳನ್ನು ನೋಡಿದ ಅಲ್ಲಿನ ಜವಾನ ನಿಗಮದ ಒಳಗೆ ಬಿಡಲಿಲ್ಲವಂತೆ. ವೇಳೆಯಾಗುತ್ತಿದ್ದಂತೆ ಕಾರ್ಯಕ್ರಮ ನಿರೂಪಕರಿಗೆ ಚಡಪಡಿಕೆ ಶುರುವಾಯಿತಂತೆ. ಕಛೇರಿಯ ಒಳಗೆ ಹೊರಗೆ ಶತಪಥ ಸುತ್ತುಹಾಕುತ್ತಿದ್ದ ಗಂಗಕ್ಕಳನ್ನು ನೋಡಿದ ಅಧಿಕಾರಿ ಆಕೆಯ ಬಳಿ ಧಾವಿಸಿ ತಾವು ಹುಬ್ಬಳ್ಳಿಯ ಗಂಗೂಬಾಯಿ ಅಲ್ಲವೆ? ಎಂದು ಕೇಳಿದರಂತೆ. ಹೌದು ಎಂದಾಗ ಹಾಗಾದರೆ ಒಳಕ್ಕೆ ಏಕೆ ಬರಲಿಲ್ಲ ಎಂದು ಪ್ರಶ್ನಿಸಿದರಂತೆ. ಅದಕ್ಕೆ ಗಂಗಕ್ಕ ಮಗುವಿನಂತೆ ಈ ಜವಾನ ನನ್ನನ್ನು ಒಳಬಿಡಲಿಲ್ಲ ಎಂದರಂತೆ. ಆ ಅಧಿಕಾರಿಯು ಜವಾನನನ್ನು ಕರೆದು ಇವರೇ ಗಂಗೂಬಾಯಿ ಹಾನಗಲ್. ಈ ದಿನದ ಹಾಡುಗಾರಿಕೆ ಇವರದೆ. ಇವರಿಗಾಗಿ ಇಷ್ಟು ಹೊತ್ತು ಕಾಯುತ್ತಿದ್ದೆ ಏಕೆ ಬಿಡಲಿಲ್ಲ ಎಂದು ಗದರಿಸಿದರಂತೆ. ಅದಕ್ಕೆ ಜವಾನನು ಇವರ ದಿರಿಸು ದೊಡ್ಡ ಕಲಾವಿದೆ ಎಂದೆನಿಸಲಿಲ್ಲ. ಯಾರೋ ಇರಬಹುದು ಎಂದು ಒಳ ಬಿಡಲಿಲ್ಲ ಎಂದನಂತೆ.

ಇನ್ನೊಂದು ಬಾರಿ ಬರೋಡಾದಲ್ಲಿ ಸಂಗೀತ ಕಾರ್ಯಕ್ರಮ ನೀಡಲು ಗಂಗಕ್ಕ ಹೋಗಿದ್ದರಂತೆ. ಗಂಗಕ್ಕಳಿಗೆ ಹಾರ ಹಾಕುವ ಬದಲು ಬೇರೆಯವರಿಗೆ ಹಾರ ಹಾಕಿದರಂತೆ. ಕಾರಣ ಗಂಗಕ್ಕಳ ಸರಳವಾದ ಉಡುಪು ಕೃಶದೇಹ, ಹಳ್ಳಿಯ ಹೆಣ್ಣುಮಕ್ಕಳ ಮುಖವೇ ಕಾರಣ. ಅದೇರೀತಿ ಮತ್ತೊಮ್ಮೆ ಗಂಗಕ್ಕಳನ್ನು ಮದ್ರಾಸ್ ರೈಲ್ವೆ ನಿಲ್ದಾಣದಲ್ಲೇ ಬರಮಾಡಿಕೊಳ್ಳಲು ಬಂದಿದ್ದ ಜನ ಆಕೆಯ ಎದುರಿಗೆ ಕೂತಿದ್ದ ದಡೂತಿಯನ್ನೇ ಗಂಗೂಬಾಯಿ ಹಾನಗಲ್ ಎಂದು ಭ್ರಮಿಸಿ ಹಾರ ಹಾಕಿದರಂತೆ. ಹೀಗೆ ನಮ್ಮ ಗಂಗಕ್ಕ ಬೆಸ್ತು ಬೀಳಿಸಿದ ಸಂಗತಿಯನ್ನು ತಮ್ಮ ಶರೀರ ಮತ್ತು ಶಾರೀರವನ್ನು ಅಪಹಾಸ್ಯ ಮಾಡಿದ್ದುಂಟು.

ಜಗಮೆಚ್ಚಿದ ಸಂಗೀತಗಾರ್ತಿ ಗಂಗೂಬಾಯಿ ಹಾನಗಲ್

ಗಂಗಕ್ಕ ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗ ತೊಡಗಿದರು. ಅಲ್ಲದೆ ಕೇವಲ ಅಲ್ಪಸ್ವಲ್ಪ ಸಂಗೀತ ಬಲ್ಲ ಶ್ರೋತೃಗಳ ಮುಂದೆ ಹಾಡಿ ಸೈ ಎನಿಸಿಕೊಂಡವರಲ್ಲ. ಸಂಗೀತ ದಿಗ್ಗಜರು ತಲೆದೂಗುವಂತೆ ಹಾಡಿರುವುದನ್ನು ಅವರೇ ಹೇಳಿಕೊಂಡಿರುವ 'ನನ್ನ ಬದುಕಿನ ಹಾಡು' ಹಾಗೂ 'ಕಲಾಚೇತನ-ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು' ಇವೇ ಮುಂತಾದ ಕೃತಿಗಳು ಗಂಗಕ್ಕಳ ಸಂಗೀತವನ್ನು ಪಂಡಿತ ಪಾಮರರು ಹೇಗೆ ಆಸ್ವಾದಿಸುತ್ತಿದ್ದರು ಎಂದು ಈ ಮೇಲ್ಕಂಡ ಕೃತಿಗಳಲ್ಲಿ ದಾಖಲಿಸಿದ್ದಾರೆ.

ಒಮ್ಮೆ ಹೀಗಾಯಿತಂತೆ 1943ರಲ್ಲಿ ಗಯಾದಲ್ಲಿ ಸಂಗೀತ ಸಮ್ಮೇಳನ ಏರ್ಪಾಡಾಗಿತ್ತು. ಅಲ್ಲಿಗೆ ದೇಶದ ನಾನಾ ಘನ ವಿದ್ವಾಂಸರು ಎಂದರೆ ಶಹನಾಯಿ ಮಾಂತ್ರಿಕ ಬಿಸ್ಮಿಲ್ಲಾಖಾನ್, ಬಡೇಗುಲಾಂಅಲಿಖಾನ್, ಉಸ್ತಾದ್ ಫಯಾಜ್‌ಖಾನ್, ಪಂಡಿತ್ ಓಂಕಾರನಾಥ ಇನ್ನೂ ಮುಂತಾದವರು ಸೇರಿದ್ದರು. ಸಂಗೀತ ಕಾರ್ಯಕ್ರಮದ ಸಂಘಟಕರು ಅತಿರಥ ಮಹಾರಥರಿದ್ದ ಸಂಗೀತ ಸಭೆಯಲ್ಲಿ ಎಲ್ಲರಿಗೂ ಅನುಕೂಲವಾಗಲೆಂದು ಹಾಡಲು 15 ನಿಮಿಷ ಅವಕಾಶ ನೀಡಿದರಂತೆ. ಗಂಗಕ್ಕ ಕೇವಲ 15 ನಿಮಿಷದಲ್ಲಿ ಹಾಡಿ ಮುಗಿಸಲು ಹೇಗೆ ಸಾಧ್ಯ ಎಂದು ಕೈಚೆಲ್ಲಿ ಕುಳಿತರಂತೆ. ಅಲ್ಲೇ ಇದ್ದು ಇದನ್ನು ಗಮನಿಸುತ್ತಿದ್ದ ಶಹನಾಯಿ ವಾದಕ ಉಸ್ತಾದ್ ಬಿಸ್ಮಿಲ್ಲಾಖಾನ್ ಕ್ಯೂ ಘಬರಾತೆ? ಪಂದ್ರಾ ಮಿನಿಟ್‌ಮೆ ಇಂಪ್ರೆಷನ್ ಕರ್‌ಕೆ ಆಯೇಂಗೆ ಚಲ್ (ಯಾಕೆ ಬೇಸರಪಡುತ್ತೀರಿ? ಹದಿನೈದು ನಿಮಿಷದಲ್ಲಿ ಹಾಡಿ ಪ್ರಭಾವ ಬೀರೋಣ ನಡೆಯಿರಿ) ಎಂದರಂತೆ. ಸ್ವಲ್ಪ ಧೈರ್ಯ ತಂದುಕೊಂಡ ಗಂಗಕ್ಕ 'ಬಸಂತರಾಗ'ದ ಚೀಜನ್ನು (ಪಿಯಾಸಂಗ್) ಎತ್ತರದ ದನಿಯಲ್ಲಿ ಹಾಡಿ ಹದಿನೈದು ನಿಮಿಷಕ್ಕೆ ನಿಲ್ಲಿಸಿದರಂತೆ. ಸಂಗೀತ ಸುಧೆಯಲ್ಲಿ ಮೀಯುತ್ತಿದ್ದ ಸಂಗೀತ ರಸಿಕರಿಗೆ ಗಂಗಕ್ಕ ಸಂಗೀತ ನಿಲ್ಲಿಸಿದ ಕೂಡಲೆ ಶ್ರೋತೃಗಳಿಗೆ ರಸಭಂಗವಾದಂತಾಗಿ ಮುಂದುವರಿಸಲು ಒತ್ತಾಯಿಸಿದರಂತೆ. ಗಂಗಕ್ಕ ಅದಕ್ಕೆ ಸೊಪ್ಪು ಹಾಕದೆ ನನಗೆ ಕೊಟ್ಟಿರುವ ಸಮಯ ಮುಗಿಯಿತು ಎಂದುತ್ತರಿಸಿ ಎದ್ದುಬಿಟ್ಟರಂತೆ. ಮರುದಿನ ಸಂಗೀತ ಕಾರ್ಯಕ್ರಮ ಮುಂದುವರಿದಾಗ ಗಂಗಕ್ಕಳನ್ನು ಹಾಡಲು ಒತ್ತಾಯಿಸಿದರಂತೆ. ಅದಕ್ಕೆ ಒಪ್ಪದಿದ್ದಾಗ ಸಂಗೀತ ವಿದ್ವಾಂಸರಾದ ಬಡೇಗುಲಾಂ ಅಲಿಖಾನರು ಗಾವೊ ಬೇಟಿ ತುಂಬಿ ಗಾವೋ, ಹಂಭಿ ಗಾಯೇಂಗೆ ಎಂದು ಪ್ರೋತ್ಸಾಹಿಸಿದರಂತೆ. ಇದಕ್ಕೆ ಕಾರಣವೇನೆಂದರೆ ಹಿಂದಿನ ದಿನ ಕೇವಲ 15 ನಿಮಿಷ ಮಾತ್ರ ಅವಕಾಶ

ಕೊಟ್ಟದ್ದು. ಕೊನೆಗೆ ಹಿರಿಯರ ಮಾತಿಗೆ ಕಟ್ಟುಬಿದ್ದು ಹಾಡಲು ಒಪ್ಪಿದರು. 'ಶುದ್ಧ ಕಲ್ಯಾಣಿ ರಾಗ'ದಲ್ಲಿ ದೀರ್ಘ ಅವಧಿಯವರೆಗೆ ಪ್ರಸ್ತುತಪಡಿಸಿದರಂತೆ. ನಂತರ 'ರಾಮ ಹರೀಕಾ ಭೇದನ ಪಾಯೋ' ಎಂಬ ತಮಗೆ ಇಷ್ಟವಾದ ಜೋಗಿಯಾ ರಾಗದ ಚೀಜನ್ನು ಹಾಡಿದರು. ಅಲ್ಲಿ ನೆರೆದಿದ್ದ ಉಸ್ತಾದ್ ಫಯಾಜ್‌ಖಾನ್, ಪಂಡಿತ್ ಓಂಕಾರನಾಥ್‌ರಂತಹ ಸಂಗೀತದ ಮೇರು ವ್ಯಕ್ತಿಗಳು ತಲೆದೂಗಿದರಂತೆ.

1984ರ ಡಿಸೆಂಬರ್ 3ರಂದು ಧಾರವಾಡದ ಪ್ರಸಿದ್ಧ ಗ್ವಾಲಿಯರ್ ಘರಾಣಾದ ಗಾಯಕರಾದ ಗುರುರಾಮ ದೇಶಪಾಂಡೆ ಅವರ ಎರಡನೆ ವರ್ಷದ ಪುಣ್ಯತಿಥಿಯನ್ನು ಏರ್ಪಡಿಸಿದ್ದರು. ಕಾರ್ಯಕ್ರಮಕ್ಕೆ ಎನ್ಕೆ, ಗುರುರಾವ್‌ರವರ ಶಿಷ್ಯರಾದ ಪಂಡಿತ್ ವಿನಾಯಕ ತೊರವಿ ಅತಿಥಿಗಳಾಗಿದ್ದರು. ಗಂಗಜ್ಜಿಯವರೇ ಮುಖ್ಯ ಅತಿಥಿಗಳು. ಮುಂಜಾನೆಯ ಸಂಗೀತ ಕಾರ್ಯಕ್ರಮದಲ್ಲಿ ಗಂಗಜ್ಜಿಯು 'ಮಯಾರೆ ತೋಡಿ' ರಾಗದಲ್ಲಿ ಹಾಡಲಾರಂಭಿಸಿದರು. ಜೊತೆಗೆ ಮಗಳು ಕೃಷ್ಣಳು ತಾಯಿಗೆ ಸಾತ್ ನೀಡಿದಳು. ಅಂದು ಗಂಗಜ್ಜಿಯ 'ಮಿಟೂರಿ ತೋಡಿ' ರಾಗದ ಸ್ವರಗಳು ಭೂಮಿ, ಸ್ವರ್ಗಕ್ಕೆ ಸ್ವರಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಆರೋಹಣ ಮಾಡುತ್ತಿರುವಂತೆ ಭಾಸವಾಯಿತು. ಅದಕ್ಕೆ ಪ್ರತಿಯಾಗಿ ತೋಡಿ ರಾಗ ತಾನವಿತಾನವಾಗಿ ಅಬ್ಬರಿಸುತ್ತಿರುವಂತೆ ಶ್ರೋತೃವೃಂದವು ಸ್ಪಂದನ, ಕಂಪನಗಳಿಂದ ನಡುಗಿ ಹೋದರು. ತಾಯಿ, ಮಗಳು ತಾನಿನ ಮೇಲೆ ತಾನಿನ ಮೇಲಾಟ ನಡೆಸುತ್ತಿರುವಂತೆ 'ಆ' ಕಾರದ ಖಡ ಖಡಾಟ, ತೋಡಿ ರಾಗವು ನಸುಕಿನ ರಾಗ. ಆದರೆ ಅಂದು ಮಧ್ಯಾಹ್ನವನ್ನು ನಸುಕನ್ನಾಗಿ ಮಾಡಿತ್ತು. ಆ ತೋಡಿ ರಾಗವು ಬದುಕಿನ ಬಂಧನದ ಬೇಡಿಯನ್ನು ಕತ್ತರಿಸಿ ಹಾಕಿದಂತಿತ್ತು ಎಂದು ವೇದಿಕೆಯ ಮೇಲಿದ್ದ ಶ್ರೀಯುತ ಎನ್ಕೆಯವರು. ಸಂಭಾವನಾ ಗ್ರಂಥದಲ್ಲಿ ತಮ್ಮ ಅನುಭವವನ್ನು ದಾಖಲಿಸಿದ್ದಾರೆ.

ಕೃಷ್ಣ ಹಾನಗಲ್‌ಳ ಅಗಲಿಕೆ

ಗಂಗಕ್ಕಳ ಮೂರು ಮಕ್ಕಳಲ್ಲಿ ಪ್ರೀತಿ ಪಾತ್ರಳಾದ ಏಕೈಕ ಪುತ್ರಿ ಎಂದರೆ ಕೃಷ್ಣ ಹಾನಗಲ್. ತಾಯಿಯಂತೆ ಮಹಾನ್ ಗಾಯಕಿಯಾಗಬೇಕೆಂಬ ಹೆಬ್ಬಯಕೆ. ಕೃಷ್ಣ ಕೇವಲ ಮಗಳಾಗಿರದೆ ಗಂಗಜ್ಜಿಯ ಸ್ವರಾಲಾಪನದ ಹಿಂದಿನ ಶಕ್ತಿಯೇ ಆಗಿದ್ದಳು. ತನ್ನ ತಾಯಿಯನ್ನು ಕೇವಲ ತಾಯಿ ಎಂದು ಭಾವಿಸದೆ ಸಂಗೀತ ಸರಸ್ವತಿ, ತನ್ನ ಗುರು ಎಂದೇ ತಿಳಿದಿದ್ದ ಕೃಷ್ಣ ತನ್ನ ತಾಯಿ ಹಿಂದೆ ಕುಳಿತು ತಂಬೂರಿ ಮೀಟುತ್ತಾ ಸ್ವರವನ್ನು ಎತ್ತಿ ಕೊಡುತ್ತಿದ್ದ ಮಗಳು ಗಂಗಜ್ಜಿಗೆ ಸಂಗೀತದಲ್ಲಿ ಮಾತ್ರವಲ್ಲ ಇಳಿಸಂಜೆಯಲ್ಲಿ ಊರುಗೋಲು ಆಗಿದ್ದಳು. ಕೃಷ್ಣಳು ತಾಯಿಯ ನೆರಳಿನಿಂದ ಹೊರಬರಲು ಆಗುತ್ತಿರಲಿಲ್ಲ. ಕಾರಣ ತಾಯಿಯು

ಸಂಗೀತದಲ್ಲಿ ಮಹಾನ್ ಸಾಧಕಿ. ತನ್ನ ತಾಯಿಯ ಅರ್ಧದಷ್ಟು ಏರಲಾಗದ ಸನ್ನಿವೇಶ ಮಗಳು ಕೃಷ್ಣಳಲ್ಲಿತ್ತು. ಕೃಷ್ಣಳಿಗೆ ಕ್ಯಾನ್ಸರ್ ಕಾಣಿಸಿಕೊಂಡಿತು. ಅದರಿಂದ ಹೊರಬರಲಾರದ ಸನ್ನಿವೇಶ. 2004ರಲ್ಲಿ ಕೃಷ್ಣಾಹಾನಗಲ್ ಮೃತರಾದರು. ಗಂಗಜ್ಜಿಯ ಇಳಿಸಂಜೆಯು ಕಗ್ಗತ್ತಲಾಯಿತು. ಆಕೆಯ ಅಗಲಿಕೆ ತಂತಿ ಹರಿದ ತಂಬೂರಿಯಂತಾಯಿತು.

ದೇಶವಿದೇಶಗಳಲ್ಲಿ ಸಂಗೀತ ಸಂಚಾರ

ಹಿಂದೂಸ್ತಾನಿ ಸಂಗೀತದ ರಾಯಭಾರಿಯಂತೆ ಗಂಗೂಬಾಯಿ ಹಾನಗಲ್‌ರು ದೇಶವಿದೇಶಗಳಲ್ಲಿ ಸಂಗೀತ ಸುಧೆ ಹರಿಸಿದರು. ಕರ್ನಾಟಕದ ಮೂಲೆಮೂಲೆಗಳಲ್ಲಿ ಅಂದರೆ ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಬೀದರ್, ಬಿಜಾಪುರದಿಂದ ಹಿಡಿದು ಮೈಸೂರು, ಬೆಂಗಳೂರು, ಮಂಗಳೂರಿನವರೆಗೂ ತಮ್ಮ ಸಂಗೀತ ಸುಧೆಯನ್ನು ಹರಿಸಿದರು. ಈ ವಿದೂಷಕಿಯ ಸ್ವರವನ್ನು ಕೇಳದವರಿಲ್ಲ. ಅದೇ ರೀತಿ ಬಾಂಬೆ, ದೆಹಲಿ ಸೇರಿದಂತೆ ಆಕಾಶವಾಣಿ ಕೇಂದ್ರಗಳು ನೇರಪ್ರಸಾರ ಮಾಡಿದವು. ಉಳಿದ ಕೇಂದ್ರಗಳು ಧ್ವನಿಮುದ್ರಿಕೆಯನ್ನು ಹಾಕುತ್ತಿದ್ದವು. ಹೆಚ್.ಎಂ.ವಿ. ಸೇರಿದಂತೆ ಸಂಗೀತ ಮುದ್ರಿಕೆಗಳು ಮಾರುಕಟ್ಟೆಗೆ ಬಂದು ಹೆಚ್ಚೆಚ್ಚು ಬಿಕರಿಯಾಗತೊಡಗಿದವು. ಸಂಗೀತದ ಭದ್ರಕೋಟೆ ಎನ್ನಿಸಿದ್ದ ಮದ್ರಾಸ್, ತಿರುವನಂತಪುರಂ, ಮಧುರೈ, ಕುನ್ನುಕುಡಿ, ಕಂಚಿಯೇ ಅಲ್ಲದೆ ಭಾರತದ ಬೃಹತ್ ನಗರಿಗಳಾದ ಮುಂಬೈ, ಕಲ್ಕತ್ತ, ದೆಹಲಿ, ಗ್ವಾಲಿಯರ್, ಛಂಡೀಗರ್, ಪಾಟಿಯಾಲ, ಪಾಟ್ನ, ಅಲಹಬಾದ್, ಲಕ್ನೊ, .ಅಮೃತಸರ, ಅಹಮದಾಬಾದ್, ಭಾವನಗರ, ನಾಗಪುರ, ಗಯಾ, ನಾಂದೇಡ, ತಿರುಚನಾಪಳ್ಳಿ, ಪಾಂಡಿಚೆರಿ, ತಿರುಪತಿ, ಹುಬ್ಬಳ್ಳಿ, ಧಾರವಾಡ (ಈ ಎರಡು ಸ್ಥಳಗಳಲ್ಲಿ ಸಾಕಷ್ಟು ಸಲ ಕಾರ್ಯಕ್ರಮ ನೀಡಿದ್ದಾರೆ), ಮಂಗಳೂರು, ಬೆಂಗಳೂರು, ಮೈಸೂರು, ರಾಯಚೂರು, ಬಿಜಾಪುರ, ಸಾಂಗ್ಲಿ, ಬನಾರಸ್, ಜಲಂಧರ್, ಛಂಡಿಗರ್, ಅಲಿಘರ್, ಜೆಮ್‌ಶೆಡ್‌ಪುರ, ಕಟಕ, ಮುಜಾಫರ್ ನಗರ, ಹೈದ್ರಾಬಾದ್, ವಿಜಯವಾಡ, ಜಯಪುರ, ಕೊಲ್ಹಾಪುರ, ಭೂಪಾಲ್ ಹೀಗೆ ದೇಶದ ನಾನಾ ಭಾಗಗಳಲ್ಲಿ ಸಂಗೀತ ಗಂಗೆಯನ್ನು ಹರಿಸಿದರು ಗಂಗಜ್ಜಿ. ಹೀಗೆ ದೇಶದ ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಗಂಗಜ್ಜಿ ಕಾರ್ಯಕ್ರಮ ನೀಡುತ್ತಿದ್ದರು.

1979–80ರಿಂದ ಸಂದರ್ಭದಲ್ಲಿ ಅಮೆರಿಕಾದ 'ನ್ಯೂಯಾರ್ಕ್' ಅಕಾಡಮಿಯವರು ಗಂಗಜ್ಜಿಯ ಇಪ್ಪತ್ತೊಂದು ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಡೆಟ್ರಾಯಿಟ್ ಕೆನಡಾ ಹೀಗೆ ಅಮೆರಿಕ, ಕೆನಡಾಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೆರವೇರಿಸಿಕೊಟ್ಟರು. ಟೊರಾಂಟೋ, ಒಟ್ರಾವಾ, ಚಿಕಾಗೊ,

ಡೆಟ್ರಾಯಿಟ್, ಮಿಶಿಗನ್, ಕ್ಲೀವ್‌ಲ್ಯಾಂಡ್, ಇಲಿನಾಯ್ಸ್, ಮಿನಿಯೋಪಾಲಿಸ್, ಲಾಸ್‌ಎಂಜಲಿಸ್, ಕ್ಯಾಲಿಪೋರ್ನಿಯಾ, ರಾಂಚೆಸ್ಟರ್, ಮ್ಯಾಂಚೆಸ್ಟರ್ ನಗರಗಳಲ್ಲಿದ್ದ ಭಾರತೀಯರು ಮಾತ್ರವಲ್ಲ ಅಮೆರಿಕನ್ನರೂ ಗಂಗಜ್ಜಿಯ ಗಾಯನ ಕೇಳಿ ಪುನೀತರಾದರು. ಹೋದಲ್ಲೆಲ್ಲಾ ಗಂಗಜ್ಜಿಯ ಗಾಯನವನ್ನು ಹಾಡಿ ಹೊಗಳಿದರು.

ಎಂಬತ್ತರ ದಶಕದಲ್ಲಿ ಯೂರೋಪಿನ ಪಶ್ಚಿಮ ಜರ್ಮನಿ, ಹಾಲೆಂಡ್, ಪೋಲೆಂಡ್, ನೆದರ್‌ಲ್ಯಾಂಡ್, ಇಂಗ್ಲೆಂಡ್, ಪ್ರಾಂಕುಪರ್ಟು, ಬರ್ಲಿನ್, ತಿಪ್‌ಜಿಗ್, ಟುಬಿಂಜೆನ್ ಅಲ್ಲದೆ ಸಂಸ್ಥಾನದ ಲಾಹೋರ್, ಪೆಶಾವರ್, ಕರಾಚಿ, ನೇಪಾಳ, ಢಾಕಾ ಇನ್ನೂ ಮುಂತಾದ ದೇಶಗಳಲ್ಲಿ ಸಂಚರಿಸಿ ತಮ್ಮ ಗಾನಸುಧೆ ಹರಿಸಿದರು.

ಶಾಸ್ತ್ರೀಯ ಸಂಗೀತ ಬಿಟ್ಟು ಕದಲದ ಗಂಗಜ್ಜಿ

ಗಂಗಜ್ಜಿಯು ಎಂದಿಗೂ ಹಣ, ಆಸ್ತಿಗಾಗಿ ತಮಗೆ ಒಗ್ಗದ ಸುಗಮ ಸಂಗೀತ, ಭಜನೆ, ಚಿತ್ರಗೀತೆ, ಭಾವಗೀತೆ ಹಾಡಿದವರಲ್ಲ. ಶುದ್ಧ ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದ ಗಂಗಜ್ಜಿ ಪ್ರೇಕ್ಷಕರ ಇಲ್ಲವೆ ಕಾರ್ಯಕ್ರಮ ಸಂಘಟನಾಕಾರರ ಒತ್ತಾಯಕ್ಕೆ ಮಣಿದವರಲ್ಲ. ಒಮ್ಮೆ ಹೀಗಾಯಿತಂತೆ. ಗಂಗಜ್ಜಿ ಸಂಗೀತ ಕಛೇರಿ ನಡೆಸುತ್ತಿರುವಾಗ ಶ್ರೋತೃ ಒಬ್ಬರು ಲೈಟ್ ಮ್ಯೂಸಿಕ್ ಹಾಡಿ ಎಂದರಂತೆ. ಅದನ್ನು ಕೇಳಿದ ಗಂಗಜ್ಜಿ ತಮ್ಮ ಎದುರಿಗಿದ್ದ ವಿದ್ಯುತ್ ಲೈಟನ್ನು ತೋರಿಸಿ ನನಗೆ ಈ ಲೈಟ್‌ಬಿಟ್ಟು ಬೇರೆ ಯಾವ ಲೈಟೂ ಗೊತ್ತಿಲ್ಲ ಎಂದು ದಿಟ್ಟವಾಗಿ ಉತ್ತರಿಸಿದರಂತೆ. ದೇಶವಿದೇಶ ಸುತ್ತಿಬಂದರೂ ಶಾಸ್ತ್ರೀಯ ಸಂಗೀತವಲ್ಲದೆ ಬೇರೆ ಯಾವ ಸಂಗೀತವನ್ನು ಹಾಡದಿರುವುದು ಅವರ ವಿಶೇಷ. ಶುದ್ಧ ಶಾಸ್ತ್ರೀಯ 'ಕಿರಾಣಾ ಘರಾಣ' ಶೈಲಿಯ ಖಯಾಲ್ ಗಾಯನ ಬಿಟ್ಟು ಬೇರೆ ಶೈಲಿಯೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಒಮ್ಮೆ ಮಾತ್ರ ಹೆಚ್.ಎಂ.ವಿ. ರೆಕಾರ್ಡಿಂಗ್ ಸಂಸ್ಥೆಗೆ ಮೊದಮೊದಲು ಠುಮ್ರಿ ಗಝಲ್, ಮರಾಠಿ ಗೀತೆಗಳನ್ನೂ, ಸ್ವಾತಂತ್ರ್ಯಗೀತೆಗಳನ್ನು ಹಾಡಿದರಾದರೂ ಅದನ್ನೇ ರೂಢಿಸಿಕೊಳ್ಳದೆ ಶಾಸ್ತ್ರೀಯ ಸಂಗೀತವನ್ನೇ ಮುಂದುವರಿಸಿದರು. ಅದರ ಪ್ರಕಾರ ಹಿಂದೂಸ್ತಾನಿ ಚೀಜು (ಚೀಜ ಎಂದರೆ ಸಾಹಿತ್ಯ ಇಲ್ಲದೆ ಕೃತಿ ಎಂದರ್ಥ)ಗಳಲ್ಲೂ ಕಾವ್ಯ, ಭಕ್ತಿರಸ, ಶೃಂಗಾರರಸ, ಶೋಕರಸಗಳಿಗೇನೂ ಕೊರತೆ ಇಲ್ಲ ಎಂಬುದು. 'ರಾಮ ಹರೀಕಾಭೇದ ನ ಪಾಯೋ' ಅನ್ನುವ ಸಂಗೀತ ಭಕ್ತಿರಸವನ್ನು ಉಕ್ಕಿಸುವಂತಹದಾದರೆ 'ನೈನ್ ಸೋನೈನ್ ಮಿಲಾಯೆ' ಎಂಬುದು ಶೃಂಗಾರರಸದ ಚೀಜುಗಳೂ ಭಾವಗೀತೆಗಳೇ ಅಲ್ಲವೆ? ಎಂದು ಪ್ರಶ್ನಿಸುತ್ತಾರೆ. ಮೊದಮೊದಲು ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಹಾಡಬೇಕಾದ ಸಂದರ್ಭ ಬಂದಾಗ ಮರಾಠಿ ಭಾಷೆ ಬರಬೇಕೆಂಬ ಒತ್ತಾಯವಿತ್ತು. ಆದರೆ ಗಂಗಜ್ಜಿ ಅದಕ್ಕೆ ಸೊಪ್ಪು ಹಾಕದೆ ತಮಗೆ

ಗೊತ್ತಿರುವ ಹಿಂದಿ ಭಾಷೆಯಲ್ಲೇ ಹಾಡುತ್ತಿದ್ದರು. ಮರಾಠಿಯನ್ನು ಹೊಸದಾಗಿ ಕಲಿತು ಪ್ರಯೋಗಿಸಲು ಇಚ್ಛೆಪಡಲಿಲ್ಲ. ಕಾರಣ ಅವರ ಗುರುಗಳಾದ ಸವಾಯಿ ಗಂಧರ್ವರು, ಅಬ್ದುಲ್ ಕರೀಂಖಾನರು ಇವರೇ ಮುಂತಾದವರ ಪ್ರಭಾವ.

ಭಾರತದ ಅಸಾಧಾರಣರ ಎದುರು ಗಾನ ವಿಶಾರದೆ

ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಹೆಣ್ಣುಮಗಳು ಗಾಂಧಾರಿಯಾಗಿ, ಗಂಗಕ್ಕಳಾಗಿ, ಗಂಗೂಬಾಯಿ ಹಾನಗಲ್ ಆಗಿ ಗಂಗಜ್ಜಿಯಾಗಿ ಹಿಂದೂಸ್ತಾನಿ ಸಂಗೀತ ಸರಸ್ವತಿಯಾಗಿ ಮೆರೆದ ಗಂಗೂಬಾಯಿ ಹಾನಗಲ್. ರಾಷ್ಟ್ರದ ಸಂಗೀತ ಕ್ಷೇತ್ರದ ಅಸಾಧಾರಣ ಪ್ರತಿಭೆಗಳಾದ ಪಂಡಿತ್ ಸವಾಯಿ ಗಂಧರ್ವ, ಪಂ. ಭೀಮಸೇನಜೋಶಿ, ಪಂ. ಬಸವರಾಜ ರಾಜಗುರು, ಡಾ॥ ಮಲ್ಲಿಕಾರ್ಜುನ ಮನ್ಸೂರ್, ಫಿರೋಜ್ ದಸ್ತೂರ್, ನೀಲಕಂಠಬುವಾ, ಪಂ. ಕುಮಾರ್ ಗಂಧರ್ವ, ಮಾಣಿಕವರ್ಮಾ, ಜಿತೇಂದ್ರ ಅಭಿಷೇಕ, ಬೇಗಂ ಅಖ್ತರ್, ರಹಮತ್ ಅಲಿಖಾನ್, ಅಬ್ದುಲ್ ಹಮೀದ್ ಜಾಫರ್‌ಖಾನ್, ಅರವಿಂದ ಪಾಠಕ್ ಸುಲಭದತ್ತ ನೀರಲಗಿ, ನಾಗಾನಥ ಒಡೆಯರ್, ಜದ್ದನ್‌ಬಾಯಿ, ಸಿದ್ದೇಶ್ವರಿದೇವಿ, ರಸೂಲನ್‌ಬಾಯಿ, ಸೈಗಾಲ್, ಉಸ್ತಾದಫಯಾಜ್‌ಖಾನ್, ಪಹಾಡಿ ಸನ್ಯಾಲ್‌ರಂತಹ ಸಂಗೀತಗಾರರೇ ಅಲ್ಲದೆ ವಾದ್ಯಸಂಗೀತಗಾರರಾದ ಪಂಡಿತ್ ರವಿಶಂಕರ್, ರಹೀಮತ್‌ಖಾನ್, ಹರಿಪ್ರಸಾದ್ ಚೌರಾಸಿಯಾ, ಬಿಸ್ಮಿಲ್ಲಾಖಾನ್, ಅಕ್ಬರ್‌ಬಾನ್, ವಿ.ಜಿ. ಜೋಶಿ ಬುರ್ಜಿಖಾನ್, ಪೈಯಾಜ್‌ಖಾನ್ ಇವರೇ ಮುಂತಾದವರು ಗಂಗೂಬಾಯಿ ಹಾನಗಲ್‌ರ ಸಂಗೀತವನ್ನು ಒಂದಲ್ಲಾ ಒಂದು ಸಂದರ್ಭದಲ್ಲಿ ಕೇಳಿ ತಲೆದೂಗಿದರು. ಶ್ರೀಮತಿ ಇಂದಿರಾಗಾಂಧಿ, ರಾಜೀವ್‌ಗಾಂಧಿ, ಫಕ್ರುದೀನ್ ಆಲಿ ಅಹಮದ್, ಅಬ್ದುಲ್ ಕಲಾಂರಂತಹ ರಾಷ್ಟ್ರನಾಯಕರು ಷಹಬಾಸ್‌ಗಿರಿ ನೀಡಿದರು. ಇಡೀ ರಾಷ್ಟ್ರವೇ ಮೆಚ್ಚಿ 05.10.1971ರಂದು ಭಾರತ ಸರ್ಕಾರವು ರಾಷ್ಟ್ರಪತಿ ವಿ.ವಿ. ಗಿರಿಯವರು ಗಂಗಜ್ಜಿಗೆ **'ಪದ್ಮಭೂಷಣ ಪ್ರಶಸ್ತಿ'** ನೀಡಿ ಗೌರವಿಸಿತು.

ಮಹಾರಾಷ್ಟ್ರ ರಾಜ್ಯಪಾಲರಾಗಿದ್ದ ಕೃಷ್ಣರಿಂದ ಸನ್ಮಾನ

ಮಹಾರಾಷ್ಟ್ರದ ರಾಜಧಾನಿ 'ಮುಂಬೈ' ದೇಶ ವಿದೇಶಗಳ ಕೇಂದ್ರಬಿಂದು. ಅಲ್ಲಿನ 'ರಾಜಭವನ' ಮೋಹಕ ತಾಣಗಳಲ್ಲೇ ಪ್ರಮುಖವಾದದ್ದು. ಅದರ ಒಡೆಯ (ರಾಜ್ಯಪಾಲ) ಎಸ್.ಎಂ. ಕೃಷ್ಣ. ತಮ್ಮ ರಾಜ್ಯದ ಹೆಣ್ಣುಮಗಳು ಗಂಗೂಬಾಯಿ ಮಹಾರಾಷ್ಟ್ರದವರ ಪಾಲಿಗೆ ಬಡಾದೀದಿ. ಆಕೆಯನ್ನು ರಾಜಭವನದಲ್ಲಿ ಸನ್ಮಾನಿಸಬೇಕೆಂದು 10 ಜುಲೈ 2005ರಲ್ಲಿ ಕಾರ್ಯಕ್ರಮ ಏರ್ಪಡಿಸಿದರು. ಮುಂಬೈನ ಚಲನಚಿತ್ರತಾರೆಯರಿಗೆ, ಸಂಗೀತ ಸಾಮ್ರಾಟರಿಗೆ, ಗಣ್ಯವ್ಯಕ್ತಿಗಳಿಗೆ

ಆಹ್ವಾನ. ಅಮಿತಾಬಚನ್ ದಂಪತಿಗಳು, ಐಶ್ವರ್ಯರ್ರೈ ಸೇರಿದಂತೆ ಸಿನಿಮಾ ದಿಗ್ಗಜರು. ಆಶಾಭೋಂಸ್ಲೆ, ಅನುರಾಧಾ ಪೊಡ್ವಾಲ್, ಪಂಕಜ್ ಉದಾಸ್‌ರಂತಹ ಮೇರು ವ್ಯಕ್ತಿಗಳೇ ತುಂಬಿದ್ದ ಸಭಾಂಗಣ. ವೇದಿಕೆಯ ಮೇಲೆ ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶಮುಖ್, ರಾಜ್ಯಪಾಲ ಎಸ್.ಎಂ. ಕೃಷ್ಣ ದಂಪತಿಗಳು ದೀದಿಯನ್ನು ವೇದಿಕೆಗೆ ಬರಮಾಡಿಕೊಂಡರು. ರಾಜ್ಯಪಾಲರು ಅಂದು ಹೇಳಿದ್ದು ಹೀಗೆ "ನಿಜಕ್ಕೂ ನನಗೆ ಇಂದಿನ ದಿನ ಹೆಮ್ಮೆ ಮತ್ತು ಸಂಭ್ರಮದ ದಿನ. ಈ ಸಂಗೀತ ಸರಸ್ವತಿ ಈ ನೆಲದಲ್ಲಿ (ಮಹಾರಾಷ್ಟ್ರ) ಇಷ್ಟೊಂದು ಆರಾಧನೆಗೆ ಪಾತ್ರವಾಗುತ್ತಿರುವುದನ್ನು ನನ್ನ ಕಣ್ಣುಗಳಲ್ಲಿ ತುಂಬಿಕೊಂಡೆ. ಇಂಥ ತಾಯಿಯನ್ನು ನನ್ನ ರಾಜ್ಯ (ಮಹಾರಾಷ್ಟ್ರ)ದ ಜನತೆಯ ಪರವಾಗಿ ಸನ್ಮಾನಿಸುವ ಭಾಗ್ಯ ನನ್ನದಾಗಿಸುವುದಕ್ಕೆ ಅಭಿಮಾನಪಡುತ್ತೇನೆ.. ಈ 'ರತ್ನ'ದ ಬೆಳಕಿನಲ್ಲಿ ನಾವೆಲ್ಲ ಪುನೀತರಾಗಿದ್ದೇವೆ ಎಂದು ಭಾವಿಸುತ್ತೇನೆ" ಎಂದು ಮಾತು ಮುಗಿಸುವ ಮುನ್ನವೇ ಮುಗಿಲು ಮುಟ್ಟುವ ಕರತಾಡನ ಎಲ್ಲರೂ ಏಕಕಾಲಕ್ಕೆ ಎದ್ದು ನಿಂತು ಗೌರವ ಸೂಚಿಸಿದ್ದು ಗಂಗಜ್ಜಿಯ ಸಾಧನೆಗೆ ಸಂದ ಗೌರವ ಅದಾಗಿತ್ತು.

ಬದುಕಿಗೆ ವಿದಾಯ ಹೇಳತೊಡಗಿದ ಗಂಗಜ್ಜಿ

ಗಂಗೂಬಾಯಿ ಹಾನಗಲ್ ಎಂದೇ ಜಗದ್ವಿಖ್ಯಾತರಾದ ಮಹಾನ್ ಗಾಯಕಿ ಕಷ್ಟದಲ್ಲೇ ಹುಟ್ಟಿ ಕಷ್ಟದಲ್ಲೇ ಬೆಳೆದು ಯಾರಿಗೂ ಕಷ್ಟಕೊಡದೆ 'ಕ್ಯಾನ್ಸರ್' ಎಂಬ ಪೆಡಂಭೂತಕ್ಕೆ ತುತ್ತಾದರು. ತಮಗೆ 'ಕ್ಯಾನ್ಸರ್' ಬಂದಿದೆ ಎಂದು ತಿಳಿದರೂ ಹೆದರಲಿಲ್ಲ. ಎಸ್.ಎಂ. ಕೃಷ್ಣರವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ, ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದಾಗ ಈ ಮಹಾನ್ ಗಾಯಕಿಯನ್ನು ಮರೆಯಲಿಲ್ಲ. ಆಕೆಯ ಕ್ಯಾನ್ಸರ್ ಗುಣಪಡಿಸಲು ಸರ್ಕಾರ ವೆಚ್ಚ ಭರಿಸುವಂತೆ ಮಾಡಿದರು.

ಇಂತಹ ಸಂಗೀತ 'ಕಲಾನಿಧಿ' ನೂರುಜನ ಶಿಷ್ಯರನ್ನು ಕೋಟ್ಯಾಂತರ ಜನ ಶ್ರೋತೃಗಳನ್ನು ಬಿಟ್ಟು 21.7.2009ರಂದು ತಮ್ಮ 97ನೇ ವಯಸ್ಸಿನಲ್ಲಿ ಬದುಕಿಗೆ ವಿದಾಯ ಹೇಳಿದರು.

ಪ್ರಶಸ್ತಿ ಹಾಗೂ ಬಿರುದು ಬಾವಲಿಗಳು

1. **ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ:** ಕರ್ನಾಟಕ ಸರ್ಕಾರದಿಂದ 1962ರಲ್ಲಿ

2. **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ:** 1970ರಲ್ಲಿ ಪ್ರದಾನ.

3. **ಪದ್ಮಭೂಷಣ ಪ್ರಶಸ್ತಿ:** 05.101971ರಂದು ಭಾರತ ಸರ್ಕಾರದ ಅಂದಿನ ರಾಷ್ಟ್ರಪತಿ ಶ್ರೀ ವಿ.ವಿ. ಗಿರಿ ಅವರಿಂದ.

4. **ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ:** 1973ರಲ್ಲಿ ಭಾರತ ಸರ್ಕಾರದಿಂದ.

5. **ಆಕಾಶವಾಣಿ ಸುವರ್ಣ ಮಹೋತ್ಸವ ಪ್ರಶಸ್ತಿ:** 1977ರಲ್ಲಿ ಅಂದಿನ ಪ್ರಧಾನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ ಅವರಿಂದ.

6. **ಗಾನಮಾಲಾ ಚೂಡಾರತ್ನ ಪ್ರಶಸ್ತಿ:** 22.12.1980ರಂದು ಮಾರುತಿ ಸೇವಾ ಸಂಘ ಮತ್ತು ಮೈಸೂರು.

7. **ಇಂಡಿಯನ್ ಟುಬ್ಯಾಕೋ ಕಂಪನಿ ಪ್ರಶಸ್ತಿ:** 1982ರಲ್ಲಿ ಪ್ರದಾನ.

8. **ತಾನ್‌ಸೇನ್ ಪ್ರಶಸ್ತಿ:** 28.12.1984ರಲ್ಲಿ ಮಧ್ಯಪ್ರದೇಶ ಸರ್ಕಾರದಿಂದ ಗ್ವಾಲಿಯರ್‌ನಲ್ಲಿ ನಡೆದ ತಾನ್‌ಸೇನ್ ಫೆಸ್ಟಿವಲ್‌ನಲ್ಲಿ.

9. **ರೂಹೆ ಘಜಲ್ ಬೇಗಂ ಅಖ್ತರ್ ಪ್ರಶಸ್ತಿ:** 1987ರಲ್ಲಿ ಘಜಲ್ ರಾಣಿಯಾದ ಬೇಗಂ ಅಖ್ತರ್ ಅವರ ನೆನಪಿಗಾಗಿ

10. **ಭುನಾಲಿಕಾ ಪ್ರಶಸ್ತಿ:** 22.03.1990ರಂದು ಪಶ್ಚಿಮ ಬಂಗಾಳ

11. **ಹಾಪೀಜ಼ ಅಲಿಖಾನ್ ಮೆಮೋರಿಯಲ್ ಪ್ರಶಸ್ತಿ:** 04.05.1990ರಂದು ನವದೆಹಲಿಯಲ್ಲಿ

12. **ಕನಕಪುರಂದರ ಪ್ರಶಸ್ತಿ:** 1992ರಲ್ಲಿ ಕರ್ನಾಟಕ ಸರ್ಕಾರದಿಂದ

13. **ಐಟಿಸಿ ಸಂಗೀತ ಅಕಾಡೆಮಿ ಪ್ರಶಸ್ತಿ:** 1992ರಲ್ಲಿ ಐಟಿಸಿ ಸಂಗೀತ ರಿಸರ್ಚ್ ಅಕಾಡೆಮಿ, ಕಲ್ಕತ್ತ

14. **ಸುಜನ ಗೌರವ ಪುರಸ್ಕಾರ:** 1993ರಲ್ಲಿ ಪಂಡಿತ ರಾತಂಜನಕರ್ ಪ್ರತಿಷ್ಠಾನ, ಮುಂಬೈ.

15. **ಶಂಕರ್‌ದೇವ್ ಪ್ರಶಸ್ತಿ:** 19993ರಲ್ಲಿ ಅಸ್ಸಾಂ ರಾಜ್ಯ ಸರ್ಕಾರದಿಂದ

16. **ಗೋದಾವರಿ ಗೌರವ ಪ್ರಶಸ್ತಿ:** 1993ರಂದು ನಾಸಿಕ್‌ನಲ್ಲಿ ಪ್ರದಾನ.

17. **ಸಂಗೀತರತ್ನ ಮೈಸೂರು ಟಿ. ಚೌಡಯ್ಯ ಮೆಮೋರಿಯಲ್ ನ್ಯಾಷನಲ್ ಅವಾರ್ಡ್:** 04.3.1995ರಂದು.

18. **ಕೇಂದ್ರ ಸರ್ಕಾರದಿಂದ ಫೆಲೋಶಿಪ್:** 1996ರಲ್ಲಿ ಭಾರತ ಸರ್ಕಾರದಿಂದ.

19. **ದಿವಂಗತ ದೀನಾನಾಥ ಮಂಗೇಶ್ಕರ್ ಪ್ರಶಸ್ತಿ:** 1998ರಲ್ಲಿ ದೀನಾನಾಥ ಮಂಗೇಶ್ಕರ್ ಪ್ರತಿಷ್ಠಾನ.

20. **ಮಾಣಿಕ್ಯ ರತ್ನ ಪ್ರಶಸ್ತಿ:** 02.3.1997ರಂದು ಮಾಣಿಕ್‌ವರ್ಮಾ ಪ್ರತಿಷ್ಠಾನದಿಂದ.

21. **ವಾದಿರಾಜ ಆದ್ಯ ಸ್ಮಾರಕ ಪ್ರಶಸ್ತಿ:** 25.2.1997ರಂದು ಕರ್ನಾಟಕ ಸಂಘದಿಂದ, ಮುಂಬೈನಲ್ಲಿ ಪ್ರದಾನ.

22. **ಗಾನಯೋಗಿ ಪಂಚಾಕ್ಷರಿ ಪ್ರಶಸ್ತಿ:** 02.3.1997ರಂದು ಗಾನಯೋಗಿ ಪಂಚಾಕ್ಷರಿ ಪ್ರತಿಷ್ಠಾನದಿಂದ ಬೆಂಗಳೂರಿನಲ್ಲಿ ಪ್ರದಾನ.

23. **ಆಚಾರ್ಯ ಪಂಡಿತ ರಾಮ ನಾರಾಯಣ ಪ್ರಶಸ್ತಿ:** 2000ರಲ್ಲಿ ಆಚಾರ್ಯ ಪಂಡಿತ ರಾಮ ನಾರಾಯಣ ಫೌಂಡೇಶನ್‌ನಿಂದ ಬಾಂಬೆಯಲ್ಲಿ ಪ್ರದಾನ.

24. **ಕರ್ನಾಟಕ ಭೂಷಣ ಪ್ರಶಸ್ತಿ:** 2001ರಲ್ಲಿ ಬೆಂಗಳೂರು ಪತ್ರಕರ್ತರ ಸಾಂಸ್ಕೃತಿಕ ವೇದಿಕೆ, ಬೆಂಗಳೂರಿನಲ್ಲಿ ಪ್ರದಾನ.

25. **ಪದ್ಮವಿಭೂಷಣ ಪ್ರಶಸ್ತಿ:** 27.3.2002ರಂದು ಭಾರತ ಸರ್ಕಾರದ ರಾಷ್ಟ್ರಪತಿಗಳಾಗಿದ್ದ ಕೆ.ಆರ್.ನಾರಾಯಣನ್ ಅವರಿಂದ.

26. **ನ್ಯಾಷನಲ್ ಆರ್ಟಿಸ್ಟ್ ಪ್ರಶಸ್ತಿ:** 29.3.2004ರಂದು

27. **ಉಸ್ತಾದ್ ಇನಾಯತ್ ಖಾನ್ ಮೆಮೋರಿಯಲ್ ಪ್ರಶಸ್ತಿ:** 2004ರಲ್ಲಿ ಉಸ್ತಾದ್ ಇನಾಯತ್‌ಖಾನ್ ಮೆಮೋರಿಯಲ್ ಫೌಂಡೇಶನ್, ಕೊಲ್ಕತ್ತಾ ಇವರಿಂದ ಪ್ರದಾನ.

28. **ಪೌಲ್ ಹ್ಯಾರೀಸ್ ಫೆಲೋಶಿಪ್:** 2005ರಲ್ಲಿ ರೋಟರಿ ಫೌಂಡೇಶನ್, ರೋಟರಿ ಇಂಟರ್‌ನ್ಯಾಶನಲ್.

29. **ಆದಿತ್ಯ ವಿಕ್ರಮ ಬಿರ್ಲಾ ಕಲಾ ಶಿಬಿರ ಪುರಸ್ಕಾರ:** 12.11.2005ರಂದು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದ ವಿಲಾಸರಾವ್ ದೇಶಮುಖ್ ಹಾಗೂ ಶಿವಕುಮಾರ್‌ಶರ್ಮ ಅವರಿಂದ ಪ್ರದಾನ.

30. **ಗಾಯನ ಸಮಾಜ ಸೆಂಚುರಿ ಪ್ರಶಸ್ತಿ:** 20.8.2005ರಂದು ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್‌ಕಲಾಂ ಆಜಾದ್ ಅವರಿಂದ ಬೆಂಗಳೂರಿನಲ್ಲಿ ಪ್ರದಾನ.

31. **ಇಂಡಿಯನ್ ಮ್ಯೂಸಿಕ್ ಪ್ರಶಸ್ತಿ:** 17.2.2006ರಂದು

ಗೌರವ ಡಾಕ್ಟರೇಟ್ ಪದವಿ

1. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 29.3.1976
2. ಗುಲ್ಬರ್ಗಾ ವಿಶ್ವವಿದ್ಯಾಲಯ – 26.2.1986
3. ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ಹಂಪಿ – 15.2.1995
4. ದೆಹಲಿ ವಿಶ್ವವಿದ್ಯಾಲಯ – 19.5.1995
5. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು – 08.2.2008

ಬಿರುದುಗಳು

1. ಸಂಗೀತ ಶಿರೋಮಣಿ – 1950
2. ಭಾರತೀ ಕಂಠ – 1953
   (ಕಾಶಿ ನಾರಿ ಪ್ರಚಾರ ಸಭಾ, ಕಾಶಿ)
3. ಸಂಗೀತ ಸರಸ್ವತಿ – 1976
   (ಹಾವನೂರು ಪ್ರತಿಷ್ಠಾನ, ಹಾವೇರಿ)
4. ಸಂಗೀತ ಕಲಾರತ್ನ – 1977
   (ಗಾಯನ ಸಮಾಜ ಬೆಂಗಳೂರು)
5. ಸಂಗೀತ ರತ್ನ – 1995
6. ಸಪ್ತಗಿರಿ ಸಂಗೀತ ವಿದ್ವನ್ಮಣಿ – 1995
   (ತ್ಯಾಗರಾಜ ಉತ್ಸವ ಸಮಿತಿ, ತಿರುಪತಿ)
7. ಆಧುನಿಕ ಸಂಗೀತ ಶಬರಿ – 1997
8. ಕನ್ನಡ ಕುಲತಿಲಕ – 1998
9. ನಾದಬ್ರಹ್ಮಿಣಿ – 1998
10. ಗಾನ ರತ್ನ – 1999
11. ಸಂಗೀತ ಸಾಮ್ರಾಜ್ಞಿ – 2000
12. ಸಂಗೀತ ಸರಸ್ವತಿ – 2005
13. ಸ್ವರ ಸರಸ್ವತಿ – 2008
14. ಗಾನ ಗಂಧರ್ವ ಗಂಗಾಗೀತ – 2006

15. ಶ್ರೀ ಗಂಗಾ ಮುಕುಟ ಮಣಿ – 2006
16. ಗಾನ ಗಂಗಾಮಾಯಿ – 2006
17. ಅಂಬಾಸುತೆ ಗಂಗಾ – 2007
18. ರಾಗಭೂಷಣ – 2007
19. ಸ್ವರಚಿಂತಾಮಣಿ – 2007
20. ಗುರುಗಂಧರ್ವ – 2007
21. ವಿದ್ಯಾಮೃತ ವರ್ಷಿಣಿ – 2007
22. ರಾಗರಾಜೇಶ್ವರಿ – 2007
23. ಅಮೃತ ಗಂಗೆ – 2008
24. ಸ್ವರ ಶಿರೋಮಣಿ – 2008
25. ಗಾನ ಸರಸ್ವತಿ – 2008

ಟಿ. ಸಿದ್ದಲಿಂಗಯ್ಯ

ಜಾಗತಿಕ ಇತಿಹಾಸದ ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಭಾರತವು ಸ್ವಾತಂತ್ರ್ಯವನ್ನು ಪಡೆದ ಪರಿಯು ರೋಚಕವಾಗಿದೆ. ಮಹಾತ್ಮಗಾಂಧಿ ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲರ ನೇತೃತ್ವದಲ್ಲಿ ಇಡೀ ಭಾರತೀಯರು ಒಂದಾಗಿ ಹೋರಾಟ ಮಾಡಿದರು. ಕರ್ನಾಟಕದಲ್ಲಿಯೂ ಬ್ರಿಟಿಷರ ದಾಸ್ಯ ಶೃಂಖಲೆಯಿಂದ ಹೊರಬರಲು ಹೋರಾಟಗಳು ನಡೆದವು. ಹಿಂಸಾ ಮಾರ್ಗವನ್ನು ತ್ಯಜಿಸಿ ಅಹಿಂಸೆ ಮತ್ತು ಸತ್ಯಾಗ್ರಹಗಳ ಮುಖೇನ ಚಳುವಳಿಗಳು ನಡೆಯುತ್ತಿದ್ದವು. ಇಂತಹ ಪವಿತ್ರವಾದ ಸ್ವಾತಂತ್ರ್ಯವನ್ನು ಪಡೆಯಲು ಒಂದಿಬ್ಬರು ಇಲ್ಲವೆ ಕೆಲವು ಜನರಿಂದ ಸಾಧ್ಯವಿಲ್ಲ. ಲಕ್ಷಾಂತರ ಜನ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಅವರಲ್ಲಿ ಕೆಲವರು ತಮ್ಮ ಜೀವವನ್ನು ಪಣವಾಗಿಟ್ಟು ಹೋರಾಡಿ ಮಡಿದು ಹುತಾತ್ಮರಾಗಿದ್ದಾರೆ. ಕರ್ನಾಟಕದಲ್ಲೇ ನೂರಾರು ಜನ ನಾಯಕರಿದ್ದಾರೆ. ಅವರಲ್ಲಿ ಕೆಲವರನ್ನು ಮಾತ್ರ ಸಾಂಕೇತಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಅಂತಹವರಲ್ಲಿ ಟಿ. ಸಿದ್ಧಲಿಂಗಯ್ಯನವರೂ ಒಬ್ಬರು. ಪವಿತ್ರವಾದ ಕಾಂಗ್ರೆಸ್ ಪಕ್ಷವು ಬ್ರಾಹ್ಮಣರ ಪಕ್ಷವೆಂದು ಅಂದು ಬ್ರಾಹ್ಮಣೇತರರು ಅಲ್ಲಗಳೆಯುತ್ತಿದ್ದರು. ಅಂತಹ ಸಮಯದಲ್ಲಿ ಅಪ್ಪಟ ಗಾಂಧೀವಾದಿ ಟಿ. ಸಿದ್ದಲಿಂಗಯ್ಯನವರು ಎಲ್ಲರನ್ನು ಒಂದುಮಾಡಿ ಮಹಾತ್ಮಗಾಂಧಿಯವರ ನೇತೃತ್ವದ ಕಾಂಗ್ರೆಸ್ಸನ್ನು ಜನಪ್ರಿಯಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಲದಲ್ಲಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಧ್ವಜಾರೋಹಣ ಮಾಡಿ ತುರಂಗವಾಸ ಅನುಭವಿಸಬೇಕಾಯ್ತು. ನಾಡಿನಾದ್ಯಂತ ನಡೆದ ಚಳುವಳಿಯಲ್ಲಿ ಹುರುಪಿನಿಂದ ಭಾಗವಹಿಸಿದರು. ಕೊನೆಗೆ ಸ್ವಾತಂತ್ರ್ಯ ಬಂದು ಕೆ.ಸಿ. ರೆಡ್ಡಿಯವರ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ತಾವು ಮಂತ್ರಿಯಾಗಲು ಒಲ್ಲೆನೆಂದು ಮಂತ್ರಿಮಂಡಲದಿಂದ ಹೊರಗುಳಿದ

ಧೀಮಂತ ವ್ಯಕ್ತಿ ಟಿ. ಸಿದ್ದಲಿಂಗಯ್ಯನವರು. ನಂತರ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾದಾಗ ಅವರ ಒತ್ತಾಯಕ್ಕೆ ಮಣಿದು ಮಂತ್ರಿಮಂಡಲ ಸೇರಿದರು. ಇಡೀ ತಮ್ಮ ಜೀವಿತಕಾಲದಲ್ಲಿ ಸಮಾಜ ಸುಧಾರಣೆಗಾಗಿ ದುಡಿದ ವ್ಯಕ್ತಿಯೇ ಟಿ. ಸಿದ್ದಲಿಂಗಯ್ಯ (ತೋಟಪ್ಪ ಸಿದ್ದಲಿಂಗಯ್ಯ).

ಟಿ. ಸಿದ್ದಲಿಂಗಯ್ಯನವರು 1896 ಸೆಪ್ಟೆಂಬರ್ ಮೂರನೆಯ ತಾರೀಖು ಜನಿಸಿದರು. ತೋಟಪ್ಪ ಮತ್ತು ಸಿದ್ದಮ್ಮ ತಂದೆತಾಯಿಗಳು. ಮೂಲತಃ ನಗರ್ತ ಜನಾಂಗದವರು. ಈ ದಂಪತಿಗಳಿಗೆ ಸಿದ್ದಪ್ಪ, ಸಿದ್ದೇಶಪ್ಪ, ಸಿದ್ದಲಿಂಗಯ್ಯ, ಚಿಕ್ಕಸಿದ್ದಪ್ಪ, ಸಿದ್ದಬಸಪ್ಪ, ಚಿಕ್ಕಸಿದ್ದಬಸಪ್ಪ ಮತ್ತು ಚಿಕ್ಕಸಿದ್ದಲಿಂಗಯ್ಯ ಎಂಬ ಏಳು ಜನ ಗಂಡುಮಕ್ಕಳು ಮತ್ತು ಸಿದ್ದಲಿಂಗಮ್ಮ ಹಾಗೂ ಚಿಕ್ಕಸಿದ್ದಲಿಂಗಮ್ಮ ಎಂಬ ಇಬ್ಬರು ಹೆಣ್ಣುಮಕ್ಕಳು ಒಟ್ಟು ಒಂಬತ್ತು ಜನ ಮಕ್ಕಳು. ಸಿದ್ದಲಿಂಗಯ್ಯನವರ ಅಣ್ಣಂದಿರಾದ ಸಿದ್ದಪ್ಪ ಮತ್ತು ಸಿದ್ದೇಶಪ್ಪನವರು ದೊಡ್ಡಬಳ್ಳಾಪುರದಲ್ಲಿ ದೊಡ್ಡ ಜವಳಿ ಅಂಗಡಿಯನ್ನು ನಡೆಸುತ್ತಿದ್ದು ಚೆನ್ನಾಗಿ ಸಂಪಾದಿಸುತ್ತಿದ್ದರು. ಇವರ ಕಾರ್ಯಕ್ಷೇತ್ರ ದೊಡ್ಡಬಳ್ಳಾಪುರವಾಗಿತ್ತು. ಸಿದ್ದಲಿಂಗಯ್ಯನವರಿಗೆ ವ್ಯಾಪಾರ ವಾಣಿಜ್ಯದಲ್ಲಿ ಆಸಕ್ತಿಯಿರಲಿಲ್ಲ. ಓದಿನಲ್ಲಿ ಆಸಕ್ತಿ ಇದ್ದಿತು. ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಣವನ್ನು ದೊಡ್ಡಬಳ್ಳಾಪುರದಲ್ಲೇ ಮುಗಿಸಿದರು. ಪದವಿ ಶಿಕ್ಷಣವನ್ನು ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡತೊಡಗಿದರು. ಅಂದು ಜಗದ್ವಿಖ್ಯಾತ ತತ್ವಶಾಸ್ತ್ರಜ್ಞರಾಗಿದ್ದ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್‌ರವರು ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಅವರ ಪಾಠ ಪ್ರವಚನ ಕೇಳುವ ಉದ್ದೇಶದಿಂದಲೇ ತತ್ವಶಾಸ್ತ್ರವನ್ನು ತಮ್ಮ ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡರು. ಇವರು ವ್ಯಾಸಂಗ ಮಾಡುತ್ತಿರುವಾಗ ವಿ.ಸೀತಾರಾಮಯ್ಯ, ಹೆಚ್.ಆರ್. ಗುರುವಾರೆಡ್ಡಿ (ಸ್ವಾತಂತ್ರ ಹೋರಾಟಕ್ಕೆ ಧುಮುಕಿದರು). ಜಿ.ಟಿ. ಮಲ್ಲಾರಾಧ್ಯ ಇವರೇ ಮುಂತಾದವರ ಪರಿಚಯವಾಯ್ತು. ಬಿ.ಎ. ಪದವೀಧರರಾಗಿ ತಮ್ಮ ಊರಿಗೆ ಬಂದಾಗ ಭವ್ಯಸ್ವಾಗತ ಕಾಯ್ದಿತ್ತು. ತಮ್ಮ ಶಿಕ್ಷಣವನ್ನು ಅಲ್ಲಿಗೆ ನಿಲ್ಲಿಸದೇ 1923ರಲ್ಲಿ ಕಾನೂನು ಶಿಕ್ಷಣವನ್ನು ಮುಗಿಸಿ ಕಾನೂನು ಪದವೀಧರರಾದರು.

ಕಾನೂನು ಪದವಿಯ ನಂತರ ವಕೀಲರಾಗಬೇಕೆಂಬ ಹಂಬಲದಿಂದ ಬೆಂಗಳೂರಿಗೆ ಬಂದು ನೆಲೆಸಿದರು. ಅಂದು ಖ್ಯಾತ ನ್ಯಾಯವಾದಿಗಳಾಗಿದ್ದ ಮೋಕ್ಷಗುಂಡಂ ಕೃಷ್ಣಮೂರ್ತಿ (ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಬಂಧುಗಳು) ಯವರ ಬಳಿ ಅವರ (ಕಿರಿಯ ವಕೀಲ) ಸಹಾಯಕರಾಗಿ 3 ವರ್ಷ ಕೆಲಸ ಮಾಡತೊಡಗಿದರು. ಪಾರ್ವತಮ್ಮ ಎಂಬುವವರನ್ನು ವಿವಾಹವಾದರು. ಈ

ದಂಪತಿಗಳಿಗೆ ರಾಜಶೇಖರಯ್ಯ, ಶಾಂತಕುಮಾರ್ ಎಂಬ ಇಬ್ಬರು ಗಂಡುಮಕ್ಕಳು, ಸರೋಜಮ್ಮ ಎಂಬ ಒಬ್ಬ ಹೆಣ್ಣುಮಗಳು ಜನಿಸಿದರು. ಮೂರು ವರ್ಷಗಳ ಸಹಾಯಕ ವಕೀಲರಾಗಿ (ಕಿರಿಯ ವಕೀಲ) ಗಳಿಸಿದ ಜ್ಞಾನದ ಸಹಾಯದಿಂದ ಸ್ವತಂತ್ರರಾಗಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಬ್ರಹ್ಮಸಮಾಜದ ಆಜೀವ ಸದಸ್ಯರಾಗಿದ್ದು ಸಿದ್ದಲಿಂಗಯ್ಯನವರು ವಕೀಲಿ ವೃತ್ತಿ ಮಾಡುವಾಗಲು ಸತ್ಯ ಧರ್ಮಕ್ಕೆ ಪ್ರಾಶಸ್ತ್ಯ ನೀಡುತ್ತಿದ್ದರು. ಯಾವತ್ತೂ ಹಣ ಸಂಪಾದನೆಗೆ ಒತ್ತು ಕೊಟ್ಟವರಲ್ಲ.

ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಟಿ.ಎಸ್.

ಅಂದು ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಪಕ್ಷಗಳು ತಲೆ ಎತ್ತಿದ್ದವು. ನಾವು ತಿಳಿದಿರುವಂತೆ ಅಂದು ಕಾಂಗ್ರೆಸ್ ಪಕ್ಷವು ಹಳೇ ಮೈಸೂರು ಪ್ರಾಂತ್ಯದಲ್ಲಿ ಜನಪ್ರಿಯ ಪಕ್ಷವಾಗಿರಲಿಲ್ಲ. ಕಾರಣವೇನೆಂದರೆ ಕಾಂಗ್ರೆಸ್ ಪಕ್ಷವು ಬ್ರಾಹ್ಮಣರ ಪಕ್ಷವೆಂದು ಬ್ರಾಹ್ಮಣೇತರರು ಹೀಗಳೆಯುತ್ತಿದ್ದರು. ಕಾರಣವೇನೆಂದರೆ ಅಂದು ಮದ್ರಾಸಿನಲ್ಲಿ 'ಜಸ್ಟೀಸ್ ಪಾರ್ಟಿ' ಎಂಬ ಬ್ರಾಹ್ಮಣೇತರ ಪಕ್ಷವು ಹುಟ್ಟಿಕೊಂಡು ದಕ್ಷಿಣ ಭಾರತದಾದ್ಯಂತ ಜನಪ್ರಿಯವಾಗಿತ್ತು. ಡಾ. ಸಿ.ಆರ್. ರೆಡ್ಡಿಯವರು ದಕ್ಷಿಣ ಭಾರತದಾದ್ಯಂತ ಸಂಚರಿಸಿ ಈ ಪಕ್ಷವನ್ನು ಜನಪ್ರಿಯಗೊಳಿಸಿದರು. ಹಳೇ ಮೈಸೂರು ಪ್ರಾಂತ್ಯದಲ್ಲಿ ಹೀರೇಹಳ್ಳಿ ಚನ್ನಯ್ಯನವರು ಮತ್ತು ಅವರ ಸ್ನೇಹಿತರು ಸೇರಿ 'ಪ್ರಜಾಮಿತ್ರ ಮಂಡಳಿ' ಎಂಬ ಪಕ್ಷವನ್ನು ಸ್ಥಾಪಿಸಿದ್ದರು. ಇದು ಅಂದು ಕಾಂಗ್ರೆಸ್‌ಗಿಂತಲೂ ಜನಪ್ರಿಯ ಪಕ್ಷವಾಗಿತ್ತು. ನಂತರ ಪ್ರಜಾಮಿತ್ರ ಮಂಡಳಿಯು ಕ್ರಮೇಣ 'ಪ್ರಜಾಪಕ್ಷ'ವಾಯಿತು. 1937ರಲ್ಲಿ ಪ್ರಜಾಪಕ್ಷ ಮತ್ತು ಕಾಂಗ್ರೆಸ್ ನೇತಾರರ ನಡುವೆ ಮಾತುಕತೆಯಾಗಿ ಅವರಲ್ಲಿದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿಕೊಂಡು ಪ್ರಜಾಪಕ್ಷವು ಕಾಂಗ್ರೆಸ್‌ನೊಂದಿಗೆ ವಿಲೀನವಾಯ್ತು. ಹೀಗೆ ಒಗ್ಗೂಡಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಟಿ. ಸಿದ್ದಲಿಂಗಯ್ಯನವರು ಆಯ್ಕೆಯಾದರು. ವೀರಕೇಸರಿ ಸೀತಾರಾಮಶಾಸ್ತ್ರಿಗಳು ತಗಡೂರು ರಾಮಚಂದ್ರರಾಯರು ಮತ್ತು ವಿ.ಎಸ್. ನಾರಾಯಣರಾಯರು ಇದರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆಲಸ ಮಾಡಿದರು. ಮಹಾತ್ಮಗಾಂಧಿಯವರು ನಂದಿಬೆಟ್ಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ದಿನಗಳಲ್ಲಿ ಸಿದ್ದಲಿಂಗಯ್ಯನವರು ಅಲ್ಲಿಗೆ ಹೋಗಿ ಅವರ ಸಲಹೆ, ಸಹಕಾರಗಳನ್ನು ಕೇಳಿಬರುತ್ತಿದ್ದರು. ಕ್ರಮೇಣ ಗಾಂಧಿಯವರ ಸೆಳೆತಕ್ಕೆ ಒಳಗಾದರು.

ಹೀಗೆ ವಿಲೀನಗೊಂಡ ಕಾಂಗ್ರೆಸ್ ಹೆಚ್ಚು ಜನಪ್ರಿಯವಾಗತೊಡಗಿತು. ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಹೆಚ್.ಸಿ. ದಾಸಪ್ಪ, ಯಶೋಧರ ದಾಸಪ್ಪ,

ಬಳ್ಳಾರಿ ಸಿದ್ದಮ್ಮ, ಸಾಹುಕಾರ ಚನ್ನಯ್ಯ, ಟಿ. ಸುನಂದಮ್ಮ, ಎ.ಜಿ. ರಾಮಚಂದ್ರರಾವ್, ಮಾಲಿಮರಿಯಪ್ಪ, ಹೆಚ್.ಕೆ. ವೀರಣ್ಣಗೌಡ. ಹೀಗೆ ಹಲವಾರು ಮಂದಿ ಬಹಳ ಉತ್ಸಾಹದಿಂದ ಮುಷ್ಕರ, ಹರತಾಳಗಳಲ್ಲಿ ಭಾಗವಹಿಸುವುದು ಹಳ್ಳಿಹಳ್ಳಿಗಳಿಗೆ ತಿರುಗಿ ಜನರನ್ನು ಸ್ವಾತಂತ್ರ್ಯ ಚಳುವಳಿಗೆ ಧುಮುಕುವಂತೆ ಮಾಡುವಲ್ಲಿ ಯಶಸ್ವಿಯಾದರು. ಕಾಂಗ್ರೆಸ್ ಪಕ್ಷವು ದಿನೇ ದಿನೆ ಪ್ರಬಲ ಪಕ್ಷವಾಗಿ ಹೊರಹೊಮ್ಮಿತು. ಮಹಾತ್ಮ ಗಾಂಧಿಯವರು ಇಡೀ ರಾಷ್ಟ್ರವನ್ನು ಮುನ್ನಡೆಸುತ್ತಿದ್ದರು.

ಶಿವಪುರ ಸತ್ಯಾಗ್ರಹ ಮತ್ತು ಟಿ.ಎಸ್.

ಮೈಸೂರು ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯದ ಧ್ವಜಾರೋಹಣ ಮಾಡಬೇಕೆಂದು ತೀರ್ಮಾನಿಸಿತು. ಅದನ್ನು ಎಲ್ಲಿ ನಡೆಸಬೇಕು ಎಂಬ ಚರ್ಚೆ ಬಂದಾಗ ಜನರು ನಂಜನಗೂಡಿನಲ್ಲಿ ನಡೆಸಬೇಕು ಎಂದರು. ಆ ಪ್ರದೇಶದ ನಾಯಕರಾಗಿದ್ದ ಸೂರ್ಯನಾರಾಯಣಗೌಡರು ನನ್ನ ಕೈಲಿ ಸಾಧ್ಯವಾಗುವುದಿಲ್ಲವೆಂದು ಕೈಚೆಲ್ಲಿದರು. ಕೆಲವರು ಶ್ರೀರಂಗಪಟ್ಟಣವೆಂದರು ಅದಕ್ಕೆ ಮತ್ತೊಬ್ಬರು ಆಗುವುದಿಲ್ಲ ಕಷ್ಟವೆಂದರು. ಕೊನೆಗೆ ಮದ್ದೂರಿನ ಶಿವಪುರದಲ್ಲಿ ನಡೆಸಿದರೆ ನಾನು ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇನೆ ಎಂದು ಹೆಚ್.ಕೆ.ವೀರಣ್ಣಗೌಡರು ತಮ್ಮ ಒಪ್ಪಿಗೆ ನೀಡಿದರು. ಅದಕ್ಕಾಗಿ ಒಂದು ಸಮಿತಿಯು ರಚನೆಯಾಯಿತು. ಸ್ವಾಗತ ಸಮಿತಿ ಅಧ್ಯಕ್ಷರಾಗಿ ಎಸ್. ಚನ್ನಯ್ಯನವರು (ಸಾಹುಕಾರ್ ಚನ್ನಯ್ಯ) ಕಾರ್ಯಾಧ್ಯಕ್ಷರಾಗಿ ಎ.ಜಿ. ಬಂದೀಗೌಡ ಕಾರ್ಯಪಡೆಯ ಸದಸ್ಯರಾಗಿ ಪಿ. ತಿರುಮಲಗೌಡ, ಎಸ್. ರಂಗರಾಮಯ್ಯ, ಖಜಾಂಚಿಗಳಾಗಿ ಕೊಪ್ಪದ ಜೋಗೀಗೌಡ, ಜಿ.ಒ.ಸಿ. (ಜನರಲ್ ಆಫಿಸರ್ ಕಮಾಂಡಿಂಗ್) ಆಗಿ ಎಂ.ಎನ್. ಜೋಯಿಸರು ಎಂದು ಮೈಸೂರಿನಲ್ಲಿ ಪ್ರಕಟಿಸಿದರು. ಮೂರು ತಿಂಗಳ ಮೊದಲೇ 1938 ಏಪ್ರಿಲ್ 10, 11 ಮತ್ತು 12ನೇ ತಾರೀಖು ಶಿವಪುರದಲ್ಲಿ ನಡೆಯಬೇಕೆಂತಲೂ ಅದರ ಹೆಚ್ಚಿನ ಜವಾಬ್ದಾರಿಯನ್ನು ಹೆಚ್.ಕೆ. ವೀರಣ್ಣಗೌಡರು ವಹಿಸಿಕೊಳ್ಳಬೇಕೆಂದು ಸಭೆಯು ತೀರ್ಮಾನವನ್ನು ಕೈಗೊಂಡಿತು. ಶಿವಪುರದ ತಿರುಮಲೇಗೌಡರು ಶಿವಪುರದಲ್ಲಿರುವ ತಮ್ಮ ಎಂಟು ಎಕರೆ ಭೂಮಿಯಲ್ಲಿ ಕಾರ್ಯಕ್ರಮ ನಡೆಸಲು ಅವಕಾಶ ನೀಡಿದರು.

ಮೈಸೂರಿನಿಂದ ಹೆಚ್.ಸಿ. ದಾಸಪ್ಪ, ಯಶೋಧರ ದಾಸಪ್ಪ, ತಾಯಮ್ಮ ವೀರಣ್ಣಗೌಡರಲ್ಲದೆ ಬಳ್ಳಾರಿ ಪ್ರದೇಶದಿಂದ ಬಳ್ಳಾರಿಸಿದ್ದಮ್ಮ ಎಂಬ ಸ್ವಾತಂತ್ರ್ಯ ಹೋರಾಟಗಾರ್ತಿಯು ಶಿವಪುರಕ್ಕೆ ಒಂದು ತಿಂಗಳು ಮೊದಲೆ ಬಂದು ತಲುಪಿ ಮದ್ದೂರು, ಮಂಡ್ಯ ಸೇರಿದಂತೆ ಅಲ್ಲಿನ ಹಳ್ಳಿ ಹಳ್ಳಿಗೆ ತೆರಳಿ ಶಿವಪುರ ಧ್ವಜ

ಸತ್ಯಾಗ್ರಹದ ಬಗ್ಗೆ ಎಲ್ಲರಿಗೂ ತಿಳಿಸಿ ಅವರಿಗೆ ಸಹಾಯ, ಸಹಕಾರ ಕೊಡುತ್ತಿದ್ದರು. ಜನರು ಅದನ್ನು ನೋಡಲು ಹಾತೊರೆಯುತ್ತಿದ್ದರು. ರೈತರು ತಮ್ಮ ಸಹಾಯ ಹಸ್ತ ನೀಡಿದರು. ಈ ವಿಚಾರ ತಿಳಿಯುತ್ತಿದ್ದಂತೆ ಅಂದಿನ ದಿವಾನರ ಸರ್ಕಾರವು ಮದ್ದೂರಿನಲ್ಲಿ ಯಾವುದೇ ಸಭೆ ಸಮಾರಂಭ ನಡೆಸದಂತೆ ನಿಷೇಧಾಜ್ಞೆಯನ್ನು ಹೇರಿತು. ಏಪ್ರಿಲ್ 9–10ನೇ ತಾರೀಖು ಶಿವಪುರಕ್ಕೆ ಜನ ಜಮಾಯಿಸುತ್ತಿದ್ದಂತೆ ಮೀಸಲು ಪಡೆ ಪೋಲೀಸರು ಶಿವಪುರಕ್ಕೆ ಬಂದಿಳಿಯತೊಡಗಿದರು. ಅದೇರೀತಿ ಈ ವಿಷಯ ತಿಳಿಯುತ್ತಿದ್ದಂತೆ ಮೈಸೂರು ಬೆಂಗಳೂರುಗಳಿಂದ ಮೀಸಲು ಪೋಲೀಸರು ರೈಲಿನಲ್ಲಿ ಬಂದಿಳಿಯ ತೊಡಗಿದರು.

1938 ಏಪ್ರಿಲ್ 10ನೇ ತಾರೀಖು ಮದ್ದೂರಿನ ಶಿವಪುರದಲ್ಲಿ ಸ್ವಾತಂತ್ರ್ಯದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಅಧ್ಯಕ್ಷರು 09.4.1938ರಂದು ಸಂಜೆ ನಾಲ್ಕು ಘಂಟೆಗೆ ಶಿವಪುರಕ್ಕೆ ಬಂದಿಳಿದರು. 10ನೇ ತಾರೀಖಿಗೆ ಹೆಚ್ಚಿನ ಜನ ಸೇರಿಸುವ ಉದ್ದೇಶದಿಂದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು, ಸಮ್ಮೇಳನದ ಅಧ್ಯಕ್ಷರೂ ಆದ ಟಿ. ಸಿದ್ದಲಿಂಗಯ್ಯನವರು ಮದ್ದೂರಿನ ಪ್ರವಾಸಿ ಮಂದಿರದಿಂದ ಹೊರಟು ಮದ್ದೂರಿನ ಮತ್ತು ಶಿವಪುರದ ಬೀದಿ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಿದರು. ಅದನ್ನು ನೋಡಲು ಜನ ಸೇರಿದರು. ಎಲ್ಲೆಡೆ ಪ್ರಚಾರವಾಯ್ತು.

1938 ಏಪ್ರಿಲ್ 10ನೇ ತಾರೀಖು ಶಿವಪುರದಲ್ಲಿ ಕನಿಷ್ಠವೆಂದರೂ ಮೂವತ್ತು ಸಾವಿರ ಜನ ಸೇರಿದರು. ಎಲ್ಲೆಲ್ಲೂ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪೋಲಿಸರದೇ ಕಾರುಬಾರು. ಇಡೀ ಶಿವಪುರ ರಣರಂಗದಂತೆ ಭಾಸವಾಗುತ್ತಿತ್ತು. ಏಪ್ರಿಲ್ ಮಾಹೆಯಾದ್ದರಿಂದ ಬಿರುಬಿಸಿಲು. ಅದಕ್ಕಾಗಿ ದೊಡ್ಡ ಚಪ್ಪರ. 10ನೇ ತಾರೀಖು ಬೆಳಿಗ್ಗೆ 8 ಗಂಟೆಗೆ ಜಿ.ಒ.ಸಿ., ಎಂ.ಎನ್. ಜೋಯಿಸ್‌ರವರು ಬಂದು ಅಧ್ಯಕ್ಷರಿಗೆ ವಂದನೆ ಸಲ್ಲಿಸಿ ಧ್ವಜಾರೋಹಣ ಮಾಡಬೇಕೆಂದು ಪ್ರಾರ್ಥಿಸಿದರು. ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಜನರಲ್ಲಿ ಆತಂಕ. ಕಾರಣವೇನೆಂದರೆ ಪೋಲೀಸರು ಗೋಲಿಬಾರ್ ಮಾಡಬಹುದು ಇಲ್ಲವೆ ಲಾಠಿ ಛಾರ್ಜು ಮಾಡಬಹುದೆಂದು. ಶ್ರೀ ಸಿದ್ದಲಿಂಗಯ್ಯನವರು ಸಭೆಯನ್ನುದ್ದೇಶಿಸಿ ಒಂದು ಪುಟ್ಟ ಭಾಷಣ ಮಾಡಿ ಸರ್ಕಾರದ ಆಜ್ಞೆಯನ್ನು ಧಿಕ್ಕರಿಸಿ ಧ್ವಜಾರೋಹಣ ಮಾಡುತ್ತಿರುವುದಾಗಿ ಹೇಳಿ ಧ್ವಜವನ್ನು ಹಾರಿಸಿದರು. ಇದಕ್ಕಾಗಿ ಕಾಯ್ದು ಕುಳಿತಿದ್ದ ಪೋಲೀಸರು ಟಿ. ಸಿದ್ದಲಿಂಗಯ್ಯನವರನ್ನು ದಸ್ತಗಿರಿ ಮಾಡಿದರು. ಸಿದ್ದಲಿಂಗಯ್ಯನವರನ್ನು ಪೋಲೀಸರು ಗೌರವಯುತವಾಗಿ ತಮ್ಮ ವಶಕ್ಕೆ ತೆಗೆದುಕೊಂಡರು. 13.5.1938ರವರೆಗೆ ಸೆರೆಯಲ್ಲಿಟ್ಟಿದ್ದರು. ಎಂ.ಎನ್.

ಜೋಯಿಸರು ತಾವೂ ಆಜ್ಞೆಯನ್ನು ಉಲ್ಲಂಘಿಸುತ್ತಿರುವುದಾಗಿ ತಿಳಿಸಿದರು. ಅವರನ್ನೂ ಪೋಲೀಸರು ದಸ್ತಗಿರಿ ಮಾಡಿದರು. ನಂತರ ಹೆಚ್.ಸಿ. ದಾಸಪ್ಪನವರನ್ನೂ ಬಂಧಿಸಲಾಯ್ತು. ನಂತರ ಒಬ್ಬರಾದ ಮೇಲೆ ಒಬ್ಬರಂತೆ ವಿ. ವೆಂಕಟಪ್ಪ, ಕೆ.ಸಿ. ರೆಡ್ಡಿ, ಸಾಹುಕಾರ್ ಚನ್ನಯ್ಯ, ಕೆ.ಟಿ. ಭಾಷ್ಯಂ, ಬಳ್ಳಾರಿ ಸಿದ್ದಮ್ಮ, ಯಶೋಧರಮ್ಮ ದಾಸಪ್ಪ ಹೀಗೆ ಕೊನೆ ಮೊದಲು ಎನ್ನದೆ ಒಬ್ಬೊಬ್ಬರಾಗಿ ಕಾಂಗ್ರೆಸ್ ನಾಯಕರುಗಳಲ್ಲಿ ಯಾರ್‍ಯಾರು ಧ್ವಜಾರೋಹಣ ಮಾಡಿದ್ದರೋ ಅವರನ್ನು ಪೋಲೀಸರು ದಸ್ತಗಿರಿ ಮಾಡಿದರೇ ಪರಂತು, ಅಮಾಯಕ ಜನಗಳ ಮೇಲೆ ಲಾಠಿಛಾರ್ಜ್ ಮಾಡಲಿಲ್ಲ. ಇದನ್ನು ನೋಡುತ್ತಿದ್ದ ಜನರಿಗೆ ಸ್ವಾತಂತ್ರ್ಯದ ಬಗ್ಗೆ ಒಳ್ಳೆಯ ಅರಿವು, ಭಾವನೆ, ಗೌರವಗಳು ಮೂಡಿದವು. ತಾವುಗಳು ಕಾಂಗ್ರೆಸ್ ನೇತಾರರಂತೆ ಸಾಧನೆ ಮಾಡಬೇಕೆಂದು ತೀರ್ಮಾನಿಸಿದರು. ಮೂರು ದಿನಗಳ ಕಾಲ ಧ್ವಜ ಸತ್ಯಾಗ್ರಹ ನಡೆಯಿತು. ಈ ಸಮಯದಲ್ಲಿ ಜನರು ಭಕ್ತಿಯಿಂದ 'ವಂದೇಮಾತರಂ' ಸೇರಿದಂತೆ ರಾಷ್ಟ್ರಭಕ್ತಿಗೀತೆ, ನಾಡಗೀತೆ ಹಾಡುತ್ತಾ ನಾಯಕರಿಗೆ ಸ್ಫೂರ್ತಿ ನೀಡುತ್ತಿದ್ದರು. ಹಾಸನ ಗುಂಡಪ್ಪಗೌಡ, ಹೆಚ್.ಕೆ. ವೀರಣ್ಣಗೌಡ, ಕೆಂಗಲ್ ಹನುಮಂತಯ್ಯ, ಶಿವಮೊಗ್ಗದ ಪ್ರಹ್ಲಾದಶೆಟ್ಟಿ, ಬಂಧನಕ್ಕೊಳಗಾದರು. ಶಿವಪುರ ಧ್ವಜ ಸತ್ಯಾಗ್ರಹದ ರೋಚಕ ಸನ್ನಿವೇಶವನ್ನು ನೋಡಲು ಸುತ್ತಮುತ್ತಲಿನ ಊರುಗಳಿಂದ ಸಾವಿರಾರು ಮಂದಿ ಸೇರಿದ್ದರು. ಒಂದು ಅಂದಾಜಿನ ಪ್ರಕಾರ ಪ್ರತಿದಿನ 30ರಿಂದ 40 ಸಾವಿರ ಜನ ಬಂದು ಸೇರುತ್ತಿದ್ದರು (ಬದುಕು ಮೆಲುಕು– ಹೆಚ್.ಕೆ. ವೀರಣ್ಣಗೌಡ, ಪುಟ–155).

1938ರಲ್ಲಿ ನಡೆದ ಶಿವಪುರ ಧ್ವಜಸತ್ಯಾಗ್ರಹವು ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿನ ಮಹಾನ್ ಘಟನೆ ಎಂದು ಹೇಳಬಹುದು. ಈ ವಿಷಯದಲ್ಲಿ ಟಿ. ಸಿದ್ದಲಿಂಗಯ್ಯ, ನೆಚ್ಚಿನ ನಾಯಕರಾಗಿ ಹೊರಹೊಮ್ಮಿದರು. ಈ ಘಟನೆಯನ್ನು ಮಹಾತ್ಮಗಾಂಧಿಯವರಿಗೂ ಮತ್ತು ಸರ್ದಾರ್ ವಲ್ಲಬಾಯ್ ಪಟೇಲರಿಗೂ ತಿಳಿಸಲಾಯ್ತು. ಸರ್ದಾರ್ ವಲ್ಲಭಬಾಯಿ ಪಟೇಲರು ಕರ್ನಾಟಕದ ಕಾಂಗ್ರೆಸ್ ನಾಯಕರಿಗೆ ಆಗಿಂದಾಗ್ಗೆ ಪತ್ರ ಬರೆದು ಸ್ಫೂರ್ತಿ ತುಂಬುತ್ತಿದ್ದರು. ಇದರಿಂದಾಗಿ ಮೈಸೂರಿನ ದಿವಾನರ ಸರ್ಕಾರಕ್ಕೆ ಭಾರಿ ಮುಖಭಂಗವಾಯಿತೆಂದೇ ಹೇಳಬಹುದು.

1942ರ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಆಂದೋಲನದಲ್ಲಿ ಗಾಂಧಿಯವರ ಮಾಡು ಇಲ್ಲವೆ ಮಡಿ (Do or Die) ಎಂದು ಘೋಷಿಸಿದರು. ಸ್ವಾತಂತ್ರ್ಯ ಚಳುವಳಿಗಾರರಿಗೆ ಅದರಲ್ಲೂ ವಿಶೇಷವಾಗಿ ಉಗ್ರವಾದಿಗಳಿಗೆ ರೆಕ್ಕೆಪುಕ್ಕ ಬಂದಂತಾಯ್ತು. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಎಲ್ಲೆಡೆ ಬ್ರಿಟಿಷರೇ

ಭಾರತ ಬಿಟ್ಟು ತೊಲಗಿ ಎಂಬ ಆಂದೋಲನವನ್ನು ನಡೆಸಿದರು. ರೈಲುಕಂಬಿ ಕೀಳುವುದು, ಟೆಲಿಫೋನ್ ತಂತಿಗಳನ್ನು ಕತ್ತರಿಸುವುದು ಈಚಲುಮರ ಕಡಿಯುವುದು ಇವೇ ಮುಂತಾದ ಕಾರ್ಯಕ್ರಮಗಳನ್ನು ಚಳುವಳಿಗಾರರು ಹಮ್ಮಿಕೊಂಡರು. ಸಿದ್ದಲಿಂಗಯ್ಯನವರು ಇದಕ್ಕೆ ಕುಮ್ಮಕ್ಕು ಕೊಡುತ್ತಿದ್ದರು. ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ಈಸೂರಿನಲ್ಲಿ ನಡೆದ ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಪ್ರತಿದಿನ ಅಲ್ಲಿನ ಜನರು ಮೆರವಣಿಗೆಯಲ್ಲಿ ಪಾಲ್ಗೊಂಡು ಸ್ವಾತಂತ್ರ್ಯ ಘೋಷಣೆ ಮಾಡುತ್ತಾ ಸರ್ಕಾರಿ ಅಧಿಕಾರಿಗಳಿಗೆ ಧಿಕ್ಕಾರ ಕೂಗುತ್ತ ಸರ್ಕಾರಿ ಕಛೇರಿಗಳಿಗೆ ಬೆಂಕಿಯಿಡುತ್ತಿದ್ದರು. 1942ರ ಸೆಪ್ಟೆಂಬರ್ 25ರಂದು ಈಸೂರನ್ನು 'ಸ್ವತಂತ್ರಹಳ್ಳಿ' ಎಂದು ಸಾರಿದರು. ಪೋಲೀಸರು ಚಳುವಳಿಗಾರರ ವಿರುದ್ಧ ಸಮರ ಸಾರಿದರು. ಇದರಿಂದಾಗಿ ಅಲ್ಲಿ ಭಾರಿ ಅನಾಹುತವೇ ಆಯ್ತು.

ಮೈಸೂರು ಚಲೋ ಚಳುವಳಿ ಅಥವಾ ಅರಮನೆ ಚಳುವಳಿ

1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಆದರೆ ಮೈಸೂರು ಸೇರಿದಂತೆ ಭಾರತದ ಕೆಲವು ಸ್ಥಾನಗಳು ಸ್ವಾತಂತ್ರ್ಯ ನೀಡದೆ ತೊಂದರೆ ಮಾಡಿದವು. ಅದೇರೀತಿ ಮೈಸೂರು ಸಂಸ್ಥಾನವು ಸ್ವಾತಂತ್ರ್ಯ ನೀಡದಿದ್ದಾಗ ಮೈಸೂರು ಸಂಸ್ಥಾನವನ್ನು ವಿಲೀನಗೊಳಿಸಲು ಸ್ವಾತಂತ್ರ್ಯ ಹೋರಾಟಗಾರರು 'ದೆಹಲಿ ಚಲೊ' ಮಾದರಿಯಲ್ಲಿ ಮೈಸೂರು ಚಲೊ ಅಥವಾ ಅರಮನೆ ಚಲೋ ಚಳುವಳಿಯನ್ನು ಪ್ರಾರಂಭಿಸಿದರು. ಕೆ.ಸಿ. ರೆಡ್ಡಿಯವರ ನಾಯಕತ್ವದಲ್ಲಿ 1947 ಸೆಪ್ಟೆಂಬರ್ 14ರಂದು ಅರಮನೆಯ ಮುಂದೆ ಸತ್ಯಾಗ್ರಹ ಪ್ರಾರಂಭವಾಯಿತು. ಕೆಂಗಲ್ ಹನುಮಂತಯ್ಯ, ಕಡಿದಾಳು ಮಂಜಪ್ಪ, ಮೈಸೂರಿನ ತಾತಯ್ಯ, ಟಿ. ಸಿದ್ದಲಿಂಗಯ್ಯ, ಹೆಚ್.ಸಿ. ದಾಸಪ್ಪ, ಯಶೋಧರ ದಾಸಪ್ಪ, ಹೆಚ್.ಕೆ. ವೀರಣ್ಣಗೌಡ, ಶಾಂತವೇರಿ ಗೋಪಾಲಗೌಡ, ಕೆ.ಟಿ. ಭಾಷ್ಯಂ ಸೇರಿದಂತೆ ಎಲ್ಲಾ ನಾಯಕರು ಒಂದಾಗಿ ಹೋರಾಡಿದರು. ಅಂದಿನ ಮೈಸೂರಿನ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರನ್ನು ಗುರಿಯಾಗಿಸಿದರು. ಅರ್ಕಾಟ್ ಬಾಯ್ಕಟ್ ಮತ್ತು 'ತಂಬುಚೆಟ್ಟಿ ಚಟ್ಟಕಟ್ಟಿ' ಎಂಬ ಘೋಷಣೆಗಳನ್ನು ಕೂಗತೊಡಗಿದರು. ಚಳುವಳಿಗಾರರ ಕೈ ಮೇಲಾಗಿ ಅಂದಿನ ಮೈಸೂರಿನ ಒಡೆಯರಾಗಿದ್ದ ಜಯಚಾಮರಾಜ ಒಡೆಯರ್ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಲು ಸಮ್ಮತಿಸಿದರು. ಅಲ್ಲಿಗೆ ಚಳುವಳಿಯು ಯಶಸ್ವಿಯಾಗಿ ಭಾರತಕ್ಕೆ ಸ್ವಾತಂತ್ರ್ಯ ಫಲಿಸಿತು.

ಸ್ವತಂತ್ರ ಮೈಸೂರು ರಾಜ್ಯ ಮತ್ತು ಟಿ.ಎಸ್.

ಆರು ದಶಕಗಳ ಬ್ರಿಟಿಷರ ವಿರುದ್ಧ ಹೋರಾಟ ನಡೆದು ಕಡೆಗೆ 1947ರಲ್ಲಿ ಸ್ವಾತಂತ್ರ್ಯ ಪ್ರಾಪ್ತವಾಯ್ತು. 1948ರ ಮಾರ್ಚ್ ತಿಂಗಳಿನಲ್ಲಿ ಸಂವಿಧಾನ ಸಭೆಗೆ ಚುನಾವಣೆ ನಡೆದು ಒಟ್ಟು 76 ಸ್ಥಾನಗಳ ಪೈಕಿ 67 ಸ್ಥಾನವನ್ನು ಕಾಂಗ್ರೆಸ್ ಗೆದ್ದು ಬಹುಮತ ಸಾಬೀತುಪಡಿಸಿತು. 1950ರಲ್ಲಿ ಜಾರಿಗೆ ಬಂದ ಭಾರತದ ಸಂವಿಧಾನದನ್ವಯ ಮೈಸೂರು ಸಂಸ್ಥಾನವು 'ಬಿ' ವರ್ಗದ ರಾಜ್ಯವಾಯಿತು. ಇಲ್ಲಿನ ರಾಜ ಪ್ರಮುಖ ರಾಜ್ಯಪಾಲರಾಗಬೇಕೆಂದು ತಿಳಿಸಿತು. ಅದರಂತೆ ಶ್ರೀ ಶ್ರೀ ಜಯಚಾಮರಾಜ ಒಡೆಯರ್ ರಾಜ್ಯಪಾಲರಾದರು. ಕಾಂಗ್ರೆಸ್ ಪಕ್ಷದ ನೇತಾರ ಕೆ.ಸಿ. ರೆಡ್ಡಿಯವರು ಫೆಬ್ರವರಿ 6, 1950ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. 100 ಮಂದಿಯ ವಿಧಾನಸಭೆ ಮತ್ತು 40 ಮಂದಿಯ ವಿಧಾನ ಪರಿಷತ್ತು (ಮೇಲ್ಮನೆ) ಅಸ್ತಿತ್ವಕ್ಕೆ ಬಂದಿತು. ಕಾಂಗ್ರೆಸ್ ಪಕ್ಷದಲ್ಲಿ ಜಗವನ್ನೇ ಗೆದ್ದೆವೆಂಬ ಸಂಭ್ರಮ ಮನೆಮಾಡಿತ್ತು. ಕೆ.ಸಿ. ರೆಡ್ಡಿಯವರ ಚೊಚ್ಚಲ ಮಂತ್ರಿಮಂಡಲಕ್ಕೆ ಯಾರನ್ನು ತೆಗೆದುಕೊಳ್ಳುವುದು ಯಾರನ್ನು ಬಿಡುವುದು ಎಂಬ ಸಮಸ್ಯೆ ಎದುರಾಯಿತು. ಅಧಿಕಾರಕ್ಕಾಗಿ ಕಾಂಗ್ರೆಸ್ ನಾಯಕರಲ್ಲಿ ನಾ ಮುಂದು ತಾ ಮುಂದು ಎಂಬ ಪೈಪೋಟಿ. ಕೆಲವರು ಜಾತಿಯ ಸೋಗುಹಾಕಿ ಮಂತ್ರಿ ಪದವಿಯನ್ನು ಗಿಟ್ಟಿಸಿಕೊಳ್ಳಲು ಪ್ರಯತ್ನಿಸಿದರೆ ಮತ್ತೆ ಕೆಲವರು ಕ್ಷೇತ್ರವಾರು ಗಣನೆಗೆ ತೆಗೆದುಕೊಳ್ಳಬೇಕೆಂಬ ಒತ್ತಾಯ. ಒಟ್ಟಿನಲ್ಲಿ ಸಿದ್ದಲಿಂಗಯ್ಯನವರು ಯಾರನ್ನೂ ತನಗೆ ಮಂತ್ರಿ ಪದವಿ ಕೊಡಿಸಿ ಎಂತಲೊ ಕೊಡಿ ಎಂದು ಗೋಗರೆದವರಲ್ಲ. ಅಧಿಕಾರವು ತಾನಾಗಿ ಬಂದರೆ ದೂರ ಮಾಡುವವರೂ ಅಲ್ಲ ಬರದಿದ್ದರೆ ಹುಡುಕಿಕೊಂಡು ಹೋದವರೂ ಅಲ್ಲ.

ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು ಸಿದ್ದಲಿಂಗಯ್ಯನವರಿಗೆ ಮಂತ್ರಿ ಪದವಿಯನ್ನು ನೀಡಿದರು. ಹೊಸ ಮಂತ್ರಿಮಂಡಲದಲ್ಲಿ ಕೇವಲ ಮಂತ್ರಿ ಮಾತ್ರವಲ್ಲ ನೀವು ಉಪಮುಖ್ಯಮಂತ್ರಿಗಳಾಗುವ ಅರ್ಹತೆ ಇದೆ. ಮಂತ್ರಿಪದವಿಯನ್ನು ಒಪ್ಪಿಕೊಳ್ಳಬಾರದೆಂದು ಕೆಂಗಲ್ ಹನುಮಂತಯ್ಯನವರು ಸಿದ್ದಲಿಂಗಯ್ಯನವರಿಗೆ ಕಿವಿಮಾತು ಹೇಳಿದರು. ಆದರೂ ಕೇಳಲಿಲ್ಲ. ಟಿ. ಸಿದ್ದಲಿಂಗಯ್ಯನವರು ಕೆ.ಸಿ. ರೆಡ್ಡಿಯವರ ಮಂತ್ರಿಮಂಡಲ ಸೇರಿದರು. ಅವರಿಗೆ ಶಿಕ್ಷಣ ಮತ್ತು ಆರೋಗ್ಯ ಖಾತೆಯನ್ನು ನೀಡಲಾಯ್ತು.

ಮಂತ್ರಿಯಾಗಿ ಟಿ. ಸಿದ್ದಲಿಂಗಯ್ಯನವರು

ರಾಜ್ಯದ ಜವಾಬ್ದಾರಿಯುತ ಖಾತೆಗಳಾದ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳನ್ನು ವಹಿಸಿಕೊಂಡ ಮೇಲೆ ಸಿದ್ದಲಿಂಗಯ್ಯನವರು ಬಿಡುವಿಲ್ಲದೆ

ದುಡಿಯತೊಡಗಿದರು. ಸ್ವಾತಂತ್ರ್ಯ ಬಂದ ಹೊಸ್ತಿಲಲ್ಲಿ, ಹಣಕಾಸಿನ ಮುಗ್ಗಟ್ಟು, ಕೆಲಸ ಬಾರದ ಅಧಿಕಾರಿಗಳು, ಶಾಲೆಗಳ ಕೊರತೆ, ಉಪಾಧ್ಯಾಯರ ಕೊರತೆ, ಅಸಮರ್ಪಕ ರಸ್ತೆಗಳಿಂದಾಗಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗಿಬರಲು ಆಗುತ್ತಿದ್ದ ತೊಂದರೆ, ಪ್ರಾಥಮಿಕ ವೈದ್ಯಕೀಯ ಕೇಂದ್ರಗಳ ಕೊರತೆ ಇವೇ ಮುಂತಾದ ಸವಾಲುಗಳು ಸಿದ್ದಲಿಂಗಯ್ಯನವರ ಮುಂದಿದ್ದವು. ಇಂದು ಸಾಕಷ್ಟು ಸುಧಾರಣೆಯಾಗಿದೆ. ಹಣದ ಕೊರತೆಯಾಗಲಿ, ಶಾಲಾ, ಕಾಲೇಜುಗಳ ಕೊರತೆಯಾಗಲಿ ಕಂಡುಬರುವುದಿಲ್ಲ. ಆದರೆ ಅಂದು ಹಲವು ಹತ್ತು ಸಮಸ್ಯೆಗಳು ಕೊರತೆಗಳ ಆಗರವಾಗಿದ್ದಿತು.

ಶ್ರೀ ಸಿದ್ದಲಿಂಗಯ್ಯನವರು ಸಚಿವರಾಗಿದ್ದುದು ಕೇವಲ ಹತ್ತು ತಿಂಗಳು ಮಾತ್ರ. ಈ ಅಲ್ಪಾವಧಿಯಲ್ಲೇ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದಾರೆ. ಯೂರೋಪಿನಲ್ಲಾದ ಕೈಗಾರಿಕಾ ಕ್ರಾಂತಿಯು ಬ್ರಿಟಿಷರಿಂದಾಗಿ ಭಾರತದ ಮೇಲೂ ಪ್ರಭಾವ ಬೀರಿತು. ಈ ಕೈಗಾರಿಕಾ ಕ್ರಾಂತಿಯು ತನ್ನೊಂದಿಗೆ ನಾಗರಿಕತೆಯ ಅಲೆಯನ್ನು ಎಬ್ಬಿಸಿತು. ದೇವರು ಮತ್ತು ಧರ್ಮದ ಹೆಸರಿನಲ್ಲಿ ಕುಟುಂಬ ಯೋಜನೆಗೆ ಕವಡೆಕಾಸಿನ ಕಿಮ್ಮತ್ತು ಇರಲಿಲ್ಲ. ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ನಾಯಕರು ಜನಸಂಖ್ಯಾ ಸ್ಫೋಟವಾಗಿರುವ ನಮ್ಮಂತಹ ರಾಷ್ಟ್ರದಲ್ಲಿ ಕುಟುಂಬ ಯೋಜನಾ ಸೂತ್ರವನ್ನು ಅಳವಡಿಸಿಕೊಳ್ಳಬೇಕೆಂಬ ಚಿಂತನೆ ಮೂಡಿಸಿದರು. ಇದು ಸದನದಲ್ಲಿ ವಾದ ವಿವಾದಕ್ಕೆ ತಿರುಗಿತು. ನಿರ್ಣಯದ ಪರವಾಗಿಯೂ ವಿರುದ್ಧವಾಗಿಯೂ ಸದಸ್ಯರು ಪರಿಣಾಮಕಾರಿಯಾದ ವಾದಗಳನ್ನು ಮಂಡಿಸಿದರು. ಆರೋಗ್ಯ ಖಾತೆ ಸಚಿವರಾಗಿದ್ದ ಸಿದ್ದಲಿಂಗಯ್ಯನವರು ಈ ವಿಷಯದಲ್ಲಿ ಗಂಭೀರ ನಿಲುವನ್ನು ತಳೆದರು. ಕುಟುಂಬ ಯೋಜನೆಯನ್ನು ಒತ್ತಾಯ ಪೂರ್ವಕವಾಗಿ ಜನರ ಮೇಲೆ ಹೇರದೆ ಹಂತ ಹಂತವಾಗಿ ಜಾರಿಗೆ ತರಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಇದು ಅವರ ಮುಂದಾಲೋಚನೆಯ ದ್ಯೋತಕವಾಗಿದೆ.

ಜನರ ಜೀವನಮಟ್ಟ ಸುಧಾರಣೆಗೊಳ್ಳಲು ಕೃಷಿ ಮತ್ತು ಕೈಗಾರಿಕೆಗಳ ಜೊತೆಗೆ ಗ್ರಾಮೀಣ ಕೈಗಾರಿಕೆಗಳೂ ಅತ್ಯವಶ್ಯಕ ಎಂದು ಮನಗಂಡ ಸಿದ್ದಲಿಂಗಯ್ಯನವರು ಗ್ರಾಮೀಣ ಕೈಗಾರಿಕಾ ಅಭಿವೃದ್ಧಿಗೆ ಒತ್ತುಕೊಟ್ಟರು. ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪನಿಯು ಒಂದು ತೊಡಕಿಗೆ ಸಿಲುಕಿಕೊಂಡಿತ್ತು. ಅದೇನೆಂದರೆ ಅಲ್ಲಿನ ವಹಿವಾಟು ಗೊಂದಲಮಯವಾಗಿ ಸುಮಾರು 25 ವರ್ಷಗಳಿಂದಲೂ ಸಮಸ್ಯೆ ಬಗೆಹರಿಯದೆ ನೆನೆಗುದಿಗೆ ಬಿದ್ದಿತ್ತು. ಸಿದ್ದಲಿಂಗಯ್ಯನವರು ಸಮಸ್ಯೆಯನ್ನು ಅರ್ಥಮಾಡಿಕೊಂಡು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಮಸ್ಯೆಗೆ ಕಾರಣನಾಗಿದ್ದ ಮದ್ರಾಸ್ ಮೂಲದ

ವ್ಯಾಪಾರಿಯನ್ನು ತಮ್ಮ ಕಛೇರಿಗೆ ಕರೆಸಿಕೊಂಡು ಅವರೊಂದಿಗೆ ಸಮಾಲೋಚಿಸಿ ಸಮಸ್ಯೆಯನ್ನು ಬಗೆಹರಿಸಿದರು. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಸಮಸ್ಯೆ ಬಗೆಹರಿದು ನೆಮ್ಮದಿಯಿಂದ ಉಸಿರಾಡುವಂತಾಯ್ತು.

ಬೆಂಗಳೂರಿನ ಹೆಸರಾಂತ ಮೈಕೊ ಕಾರ್ಖಾನೆಯು ಸಿದ್ದಲಿಂಗಯ್ಯನವರ ಆಸಕ್ತಿಯಿಂದ ಪ್ರಾರಂಭವಾದದ್ದು, ಅದರ ಸಂಸ್ಥಾಪಕ ಜರ್ಮನಿಯ ಶ್ರೀಯುತ ಲೆಂಗ್‌ರವರು ಬೆಂಗಳೂರಿಗೆ ಬಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರು. ಮುಖ್ಯಮಂತ್ರಿಗಳು ಸಿದ್ದಲಿಂಗಯ್ಯನವರನ್ನು ಭೇಟಿ ಮಾಡುವಂತೆ ತಿಳಿಸಿದರು. ಕಾರ್ಖಾನೆಯೊಂದು ಬೆಂಗಳೂರಿನಲ್ಲಿ ಸ್ಥಾಪನೆಯಾದರೆ ಹಲವಾರು ಜನರಿಗೆ ಉದ್ಯೋಗ, ಉದ್ಯಮ ಸಿಗುತ್ತದೆ ಎಂಬ ಮುಂದಾಲೋಚನೆಯಿಂದ ಸೂಕ್ತವಾಗಿ ಅವರೊಂದಿಗೆ ವ್ಯವಹರಿಸಿದರು. ಸರ್ಕಾರದಿಂದ ಬರಬೇಕಿದ್ದ ಸಕಲ ಸೌಕರ್ಯಗಳನ್ನು ಕಂಪನಿಗೆ ಒದಗಿಸಿದರು. 'ಮೈಕೊ' ಕಂಪನಿಯು ಬೆಂಗಳೂರಿನಲ್ಲಿ ತಲೆ ಎತ್ತಲು ಶ್ರೀ ಲೆಂಗ್‌ರವರಷ್ಟೇ ಸಿದ್ದಲಿಂಗಯ್ಯನವರೂ ಕಾರಣಕರ್ತರಾಗಿದ್ದಾರೆ.

ಬೆಂಗಳೂರಿನ ಹೃದಯ ಭಾಗವಾದ ವಸಂತನಗರದಲ್ಲಿ ಕ್ರೈಸ್ತರು 'ಮೌಂಟ್ ಕಾರ್ಮಲ್ ಕಾಲೇಜ'ನ್ನು ಸ್ಥಾಪನೆ ಮಾಡಬೇಕಾದ ಸಂದರ್ಭದಲ್ಲಿ ಅವರು ಸಿದ್ದಲಿಂಗಯ್ಯನವರನ್ನು ಕೇಳಿಕೊಳ್ಳಲಾಗಿ ಜಮೀನನ್ನು ಸರ್ಕಾರದಿಂದ ವಿದ್ಯಾಸಂಸ್ಥೆಗೆ ವರ್ಗಾವಣೆ ಸಂದರ್ಭದಲ್ಲಿ ಮುತುವರ್ಜಿ ವಹಿಸಿದರು. ಇಂದಿಗೂ ಹೆಣ್ಣುಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ನೀಡುವ ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲೊಂದಾಗಿದೆ.

ಸ್ವಾತಂತ್ರ್ಯ ಹೋರಾಟಗಾರರೂ ಆದ ಸಿದ್ದಲಿಂಗಯ್ಯನವರು ನಾಡಿನ ಸ್ವಾತಂತ್ರ್ಯ ಹೋರಾಟದಲ್ಲಿ ಅನುಪಮ ಸೇವೆ ಸಲ್ಲಿಸಿದ ಸೇವಾ ದಳದ ಕಾರ್ಯಕರ್ತರನ್ನು ಶಾಲೆಗಳಿಗೆ ದೈಹಿಕ ಶಿಕ್ಷಣ ಉಪಾಧ್ಯಾಯರುಗಳನ್ನಾಗಿ ನೇಮಿಸುವ ಮೂಲಕ ಸ್ವಾತಂತ್ರ್ಯ ಹೋರಾಟಗಾರರು ಸಿದ್ದಲಿಂಗಯ್ಯನವರು ತೆಗೆದುಕೊಂಡ ಕ್ರಮವನ್ನು ಮೆಚ್ಚಿದರು. ಮಂತ್ರಿಯಾಗಿದ್ದ ಕೆಲವೇ ಕೆಲವು ತಿಂಗಳುಗಳಲ್ಲಿ ಶ್ಲಾಘನೀಯ ಕೆಲಸ ಕಾರ್ಯಗಳನ್ನು ಮಾಡಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ತಮ್ಮ ಪದವಿಗೆ ಚ್ಯುತಿ ಬರದಂತೆ ನೋಡಿಕೊಂಡರು.

ಕೆಂಗಲ್‌ರ ಮಂತ್ರಿಮಂಡಲದಲ್ಲಿ ಟಿ.ಎಸ್.

1952ರ ಸಾರ್ವತ್ರಿಕ ಚುನಾವಣೆಯಲ್ಲಿ ಟಿ. ಸಿದ್ದಲಿಂಗಯ್ಯನವರು ದೊಡ್ಡಬಳ್ಳಾಪುರ ಕ್ಷೇತ್ರದಿಂದ ಅತ್ಯಧಿಕ ಮತಗಳಿಂದ ಗೆದ್ದು ಬಂದರು. ಕೆಂಗಲ್

ಹನುಮಂತಯ್ಯನವರು ರಾಜ್ಯದ ಮುಖ್ಯಮಂತ್ರಿಗಳಾದರು. ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿ ಸೇರಿದಂತೆ ಕೇವಲ ಆರು ಜನರ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದಿತು. ಟಿ. ಸಿದ್ದಲಿಂಗಯ್ಯನವರಿಗೆ ಕೈಗಾರಿಕಾ ಖಾತೆಯನ್ನು ನೀಡಲಾಯ್ತು. ಇದರಿಂದಲೇ ತಿಳಿಯುತ್ತದೆ. ಕೆಂಗಲ್ ಮತ್ತು ಟಿ.ಎಸ್.ರವರ ರಾಜಕೀಯ ಬಾಂಧವ್ಯ.

ಮಂತ್ರಿ ಪದವಿಗೆ ರಾಜೀನಾಮೆ

ಸಿದ್ದಲಿಂಗಯ್ಯನವರು ಕೈಗಾರಿಕಾ ಸಚಿವರಾಗಿ ಉತ್ತಮವಾಗಿ ಕೆಲಸ ಮಾಡುತ್ತಿರುವಾಗಲೆ ಒಂದು ಘಟನೆ ನಡೆಯಿತು. ಅದೇ ತಾಮ್ರದ ತಂತಿ ಕಳವು ಪ್ರಕರಣ. ಸಿದ್ದಲಿಂಗಯ್ಯನವರು ವಿದ್ಯುಚ್ಛಕ್ತಿ ಸಾಗಾಣಿಕೆಗೆ ಅವಶ್ಯವಾಗಿದ್ದ ತಾಮ್ರದ ತಂತಿಯನ್ನು ಅದು ಲಭ್ಯವಿದ್ದ ದೂರದ ಸ್ಥಳದಿಂದ ಬೆಂಗಳೂರಿಗೆ ತರಿಸಲು ಎಲ್ಲಾ ಸರ್ಕಾರಿ ಕ್ರಮಗಳನ್ನು ಅನುಸರಿಸಿ ಅತಿ ಕಡಿಮೆ ದರದಲ್ಲಿ 'ಚೌಡಪ್ಪ' ಎಂಬ ವ್ಯಕ್ತಿಗೆ ಗುತ್ತಿಗೆ ನೀಡಲಾಯ್ತು. ಚೌಡಪ್ಪನವರು ಪ್ರಾಮಾಣಿಕರೆ ಆದರೂ ಹೇಳಿಕೇಳಿ ಸಿದ್ದಲಿಂಗಯ್ಯನವರ ಕ್ಷೇತ್ರವಾದ ದೊಡ್ಡಬಳ್ಳಾಪುರದವರಾಗಿದ್ದುದು ಕಾಕತಾಳೀಯ. ಕೆಲವು ಪಟ್ಟಭದ್ರ ಹಿತಾಸಕ್ತರು ಇದನ್ನು ದೊಡ್ಡ ಸುದ್ದಿ ಮಾಡಿ ಸಿದ್ದಲಿಂಗಯ್ಯನವರು ತಾವು ಹಣ ಮಾಡಲು ತಮ್ಮ ಊರಿನ ವ್ಯಕ್ತಿಗೆ ಗುತ್ತಿಗೆ ನೀಡಿದ್ದಾರೆ ಎಂದು ಆಪಾದನೆ ಮಾಡಿದರು. ಇದು ವಿಧಾನಸಭೆಯಲ್ಲೂ ಚರ್ಚಿತ ವಿಷಯವಾಯಿತು. ಸಿದ್ದಲಿಂಗಯ್ಯನವರು ಮುಜುಗರಕ್ಕೆ ಸಿಲುಕಿದರು. ತಾವು ಒಂದು ಕ್ಷಣವೂ ಅಧಿಕಾರದಲ್ಲಿ ಉಳಿಯುವುದಿಲ್ಲವೆಂದು ಹೇಳಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು.

ಡಾ॥ ಸರ್ವಪಲ್ಲಿ ರಾಧಾಕೃಷ್ಣರಿಂದ ಪತ್ರ

ಸಿದ್ದಲಿಂಗಯ್ಯನವರು ಮಂತ್ರಿ ಪದವಿಗೆ ರಾಜೀನಾಮೆ ನೀಡಿದಾಗ ರಾಜ್ಯ ಮತ್ತು ರಾಷ್ಟ್ರದ ಹಲವಾರು ಪ್ರಮುಖ ವ್ಯಕ್ತಿಗಳು ನೋವಿನಿಂದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರಿಗೆ ಪತ್ರ ಬರೆದರು. ಅವರಲ್ಲಿ ಅಂದು ಉಪರಾಷ್ಟ್ರಪತಿಗಳಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್‌ರವರೂ ಒಬ್ಬರು. ಅವರ ಪತ್ರದ ಕನ್ನಡದ ಅನುವಾದ ಹೀಗಿದೆ:

ಉಪರಾಷ್ಟ್ರಪತಿ
21.02.1953

ಮೈಸೂರು ರಾಜ್ಯದ ಮುಖ್ಯಮಂತ್ರಿಗಳಿಗೆ

ತಮ್ಮ 18ನೇ ತಾರೀಖು ಪತ್ರ ಮತ್ತು ಲಗತ್ತುಗಳು ತಲುಪಿವೆ. ಅದಕ್ಕಾಗಿ ವಂದನೆಗಳು. ಸಿದ್ದಲಿಂಗಯ್ಯನವರ ರಾಜೀನಾಮೆಯಲ್ಲಿ ಕೊನೆಗೊಂಡ ಘಟನೆಗಳು ನನಗೆ ನಿಜವಾಗಿಯೂ ನೋವು ಮತ್ತು ನಿರುತ್ಸಾಹವನ್ನುಂಟು ಮಾಡಿದೆ. ಅವರಿಗೆ ನಾಡಸೇವೆ ಮಾಡುವ ಇನ್ನಿತರ ಅವಕಾಶಗಳು ದೊರೆಯುವುದೆಂದು ಭಾವಿಸುತ್ತೇನೆ. ನಿಸ್ಸಂದೇಹವಾಗಿಯೂ ಅವರೊಬ್ಬ ಪ್ರಾಮಾಣಿಕ ಮತ್ತು ಸಮರ್ಥ ಸಮಾಜ ಕಾರ್ಯಕರ್ತರಾಗಿದ್ದಾರೆ.

ವಂದನೆಗಳೊಂದಿಗೆ
ಎಸ್. ರಾಧಾಕೃಷ್ಣನ್

ಮುಖ್ಯಮಂತ್ರಿಗಳಾಗಿದ್ದ ಹನುಮಂತಯ್ಯನವರೂ ಕೂಡ ಟಿ.ಎಸ್.ರವರ ರಾಜೀನಾಮೆಯನ್ನು ಸುಲಭವಾಗಿ ಅಂಗೀಕರಿಸಲಿಲ್ಲ. ಟಿ.ಎಸ್.ರವರ ಒತ್ತಾಯಕ್ಕೆ ಒಪ್ಪಬೇಕಾಯ್ತು. ಕೆಂಗಲ್ಲರು ಟಿ.ಎಸ್.ರವರ ಬಗ್ಗೆ ಹೇಳುವಾಗ 'ನವ ಮೈಸೂರು ನಿರ್ಮಾತರಲ್ಲೊಬ್ಬರು' ಎಂದು ಸಂಬೋಧಿಸಿದ್ದಾರೆ.

ಟಿ.ಎಸ್.ರವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದ ಕೇಂದ್ರಸರ್ಕಾರವು 1953ರಲ್ಲಿ ಅವರನ್ನು ಅಂತರಾಷ್ಟ್ರೀಯ ಸಮಾಜಕಾರ್ಯ ಸಮ್ಮೇಳನದ ರಾಷ್ಟ್ರೀಯ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ನಂತರ 1954ರಲ್ಲಿ ಅವರನ್ನು ಕೆನಡಾಕ್ಕೆ ಕಳುಹಿಸಲಾಯ್ತು. ಅಲ್ಲಿಂದ ಬಂದಮೇಲೆ 'ಗುಂಡಮಗೆರೆ' ಜಲಾಶಯದ ಕೆಲಸದ ಉಸ್ತುವಾರಿಯನ್ನು ವಹಿಸಿಕೊಂಡು ಅದನ್ನು ಪೂರ್ತಿ ಮಾಡಿದರು.

ಸಿದ್ದಲಿಂಗಯ್ಯನವರ ಕೊನೆಯ ದಿನಗಳು

ಟಿ.ಎಸ್.ರವರು ಕೈಗಾರಿಕಾ ಸಚಿವರಾಗಿದ್ದಾಗ ಕೊಯಮತ್ತೂರಿನ ಕೈಗಾರಿಕೋದ್ಯಮಿ ಜಿ.ಡಿ. ನಾಯ್ದುರವರ ಪರಿಚಯವಾಯ್ತು. ಜಿ.ಡಿ. ನಾಯ್ದುರವರು ಬುದ್ಧಿವಂತರು. 1950ರ ಸಂದರ್ಭದಲ್ಲಿ ಸಂಪೂರ್ಣ ದೇಶೀಯ ತಾಂತ್ರಿಕತೆಯಿಂದ ಸುಮಾರು 600 ರೂಪಾಯಿಗಳಲ್ಲಿ ಉತ್ಪಾದನೆಯಾಗಬಹುದಾದ ಒಂದು ಮೋಟಾರು ಕಾರಿನ ಮಾದರಿಯನ್ನು ತಯಾರಿಸಿದ್ದರು. ಇವರ ಪುತ್ರ ಗೋಪಾಲ್ 10–12 ವರ್ಷದ ಬಾಲಕನಾಗಿರುವಾಗಲೇ ವಿನೂತನ

ಕೈಗಡಿಯಾರವನ್ನು ತಯಾರಿಸಿದ್ದ ನಾಯ್ಡುರವರಿಗೆ ಮೈಸೂರು ಸಂಸ್ಥಾನದಲ್ಲಿ ಮೋಟಾರ್ ಕಾರ್ ತಯಾರಿಸುವ ಹಂಬಲವಿತ್ತು. ಅದಕ್ಕಾಗಿ ಟಿ.ಎಸ್.ರವರನ್ನು ನಾಯ್ಡುರವರು ಭೇಟಿ ಮಾಡಿದರು. ಅವರ ಪ್ರಚಂಡ ಬುದ್ಧಿಶಕ್ತಿಯನ್ನು ಕಂಡು ಮೆಚ್ಚಿದ ಟಿ.ಎಸ್.ರವರು ನಾಯ್ಡುರವರಿಗೆ ಆತ್ಮೀಯ ಸ್ನೇಹಿತರಾದರು. ಅವರ ಸ್ನೇಹ ಎಷ್ಟು ಗಾಢವಾಗಿತ್ತು ಎಂದರೆ ಟಿ.ಎಸ್.ರವರು ತಮ್ಮ ಕಡೆಯ ಜೀವ ಇರುವ ತನಕ ನಾಯ್ಡುರವರೊಂದಿಗೆ ಆತ್ಮೀಯರಾಗಿದ್ದರು. ನಾಯ್ಡುರವರು ಯುವಕರಿಗೆ ತರಬೇತಿ ನೀಡಲು ತರಬೇತಿ ಶಾಲೆಯನ್ನು ಪ್ರಾರಂಭಿಸಿದ್ದರು. ಇಂದಿಗೂ ಬೆಂಗಳೂರಿನ ರಾಜಾಜಿನಗರದ ಸಮೀಪ ಜಿ.ಡಿ. ನಾಯ್ಡುಹಾಲ್ ಎಂದು ಕರೆಯುವ ಸ್ಥಳವಿದೆ ಒಮ್ಮೆ ಇದು ಯುವಕರ ತರಬೇತಿ ಕೇಂದ್ರವಾಗಿತ್ತು. ಟಿ.ಎಸ್.ರವರು ನಾಯ್ಡುರವರ ಸಹಾಯದಿಂದ ಒಂದು ದೇಶೀ ಕೈಗಾರಿಕೆಯನ್ನು ಸ್ಥಾಪಿಸಿ ಯುವಕರಿಗೆ ಉದ್ಯೋಗ ನೀಡುವುದು ಮತ್ತು ನಮ್ಮ ಜನಗಳಿಗೆ ಕಡಿಮೆ ಬೆಲೆಯಲ್ಲಿ ಮೋಟಾರು ಕಾರು ಮತ್ತು ಬೈಕ್‌ಗಳನ್ನು ನೀಡುವ ಯೋಜನೆಯಾಗಿತ್ತು. 1967ರಲ್ಲಿ ಸಿ.ಎಂ. ಪೂಣಚ್ಚರವರು ಕೇಂದ್ರಮಂಡಲವನ್ನು ಸೇರಿದುದರಿಂದ ತೆರವಾಗಿದ್ದು ರಾಜ್ಯಸಭಾ ಸ್ಥಾನಕ್ಕೆ ಸಿದ್ದಲಿಂಗಯ್ಯನವರು ಚುನಾಯಿತರಾದರು. ಇದರಿಂದಾಗಿ ದೆಹಲಿಯಲ್ಲಿದ್ದ ರಾಷ್ಟ್ರೀಯ ನಾಯಕರಾದ ಶ್ರೀ ಕಾಮರಾಜ್, ಇಂದಿರಾಗಾಂಧಿ, ಸರ್ವಪಲ್ಲಿ ರಾಧಾಕೃಷ್ಣನ್, ವಿ.ವಿ.ಗಿರಿ, ನೀಲಂ ಸಂಜೀವರೆಡ್ಡಿ ಇವರೇ ಮುಂತಾದವರ ಪರಿಚಯವಾಯಿತು.

1974ರ ನಂತರ ಸಿದ್ದಲಿಂಗಯ್ಯನವರು ರಾಜಕೀಯದಿಂದ ವಿಮುಖರಾಗ ತೊಡಗಿದರು. ಇದಕ್ಕೆ ಕಾರಣ ಹಲವು, ಹತ್ತು. ರಾಜಕೀಯದಿಂದ ಬೇಸತ್ತು ವಿಶ್ರಾಂತ ಜೀವನ ಬಯಸಿದರು. ತಮ್ಮ ಬಂಧು ಒಬ್ಬರು ಕೊಯಮತ್ತೂರಿನಲ್ಲಿ ನೆಲೆಸಿದ್ದರು. ಅಲ್ಲದೆ ಕೈಗಾರಿಕೋದ್ಯಮಿ ಜಿ.ಡಿ. ನಾಯ್ಡುರವರ ಸ್ನೇಹ, ಸಲುಗೆ ಟಿ.ಎಸ್.ರವರನ್ನು ಕೊಯಮತ್ತೂರಿಗೆ ಬರುವಂತೆ ಮಾಡಿತು. ಟಿ.ಎಸ್.ರವರು ಕೊಯಮತ್ತೂರಿನಲ್ಲಿ 1978ರತನಕ ನೆಲೆಸಿದ್ದರು. ಆ ಸಮಯದಲ್ಲಿ ಅವರು ಜಿ.ಡಿ. ನಾಯ್ಡುರವರ ಸಹಯೋಗದಿಂದ ಕೊಯಮತ್ತೂರಿನ 'ಇಂಜಿನಿಯರ್‌ಗಳ ಸಂಘ'ವನ್ನು ಸ್ಥಾಪಿಸಿದರು. ಕೊಯಮತ್ತೂರಿನ ಬಹುತೇಕ ಎಲ್ಲಾ ಸಂಘ ಸಂಸ್ಥೆಗಳೊಂದಿಗೆ ಒಡನಾಟ ಇಟ್ಟುಕೊಂಡರು. 1977-78ರಲ್ಲಿ ಎನ್.ಎಸ್. ಹರ್ಡೇಕರ್‌ರವರು ಬೆಳಗಾವಿಯ ಸಮೀಪದ ಘಟಪ್ರಭಾದಲ್ಲಿ ರೋಗಿಗಳಿಗಾಗಿ ಒಂದು 'ಶುಶ್ರೂಷ' ಕೇಂದ್ರವನ್ನು ಸ್ಥಾಪಿಸಿದರು. ಈ ಕೇಂದ್ರದ ಉದ್ಘಾಟನೆಗಾಗಿ ಹರ್ಡೇಕರ್‌ರವರು ಸಿದ್ದಲಿಂಗಯ್ಯನವರನ್ನು ಬರಮಾಡಿಕೊಂಡರು. ಉದ್ಘಾಟನೆ ಮಾಡಿದ ಟಿ.ಎಸ್.ರವರು ಸಂಸ್ಥೆಯ ಬಗ್ಗೆ ಹೆಚ್ಚಿನ ಆಸಕ್ತಿ ತಳೆದರು. ಇದರ ಜೊತೆಗೆ ಹರ್ಡೇಕರ್‌ರವರ ಸ್ನೇಹ ಮತ್ತಷ್ಟು ಬಲಗೊಂಡಿತು. ಹೀಗಾಗಿ

ಟಿ.ಎಸ್.ರವರು ಬೆಳಗಾವಿಯಲ್ಲಿ ಕೆಲವು ಕಾಲ ನೆಲೆಸಿದರು. ಬೆಳಗಾವಿಯಲ್ಲಿದ್ದಾಗ ಪಾರ್ಶ್ವವಾಯುವಿಗೆ ತುತ್ತಾದರು. ಕೆಲವು ದಿನ ತಮ್ಮ ಮಗಳ ಮನೆಯಲ್ಲಿದ್ದರು. ಬೆಳಗಾವಿಯಲ್ಲಿ ಉತ್ತಮವಾದ ಆಸ್ಪತ್ರೆ ಇಲ್ಲವೆಂದು ಹೇಳಿ ಕೊಯಮತ್ತೂರಿಗೆ ಡಾ॥ ಎಸ್.ಎಂ. ಮುನಿರತ್ನಂ ಚೆಟ್ಟಿಯವರು ಕರೆದುಕೊಂಡು ಹೋಗಿ ಒಳ್ಳೆಯ ಚಿಕಿತ್ಸೆಯನ್ನು ನೀಡಿದರು. ಇದರ ಫಲವಾಗಿ ಚೇತರಿಸಿಕೊಂಡರು. ನಂತರವೂ ಸುಮ್ಮನೆ ಕುಳಿತುಕೊಳ್ಳದೆ ಮತ್ತೊಮ್ಮೆ ಸಮಾಜಸೇವೆಗೆ ನಿಂತರು. 1983ರಲ್ಲಿ ತೀವ್ರ ಅನಾರೋಗ್ಯ ಪೀಡಿತರಾಗಿ ಬೆಂಗಳೂರಿನ ವಿಕ್ಟೋರಿಯನ್ನು ಆಸ್ಪತ್ರೆ ಸೇರಿದರು. ಅವರ ಆರೋಗ್ಯವನ್ನು ವಿಚಾರಿಸಲು ನಾಡಿನ ಹಿರಿಯ ಮತ್ತು ಕಿರಿಯ ರಾಜಕಾರಣಿಗಳು ಆಸ್ಪತ್ರೆಗೆ ಬಂದು ಹೋಗುತ್ತಿದ್ದರು. 26.07.1984ರಲ್ಲಿ ತಮ್ಮ 88ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

ಯಶೋಧರ ದಾಸಪ್ಪ

ಶ್ರೀಮತಿ ಯಶೋಧರ ದಾಸಪ್ಪನವರದು ಒಕ್ಕಲಿಗರ ಸಮುದಾಯದಲ್ಲಿಯೇ ಪ್ರತಿಷ್ಠಿತ ಮನೆತನ. ತಂದೆ ಕೆ.ಹೆಚ್. ರಾಮಯ್ಯನವರು, ಮಾವನವರು 1917ರಲ್ಲಿ ಹಿಂದುಳಿದ ಜನಾಂಗದ ಹೋರಾಟದ ಮುಖಂಡರಾಗಿದ್ದ ರಾವ್‌ಸಾಹೇಬ್ ಹಿರೇಹಳ್ಳಿ ಚನ್ನಯ್ಯನವರು. ಅವರ ಪತಿ ಹೆಚ್.ಸಿ. ದಾಸಪ್ಪನವರು ಸುಪ್ರಸಿದ್ಧ ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಹಾಗೂ ಮಂತ್ರಿಯಾಗಿ ಸೇವೆ ಸಲ್ಲಿಸಿದವರು. ಇಂತಹ ಕುಟುಂಬದಲ್ಲಿ ಜನಿಸಿದ ಯಶೋಧರ ಅವರು ಒಬ್ಬ ಸಾಧಾರಣ ಗೃಹಿಣಿಯಾಗಿ ಸುಖದ ಸುಪ್ಪತ್ತಿಗೆಯಲ್ಲಿ ಇದ್ದು ಕಾಲಹರಣ ಮಾಡಬಹುದಿತ್ತು. ಆದರೆ ಯಶೋಧರ ಅವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ಪೋಲಿಸರ ಲಾಠಿ ಏಟು ತಿಂದು ತುರಂಗವಾಸ ಅನುಭವಿಸಿ ಸ್ವಾತಂತ್ರ್ಯದ ಕಿಚ್ಚನ್ನು ಇತರ ಮಹಿಳೆಯರಿಗೂ ಹಚ್ಚಿ ಗಂಡಸರಿಗೆ ಸರಿಸಾಟಿಯಾಗಿ ನಿಂತರು. ಕೆಲಕಾಲ ಗಾಂಧೀಜಿಯವರ ಆಶ್ರಮದಲ್ಲಿದ್ದು ಅವರ ಸೇವೆ ಮಾಡಿ ತಾವು ಬದುಕಿರುವ ತನಕ ಗಾಂಧಿ ವಾದವನ್ನು ಅನುಸರಿಸಿದವರು. ಗಾಂಧೀಜಿಯುವರು ಯಶೋಧರರನ್ನು 'ಬೇಟಿ' ಎಂತಲೇ ಕರೆಯುತ್ತಿದ್ದರು ಹಾಗೂ ತಮ್ಮ ಸಾಕುಮಗಳು ಎಂದು ಇತರರಿಗೆ ಪರಿಚಯಿಸುವಷ್ಟು ಹತ್ತಿರವಾದರು. ಶಾಸಕಿಯಾಗಿ, ಸಮಾಜ ಸೇವಕಿಯಾಗಿ, ಸಚಿವರಾಗಿ ದುಡಿದರು. ಗಾಂಧಿ ನಾಡಿನಲ್ಲಿ ಗಾಂಧೀಜಿಯುವರ ತತ್ವವನ್ನು ಉಳಿಸಬೇಕೆಂಬ ಕಾರಣದಿಂದ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು. ಅಬಕಾರಿಯಿಂದ ಸರ್ಕಾರಕ್ಕೆ ಲಾಭ ಬರುತ್ತದೆ. ಆದುದರಿಂದ ಪಾನನಿರೋಧವನ್ನು ಜಾರಿಗೆ ತರಲಾಗದು ಎಂದಾಗ ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಹೊರಬಂದ

ಧೀರ ಮಹಿಳೆ. ತಮ್ಮ ಉಸಿರಿರುವ ತನಕ ಗಾಂಧಿತತ್ವವನ್ನು ಪಾಲಿಸಿಕೊಂಡು ಬಂದು ಗಾಂಧೀಜಿಯಂತೆ ಅಮರಳಾದ ಕರ್ನಾಟಕದ ಹೆಮ್ಮೆಯ ಪುತ್ರಿಯೇ ಯಶೋಧರ ದಾಸಪ್ಪನವರು.

ಬಾಲ್ಯ ಜೀವನ

ಕೆ.ಹೆಚ್. ರಾಮಯ್ಯನವರು ಒಬ್ಬ ದಕ್ಷ ಸರ್ಕಾರಿ ಅಧಿಕಾರಿಯಾಗಿದ್ದರೂ ಆಳರಸರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಅವರ ಸಹೋದರರಾದ ಕಂಠೀರವ ನರಸರಾಜ ಒಡೆಯರೊಂದಿಗೆ ವಿಶೇಷ ಸಲುಗೆಯಿಂದಾಗಿ ಅರಮನೆಯ ನಂಟು. ಕೆ.ಹೆಚ್. ರಾಮಯ್ಯ ಮತ್ತು ಶ್ರೀಮತಿ ರೇವಮ್ಮ ದಂಪತಿಗಳಿಗೆ ಒಟ್ಟು ಹನ್ನೊಂದು ಜನ ಮಕ್ಕಳು. ಯಶೋಧರ, ಮರಿದೇವೇಗೌಡ, ಕಾಶಿವಿಶ್ವನಾಥಗೌಡ, ಕೌಸಲ್ಯಾದೇವಿ, ಮೈತ್ರೇಯಿ, ಆದಿನಾರಾಯಣಗೌಡ, ಕೃಷ್ಣ (ಕ್ಯಾಪ್ಟನ್ ಕೃಷ್ಣ), ಗೋವಿಂದ, ಸೂರ್ಯನಾರಾಯಣಗೌಡ, ವಸಂತಲಕ್ಷ್ಮಿ ಮತ್ತು ಜಯಲಕ್ಷ್ಮಿ.

ಯಶೋಧರರವರು 28.05.1905ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಮನೆಯ ಹಿರಿಯ ಮಗಳಾದುದರಿಂದ ಹೆಚ್ಚಿನ ಜವಾಬ್ದಾರಿ ಆಕೆಯ ಮೇಲಿದ್ದಿತು. ಅವರದು ಸುಶೀಕ್ಷಿತ ಹಾಗೂ ಸಂಪ್ರದಾಯಸ್ಥ ಕುಟುಂಬ. ಮನೆಯ ಒಳಗೆ ಹಾಗೂ ಹೊರಗೆ ಶಿಸ್ತು ಸಂಯಮವಿದ್ದಿತು. ರಾಮಯ್ಯನವರು ಸರ್ಕಾರಿ ಅಧಿಕಾರಿಯಾಗಿದ್ದರೂ ಕೂಡ ಆರ್ಯಸಮಾಜ ಹಾಗೂ ರಾಮಕೃಷ್ಣ ಮಠದೊಂದಿಗೆ ಸಂಬಂಧವನ್ನಿಟ್ಟುಕೊಂಡಿದ್ದರು. ಮನೆಯಲ್ಲಿ ಭಜನೆ, ದೇವರ ಪ್ರಾರ್ಥನೆ, ಸತ್ಸಂಗ ದೀನ ದಲಿತರ ಬಗ್ಗೆ ಕಾಳಜಿ ಇವೇ ಮುಂತಾದವನ್ನು ಕಾಣಬಹುದಾಗಿತ್ತು. ಸರಸ್ವತಿಗೆ (ವಿದ್ಯೆ) ಆದ್ಯತೆ ನೀಡಿದಷ್ಟು ಲಕ್ಷ್ಮಿಗೆ (ಹಣಕ್ಕೆ) ಆದ್ಯತೆ ನೀಡಲಿಲ್ಲ. ಅಂದರೆ ತಮ್ಮ ಪ್ರಭಾವದಿಂದ ಆಸ್ತಿಪಾಸ್ತಿ ಮಾಡದೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಆದ್ಯತೆ ನೀಡಿದರು. ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ನೀಡಬೇಕೆಂಬುದು ಅವರ ಮನಸ್ಸಿನಲ್ಲಿತ್ತು.

ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಬಾಲ್ಯದಿಂದಲೂ ಚುರುಕಾಗಿದ್ದ ಯಶೋಧರಾಳನ್ನು ಬೆಂಗಳೂರಿನ ಚಾಮರಾಜಪೇಟೆ ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿಸಿದರು. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ನಂತರ ನಗರದ ಪ್ರತಿಷ್ಠಿತ ಶಾಲೆಯಾದ 'ಲಂಡನ್ ಮಿಷನ್ ಹೈಸ್ಕೂಲ್'ಗೆ ಸೇರಿಸಿದರು. ಮನೆತುಂಬಾ ಮಕ್ಕಳು ಮರಿ, ಬಂಧುಗಳು, ಪರಿಚಿತರು, ಬಂದುಹೋಗುವ ಜನ ಜಾಸ್ತಿ ಇದ್ದ ಕಾರಣ ಮಕ್ಕಳ ಭವಿಷ್ಯವೇ ಮುಖ್ಯವೆಂದು ಹೇಳಿ ಆಕೆಯನ್ನು

ಹಾಸ್ಟೆಲ್‌ಗೆ ಸೇರಿಸಿದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಮೇಲೆ ಸಂತೋಷಭರಿತರಾದ ರಾಮಯ್ಯನವರು ತನ್ನ ಮಗಳನ್ನು ತನ್ನಂತೆ ಸರ್ಕಾರದ ಉನ್ನತಾಧಿಕಾರಿಯನ್ನಾಗಿ ಮಾಡಬೇಕೆಂದು ಯೋಚಿಸಿದರು. ಇಂಟರ್‌ಮೀಡಿಯಟ್ ಓದಲು ಮದ್ರಾಸಿನ 'ಕ್ವೀನ್ ಮೇರಿ' ಕಾಲೇಜಿಗೆ ಸೇರಿಸಿದರು. ಶ್ರೀಮತಿ ರೇವಮ್ಮನವರಿಗೆ ಸುತರಾಂ ಇಷ್ಟವಿರಲಿಲ್ಲ. ಕಾರಣವೇನೆಂದರೆ ಗುರುತು ಪರಿಚಯವಿಲ್ಲದ ದೂರದೂರಿನಲ್ಲಿ ಹಾಸ್ಟೆಲ್‌ನಲ್ಲಿದ್ದು ಊಟ ತಿಂಡಿ ಸರಿಯಿರುವುದಿಲ್ಲ. ಅಷ್ಟಕ್ಕೂ ಪದವಿ ಪಡೆದರೆ ಸರಿಯಾದ ಗಂಡುಗಳು ಸಿಗುವುದಿಲ್ಲ. ಇವೇ ಮುಂತಾದ ಆಲೋಚನೆಗಳು ಕೆಲವೊಮ್ಮೆ ಬಂದವು. ರಾಮಯ್ಯನವರು ಇದಕ್ಕೆ ಸೊಪ್ಪು ಹಾಕಲಿಲ್ಲ. ಯಶೋಧರ ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ವೇಳೆ ತನ್ನ ಸಹಪಾಠಿಗಳ ಹಾಗೂ ಗುರುಹಿರಿಯ ಪ್ರಭಾವದಿಂದಾಗಿ ಕಲೆ, ವಿಜ್ಞಾನ, ತತ್ವಶಾಸ್ತ್ರ, ಗಣಿತಶಾಸ್ತ್ರವನ್ನು ಅಧ್ಯಯನ ಮಾಡಿದುದೇ ಅಲ್ಲದೆ ಇಂಗ್ಲೀಷ್, ತೆಲುಗು, ತಮಿಳು, ಹಿಂದಿ, ಫ್ರೆಂಚ್ ಭಾಷೆಗಳನ್ನು ಕಲಿತರು.

ಶಿಕ್ಷಣ ಮುಗಿಸಿ ಮನೆಗೆ ಬಂದಾಗ ಸುಮ್ಮನೆ ಕೂರಲಿಲ್ಲ. ತನ್ನ ಸಹೋದರ ಸಹೋದರಿಯರಿಗೆ ಹಿರಿಯಕ್ಕಳಾಗಿ ಮನೆ ಮೇಡಂ ಆಗಿ, ಮನೆಗೆ ಬಂದು ಹೋಗುವವರಿಗೆ ಅತಿಥಿ ಸತ್ಕಾರ ಮಾಡುವುದು ನಡೆದೇ ಇತ್ತು. ಸಮಯ ಸಿಕ್ಕಾಗ ರಾಮಕೃಷ್ಣ ಮಠಕ್ಕೆ ಹೋಗಿ ವಿಶೇಷ ಉಪನ್ಯಾಸ, ಭಜನೆ, ಪ್ರವಚನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಮನೆಯಲ್ಲಿ ಸಮಯ ಸಿಕ್ಕಾಗ ಸ್ವಾಮಿ ವಿವೇಕಾನಂದ, ರಮಾನಂದ, ಟಾಲ್‌ಸ್ಟಾಯ್ ಸೇರಿದಂತೆ ಜಗತ್ಪ್ರಸಿದ್ಧ ಚಿಂತಕರ ಪುಸ್ತಕಗಳನ್ನು ಓದಿ ಅರ್ಥಮಾಡಿಕೊಳ್ಳುತ್ತಿದ್ದರು.

ವೈವಾಹಿಕ ಜೀವನಕ್ಕೆ ಕಾಲಿಟ್ಟ ಯಶೋಧರ

ರಾವ್ ಸಾಹೇಬ್ ಹಿರೇಹಳ್ಳಿ ಚನ್ನಯ್ಯನವರು ಕೊಡಗಿನಲ್ಲಿ ನ್ಯಾಯಾದೀಶರಾಗಿದ್ದರು. ಚನ್ನಯ್ಯನವರು ಹಾಗೂ ಕೆ.ಹೆಚ್. ರಾಮಯ್ಯನವರು ಸ್ನೇಹಿತರು. ಚನ್ನಯ್ಯನವರ ಪುತ್ರ ಹೆಚ್.ಸಿ. ದಾಸಪ್ಪನವರು. ಇವರು ಮಡಿಕೇರಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಗಿಸಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಮುಗಿಸಿ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡಿ, ಬಾಂಬೆಯಲ್ಲಿ ಕಾನೂನು ಶಿಕ್ಷಣ ಪಡೆದು ಕಾನೂನು ಪದವೀಧರರಾದರು. ದಾಸಪ್ಪನವರು ಮೊದಲು ಬೆಂಗಳೂರಿನಲ್ಲಿ ನಂತರ ಮೈಸೂರಿನಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿ ಕೆಲವೇ ದಿನಗಳಲ್ಲಿ ಪ್ರತಿಭಾವಂತ ವಕೀಲರಾಗಿ ಹೊರ ಹೊಮ್ಮಿದರು.

ತನ್ನ ಸ್ನೇಹಿತನ ಮಗ ದಾಸಪ್ಪನನ್ನು ಚೆನ್ನಾಗಿ ಬಲ್ಲ ರಾಮಯ್ಯನವರು ತಮ್ಮ ಮಗಳು ಯಶೋಧಳನ್ನು ಕೊಟ್ಟು ವಿವಾಹ ಮಾಡುವ ತಮ್ಮ ಇಚ್ಛೆಯನ್ನು ಚನ್ನಯ್ಯನವರಿಗೆ ಹೇಳಿಕೊಂಡರು. ಅದಕ್ಕೆ ಚನ್ನಯ್ಯನವರು ಹಾಗೂ ದಾಸಪ್ಪನವರು ಒಪ್ಪಿಗೆ ನೀಡಿದರು. 1926ರಲ್ಲಿ ಬೆಂಗಳೂರಿನಲ್ಲಿ ವಿವಾಹ ನೆರವೇರಿತು. ನವದಂಪತಿಗಳಿಬ್ಬರು ಸಮಾಜದ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ್ದರು. ಅಲ್ಲದೆ ವಿದ್ಯಾವಂತರಾಗಿದ್ದರು.

ಪತಿಯ ಅಭಿವೃದ್ಧಿಗೆ ಬೆಂಬಲವಾಗಿ ನಿಂತ ಪತ್ನಿ

ಈಗಾಗಲೇ ತಿಳಿಸಿರುವಂತೆ ಹೆಚ್.ಸಿ. ದಾಸಪ್ಪನವರು ವಕೀಲಿ ವೃತ್ತಿಯನ್ನಿಡಿದು ಮೇಲೇರುತ್ತಿದ್ದರು. ಮನೆಯಲ್ಲಿ ಸ್ವಾತಂತ್ರ್ಯ ಹೋರಾಟ ಹಾಗೂ ರಾಜಕಾರಣದ ಬಗ್ಗೆ ಚಟುವಟಿಕೆ ನಡೆಯುತ್ತಿರುವುದು ದಾಸಪ್ಪನವರ ಮೇಲೆ ಪ್ರಭಾವ ಬೀರಿತು. ಕಾರಣವೇನೆಂದರೆ ಇವರ ತಂದೆಯವರು (ಹಿರೇಹಳ್ಳಿ ಚನಯ್ಯ) ಹಿಂದುಳಿದ ವರ್ಗಗಳ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು ಹಾಗೂ ಪ್ರಜಾಮಿತ್ರ ಮಂಡಳಿ, ಪ್ರಜಾಪಕ್ಷಗಳ ಸಂಚಾಲಕರಾಗಿದ್ದರು. ನಂತರ ಪ್ರಭಾವಿ ನಾಯಕರಾಗಿ ಹೊರ ಹೊಮ್ಮಿದರು. ಕ್ರಮೇಣ ಆ ಪಕ್ಷದಿಂದ ಪ್ರಜಾಪ್ರತಿನಿಧಿ ಹಾಗೂ ನ್ಯಾಯ ವಿಧಾಯಕ ಸಭೆಯ ಸದಸ್ಯರಾದರು.

1929ರಲ್ಲಿ ಭಾರತ ಸರ್ಕಾರವು (ಬ್ರಿಟಿಷರು) ಬಾಲ್ಯವಿವಾಹವನ್ನು ತಡೆಗಟ್ಟಲು 'ಶಾರದಾ ಕಾಯ್ದೆ' ಎಂಬ ಕಾಯ್ದೆಯನ್ನು ಜಾರಿಗೆ ತಂದಿತು. ಕಾಯ್ದೆಗೂ ಪರ ವಿರೋಧ ಗುಂಪುಗಳಾದವು. ಯಶೋಧರ ದಾಸಪ್ಪನವರು ಕಾಯ್ದೆಯ ಪರ ನಿಂತರು. ಹಾಗೂ ದಾಸಪ್ಪನವರ ಮೇಲೆ ಪ್ರಭಾವ ಬೀರಿದರು. ದಂಪತಿಗಳು ಬಾಲ್ಯವಿವಾಹದ ವಿರುದ್ಧ ಹೋರಾಟಕ್ಕಿಳಿದರು. ಬಾಲ್ಯವಿವಾಹವನ್ನು ತಡೆಗಟ್ಟಲು ಯಶೋಧರ ದಾಸಪ್ಪನವರು ಹಳ್ಳಿಹಳ್ಳಿಗಳಿಗೆ ತೆರಳಿ ಭಾಷಣ ಮಾಡಿ ಜನರಿಗೆ ಮನವರಿಕೆ ಮಾಡಿಕೊಟ್ಟರು. ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುವ ವೇಳೆ ಗಾಂಧೀಜಿಯವರ ಭಾಷಣ ಕೇಳಿ ಅವರಿಂದ ಪ್ರಭಾವಿತರಾಗಿದ್ದ ಯಶೋಧರ ಮತ್ತು ದಾಸಪ್ಪನವರು ಅಸಹಕಾರ ಚಳುವಳಿ, ಸಾಮೂಹಿಕ ಕಾನೂನು ಭಂಗ ಚಳುವಳಿಯಲ್ಲಿ ದಂಪತಿಗಳಿಬ್ಬರು ತಮ್ಮನ್ನು ತೊಡಗಿಸಿಕೊಂಡರು. 1936ರಲ್ಲಿ ಮೈಸೂರು ಸಂಸ್ಥಾನದಲ್ಲಿ ಹಿಂದಿ ಭಾಷೆಯ ಮುನ್ನಡೆಯನ್ನು ವೀಕ್ಷಿಸಲು ಬಂದಿದ್ದ ಸಬರಮತಿ ಆಶ್ರಮದ ವಿದ್ಯಾಪೀಠದ ಮುಖ್ಯಸ್ಥರಾದ ಕಾಕಾ ಕಾಲೇಲ್ಕರ್‌ರವರನ್ನು ದಂಪತಿಗಳು ಮೈಸೂರಿಗೆ ಬರಮಾಡಿಕೊಂಡು ಹಿಂದಿ ಭಾಷಾ ಪ್ರಚಾರಕ್ಕೆ ಅನುವು ಮಾಡಿಕೊಟ್ಟರು.

ಕಾಂಗ್ರೆಸ್ ಪಕ್ಷದ ಕಟ್ಟಾಳು ಯಶೋಧರಮ್ಮ

ಯಶೋಧರಮ್ಮನವರು 'ಕಾಂಗ್ರೆಸ್' ಪಕ್ಷದ ಕಟ್ಟಾಳಾಗಿದ್ದರೆ ಅವರ ಪತಿ ದಾಸಪ್ಪನವರು 'ಪ್ರಜಾಪಕ್ಷ'ದ ಕಟ್ಟಾಳಾಗಿದ್ದರು. ಯಶೋಧರಮ್ಮನವರು ಕಾಂಗ್ರೆಸ್ ಪಕ್ಷದ ಬಗ್ಗೆ ಎಂತಹ ಅಭಿಮಾನವಿತ್ತು ಎಂಬುದನ್ನು ಈ ಕೆಳಕಂಡ ದೃಷ್ಟಾಂತದಿಂದ ತಿಳಿಯಬಹುದು. ಪ್ರಜಾಪ್ರತಿನಿಧಿ ಸಭೆಯ ಚುನಾವಣೆ ಬಂದಿತು. ಪ್ರತಿಪಕ್ಷದ ಅಭ್ಯರ್ಥಿಯಾಗಿ ಹೆಚ್.ಸಿ. ದಾಸಪ್ಪನವರು ಚುನಾವಣಾ ಕಣಕ್ಕಿಳಿದಿದ್ದರು. ಅವರ ಎದುರು ಸ್ಪರ್ಧಿಸಿದ್ದವರು ಲಿಂಗಪ್ಪಯ್ಯ ಎಂಬ ವಕೀಲರು. ಯಶೋಧರರವರು ಮತ ಚಲಾಯಿಸಲು ತಮ್ಮ ಪತಿಯೊಡನೆ ಮಗಟ್ಟೆಗೆ ಕಾರಿನಲ್ಲಿ ಬಂದು ಕಾಂಗ್ರೆಸ್ ಪರ ನಿಂತಿದ್ದ ಲಿಂಗಪ್ಪಯ್ಯನವರಿಗೆ ಮತ ನೀಡಿದರೆ ಪರಂತು ತಮ್ಮ ಪತಿಗೆ ಮತ ನೀಡಲಿಲ್ಲ. ಇದು ಅಪರೂಪದಲ್ಲಿ ಅಪರೂಪದ ಘಟನೆ. ಇಷ್ಟೇ ಅಲ್ಲದೆ ತಮ್ಮ ಪತಿ ದಾಸಪ್ಪನವರು ಪ್ರಜಾಪಕ್ಷದಿಂದ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷಕ್ಕೆ ಸೇರುವಂತೆ ಒತ್ತಾಯಿಸಿದರು. ಕೊನೆಗೆ ದಾಸಪ್ಪನವರು 1937ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಗಾಂಧೀಜಿಯವರ ಸೇವಾ ಗ್ರಾಮಕ್ಕೆ ದಾಸಪ್ಪ ದಂಪತಿಗಳು

ಮೈಸೂರಿನಲ್ಲಿ ಪ್ರತಿಷ್ಠಿತ ಕುಟುಂಬವೆಂದು ತಿಳಿದ ಮೇಲೆ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಲು ದಾಸಪ್ಪ ದಂಪತಿಗಳನ್ನು ಗಾಂಧೀಜಿಯವರು ವಾರ್ದಾಕ್ಕೆ ಬರಲು ಆಹ್ವಾನ ನೀಡಿದರು. ಅವರ ಆಹ್ವಾನದ ಮೇರೆಗೆ ದಂಪತಿಗಳು ವಾರ್ದಾಕ್ಕೆ ತೆರಳಿದರು. ಗಾಂಧೀಜಿಯವರು ಬರಮಾಡಿಕೊಂಡರೂ ದಾಸಪ್ಪನವರು ಹೆಚ್ಚುಕಾಲ ವಾರ್ದಾದಲ್ಲಿರಲಾಗಲಿಲ್ಲ. ಕಾರಣವೇನೆಂದರೆ ವಕೀಲಿ ವೃತ್ತಿ ಹಾಗೂ ಸ್ವಾತಂತ್ರ್ಯ ಹೋರಾಟದ ತೀವ್ರತೆ ಅವರನ್ನು ಸುಮ್ಮನೆ ಕೂರಲು ಬಿಡುತ್ತಿರಲಿಲ್ಲ. ಹೀಗಾಗಿ ದಾಸಪ್ಪನವರು ಯಶೋಧರಳನ್ನು ವಾರ್ದಾ ಆಶ್ರಮದಲ್ಲಿ ಬಿಟ್ಟು ಮೈಸೂರಿಗೆ ವಾಪಸಾದರು. ಅತ್ತ ಯಶೋಧರರವರು ಗಾಂಧೀಜಿಯವರ ಆಶ್ರಮದಲ್ಲಿ ಶಿಸ್ತು, ಸಂಯಮವನ್ನು ಕಲಿಯುತ್ತಿದ್ದರು. ಆಶ್ರಮದಲ್ಲಿ ನಿತ್ಯ ಬೆಳಗಿನ ಜಾವ ನಾಲ್ಕು ಗಂಟೆಯಿಂದಲೆ ಚಟುವಟಿಕೆ ಪ್ರಾರಂಭವಾಗುತ್ತಿತ್ತು. ಭಜನೆ, ಗೀತಾ ಅಧ್ಯಯನ ಮಾಡುತ್ತಿದ್ದರು. ಶ್ರೀಮಂತರು ಬಡವರು ಎನ್ನದೆ ಪ್ರತಿಯೊಬ್ಬರೂ ಕಸಗುಡಿಸುವುದು, ನೀರು ತರುವುದು, ದವಸ ದಾನ್ಯಗಳಲ್ಲಿರುವ ಕಸಕಡ್ಡಿ ಕಲ್ಲು ಆರಿಸುವುದು, ದನಗಳ ಕೊಟ್ಟಿಗೆ ಶುಚಿಗೊಳಿಸುವುದು, ಬಿಡುವಿನ ವೇಳೆಯಲ್ಲಿ ಖಾದಿ ನೂಲು ತೆಗೆಯುವುದು, ಹಿಂದಿ ಭಾಷೆಯೇ ಅಲ್ಲದೆ ಭಾರತದ ಬೇರೆ ಬೇರೆ ಭಾಷೆಗಳನ್ನು ಕಲಿಯುವುದು ನಡೆದಿತ್ತು. ಆಶ್ರಮಕ್ಕೆ ಸರೋಜಿನಿ ನಾಯ್ಡು, ರಾಜಕುಮಾರಿ ಅಮೃತಾಕರ್, ಸುಚೇತಾ ಕೃಪಲಾನಿ, ಆಚಾರ್ಯ ಕೃಪಲಾನಿ, ಆಶಾದೇವಿ ಇವರೇ ಮುಂತಾದವರು ಬಂದು ಹೋಗುತ್ತಿದ್ದರು. ಹಿಂದೂ,

ಮುಸ್ಲಿಂ, ಕ್ರೈಸ್ತರೆನ್ನದೆ ಎಲ್ಲಾ ಜಾತಿಗಳ, ಧರ್ಮಗಳ ಕೇಂದ್ರವಾಗಿತ್ತು ಗಾಂಧೀಜಿಯವರ ಆಶ್ರಮ. ಯಶೋಧರ ದಾಸಪ್ಪನವರು ಆಶ್ರಮದಿಂದ ಸಾಕಷ್ಟು ಕಲಿತರು. ವಾರ್ಧಾ ಆಶ್ರಮದಿಂದ ಮೈಸೂರಿಗೆ ಹಿಂತಿರುಗಿದರು.

ಯಶೋಧರ ದಾಸಪ್ಪನವರು ವಾರ್ಧಾದಿಂದ ಹಿಂತಿರುಗಿದ ಮೇಲೆ ತಮ್ಮ ಮನೆಯಲ್ಲೂ ಅದೇ ವಾತಾವರಣವನ್ನು ಸೃಷ್ಟಿಸಿದರು. ರೇಷ್ಮೆ ಸೀರೆಯನ್ನು ತೊರೆದು ಖಾದಿ ಸೀರೆಯನ್ನು ಧರಿಸತೊಡಗಿದರು. ಒಡವೆ ವಸ್ತ್ರಗಳನ್ನು ತ್ಯಜಿಸಿ ಸರಳ ಜೀವನ ಮಾಡಲು ತಮ್ಮನ್ನು ಒಗ್ಗಿಸಿಕೊಂಡರು. ಯಶೋಧರ ಮತ್ತು ದಾಸಪ್ಪನವರ ಮನೆಯೂ ಗಾಂಧೀಜಿಯವರ ಆಶ್ರಮದಂತೆ ಜಾತ್ಯಾತೀತ ಹಾಗೂ ದೀನದಲಿತರ ಕೇಂದ್ರವಾಯಿತು. ತಮ್ಮ ಮಕ್ಕಳಾದ ರಾಮದಾಸ್ ಮತ್ತು ತುಳಿಸಿದಾಸ್‌ರವರಿಗೂ ಸರಳತೆ ಸಜ್ಜನಿಕೆಯನ್ನು ಮೈಗೂಡಿಸಿಕೊಳ್ಳುವಂತೆ ಮಾಡಿದರು. ದಾಸಪ್ಪನವರೂ ಸೇರಿದಂತೆ ಇಡೀ ಕುಟುಂಬ ವರ್ಗ ಖಾದಿ ತೊಡಲು ಪ್ರಾರಂಭಿಸಿದರು.

ಶಿವಪುರ ಧ್ವಜ ಸತ್ಯಾಗ್ರಹ

ಸ್ವಾತಂತ್ರ್ಯ ಚಳುವಳಿಯು ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ನಡೆಯುತ್ತಿತ್ತು. ಉತ್ತರ ಕರ್ನಾಟಕದವರು ಮೈಸೂರು ಸಂಸ್ಥಾನದ ಜನಗಳ ಮೇಲೆ ಅಷ್ಟಾಗಿ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಕಾರಣವೇನೆಂದರೆ ಮೈಸೂರಿಗರು ಆಳರಸರ ಪರ ಅಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿಲ್ಲ ಎಂಬಿತ್ಯಾದಿ ದೂರುಗಳಿದ್ದವು. ಅದು ಸುಳ್ಳು ಎಂದು ಸಾಬೀತುಪಡಿಸಿದ್ದು ಶಿವಪುರ ಧ್ವಜ ಸತ್ಯಾಗ್ರಹ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಶಿವಪುರ ಎಂಬಲ್ಲಿ ಕಾಂಗ್ರೆಸ್ ಧ್ವಜವನ್ನು ಸಾರ್ವಜನಿಕವಾಗಿ ಆರಿಸಬೇಕೆಂದು ಶ್ರೀಯುತರುಗಳಾದ ಟಿ. ಸಿದ್ದಲಿಂಗಯ್ಯ, ಸಾಹುಕಾರ್ ಚನ್ನಯ್ಯ, ಹೆಚ್.ಕೆ. ವೀರಣ್ಣಗೌಡ, ಕೊಪ್ಪದ ಜೋಗಿಗೌಡ, ಹೆಚ್.ಸಿ. ದಾಸಪ್ಪ ಇನ್ನೂ ಮುಂತಾದವರು ತೀರ್ಮಾನಿಸಿದರು.

1938ರಲ್ಲಿ ಏಪ್ರಿಲ್ 10ನೇ ತಾರೀಖು ಸಾವಿರಾರು ಜನ ಶಿವಪುರಕ್ಕೆ ಬಂದು ಜಮಾಯಿಸಿದರು. ಟಿ. ಸಿದ್ದಲಿಂಗಯ್ಯನವರನ್ನು ಮರೆವಣಿಗೆಯಲ್ಲಿ ಕರೆತಂದು ಅವರಿಂದ ಧ್ವಜಾರೋಹಣ ಮಾಡಿಸಲಾಯಿತು. ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದುದರಿಂದ ಅವರನ್ನು ಬಂಧಿಸಲಾಯಿತು. ಯಶೋಧರಮ್ಮ ದಾಸಪ್ಪ, ಹೆಚ್.ಕೆ. ವೀರಣ್ಣಗೌಡ, ಟಿ. ಮರಿಯಪ್ಪ, ಸಾಹುಕಾರ್ ಚನ್ನಯ್ಯನವರು ಸರ್ಕಾರದ ಕ್ರಮವನ್ನು ಖಂಡಿಸಿ ಭಾಷಣ ಮಾಡಿದರು. ನಂತರ ಸರದಿಯಂತೆ

ಧ್ವಜಾರೋಹಣ ಮಾಡಿದವರನ್ನು ಪೋಲಿಸರು ಬಂಧಿಸಿದರು. ಯಶೋಧರಮ್ಮನವರು ತಮ್ಮ ಮಕ್ಕಳಾದ ರಾಮದಾಸ್ ಮತ್ತು ತುಳಸಿದಾಸರನ್ನು ಅಲ್ಲಿಗೆ ಕರೆತಂದಿದ್ದರು. ಅದನ್ನು ನೋಡಿದ ಜನ ಯಶೋಧರಮ್ಮನವರ ಬಗ್ಗೆ ಬಹಳವಾದ ಗೌರವ ಉಂಟಾಯಿತು. ಯಶೋಧರಮ್ಮನವರೂ ಕೂಡ ಧ್ವಜಾರೋಹಣ ಮಾಡಿ ಬಂಧನಕ್ಕೊಳಗಾದರು. ರಾತ್ರಿ ಬೆಳಗಾಗುವುದರೊಳಗೆ ಯಶೋಧರಮ್ಮನವರು ರಾಜ್ಯಾದ್ಯಂತ ಜನಪ್ರಿಯ ನಾಯಕರಾಗಿ ಹೊರಹೊಮ್ಮಿದರು.

ಶಿವಪುರ ಧ್ವಜಸತ್ಯಾಗ್ರಹದ ಬಿಸಿ ಮಾಸುವ ಮುನ್ನವೇ 1938ರಲ್ಲಿ ಕೋಲಾರ ಜಿಲ್ಲೆಯ ವಿದುರಾಶ್ವತ್ಥ ಎಂಬಲ್ಲಿ ತ್ರಿವರ್ಣ ಧ್ವಜ ಹಾರಿಸಲು ತೀರ್ಮಾನಿಸಲಾಯ್ತು. ಪೋಲಿಸರು ಪ್ರತಿಬಂಧಕಾಜ್ಞೆಯನ್ನು ವಿಧಿಸಿದರು. ಚಳುವಳಿಗಾರರು ಇದನ್ನು ಧಿಕ್ಕರಿಸಿದಾಗ ಅವರ ಮೇಲೆ ಗೋಲಿಬಾರ್ ಮಾಡಲಾಯಿತು. ಇದರಿಂದ ಮೂವತ್ತಕ್ಕೂ ಹೆಚ್ಚು ಜನ ಮುಗ್ಧರು ಅಸುನೀಗಿದರು. ಜನ ಭಯಭೀತರಾದರು. ಈ ಘಟನೆಯನ್ನು ಕರ್ನಾಟಕದ 'ಜಲಿಯನ್ ವಾಲಾಭಾಗ್' ಎಂದು ಬಣ್ಣಿಸಲಾಯಿತು. ಮಹಾತ್ಮ ಗಾಂಧೀಜಿಯವರು ಸೇರಿದಂತೆ ನಾಯಕರು ಖಂಡಿಸಿದರು. ಯಶೋಧರಮ್ಮನವರು ತೀಕ್ಷ್ಣವಾದ ಮಾತುಗಳಲ್ಲಿ ಭಾಷಣ ಮಾಡುವುದರ ಮೂಲಕ ಸರ್ಕಾರದ ಕ್ರಮವನ್ನು ಖಂಡಿಸಿದರು. ಜನ ರೊಚ್ಚಿಗೇಳುವಂತೆ ಮಾಡಿದರು. ಪೋಲಿಸರು ಯಶೋಧರಮ್ಮನವರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ನ್ಯಾಯಾಲಯವು ಕೆಲವು ದಿನ ನ್ಯಾಯಾಂಗ ಬಂಧನದದಲ್ಲಿರಿಸಿ ಷರತ್ತಿನ ಮೇಲೆ ಬಿಡುಗಡೆಗೊಳಿಸಿತು.

ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಯಶೋಧರ ದಾಸಪ್ಪನವರು

1942ರಲ್ಲಿ ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಆಂದೋಲನವನ್ನು ಇಡೀ ಭಾರತದಾದ್ಯಂತ ಹಬ್ಬಿಸಿದರು. ಮೈಸೂರು ಹಿಂದೆ ಬೀಳಲಿಲ್ಲ. ಹೆಚ್.ಸಿ. ದಾಸಪ್ಪನವರು ಮುಂಚೂಣಿಯಲ್ಲಿದ್ದರು. ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಹೆಚ್.ಕೆ. ವೀರಣ್ಣಗೌಡ, ಕೆ.ಟಿ. ಭಾಷ್ಯಂ, ಟಿ. ಮರಿಯಪ್ಪ, ಟಿ. ಸಿದ್ಧಲಿಂಗಯ್ಯ, ಸಾಹುಕಾರ್ ಚನ್ನಯ್ಯ, ಹೆಚ್.ಸಿ. ದಾಸಪ್ಪನವರು ಬಂಧನಕ್ಕೊಳಗಾದರು. ಚಳುವಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಎಂ.ವಿ. ಕೃಷ್ಣಪ್ಪನವರು ಮತ್ತು ಟಿ.ಎಂ. ಸಿದ್ದಯ್ಯನವರು ಶಾಲಾ ಕಾಲೇಜುಗಳಿಗೆ ತೆರಳಿ ಶಾಲಾ ಮಕ್ಕಳನ್ನು ಚಳುವಳಿಗೆ ಧುಮುಕುವಂತೆ ಕರೆಕೊಟ್ಟರು. ಶಾಲಾ ಕಾಲೇಜುಗಳಿಗೆ ತೆರಳಿ ಭಾಷಣ

ಮಾಡತೊಡಗಿದರು. ಸ್ಫೂರ್ತಿಗೊಂಡ ಸಾವಿರಾರು ವಿದ್ಯಾರ್ಥಿಗಳು ಶಾಲೆಯನ್ನು ತೊರೆದು ಚಳುವಳಿಗಿಳಿದರು. ಇದರಿಂದಾಗಿ ಹೆಚ್.ಎಲ್. ತಿಮ್ಮೇಗೌಡ (ಮಾಜಿ ಆರೋಗ್ಯ ಸಚಿವರಾದ ಡಾ. ಹೆಚ್.ಎಲ್. ತಿಮ್ಮೇಗೌಡ) ಎಂಬ ಬಾಲಕ ಆರನೆಯ ತರಗತಿಯಲ್ಲಿ ಓದುತ್ತಿರುವ ವೇಳೆ ಕಾಂಗ್ರೆಸ್ ಧ್ವಜವನ್ನಿಡಿದು ಚಳುವಳಿಯುನ್ನು ತೀವ್ರಗೊಳಿಸಿದ. ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸಿ ಮೈಸೂರಿನಾದ್ಯಂತ ಇತರೇ ವಿದ್ಯಾರ್ಥಿಗಳನ್ನು ಹುರಿದುಂಬಿಸಿದ ಕಾರಣಕ್ಕೆ ಆಗಸ್ಟ್ 26ರಂದು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದರು. ನ್ಯಾಯಾಲಯವು ಆಗಸ್ಟ್ 26 1942ರಿಂದ ಸೆಪ್ಟೆಂಬರ್ 30ನೇ ತಾರೀಖಿನವರೆಗೆ ಕಾರಾಗೃಹದಲ್ಲಿರುವಂತೆ ಶಿಕ್ಷೆ ವಿಧಿಸಿತು. (Reading in Modern History of Mysore By Dr. K. Veerathappa-Page-83/ Secret S.B. 188/42-43/2 October 1942 34 of 42-43.) ಎಲ್ಲೆಡೆ ಬಿಗುವಿನ ವಾತಾವರಣ. ಯಶೋಧರಮ್ಮನವರು ಮಹಿಳೆ ಎಂಬ ಕಾರಣದಿಂದ ಬಂಧಿಸಲಿಲ್ಲ. ಅದನ್ನು ಬಿಟ್ಟರೆ ಪೋಲಿಸರು ನಾಯಕರನ್ನು ಬಂಧಿಸಿ ಕಿರುಕುಳ ಕೊಡತೊಡಗಿದರು.

ಮೈಸೂರಿನಲ್ಲಿದ್ದ ದಾಸಪ್ಪನವರ ಮನೆಯ ಹೆಸರು 'ಯಶೋ ವಿಲಾಸ' ಮನೆಯೊಡೆಯ ಬಂಧನಕ್ಕೊಳಗಾದಾಗ ಮನೆಯೊಡತಿ ಸುಮ್ಮನೆ ಕೂರಲಿಲ್ಲ. ಚಳುವಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಮೈಸೂರು ಸ್ಟಾರ್ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಪ್ರಜಾಮತ, ಜ್ವಾಲೆ ಇವೇ ಮುಂತಾದ ಪತ್ರಿಕೆಗಳಿಗೆ ಅಗ್ರ ಲೇಖನಗಳನ್ನು ಬರೆದು ಗುಪ್ತವಾಗಿ ಕಳುಹಿಸಿಕೊಡುತ್ತಿದ್ದರು. ಯಶೋವಿಲಾಸವು ಚಳುವಳಿಗಾರರಿಗೆ ಆಶ್ರಯ ತಾಣವಾಯಿತು. ಭೂಗತ ಜಗತ್ತಿನ ಕೇಂದ್ರವಾಗಿ ಪರಿಣಮಿಸಿತು. ಪೋಲಿಸರು ಈ ಮನೆಯ ಮೇಲೆ ಒಂದು ಕಣ್ಣಿಟ್ಟರು. ಯಶೋಧರಮ್ಮನವರ ಚಲನವಲನವನ್ನು ಗಮನಿಸುತ್ತಿದ್ದರು. ಅವರ ಮೇಲೆ ಹದ್ದಿನ ಕಣ್ಣಿಟ್ಟರು. ಯಶೋಧರಮ್ಮನವರು ಇದಕ್ಕೆ ಸೊಪ್ಪು ಹಾಕಲಿಲ್ಲ. ತಮ್ಮ ಚಟುವಟಿಕೆಯನ್ನು ತೀವ್ರಗೊಳಿಸಿದರು. ಕದ್ದುಮುಚ್ಚಿ ಹೋಗಿ ಭಾಷಣ ಮಾಡುವುದು, ಚಳುವಳಿಗಾರರಿಗೆ ಆಶ್ರಯ ನೀಡುವುದು ನಡೆದೇ ಇತ್ತು. ಪೋಲಿಸರು ಯಶೋಧರಮ್ಮನವರ ಮೇಲೆ ಗೃಹಬಂಧನ ಆಜ್ಞೆಯನ್ನು ಜಾರಿಗೆ ತಂದು ಮನೆಯಿಂದ ಎಲ್ಲೂ ಹೋಗದಂತೆ ನಿರ್ಬಂಧ ಏರಿದರು. ಇದನ್ನು ನಿರೀಕ್ಷಿಸಿದ್ದ ಯಶೋಧರಮ್ಮನವರು ಪೋಲಿಸರ ಕಣ್ಣುತಪ್ಪಿಸಿ ಗುಪ್ತವಾಗಿ ಲೇಖನಗಳನ್ನು ಬರೆಯುವುದು ಹೊರಗಿನಿಂದ ಪತ್ರಿಕೆಗಳನ್ನು ತರಿಸಿಕೊಳ್ಳುವುದನ್ನು ಮುಂದುವರಿಸಿದರು. ಯಶೋಧರಮ್ಮನವರು ದಕ್ಷಿಣ ಭಾರತದ ಹೆಸರಾಂತ

ಪತ್ರಿಕೆಯಾದ ತಿಲಕರ ಮರಾಠಿ ಹಾಗೂ ಕೇಸರಿ ಪತ್ರಿಕೆಗಳಿಗೂ ಅಗ್ರ ಲೇಖನಗಳನ್ನು ಬರೆದು ಸ್ವಾತಂತ್ರ್ಯ ಚಳುವಳಿಯ ಕಿಚ್ಚನ್ನು ಹಚ್ಚಿದರು.

ನ್ಯಾಯ ವಿಧಾಯಕ ಸಭಾಸದರಾಗಿ ಆಯ್ಕೆಯಾದ ಯಶೋಧರ ದಾಸಪ್ಪ

ಹೆಚ್.ಸಿ. ದಾಸಪ್ಪನವರು ಹಾಗೂ ಶ್ರೀಮತಿ ಯಶೋಧರ ದಾಸಪ್ಪನವರು ಒಂದೇ ಮನೆಯಲ್ಲಿದ್ದು ಕಾಂಗ್ರೆಸ್ ಚಳುವಳಿಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಚಳುವಳಿ, ರಾಜಕೀಯ, ಚರ್ಚೆಗಳು ಬಂದರೆ ಅದನ್ನು ಯೋಚನೆ ಮಾಡಿ ನಿರ್ಧಾರಕ್ಕೆ ಬರುತ್ತಿದ್ದರು. ಅವರಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ. ದಾಸಪ್ಪನವರಷ್ಟೇ ಯಶೋಧರಮ್ಮನವರು ಉತ್ತಮವಾದ ಸ್ಥಾನಮಾನವನ್ನು ಹೊಂದಿದ್ದರು. ಮೈಸೂರು ನಗರದಿಂದ ನ್ಯಾಯವಿಧಾಯಕ ಸಭೆಗೆ ಚುನಾಯಿತರಾಗಿದ್ದು ರಾಜೀನಾಮೆ ನೀಡಿದ್ದ ಹೆಚ್.ಸಿ. ದಾಸಪ್ಪನವರು ಉಪಚುನಾವಣೆಗೆ ನಿಂತಿದ್ದರು. ಆ ಸ್ಥಾನಕ್ಕೆ ಅವರ ಧರ್ಮಪತ್ನಿ ಯಶೋಧರಮ್ಮನವರು ಕಾಂಗ್ರೆಸ್ ಉಮೇದುವಾರರನ್ನಾಗಿ ನಿಲ್ಲಿಸಲಾಯಿತು. ಮೈಸೂರು ನ್ಯಾಯವಿಧಾಯಕ ಸಭೆಯು ಸ್ಥಾಪನೆಯಾದಾಗಿನಿಂದ ಮಹಿಳೆಯರಾರೂ ಚುನಾವಣೆಗೆ ನಿಂತಿರಲಿಲ್ಲ. ಕಾಂಗ್ರೆಸ್ ಅಂತಹ ಸಾಹಸಕ್ಕೆ ಕೈಹಾಕಿತು. ಯಶೋದರಮ್ಮರವರ ವಿರುದ್ಧ ಜನಪ್ರಿಯ ವ್ಯಕ್ತಿಯಾಗಿದ್ದ ರಾವ್‌ಸಾಹೇಬ್ ಮುನಿವೆಂಕಟಪ್ಪನವರು ಸ್ಪರ್ಧಿಸಿದರು. ಯಶೋಧರಮ್ಮನವರು ಈ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲವೆಂದು ಜನ ಭಾವಿಸಿದ್ದರು. 05.03.1938 ರಂದು ನಡೆದ ಚುನಾವಣೆಯಲ್ಲಿ ಯಶೋಧರರವರು ಬಹುಮತದಿಂದ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದರು.

ಸದಸ್ಯರಾದ ಬಳಿಕ ಸದನದ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಿದ್ದರು. ಅಂದಿನ ಸರ್ಕಾರವು 1938ರಲ್ಲಿ ಸ್ಥಳೀಯ ಭಾಷಾ ಪತ್ರಿಕೆಗಳನ್ನು ಧಮನ ಮಾಡುವ ಉದ್ದೇಶದಿಂದ ಪತ್ರಿಕಾ ಮಸೂದೆಯನ್ನು ಜಾರಿಗೆ ತಂದಿತು. ಅದರ ಪ್ರಕಾರ ಸ್ಥಳೀಯ ಭಾಷಾ ಪತ್ರಿಕೆಗಳು ಸರ್ಕಾರಕ್ಕೆ ಮುಂಗಡ ಹಣ ಕಟ್ಟಿ ಸಂಬಂಧಪಟ್ಟ ಅಧಿಕಾರಿಯ ಅನುಮತಿ ಪಡೆಯಬೇಕು, ಪತ್ರಿಕೆಯಲ್ಲಿ ಸುದ್ದಿಯನ್ನು ಪ್ರಕಟಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗೆ ಅದನ್ನು ತೋರಿಸಿ ಅವರ ಅನುಮತಿ ಪಡೆದು ಸುದ್ದಿ ಪ್ರಕಟಿಸಬೇಕು. ಇವೇ ಮುಂತಾದ ನಿರ್ಬಂಧಗಳನ್ನು ಪತ್ರಿಕೆಗಳ ಮೇಲೆ ಏರಿದರು. ಯಶೋಧರಮ್ಮನವರು

ಸರ್ಕಾರದ ಈ ನಿರ್ಧಾರವನ್ನು ಹಿಂಪಡೆದು ಮರುಪರಿಶೀಲಿಸಬೇಕೆಂದು ಒತ್ತಾಯಿಸಿದರು. ಸುದ್ದಿ ಪತ್ರಿಕೆಗಳು ನಿರ್ಭಯವಾಗಿ ಕೆಲಸ ಮಾಡಬೇಕೇ ಪರಂತು ಸರ್ಕಾರದ ಮುಖವಾಣಿಯಾಗಿ ಕೆಲಸ ಮಾಡಬಾರದು. ಹಾಗೆ ಮಾಡಿದರೆ ಜನಸಾಮಾನ್ಯರು ಪತ್ರಿಕೆಗಳನ್ನು ನಂಬುವುದೇ ಇಲ್ಲ. ಸಂಶಯ ದೃಷ್ಟಿಯಿಂದ ನೋಡುತ್ತಾರೆ ಎಂದು ತಮ್ಮ ವಾದವನ್ನು ಸಮರ್ಥಿಸಿಕೊಂಡರು.

ಮೈಸೂರಿನಲ್ಲಿ ಹೊಸದಾಗಿ ನಿರ್ಮಿಸಿದ ದೊಡ್ಡ ಕಟ್ಟಡಕ್ಕೆ ಬ್ರಿಟಿಷ್ ಪೋಲಿಸ್ ಅಧಿಕಾರಿಯಾಗಿದ್ದ (ಐ.ಜಿ.ಪಿ.) ಹೆಮಿಲ್ಟನ್‌ನ ಹೆಸರನ್ನು ಇಟ್ಟಿತು. ಮುಂದೆ ಆ ಕಟ್ಟಡವನ್ನು 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದು ಕರೆಯಲ್ಪಡುತ್ತಿತ್ತು. ಜನಸಾಮಾನ್ಯರು ರೊಚ್ಚಿಗೆದ್ದು ಕಟ್ಟಡದಲ್ಲಿದ್ದ ಬೋರ್ಡಿಗೆ ಸುಣ್ಣ ಬಳಿದು ತಮ್ಮ ಆಕ್ರೋಶವನ್ನ ವ್ಯಕ್ತಪಡಿಸಿದರು. ಅಂತಹ ವ್ಯಕ್ತಿಗಳನ್ನು ಪೋಲಿಸರು ಬಂಧಿಸಿ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಇದು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದಿತು. ಯಶೋಧರಮ್ಮನವರು ಬ್ರಿಟಿಷರನ್ನು ಓಲೈಸುವ ಉದ್ದೇಶದಿಂದ ಒಬ್ಬ ಪೋಲಿಸ್ ಅಧಿಕಾರಿಯ ಹೆಸರನ್ನಿಡುತ್ತಿರುವುದು ಸರಿಯಲ್ಲವೆಂದು ಸರ್ಕಾರದ ಕ್ರಮವನ್ನು ವಿರೋಧಿಸಿದರು.

ಇರ್ವಿನ್ ನಾಲಾ ರೈತರು ಕಬ್ಬನ್ನು ಬೆಳೆದು ಸಕ್ಕರೆ ಕಾರ್ಖಾನೆಗೆ ತೆಗೆದುಕೊಂಡು ಹೋಗಿ ಕೊಟ್ಟು ಹಣ ಪಡೆಯಬೇಕಾದರೆ ಬಹಳಷ್ಟು ತೊಂದರೆ ಮತ್ತು ಅಧಿಕಾರಿಗಳಿಂದ ಕಿರುಕುಳ ಅನುಭವಿಸುತ್ತಿದ್ದರು. ಇದನ್ನು ರೈತರಿಂದ ಕೇಳಿ ತಿಳಿದುಕೊಂಡ ಯಶೋಧರಮ್ಮನವರು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಎತ್ತಿಕೊಂಡರು. ರೈತರು ಬೆಳೆ ಬೆಳೆಯಲು ಸಾಲಸೌಲಭ್ಯ ನೀಡಬೇಕು. ಸರ್ಕಾರವು ಕಣ್ಮುಚ್ಚಿ ಕುಳಿತ ಕಾರಣದಿಂದಾಗಿ ಶ್ರೀಮಂತರು, ಜಮೀನ್ದಾರರು, ಬಂಡವಾಳ ಷಾಹಿಗಳು ಹೆಚ್ಚಿನ ಬಡ್ಡಿಗೆ ಸಾಲ ನೀಡಿ ರೈತರ ಜೀವ ಹಿಂಡುತ್ತಿದ್ದಾರೆ. ಇಷ್ಟು ಸಾಲದು ಎಂಬಂತೆ ಅಧಿಕಾರಿಗಳು ಲಂಚ ಕೊಡದಿದ್ದರೆ ಕಬ್ಬನ್ನು ಕೈಗಾರಿಕೆಗೆ ಸಾಗಿಸಲು ಪರ್ಮಿಟ್ ಕೊಡುವುದಿಲ್ಲ ರೈತರು ಶ್ರೀಮಂತರ ಹಾಗೂ ಅಧಿಕಾರಿಗಳ ನಡುವೆ ಕತ್ತರಿಗೆ ಸಿಕ್ಕ ಅಡಿಕೆಯಂತಾಗಿದ್ದಾರೆ ಎಂದು ಯಶೋಧರಮ್ಮನವರು ಬಣ್ಣಿಸಿದರು. ಈ ಕೂಡಲೇ ಸರ್ಕಾರವು ರೈತರ ಪರ ನಿಂತು ರೈತರು ಅನುಭವಿಸುತ್ತಿರುವ ಕಷ್ಟಗಳನ್ನು ಪರಿಹರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಈ ಮೂಲಕ ರೈತರ ದನಿಯಾದರು. ರೈತರು ಯಶೋಧರಮ್ಮನವರನ್ನು ಬಹುವಾಗಿ ಮೆಚ್ಚಿಕೊಂಡರು.

ಮೈಸೂರು ಚಲೋ ಚಳುವಳಿಯಲ್ಲಿ ಯಶೋಧರಮ್ಮನವರು

1945ರಲ್ಲಿ ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆದು ಕ್ಲೆಮೆಂಟ್ ಹಟ್ಲೆ ಇಂಗ್ಲೆಂಡಿನ ಪ್ರಧಾನಿಯಾದರು. ಆತ ಲೇಬರ್ ಪಕ್ಷಕ್ಕೆ ಸೇರಿದವನಾದ್ದರಿಂದ

ಭಾರತಕ್ಕೆ ಸ್ವಾತಂತ್ರ್ಯ ನೀಡಲು ನಿರ್ಧರಿಸಿದ. ಭಾರತದ ಚಳುವಳಿಗಾರರ ಆಸೆ ಗರಿಗೆದರಿತು. ಕೊನೆಗೆ 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ನೀಡಿದರು. ಸಂಸ್ಥಾನಗಳ ರಾಜಮಹಾರಾಜರಲ್ಲಿ ಕೆಲವರು ಸ್ವಾತಂತ್ರ್ಯ ಕೊಡಲೊಪ್ಪಲಿಲ್ಲ. ಇದಕ್ಕೆ ಕಾರಣವೇನೆಂದರೆ 1947ರ ಸ್ವಾತಂತ್ರ್ಯ ಕಾಯ್ದೆಯಲ್ಲಿದ್ದ ಲೋಪದೋಷಗಳು. ಇದನ್ನು ಬಳಸಿಕೊಂಡು ಮೈಸೂರರಸರು ಸ್ವಾತಂತ್ರ್ಯ ನೀಡಲು ಒಪ್ಪಲಿಲ್ಲ. ಚಳುವಳಿಗಾರರು ಮೈಸೂರು ಚಲೋ ಚಳುವಳಿ ಅಥವಾ ಅರಮನೆ ಚಳುವಳಿಯನ್ನು ಪ್ರಾರಂಭಿಸಿದರು. ಟಿ. ಸಿದ್ದಲಿಂಗಯ್ಯ, ಕೆ.ಟಿ. ಭಾಷ್ಯಂ, ಹೆಚ್.ಕೆ. ವೀರಣ್ಣಗೌಡ, ಹೆಚ್.ಸಿ. ದಾಸಪ್ಪ, ಶಾಂತವೇರಿ ಗೋಪಾಲಗೌಡ, ಸಾಹುಕಾರ್ ಚನ್ನಯ್ಯ, ಮೈಸೂರು ತಾತಯ್ಯ (ವೆಂಕಟ ಕೃಷ್ಣಯ್ಯ), ತಗಡೂರು ರಾಮಚಂದ್ರರಾವ್, ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ ಇವರೇ ಮುಂತಾದವರು ಮೈಸೂರಿಗೆ ಮುತ್ತಿಗೆ ಹಾಕುವಂತೆ ಕರೆಕೊಟ್ಟರು. ಮಂಡ್ಯ, ಚಾಮರಾಜನಗರ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಚಿತ್ರದುರ್ಗ ಸೇರಿದಂತೆ ಎಲ್ಲೆಡೆಯಿಂದ ಚಳುವಳಿಗಾರರು ಮೈಸೂರಿಗೆ ನುಗ್ಗಿ ಬಂದರು. ಬಳ್ಳಾರಿ ಸಿದ್ದಮ್ಮ, ಟಿ. ಸುನಂದಮ್ಮ ಇವರೇ ಮುಂತಾದವರು ಯಶೋಧರಮ್ಮನವರ ನೇತೃತ್ವದಲ್ಲಿ ಹಳ್ಳಿ ಹಳ್ಳಿಗೆ ತಿರುಗಿ ಭಾಷಣ ಮಾಡಿ ಜನರನ್ನು ಹುರಿದುಂಬಿಸಿದರು. ಮೈಸೂರಿನಲ್ಲಿ ಅರ್ಕಾಟ್–ಬಾಯ್ಕಾಟ್, ತಂಬುಚೆಟ್ಟಿ ಚಟ್ಟಕಟ್ಟಿ ಎಂಬ ಘೋಷಣೆ ಕೂಗತೊಡಗಿದರು. ಮೈಸೂರು ಅರಸರಾಗಿದ್ದ ಜಯಚಾಮರಾಜ ಒಡೆಯರಿಗೆ ಮುಜುಗರ ಮತ್ತು ಅವಮಾನವಾಯಿತು. ಕೊನೆಗೆ ಮಹಾರಾಜರು 'ಇನ್ಸುಟ್ರುಮೆಂಟ್ ಆಫ್ ಅಕ್ಸೆಷನ್'ಗೆ ಸಹಿ ಮಾಡುವ ಮೂಲಕ ಮೈಸೂರು ಸ್ವತಂತ್ರವಾಯಿತು.

ಮಹಾರಾಜರ ಒಪ್ಪಿಗೆ ಪಡೆದು ಅರಮನೆಯಲ್ಲಿ 29 ಅಕ್ಟೋಬರ್ 1947ರಲ್ಲಿ ಮಂತ್ರಿಮಂಡಲವನ್ನು ಸಮಾವೇಶಗೊಳಿಸಿದರು. ಒಂಬತ್ತು ಮಂತ್ರಿಗಳನ್ನೊಳಗೊಂಡ ಚಿಕ್ಕ ಚೊಕ್ಕ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಅವರ ಹೆಸರು ಮತ್ತು ಖಾತೆಗಳು ಈ ಕೆಳಕಂಡಂತಿವೆ.

ಕಾಂಗ್ರೆಸ್ಸಿಗರು

1. ಕೆ.ಸಿ. ರೆಡ್ಡಿ – ಮುಖ್ಯಮಂತ್ರಿ
2. ಹೆಚ್.ಸಿ. ದಾಸಪ್ಪ – ಹಣಕಾಸು ಮತ್ತು ಕೈಗಾರಿಕೆ
3. ಕೆ.ಟಿ. ಭಾಷ್ಯಂ – ಕಾನೂನು ಮತ್ತು ಧಾರ್ಮಿಕ ದತ್ತಿ ಖಾತೆ
4. ಹೆಚ್. ಸಿದ್ದಲಿಂಗಯ್ಯ – ಕಂದಾಯ ಮತ್ತು ರೈಲ್ವೆ

5. ಟಿ. ಮರಿಯಪ್ಪ – ಗೃಹ ಖಾತೆ
6. ಆರ್. ಚನ್ನಿಗರಾಮಯ್ಯ – ಸ್ಥಳೀಯ ಸ್ವಯಂ ಆಡಳಿತ

ಕಾಂಗ್ರೆಸ್ಸೇತರರು

1. ಜವಾಟ್ ಮೊಹಮದ್ ಷರೀಫ್ – ಆರೋಗ್ಯ ಮತ್ತು ಅಬಕಾರಿ
2. ಡಿ.ಹೆಚ್. ಚಂದ್ರಶೇಖರಯ್ಯ – ಶಿಕ್ಷಣ
3. ಪಿ. ಸುಬ್ಬರಾಮ ಚೆಟ್ಟಿ – ನಗರಾಭಿವೃದ್ಧಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಯಶೋಧರಮ್ಮ

ಮೈಸೂರು ಕಾಂಗ್ರೆಸ್ ಅಧ್ಯಕ್ಷಗಾದಿಯು ಪ್ರಮುಖವಾದುದು. ಅಧ್ಯಕ್ಷರಾಗಿ ಈಗಾಗಲೇ ಹಲವಾರು ಜನ ದುಡಿದಿದ್ದರು. ಯಶೋಧರಮ್ಮನವರು ಸ್ವಾತಂತ್ರ್ಯಾ ನಂತರ ಅಧಿಕಾರಕ್ಕಾಗಿ ಯಾರಲ್ಲೂ ಕಾಡಿ ಬೇಡಿದವರಲ್ಲ. ಗಾಂಧೀಜಿಯವರ ತತ್ವಪರಿಪಾಲನೆಯನ್ನು ಅನುಷ್ಠಾನಗೊಳಿಸುವುದು ತನ್ನ ಕರ್ತವ್ಯ ಎಂದು ಭಾವಿಸಿದ್ದರು. ಕಾಂಗ್ರೆಸ್ ಪಕ್ಷದ ಕಟ್ಟಾಳಾಗಿದ್ದರು. ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದರು.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಯಶೋಧರಮ್ಮನವರು ಕಣಕ್ಕಿಳಿಯಬೇಕೆಂದು ಕಾಂಗ್ರೆಸ್ ಮುಖಂಡರು ಅವರಿಗೆ ದುಂಬಾಲು ಬಿದ್ದರು. ದೊಡ್ಡವರ ಮಾತಿಗೆ ಕಟ್ಟುಬಿದ್ದು ಕಣಕ್ಕಿಳಿದರು. ಅವರ ಎದುರು ಸ್ಪರ್ಧೆಗಿಳಿದವರು ಸಾಮಾನ್ಯ ವ್ಯಕ್ತಿಯಲ್ಲ. ಸ್ವಾತಂತ್ರ್ಯ ಚಳುವಳಿಯಲ್ಲಿ ಹಾಗೂ ನಂತರದಲ್ಲಿ ಕರ್ನಾಟಕದ ರಾಜಕೀಯ ಧ್ರುವತಾರೆ, ಕಿಂಗ್ ಮೇಕರ್ ನಸ಼ರ್‌ಬಾದ್‌ನ ನವಾಬ ಎಂದೆಲ್ಲ ಹೆಸರು ಗಳಿಸಿದ್ದ ಮಂಡ್ಯ ಮೂಲದ ಸಾಹುಕಾರ್ ಚನ್ನಯ್ಯನವರು. ಯಶೋಧರಮ್ಮನವರು ಇದನ್ನು ನಿರೀಕ್ಷಿಸಿರಲಿಲ್ಲ. ಅವರ ಸ್ಥಿತಿ ಅತ್ತ ಧರಿ ಇತ್ತ ಪುಲಿ ಎಂಬಂತಾಯಿತು. ಸ್ಪರ್ಧೆಯಿಂದ ಹೊರಬರಬೇಕೆಂದು ತೀರ್ಮಾನಿಸಿದರು. ಆದರೆ ಕಾರ್ಯಕರ್ತರು ಬಿಡಬೇಕಲ್ಲ. ಕೊನೆಗೂ ಧೈರ್ಯ ಮಾಡಿ ಸ್ಪರ್ಧೆಯನ್ನು ಎದುರಿಸಿದರು.

ಬೇಲೂರಿನಲ್ಲಿ 12.03.1950ರಲ್ಲಿ ಚುನಾವಣಾ ಫಲಿತಾಂಶ ಹೊರಬಿತ್ತು. ಯಶೋಧರಮ್ಮನವರು ಚನ್ನಯ್ಯನವರಿಗಿಂತ 16 ಮತಗಳಿಂದ ಜಯಶಾಲಿಗಳಾದರು. ರಾಜ್ಯದ ಪ್ರಪ್ರಥಮ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ

ಆಯ್ಕೆಯಾಗುವ ಮೂಲಕ ಇತಿಹಾಸ ನಿರ್ಮಿಸಿದರು. ಪ್ರತಿಷ್ಠಿತ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯನ್ನಾಗಿ ಜನ ನನ್ನನ್ನು ಆಯ್ಕೆ ಮಾಡಿದ್ದಾರೆ. ಜನರು ನನ್ನ ಮೇಲಿಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳಬೇಕು ಎಂದು ತೀರ್ಮಾನಿಸಿದರು. ಆರೋಗ್ಯ ಸರಿಯಿಲ್ಲದಿದ್ದರೂ ಕಾಂಗ್ರೆಸ್ ಪಕ್ಷವನ್ನು ಕಟ್ಟಲು ಪಣ ತೊಟ್ಟರು. ಮಂಡ್ಯ, ಮೈಸೂರು, ತುಮಕೂರು, ಬೆಂಗಳೂರು ಜಿಲ್ಲೆಗಳಿಗೆ ತೆರಳಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡಿ ಪಕ್ಷವನ್ನು ಬಲಪಡಿಸಿದರು. ಜನಗಳ ಕಷ್ಟಕಾರ್ಪಣ್ಯಗಳನ್ನು ವಿಚಾರಿಸಿ ಕಾಂಗ್ರೆಸ್ ಶಾಸಕರುಗಳನ್ನು ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಸೂಕ್ತ ಪರಿಹಾರವನ್ನು ಕೊಡಿಸುತ್ತಿದ್ದರು. ಸ್ಥಳೀಯ ಶಾಸಕರು ಜನರಿಗೆ ಸರಿಯಾಗಿ ಸ್ಪಂಧಿಸುತ್ತಿರುವರೇ ಇಲ್ಲವೇ ಎಂಬುದನ್ನು ಪಕ್ಷದ ಕಾರ್ಯಕರ್ತರಿಂದ ಮುಗ್ದ ಜನಗಳಿಂದ ತಿಳಿದುಕೊಳ್ಳುತ್ತಿದ್ದರು.

ಯಶೋಧರಮ್ಮನವರು ತಮ್ಮ ಜಿಲ್ಲೆಗೆ ಅಥವಾ ತಮ್ಮ ತಾಲ್ಲೂಕಿಗೆ ಇಲ್ಲವೆ ಊರಿಗೆ ಬಂದಿದ್ದಾರೆ ಎಂದರೆ ಒಂದು ರೀತಿಂು ವಿದ್ಯುತ್ ಸಂಚಲನವಾದಂತಾಗುತ್ತಿತ್ತು. ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಒಂದು ರೀತಿಯ ನಡುಕ ಹುಟ್ಟುತ್ತಿತ್ತು. ಕಾರಣವೇನೆಂದರೆ ಯಶೋಧರಮ್ಮನವರ ಪತಿಯು ರಾಜ್ಯದ ಮಂತ್ರಿಯಾಗಿದ್ದರು. ಇಷ್ಟೇ ಅಲ್ಲದೆ ಸ್ವತಃ ಯಶೋಧರರವರಿಗೆ ಮುಖ್ಯಮಂತ್ರಿ ಸೇರಿದಂತೆ ರಾಷ್ಟ್ರಮಟ್ಟದ ಅತಿರಥ ಮಹಾರಥರು ಚೆನ್ನಾಗಿ ಗೊತ್ತಿತ್ತು. ಶಾಸಕರ ಕೈಯಲ್ಲಿ ಆಗದ ಕೆಲಸಗಳನ್ನು ಯಶೋಧರಮ್ಮನವರು ಮಾಡಿಸುತ್ತಿದ್ದರು. ಒಮ್ಮೆ ಅರಸೀಕೆರೆಯ ಗ್ರಾಮವೊಂದು ವಿದ್ಯುತ್ ಸಂಪರ್ಕವಿಲ್ಲದೆ ತೊಂದರೆಪಡುತ್ತಿರುವ ವಿಷಯ ಕೇಳಿದ ಯಶೋಧರರವರು ಸಂಬಂಧಪಟ್ಟ ಅಧಿಕಾರಿಗಳನ್ನು, ಮಂತ್ರಿಗಳನ್ನು ಸಂಪರ್ಕಿಸಿ ವಿದ್ಯುತ್ ಸಂಪರ್ಕ ಕೊಡಿಸಿದರು. ಚಾಮರಾಜನಗರದ ಹಳ್ಳಿಯೊಂದಕ್ಕೆ ಸರಿಯಾದ ಜನ ತಮ್ಮ ಅಳಲನ್ನು ತೋಡಿಕೊಂಡರು. ತಮ್ಮ ಪ್ರಭಾವದಿಂದ ರಸ್ತೆಯ ಅನುಕೂಲ ಮಾಡಿಸಿಕೊಟ್ಟರು. ಹೀಗೆ ಪಕ್ಷದ ಅಧ್ಯಕ್ಷರಾಗಿದ್ದು ಒಬ್ಬ ಮಂತ್ರಿ ಮಾಡುವ ಕೆಲಸವನ್ನು ಮಾಡುತ್ತಿದ್ದರು. ಯಶೋಧರ ಅವರ ಬಗ್ಗೆ ಪಕ್ಷದ ಶಾಸಕರು, ಮಂತ್ರಿಗಳು ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ ನಿಮ್ಮ ಶಾಸಕರು ಏನು ಮಾಡುತ್ತಿದ್ದಾರೆ, ಅವರನ್ನೇ ಕೇಳಿ ನೀವು ಇದನ್ನೆಲ್ಲ ನನ್ನ ಗಮನಕ್ಕೆ ತರಬಾರದು, ಅನುಸರಿಸಿಕೊಂಡು ಹೋಗಿ ಸರ್ಕಾರದ ಬಳಿ ಹಣವಿಲ್ಲ, ನಮ್ಮದು ಬಡರಾಷ್ಟ್ರ, ಹೀಗೆ ಇಲ್ಲಸಲ್ಲದ ಸಬೂಬುಗಳನ್ನು ಎಂದೂ ಹೇಳುತ್ತಿರಲಿಲ್ಲ. ಯಶೋಧರಮ್ಮನವರನ್ನು ನೋಡಿದ ಕೂಡಲೇ ಒಂದು ರೀತಿಯ ಗೌರವ ಭಾವ ಹುಟ್ಟುತ್ತಿತ್ತು.

ಕಾಂಗ್ರೆಸ್ ಅಧಿವೇಶನವನ್ನು ರಾಜ್ಯದ ನಾನಾ ಭಾಗಗಳಲ್ಲಿ ನಡೆಸುತ್ತಿದ್ದರು.

ಬೆಂಗಳೂರಿನಲ್ಲಿ ಅಧಿವೇಶನ ನಡೆಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಶ್ರೀ ಪಟ್ಟಾಭಿ ಸೀತಾರಾಮಯ್ಯನವರನ್ನು ಯಶೋಧರಮ್ಮನವರು ಕೇಳಿಕೊಂಡರು. ಈಗಾಗಲೇ ಬೇರೆಕಡೆ ನಡೆಸಲು ತೀರ್ಮಾನಿಸಲಾಗಿದೆ. ಅವರು ಈಗಾಗಲೇ ಸಜ್ಜಾಗಿದ್ದಾರೆ. ಆದ ಕಾರಣ ಮುಂದಿನ ಸಲ ಬೆಂಗಳೂರಿನಲ್ಲಿ ಅಧಿವೇಶನ ನಡೆಸೋಣ ಎಂದು ಹೇಳಿದರು. ಅಧಿವೇಶನ ಎಲ್ಲೇ ನಡೆದರೂ ಅದರ ಉಸ್ತುವಾರಿಯನ್ನು ವಹಿಸಿಕೊಳ್ಳುತ್ತಿದ್ದರು. ರಾಜ್ಯದಲ್ಲಿ ಎಲ್ಲೇ ಚುನಾವಣೆ ನಡೆದರೂ ಕಾಂಗ್ರೆಸ್ ಪಕ್ಷದಿಂದ ನಿಂತಿರುವ ಅಭ್ಯರ್ಥಿಯ ಪರ ಪ್ರಚಾರ ಮಾಡುತ್ತಿದ್ದರು. ಯಶೋಧರಮ್ಮನವರು ಅಧ್ಯಕ್ಷರಾಗಿರುವ ಸಂದರ್ಭದಲ್ಲಿ ಬೆಂಗಳೂರಿನ ಬಸವನಗುಡಿ ಕ್ಷೇತ್ರದಿಂದ ಉಪಚುನಾವಣೆ ನಡೆಯಿತು. ಕಾಂಗ್ರೆಸ್ ಪಕ್ಷದಿಂದ ವಿ.ಎಸ್. ನಾರಾಯಣರಾವ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಅವರ ಪರವಾಗಿ ಪ್ರಚಾರ ಮಾಡಿ ಚುನಾವಣೆಯಲ್ಲಿ ಗೆಲುವು ಸಾಧಿಸುವಂತೆ ಮಾಡಿದ ಕೀರ್ತಿ ಯಶೋಧರಮ್ಮನವರಿಗೆ ಸಲ್ಲುತ್ತದೆ.

ಪಕ್ಷಕ್ಕೆ ಒಂದು ಪ್ರತ್ಯೇಕ ನಿವೇಶನ

ಕಾಂಗ್ರೆಸ್ ಪಕ್ಷವು ಬೇರೆ ಎಲ್ಲಾ ಪಕ್ಷಗಳಿಗಿಂತಲೂ ಪ್ರಬಲ ಪಕ್ಷವಾಗಿದ್ದರೂ ಬೆಂಗಳೂರಿನಲ್ಲಿ ತನ್ನದೇ ಆದ ಪಕ್ಷದ ಕಛೇರಿಯಿರಲಿಲ್ಲ. ಇಂದಿನಂತೆ ಅಂದಿನ ಕಾಲದಲ್ಲೂ ಬೆಂಗಳೂರು ಬೆಳೆಯುತ್ತಿದ್ದ ನಗರವಾಗಿತ್ತು. ಒಂದು ವಿಶಾಲವಾದ ನಿವೇಶನವನ್ನು ಕೊಂಡುಕೊಳ್ಳಲು ಪಕ್ಷದಲ್ಲಿ ಹಣವಿರಲಿಲ್ಲ. ಹಣವಿದ್ದರೂ ಯಾರಲ್ಲೂ ಇಚ್ಛಾಶಕ್ತಿ ಇರಲಿಲ್ಲ. ಯಶೋಧರಮ್ಮನವರು ಈ ಕೊರತೆಯನ್ನು ತುಂಬಲು ತೀರ್ಮಾನಿಸಿದರು. ತಮ್ಮ ಚಿಕ್ಕಮ್ಮನವರಿಗೆ ಈ ವಿಷಯ ತಿಳಿಸಿದರು. ನಿನ್ನ ಅಧ್ಯಕ್ಷತೆಯಲ್ಲಿ ಒಂದು ಪಕ್ಷದ ಕಛೇರಿಯನ್ನು ಸ್ಥಾಪಿಸು ಎಂದು ರೇಸ್‌ಕೋರ್ಸ್ ಬಳಿಯಿರುವ ಒಂದು ವಿಶಾಲವಾದ ನಿವೇಶನವನ್ನು ಬಳುವಳಿಯಾಗಿ ನೀಡಿದರು. (ರೇಸ್‌ಕೋರ್ಸ್ ರಸ್ತೆ ಮತ್ತು ಕ್ರೆಸೆಂಟ್ ರಸ್ತೆಯ ಮೂಲೆ ನಿವೇಶನವಾಗಿದೆ) ಇಂದು ಅದು ಹತ್ತಾರು ಕೋಟಿ ಬೆಲೆ ಬಾಳುವ ನಿವೇಶನವಾಗಿದೆ.

ಶಾಸಕಿಯಾಗಿ ಹಾಗೂ ಮಂತ್ರಿಯಾಗಿ ಹೊರ ಹೊಮ್ಮಿದ ಯಶೋಧರ

1962ರಂದು ರಾಜ್ಯದ ಮೂರನೆಯ ಸಾರ್ವತ್ರಿಕ ಚುನಾವಣೆ ಘೋಷಣೆಯಾಯಿತು. ಯಶೋಧರಮ್ಮನವರು ಮೈಸೂರು ಸುತ್ತಮುತ್ತ ಹೆಸರುವಾಸಿಯಾದ ಹಾಗೂ ಜನಪ್ರಿಯ ನಾಯಕರಾಗಿದ್ದರು. ಆದರೆ ಹಾಸನ

ಜಿಲ್ಲೆಯ ಜನ ತಮ್ಮ ಜಿಲ್ಲೆಯಲ್ಲಿ ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸಿದರು. ಈಗಾಗಲೇ ತಿಳಿಸಿರುವಂತೆ ಅರಸೀಕೆರೆ, ಹಾಸನ, ತುರುವೇಕೆರೆ ಇವೇ ಮುಂತಾದ ಸ್ಥಳಗಳ ಜನರಿಗೆ ಉಪಕಾರ ಮಾಡಿದ್ದರು. ಜನ ತಮ್ಮ ಭಾಗದಲ್ಲಿ ಚುನಾವಣೆಗೆ ನಿಲ್ಲುವಂತೆ ಒತ್ತಾಯ ಮಾಡುತ್ತಿದ್ದರು. ಕಾಂಗ್ರೆಸ್ ನಾಯಕರ ಹಾಗೂ ಜನರ ಒತ್ತಾಯದ ಮೇರೆಗೆ ಹಾಸನ ಜಿಲ್ಲೆಯ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ನಿಂತರು. ಇವರ ವಿರುದ್ಧ ಎಸ್.ಜಿ. ಜ್ವಾಲನಯ್ಯ, ಎಂ.ಆರ್. ಪುಟ್ಟಸ್ವಾಮಿ, ರಾಮಚಂದ್ರಯ್ಯ ಅಯ್ಯರ್ ಇವರೇ ಮುಂತಾದವರು ಸ್ಪರ್ಧಿಸಿದ್ದರು. ಫಲಿತಾಂಶ ಹೊರಬಿದ್ದಾಗ ಯಶೋಧರಮ್ಮನವರ ತೀವ್ರ ಪ್ರತಿಸ್ಪರ್ಧಿ ಎಸ್.ಜಿ. ಜ್ವಾಲನಯ್ಯರವರಿಗಿಂತ 11,498 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಗೆಲುವಿನ ಮೂಲಕ ರಾಜಕೀಯಕ್ಕೆ ಪ್ರವೇಶ ಮಾಡಿದರು.

ಮೂರನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಕೆಲವಾರು ಬದಲಾವಣೆಗಳಾದವು. ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪನವರು ಈ ಚುನಾವಣೆಯಲ್ಲಿ ಸೋಲನ್ನನುಭವಿಸಿದರು. ಹಿರಿಯ ರಾಜಕಾರಣಿಯಾಗಿದ್ದ ಎಸ್.ಆರ್. ಕಂಠಿಯವರು ರಾಜ್ಯ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಮಂತ್ರಿಮಂಡಲವನ್ನು ರಚನೆ ಮಾಡಿದರು. ತಮ್ಮ ಮಂತ್ರಿಮಂಡಲದಲ್ಲಿ ಶ್ರೀಮತಿ ಯಶೋಧರ ದಾಸಪ್ಪನವರಿಗೆ 'ಸಮಾಜ ಕಲ್ಯಾಣ' ಖಾತೆಯನ್ನು ನೀಡಿದರು. ಈ ಮಧ್ಯೆ ಚುನಾವಣೆಯಲ್ಲಿ ಸೋತಿದ್ದ ನಿಜಲಿಂಗಪ್ಪನವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬಾಗಲಕೋಟೆ ಕ್ಷೇತ್ರದ ಬಿ.ಟಿ. ಮುರನಾಳರವರು ತಮ್ಮ ಶಾಸನ ಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಈ ಉಪಚುನಾವಣೆಯಲ್ಲಿ ಎಸ್. ನಿಜಲಿಂಗಪ್ಪನವರು ಆಯ್ಕೆಯಾದರು. ಶ್ರೀ ಎಸ್.ಆರ್. ಕಂಠಿಯವರು ರಾಜೀನಾಮೆ ನೀಡಿ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಲು ತಮ್ಮ ಸ್ಥಾನ ತೆರವು ಮಾಡಿದರು. 1962 ಜೂನ್ 2ನೇ ತಾರೀಖು ಎಸ್. ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾದರು.

ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಣ್ಣಪುಟ್ಟ ಬದಲಾವಣೆಗಳಾಯಿತು. ಸಮಾಜ ಕಲ್ಯಾಣ ಇಲಾಖೆ ತಮಗಿಷ್ಟವಿಲ್ಲದಿದ್ದರೆ ಬೇರೆ ಯಾವ ಖಾತೆ ಬೇಕು ಹೇಳಿ ಕೊಡುತ್ತೇವೆ ಎಂದು ನಿಜಲಿಂಗಪ್ಪನವರು ಯಶೋಧರಮ್ಮನವರನ್ನು ಕೇಳಿದರು. ಅದಕ್ಕೆ ಯಶೋಧರಮ್ಮನವರು ಬೇರೆ ಎಲ್ಲಾ ಖಾತೆಗಳಿಗಿಂತಲೂ ನನಗೆ ಇಷ್ಟವಾದ ಖಾತೆ ಸಮಾಜ ಕಲ್ಯಾಣ ಇಲಾಖೆ. ಆದುದರಿಂದ ಇದೇ ಖಾತೆಯಲ್ಲಿ ಮುಂದುವರಿಯುತ್ತೇನೆ ಎಂದು ಹೇಳಿ ಇಚ್ಛೆಪಟ್ಟು ಅದೇ ಖಾತೆಯನ್ನು ಆಯ್ಕೆ ಮಾಡಿಕೊಂಡರು. ಸಮಾಜ ಕಲ್ಯಾಣ

ಇಲಾಖೆಯ ಖಾತೆಯನ್ನು ಕ್ಯಾಬಿನೇಟ್ ದರ್ಜೆಗೇರಿಸಿದರು. ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಸಂಪುಟ ದರ್ಜೆಯ ಖಾತೆಯನ್ನು ಅಲಂಕರಿಸಿದ ಪ್ರಥಮ ಮಹಿಳೆಯಾಗಿ ಹೊರಹೊಮ್ಮಿದರು ಯಶೋಧರ ದಾಸಪ್ಪನವರು. ಮಕ್ಕಳು ಮತ್ತು ಮಹಿಳೆಯರ ಬಗ್ಗೆ ತುಂಬಾ ಕಾಳಜಿ ಹೊಂದಿದ್ದರು. ಅರವತ್ತರ ದಶಕದಲ್ಲಿ ಕರ್ನಾಟಕದಲ್ಲಿ ಮಹಿಳೆಯರು ಶಿಕ್ಷಣ, ಉದ್ಯೋಗದಿಂದ ವಂಚಿತರಾಗಿದ್ದರು. ಪುರುಷ ಪ್ರಧಾನ ಸಮಾಜವಾದುದರಿಂದ ಮಹಿಳೆಯರನ್ನು ಅಬಲೆಯರು ಎಂದು ಹೀಯಾಳಿಸುತ್ತಿದ್ದ ಕಾಲವದು. ಇಂತಹ ಮಹಿಳೆಯರ ದನಿಯಾದರು ಯಶೋಧರಮ್ಮನವರು. ಮಹಿಳೆಯರಿಗೆ ಸರ್ಕಾರದ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಡಲು ತೀರ್ಮಾನಿಸಿದರು. ಅದಕ್ಕಾಗಿ ಕೆಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಹೊಲಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿದರು. ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳು, ವಸತಿ ಗೃಹಗಳು, ವಸತಿ ಶಾಲೆಗಳು, ಗ್ರಾಮಸೇವಕ ತರಬೇತಿ ಕೇಂದ್ರಗಳು, ಗೃಹ ವಿಜ್ಞಾನ, ಕಲಿಕಾ ಕೇಂದ್ರಗಳನ್ನು ಮಾಡಲು ತಾಲ್ಲೂಕು ಮಟ್ಟದಲ್ಲಿ ನಂತರ ಹೋಬಳಿ ಮಟ್ಟದಲ್ಲಿ ಸ್ಥಾಪನೆ ಮಾಡಿದರು. ರಾಜ್ಯದಾದ್ಯಂತ ನಾನೂರಕ್ಕೂ ಹೆಚ್ಚು ಮಹಿಳಾ ಸಮಿತಿಗಳು ಮತ್ತು ಮಂಡಳಿಗಳು ಸ್ಥಾಪನೆಯಾದವು. ಹತ್ತು ಸಾವಿರಕ್ಕೂ ಹೆಚ್ಚು ಸದಸ್ಯರಾದರು. ನೂರಾರು ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಯಿತು. ಅಂದಿನ ಕಾಲದಲ್ಲಿ ಹೆರಿಗೆಯ ಸಮಯದಲ್ಲಿ ಸಾವು ನೋವುಗಳು ಉಂಟಾಗುತ್ತಿದ್ದವು. ಅವುಗಳನ್ನು ನಿವಾರಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಆರೋಗ್ಯ ಖಾತೆ ಸಚಿವರಿಗೆ ಪತ್ರ ಬರೆದು ಅಂತಹ ಕೇಂದ್ರಗಳನ್ನು ಸ್ಥಾಪಿಸಿದರು. ಗ್ರಾಮಸೇವಕರನ್ನು ಆಯ್ಕೆ ಮಾಡುವಾಗ ಮಹಿಳೆಯರಿಗೆ ಆದ್ಯತೆ ನೀಡಿ ಮಹಿಳೆಯರಿಗೆ ಉದ್ಯೋಗ ನೀಡಿದುದೇ ಅಲ್ಲದೆ ಅವರನ್ನು ಸಮರ್ಥವಾಗಿ ಬಳಸಿಕೊಂಡರು. ಹೀಗೆ ಆಯ್ಕೆಯಾದ ಮಹಿಳೆಯರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಹೆಚ್ಚಿನ ಕಾಲವನ್ನು ಪ್ರವಾಸ ಮಾಡಿ ಪ್ರತಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮಗಳಿಗೆ ಭೇಟಿ ನೀಡಿ ತಮ್ಮ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೆ ಎಂಬುದನ್ನು ಇದ್ದು ಪರೀಕ್ಷಿಸುತ್ತಿದ್ದರು.

ದಲಿತರ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮ ಕೈಗೊಂಡದ್ದು

ಯಶೋಧರಮ್ಮನವರನ್ನು ಇಡೀ ರಾಜ್ಯ ಸ್ಮರಿಸಿಕೊಳ್ಳುವುದು. ದಲಿತರ ಸರ್ವಾಂಗೀಣ ಅಭಿವೃದ್ಧಿಗೆ ಪಣ ತೊಟ್ಟು ದುಡಿದದ್ದು ದಲಿತರ ವಿಷಯದಲ್ಲಿ

ಬಹಳಷ್ಟು ಕಾಳಜಿ ಹೊಂದಿದ್ದ ಯಶೋಧರಮ್ಮನವರು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ದಲಿತರ ಬಗ್ಗೆ ಅಷ್ಟೊಂದು ಕಾಳಜಿ ಹೊಂದಿರಲು ಕಾರಣವೇನೆಂದರೆ ಅವರ ತಂದೆಯುವತಾದ ಕೆ.ಹೆಚ್. ರಾಮಯ್ಯನವರು ಅಧಿಕಾರದಲ್ಲಿದ್ದಾಗ ದಲಿತರ ಅಭಿವೃದ್ಧಿಗಾಗಿ ದುಡಿದರು. ಒಂದು ಹಂತದಲ್ಲಿ ರಾಮಯ್ಯನವರನ್ನು ದಲಿತರ ಕ್ಷೇಮಾಭಿವೃದ್ಧಿ ಅಧಿಕಾರಿ ಎಂದೇ ಕರೆಯುತ್ತಿದ್ದರು. ಇಷ್ಟೇ ಅಲ್ಲದೆ ಯಶೋಧರಮ್ಮನವರು ವಾರ್ದಾದಲ್ಲಿ ಗಾಂಧೀಜಿಯವರ ಆಶ್ರಮದಲ್ಲಿ ಕೆಲವುಕಾಲ ಆಶ್ರಮ ವಾಸಿಗಳಾಗಿ ಸೇವೆ ಸಲ್ಲಿಸಿದರು. ಆಶ್ರಮದಲ್ಲಿ ದೀನದಲಿತರ ಬಗ್ಗೆ ಕಾಳಜಿಯನ್ನು ಕಣ್ಣಾರೆ ಕಂಡಿದ್ದು ಇವೇ ಮುಂತಾದವು ಯಶೋಧರಮ್ಮನವರ ಮೇಲೆ ಪ್ರಭಾವ ಬೀರಿತು.

ರಾಜ್ಯದಾದ್ಯಂತ ಮಹಿಳಾ ಸಮಾಜ ನಿರ್ಮಾಣ, ಬಾಲವಾಡಿಗಳ ನಿರ್ಮಾಣ, ಶಿಶುವಿಹಾರಗಳು ಇವೇ ಮುಂತಾದ ಮಕ್ಕಳ ಹಾಗೂ ಮಹಿಳೆಯರ ಅಭಿವೃದ್ಧಿಗೆ ಅನುಕೂಲ ಮಾಡಿಕೊಟ್ಟರು. ದಲಿತ ಮಹಿಳೆಯರಿಗೆ ಉದ್ಯೋಗ ನೀಡಿದರು. ಚಾಮರಾಜ ನಗರದ ಹಳ್ಳಿಯೊಂದಕ್ಕೆ ಭೇಟಿ ನೀಡಿದಾಗ ಅಲ್ಲಿನ ಹೊಲಗೇರಿಗೆ ಭೇಟಿ ನೀಡಿದರು. ಅಲ್ಲಿನ ಮಹಿಳೆಯರು ಹೆಂಡ ಸಾರಾಯಿ ಕುಡಿತಕ್ಕೆ ಒಳಗಾದ ತಮ್ಮ ಗಂಡಂದಿರು ತಮ್ಮನ್ನು ತಮ್ಮ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ತಾವು ಸಂಪಾದಿಸಿದ ಚಿಕ್ಕಾಸನ್ನು ಹೆಂಡದಂಗಡಿಗೆ ಹಾಕುತ್ತಿದ್ದಾರೆ ಎಂದು ತಮ್ಮ ಗೋಳನ್ನು ತೋಡಿಕೊಂಡರು. ಯಶೋಧರಮ್ಮನವರ ಮನಸ್ಸು ಕರಗಿತು. ಸಾರಾಯಿ ಅಂಗಡಿಗಳನ್ನು ಬಂದ್ ಮಾಡಲು ಸ್ಥಳದಲ್ಲೇ ಆಜ್ಞೆ ಮಾಡಿದರು. ಮುಂದೆ ಪಾನನಿರೋದಕ್ಕೆ ಇದು ಕಾರಣವಾಯಿತು. ಅಸ್ಪೃಶ್ಯತೆ ಶಾಪವಲ್ಲ ಸವರ್ಣೀಯರು ತಮ್ಮ ಅನುಕೂಲಕ್ಕಾಗಿ ಮಾಡಿಕೊಂಡಿರುವ ಒಂದು ವ್ಯವಸ್ಥೆ. ಇದರ ವಿರುದ್ಧ ಇಡೀ ಹಿಂದೂ ಜನಾಂಗ ಹೋರಾಡಬೇಕು ಎಂದು ಹೇಳುತ್ತಿದ್ದರು. 1952ರ ಸೆಪ್ಟೆಂಬರ್‌ನಲ್ಲಿ "ಹರಿಜನ ಸೇವಕ ಸಂಘ"ವೊಂದನ್ನು ಸ್ಥಾಪಿಸಿದರು. ಹರಿಜನ, ಗಿರಿಜನ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಅವರನ್ನು ಸಾಕ್ಷರರನ್ನಾಗಿ ಮಾಡಬೇಕೆಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದರು. ಇದರ ಫಲವಾಗಿ ಕೇಂದ್ರ ಸರ್ಕಾರವು 12 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತು.

ಪಾನನಿರೋದ ರಾಜಕೀಯದ ಸುಳಿಗೆ ಸಿಕ್ಕ ಯಶೋಧರಮ್ಮ

ಈಗಾಗಲೇ ತಿಳಿಸಿರುವಂತೆ ಕೆಳಮಧ್ಯಮ ಹಾಗೂ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಜನರಿಗೆ ಶಾಪವೆಂದರೆ ಕುಡಿತದ ಚಟ. ಯಶೋಧರಮ್ಮನವರು

ಬಡಜನರನ್ನು ಶಾಪದಿಂದ ಹೊರತರಲು ಯತ್ನಿಸಿದರು. ಅಪ್ಪಟ ಗಾಂಧಿವಾದಿಯಾದ ಯಶೋಧರಮ್ಮನವರು ಕುಡಿತವನ್ನು ಬಿಡಲು ಅಲ್ಲಲ್ಲಿ ಭಾಷಣ ಮಾಡುವುದರ ಮೂಲಕ ಸುಧಾರಣೆ ಮಾಡುತ್ತಿದ್ದರು. ಅದಕ್ಕೊಂದು ತಾಜಾ ಉದಾಹರಣೆ ಎಂದರೆ ಅಂದು ಬಳ್ಳಾರಿ ರಸ್ತೆ ಎಂದು ಕರೆಯುತ್ತಿದ್ದ ಇಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ಮಾರ್ಗವಾಗಿರುವ ಕೃಷಿ ವಿಶ್ವವಿದ್ಯಾಲಯದಿಂದ ಸ್ವಲ್ಪ ಮುಂದೆ ಜಕ್ಕೂರು ಏರೋಡ್ರಂ ಎದುರು ಹಿಂದೆ ಒಂದು ಸಣ್ಣ ಹಳ್ಳಿಯಿತ್ತು. ಒಮ್ಮೆ ಬಳ್ಳಾರಿಗೆ ಹೋಗುವಾಗ ಆ ಹಳ್ಳಿಗೆ ಭೇಟಿ ನೀಡಿ ಕುಡಿತದ ಚಟ ಬಿಡುವಂತೆ ಜನಗಳಿಗೆ ತಿಳಿ ಹೇಳಿದರು. ಆ ಹಳ್ಳಿಯ ಜನ ಅವರ ಮಾತಿನಂತೆ ಕುಡಿತದ ಚಟ ಬಿಟ್ಟರು. ಆ ಮಹಾಮಾತೆಯ ನೆನಪಿಗಾಗಿ ಆ ಹಳ್ಳಿಗೆ 'ಯಶೋಧರ ನಗರ'ವೆಂದು ನಾಮಕರಣ ಮಾಡಿದರು. ಈಗಲೂ ಆ ಪ್ರದೇಶಕ್ಕೆ 'ಯಶೋಧರ ನಗರ'ವೆಂದು ಕರೆಯುತ್ತಾರೆ. ಈ ನಾಡಿನ ದೊಡ್ಡ ದುರಂತವೆಂದರೆ ನಗರ ಬೃಹದಾಕಾರವಾಗಿ ಬೆಳೆದು ಯಶೋಧರ ನಗರದಲ್ಲಿ ಇಂದು ಸಾಕಷ್ಟು ಡಾಬಾಗಳಾಗಿವೆ.

ಸರ್ಕಾರಕ್ಕೆ ಪಾನನಿರೋದದಿಂದ ಲಾಭವಿರಲಿಲ್ಲ. ಪಾನನಿರೋದವನ್ನು ರದ್ದು ಮಾಡಿದರೆ ಸಾಕಷ್ಟು ವರಮಾನ ಬರುತ್ತದೆ ಎಂದು ಅದು ತಪ್ಪಿ ಹೋಯಿತಲ್ಲ ಎಂದು ಕೈ ಕೈ ಹಿಸುಕುತ್ತಿದ್ದರು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ 1965ರಲ್ಲಿ ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಬಾಗೇಪಲ್ಲಿ ಎಂಬ ಗ್ರಾಮದಲ್ಲಿ ಕಳ್ಳಭಟ್ಟಿ ಸಾರಾಯಿ ಕುಡಿದು 88 ಜನ ಅಸುನೀಗಿದರು. ಇದು ರಾಷ್ಟ್ರೀಯ ಸುದ್ದಿಯಾಯಿತು. ಪಾನನಿರೋಧದಲ್ಲಿ ಬೇರೆ ಬೇರೆ ರಾಜ್ಯಗಳು ಕೆಲವು ಮಾರ್ಪಾಡು ಮಾಡಿಕೊಂಡವು.

ಮೈಸೂರು ರಾಜ್ಯದಲ್ಲಿ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರೆ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಅಬಕಾರಿ ಸಚಿವರಾಗಿದ್ದರು. ಇವರಿಬ್ಬರೂ ಸಮಾಜದ ದೃಷ್ಟಿಯಲ್ಲಿ ಪ್ರಾಮಾಣಿಕರಂತೆ ಕಂಡರೂ ಅಂತರಾತ್ಮದಲ್ಲಿ ಬೇರೆಯೇ ಆಗಿದ್ದರು. ಪಾನನಿರೋಧವನ್ನು ರದ್ದು ಮಾಡಲು ಕ್ಯಾಬಿನೆಟ್‌ನಲ್ಲಿ ವಿಷಯ ಮಂಡಿಸಿದರು. ಯಶೋಧರ ಒಬ್ಬರೇ ರದ್ದು ಮಾಡಬಾರದೆಂದು ಪರಿಪರಿಯಾಗಿ ವಿವರಿಸಿದರೂ ಪ್ರಯೋಜನವಾಗಲಿಲ್ಲ. 1966 ಜೂನ್‌ನಲ್ಲಿ ಪಾನನಿರೋಧವನ್ನು ರದ್ದು ಮಾಡಿಯೇ ಬಿಟ್ಟರು.

ರಾಜೀನಾಮೆ ನೀಡಿದ ಯಶೋಧರಮ್ಮನವರು

ಬ್ರಿಟಿಷರ ವಿರುದ್ಧ ಮೈಸೂರಿನ ನಾಯಕರು 'ಅರಣ್ಯ ಚಳುವಳಿ'ಯನ್ನು ಮಾಡುವ ಮೂಲಕ ಈಚಲು ಮರವನ್ನು ಕಡಿದು ಪಾನನಿರೋಧವನ್ನು ಜಾರಿಗೆ

ತರಬೇಕೆಂದು ಒತ್ತಾಯಿಸಿದರು. ಸ್ವಾತಂತ್ರ್ಯಾನಂತರ ತಾವೇ ಪಾನನಿರೋಧವನ್ನು ರದ್ದು ಮಾಡುತ್ತಿರುವುದು ವಿಷಾದನೀಯ ಎಂದು ಸರ್ಕಾರಕ್ಕೆ ಚುರುಕು ಮುಟ್ಟಿಸಿದರು. ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅಂದು ಭಾರತದ ಪ್ರಧಾನ ಮಂತ್ರಿಯಾಗಿದ್ದರು. ಕಾಮರಾಜ್‌ರವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಈ ರಾಷ್ಟ್ರ ನಾಯಕರಿಗೆ ಯಶೋಧರಮ್ಮನವರು ಪತ್ರ ಬರೆದು ಈ ಕೂಡಲೇ ಇದನ್ನು ತಡೆಯಬೇಕೆಂದು ಕೇಳಿಕೊಂಡರು. ವಿನೋಭ ಬಾವೆಯವರು ಮೈಸೂರು ಸರ್ಕಾರದ ಇಬ್ಬಗೆಯ ನೀತಿಯನ್ನು ಖಂಡಿಸಿದರು. ಇದು ರಾಷ್ಟ್ರೀಯ ಸುದ್ದಿಯಾಯಿತು. ಗಾಂಧಿ ತತ್ವಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಸರ್ಕಾರದಲ್ಲಿ ನಾನು ಇರಲಾರೆ ನನ್ನ ರಾಜೀನಾಮೆಯನ್ನು ಅಂಗೀಕರಿಸಿ ಇಲ್ಲವಾದರೆ ಕ್ಯಾಬಿನೆಟ್ ನಿರ್ಣಯವನ್ನು ಹಿಂತೆಗೆದುಕೊಳ್ಳಿ ಎಂದು ಸರ್ಕಾರಕ್ಕೆ ಗಡುವು ನೀಡಿದರು. ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಮನ ಒಲಿಸುವಂತೆ ಮೈಸೂರು ಸರ್ಕಾರಕ್ಕೆ ಪತ್ರ ಬರೆದರು. ಯಶೋಧರಮ್ಮನವರು ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ. ರಾಜೀನಾಮೆ ನೀಡಿ ಹೊರಬಂದರು. ಅಲ್ಲಿಗೆ ನಾಲ್ಕು ವರ್ಷಗಳ ಕಾಲ ಮಂತ್ರಿಯಾಗಿ ಇಡೀ ರಾಜ್ಯದಾದ್ಯಂತ ಹೊಸ ಸಂಚಲನ ಮೂಡಿಸಿ ಮಂತ್ರಿ ಎಂದರೆ ಹೀಗಿರಬೇಕೆಂದು ತೋರಿಸಿಕೊಟ್ಟರು.

ಮಾಸ್ತಿ ವೆಂಕಟೇಶ ಅಯ್ಯಂಗಾರರು ತಮ್ಮ 'ಜೀವನ' ಎಂಬ ಪತ್ರಿಕೆಯಲ್ಲಿ ಪಾನನಿರೋಧ ರದ್ದತಿಯ ಬಗ್ಗೆ ಅಗ್ರ ಲೇಖನ ಬರೆದು ಏಕಾಂಗಿಯಾಗಿ ಹೋರಾಡಿದ ಕನ್ನಡಾಂಬೆಯ ಪುತ್ರಿ ಎಂದು ಬಣ್ಣಿಸಿದರು. 'ಸಂಯುಕ್ತ ಕರ್ನಾಟಕ' ಪತ್ರಿಕೆಯು ನಿಷೆ ಅಂಟಿಸಿಕೊಂಡ ನಿಜಲಿಂಗಪ್ಪ ಸರ್ಕಾರಕ್ಕೆ ನಿಷೆ ಇಳಿಸಿದ 'ಯಶೋಧರ ದಾಸಪ್ಪ' ಎಂದು ಚಾಟಿ ಏಟು ಬೀಸಿತು. ಯಶೋಧರಮ್ಮನವರ ಹೆಸರು ರಾಷ್ಟ್ರದಾದ್ಯಂತ ಸುದ್ದಿಯಾಯಿತು. ರಾಜೀನಾಮೆ ನೀಡಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ಗಾಂಧಿ ಸ್ಮಾರಕ ಧರ್ಮದರ್ಶಿಗಳ ಸಭೆಯಲ್ಲಿ ಭಾಗವಹಿಸಿದ್ದಾಗ ಅಲ್ಲಿದ್ದ ಆಚಾರ್ಯ ಕೃಪಲಾನಿಯವರು "ಯಶೋಧರಾ ತುಂ ಗಂಗಾ ಬನ್‌ಗಯೀ ಬೇಟಿ" (ನೀನು ಗಂಗೆ ಆಗಿ ಬಿಟ್ಟೆ ಮಗಳೆ) ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಕಸ್ತೂರಬಾ ಗಾಂಧಿ ಟ್ರಸ್ಟ್ ಸ್ಥಾಪನೆ

ಸ್ವಾತಂತ್ರ್ಯ ಬಂದ ಕೆಲವೇ ದಿನಗಳಲ್ಲಿ ಕಸ್ತೂರ ಬಾ ಗಾಂಧಿ ಟ್ರಸ್ಟ್ ಸ್ಥಾಪಿಸಲು ನೀಲಿ ನಕಾಶೆಯನ್ನು ತಯಾರಿಸಿದರು. ಗಾಂಧೀಜಿಯವರ ಆಶೀರ್ವಾದ ಪಡೆಯಲು ವಾರ್ದಾಕ್ಕೆ ಹೋಗಿ ಗಾಂಧೀಜಿಯವರ ಸಲಹೆ ಸೂಚನೆ ಕೇಳಿದರು.

ಗಾಂಧೀಜಿಗೆ ಸಂತೋಷವಾಯಿತು. ಯಶೋಧರಮ್ಮನವರಿಗೆ ನೀವು ಅಲ್ಲೇ ಇದ್ದು ಸೇವೆ ಮಾಡುವುದಾದರೆ ಸರಿ, ಬೇರೆಯವರನ್ನು ನಂಬಿ ಟ್ರಸ್ಟ್ ಸ್ಥಾಪಿಸಿದರೆ ಪ್ರಯೋಜನವಿಲ್ಲ ಎಂದು ಕಿವಿಮಾತು ಹೇಳಿದರು. ಯಶೋಧರಮ್ಮನವರು ಖಂಡಿತ ಅಲ್ಲೇ ಇದ್ದು ದೀನದಲಿತರಿಗೆ ಗ್ರಾಮೀಣ ಭಾಗದ ಜನಗಳಿಗೆ ಪ್ರಯೋಜನವಾಗುವಂತೆ ನೋಡಿಕೊಳ್ಳುತ್ತೇನೆ ಎಂದು ಭರವಸೆ ನೀಡಿದರು. ಗಾಂಧೀಜಿಯವರ ಆಶೀರ್ವಾದ ಪಡೆದು ಮೈಸೂರಿಗೆ ಬಂದು ಕಾರ್ಯ ಪ್ರವೃತ್ತರಾದರು.

ಯಶೋಧರಮ್ಮನವರ ಚಟುವಟಿಕೆ ಗ್ರಾಮೀಣ ಜನರ ಬಗ್ಗೆ ಇದ್ದ ಕಾಳಜಿಯನ್ನು ನೋಡಿದ ಅಂದಿನ ಸರ್ಕಾರ ಸಹಾಯ ಮಾಡಲು ಮುಂದೆ ಬಂದಿತು. 1949ರಲ್ಲಿ ಅಂದಿನ ಕಂದಾಯ ಸಚಿವರಾಗಿದ್ದ ಶ್ರೀ ಹೆಚ್. ಸಿದ್ದಯ್ಯನವರು ಎಂಬತ್ತು ಎಕರೆಗೂ ಹೆಚ್ಚು ಸರ್ಕಾರಿ ಭೂಮಿಯನ್ನು ಟ್ರಸ್ಟ್‌ಗೆ ಮಂಜೂರು ಮಾಡಿದರು. ಮತ್ತೊಬ್ಬ ಸಚಿವರಾಗಿದ್ದ ಶ್ರೀ ಕೆ.ಟಿ. ಭಾಷ್ಯಂರವರು ಗ್ರಾಮಕ್ಕೆ ವಿದ್ಯುಚ್ಛಕ್ತಿ ಒದಗಿಸಿದರು. ಗ್ರಾಮೀಣ ಜನರನ್ನು ತೊಡಗಿಸಿಕೊಂಡು ನೂರಾರು ತೆಂಗಿನ ಮರಗಳನ್ನು ನೆಡಿಸಿದರು. ತೋಟವನ್ನು ಅಭಿವೃದ್ಧಿಪಡಿಸಿ ಅದರಿಂದ ಬರುವ ಲಾಭದಿಂದ ಬಡಜನರ ಉದ್ಧಾರಕ್ಕೆ ಬಳಸಿಕೊಳ್ಳಲು ಯೋಜನೆಯನ್ನು ರೂಪಿಸಿದರು.

ಯಶೋಧರಮ್ಮನವರು ಮಂತ್ರಿ ಪದವಿಯಿಂದ ಹೊರಬಂದ ಮೇಲೆ ಸಮಾಜ ಸೇವೆ ಮಾಡಲು ನಿರ್ಧರಿಸಿದರು. ರಾಜ್ಯದ ಹಲವಾರು ಪ್ರದೇಶಗಳಲ್ಲಿ ಕಸ್ತೂರಬಾ ಗಾಂಧಿ ಸ್ಮಾರಕ ಟ್ರಸ್ಟ್‌ನ ಶಾಖೆಗಳನ್ನು ಸ್ಥಾಪಿಸಿದರು. ದಾನಿಗಳಿಂದ ಉದಾರವಾಗಿ ದೇಣಿಗೆಯನ್ನು ಪಡೆದು ಆ ಹಣದಿಂದ ಅಲ್ಲಲ್ಲಿ ಶಾಖೆಗಳನ್ನು ತೆರೆಯುತ್ತಿದ್ದರು. ಈಗಾಗಲೇ ಸಮಾಜ ಕಲ್ಯಾಣ ಇಲಾಖಾ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರಿಂದ ಆ ಇಲಾಖೆಯಿಂದ ಗ್ರಾಮೀಣ ಜನರಿಗೆ ತಲುಪಬೇಕಾದ ಸಾಲ, ಸೌಲಭ್ಯ, ಅನುಕೂಲಗಳು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು.

ಅರಸೀಕೆರೆ ಸುತ್ತಮುತ್ತ ಹತ್ತಾರು ಹಳ್ಳಿಗಳಲ್ಲಿ ಸಾಹಿತ್ಯ ಸಂಬಂಧಿ ಕಾರ್ಯಕ್ರಮವನ್ನು ಹಮ್ಮಿಕೊಂಡರು. ವಯಸ್ಕರ ಶಿಕ್ಷಣಕ್ಕೆ ಒತ್ತುಕೊಟ್ಟರು. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಬೇಕು. ಹೆಣ್ಣುಮಕ್ಕಳನ್ನು ತಪ್ಪದೇ ಶಾಲೆಗೆ ಕಳುಹಿಸಬೇಕೆಂದು ಮಹಿಳಾ ಶಿಕ್ಷಣಕ್ಕೆ ಒತ್ತುಕೊಡುತ್ತಿದ್ದರು. ಗ್ರಾಮಗಳಿಗೆ ಅಗತ್ಯವೆಂದು ಕಂಡುಬಂದರೆ ಪ್ರತ್ಯೇಕ ಬಾಲಕಿಯರ ಶಾಲೆಗಳನ್ನು ತೆರೆಯಲು ಸರ್ಕಾರವನ್ನು ಕೋರಿಕೊಳ್ಳುತ್ತಿದ್ದರು. ದೀನದಲಿತರ ಹಾಗೂ ಬಡ ಹೆಣ್ಣುಮಕ್ಕಳನ್ನು ಟ್ರಸ್ಟ್‌ಗೆ ಕರೆತಂದು ಅಲ್ಲಿ ಆಶ್ರಯ ನೀಡಿ ಶಾಲೆಗೆ ಕಳುಹಿಸುತ್ತಿದ್ದರು. ಟ್ರಸ್ಟ್‌ಗಾಗಿ ಹಗಲಿರುಳು ದುಡಿಯುತ್ತಿದ್ದರು.

ನುಡಿದಂತೆ ನಡೆದ ಮಾತೆ ಯಶೋಧರ

ಯಶೋಧರಮ್ಮನವರ ಕುಟುಂಬವು ಎಂದಿಗೂ ಜಾತಿ ಮತವೆಂಬ ಭೇದ ಭಾವ ತೋರುತ್ತಿರಲಿಲ್ಲ. ಟ್ರಸ್ಟ್‌ನಲ್ಲಿ ದಲಿತ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿತ್ತು. ಕಾರಣ ಆ ಕಾಲದಲ್ಲಿದ್ದ ಬಡತನ. ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಯಶೋಧರಮ್ಮ ಆದರ್ಶಕ್ಕೆ ಉತ್ತಮ ಉದಾಹರಣೆ ಎಂದರೆ ಟ್ರಸ್ಟ್‌ನಲ್ಲಿ ವಾಸವಾಗಿದ್ದ ಅನಾಥ ಸರೋಜ ಎಂಬ ಹೆಣ್ಣುಮಗಳನ್ನು ತಮ್ಮ ಎರಡನೇ ಮಗ ತುಳಸಿದಾಸಪ್ಪನವರಿಗೆ ತಂದುಕೊಂಡು ತಮ್ಮ ಸೊಸೆಯನ್ನಾಗಿ ಮಾಡಿಕೊಂಡರು. ಒಂದು ದಲಿತ ಹೆಣ್ಣುಮಗುವನ್ನು ದತ್ತು ಪಡೆದು ಸಾಕಿ ಸಲುಹಿ ಡಾ. ಮೋಹನ್ ಚಂಪಾ ಎಂಬುವವರಿಗೆ ಕೊಟ್ಟು ವಿವಾಹ ಮಾಡಿ ಆ ಮಗಳು ಚೆನ್ನಾಗಿರಲೆಂದು ತಮ್ಮ ಆಸ್ತಿಯಲ್ಲಿ ಸಮಪಾಲು ನೀಡಿ ಔದಾರ್ಯ ಮೆರೆದರು.

ಅಮ್ಮನಿಗೆ ಸಂದ ಪದ್ಮ ಪ್ರಶಸ್ತಿ

ಯಶೋಧರಮ್ಮನವರು ಬದುಕಿರುವ ವೇಳೆ ದಂತಕಥೆಯಾಗಿದ್ದರು. ರಾಜ್ಯ ಹೊರ ರಾಜ್ಯಗಳಲ್ಲಿ ಸುದ್ದಿ ಮಾಧ್ಯಮಗಳಲ್ಲಿ ಅವರ ಬಗ್ಗೆ ಲೇಖನವನ್ನು ಬರೆಯುತ್ತಿದ್ದರು. ಭಾರತ ಸರ್ಕಾರವು 1973ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಕೇಂದ್ರ ಸರ್ಕಾರವು ಪ್ರಶಸ್ತಿಯೊಂದಿಗೆ ನೀಡಿದ ಗೌರವ ಧನವನ್ನು ಟ್ರಸ್ಟ್‌ನ ಅಭಿವೃದ್ಧಿಗೆ ಬಳಸಿದರು. ಮೈಸೂರಿನ ಯಾದವಗಿರಿಯಲ್ಲಿದ್ದ ಒಂದು ಮನೆಯನ್ನು ತೆಗೆದುಕೊಂಡು ಅಲ್ಲಿ ಅಂಧ ಹಾಗೂ ಅನಾಥ ಹೆಣ್ಣುಮಕ್ಕಳಿಗೆ ಸಂಗೀತ, ನೃತ್ಯ ಇವೇ ಮುಂತಾದ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅವರಿಗೆ ಉದ್ಯೋಗದ ತರಬೇತಿ ನೀಡಿ ಸರ್ಕಾರಿ, ಖಾಸಗಿ ಸಂಘ ಸಂಸ್ಥೆಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಇಲ್ಲವೆ ಸ್ವಯಂ ಉದ್ಯೋಗ ಮಾಡಲು ಇದು ನೆರವಾಯಿತು. ದೊಡ್ಡಬಳ್ಳಾಪುರದ ಕನ್ನಮಂಗಲದಲ್ಲಿ ಟ್ರಸ್ಟ್‌ನ ಶಾಖೆಯನ್ನು ತೆರೆದು ಅಭಿವೃದ್ಧಿಪಡಿಸಿದರು. ಅನಾಥ ಮಕ್ಕಳಿಗೆ ತಾಯಿಯಾಗಿ ಮಕ್ಕಳನ್ನು ಜೋಪಾನಪಡಿಸಿದರು. ಅಲ್ಲದೆ ಪ್ರೀತಿಯ ಆರೈಕೆಯಲ್ಲಿ ಅವರನ್ನು ಬೆಳೆಸಿದರು.

ಒಳ್ಳೆಯವರಿಗೆ ಕಾಲವಿಲ್ಲ ಎನ್ನುವ ಗಾದೆಯ ಮಾತಿನಂತೆ ಅಂಧರು, ಅನಾಥ ಮಕ್ಕಳ ತಾಯಿಯಾಗಿ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಸಮಾಜ ಸುಧಾರಕಿಯಾಗಿ ಸೇವೆ ಮಾಡಿದ ಯಶೋಧರಮ್ಮನವರಿಗೆ 1978ರಲ್ಲಿ ಕ್ಯಾನ್ಸರ್ ರೋಗ ಕಾಣಿಸಿಕೊಂಡಿತು. ಆ ನೋವಿನಲ್ಲೂ ಸಮಾಜದ ಸೇವೆ ನಿಲ್ಲಿಸಲಿಲ್ಲ. ಸಮಾಜ ಮುಖಿಯಾಗಿದ್ದರು. ಒಮ್ಮೆ ಶಿವಪುರ ಸತ್ಯಾಗ್ರಹ ಸೌಧದಲ್ಲಿ ಯಶೋಧರಮ್ಮನವರಿಗೆ 'ಸನ್ಮಾನ'ವನ್ನು ಏರ್ಪಡಿಸಿದ್ದರು. ಜನರನ್ನು ಉದ್ದೇಶಿಸಿ

ಭಾಷಣ ಮಾಡುತ್ತಾ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರೂ ಶಿವಪುರದ ಸ್ಫೂರ್ತಿ ನನ್ನಲ್ಲಿ ತುಂಬಿದೆ. ಏನೋ ಒಂದು ವಿಧವಾದ ವಿದ್ಯುತ್ ಸಂಚಲನ ಉಂಟಾದಂತೆ ಭಾಸವಾಗುತ್ತಿದೆ. ಉತ್ಸಾಹದ ಚಿಲುಮೆ ಉಕ್ಕಿ ಹರಿಯುತ್ತಿದೆ ಎಂದು ಹೇಳಿದರು.

ಕ್ಯಾನ್ಸರ್ ರೋಗ ಉಲ್ಬಣಿಸಿ 1980 ಜೂನ್ 30ರಂದು ಶಿವೈಕ್ಯರಾದರು. ತಾವು ದುಡಿದು ಕಟ್ಟಿದ ಕಸ್ತೂರಬಾ ಗ್ರಾಮದಲ್ಲಿ ಅವರ ಅಂತ್ಯ ಸಂಸ್ಕಾರ ಮಾಡಲಾಯಿತು. ಇದು ಅವರ ಬಯಕೆಯಾಗಿತ್ತು.

ಇಂದಿಗೆ ಎಪ್ಪತ್ತರಿಂದ ಎಂಬತ್ತು ವರ್ಷಗಳ ಹಿಂದೆ ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಬಾರದ ಸ್ಥಿತಿ ಇದ್ದಿತು. ಅದರಲ್ಲೂ ಪುರುಷ ಪ್ರಧಾನ ಸಮಾಜ. ಅಂತಹ ಕಾಲದಲ್ಲಿ ಮದ್ರಾಸ್ ನಗರದಲ್ಲಿ ಉನ್ನತ ಶಿಕ್ಷಣ ಪಡೆದು ಮರಳಿ ಬಂದು ವಿವಾಹದ ನಂತರ ಸುಖದ ಸುಪ್ಪತ್ತಿಗೆಯಲ್ಲಿರಬೇಕಾದ ಸಮಾಜದ ಪ್ರತಿಷ್ಠಿತ ಮನೆತನದ ಹೆಣ್ಣುಮಗಳು ಯಶೋಧರ ದಾಸಪ್ಪನವರು ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುವಾಗ ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಕಾಂಗ್ರೆಸ್‌ನ ವಿರುದ್ಧ ಸೆಡ್ಡು ಹೊಡೆದಿದ್ದ ತಮ್ಮ ಪತಿ ಹೆಚ್.ಸಿ. ದಾಸಪ್ಪನವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರುವಂತೆ ಪ್ರಭಾವ ಬೀರಿದುದೇ ಅಲ್ಲದೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವಂತೆ ಮಾಡಿದರು. 1938ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಜನರಿಗೆ ಝಾನ್ಸಿರಾಣಿ ಲಕ್ಷ್ಮೀಬಾಯಿಯಂತೆ ಕಂಡರು (ತಮ್ಮ ಇಬ್ಬರು ಮಕ್ಕಳನ್ನು ಅಲ್ಲಿಗೆ ಕರೆತಂದಿದ್ದರು) ಅಷ್ಟೇ ಉತ್ಸಾಹದಿಂದ ಜನರನ್ನು ಹುರಿದುಂಬಿಸಿದ್ದು ಅವಿಸ್ಮರಣೀಯವಾದರು.

ಶಾಸಕಿಯಾಗಿ, ಮಂತ್ರಿಯಾಗಿ ಸೇವೆ ಸಲ್ಲಿಸಿದರು. ಪಾನನಿರೋಧ ರದ್ದಿನಂತಹ ವಿಷಯ ಬಂದಾಗ ಒಂದು ಕ್ಷಣವೂ ಅಧಿಕಾರದಲ್ಲಿರದೆ ಹೊರ ನಡೆದರು. ಜನಸೇವೆ ಮಾಡಲು ಅಧಿಕಾರದ ಅಗತ್ಯವಿಲ್ಲವೆಂದು ತೋರಿಸಿ ಕೊಟ್ಟಿದ್ದಾರೆ. (ಇಂದು ರಾಜಕಾರಣಕ್ಕೆ ಬರುವವರು ಅಧಿಕಾರ ಕೊಡಿ ಸಮಾಜಸೇವೆ ಮಾಡುತ್ತೇನೆ ಎನ್ನುತ್ತಾರೆ) ಕನ್ನಡದ ಹಿರಿಯ ಸಾಹಿತಿಗಳಾದ ಗೊ.ರು. ರಾಮಸ್ವಾಮಿ ಅಯ್ಯಂಗಾರರು ಯಶೋಧರಮ್ಮನವರನ್ನು "ಕರ್ನಾಟಕದ ಕಸ್ತೂರಬಾ ಗಾಂಧಿ" ಎಂದು ಕರೆದಿರುವುದು ಔಚಿತ್ಯಪೂರ್ಣವಾದುದು.

ಬಳ್ಳಾರಿ ಸಿದ್ದಮ್ಮ

ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಅದಕ್ಕೂ ಪೂರ್ವದಲ್ಲಿ ಮಹಿಳೆಯರು ಹೋರಾಟದ ಮುಂಚೂಣಿಯಲ್ಲಿದ್ದರು. ಭಾರತವು ಸಂಪ್ರದಾಯಸ್ಥ ಸಮಾಜದ ಬುನಾದಿಯ ಮೇಲೆ ನಿಂತಿದೆ. ಪುರುಷ ಪ್ರಧಾನ ಸಮಾಜವಾದುದರಿಂದ ಮಹಿಳೆಯನ್ನು ಅಬಲೆ, ಅಶಕ್ತಳು, ಬುದ್ಧಿಗೇಡಿ ಎಂದೆಲ್ಲ ಹೀಗಳೆಯುವುದನ್ನು ನೋಡಿದ್ದೇವೆ. ಆದರೆ ಉಲ್ಲಾಳದ ರಾಣಿ ಅಬ್ಬಕ್ಕದೇವಿ, ಕಿತ್ತೂರುರಾಣಿ ಚನ್ನಮ್ಮ, ಒನಕೆ ಓಬವ್ವ, ಬೆಳವಾಡಿ ಮಲ್ಲಮ್ಮ, ಕೆಳದಿ ಮತ್ತು ಇಕ್ಕೇರಿ ಸಂಸ್ಥಾನದ ರಾಣಿ ಚೆನ್ನಮ್ಮಾಜಿ ಹೀಗೆ ಹಲವಾರು ವೀರ ವನಿತೆಯರು ಹೆಸರುವಾಸಿಯಾಗಿದ್ದಾರೆ. ಇದರ ಹತ್ತರಷ್ಟು ಮಹಿಳೆಯರು ಪರೋಕ್ಷವಾಗಿ ಹೋರಾಟ ಮಾಡಿದ್ದಾರೆ. ಆದರೆ ಅವರು ಬೆಳಕಿಗೆ ಬಾರದಿರಬಹುದು. ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಾರು ಮಂದಿ ಹೋರಾಡಿದ್ದಾರೆ. ಕೆಲವರು ಬೆಳಕಿಗೆ ಬಂದರೆ ಮತ್ತೆ ಕೆಲವರು ಬೆಳಕಿಗೆ ಬರಲಿಲ್ಲ. ಕೆಲವರು ಕರ್ನಾಟಕ ಏಕೀಕರಣದಲ್ಲಿ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ಸ್ವಾತಂತ್ರ್ಯಾನಂತರ ಫಲಾಪೇಕ್ಷೆಯಿಲ್ಲದೆ ತೆರೆಯ ಮರೆಗೆ ಸರಿದದ್ದೂ ಉಂಟು. ಅಂತಹವರಲ್ಲಿ ಪ್ರಮುಖ ಮಹಿಳೆ ಎಂದರೆ 'ಬಳ್ಳಾರಿ ಸಿದ್ಧಮ್ಮ'ನವರು.

ಬಳ್ಳಾರಿ ಸಿದ್ದಮ್ಮನವರು ಬಳ್ಳಾರಿ ಜಿಲ್ಲೆ ಹಾವೇರಿ ತಾಲ್ಲೂಕಿನ ದುಂಡಸಿ ಗ್ರಾಮದ ಸಂಪ್ರದಾಯಸ್ಥ ಲಿಂಗಾಯತ ಸಮುದಾಯದ ಕುಟುಂಬದಲ್ಲಿ 1900ರಲ್ಲಿ ಜನಿಸಿದರು. ಇವರ ತಂದೆ ತಾಯಂದಿರು ಬಸೆಟಪ್ಪ ಮತ್ತು ಶಿವಮ್ಮ. ಬಸೆಟಪ್ಪ (ಬಸಪ್ಪ)ನವರು ಮಧ್ಯಮ ಪ್ರಮಾಣದ ವ್ಯಾಪಾರಸ್ಥರು. ಈಗಾಗಲೇ ತಿಳಿಸಿರುವಂತೆ ಸಂಪ್ರದಾಯಸ್ಥ ಸಮಾಜ ಇಂತಹ ಸಮಾಜದಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವ ಪದ್ಧತಿ ಇರಲಿಲ್ಲ. ಅವರ ಕಲಿಕೆ ಏನಿದ್ದರೂ ಮನೆಯ ನಾಲ್ಕು ಗೋಡೆಗಳ ಮಧ್ಯೆ. ಸಿದ್ದಮ್ಮಳಿಗೆ ಕಲಿಯುಬೇಕೆಂಬ ಇಚ್ಛೆಯಿದ್ದರೂ ತಂದೆತಾಯಂದಿರು ಅದಕ್ಕೆ ವಿರೋಧ ಮಾಡಿದರು. ಕದ್ದುಮುಚ್ಚಿ ನಾಲ್ಕನೆಯ

ಇಯತ್ತಿನ ತನಕ ವ್ಯಾಸಂಗ ಮಾಡಿದ್ದಾಯ್ತು. ಪ್ರಾಪ್ತ ವಯಸ್ಸಿಗೆ ಬರುತ್ತಲೇ ಬಳ್ಳಾರಿಯ ಮುರುಗಪ್ಪನವರೊಂದಿಗೆ ವಿವಾಹವಾಯ್ತು. ಸುಖ ದಾಂಪತ್ಯ ಮನೆಯಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ.

ರಾಷ್ಟ್ರೀಯ ಆಂದೋಲನವು ಇಡೀ ದೇಶವನ್ನು ವ್ಯಾಪಿಸಿತು. ಅದರಲ್ಲೂ ಮಹಾತ್ಮ ಗಾಂಧಿಯವರ ಪ್ರಭಾವದಿಂದಾಗಿ 1920ರಲ್ಲಿ ಅಸಹಕಾರ ಚಳುವಳಿ, 1930ರಲ್ಲಿ ಉಪ್ಪಿನ ಸತ್ಯಾಗ್ರಹಗಳು ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿತು. ಸಿದ್ದಮ್ಮನವರು ಹಾಗೂ ಅವರ ಪತಿ ಮುರುಗಪ್ಪನವರು ಅಷ್ಟೇನು ವಿದ್ಯಾವಂತರಲ್ಲದಿದ್ದರೂ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಅವರ ಮನಸ್ಸು ತುಡಿಯುತ್ತಿತ್ತು. ತಿಲಕರ ಕೇಸರಿ, ಮರಾಠಿ ಪತ್ರಿಕೆಗಳು ಹಾಗೂ ನೌಕಳು ಪತ್ರಿಕೆಯು ಅವರ ಮೇಲೆ ಪ್ರಭಾವ ಬೀರಿತು. ಮಹಾತ್ಮ ಗಾಂಧೀಜಿಯವರನ್ನು ನೋಡಿರದಿದ್ದರೂ ಅವರ ಪ್ರಭಾವ ಮುರುಗಪ್ಪ ದಂಪತಿಗಳ ಮೇಲೆ ಬಿದ್ದಿತು. ಸಿದ್ದಮ್ಮನವರಿಗೆ ಗಾಂಧೀಜಿಯವರನ್ನು ನೋಡಬೇಕು, ಆ ಮಹಾತ್ಮನೊಂದಿಗೆ ಮಾತನಾಡಬೇಕು, ಅವರು ಎಲ್ಲಿ ಇರುತ್ತಾರೆ, ಎಲ್ಲಿ ಸಿಗುತ್ತಾರೆ ಎಂಬ ಕುತೂಹಲ. ಗಾಂಧೀಜಿಯವರನ್ನು ನೋಡಬೇಕೆಂದರೆ ವಾರ್ಧಾದ ಅವರ ಆಶ್ರಮಕ್ಕೆ ಹೋದರೆ ಸಿಗುತ್ತಾರೆ ಎಂದು ತಿಳಿಯಿತು. ಅಲ್ಲಿಗೆ ಹೋಗಿ ಬರಲು ಹಣ ಬೇಕು. ಕೆಲವು ಕಾಲ ಅಲ್ಲಿಯೇ ತಂಗಬೇಕು. ಇವೇ ಮುಂತಾದ ಪ್ರಶ್ನೆಗಳು ಬಂದಾಗ ಉತ್ತರ ಸಿದ್ದಮ್ಮನವರಲ್ಲಿತ್ತು. ಮನಸ್ಸಿದ್ದರೆ ಮಹಾದೇವ.

ಗಾಂಧೀಜಿಯವರ ಆಶ್ರಮದಲ್ಲಿ ಸಿದ್ದಮ್ಮನವರು

ಗಾಂಧೀಜಿಯುವರನ್ನು ನೋಡಲೇಬೇಕು ಅವರೊಂದಿಗೆ ಮಾತನಾಡಲೇಬೇಕು ಎಂಬ ಹಂಬಲದಿಂದ ಗುಜರಾತಿನ ವಾರ್ಧಾಕ್ಕೆ ತೆರಳಿದರು ಸಿದ್ದಮ್ಮನವರು. ಗಾಂಧೀಜಿಯವರನ್ನು ನೋಡಿ ಅವರೊಂದಿಗೆ ಮಾತನಾಡಿದರು. ಗಾಂಧೀಜಿಯವರ ಪ್ರಭಾವ ಸಿದ್ದಮ್ಮನವರ ಮೇಲೆ ಬಿತ್ತು. ಆಶ್ರಮದಲ್ಲಿದ್ದ ಸಮಯದಲ್ಲಿ ಸ್ವಚ್ಛತಾ ಕೆಲಸ ಅಂದರೆ ಕಸಗುಡಿಸುವುದು, ಪಾತ್ರೆ ತೊಳೆಯುವುದು, ದವಸ ದಾನ್ಯಗಳಲ್ಲಿರುವ ಕಲ್ಲು, ಕಡ್ಡಿ ತೆಗೆಯುವುದು. ಹಿತಮಿತವಾದ ಭೋಜನ. ಬೆಳಿಗ್ಗೆ ನಿತ್ಯಕರ್ಮಗಳಾದ ಮೇಲೆ ದೇವರ ಪ್ರಾರ್ಥನೆ, ಭಜನೆ ಇವೇ ಮುಂತಾದವು ಕಡ್ಡಾಯವಾಗಿತ್ತು. ರಾಷ್ಟ್ರದ ನಾಯಕರುಗಳಾದ ಸರ್ದಾರ್ ವಲ್ಲಭಭಾಯಿ ಪಟೇಲ್, ರಾಜಗೋಪಾಲಚಾರಿ, ಕಾಮರಾಜ್ ಇವರೇ ಮುಂತಾದವರನ್ನು ಕಾಣುವ ಭಾಗ್ಯ ದೊರೆಯಿತು. ತಾನೂ ಅಂತಹ ನಾಯಕಿಯಾಗಬೇಕೆಂಬ ಹಂಬಲ ಸಿದ್ದಮ್ಮನವರಲ್ಲಿ ಮೂಡಿತು. ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಳ್ಳಬೇಕು ಎಂದು ತೀರ್ಮಾನಿಸಿದರು.

ಕರ್ನಾಟಕ ರಾಜ್ಯವು ಅಂದು ಹರಿದು ಹಂಚಿಹೋಗಿತ್ತು. ಒಂದೆಡೆ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ನಡೆಯುತ್ತಿದ್ದರೆ ಮತ್ತೊಂದೆಡೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಹಳೇ ಮೈಸೂರು ಭಾಗದಲ್ಲಿ ಓತಪ್ರೇತವಾಗಿ ಬ್ರಿಟಿಷರ ಹಾಗೂ ಆಳರಸರ ವಿರುದ್ಧ ಚಳುವಳಿ ನಡೆಯುತ್ತಿತ್ತು. ಕರ್ನಾಟಕದಲ್ಲಿ ರಾಷ್ಟ್ರೀಯ ಆಂದೋಲನದಲ್ಲಿ ಮಹಿಳೆಯರೂ ಕೂಡ ಭಾಗವಹಿಸಿ ಚಳುವಳಿ ಮಾಡಿರುವ ಕೆಲವರನ್ನು ಮಾತ್ರ ಇಲ್ಲಿ ಹೆಸರಿಸಬಹುದು. ಅವರುಗಳೆಂದರೆ–

1. ಕಮಲಾದೇವಿ ಚಟ್ಟೋಪಾಧ್ಯಾಯ (ಮಂಗಳೂರು)
2. ಉಮಾಬಾಯಿ ಕುಂದಾಪುರ (ಹುಬ್ಬಳ್ಳಿ)
3. ಬಳ್ಳಾರಿ ಸಿದ್ದಮ್ಮ (ಹಾವೇರಿ)
4. ನಾಗಮ್ಮ ಪಾಟೀಲ (ಹುಬ್ಬಳ್ಳಿ)
5. ಯಶೋಧರಮ್ಮ ದಾಸಪ್ಪ (ಬೆಂಗಳೂರು)
6. ಜಯದೇವಿ ತಾಯಿ ಲಿಗಾಡೆ (ಸೋಲಾಪುರ)
7. ಲೀಲಾವತಿ ಮಾಗಡಿ (ಹುಬ್ಬಳ್ಳಿ)
8. ಭಾಗೀರಥಮ್ಮ (ತುಮಕೂರು)
9. ಸುನಂದಮ್ಮ (ತುಮಕೂರು)
10. ದೇವಮ್ಮ ಹರಿಜನ್ (ಸಿರ್ಸಿ–ಸಿದ್ದಾಪುರ)
11. ಸೀತಾಬಾಯಿ ಮಡಗಾವಂಗರ್ (ಸಿರ್ಸಿ–ಸಿದ್ದಾಪುರ)
12. ಜಯಲಕ್ಷ್ಮಿಬಾಯಿ ಟಿ.ಬಿ. (ಬಳ್ಳಾರಿ)
13. ಸುಬ್ಬಮ್ಮ ಜೋಯಿಸ್ (ಸಿರ್ಸಿ–ಸಿದ್ದಾಪುರ)
14. ಕೃಷ್ಣಬಾಯಿ ಪಂಜೇಕರ್ (ಹೊನ್ನಾವರ)
15. ಪದ್ಮಾವತಿ ಬಿದ್ರಿ (ಜಮಖಂಡಿ)
16. ಮೈಲಾರ ಸಿದ್ಧಮೇಟಿ (ರೋಣ ಮೊಟೆಬೆನ್ನೂರು)
17. ಕನಗೋಡು ಭವಾನಿಬಾಯಿ (ಸಿರ್ಸಿ–ಸಿದ್ದಾಪುರ)
18. ಗಂಗಾಬಾಯಿ ಮಿರ್ಜಂಕರ್ (ಸಿರ್ಸಿ)
19. ಬಲ್ಯತಂಡ ಮುದ್ದಮ್ಮ (ವಿರಾಜಪೇಟೆ)
20. ಕುರ್ತಕೋಟಿ ಶಕುಂತಲ (ಬೆಳಗಾವಿ)
21. ರಮಾಬಾಯಿ ಯೋಲ್ಗಿ (ಬೆಳಗಾವಿ)
22. ರಾಜಮ್ಮ ತೀರ್ಥಶರ್ಮ (ಬೆಂಗಳೂರು)

23. ಸಿದ್ದಮ್ಮ (ಈಸೂರು)
24. ಪಾರ್ವತಮ್ಮ (ಈಸೂರು)
25. ಹಾಲಮ್ಮ (ಈಸೂರು)
26. ನಾಗರತ್ನಮ್ಮ ಹಿರೇಮಠ (ಚಿತ್ರದುರ್ಗ)
27. ಎಂ.ಆರ್. ಲಕ್ಷ್ಮಮ್ಮ (ಬೆಂಗಳೂರು)
28. ಪಾರ್ವತಮ್ಮ ಸೂರ್ಯನಾರಾಯಣ (ಮೈಸೂರು)
29. ವಿಮಲಾಬಾಯಿ ದಾತರ್ (ಬೆಂಗಳೂರು)
30. ತಾಯಮ್ಮ ವೀರಣ್ಣಗೌಡ (ಮಂಡ್ಯ/ಮದ್ದೂರು)
31. ಎಂ.ಎಸ್. ಗೌರಮ್ಮ (ಮೈಸೂರು)
32. ಸರೋಜಮ್ಮ ಚಿಕ್ಕೇಗೌಡ (ಮಂಡ್ಯ/ಮದ್ದೂರು)
33. ಎಸ್.ಕೆ. ಗೌರಮ್ಮ ಅಪ್ಪಾಜಿಗೌಡ (ಮಂಡ್ಯ)
34. ಸರ್ವಮಂಗಳ (ಮೈಸೂರು)
35. ಎಸ್.ಸಿ. ಲಕ್ಷ್ಮಮ್ಮ ದೊಡ್ಡೇಗೌಡ (ಕಿಕ್ಕೇರಿ/ ಕೆ.ಆರ್. ಪೇಟೆ)

ಇವರುಗಳಲ್ಲಿ ಯಶೋಧರಮ್ಮನವರು ಮತ್ತು ಬಳ್ಳಾರಿ ಸಿದ್ದಮ್ಮನವರು ಮುಂಚೂಣಿಯಲ್ಲಿದ್ದು ಚಳುವಳಿಗಾರರನ್ನು ಹುರಿದುಂಬಿಸುತ್ತಿದ್ದರು. ಪೋಲಿಸರಿಗೆ ಹೆದರದೆ ಭಾಷಣ ಮಾಡುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಗೂ ಜೀವನದಲ್ಲಿ ಒಂದು ಅವಕಾಶ ಸಿಗುತ್ತದೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಇಲ್ಲದಿದ್ದರೆ ಅದು ಕೈತಪ್ಪಿ ಹೋಗುತ್ತದೆ. ಅಂತಹ ಒಂದು ಅವಕಾಶ ಸಿದ್ದಮ್ಮನವರಿಗೆ ಲಭಿಸಿತು. ಅವೇ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹ. ಸಿದ್ದಮ್ಮನವರು ಬಳ್ಳಾರಿ ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಚಳುವಳಿಗಳು ಹರತಾಳಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಶ್ರೀಯುತರುಗಳಾದ ಎಸ್. ನಿಜಲಿಂಗಪ್ಪ, ಟಿ. ಸಿದ್ದಲಿಂಗಯ್ಯ, ಕೆ.ಎಸ್. ಪಾಲರು ಹಾಗೂ ಇನ್ನಿತರ ಮುಖಂಡರು ಚಳುವಳಿಯನ್ನು ಹಬ್ಬಿಸುತ್ತಿದ್ದರು. ಸಿದ್ದಮ್ಮನವರು ಈ ನಾಯಕರುಗಳಿಗೆ ಸಾತ್ ನೀಡುತ್ತಿದ್ದರು.

ಶಿವಪುರ ಧ್ವಜಸತ್ಯಾಗ್ರಹದಲ್ಲಿ ಸಿದ್ದಮ್ಮನವರ

ಇಡೀ ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಧ್ವಜವನ್ನು ಸಾರ್ವಜನಿಕವಾಗಿ ಧ್ವಜಾರೋಹಣ ಮಾಡಲು ಒಂದು ಸ್ವಾಗತ ಸಮಿತಿಯನ್ನು ರಚಿಸಿಕೊಂಡರು. ಇದೊಂದು ಭಾರೀ ಪ್ರಮಾಣದ ಸಭೆಯಾದುದರಿಂದ ಹೆಚ್ಚಾಗಿ ಹಣಕಾಸಿನ ಅಗತ್ಯವಿದ್ದಿತು. ಆ ಕಾರಣದಿಂದಾಗಿಯೇ ಸಾಹುಕಾರ್

ಚನ್ನಯ್ಯನವರನ್ನು ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದರು. ಹೆಚ್.ಕೆ. ವೀರಣ್ಣಗೌಡರು, ಎ.ಜಿ. ಬಂದೀಗೌಡರು ಕಾರ್ಯದರ್ಶಿಗಳು ಕೊಪ್ಪದ ಜೋಗಿಗೌಡರನ್ನು ಖಜಾಂಚಿಯನ್ನಾಗಿಯೂ ಎಂ.ಎನ್. ಜೋಯಿಸ್‌ರವರನ್ನು ಜೆ.ಓ.ಸಿ. (ಜನರಲ್ ಆಫೀಸರ್ ಕಮಾಂಡಿಂಗ್)ಯನ್ನಾಗಿ ನೇಮಕ ಮಾಡಿರುವುದಾಗಿ ಪ್ರಕಟಿಸಿದರು. ಶಿವಪುರದಲ್ಲಿ ತಿರುಮಲೇಗೌಡರ ಜಾಗದಲ್ಲಿ (ಹೊಲದಲ್ಲಿ) ಧ್ವಜಾರೋಹಣ ಮಾಡಲು ತೀರ್ಮಾನಿಸಿದರು. ಸಭೆ ನಡೆಯುವ ಒಂದು ವಾರ ಮೊದಲೇ ಹೆಚ್.ಸಿ. ದಾಸಪ್ಪ, ಯಶೋಧರ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ತಾಯಮ್ಮ ವೀರಣ್ಣಗೌಡ, ವೆಂಕಮ್ಮ ಸೀತಾರಾಮಯ್ಯ (ಪಾಲಹಳ್ಳಿ) ಇಂದಿರಾಬಾಯಿ ಕೃಷ್ಣಮೂರ್ತಿ ಇನ್ನೂ ಮುಂತಾದ ನಾಯಕರು ಶಿವಪುರಕ್ಕೆ ಬಂದಿಳಿದರು. ಮಹಿಳೆಯರು ಒಂದೊಂದು ತಂಡಗಳನ್ನಾಗಿ ಮಾಡಿಕೊಂಡು ಹಳ್ಳಿ ಹಳ್ಳಿಗಳಿಗೆ ತೆರಳಿ ಗ್ರಾಮಗಳ ಮಹಿಳೆಯರು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು. ಸಿದ್ದಮ್ಮನವರು ಬಳ್ಳಾರಿಯಿಂದ ಶಿವಪುರದಂತಹ ಹಳ್ಳಿಗೆ ಬಂದು ಜನರನ್ನು ಹುರಿದುಂಬಿಸುತ್ತಿರುವುದನ್ನು ನೋಡಿದ ಜನ ಸ್ವಇಚ್ಛೆಯಿಂದ ಚಳುವಳಿಗೆ ಧುಮುಕಿದರು.

ಹೆಚ್.ಕೆ. ವೀರಣ್ಣಗೌಡ, ಹೆಚ್.ಸಿ. ದಾಸಪ್ಪ, ಸಾಹುಕಾರ್ ಚನ್ನಯ್ಯ ಇನ್ನೂ ಮುಂತಾದವರು ಟಿ. ಸಿದ್ದಲಿಂಗಯ್ಯನವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದರು. ಇಂದಿನ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಶಿವಪುರದಲ್ಲಿ 1938 ಏಪ್ರಿಲ್ 11, 12 ಹಾಗೂ 13ರಂದು ಕಾಂಗ್ರೆಸ್ ಧ್ವಜವನ್ನು ಹಾರಿಸಲು ತೀರ್ಮಾನಿಸಿದರು. ಇದನ್ನು ಶಿವಪುರ ರಾಷ್ಟ್ರಕೂಟವೆಂದು ಕರೆದರು.

1938 ಏಪ್ರಿಲ್ 11ನೇ ತಾರೀಖು ಶಿವಪುರದಲ್ಲಿ ಮೂವತ್ತು ಸಾವಿರ ಜನ ಸೇರಿದರು. ಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಿ.ಎಂ. ಮೇಕ್ರಿಯವರು ಶಿವಪುರ ಸುತ್ತಮುತ್ತ ಧ್ವಜಾರೋಹಣ ಮಾಡದಂತೆ ನಿಷೇಧಾಜ್ಞೆಯನ್ನು ಜಾರಿಗೆ ತಂದರು. 11ನೇ ತಾರೀಖು ಟಿ. ಸಿದ್ದಲಿಂಗಯ್ಯನವರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಟಿ ಸಿದ್ದಲಿಂಗಯ್ಯನವರು ಧ್ವಜಾರೋಹಣ ಮಾಡಲಾಗಿ ಅವರನ್ನು ಬಂಧಿಸಿ ಜಿಲ್ಲಾ ನ್ಯಾಯಾಲಯಕ್ಕೆ ಕರೆದುಕೊಂಡು ಹೋದರು. ಸ್ತ್ರೀ ಮುಖಂಡರು ವೇದಿಕೆಯ ಮೇಲೆ ಕುಳಿತಿದ್ದರು. ಸಿದ್ದಲಿಂಗಯ್ಯನವರ ತರುವಾಯ ಹೆಚ್.ಸಿ. ದಾಸಪ್ಪನವರು, ಎಂ.ಎನ್. ಜೋಯಿಸ್, ಯಶೋಧರ ದಾಸಪ್ಪನವರು, ನಂತರ ಬಳ್ಳಾರಿ ಸಿದ್ದಮ್ಮನವರು ಧ್ವಜಾರೋಹಣ ಮಾಡಿದರು. ಇವರುಗಳನ್ನು ಬಂಧಿಸಿ ಮಂಡ್ಯದ ಜಿಲ್ಲಾ ನ್ಯಾಯಾಲಯಕ್ಕೆ ಕರೆದೊಯ್ದರು. ಬಳ್ಳಾರಿ ಸಿದ್ದಮ್ಮನವರಿಗೆ ಶಿಕ್ಷೆಯಾಯಿತು. ಏಪ್ರಿಲ್ 13ನೇ ತಾರೀಖು ಸಾಯಂಕಾಲ ರಾಷ್ಟ್ರಕೂಟ ಸಮಾಪ್ತಿಯಾಯಿತು.

ವಿದುರಾಶ್ವತ್ಥ ಧ್ವಜಸತ್ಯಾಗ್ರಹದಲ್ಲಿ ಸಿದ್ಧಮ್ಮನವರು

ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹವು ಚಳುವಳಿಗಾರರಿಗೆ ಸ್ಫೂರ್ತಿಯಾಯಿತು. ತಮ್ಮ ತಮ್ಮ ಪಟ್ಟಣಗಳಲ್ಲಿ ಧ್ವಜಾರೋಹಣ ಮಾಡಲು ಜನ ಮುಂದಾದರು. ಅದೇರೀತಿ ಕೋಲಾರ ಜಿಲ್ಲೆ ಗೌರಿಬಿದನೂರಿನ ವಿದುರಾಶ್ವತ್ಥ ಎಂಬಲ್ಲಿ ಧ್ವಜಸತ್ಯಾಗ್ರಹ ಏರ್ಪಾಡಾಯಿತು. ಈಗಾಗಲೇ ತಿಳಿಸಿರುವಂತೆ ಶಿವಪುರ ರಾಷ್ಟ್ರಕೂಟದ ಪ್ರಭಾವದಿಂದಾಗಿ ಬಳ್ಳಾರಿ ಸಿದ್ಧಮ್ಮನವರೂ ಸೇರಿದಂತೆ ಕೆಲವು ಮಹಿಳಾ ಮುಖಂಡರು ವಿದುರಾಶ್ವತ್ಥಕ್ಕೆ ಬಂದಿಳಿದು ಧ್ವಜಾರೋಹಣ ಮಾಡಿದರು. ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯಂತೆ ಪೋಲಿಸರು ಚಳುವಳಿಕಾರರ ಮೇಲೆ ಗುಂಡು ಹಾರಿಸಿದರು. ಕೆಲವರು ಅಸುನೀಗಿದರು. ಗರ್ಭಿಣಿ ಸ್ತ್ರೀಯೊಬ್ಬಳು ಈ ಗೋಲಿಬಾರ್‌ನಲ್ಲಿ ಅಸುನೀಗಿದಳು ಎಂದು ಸುಳ್ಳು ಸುದ್ದಿ ಹರಡಿತು. ಜನ ರೊಚ್ಚಿಗೆದ್ದು ದಾಂದಲೆ ನಡೆಸಿದರು. ಇದು ರಾಷ್ಟ್ರೀಯ ಸುದ್ದಿಯಾಯಿತು. ಮಹಾತ್ಮ ಗಾಂಧಿಯವರಿಗೆ ಈ ವಿಷಯದ ಸತ್ಯಾಂಶವನ್ನು ತಿಳಿದು ಬರುವಂತೆ ಆಚಾರ್ಯ ಕೃಪಲಾನಿ ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲರನ್ನು ಕಳುಹಿಸಿಕೊಟ್ಟರು. (ಬದುಕು ಮೆಲುಕು– ಹೆಚ್.ಕೆ. ವೀರಣ್ಣಗೌಡ, ಪುಟ 156)

ಅರಣ್ಯ ಸತ್ಯಾಗ್ರಹದಲ್ಲಿ ಸಿದ್ಧಮ್ಮನವರು

ಅರಣ್ಯ ಸತ್ಯಾಗ್ರಹವೆಂದರೆ ಕಾಡು ಕಡಿಯುವುದನ್ನು ತಡೆಯುವುದು ಎಂದರ್ಥವಲ್ಲ. ಹೆಂಡ ಸಾರಾಯಿಯನ್ನು ಭಟ್ಟಿ ಇಳಿಸಿ ಜನರಿಗೆ ಮಾರಾಟ ಮಾಡುವ ಮೂಲಕ ಸರ್ಕಾರವು ಲಾಭ ಗಳಿಸುತ್ತಿದ್ದಿತು. ಬಡವರು ಹೆಂಡ ಸಾರಾಯಿ ಕುಡಿದು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುವುದೇ ಅಲ್ಲದೆ ತಮ್ಮ ಸಂಸಾರವನ್ನು ಉಪವಾಸ ಕೆಡವುತ್ತಿದ್ದರು. ಬಡತನದ ರೇಖೆಗಿಂತ ಕೆಳಗಿರುವವರು ಮತ್ತಷ್ಟೂ ಬಡವರಾಗುತ್ತಿದ್ದರು. ಆದ ಕಾರಣ ಈಚಲುಮರ ಕಡಿದು ಹೆಂಡ ತಯಾರಿಸುವುದನ್ನು ನಿಲ್ಲಿಸುವುದೇ ಅರಣ್ಯ ಸತ್ಯಾಗ್ರಹ. ಚಿತ್ರದುರ್ಗ, ಬಳ್ಳಾರಿ, ರಾಯಚೂರು ಭಾಗಗಳಲ್ಲಿ ಇಂತಹ ಸತ್ಯಾಗ್ರಹ ಪ್ರಾರಂಭವಾಯಿತು. ರಾಜಶೇಖರ್ ಹಿರೇಮಠ್, ವಾಸುದೇವರಾವ್, ಎಸ್. ನಿಜಲಿಂಗಪ್ಪ, ನಾಗರತ್ನಮ್ಮ ಹಿರೇಮಠ್, ಬಳ್ಳಾರಿ ಸಿದ್ದಮ್ಮ ಇವರೇ ಮುಂತಾದವರು ಈ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಳ್ಳಿ ಹಳ್ಳಿಗಳಿಗೆ ತಿರುಗಿ ಅರಣ್ಯ ಸತ್ಯಾಗ್ರಹದ ಅಂಗವಾಗಿ ಮದ್ಯದಂಗಡಿಗಳನ್ನು ಮುಚ್ಚಿಸುವುದು, ಅರಣ್ಯಗಳಲ್ಲಿ ಇರುವ ಈಚಲು ಮರಗಳನ್ನು ಕಡಿಯುವ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1939 ಸೆಪ್ಟೆಂಬರ್ 12ರಂದು ಚಿತ್ರದುರ್ಗದಲ್ಲಿ ಮೂಡಲಗಿರಿಯಪ್ಪನವರು ಉದ್ಘಾಟಿಸಿದರು. ಸತ್ಯಾಗ್ರಹಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರಿದರು. ಎಸ್.

ನಿಜಲಿಂಗಪ್ಪನವರು, ಬಳ್ಳಾರಿ ಸಿದ್ದಮ್ಮನವರು, ಎಸ್. ವಾಸುದೇವಚಾರರು ಇನ್ನೂ ಮುಂತಾದವರು ಸಭೆಯನ್ನು ಉದ್ದೇಶಿಸಿ ಅಗ್ರ ಭಾಷಣ ಮಾಡಿ ಜನರನ್ನು ಹುರಿದುಂಬಿಸಿದರು. ಚಿತ್ರದುರ್ಗ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈಚಲು ಮರಗಳನ್ನು ಕತ್ತರಿಸುವುದು, ಹೆಂಡ ಸಾರಾಯಿ ತಯಾರಿಸುವುದನ್ನು ನಿಲ್ಲಿಸಲಾಯಿತು. ಜನಗಳನ್ನು ಆಕರ್ಷಿಸುವ ಉದ್ದೇಶದಿಂದ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ಸಹಿತ ಕಾಡಿಗೆ ತೆರಳಿ ಅಲ್ಲಿ ಬೆಳೆದಿರುವ ಈಚಲು ಮರಗಳನ್ನು ಕತ್ತರಿಸುತ್ತಿದ್ದರು. ಇದರಿಂದಾಗಿ ಕಂದಾಯ ಇಲಾಖೆಗೆ ಬರುತ್ತಿದ್ದ ಆದಾಯ ಕಡಿಮೆಯಾಯಿತು. ಈ ಅರಣ್ಯ ಸತ್ಯಾಗ್ರಹವು ದಿನೇ ದಿನೇ ಜನಪ್ರಿಯವಾಗತೊಡಗಿತು. ದೊಡ್ಡಸಿದ್ದವ್ವನಹಳ್ಳಿ, ಚಿಕ್ಕಸಿದ್ದವ್ವನಹಳ್ಳಿ, ಮರಡಿಹಳ್ಳಿ, ಕಸ್ತೂರಿ ರಂಗಪ್ಪನಹಳ್ಳಿ, ಚಳ್ಕೆರೆ, ಹೊಳಲ್ಕೆರೆ ಇವೇ ಮುಂತಾದ ಹಳ್ಳಿಗಳ ಕಾಡುಗಳಿಗೆ ಹೋಗಿ ಪಿಕೇಟಿಂಗ್ ನಡೆಸುತ್ತಿದ್ದರು. ಹಳ್ಳಿಗಳ ಮುಗ್ಧರಿಗೆ ಹೆಂಡ ಸಾರಾಯಿ ಕುಡಿಯದಂತೆ ತಾಕೀತು ಮಾಡುತ್ತಿದ್ದರು.

ಈಗಾಗಲೇ ತಿಳಿಸಿರುವಂತೆ ಜಿಲ್ಲಾಧಿಕಾರಿಗಳು ಬಳ್ಳಾರಿ ಸಿದ್ದಮ್ಮ, ಎಸ್. ನಿಜಲಿಂಗಪ್ಪ, ಮುರುಗಪ್ಪ ಇವರೇ ಮುಂತಾದವರ ಮೇಲೆ ಮೊಕದ್ದಮೆ ಹೂಡಿದರು. ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯ ಮೇರೆಗೆ ಬಳ್ಳಾರಿ ಸಿದ್ದಮ್ಮ ಹಾಗೂ ಮುರುಗಪ್ಪ ಇವರೇ ಮುಂತಾದವರನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು. ನ್ಯಾಯಾಲಯವು ವಾದವಿವಾದವನ್ನು ಕೇಳಿ 18 ತಿಂಗಳ ಸಾದಾ ಸಜೆ ವಿಧಿಸಿತು. 29.09.1939ರಂದು ಸಿದ್ದಮ್ಮನವರು ಎರಡನೆಯ ಬಾರಿಗೆ ಜೈಲಿಗೆ ಹೋಗುವ ಪ್ರಸಂಗ ಬಂದಿತು. ಒಂದು ವರ್ಷಕಾಲ ತುರಂಗವಾಸ ಅನುಭವಿಸಿ 1940ರಲ್ಲಿ ಮೈಸೂರಿನ ಒಡೆಯರಾದ ನಾಲ್ವಡಿ ಕೃಷ್ಣರಾಜರು ಅಸುನೀಗಿದ ಸಂದರ್ಭದಲ್ಲಿ ಸಿದ್ದಮ್ಮ ಸೇರಿದಂತೆ ಕೆಲವಾರು ಕೈದಿಗಳನ್ನು ಬಿಡುಗಡೆ ಮಾಡಲಾಯಿತು.

ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಸಿದ್ದಮ್ಮನವರು

1942ರಲ್ಲಿ ಚಲೇಜಾವ್ ಚಳುವಳಿ ಅಥವಾ ಭಾರತ ಬಿಟ್ಟು ತೊಲಗಿ ಚಳುವಳಿಯು ಆಗಸ್ಟ್ 8ರಂದು ಗಾಂಧೀಜಿಯವರಿಂದ ಘೋಷಣೆಯಾಗಿ ಆಂದೋಲನವು ಇಡೀ ದೇಶವನ್ನೇ ವ್ಯಾಪಿಸಿತು. ಆಬಾಲವೃದ್ಧರಾಗಿ ಚಳುವಳಿಗಿಳಿದರು. ಬಳ್ಳಾರಿ ಸಿದ್ದಮ್ಮನವರು ಹಾಗೂ ಅವರ ಪತಿ ಮುರುಗಪ್ಪನವರು ಲಘುಬಗೆಯಿಂದ ಚಳುವಳಿಗಿಳಿದರು. ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂದು ಕರೆಕೊಟ್ಟರು. ಇದು ಚಳುವಳಿಗೆ ಮತ್ತಷ್ಟು ಕಿಚ್ಚು ಹಚ್ಚಿದಂತಾಯಿತು.

ಗಾಂಧೀಜಿಯವರ ಆಪ್ತ ಸಹಾಯಕರಾದ ಕಾಲೇಕರ್ ಮತ್ತು ಮಶ್ರೂವಾಲ ಎಂಬುವವರು 'ಹರಿಜನ' ಪತ್ರಿಕೆಯಲ್ಲಿ ಸರ್ಕಾರದ (ಬ್ರಿಟಿಷ್) ಯಂತ್ರ ಕುಸಿದು ಬೀಳುವಂತೆ ಚಳುವಳಿಯನ್ನು ನಡೆಸಬೇಕೆಂದು ಕರೆ ನೀಡಿದರು. ಇಡೀ ದೇಶಕ್ಕೆ ದೇಶವೇ ಟೊಂಕ ಕಟ್ಟಿ ನಿಂತಿತು. ದೈಹಿಕ ಹಿಂಸೆಯಿಂದ ಕೂಡಿರದ ಅಹಿಂಸಾತ್ಮಕ ಚಳುವಳಿಯಾಗಿರಬೇಕೆಂಬುದಾಗಿ ಕೂಡ ಮನವಿ ಮಾಡಿಕೊಳ್ಳಲಾಯಿತು. ಸರ್ಕಾರಿ ಕಛೇರಿಗಳು, ರೈಲ್ವೆ ಕಂಬಿ ಕೀಳುವುದು, ರೈಲ್ವೆ ನಿಲ್ದಾಣಗಳ ಧ್ವಂಸ, ಖಜಾನೆಗಳ ಲೂಟಿ, ಹೆಂಡದಂಗಡಿಗಳ ಪಿಕೇಟಿಂಗ್, ದೂರವಾಣಿ ತಂತಿಗಳನ್ನು ಕತ್ತರಿಸುವುದು, ನೌಕರಿಗೆ ರಾಜೀನಾಮೆ, ವಿದ್ಯಾರ್ಥಿಗಳು ಶಾಲಾಕಾಲೇಜು ಬಹಿಷ್ಕಾರ, ಕಾರ್ಮಿಕರಿಂದ ಮುಷ್ಕರ ಹರತಾಳ ಇವೇ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ಈಸೂರು ಎಂಬಲ್ಲಿ ಅಲ್ಲಿನ ಯುವಕರು ಊರಿನ ವೀರಭದ್ರ ದೇವಸ್ಥಾನದ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದರು. ಅವರನ್ನು ಒಂಟಿಕಾಲ ಮೇಲೆ ನಿಲ್ಲಿಸಿ ಶಿಕ್ಷೆ ಕೊಡಲಾಯಿತು. ತಿರುಗಿ ಬಿದ್ದ ಜನ ಹಿಂಸಾಚಾರಕ್ಕೆ ತಿರುಗಿದರು. ಪೋಲಿಸರು ಬಂಧಿಸಿ ಅವರನ್ನು ನ್ಯಾಯಾಲಯಕ್ಕೆ ಕಳುಹಿಸಿದರು. ನ್ಯಾಯಾಲಯವು ಅವರಲ್ಲಿ ಹನ್ನೊಂದು ಜನಗಳಿಗೆ ಮರಣದಂಡನೆ ವಿಧಿಸಿತು. ನಂತರ ಉಚ್ಚನ್ಯಾಯಾಲಯಕ್ಕೆ ಮೊರೆ ಹೋದರು. ಅಲ್ಲಿ 10 ವರ್ಷ ಹಾಗೂ 5 ವರ್ಷ ಕಠಿಣ ಸಜೆ ವಿಧಿಸಿತು. ಅಲ್ಲಿಯೂ ಬಳ್ಳಾರಿ ಸಿದ್ದಮ್ಮನವರಂತೆ ಹಾಲಮ್ಮ ಮತ್ತು (ಬಳ್ಳಾರಿ ಸಿದ್ದಮ್ಮ ಅಲ್ಲ) ಸಿದ್ದಮ್ಮನವರು ಐದು ವರ್ಷಗಳ ಕಠಿಣ ಶಿಕ್ಷೆಗೆ ಒಳಗಾದರು.

ಇತ್ತ ಬಳ್ಳಾರಿ ಸಿದ್ದಮ್ಮನವರು ಚಿತ್ರದುರ್ಗ, ಚಳ್ಳಕೆರೆ ಭಾಗಗಳಲ್ಲಿ ಚಳುವಳಿಯನ್ನು ಹಬ್ಬಿಸುತ್ತಿದ್ದರು. ಭೂಗತ ಚಟುವಟಿಕೆಗಿಳಿದರು. ಪೋಲಿಸರು ಸಿದ್ದಮ್ಮ ಹಾಗೂ ಅವರ ಪತಿ ಮುರುಗಪ್ಪನವರ ಮೇಲೆ ಹದ್ದಿನ ಕಣ್ಣಿಟ್ಟರು. ಮುರುಗಪ್ಪನವರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು.

ಮೈಸೂರು ಚಲೋ ಚಳುವಳಿಯಲ್ಲಿ ಸಿದ್ದಮ್ಮನವರು

1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತು. ಆದರೆ 1947ರ ಸ್ವಾತಂತ್ರ್ಯ ಕಾಯ್ದೆಯ ಪ್ರಕಾರ ಸಂಸ್ಥಾನಗಳ ಮುಖಂಡರು ಅಥವಾ ರಾಜರು ತಮ್ಮ ಸಂಸ್ಥಾನವನ್ನು ಪಾಕಿಸ್ಥಾನಕ್ಕೆ ಇಲ್ಲವೆ ಭಾರತದ ಒಕ್ಕೂಟಕ್ಕೆ ಇಲ್ಲವೆ ಸ್ವತಂತ್ರವಾಗಿ ಇರಬಹುದಾಗಿದ್ದಿತು. ಈ ಕಾಯ್ದೆಯಲ್ಲಿರುವ ದೌರ್ಬಲ್ಯವನ್ನು ಬಳಸಿಕೊಂಡು ಮೈಸೂರು ಒಡೆಯರು ತಮ್ಮ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ

ಸೇರಿಸಲು ಇಚ್ಛಿಸಲಿಲ್ಲ. ಆದಕಾರಣ ಚಳುವಳಿಗಾರರು ಮೈಸೂರು ಅರಸರ ಮೇಲೆ ಒತ್ತಡ ಏರುವ ತಂತ್ರವನ್ನು ಬಳಸಿದರು. ಇದನ್ನು ಮೈಸೂರು ಚಲೋ ಚಳುವಳಿ ಇಲ್ಲವೆ ಅರಮನೆ ಚಳುವಳಿ ಎನ್ನುತ್ತಾರೆ.

ಚಳುವಳಿಗಾರರಿಗೆ ಒಂದು ಕಡೆ ಸಂತೋಷ ಮತ್ತೊಂದು ಕಡೆ ಅಸಮಧಾನ. ಸ್ವಾತಂತ್ರ್ಯ ಲಭಿಸಿದರೂ ಮಹಾರಾಜರು ಅವಕಾಶ ಕೊಡುತ್ತಿಲ್ಲವೆಂಬ ಕೊರಗು ಅವರಲ್ಲಿತ್ತು. ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಕೆ.ಟಿ. ಭಾಷ್ಯಂ ಇವರೇ ಮುಂತಾದವರು ಮೈಸೂರು ಚಲೋ ಚಳುವಳಿಗೆ ಕರೆ ಕೊಟ್ಟರು. ರಾಜ್ಯದ ನಾನಾ ಭಾಗಗಳಲ್ಲಿ ಚಳುವಳಿಯನ್ನು ಪ್ರಾರಂಭಿಸಿದರು. ಇತ್ತ ಬಳ್ಳಾರಿಯಲ್ಲಿ ಸಿದ್ದಮ್ಮನವರು ಹಳ್ಳಿಕೇರಿ, ಕಂಚಿಕೇರಿ, ಶಿಂಗ್ರಹಳ್ಳಿ ಇವೇ ಮುಂತಾದ ಹಳ್ಳಿಗಳಿಗೆ ತೆರಳಿ ಮೈಸೂರು ಚಲೋ ಚಳುವಳಿ ಮಾಡುವಂತೆ ಪ್ರಚೋದಿಸಿದರು. ಚಳುವಳಿಗಾರರೇ ಅಲ್ಲದೆ ಜನ ಸಾಮಾನ್ಯರೂ ಕೂಡ ಉತ್ಸಾಹದಿಂದ ಈ ಪವಿತ್ರ ಆಂದೋಲನವನ್ನು ಭಾಗವಹಿಸಿದರು. ಒತ್ತಡ ಹೆಚ್ಚಾಗಲಾಗಿ 1947 ಅಕ್ಟೋಬರ್ 24ರ ವಿಜಯ ದಶಮಿಯ ಕೊಡುಗೆಯಾಗಿ ಮೈಸೂರು ಒಡೆಯರು ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದರು. ಮೈಸೂರು ಸೇರಿದಂತೆ ಹಲವಾರು ಸಂಸ್ಥಾನಗಳು ಭಾರತದ ಒಕ್ಕೂಟಕ್ಕೆ ಸೇರಿ ಸ್ವತಂತ್ರ ಭಾರತವಾಯಿತು.

ಶಾಸನಸಭಾ ಸದಸ್ಯರಾಗಿ ಸಿದ್ದಮ್ಮನವರು

ಸ್ವತಂತ್ರ ಮೈಸೂರಿನ ಮೊದಲು ಮುಖ್ಯಮಂತ್ರಿಯಾಗಿ ಕೆ.ಸಿ. ರೆಡ್ಡಿಯವರು ಅಧಿಕಾರ ಸ್ವೀಕರಿಸಿದರು. ತಮ್ಮ ಮಂತ್ರಿಮಂಡಲವನ್ನು ರಚಿಸಿದರು (ಹೆಚ್ಚಿನ ವಿವರಗಳಿಗೆ ನೋಡಿ: ಟಿ. ಸಿದ್ದಲಿಂಗಯ್ಯ). 1951ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಸಿದ್ದಮ್ಮನವರು ದಾವಣಗೆರೆ ಕ್ಷೇತ್ರದಿಂದ ಸ್ಪರ್ಧಿಸಿ ಜಯಶೀಲರಾದರು. 1951ರಿಂದ 1956ರ ತನಕ ಶಾಸನ ಸಭಾಸದಸ್ಯರಾಗಿ ಸೇವೆ ಸಲ್ಲಿಸಿದರು. ಸಮಾಜದ ಏಳಿಗೆಗೆ ಶ್ರಮಿಸಿದರು. ಸ್ವಾತಂತ್ರ್ಯ ಬಂದ ಹೊಸ್ತಿಲಲ್ಲಿ ಎಲ್ಲೆಲ್ಲೂ ಬಡತನ, ನಿರುದ್ಯೋಗ, ಅನಕ್ಷರತೆ ಇವೇ ಮುಂತಾದ ಸಮಸ್ಯೆಗಳು ತುಂಬಿದ್ದವು. ಜನರ ಕಷ್ಟಗಳಿಗೆ ಸ್ಪಂದಿಸಿದರು. 1956ರ ಚುನಾವಣೆಗೆ ಸ್ಪರ್ಧಿಸಬೇಕೆಂದು ಒತ್ತಾಯ ಬಂದಿತು. ನಾನು ಒಂದು ಸಲ ಶಾಸಕಿಯಾಗಿದ್ದೇನೆ ಸಾಕು ಬೇರೆಯವರಿಗೆ ಅವಕಾಶ ಸಿಗಲಿ ಎಂದು ಚುನಾವಣೆಗೆ ಸ್ಪರ್ಧಿಸಲಿಲ್ಲ.

ಸಮಾಜಮುಖಿಯಾಗಿ ಸಿದ್ದಮ್ಮನವರು

ಶಾಸಕ ಇಲ್ಲವೆ ಮಂತ್ರಿಪದವಿಯಲ್ಲಿದ್ದರೆ ಮಾತ್ರ ಸಮಾಜ ಸೇವೆ ಮಾಡಬಹುದು ಎಂದು ಕೆಲವರು ನಂಬಿದ್ದಾರೆ. ಸಿದ್ದಮ್ಮನವರು ಯಶೋಧರ

ದಾಸಪ್ಪನವರಂತೆ 1956ರ ನಂತರ ತಮ್ಮನ್ನು ಸಮಾಜ ಸೇವೆಗೆ ಮುಡಿಪಾಗಿಸಿದರು. ದಾವಣಗೆರೆಗೆ 70 ಕಿ.ಮೀ. ದೂರದ ಹೆಬ್ಬಾಳದಲ್ಲಿ 'ಮಾತೃ ಮಂದಿರ' ಎಂಬ ಸೇವಾಶ್ರಮವನ್ನು ಪ್ರಾರಂಭಿಸಿದರು. ಇದಕ್ಕೆ ಕಾರಣವೇನೆಂದರೆ ಸಿದ್ದಮ್ಮನವರು ಗುಜರಾತಿನ ವಾರ್ದಾದಲ್ಲಿ ಕೆಲವು ಕಾಲ ಇದ್ದು ಗಾಂಧೀಜಯಂತಿ ದೀನದಲಿತರ ಸೇವೆ ಮಾಡಲು ನಿರ್ಧರಿಸಿದರು. ಇಷ್ಟೇ ಅಲ್ಲದೆ ಹಳೇ ಮೈಸೂರು ಪ್ರದೇಶದಲ್ಲಿ ಯಶೋಧರ ದಾಸಪ್ಪನವರು ಸೇವಾಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೀಗಾಗಿ ಸಿದ್ದಮ್ಮನವರು ಮಾತೃಮಂದಿರದ ಹೆಸರಿನಲ್ಲಿ ಸಮಾಜದ ಸೇವೆಗೆ ಟೊಂಕಕಟ್ಟಿ ನಿಂತರು.

ತಮ್ಮ ಸಾಕುಮಗಳಾದ ವಿಶಾಲಾಕ್ಷಮ್ಮನ ವಿವಾಹವನ್ನು ಸರಳ ಹಾಗೂ ವಿಶಿಷ್ಟವಾಗಿ ಆಚರಿಸಿದರು. ದಾವಣಗೆರೆಯ ಗಾಂಧಿ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ ಪುರೋಹಿತರ ಮಂತ್ರ ಘೋಷಣೆಯ ಬದಲು ರಾಷ್ಟ್ರಗೀತೆಯನ್ನು ಹಾಡುವ ಮೂಲಕ ವಿವಾಹ ಮುಹೂರ್ತವನ್ನು ನೆರವೇರಿಸಿದರು. ಈ ವಿವಾಹಕ್ಕೆ ವಿಶೇಷ ಆಹ್ವಾನಿತರೆಂದರೆ ದೀನ, ದಲಿತರು, ಅಂಗವಿಕಲರು ಇವರ ಸಮ್ಮುಖದಲ್ಲಿ ವಿವಾಹವಾಯಿತು. ಬಳ್ಳಾರಿ ಸಿದ್ದಮ್ಮನವರು 1981ರಲ್ಲಿ ಇಹಲೋಕ ತ್ಯಜಿಸಿದರು.

ಹೀಗೆ ಬಳ್ಳಾರಿ ಸಿದ್ದಮ್ಮನವರು ರಾಷ್ಟ್ರೀಯ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶ್ರೀಮಂತಿಕೆಯಾಗಲಿ, ಹೆಚ್ಚಿನ ಶಿಕ್ಷಣವಾಗಲಿ ಇಲ್ಲದಿದ್ದರೂ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಹೋಗುವುದು ಸಂಪ್ರದಾಯಕ್ಕೆ ವಿರುದ್ದ ಎಂಬ ಕಾಲವಿತ್ತು. ಅಂತಹ ಕಾಲದಲ್ಲಿ ಅದರಲ್ಲೂ ಸ್ವಲ್ಪಮಟ್ಟಿಗೆ ಹಿಂದುಳಿದಿದ್ದ (ಹಳೇ ಮೈಸೂರನ್ನು ಹೋಲಿಕೆ ಮಾಡಿದರೆ) ಪ್ರದೇಶವಾದ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆಯಂತಹ ಪ್ರದೇಶದಿಂದ ಹೊರಹೊಮ್ಮಿದ ವೀರ ಮಹಿಳೆ ಬಳ್ಳಾರಿ ಸಿದ್ದಮ್ಮನವರ ಧೈರ್ಯ ಸ್ಥೈರ್ಯ ಮೆಚ್ಚುವಂತಹದ್ದು. ಸ್ವಾತಂತ್ರ್ಯಾ ನಂತರ ಸರ್ಕಾರದಿಂದ ಯಾವುದೇ ವಿಧವಾದ ಫಲಾಪೇಕ್ಷೆಯಿಲ್ಲದೆ ಸಮಾಜಮುಖಿಯಾಗಿ ಬಡವರ ದೀನ ದಲಿತರ, ಅಂಗವಿಕಲರ ಸೇವೆಗೆ ನಿಂತರು. ಬಳ್ಳಾರಿ ಸಿದ್ದಮ್ಮನವರ ಬಗ್ಗೆ ಸಂಶೋಧಕರು ಸಾಕಷ್ಟು ಸಂಶೋಧನೆ ಮಾಡಿ ಸಮಾಜಕ್ಕೆ ಅವರ ಮಾಹಿತಿ ತಿಳಿಸಿಕೊಡುವುದು ಅವಶ್ಯ.

-: ಗ್ರಂಥ ಋಣ :-

ವಿರಕ್ತ ರಾಷ್ಟ್ರಕವಿ	ಡಿ.ಆರ್. ವೆಂಕಟರಮಣನ್
ಮಂಕುತಿಮ್ಮನ ಕಗ್ಗ –ತಾತ್ಪರ್ಯ	ಶ್ರೀಕಾಂತ್
ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಚರಿತ್ರೆ	ಎಲ್. ಸ್ವಾಮಿರಾವ್
ಭಾರತರತ್ನ ಸರ್‌ಎಂವಿ	ಡಾ॥ ಡಿ.ಎಸ್. ಜಯಪ್ಪಗೌಡ
ಟಿ. ಸಿದ್ದಲಿಂಗಯ್ಯ	ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ ಸಚಿವಾಲಯ
ಕೆ.ಸಿ. ರೆಡ್ಡಿ	ಡಾ॥ ಆರ್.ವಿ. ರವೀಂದ್ರನಾಥ.
ಬದುಕು ಮೆಲುಕು	ಎಚ್.ಕೆ. ವೀರಣ್ಣಗೌಡ
ಭಾರತರತ್ನ ಸರ್‌ಎಂವಿ	ತಿ.ತಾ. ಶರ್ಮ
ಮೋಕ್ಷಗುಂಡಂ ವಿಶ್ವೇಶ್ವರಯ್ಯ	ವಿ.ಎಸ್. ನಾರಾಯಣರಾವ್
ನನ್ನ ವೃತ್ತಿ ಜೀವನದ ನೆನಪುಗಳು	ಗಜಾನನ ಶರ್ಮ
ಸಾಲು ದೀಪಗಳು	ಸಂಪಾದಕರು ಜಿ.ಎಸ್. ಸಿದ್ದಲಿಂಗಯ್ಯ, ಎಂ.ಹೆಚ್.ಕೆ.
ಸಾಹಿತ್ಯ ಶಿಲ್ಪಿಗಳು	ಟಿ.ವಿ. ವೆಂಕಟಾಚಲಶಾಸ್ತ್ರಿ
ಭಾರತರತ್ನ ಪಂಡಿತ್ ಭೀಮಸೇನಜೋಶಿ	ಸಂಪಾದಕರು ಅರವಿಂದ ಮುಳಗುಂದ
ಡಾ॥ ಗಂಗೂಬಾಯಿ ಹಾನಗಲ್	ಡಾ॥ ಡಿ. ಮೀನಾಕ್ಷಿ
ಜಗಕೆ ಜೋಗುಳ ಹಾಡಿದ ತಾಯಿ	ಮಲ್ಲಿಕಾರ್ಜುನ ಸಿದ್ದಣ್ಣನವರ
ಶ್ರೀ ಕೃಷ್ಣರಾಜ ಒಡೆಯರು	ಸಿ.ಆರ್. ಶ್ರೀನಿವಾಸ ಅಯ್ಯಂಗಾರ್
ಶಿವರಾಮ ಕಾರಂತ	ಜಿ.ಎನ್. ರಂಗನಾಥರಾವ್
ಕರ್ನಾಟಕದ ಜಲಿಯನ್ ವಾಲಾಭಾಗ್	
ವಿದುರಾಶ್ವತ್ಥ	ಡಿ. ಸ್ಮಿತಾರೆಡ್ಡಿ, ಬಿ.ಗಂಗಾಧರ ಮೂರ್ತಿ
ಪಂಡಿತ್ ಭೀಮಸೇನ ಜೋಶಿ	ಡಾ॥ ನಾಗರಾಜರಾವ್, ಹವಾಲ್ದಾರ

ದೊಡ್ಡವರು	ಪ್ರೊ. ಡಿ. ಲಿಂಗಯ್ಯ
ಶಿವಪುರ ಧ್ವಜ ಸತ್ಯಾಗ್ರಹ	ಪ್ರೊ. ಡಿ. ಲಿಂಗಯ್ಯ
ಸತ್ಯಾಗ್ರಹಿಗಳ ಸಂದರ್ಶನ	ಪ್ರೊ. ಡಿ. ಲಿಂಗಯ್ಯ
ಭಾರತರತ್ನ ಭೀಮಸೇನಜೋಶಿ	ಶಾ.ಮಂ. ಕೃಷ್ಣರಾಯ, ಕೃ.ಶಿ. ಹೆಗಡೆ
ಅಂಬಿಕಾತನಯದತ್ತರ ಗಂಗಾವತರಣ	ಡಾ॥ ವಾಮನ ಬೇಂದ್ರೆ
ಉದಾರ ಚರಿತರು ಉದಾತ್ತ ಪ್ರಸಂಗಗಳು	ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರಿ
ನಾಟಕ ಶಿರೋಮಣಿ – ಎ.ವಿ. ವರದಾಚಾರ್ಯ	ಎಂ.ಜಿ. ಮರಿರಾವ್
ಸಂಗೀತರತ್ನ ಮೈಸೂರು ಟಿ. ಚೌಡಯ್ಯ	ಎಸ್.ಕೆ. ರಾಮಚಂದ್ರರಾವ್
ಯಶೋಧರಮ್ಮ ದಾಸಪ್ಪ	ಡಾ॥ ಶೈಲಜ .ಸಿ.ವಿ.
ದತ್ತಾತ್ರೇಯ ರಾಮಚಂದ್ರಬೇಂದ್ರೆ	ಜಿ.ಎಸ್. ಆಮೂರ
ನಾಲ್ವಡಿ ಕೃಷ್ಣನ ಮೈಸೂರು	ಡಾ॥ ಚಿನ್ನಸ್ವಾಮಿ ಸೋಸಲೆ
ನಮ್ಮ ಮಹಾರಾಜರು	ಡಿ.ಆರ್. ಚನ್ನೇಗೌಡ
ಕನ್ನಡ ವಿಷಯ ವಿಶ್ವಕೋಶ	ಮೈಸೂರು ವಿಶ್ವವಿದ್ಯಾಲಯ
ಆಳಿದ ಮಹಾಸ್ವಾಮಿಗಳು	ಸಿ.ಕೆ. ವೆಂಕಟರಾಮಯ್ಯ
ವಿಶ್ವಮಾನವ ಕುವೆಂಪು	ನಾಗರಾಜು. ಎಂ.ಹೆಚ್.

ಡಾ. ಬಿ. ಪಾಂಡುಕುಮಾರ್ ಇವರು 1980ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು, 1998ರಲ್ಲಿ ಪಿ.ಹೆಚ್.ಡಿ ಪದವಿಯನ್ನು ಗಳಿಸಿರುತ್ತಾರೆ. ಇಂದಿಗೆ ಮೂವತ್ತು ವರ್ಷಗಳಿಂದ ವಿವೇಕಾನಂದ ಪದವಿ ಕಾಲೇಜಿನಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರಮಟ್ಟದ ವಿಚಾರಸಂಕಿರಣಗಳಲ್ಲಿ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಇವರ ವಿಚಾರಪೂರಿತ ಲೇಖನಗಳು ಸಾಕಷ್ಟು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 1990ರಿಂದ ಮಧುರೈ ಕಾಮರಾಜ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶಿಯಾಗಿದ್ದಾರೆ. ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಬರೇಲಿ, (2004)ಯಲ್ಲಿ ನಡೆದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಶ್ರೀಯುತರು ಮಂಡಿಸಿದ “Bangalore is the only city in India to have Hydro Electricity Power” ಎಂಬ ಸಂಪ್ರಬಂಧವು ದ್ವಿತೀಯ ಬಹುಮಾನಗಳಿಸಿತು. 2005ರಲ್ಲಿ, “Role of Vokkaligar Sangha in the Change of Social & Political activities in Karnataka- A Study ಎಂಬ ಯು.ಜಿ.ಸಿ. ಪ್ರಾಯೋಜಿತ ಸಂಶೋಧನಾ ಯೋಜನೆಯನ್ನು ಪೂರ್ಣಗೊಳಿಸುವ ಮೂಲಕ ಪೋಸ್ಟ್‌ಡಾಕ್ಟರೇಟ್ ಗಳಿಸಿರುತ್ತಾರೆ. 2001ರಲ್ಲಿ ಅಮೆರಿಕಾದ ಟೆಕ್ಸಾಸ್ A&M ವಿಶ್ವವಿದ್ಯಾಲಯವು ಶ್ರೀಯುತರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು, 2005ರಲ್ಲಿ ಜನತಾಶಿಕ್ಷಣ ಸಂಸ್ಥೆಯು ಪ್ರೊ. ಸಂಕೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

2007ರಲ್ಲಿ ಶ್ರೀಯುತರು ರಚಿಸಿದ ‘1600 ವರ್ಷಗಳ ಒಕ್ಕಲಿಗರ ಇತಿಹಾಸ’ ಎಂಬ ಕೃತಿಯು ಕರ್ನಾಟಕ ರಾಜ್ಯ ಗ್ರಂಥಲಯ ಇಲಾಖೆ ಹಾಗೂ ಸಹೃದಯ ಓದುಗರಿಂದಾಗಿ ಇದುವರೆವಿಗು ಐದು ಮುದ್ರಣಗಳನ್ನು ಕಂಡು ಒಟ್ಟು 12000 ಪ್ರತಿಗಳು ಮಾರಾಟವಾಗಿವೆ. ದಿನಾಂಕ 05 ಡಿಸೆಂಬರ್ 2012ರಲ್ಲಿ ‘ದೆಹಲಿ ಕರ್ನಾಟಕ ಸಂಘ’ ನವದೆಹಲಿ ಇಲ್ಲಿ 500ನೇ ವರ್ಷದ ಕೆಂಪೇಗೌಡ ಜಯಂತೋತ್ಸವದ ಆಚರಣೆಯ ಅಂಗವಾಗಿ ರಚಿಸಿದ ‘ಬೆಂಗಳೂರು ನಿರ್ಮಾಪಕ ಕೆಂಪೇಗೌಡ’ ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಲಾಯ್ತು. ಶ್ರೀಯುತರು 2011 ರಿಂದ 2013ರ ಅವಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಇತಿಹಾಸ ಅಧ್ಯಾಪಕರ ವೇದಿಕೆಯ ಅಧ್ಯಕ್ಷರಾಗಿದ್ದು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಏರ್ಪಡಿಸಿ. 2014 ಜುಲೈ ತಿಂಗಳಿನಲ್ಲಿ ಸಂಶೋಧನಾ ಪ್ರಬಂಧಗಳ ‘Facets of Urbanisation’ ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು.

2013ರಲ್ಲಿ ಶ್ರೀಯುತರಿಗೆ ಕೆಂಪೇಗೌಡ ಪ್ರಶಸ್ತಿಯು ಲಭಿಸಿದೆ.

ಗ್ರಂಥಲೋಕಾರ್ಪಣ ಹಾಗೂ
ಅಭಿನಂದನಾ ಸಮಿತಿ, ಬೆಂಗಳೂರು